"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕ ವಿಧಾನ ಪರಿಷತ್ತು

21ನೇ ನವೆಂಬರ್ 2017
ಮಂಗಳವಾರ

ವಿಷಯಾನುಕ್ರಮಾಣಿಕೆ

1. **ಪ್ರಶ್ನೋತ್ತರಗಳು**

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.

4239 – ಸಿ.ಆರ್.ಎಫ್. ಅನುದಾನದ ಕುರಿತು– ಶ್ರೀ ಪ್ರದೀಪ್ ಶೆಟ್ಟರ್

4286 – ವಿದ್ಯುತ್ ಪರಿವರ್ತಕಗಳ ವಿತರಣೆ ಬಗ್ಗೆ– ಶ್ರೀ ಕಾಂತರಾಜು (ಬಿಎಂಎಲ್)

4253 – ವಿದ್ಯುತ್ ಪರಿವರ್ತಕಗಳ ಕೊರತೆ– ಶ್ರೀ ಸಿ.ಆರ್.ಮನೋಹರ್

4264 – ಇಂಧನ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಬಗ್ಗೆ.
– ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ

4267 – ರಾಜ್ಯದಲ್ಲಿ ಟೋಲ್‌ಗೇಟ್‌ಗಳು ಹಾಗೂ ಅವುಗಳ ನಿರ್ವಹಣೆ ಬಗ್ಗೆ.
– ಶ್ರೀ ಅರುಣ ಶಹಾಪುರ

4541 – ತೆಂಗಿನ ನುಸಿಪೀಡೆ ರೋಗದಿಂದ ರೈತರಿಗೆ ಆಗಿರುವ ನಷ್ಟದ ಬಗ್ಗೆ.
– ಶ್ರೀ ಎಂ.ಎ.ಗೋಪಾಲಸ್ವಾಮಿ

4273 – ಬೀದರ್ ಪಶು ವೈದ್ಯಕೀಯ ವಿಶ್ವವಿದ್ಯಾಲಯದಲ್ಲಿ ಸಿಬ್ಬಂದಿಗಳ ಕೊರತೆ.
– ಶ್ರೀ ರಘುನಾಥ್‌ರಾವ್ ಮಲ್ಕಾಪೂರೆ

4517 – ಭೈರಪುರ–ಶಿಶಿಲ ರಸ್ತೆಯ ಬಗ್ಗೆ– ಶ್ರೀಮತಿ ಮೋಟಮ್ಮ

4385 – ಕೊಡಗು ಜಿಲ್ಲೆಯ ಭಗಂಡೇಶ್ವರ ಹಾಗೂ ತಲಕಾವೇರಿ ದೇವಸ್ಥಾನಗಳನ್ನು ಪ್ರವಾಸೋದ್ಯಮ ಇಲಾಖೆಗೆ ವಹಿಸಿಕೊಡದಿರುವ ಕುರಿತು.
– ಶ್ರೀಮತಿ ವೀಣಾ ಅಚ್ಚಯ್ಯ

4540 – ಲೋಕೋಪಯೋಗಿ ಇಲಾಖಾ ರಸ್ತೆಯ ಗಡಿ ಅಂಚಿನಲ್ಲಿ ಕಟ್ಟಡ ನಿರ್ಮಾಣ ನಿಯಂತ್ರಣ ಬಗ್ಗೆ. – ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ

4512 – ರೈತರ ಅನುಕೂಲಕ್ಕೆ ಶೈತ್ಯಾಗಾರ– ಡಾ: ಜಯಮಾಲ ರಾಮಚಂದ್ರ

4396– ಕೊಪ್ಪ ಪ್ರಾಥಮಿಕ ಕೃಷಿ ಪತ್ತಿನಲ್ಲಿ ನಡೆದಿರುವ ಅವ್ಯವಹಾರ– ಶ್ರೀ ಎನ್.ಅಪ್ಪಾಜಿಗೌಡ

4560 – ಪಶು ಸಂಗೋಪನಾ ಮಾಹಿತಿ ಕುರಿತು– ಶ್ರೀ ರಮೇಶ್ ಬಾಬು

ಆ) ಚುಕ್ಕೆ ರಹಿತ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

2. **ಸಭಾಪತಿಯವರ ಅನುಮತಿ ಮೇರೆ ಚರ್ಚಿಸಲ್ಪಟ್ಟ ವಿಷಯಗಳು.**

ಅ) ಹೆಣ್ಣು ಮಕ್ಕಳ ಶಾಲಾ ಹಾಜರಾತಿಗೆ ನೀಡಲಾಗುತ್ತಿದ್ದ ಎರಡು ರೂಪಾಯಿಗಳ ಪ್ರೋತ್ಸಾಹಧನ ಸ್ಥಬ್ಧಗೊಂಡಿರುವ ಬಗ್ಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

– ಶ್ರೀಮತಿ ತಾರಾಅನೂರಾಧ
– ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು)

ಆ) ರೈತರು ಬೆಳೆದ ಮೆಕ್ಕೆ ಜೋಳ ಹಾಗೂ ಸೋಯ ಅವರೆ ಉತ್ಪನ್ನಗಳಿಗೆ ಬೆಲೆ ಕುಸಿದಿರುವ ಬಗ್ಗೆ

– ಶ್ರೀ ಮಾನೆ ಶ್ರೀನಿವಾಸ
– ಶ್ರೀ ಕೃಷ್ಣ ಭೈರೇಗೌಡ(ಕೃಷಿ ಸಚಿವರು)

ಇ) ರಾಜ್ಯದಲ್ಲಿ ಜಲ್ಲಿ, ಮರಳು ಕೊರತೆಯಿಂದ ಕಾರ್ಮಿಕರು ನಿರುದ್ಯೋಗಿಗಳಾಗುತ್ತಿರುವ ಬಗ್ಗೆ

– ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು)
– ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು)

ಈ) ತೆಲಗು ಭಾಷೆಯ ಕವಿ ವೇಮನ ಜಯಂತಿ ಆಚರಿಸುವ ಕುರಿತು.

– ಶ್ರೀ ಡಿ.ಎಸ್.ವೀರಯ್ಯ
– ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು)

ಉ) ನೈಸ್ ಒಪ್ಪಂದ ರದ್ದು ಎಂದು ಪತ್ರಿಕೆಯಲ್ಲಿ ಪ್ರಕಟವಾಗಿರುವ ಕುರಿತು.

– ಶ್ರೀ ರಮೇಶ್ ಬಾಬು
– ಶ್ರೀ ಕೆ.ಟಿ.ಶ್ರೀಕಂಠೇಗೌಡ
– ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ

3. ಸಭೆಯ ಮುಂಡಿದಲಾಗುವ ಕಾಗದ ಪತ್ರಗಳು

4. ವರದಿಗಳನ್ನೊಪ್ಪಿಸುವುದು

5. ಅರ್ಜಿಗಳನ್ನೊಪ್ಪಿಸುವುದು

6. ಸಚಿವರ ಹೇಳಿಕೆಗಳು

ಅ) ಸರ್ಕಾರಿ ಜಾಗದಲ್ಲಿ ಅಕ್ರಮವಾಗಿ ನಿರ್ಮಾಣ ಮಾಡಿರುವ ಮನೆಗಳನ್ನು ಸಕ್ರಮಗೊಳಿಸುವ ಕುರಿತು.

– ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು)

ಆ) ಬೆಳಗಾವಿ ಜಿಲ್ಲೆ ಕಿತ್ತೂರು ತಾಲ್ಲೂಕಿನ ಅಂಬಡಗಟ್ಟಿ ಗ್ರಾಮದ ಮಾಜಿ ಸೈನಿಕರಿಗೆ ಶ್ರೀಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡದಿರುವ ಬಗ್ಗೆ.

– ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು)

ಇ) ಬೆಳಗಾವಿ ಸುವರ್ಣಸೌಧದಲ್ಲಿ ಯಾವುದೇ ಕಛೇರಿಗಳು ಪ್ರಾರಂಭವಾಗದಿರುವ ಬಗ್ಗೆ.

– ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು)

ಈ) ಸಾಲ ಮರುಪಾವತಿ ಅವಧಿ ವಿಸ್ತರಣೆ ಕುರಿತು.

– ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

7. **ನಿಯಮ 68ರ ಮೇರೆಗೆ**

ಗುಂಡಿಗಿರ್ತಿ ಹೋಬಳಿ, ಚಿತ್ತಾಪುರ ತಾಲ್ಲೂಕಿಗೆ ಸಂಬಂಧಪಡುವ ಸಾವತ್‌ಕೇಡು, ಜೀವನ್‌ಮಾಡಗಿ, ಚೊಂಚಿ, ಕಮತ್‌ನೂರು, ನಿಪ್ಪಾಣಿ ಹಾಗೂ ಇನ್ನಿತರೆ ಹಳ್ಳಿಗಳನ್ನು ಚಿತ್ತಾಪುರ ತಾಲ್ಲೂಕಿಗೆ ಒಳಪಡಿಸಿ ಹೆಚ್ಚಿನ ಅನುಕೂಲ ಮಾಡಿಕೊಡುವ ಬಗ್ಗೆ.

- ಶ್ರೀ ಕೆ.ಬಿ.ಶಾಣಪ್ಪ
- ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು)
- ಶ್ರೀ ಕೋಟ ಶ್ರೀನಿವಾಸ ಪೂಜಾರಿ
- ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು)
- ಶ್ರೀ ರಘುನಾಥ ಮಲ್ಕಾಪೂರೆ
- ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ

8. **ನಿಯಮ 161ರ ಮೇರೆಗೆ ವಿಶೇಷ ಪ್ರಸ್ತಾವ,**

ಉತ್ತರ ಕರ್ನಾಟಕ ಭಾಗದ ಸಮಗ್ರ ಅಭಿವೃದ್ಧಿಗಾಗಿ ಕೈಗೊಳ್ಳಬೇಕಾಗಿರುವ ಕ್ರಮಗಳ ಬಗ್ಗೆ.

- ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
- ಶ್ರೀ ಆರ್.ವಿ.ದೇಶಪಾಂಡೆ(ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯಗಳ ಸಚಿವರು)
- ಶ್ರೀ ಕೃಷ್ಣ ಬೈರೇಗೌಡ(ಕೃಷಿ ಸಚಿವರು)
- ಶ್ರೀ ಸಿ.ಎಂ.ಇಬ್ರಾಹಿಂ
- ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು)
- ಶ್ರೀ ಅಲ್ಲಂ ವೀರಭದ್ರಪ್ಪ
- ಶ್ರೀ ಕೆ.ಬಿ.ಶಾಣಪ್ಪ
- ಶ್ರೀ ಬಸವರಾಜ್ ಪಾಟೀಲ್ ಇಟಗಿ
- ಶ್ರೀ ರಾಮಚಂದ್ರಗೌಡ
- ಶ್ರೀ ಬಸನಗೌಡ ಆರ್.ಪಾಟೀಲ್
- ಶ್ರೀ ಹೆಚ್.ಕೆ.ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)
- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಶ್ರೀ ಎನ್.ಎಸ್.ಬೋಸ್‌ರಾಜ್
- ಶ್ರೀ ನಿರಾಣಿ ಹಣಮಂತಪ್ಪ ರುದ್ರಪ್ಪ

<><><>

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕ ವಿಧಾನ ಪರಿಷತ್ತು

ಮಂಗಳವಾರ, 21ನೇ ನವೆಂಬರ್ 2017

ಸದನವು ಬೆಳಗಾವಿಯ ಸುವರ್ಣ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ

ಬೆಳಗ್ಗೆ 11 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತು.

ಸಭಾಪತಿ (ಶ್ರೀ ಡಿ.ಹೆಚ್.ಶಂಕರಮೂರ್ತಿ) ಅವರು

ಪೀಠದಲ್ಲಿ ಉಪಸ್ಥಿತರಿದ್ದರು.

[XXX]

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

[XXX] ಮಾನ್ಯ ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆದುಹಾಕಲಾಗಿದೆ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

1. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಪ್ರಶ್ನೆ ಸಂಖ್ಯೆ: 4239
(ಉತ್ತರವನ್ನು ಲಗತ್ತಿಸಲಾಗಿದೆ)

ಶ್ರೀ ಎಸ್.ವ್ಹಿ. ಸಂಕನೂರ:– ಮಾನ್ಯ ಸಭಾಪತಿಯವರೇ, ಕಳೆದ 15 ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ಸಿ.ಆರ್.ಎಫ್., ಯೋಜನೆಯಡಿ ಎಷ್ಟು ಅನುದಾನದವನ್ನು ಪಡೆದುಕೊಳ್ಳಲಾಗಿದೆ ಎನ್ನುವ ಪ್ರಶ್ನೆಯನ್ನು ಮಾನ್ಯ ಪ್ರದೀಪ್ ಶೆಟ್ಟರ್‌ರವರು ಕೇಳಿದ್ದರು. ಅದರ ಜೊತೆಗೆ ವಿಶೇಷವಾಗಿ ಧಾರವಾಡ, ಗದಗ, ಹಾವೇರಿ ಜಿಲ್ಲೆಗಳಿಗೆ ಎಷ್ಟು ಅನುದಾನ ಕೇಂದ್ರದಿಂದ ಬಂದಿದೆಯೆನ್ನುವ ಮಾಹಿತಿಯನ್ನು ಕೇಳಿದ್ದರು. ಅದಕ್ಕೆ ಸುದೀರ್ಘವಾದ ಲಿಖಿತ ಉತ್ತರವನ್ನು ಕೊಟ್ಟಿದ್ದಾರೆ. ನಾನು ಸರ್ಕಾರದ ಉತ್ತರವನ್ನು ಪರಿಶೀಲನೆ ಮಾಡಿದಾಗ ನನಗೆ ಬಹಳ ಸಂತೋಷವಾದ ವಿಚಾರವೆಂದರೆ ಕಳೆದ 15 ವರ್ಷದೊಳಗೆ...

ಸಭಾಪತಿಯವರು:– ಮಾನ್ಯ ಎಸ್.ವ್ಹಿ. ಸಂಕನೂರರವರೇ, ತಾವು ಪ್ರಶ್ನೆಯನ್ನು ಕೇಳಿ.

ಶ್ರೀ ಎಸ್.ವ್ಹಿ. ಸಂಕನೂರ:– ಮಾನ್ಯ ಸಭಾಪತಿಯವರೇ, ಕೇಳುತ್ತಿದ್ದೇನೆ.

ಸಭಾಪತಿಯವರು:– ತಾವುಗಳು ಹಿರಿಯ ಸದಸ್ಯರಿದ್ದೀರಿ.

ಶ್ರೀ ಎಸ್.ವ್ಹಿ. ಸಂಕನೂರ:– ಮಾನ್ಯ ಸಭಾಪತಿಯವರೇ, ನಾನು ಮಾತನಾಡುವುದಕ್ಕೆ ಅವಕಾಶ ಕೊಡಿ. ನಾನು ಪ್ರಶ್ನೆಯನ್ನೇ ಕೇಳುತ್ತಿದ್ದೇನೆ.

ಸಭಾಪತಿಯವರು:– ತಾವು ಮಾತನಾಡುವ ಸಂದರ್ಭದಲ್ಲಿಯೇ ನಾನು ಬಹಳಷ್ಟು ಬಾರಿ ಮಧ್ಯೆ ಬಾಯಿ ಹಾಕುತ್ತೇನೆ. ಕಾರಣವೇನೆಂದರೆ, ತಾವು ಹಿರಿಯ ಸದಸ್ಯರು, ತಮಗೆ ಅರ್ಥವಾಗುತ್ತದೆ, ವಿಷಯಗಳನ್ನು ಗ್ರಹಿಸುತ್ತೀರಿ. ಇದು ವಿಚಾರ ಸಂಕೀರ್ಣವಲ್ಲ. ಪ್ರಶ್ನೋತ್ತರ ಅವಧಿಯಲ್ಲಿ ತಮ್ಮ ಬಳಿ ಇರತಕ್ಕಂತಹ ಮಾಹಿತಿ ಆಧಾರದ ಮೇರೆಗೆ ಗುರುತು ಮಾಡಿ ಪ್ರಶ್ನೆ ಕೇಳುವುದಕ್ಕೆ ತಮಗೆ ದೇವರು ಶಕ್ತಿ ಕೊಟ್ಟಿದ್ದಾನೆ. ಅದನ್ನು ಮಾಡಿ. ಕೆಲವರು ವಿಷಯದ ಬಗ್ಗೆ ಪ್ರಬಂಧ ಮಂಡಿಸುವ ರೀತಿಯಲ್ಲಿ ತಾವು ಮಾಡಬಾರದು. ತಮ್ಮ ಪ್ರಶ್ನೆಯನ್ನು ನೇರವಾಗಿ ಕೇಳಿ, ಅದಕ್ಕೆ ಸಂಬಂಧಪಟ್ಟವರು ಉತ್ತರ ನೀಡುತ್ತಾರೆ. ಸಚಿವರುಗಳಿಗೂ ಕೂಡ ನಾನು ಈ ಬಗ್ಗೆ ಕೇಳುತ್ತಿದ್ದೇನೆ. ಕೆಲವರು ಬಹಳ ಉದ್ದನೆಯ ಉತ್ತರ ಕೊಡುತ್ತಿದ್ದಾರೆ. ಅದು ಒಳ್ಳೆಯದಲ್ಲ. To the point, ಉತ್ತರ ಕೊಡಿ ಎಂದು ಸಚಿವರಲ್ಲಿಯೂ ಕೇಳುತ್ತೇನೆ. ನನಗೆ ಆಗ ಸಮಯದ ಪ್ರಶ್ನೆ ಬರುವುದಿಲ್ಲ. ನಾನು ತಮಗಲ್ಲದೇ ಬೇರೆಯವರಿಗೆ ಹೇಳಿದರೆ

ಅವರು ಕೋಪ ಮಾಡಿಕೊಳ್ಳುತ್ತಾರೆ. ತಾವು ಶಿಕ್ಕಕರಿದ್ದೀರಿ, ವಿಷಯವನ್ನು ಬೇಗ ಅರ್ಥ ಮಾಡಿಕೊಳ್ಳುತ್ತೀರೆಂದು ನಿಮಗೆ ಹೇಳುತ್ತಿದ್ದನಷ್ಟೇ.

ಶ್ರೀ ಎಸ್.ವ್ಹಿ. ಸಂಕನೂರ:– ಮಾನ್ಯ ಸಭಾಪತಿಯವರೇ, ನನ್ನಲ್ಲಿ 3 ಉಪ ಪ್ರಶ್ನೆಗಳು ಇವೆ. ಅವುಗಳನ್ನು ಕೇಳಲಿಕ್ಕೆ ಪ್ರಾರಂಭ ಮಾಡುತ್ತಿದ್ದೇನೆ. ದಯಮಾಡಿ, ತಾವು ಅವಕಾಶ ಮಾಡಿಕೊಡಿ.

ಸಭಾಪತಿಯವರು:– ಕೇಳಿ.

ಶ್ರೀ ಎಸ್.ವ್ಹಿ. ಸಂಕನೂರ:– ಮಾನ್ಯ ಸಭಾಪತಿಯವರೇ, ಕಳೆದ 4 ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ಬಹಳಷ್ಟು ಅನುದಾನ ನಮ್ಮ ರಾಜ್ಯಕ್ಕೆ ಬಂದಿದೆ. ಈ ಅನುದಾನ ಪ್ರಾರಂಭದಲ್ಲಿ ಕೇವಲ 55 ಕೋಟಿ ರೂಪಾಯಿಗಳು ಇದ್ದು, ನಂತರ ಇತ್ತೀಚೆಗೆ 430 ಕೋಟಿ ರೂಪಾಯಿಗಳು, 498.63 ಕೋಟಿ ರೂಪಾಯಿಗಳು. ಈ ದಿಸೆಯಲ್ಲಿ ರಾಜ್ಯ ಸರ್ಕಾರ ಸಿ.ಆರ್.ಎಫ್., ಯೋಜನೆಗಳಲ್ಲಿ ಕೇಂದ್ರದ ಅನುದಾನ ಪಡೆದುಕೊಳ್ಳುವುದಕ್ಕೆ ಬಹಳಷ್ಟು ಪ್ರಾಮಾಣಿಕ ಪ್ರಯತ್ನ ಮಾಡಿದ್ದಕ್ಕೆ ಸರ್ಕಾರಕ್ಕೆ ಮೊದಲು ಅಭಿನಂದನೆ ಸಲ್ಲಿಸುತ್ತೇನೆ. ಇದರ ಜೊತೆಗೆ ಕಳೆದ 4 ವರ್ಷಗಳೊಳಗಾಗಿ ಕೇಂದ್ರ ಸರ್ಕಾರ ಎಂದಿಗೂ ಕೊಡಲಾರದಷ್ಟು ಹಣವನ್ನು ನಮ್ಮ ರಾಜ್ಯಕ್ಕೆ ಬಿಡುಗಡೆ ಮಾಡಿದ್ದರಿಂದ ಕೇಂದ್ರ ಸರ್ಕಾರಕ್ಕೂ ಸಹ ಅಭಿನಂದನೆ ಸಲ್ಲಿಸುವುದಕ್ಕೆ ಬಯಸುತ್ತೇನೆ. ಅನುಬಂಧ–1 ರೊಳಗೆ ಕೊಟ್ಟಂತಹ ಮಾಹಿತಿ ಪ್ರಕಾರ ನನ್ನಲ್ಲಿ 2 ಪ್ರಶ್ನೆಗಳಿವೆ. ಒಟ್ಟು 15 ವರ್ಷಗಳಲ್ಲಿ ಕೇಂದ್ರ ಸರ್ಕಾರ 1,970 ಕಾಮಗಾರಿಗಳಿಗೆ ಹಣ ಮಂಜೂರು ಮಾಡಿದೆ. ಅದರಲ್ಲಿ ರಾಜ್ಯ ಸರ್ಕಾರ ಎಷ್ಟು ಖರ್ಚು ಮಾಡಿದ್ದಾರೆ ಮತ್ತು ಕೇಂದ್ರ ಸರ್ಕಾರ ಎಷ್ಟು ಹಣ ಮರುಪಾವತಿ ಮಾಡಿದೆಯೆನ್ನುವುದನ್ನು ತೋರಿಸಿದ್ದಾರೆ. ಇದರಲ್ಲಿ ನನಗೆ ಬರತಕ್ಕಂತಹ ಪ್ರಶ್ನೆ ಏನೆಂದರೆ, 15 ವರ್ಷಗಳವರೆಗೆ ಮಂಜೂರಾದ ಮೊತ್ತ 6,026.17 ಕೋಟಿ ರೂಪಾಯಿಗಳು, ಇದಕ್ಕೆ ರಾಜ್ಯ ಸರ್ಕಾರ ಎಷ್ಟು ಖರ್ಚು ಮಾಡಿದೆ ಮತ್ತು ಕೇಂದ್ರ ಸರ್ಕಾರ ಎಷ್ಟು ಹಣ ಬಿಡುಗಡೆ ಮಾಡಿದೆ, ಇವೆರಡನ್ನೂ ಕೂಡಿಸಿದರೆ, 2004 ರಲ್ಲಿ ಕೇಂದ್ರ ಸರ್ಕಾರದಿಂದ ಬಂದಂತಹ ಹಣ 2,462.56 ಕೋಟಿ ರೂಪಾಯಿಗಳು, ರಾಜ್ಯ ಸರ್ಕಾರ ಖರ್ಚು ಮಾಡಿದ್ದು 2,476.85 ಎರಡು ಸೇರಿ 4,939.41 ಕೋಟಿ ರೂಪಾಯಿಗಳಾಗುತ್ತದೆ. ಇದಕ್ಕೆ ಅನುದಾನ ಮಂಜೂರಾದದ್ದು 6,026.17 ರೂಪಾಯಿಗಳು, ಇನ್ನು 1,086.76 ಕೋಟಿ ರೂಪಾಯಿ ಹಣ ವ್ಯತ್ಯಾಸ ಬರುತ್ತಿದೆ. ಈ ಹಣವನ್ನು ರಾಜ್ಯ ಸರ್ಕಾರ ಕೊಡಬೇಕೋ ಅಥವಾ ಕೇಂದ್ರ ಸರ್ಕಾರ ಕೊಡಬೇಕೋ ಎನ್ನುವುದನ್ನು ಮಾನ್ಯ ಸಚಿವರು ವಿವರಣೆ ನೀಡಬೇಕು.

ಇದರ ಜೊತೆಗೆ ವಿಶೇಷವಾಗಿ ಗದಗ ಜಿಲ್ಲೆ, ಹಾವೇರಿ ಜಿಲ್ಲೆ ಮತ್ತು ಧಾರವಾಡ ಜಿಲ್ಲೆಗೆ ನಾನು ರಾಜ್ಯ ಸರ್ಕಾರವನ್ನು ಮತ್ತು ಆ ಭಾಗದಲ್ಲಿರತಕ್ಕಂತಹ ಶಾಸಕರನ್ನು, ಸಚಿವರನ್ನು, ಸಂಸದರನ್ನು ಅಭಿನಂದಿಸುತ್ತೇನೆ. ಏಕೆಂದರೆ, ಧಾರವಾಡ ಜಿಲ್ಲೆಗೆ 2016–17 ನೇ ಸಾಲಿಗೆ 212 ಕೋಟಿ ರೂಪಾಯಿಗಳ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹಣ ಬಂದಿದೆ. ಗದಗ ಜಿಲ್ಲೆಯಲ್ಲಿಯೂ ಕೂಡ 31 ಕೋಟಿ ರೂಪಾಯಿಗಳ ಹಣ ಬಂದಿದೆ. ಅದೇ ರೀತಿ ಹಾವೇರಿ ಜಿಲ್ಲೆಗೆ 46 ಕೋಟಿ ರೂಪಾಯಿಗಳ ಅನುದಾನ ಕೇಂದ್ರ ಸರ್ಕಾರದಿಂದ ಬಂದಿದೆ. ಈ ದಿಸೆಯಲ್ಲಿ ಆ ಭಾಗದ ಶಾಸಕರನ್ನು, ಉಸ್ತುವಾರಿ ಸಚಿವರನ್ನು ಮತ್ತು ರಾಜ್ಯ ಸರ್ಕಾರವನ್ನು ಅಭಿನಂದಿಸುತ್ತೇನೆ. ಆದರೆ, ಇಲ್ಲಿ ನನ್ನ ಪ್ರಶ್ನೆ ಏನೆಂದರೆ, ಅನುಬಂಧ-2 ರಲ್ಲಿ 2014-15 ರಲ್ಲಿ ಮತ್ತು 2015-16 'NIL' ತೋರಿಸುತ್ತಾರೆ. ಆದರೆ, 2016-17 ನೇ ಸಾಲಿಗೆ ಮಾತ್ರ 212 ಕೋಟಿ ರೂಪಾಯಿಗಳ ಅನುದಾನ ಧಾರವಾಡಕ್ಕೆ ಬಂದಿರುವುದನ್ನು ತೋರಿಸುತ್ತಾರೆ. ಅದೇ ರೀತಿ ಗದಗ ಜಿಲ್ಲೆಯಲ್ಲಿ ಮಾತ್ರ 2014-15 ಮತ್ತು 2015-16 ನೇ ಸಾಲಿಗೆ 'NIL' ತೋರಿಸುತ್ತಾರೆ. 2016-17 ನೇ ಸಾಲಿಗೆ ಮಾತ್ರ 31 ಕೋಟಿ ರೂಪಾಯಿಗಳ ಅನುದಾನ ಬಂದಿದೆ. ಅದೇ ರೀತಿ ಹಾವೇರಿ ಜಿಲ್ಲೆಗೆ ಕೂಡ 2014-15 ಮತ್ತು 2015-16 ನೇ ಸಾಲಿಗೆ 'NIL' ತೋರಿಸುತ್ತಾರೆ. 2016-17 ನೇ ಸಾಲಿಗೆ 46 ಕೋಟಿ ರೂಪಾಯಿಗಳು ಅನುದಾನ ಬಂದಿದೆಯೆಂದು ತೋರಿಸುತ್ತಾರೆ. ರಾಜ್ಯ ಸರ್ಕಾರ 2014-15 ಮತ್ತು 2015-16 ನೇ ಇಸವಿಯಲ್ಲಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದಾರೋ ಅಥವಾ ಇಲ್ಲವೋ, ಒಂದು ವೇಳೆ ಪ್ರಸ್ತಾವನೆ ಸಲ್ಲಿಸಿದ್ದರೂ ಕೇಂದ್ರ ಸರ್ಕಾರ ಅನುದಾನ ಮಂಜೂರು ಮಾಡಿರುವುದಿಲ್ಲವೋ ಎಂಬ ಬಗ್ಗೆ ಪ್ರಶ್ನೆ ಇದೆ. ಏಕೆಂದರೆ, ಈ ಅನುಬಂಧ-2 ಅನ್ನು ನೋಡಿದರೆ ನನಗನ್ನಿಸುತ್ತಿದೆ. ಆದುದರಿಂದ, ಈ ಬಗ್ಗೆ ವಿವರಣೆ ಕೊಡಬೇಕು. ಇದರ ಜೊತೆಗೆ ನನ್ನ ಕೊನೆಯ ಪ್ರಶ್ನೆಯೇನೆಂದರೆ, 2016-17 ನೇ ಸಾಲಿಗೆ 212 ಕೋಟಿ ರೂಪಾಯಿಗಳ ಅನುದಾನವೆಂದು ತೋರಿಸುತ್ತಾರೆ. ಅದರಲ್ಲಿ "work to be commenced" ಎಂದು ಹೇಳುತ್ತಾರೆ. ಉಳಿದ ಜಿಲ್ಲೆಯಲ್ಲಿಯೂ ಅದೇ ರೀತಿಯ ಉತ್ತರ ನೀಡಿರುತ್ತಾರೆ. ಗದಗ ಜಿಲ್ಲೆ ಮತ್ತು ಹಾವೇರಿ ಜಿಲ್ಲೆಯ ವಿಷಯಗಳಲ್ಲಿಯೂ ಕೂಡ, "work to be commenced"ಎಂದು ಹೇಳುತ್ತಾರೆ. "Work to be commenced" ಎಂದರೆ ಅರ್ಥವೇನು, ಕಾಮಗಾರಿಗಳಿಗೆ ಟೆಂಡರ್ ಕರೆದಿದ್ದಾರೆಯೇ, ಅಥವಾ ಯಾರಾದರೂ ಗುತ್ತಿಗೆದಾರರಿಗೆ ಟೆಂಡರ್ ಮಂಜೂರಾಗಿದೆಯೋ ಅಥವಾ ಇಲ್ಲವೋ, ಆ ಕಾಮಗಾರಿ ಯಾವ ಹಂತದಲ್ಲಿದೆ ಎನ್ನುವ ಬಗ್ಗೆ ಮಾನ್ಯ ಸಚಿವರು ವಿವರಣೆ ಕೊಡಬೇಕು.

ಕೊನೆಯದಾಗಿ, ನನ್ನ ಪ್ರಶ್ನೆ ಏನೆಂದರೆ, ಈ ಗುತ್ತಿಗೆ ಮತ್ತು ಗುತ್ತಿಗೆದಾರರು ಬಗ್ಗೆ ಸರಿಯಾಗಿ ಕಾಮಗಾರಿ ಮಾಡುತ್ತಿಲ್ಲ, ನಿಗದಿತ ಅವಧಿಯೊಳಗೆ ಕಾಮಗಾರಿಗಳನ್ನು ಗುತ್ತಿಗೆದಾರರು ಪೂರ್ಣಗೊಳಿಸುತ್ತಿಲ್ಲವೆಂದು ಸಾಕಷ್ಟು ಆರೋಪಗಳು ಬರುತ್ತಿವೆ. ಇಂತಹ ಆರೋಪಗಳು ಸರ್ಕಾರದ ಗಮನಕ್ಕೆ ಬಂದಿದೆಯೇ, ಒಂದು ವೇಳೆ ಆರೋಪಗಳು ಬಂದಿದ್ದರೆ ಯಾರು ನಿಗದಿತ ಅವಧಿಯೊಳಗೆ ಗುತ್ತಿಗೆ ಕಾಮಗಾರಿ ಕೆಲಸವನ್ನು ಪೂರ್ಣಗೊಳಿಸಿರುವುದಿಲ್ಲ ಅವರಿಗೆ ದಂಡ ಹಾಕಿದ್ದಾರೆಯೇ ಅಥವಾ ಶಿಕ್ಷೆ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವಿಧಿಸಿದ್ದಾರೆಯೇ ಅಥವಾ ಗುಣಮಟ್ಟವನ್ನು ಕಾಯ್ದುಕೊಳ್ಳಲಾರದಂತಹ ಗುತ್ತಿಗೆದಾರರ ವಿರುದ್ಧ ಯಾವ ಕ್ರಮ ತೆಗೆದುಕೊಂಡಿದ್ದಾರೆ ಎನ್ನುವುದರ ಬಗ್ಗೆ ಸರ್ಕಾರದ ಬಳಿ ಮಾಹಿತಿ ಇದ್ದರೆ ಒದಗಿಸಬೇಕೆಂದು ತಮ್ಮ ಮೂಲಕ ಕೋರುತ್ತೇನೆ.

ಡಾ॥ ಹೆಚ್.ಸಿ. ಮಹದೇವಪ್ಪ:– ಮಾನ್ಯ ಸಭಾಪತಿಯವರೇ, 'To the point' ಎಂದು ತಾವು ಆಗಲೇ ಏನು ಹೇಳಿದ್ದೀರಿ, ಅದೇ ರೀತಿ ನಾನು ಉತ್ತರ ನೀಡಿದ್ದೇನೆ. ಮುಖ್ಯವಾಗಿ ಕೇಂದ್ರ ಸರ್ಕಾರದಿಂದ ಸಿ.ಆರ್.ಎಫ್., ಹಣ ರಾಜ್ಯಕ್ಕೆ ಯಾವ್ಯಾವ ವರ್ಷದಲ್ಲಿ ಎಷ್ಟು ಅನುದಾನ ಬಂದಿದೆಯೆಂದು ಪ್ರಶ್ನೆಯನ್ನು ಕೇಳಿದ್ದಾರೆ. ಅದಕ್ಕೆ ವಿವರವಾದಂತಹ ಉತ್ತರ ಕೊಟ್ಟಿದ್ದೇನೆ. ಅದಕ್ಕಾಗಿ ಮಾನ್ಯ ಸದಸ್ಯರು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳೆರಡಕ್ಕೂ ಅಭಿನಂದನೆಯನ್ನು ಸಲ್ಲಿಸಿದ್ದಾರೆ. ಮೂಲತಃ ಸಿ.ಆರ್.ಎಫ್., ಹಣ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಕೊಡಬೇಕಾದಂತಹ fuel consumption ನಲ್ಲಿ ಶೇಕಡ 30 ರಷ್ಟು ಮತ್ತು ಶೇಕಡ 70 ರಷ್ಟು geographical distribution ಕೊಡತಕ್ಕಂತಹ ರಾಜ್ಯದ ಹಣ. ನಮಗೆ ಒಂದು ವರ್ಷಕ್ಕೆ ಕೇಂದ್ರ ಸರ್ಕಾರ ಕೊಡಬೇಕಾದ ಅನುದಾನ 500 ಕೋಟಿ ರೂಪಾಯಿಗಳು. ಆದರೆ, ಕೇಂದ್ರ ಸರ್ಕಾರ ಕೊಡುತ್ತಿರುವುದು 3,000 ಕೋಟಿ ರೂಪಾಯಿಗಳು. 2013–14 ರಲ್ಲಿ ಯು.ಪಿ.ಎ., ಸರ್ಕಾರ ಅಧಿಕಾರದಲ್ಲಿದ್ದಾಗ 1,000 ಕೋಟಿ ರೂಪಾಯಿಗಳ ಅನುದಾನ ನೀಡಿದ್ದು, ನಮ್ಮ ರಾಜ್ಯಕ್ಕೆ ಬರಬೇಕಾಗಿದ್ದು 250 ರಿಂದ 300 ಕೋಟಿ ರೂಪಾಯಿಗಳು. ಆ ಎರಡು ಅವಧಿಯಲ್ಲಿ ಕೇಂದ್ರ ಸರ್ಕಾರ ಹೆಚ್ಚು ಅನುದಾನ ಕೊಡುತ್ತಿತ್ತು. ಬೇರೆ ಸಂದರ್ಭಗಳಲ್ಲಿ ನಮ್ಮ ಹೆಚ್ಚು ಹಣ ನಮ್ಮ consumption ಎಷ್ಟಿತ್ತು ಅಷ್ಟು ಹಣವನ್ನು ಮಾತ್ರ ಕೊಡುತ್ತಿದ್ದರು. ಈ ಹಣ ಕೊಟ್ಟ ನಂತರ ರಾಜ್ಯ ಸರ್ಕಾರ ಒಂದು ವರ್ಷಕ್ಕೆ 500 ಕೋಟಿ ರೂಪಾಯಿಗಳ ಹಣದ ಹಕ್ಕು ಎಷ್ಟು ಇದೆ, ಅಷ್ಟು ಹಣ ಮಾತ್ರ ಖರ್ಚು ಮಾಡಬೇಕು. ಅದು ಕೇಂದ್ರ ಸರ್ಕಾರದಿಂದ ಮರುಪಾವತಿ ಆಗುತ್ತದೆ. 6,026.17 ಕೋಟಿ ರೂಪಾಯಿಗಳ ಅನುದಾನ ಕೊಟ್ಟು, 2,450 ಕೋಟಿ ರೂಪಾಯಿಗಳ ಖರ್ಚಾಗಿ ಉಳಿದ ಹಣ ಏತಕ್ಕೆ ಖರ್ಚಾಗಿಲ್ಲವೆಂದರೆ, ಅದು ರಾಜ್ಯ ಸರ್ಕಾರಕ್ಕೆ ಪ್ರಾಸಂಗಿಕವಾಗಿ 500 ಕೋಟಿ ರೂಪಾಯಿಗಳ ಅನುದಾನವಷ್ಟೇ ಮಾತ್ರ ಖರ್ಚು ಮಾಡಬೇಕು. ಆ ಹಣವನ್ನು ಖರ್ಚು ಮಾಡುತ್ತೇವೆ. ಖರ್ಚು ಮಾಡಿದ ನಂತರ ಕೇಂದ್ರ ಸರ್ಕಾರ ಮರುಪಾವತಿ ಮಾಡುತ್ತದೆ. It is State Government's genuine right to get CRF Fund.

(ಮುಂದುವರೆದಿದೆ...)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಡಾ: ಹೆಚ್.ಸಿ.ಮಹದೇವಪ್ಪ (ಮುಂದು):-

ಇದನ್ನು ಮಾಡುವಾಗ ಎಂ.ಎಲ್.ಎ. ಗಳು ಮತ್ತು ಎಂ.ಪಿ. ಗಳೆಲ್ಲರೂ ಒಟ್ಟಾಗಿ ನಮ್ಮ ರಾಜ್ಯಕ್ಕೆ ಹಣ ಬರಲಿ ಎಂದು ಪಕ್ಷಬೇಧ ಮರೆತು ಬೆಂಬಲವನ್ನು ನೀಡಿದ್ದಾರೆ. ಅದರ ಬಗ್ಗೆ I don't want to mix politics. There is no politics. ಅದಾದ ನಂತರ ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳಿಗೆಲ್ಲಾ ಹಣವನ್ನು ಕೊಡುತ್ತಾ ಬಂದಿದ್ದೇವೆ ಮತ್ತು ಈ ಯೋಜನೆಗಳನ್ನು ಮಾಡುವಾಗ ಹಣವನ್ನು ಖರ್ಚು ಮಾಡುತ್ತಾ ಹೋದಂತೆ ಹಣವು reimburse ಆಗುತ್ತದೆ. ಇನ್ನು ಎರಡು, ಮೂರು ಸಾವಿರ ಕೋಟಿ ರೂಪಾಯಿಗಳನ್ನು ಕೊಡುವುದಕ್ಕೆ ಕೇಂದ್ರ ಸರ್ಕಾರ ಸಿದ್ಧವಾಗಿದೆ. ಆದರೆ ಕೊಟ್ಟಂತಹ ಎಲ್ಲಾ ಹಣವನ್ನು ಒಂದೇ ಸಲ ಖರ್ಚು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ ನಮ್ಮ ಬಜೆಟ್ ಪ್ರಕಾರ ಅವಕಾಶ ಇರತಕ್ಕಂಥದ್ದು ವರ್ಷಕ್ಕೆ ೫೦೦.೦೦ ಕೋಟಿ ರೂಪಾಯಿಗಳು ಮಾತ್ರ. ಆದರೂ ರಾಜ್ಯ ಸರ್ಕಾರ ಹಣವನ್ನು ಖರ್ಚು ಮಾಡಿ, ಆದಷ್ಟು ಕೆಲಸವನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದೆ. ಹಣದ reimbursement ಆಗುತ್ತದೆ. ಹಾಗೆಯೇ ಯಾವುದೇ ಗುತ್ತಿಗೆದಾರರಿಂದ ದೂರುಗಳು ಬಂದಿಲ್ಲ. ಕೆಲಸ ಮಾಡುವುದಕ್ಕೆ specification ಕೊಡುತ್ತಿದ್ದೇವೆ. Specification ನ್ನು ಉಲ್ಲಂಘನೆ ಮಾಡಿ ಕೆಲಸ ಮಾಡಿರುವ ನಿರ್ದಿಷ್ಟವಾಗಿರತಕ್ಕ ಪ್ರಕರಣ ಏನಾದರೂ ಇದ್ದು, ಅದನ್ನು ನಮಗೆ ಕಳುಹಿಸಿಕೊಟ್ಟರೆ ಖಂಡಿತವಾಗಿ ಕ್ರಮ ತೆಗೆದುಕೊಳ್ಳುತ್ತೇವೆ. ಏನು specification ಇದೆ, ರಾಜ್ಯದ ಹಕ್ಕು ಏನಿದೆ, ಅದನ್ನು ಕೊಡುತ್ತಾರೆ. ಸನ್ಮಾನ್ಯ ಭೂ ಸಾರಿಗೆ ಸಚಿವರಾದಂತಹ ಶ್ರೀ ನಿತಿನ್ ಗಡ್ಕರಿಯವರು ಉತ್ಸುಕರಾಗಿದ್ದು ಇನ್ನು ಹೆಚ್ಚು ಹಣವನ್ನು ಕೊಡುತ್ತಾರೆ. ಆದರೆ, ರಾಜ್ಯ ಸರ್ಕಾರವು ಒಂದೇ ಸಲ ಖರ್ಚು ಮಾಡಿ, ಮಾಡುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ನಮ್ಮಗಿರತಕ್ಕಂಥ ಅವಕಾಶ ೫೦೦ ಕೋಟಿ ರೂಪಾಯಿಗಳು ಮಾತ್ರ. ಈಗಾಗಲೇ ಎರಡು ಸಾವಿರ ಕೋಟಿ ರೂಪಾಯಿಗಳಿಗೆ ಟೆಂಡರ್ ಕರೆದಿದ್ದೇವೆ. ಇನ್ನು ೫-೬ ವರ್ಷಗಳಾದರೂ ಅವರು ಕೊಟ್ಟಿರುವಂತಹ ಹಣವನ್ನು ಹಾಗೆಯೇ ಖರ್ಚು ಮಾಡುತ್ತಾ ಹೋಗುತ್ತೇವೆ. That is the basic guideline. ಮಾನ್ಯ ಸದಸ್ಯರು ಕೇಳಿರತಕ್ಕಂಥ ಪ್ರಶ್ನೆಗಳಿಗೆ ಅನುಬಂಧ-1 ಮತ್ತು ಅನುಬಂಧ-2 ರಲ್ಲಿ ನಿರ್ದಿಷ್ಟವಾದಂತಹ ಉತ್ತರವನ್ನು ಒದಗಿಸಿಕೊಟ್ಟಿದ್ದೇವೆ.

ಶ್ರೀ ಎಸ್.ವ್ಹಿ.ಸಂಕನೂರ:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನಾನು ಕೇಳಿರತಕ್ಕಂಥ ಪ್ರಶ್ನೆಯೊಂದಕ್ಕೆ ಸರಿಯಾದ ಉತ್ತರವನ್ನು ಕೊಡಲಿಲ್ಲ. 2016-17ನೇ ಸಾಲಿನಲ್ಲಿ 'work to be commenced' ಎಂದು ಹೇಳಿದ್ದಾರೆ. ಅದು ಯಾವ ಹಂತದಲ್ಲಿದೆ ಎಂಬುದನ್ನು ಹೇಳಬೇಕು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಡಾ: ಹೆಚ್.ಸಿ.ಮಹದೇವಪ್ಪ:– ಮಾನ್ಯ ಸಭಾಪತಿಯವರೇ, ಈಗ ಟೆಂಡರನ್ನು ಕರೆಯುತ್ತಿದ್ದೇವೆ. ಟೆಂಡರ್ process ನಲ್ಲಿದೆ.

ಸಭಾಪತಿಯವರು:– ಧನ್ಯವಾದಗಳು. ಮಾನ್ಯ ಇಂಧನ ಸಚಿವರು ಕೆಳ ಮನೆಯಲ್ಲಿ ಸ್ವಲ್ಪ ಕಾರ್ಯ ಇರುವ ಕಾರಣಕ್ಕಾಗಿ ನನ್ನ ಪ್ರಶ್ನೆಗಳನ್ನು ಬೇಗ ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. ಹಾಗಾಗಿ ಅವರಿಗೆ ಸಂಬಂಧಿಸಿದಂತಹ 3 ಪ್ರಶ್ನೆಗಳನ್ನು ಮೊದಲು ತೆಗೆದುಕೊಂಡು, ನಂತರ ಉಳಿದ ಪ್ರಶ್ನೆಗಳನ್ನು ತೆಗೆದುಕೊಳ್ಳುತ್ತೇನೆ. ಮಾನ್ಯ ಇಂಧನ ಸಚಿವರ ಹೆಸರಿನಲ್ಲಿರತಕ್ಕಂಥದ್ದು 9ನೇ ಪ್ರಶ್ನೆಯಾದ ಮಾನ್ಯ ಕಾಂತರಾಜುರವರು ಪ್ರಶ್ನೆಯನ್ನು ಕೇಳಬಹುದು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 4286

(ಉತ್ತರವನ್ನು ಲಗತ್ತಿಸಲಾಗಿದೆ)

ಶ್ರೀ ಕಾಂತರಾಜು(ಬಿಎಂಎಲ್):– ಮಾನ್ಯ ಸಭಾಪತಿಯವರೇ, ತುಮಕೂರು ಜಿಲ್ಲೆಯಲ್ಲಿ ವಿದ್ಯುತ್ ಪರಿವರ್ತಕಗಳನ್ನು (ಟ್ರಾನ್ಸ್‌ಫಾರ್ಮರ್) ಪ್ರತ್ಯೇಕವಾಗಿ ಅಳವಡಿಸಿಕೊಳ್ಳಲು 7 ವರ್ಷಗಳಿಂದ ಅಕ್ರಮ–ಸಕ್ರಮದಲ್ಲಿ ಬಂದಿರತಕ್ಕಂಥ ಅರ್ಜಿಗಳೆಷ್ಟು ಎಂದು ಕೇಳಿರತಕ್ಕಂಥ ಪ್ರಶ್ನೆಗೆ ಮಾನ್ಯ ಸಚಿವರು ಎರಡು ವರ್ಷಗಳಿಂದ ಬಂದಿರತಕ್ಕಂಥ ಅರ್ಜಿಗಳ ವಿವರವನ್ನು ಕೊಟ್ಟಿದ್ದಾರೆ. ಏಕೆಂದರೆ, ಅಕ್ರಮ–ಸಕ್ರಮದಲ್ಲಿ ಬಂದಿರತಕ್ಕಂಥ ಅರ್ಜಿಗಳಿಗೆ ರೈತರಿಂದ ಹಣವನ್ನು ಕಟ್ಟಿಸಿಕೊಂಡಿದ್ದಾರೆ. ಒಂದೊಂದು ತಾಲ್ಲೂಕಿನಲ್ಲಿ ಮುನ್ನೂರು, ನಾಲ್ಕು ನೂರು TC ಗಳಿವೆ. ಈ ರೀತಿಯಾಗಿ ತುಮಕೂರು ಜಿಲ್ಲೆಯ ರೈತರಿಂದ ಹತ್ತು ಸಾವಿರ, ಹನ್ನೆರಡು ಸಾವಿರ, ಹದಿಮೂರು ಸಾವಿರ ಹಣವನ್ನು ಕಟ್ಟಿಸಿಕೊಳ್ಳುತ್ತಿದ್ದಾರೆ. 2012 ರಿಂದ 2015ನೇ ಸಾಲಿನವರೆಗೂ ಅಕ್ರಮ–ಸಕ್ರಮದಲ್ಲಿ ಹಣವನ್ನು ಕಟ್ಟಿಸಿಕೊಂಡಿದ್ದಾರೆ. ಇಲ್ಲಿಯವರೆಗೂ ಒಂದು TC ಯನ್ನೂ ಕೊಟ್ಟಿಲ್ಲ, ಟೆಂಡರನ್ನೂ ಕರೆದಿರುವುದಿಲ್ಲ ಹಾಗೂ ತುಮಕೂರು ಭಾಗದಲ್ಲಿ ಎರಡು ವರ್ಷಗಳಿಂದ ಬರಗಾಲ ಇದ್ದ ಕಾರಣ ಬೋರ್‌ವೆಲ್‌ಗಳನ್ನು ಜಾಸ್ತಿ ಕೊರೆಸಿದ್ದಾರೆ. ಹಾಗಾಗಿ ರೈತರು Transformer ಗಳಿಗಾಗಿ ಎಷ್ಟೇ ಅರ್ಜಿಗಳನ್ನು ಹಾಕಿದ್ದರೂ ಕೊಟ್ಟಿರುವುದಿಲ್ಲ. ಆದರೆ 65 ಅರ್ಜಿಗಳು ಮಾತ್ರ ಬಾಕಿ ಇದೆ ಎಂದು ನಮಗೆ ಮಾನ್ಯ ಸಚಿವರು ಉತ್ತರವನ್ನು ನೀಡಿದ್ದಾರೆ. ಒಂದು ತಿಂಗಳ ಮೊದಲು ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮದ ಸಭೆ ಮಾಡಲಾಗಿತ್ತು. ಎಲ್ಲಾ ಶಾಸಕರು, ಕಾನೂನು ಸಚಿವರು ಹಾಗೂ ಉಸ್ತುವಾರಿ ಸಚಿವರು ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮದ ಸಭೆಯಲ್ಲಿ ಕುಳಿತುಕೊಂಡು ಮಾತನಾಡಿದಾಗ ಒಂದೊಂದು ತಾಲ್ಲೂಕಿನಲ್ಲಿ 300 TC ಬಾಕಿ ಇದೆ. ಪಾವಗಡಕ್ಕೆ ಹೋದರೆ 350 TC

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗಿಂತ ಜಾಸ್ತಿ ಬಾಕಿ ಇದೆ ಎಂದು ಗೊತ್ತಾಯಿತು. ಆ ಭಾಗದಲ್ಲಿ Solar Energy Park ಮಾಡಿರುವುದರಿಂದ ಗರಿಷ್ಠ ಉಷ್ಣಾಂಶ 2% ಜಾಸ್ತಿಯಾಗಿದೆ.

ಸಭಾಪತಿಯವರು:- ನಿಮ್ಮ ಪ್ರಶ್ನೆ ಏನು? ಏನಾಗಬೇಕಾಗಿದೆ ಎಂಬುದನ್ನು ಹೇಳಿ. What is that you want?

ಶ್ರೀ ಕಾಂತರಾಜು(ಬಿಎಂಎಲ್):- ಮಾನ್ಯ ಸಭಾಪತಿಯವರೇ, ತುಮಕೂರು ಜಿಲ್ಲೆಯಲ್ಲಿ ಅಕ್ರಮ-ಸಕ್ರಮದಡಿಯಲ್ಲಿ ರೈತರಿಂದ ಕಟ್ಟಿಸಿಕೊಂಡಿರತಕ್ಕಂಥ ಹಣವೆಷ್ಟು? ರೈತರಿಂದ ಅಕ್ರಮ-ಸಕ್ರಮದಡಿಯಲ್ಲಿ ಹಣವನ್ನು ಕಟ್ಟಿಸಿಕೊಂಡಿರುವುದರಿಂದ ಯಾವಾಗ TC ಕೊಡುತ್ತೀರಿ? 2012ನೇ ಸಾಲಿನಲ್ಲಿ ಹಣವನ್ನು ಕಟ್ಟಿಸಿಕೊಂಡು ಇಲ್ಲಿಯವರೆಗೂ TC ಕೊಟ್ಟಿಲ್ಲ.

ಸಭಾಪತಿಯವರು:- ಯಾವಾಗ ಕೊಡುತ್ತೀರೆಂದು ಮಾನ್ಯ ಸಚಿವರೆ ಹೇಳಿ.

ಶ್ರೀ ಡಿ.ಕೆ.ಶಿವಕುಮಾರ್:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ರೈತರಿಗೆ ಸಂಬಂಧಿಸಿದಂತಹ ಬಹಳ ಕಳಕಳಿಯ ಪ್ರಶ್ನೆಯನ್ನು ಕೇಳಿದ್ದಾರೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಪ್ರತಿಯೊಬ್ಬರಿಗೂ ಕೂಡ ಅವರು ಮಾಡಿದಂತಹ ಕೆಲಸದ ಬಗ್ಗೆ ಒಂದು ಸಮಾಧಾನವಿರುತ್ತದೆ. ಒಳ್ಳೆಯ ಕೆಲಸ ಮಾಡಿರಬಹುದು ಅಥವಾ ಮಾಡುವುದಕ್ಕೆ ಆಗದೇನು ಇರಬಹುದು. ಆದರೆ, ನಮ್ಮ ರಾಜ್ಯದಲ್ಲಿ ಈ ಮಧ್ಯೆ ನಮ್ಮ ರೈತರ unauthorised pump set ಜಾಸ್ತಿಯಾಯಿತು. ಒಟ್ಟಾರೆ ಇರುವಂತಹ 25 ಲಕ್ಷ pump set ಗಳಲ್ಲಿ 5 ಲಕ್ಷಕ್ಕೂ ಹೆಚ್ಚು Pump Set ಗಳಿಂದ ಕೇವಲ 50 ರೂಪಾಯಿ ಕಟ್ಟಿಸಿಕೊಂಡು, ಎಲ್ಲಾ ರೈತರು unauthorised ಆಗಿ pump set ಗಳನ್ನು ಹಾಕಿಸಿಕೊಂಡಿದ್ದಾರೆ. ಹಿಂದೆ ಮಾನ್ಯ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಸುಮಾರು 2000 ಕೋಟಿ ರೂಪಾಯಿ ಹಣವನ್ನು ಕಟ್ಟುತ್ತಿದ್ದರು. ಇವತ್ತಿನ ದಿನ ಮಾನ್ಯ ಸಿದ್ದರಾಮಯ್ಯನವರ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ರೈತರ pump set ಗಾಗಿ 9,500 ಕೋಟಿ ರೂಪಾಯಿ ಹಣವನ್ನು ಮೀಸಲಿಟ್ಟಿದ್ದೇವೆ. ಈ ಮಧ್ಯದಲ್ಲಿ KERC (Karnataka Electricity Regulatory Commission) ರವರು ಹಣವನ್ನು ಕೊಡಬೇಕಾದರೆ regularize ಮಾಡಬೇಕಾಗುತ್ತದೆ. ಈ ಮಧ್ಯದಲ್ಲಿ ಬಿಜೆಪಿ ಸರ್ಕಾರವೂ ಬಂದು ಹೋಗಿದೆ. ನಾನು ಅದರ ಬಗ್ಗೆ ರಾಜಕಾರಣ ಮಾಡುವುದಕ್ಕೆ ಹೋಗುವುದಿಲ್ಲ. ರೈತರ Pump Set ಬಾಬತ್ತಿನಲ್ಲಿ KPC ಗೆ ಕೊಡಬೇಕಾದ ರೂ.11,000 ಕೋಟಿ ಬಿಟ್ಟು ಹೋಗಿದ್ದು, ಈಗ ಇನ್ನೂ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೂ.16,000 ಕೋಟಿ KPC ಗೆ ಕಟ್ಟಬೇಕಾಗಿದೆ. ಇಂತಹ ಪರಿಸ್ಥಿತಿಯಲ್ಲಿಯೂ ಕೂಡ ಮಾನ್ಯ ಸದಸ್ಯರು ಬೇಡಿಕೆ ಇಟ್ಟಿದ್ದರೆಂದು ಇದನ್ನು regularise ಮಾಡಬೇಕೆಂದು ತೀರ್ಮಾನ ಮಾಡಿ ಒಂದು ದಿನಾಂಕವನ್ನು ಕೂಡ announce ಮಾಡಿದೆ. ಮಾನ್ಯ ಜಗದೀಶ್ ಶೆಟ್ಟರ್‌ರವರು ಕೆಳ ಮನೆಯಲ್ಲಿ ಮಾನ್ಯ ಶಿವಕುಮಾರ್‌ರವರೇ, ಸಮಯ ಬಹಳ ಕಡಿಮೆಯಾಗಿದೆ ಇನ್ನೊಂದು 3 ತಿಂಗಳು ಇದನ್ನು ವಿಸ್ತರಿಸಿ ಎಂದು ವಿನಂತಿ ಮಾಡಿಕೊಂಡಿದ್ದರು. ಆಗ ಇನ್ನೊಂದು 3 ತಿಂಗಳ ಕಾಲ ವಿಸ್ತರಿಸಿ 10 ಸಾವಿರ ರೂಪಾಯಿ ಕಟ್ಟಿಸಿಕೊಂಡು, ಬೇರೆ ಬೇರೆ ಚಿಕ್ಕ ಕೆಲಸಗಳಿಗಾಗಿ 2, 3 ಸಾವಿರ ರೂಪಾಯಿಗಳು ಕಟ್ಟಬೇಕೆಂದು announce ಮಾಡಿದ್ದೆವು. ಸುಮಾರು 90% ಜನ ಹಣ ಕಟ್ಟಿದರು. ಟ್ರಾನ್ಸ್‌ಫಾರ್ಮರ್ ಹಾಕಲಿಕ್ಕೆ ಒಬ್ಬ ರೈತನಿಗೆ ರೂ. 52,000 ಖರ್ಚಾಗುತ್ತದೆ. ಬೇರೆ infrastructure create ಮಾಡುವುದಕ್ಕೆ ರೂ.1,25,000 ಆಗುತ್ತದೆ. ಇದೆಲ್ಲವೂ ಆದ ಮೇಲೆ 4,63,000 IP Set ಗಳನ್ನು regularise ಮಾಡಿದ್ದೇವೆ. ನೀವು ಎಲ್ಲಿಯಾದರೂ ನೋಡಿ, ಅಥವಾ Central Government website ನಲ್ಲಿ ಬೇಕಾದರೂ ನೋಡಿ, ಇಡೀ ರಾಷ್ಟ್ರದಲ್ಲಿಯೇ ಇದೊಂದು ದಾಖಲೆಯಾಗಿದೆ. ನಮ್ಮ ಸರ್ಕಾರವು ರೈತರನ್ನು ಆದಷ್ಟು ಕೂಡ ಉನ್ನತ ಮಟ್ಟದಲ್ಲಿ ತರಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ಏಕೆಂದರೆ Agriculture Feeder ಬೇರೆ ಇರಬೇಕು, ಈ Feeder ಬೇರೆ ಇರಬೇಕೆಂದು ಕೇಂದ್ರ ಸರ್ಕಾರದ ಒಂದು ಯೋಜನೆ ಇದೆ. ಈ ದೃಷ್ಟಿಯಿಂದ ಪ್ರತಿಯೊಂದನ್ನು regularize ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಇನ್ನೊಂದು 20% ಮಾತ್ರ ಉಳಿದುಕೊಂಡಿದೆ. Transformer ವಿಚಾರದಲ್ಲಿಯೂ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣವೇ Transformer ಕಡಿಮೆ ಇದೆ ಎನ್ನುವ ದೃಷ್ಟಿಯಿಂದ ಒಂದು ಹೊಸದಾಗಿ Transformer Bank ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಆ Transformer Bank ನಲ್ಲಿ ಇಷ್ಟು Transformer ಇರಬೇಕೆಂದು ನಿಗದಿ ಮಾಡಿದ್ದೆವು. ಆದಾದ ನಂತರ ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ 142 Transformer Repair Centre ಗಳನ್ನು ಮಾಡಿದ್ದೇವೆ. ಅಲ್ಲಿಯೂ ಕೂಡ ಒಂದೊಂದು Transformer ಗೆ 20,000 ದಿಂದ 40,000 ರೂಪಾಯಿಯವರೆಗೆ ವೆಚ್ಚವಾಗುತ್ತಿದೆ. ರೈತರ ಬದುಕನ್ನು ಹಸನು ಮಾಡಬೇಕೆಂದು, ರೈತರಿಗೆ ತೊಂದರೆ ಮಾಡಬಾರದೆನ್ನುವ ದೃಷ್ಟಿಯಿಂದ ಈ ರೀತಿಯ ಎಲ್ಲಾ ವ್ಯವಸ್ಥೆಯನ್ನು ಕೈಗೊಂಡಿದ್ದೇವೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಅವರ ಜಿಲ್ಲೆಯಾದ ತುಮಕೂರಿನಲ್ಲಿಯೂ ಸಹ ನಿರ್ದಿಷ್ಟವಾಗಿ ನಾನು ಕೊಟ್ಟಂತಹ ಹೇಳಿಕೆಯಲ್ಲಿ ಏನಾದರೂ ತಪ್ಪಿದ್ದರೆ ಅವರಿಗೆ ಎಲ್ಲಾ ಮಾಹಿತಿಯನ್ನು ಕೊಡುತ್ತೇನೆ. First come first

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

serve ಎಂದು priority ಸಹ ಮಾಡಬೇಕಾಗುತ್ತದೆ. ಇವತ್ತು ಹಣವನ್ನು ಕಟ್ಟಿ ಡಿ.ಕೆ.ಶಿವಕುಮಾರ್‌ರವರ ಕಡೆಯಿಂದ ಫೋನ್ ಮಾಡಿಸಿ, ನಾಳೆ ಬೆಳಗ್ಗೆ ಕೆಲಸ ಆಗಬೇಕೆಂದು ಹೇಳಿದರೆ ಅದು ಆಗುವುದಿಲ್ಲ. ಮೊದಲು ಯಾರು ದುಡ್ಡು ಕಟ್ಟುತ್ತಾರೆ ಅದನ್ನು ಲೆಕ್ಕ ಹಾಕುತ್ತೇವೆ. ಅದರ ಆಧಾರದ ಮೇಲೆ ಮಾಡಿಕೊಂಡು ಬರುತ್ತಿದ್ದೇವೆ. ಇದಕ್ಕೆ ಸರ್ಕಾರ ಹಣವನ್ನು ಕೊಡದೇ ಇದ್ದರೂ ಕಂಪನಿಗಳ ಮುಖಾಂತರವೇ ಹಣವನ್ನು ಹಾಕಿಸಿ ಮಾಡಿಸುತ್ತಿದ್ದೇವೆ. KERC ಯವರು ಇದನ್ನು allow ಮಾಡಿದ್ದಾರೆ. ಹಾಗಾಗಿ ಮಾನ್ಯ ಸದಸ್ಯರ ಆತಂಕ, ರೈತರ ಬಗ್ಗೆ ಇರತಕ್ಕಂಥ ಕಾಳಜಿ ಏನೆಂಬುದು ನನಗೂ ಗೊತ್ತಿದೆ. ಏಕೆಂದರೆ ಬೇರೆ ರೈತರಿಗೂ ಹಾಗೂ ಮಾನ್ಯ ಸದಸ್ಯರ ಜಿಲ್ಲೆಯಲ್ಲಿ ಬರತಕ್ಕಂಥ ರೈತರಿಗೂ ಬಹಳ ವ್ಯತ್ಯಾಸ ಇದೆ. ಅವರು ಬಯಲು ಸೀಮೆಯ ರೈತರಾಗಿದ್ದಾರೆ. ಅವರಿಗೆ ಒಂದು ಸಾವಿರ, ಸಾವಿರದ ಇನ್ನೂರು, ಸಾವಿರದ ಮುನ್ನೂರು ಅಡಿ ಅಂತರದಲ್ಲಿ ನೀರು ಸಿಗುತ್ತಿದೆ. ಈ ಕಡೆ ಆ ರೀತಿ ಇಲ್ಲ. 10 ಕಿಲೋ ಮೀಟರ್ ನೀರು ಹೊಡೆಯುತ್ತಾರೆ ಹೊರಗಡೆಗೆ. ಆದರೆ, ನಿಮ್ಮಲ್ಲಿ ನೀರು ಒಳಗೆ ಹೋಗುತ್ತಿದೆ. ನಿಮ್ಮಲ್ಲಿ ಆ ರೀತಿ ವ್ಯತ್ಯಾಸ ಇದೆ. ಆದರೂ ಕೂಡ ಆದ್ಯತಾನುಸಾರ ನಿಮ್ಮೆಲ್ಲರ ಕೆಲಸವನ್ನು ನಾವು ಮಾಡುತ್ತೇವೆ. ಅದರ ಜೊತೆಗೆ ನಿಮ್ಮ ಜಿಲ್ಲೆಯಲ್ಲಿ ವಿಶೇಷವಾಗಿ ಕುಡಿಯುವ ನೀರಿಗಾಗಿ ಮೊದಲು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ಯ ಇಲಾಖೆಯವರು ಮಾಡಲಿ ಎಂದು ಹೇಳಿದ್ದೆವು. ಆದರೆ ಒತ್ತಡ ಇರುವುದರಿಂದ ಬೇರೆ ಸಮಸ್ಯೆ ಇದ್ದ ಕಾರಣ, ನಾವೇ ಅವರಿಂದ ಅರ್ಜಿಯನ್ನು ತೆಗೆದುಕೊಂಡು ನಾವೇ ಕುಡಿಯುವ ನೀರಿನ ವ್ಯವಸ್ಥೆಯನ್ನು ಉಚಿತವಾಗಿ ಕಲ್ಪಿಸಿಕೊಟ್ಟಿದ್ದೇವೆ. ಮೂರು ದಿನಗಳಲ್ಲಿ ಒಂದು Transformer ನ್ನು ಬದಲಾವಣೆ ಮಾಡಬೇಕು, ಮೂರು ದಿನಗಳಲ್ಲಿ ಬದಲಾವಣೆ ಮಾಡಲಿಲ್ಲವೆಂದರೆ, ಅವನು Ombudsman ಹತ್ತಿರ ದೂರನ್ನು ನೀಡಿದರೆ ಆತನಿಗೆ ದಂಡವನ್ನು ಕಟ್ಟಿಕೊಡಬೇಕೆಂದು ಸರ್ಕಾರ ಆದೇಶವನ್ನು ಹೊರಡಿಸಿದೆ. ಈ ರೀತಿಯಲ್ಲಿ ಸಮರ್ಪಕವಾಗಿ ನಾವು ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಬೇರೆ ಏನಾದರೂ ವಿಚಾರವಿದ್ದರೆ ಮಾನ್ಯ ಸದಸ್ಯರು ಹೇಳಲಿ, ಸಹಕರಿಸುವುದಕ್ಕೆ ನಾವು ಬದ್ಧರಾಗಿದ್ದೇವೆ.

ಶ್ರೀ ಕಾಂತರಾಜು(ಬಿಎಂಎಲ್):– ಮಾನ್ಯ ಸಭಾಪತಿಯವರೇ, ಇದು ತುಂಬಾ ಅವಶ್ಯಕವಾಗಿರುವಂತಹ ಕೆಲಸವಾಗಿದೆ.

ಸಭಾಪತಿಯವರು:– ಆಯಿತು. ಮಾನ್ಯ ಸಚಿವರು ಮಾಡಿಕೊಡುತ್ತೇವೆಂದು ಒಪ್ಪಿಕೊಂಡಿದ್ದಾರಲ್ಲವೇ?

ಶ್ರೀ ಕಾಂತರಾಜು(ಬಿಎಂಎಲ್):– ಮಾನ್ಯ ಸಭಾಪತಿಯವರೇ, Transformer ನ ಅಕ್ರಮ–ಸಕ್ರಮ ಇಡೀ ಕರ್ನಾಟಕದಲ್ಲಿ ಪೂರ್ಣಗೊಂಡಿಲ್ಲ. ಇದನ್ನು ಎತ್ತಿ ಹಿಡಿದು ವಿಶೇಷವಾದ ಪ್ಯಾಕೇಜನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಳವಡಿಸಿ ಏನಾದರೂ ದಯಮಾಡಿ ಮಾಡಲೇಬೇಕು. ಇಲ್ಲದಿದ್ದರೆ ರೈತರಿಗೆ ತುಂಬಾ ಅನಾನುಕೂಲವಾಗುತ್ತದೆ.

ಸಭಾಪತಿಯವರು:– ಆಯಿತು. ಮಾನ್ಯ ಸಚಿವರು ಮಾಡಿಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಡಿ.ಕೆ.ಶಿವಕುಮಾರ್:– ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದ ಹಾಗೆ 2,12,803 Transformer ಗಳನ್ನು ಈಗಾಗಲೇ ಅಳವಡಿಸಿದ್ದೇವೆ. ಮಾನ್ಯ ಸದಸ್ಯರು ಒಂದು ಪಟ್ಟಿಯನ್ನು ನೀಡಲಿ if they are on priority ಅದನ್ನು ಮಾಡುತ್ತೇವೆ.

ಸಭಾಪತಿಯವರು:– ಧನ್ಯವಾದಗಳು. ಮುಂದಿನ ಪ್ರಶ್ನೆ ಮಾನ್ಯ ಸಿ.ಆರ್.ಮನೋಹರ್‌ರವರ ಪರವಾಗಿ ಶ್ರೀ ರಮೇಶ್ ಬಾಬುರವರು ಪ್ರಶ್ನೆಯನ್ನು ಕೇಳುತ್ತಾರೆ.

(ಮುಂದು) . . .

(1107)/21.11.2017/11.50/ಎಸ್‌ಕೆ–ವಿಕೆ

ಚುಕ್ಕೆ ಗುರುತಿನ ಪ್ರಶ್ನೆ 4253
(ಉತ್ತರವನ್ನು ಲಗತ್ತಿಸಲಾಗಿದೆ)

ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ):– ಮಾನ್ಯ ಸಭಾಪತಿಯವರೆ, ಶ್ರೀ ಸಿ.ಆರ್ ಮನೋಹರ್‌ರವರ ಪರವಾಗಿ ಕೆಲವು ಉಪ ಪ್ರಶ್ನೆಗಳನ್ನು ಕೇಳಬಯಸುತ್ತೇನೆ. ಈಗಾಗಲೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಮೊದಲನೆಯ ಪ್ರಶ್ನೆಯ ಉತ್ತರಕ್ಕೆ ಸಂಬಂಧಪಟ್ಟಂತೆ, 25 ಕೆ.ವಿ.ಎ ಮತ್ತು 63 ಕೆ.ವಿ.ಎ ಸಾಮರ್ಥ್ಯದ ವಿದ್ಯುತ್ ಪರಿವರ್ತಕಗಳನ್ನು ಅಳವಡಿಸಲಾಗುತ್ತಿದೆ. ವಿತರಣಾ ಪರಿವರ್ತಕದ ಮೇಲಿನ ವಿದ್ಯುತ್ ಹೊರೆಯನ್ನು ಪರಿವರ್ತಕದ ಒಟ್ಟಾರೆ ಸಾಮರ್ಥ್ಯದ ಶೇ. 75 ಕ್ಕೆ ಸೀಮಿತಗೊಳಿಸಲಾಗುತ್ತಿದೆ. ಅವರು ಹೇಳಿರುವುದಕ್ಕಿಂತ ಇಲ್ಲಿ ಹೆಚ್ಚು ಹೊರೆ ಬೀಳುತ್ತಿದೆ. BESCOM and HESCOM ರವರ guidelines ಪ್ರಕಾರ ಇವರು ನಿಗಧಿಪಡಿಸಿದ್ದಾರೆ. ಆದರೆ unauthorised pump set ಗಳು ಏನು ಕಾರ್ಯನಿರ್ವಹಿಸುತ್ತಿವೆ ಅದರ ಬಗ್ಗೆ ಇವರಿಗೆ ಮಾಹಿತಿ ಇಲ್ಲ. ಪ್ರತಿ ಕಡೆಗಳಲ್ಲಿ ರೈತರಿಗೆ ತೊಂದರೆಯಾಗುವಂತಹದ್ದು. ಅದರಂತೆ, 25 ಕೆ.ವಿ.ಎ ವಿದ್ಯುತ್ ಪರಿವರ್ತಕದಿಂದ 10 ಹೆಚ್.ಪಿ ಸಾಮರ್ಥ್ಯದ 2 ಪಂಪ್‌ಸೆಟ್‌ಗಳಿಗೆ ಹಾಗೂ 63 ಕೆ.ವಿ.ಎ ಪರಿವರ್ತಕದಿಂದ 10 ಹೆಚ್.ಪಿ ಸಾಮರ್ಥ್ಯದ 5 ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಬಹುದಾಗಿರುತ್ತದೆ. ಉದಾಹರಣೆಗೆ ಇವರು 63 ಕೆ.ವಿ.ಎ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿದ್ಯುತ್ ಪರಿವರ್ತಕದಿಂದ 10 ಹೆಚ್.ಪಿ. 10 ಪಂಪ್‌ಸೆಟ್‌ಗಳಿಗೆ provision ಮಾಡಿದರೆ, 100 ಪಂಪ್ ಸೆಟ್‌ಗಳು ಓಡುತ್ತವೆ. ಇದು ವಾಸ್ತವಾಂಶವಾಗಿದ್ದು, ಮಾನ್ಯ ಇಂಧನ ಸಚಿವರಿಗೂ ಗೊತ್ತಿದೆ. ದಯವಿಟ್ಟು, ಅಲ್ಲಿ ಕೆ.ವಿ.ಎ ಸಾಮರ್ಥ್ಯಗಳನ್ನು ಹೆಚ್ಚು ಮಾಡುವಂತಹ ಕೆಲಸವನ್ನು ಸರ್ಕಾರದವರು ಮಾಡಬೇಕಾಗುತ್ತದೆ. ಎರಡನೇ ಪ್ರಶ್ನೆಗೆ ಸಂಬಂಧಪಟ್ಟಂತೆ, ಅವರು ಮಾಹಿತಿಯನ್ನು ಕೊಟ್ಟಿದ್ದಾರೆ. ಬಹಳ ಪ್ರಮುಖವಾಗಿ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ Transformer Bank ನ್ನು ಮಾಡಿದ್ದಾರೆ. ಅಲ್ಲಿ in time transformers delivery ಆಗಿ ಹೋಗುತ್ತಿಲ್ಲ. ಅವರು ಅರ್ಜಿ ಕೊಟ್ಟರೂ ತಕ್ಷಣದಲ್ಲಿ ರೈತರಿಗೆ ಪಂಪ್‌ಸೆಟ್‌ಗಳು ಅಥವಾ ಟ್ರಾನ್ಸ್‌ಫಾರ್ಮರ್‌ಗಳು ಹೋಗುತ್ತಿಲ್ಲ. ಅದನ್ನು ಹೆಚ್ಚು ಮಾಡುವಂತಹ ಕೆಲಸವನ್ನು ಮಾಡಬೇಕಾಗುತ್ತದೆ. ಇಲಾಖೆ ಒಂದು App ನ್ನು introduce ಮಾಡಿದ್ದಾರೆ. ಬಹಳ ಪ್ರಮುಖವಾಗಿ ಕುಡಿಯುವ ನೀರಿಗೆ ಪೂರಕವಾಗಿ ಎಲ್ಲಿ ಕೊಳವೆ ಬಾವಿಗಳು ಕೆಟ್ಟು ಹೋಗುತ್ತದೆಯೋ, ಅಲ್ಲಿಗೆ ತಕ್ಷಣ ಹೋಗಿ attend ಮಾಡುವುದಕ್ಕೆ App ನ್ನು introduce ಮಾಡಿದ್ದಾರೆ. ಅಲ್ಲಿ ಸಹ ಅವರಿಗೆ reach ಆಗುತ್ತಿಲ್ಲ. KDP (Karnataka Development Programme) ಸಭೆ ಆದಂತಹ ಸಂದರ್ಭದಲ್ಲಿ ಬಹಳಷ್ಟು ದೂರುಗಳು ಬಂದಿರುವಂತಹದ್ದು. ಕೆ.ಇ.ಬಿ. ಯವರು ಸರಿಯಾದ ಸಮಯಕ್ಕೆ ಬಂದು attend ಮಾಡಿ ದುರಸ್ತಿ ಮಾಡುತ್ತಿಲ್ಲ. ಅಲ್ಲಿ ಕುಡಿಯುವ ನೀರು ಸರಬರಾಜು ಮಾಡುವುದಕ್ಕೆ ತೊಂದರೆಯಾಗುತ್ತಿದೆ. ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟು ಹೋದಂತಹ ಸಂದರ್ಭದಲ್ಲಿ, ಸರ್ಕಾರ ತಕ್ಷಣವೇ action ತೆಗೆದುಕೊಳ್ಳಬೇಕೆಂದು ಮಾಹಿತಿಯನ್ನು ಕೊಟ್ಟರು ಸಂಬಂಧಪಟ್ಟವರು ಕಾರ್ಯನಿರ್ವಹಿಸುತ್ತಿಲ್ಲ. ಇದರ ಬಗ್ಗೆ ಬಹಳಷ್ಟು ದೂರುಗಳಿವೆ. ಈ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕು. ವಿಶೇಷವಾಗಿ ಬಂಗಾರಪೇಟೆ ವಿಭಾಗ ಮತ್ತು ಇನ್ನಿತರ ವಿಭಾಗಗಳಿಗೆ ಸರ್ವಿಸ್ ಚೆನ್ನಾಗಿದೆಯೆಂದು ಹೇಳಿ ಬಹಳ ಪುರಸ್ಕಾರ ಕೊಡಲಾಗಿದೆ. ಅವರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. We have accepted that. ಅಲ್ಲಿರುವಂತಹ 63 ಕೆ.ವಿ.ಎ., 12 ಕೆ.ವಿ.ಎ station ಗಳನ್ನು ಜಾಸ್ತಿ ಮಾಡಬೇಕಾಗುತ್ತದೆ. ಇದನ್ನು ಜಾಸ್ತಿ ಮಾಡಿದಂತಹ ಸಂದರ್ಭಗಳಲ್ಲಿ ದೂರುಗಳು ಕಡಿಮೆಯಾಗುತ್ತಾ ಹೋಗುತ್ತವೆ. ದಯಮಾಡಿ, ಇಂಧನ ಇಲಾಖೆಯವರು ಇದಕ್ಕೆ ಆದ್ಯತೆಯನ್ನು ಕೊಡಬೇಕು. ಅಲ್ಲಿ App ನ್ನು update ಮಾಡಬೇಕು. ದೂರುಗಳು ಬಂದಂತಹ ಸಂದರ್ಭದಲ್ಲಿ ತಕ್ಷಣ attend ಮಾಡವುದಕ್ಕೆ ಆದ್ಯತೆಯನ್ನು ಕೊಟ್ಟರೆ, ಅಲ್ಲಿರುವ ರೈತರ ಸಮಸ್ಯೆಗಳು ಕಡಿಮೆಯಾಗುತ್ತದೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳಬಯಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಡಿ.ಕೆ. ಶಿವಕುಮಾರ್:– ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಹೇಳಿರುವ ಮಾತಿನಲ್ಲಿ ಅರ್ಥವಿದೆ. ಅದನ್ನು ಇಲ್ಲ ಎಂದು ಹೇಳುವುದಿಲ್ಲ. ಆದರೆ seniority ಮೇಲೆ ಹೋಗಬೇಕಾಗುತ್ತದೆ. ಒಬ್ಬರಿಗೆ transformer ಆಗಲಿ, ವರ್ಗಾವಣೆಯ ಬದಲಾವಣೆಯಾಗಲಿ, ಯಾವೊಬ್ಬ ರೈತರಿಂದ ದೂರು ಬಂದರೂ ಅದಕ್ಕೆ ಒಂದು ಹೊಸ 1912 helpline scheme ನ್ನು ತಂದಿದ್ದೇವೆ. ದೂರು ಬಂದ ತಕ್ಷಣವೇ ಅಲ್ಲಿ ಅವರು register ಮಾಡಿಕೊಳ್ಳಬಹುದು. ಅಲ್ಲಿಂದ ಆ ದೂರು AEE ಗೆ ಹೋಗುತ್ತದೆ. ನಂತರ ಮುಂದಿನ ಕ್ರಮಕ್ಕಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ಹೋಗುತ್ತದೆ. ಎಲ್ಲಾ ಕಡೆ register ಇದೆ. ಆ register ಪ್ರಕಾರ ನಾವು ಹೋಗಬೇಕಾಗುತ್ತದೆ. ಅವರು ತಕ್ಷಣ ಮಾಡಬೇಕಾದರೆ, ಅವರಿಗೆ infrastructure create ಮಾಡಬೇಕಾಗುತ್ತದೆ. Infrastructure ಮಾಡಬೇಕಾದರೆ ಹಣ ಬಿಡುಗಡೆ ಮಾಡಬೇಕಾಗುತ್ತದೆ. transformers ಬಗ್ಗೆ ಹೇಳಬೇಕಾದರೆ, ನಮ್ಮ ಕಡೆಯಲ್ಲಿ ಏನಾಗಿದೆಂದರೆ, 5 ಹೆಚ್.ಪಿ ಎಂದು power connection ತೆಗೆದುಕೊಳ್ಳುತ್ತಾರೆ. ಅವರಿಗೆ ಏನು ಗೊತ್ತಿಲ್ಲದೆ 5 ಹೆಚ್.ಪಿ. ಯನ್ನು ತೆಗೆದುಕೊಂಡು, 15 ಹೆಚ್.ಪಿ motor ಹಾಕಿಕೊಂಡು ಬಿಡುತ್ತಾರೆ. 15 ಹೆಚ್.ಪಿ ಗೆ ಎಂದು power connection ತೆಗೆದುಕೊಂಡು 20 ಹೆಚ್.ಪಿ motor ಹಾಕಿಕೊಳ್ಳುತ್ತಾರೆ. ನಾವು ಒಳಗೆ ಹೋಗಿ ತೆಗೆದು ನೋಡುವುದಕ್ಕೆ ಆಗುತ್ತದೆಯೇ? ಇದೊಂದು ಬಹಳ ದೊಡ್ಡ ಸಮಸ್ಯೆಯಾಗಿದೆ. ಕೆಲವು ಕಡೆ ಹೋದರೆ ಪರವಾಗಿಲ್ಲ. ಕಬ್ಬು ಸುತ್ತಮುತ್ತಲಿರುವ ಕಡೆ ಹೋದರೆ 25 ಕಿ.ಮೀಟರ್ ನೀರು ಹೋಗುತ್ತದೆ. It is a basic problem. ತಮಿಳುನಾಡಿನಲ್ಲಿ ಒಂದು IP set connection ಕೊಡಬೇಕಾದರೆ, 10 ವರ್ಷಗಳಾಗುತ್ತದೆ. ತಮಿಳುನಾಡಿನ ಗಡಿಯ ಭಾಗದಲ್ಲಿ ನಮ್ಮ ಜಮೀನು ಮತ್ತು ಮಾನ್ಯ ಸೋಮಣ್ಣನವರ ಜಮೀನು ಇದೆ. ಎಲ್ಲರೂ ಕ್ಯೂ ನಲ್ಲಿ ನಿಂತುಕೊಳ್ಳುತ್ತಾರೆ. ಅವರಿಗೆ 10 ವರ್ಷಗಳಾದರೂ ಕೊಡುವುದಿಲ್ಲ. ನಮ್ಮಲ್ಲಿ ಏನು ಮಾಡುತ್ತಾರೆಂದರೆ, ಕೊಕ್ಕೆ ಜ್ಯೋತಿ ಎಂದು ಹೇಳುತ್ತಾರೆ. ಅಂದರೆ main wire ಗೆ ಎರಡು ಕೊಕ್ಕೆಗಳನ್ನು ಹಾಕಿ ತೆಗೆದುಕೊಂಡು ನೇರವಾಗಿ ಬೋರ್‌ವೆಲ್ motor ಗೆ ಹಾಕುತ್ತಾರೆ. ಈ ರೀತಿ ಸಾಯಂಕಾಲದ ವೇಳೆಯಲ್ಲಿ ಮಾಡುತ್ತಾರೆ. ಅದಕ್ಕೆ ಲೆಕ್ಕವಿಲ್ಲ ಏನೂ ಇಲ್ಲ. ಅವರಿಗೆ ಇಷ್ಟ ಬಂದಷ್ಟು ವಿದ್ಯುತ್ ಬಳಸುತ್ತಾರೆ. ಸದ್ಯ regularization ಆಗುತ್ತಿದೆ.

ಶ್ರೀ ರಮೇಶ್ ಬಾಬು:– ಮಾನ್ಯ ಸಭಾಪತಿಯವರೆ, ನನ್ನ ಮನವಿ ಇಷ್ಟೇ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):– ಮಾನ್ಯ ಸಭಾಪತಿಯವರೆ, ಕೊಕ್ಕೆ ಹಾಕಿಕೊಂಡು, ವಿದ್ಯುತ್ ಕಳ್ಳತನ ಮಾಡುವವರ ಮೇಲೆ ಕ್ರಮ ತೆಗೆದುಕೊಳ್ಳಿ.

ಶ್ರೀ ಡಿ.ಕೆ. ಶಿವಕುಮಾರ್:– ಮಾನ್ಯ ಸಭಾಪತಿಯವರೆ, ಆ ರೈತರುಗಳು ಅವರು ಬಿಡುವುದಿಲ್ಲ. ಇದರ ಬಗ್ಗೆ ವಿಧಾನಮಂಡಲದಲ್ಲಿ ತೀರ್ಮಾನ ಮಾಡಬೇಕು.

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:– ಮಾನ್ಯ ಸಭಾಪತಿಯವರೆ, ಅದನ್ನು ಮಾಡಿ.

ಶ್ರೀ ಡಿ.ಕೆ. ಶಿವಕುಮಾರ್:– ಮಾನ್ಯ ಸಭಾಪತಿಯವರೆ, ಈ ಸದನ ತೀರ್ಮಾನಿಸಿದರೆ ನಾಳೆ ಸಾಯಂಕಾಲದೊಳಗೆ ಯಾರು ಆ ರೀತಿ ವಿದ್ಯುತ್ ತೆಗೆದುಕೊಂಡಿದ್ದಾರೆ ಅಂಥದ್ದನ್ನು ತೆಗೆದು ಹಾಕಿ ಬಿಡುತ್ತೇವೆ.

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):– ಮಾನ್ಯ ಸಭಾಪತಿಯವರೆ, ಇದರ ಬಗ್ಗೆ ಸರ್ಕಾರ ತೀರ್ಮಾನ ತೆಗೆದುಕೊಳ್ಳುವುದಾದರೆ, ಸರ್ಕಾರದಿಂದ move ಮಾಡಿ. ನಾನು ನಮ್ಮ ಪಕ್ಷದ ವತಿಯಿಂದ support ಮಾಡುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್:– ಮಾನ್ಯ ಸಭಾಪತಿಯವರೆ, ನೀವು ಒಂದು resolution ನ್ನು ಈಗ move ಮಾಡಿ.

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):– ಮಾನ್ಯ ಸಭಾಪತಿಯವರೆ, ಇದನ್ನು ನಾವೇ move ಮಾಡುತ್ತೇವೆ.

ಶ್ರೀ **ಡಿ.ಕೆ. ಶಿವಕುಮಾರ್**:– ಮಾನ್ಯ ಸಭಾಪತಿಯವರೆ, ಈ unauthorised pump set ಗಳನ್ನು ನಿಲ್ಲಿಸಬೇಕು ಎಂದು ಒಂದು resolution move ಮಾಡಿ. ನಾಳೆ ಸಾಯಂಕಾಲದ ವೇಳೆಗೆ I am sure, I will take a decision on that.

ಶ್ರೀ ಕೆ.ಬಿ. ಶಾಣಪ್ಪ (ನಾಮ ನಿರ್ದೇಶಿತರು):– ಮಾನ್ಯ ಸಭಾಪತಿಯವರೆ, do it sir, we are with you.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):– ಮಾನ್ಯ ಸಭಾಪತಿಯವರೆ, 24 ಗಂಟೆಗಳ ಕಾಲ supply ಇದೆ.

(ಗೊಂದಲ)

ಸಭಾಪತಿಯವರು:– ಮಾನ್ಯ ಸಚಿವರು ಇದರ ಬಗ್ಗೆ ಈಗಾಗಲೇ ಹೇಳಿದ್ದಾರೆ.

ಶ್ರೀ ಕಾಂತರಾಜು:– ಮಾನ್ಯ ಸಭಾಪತಿಯವರೆ, ಯಾವ ರೈತರು ಒಪ್ಪುವುದಿಲ್ಲ.

(ಗೊಂದಲ)

ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭಾ ಕ್ಷೇತ್ರ):–ಮಾನ್ಯ ಸಭಾಪತಿಯವರೆ, ...

ಸಭಾಪತಿಯವರು:– ದಯವಿಟ್ಟು, ಕುಳಿತುಕೊಳ್ಳಿ. ಅದರ ಬಗ್ಗೆ ಚರ್ಚೆಯಿಲ್ಲ. ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ resolution ಇದೆಯಾ? ಮಾನ್ಯ ಬೋಸ್‌ರಾಜುರವರು ಯಾವುದೇ resolution ಬಗ್ಗೆ ಚರ್ಚೆ ಇಲ್ಲ. ಅವರ ಅಭಿಪ್ರಾಯ ಹೇಳಿದ್ದಾರೆ. ದಯವಿಟ್ಟು, ಕುಳಿತುಕೊಳ್ಳಿ.

(ಗೊಂದಲ)

ಸಭಾಪತಿಯವರು:– ಏನು ಬೇಕಾದರು ಮಾತನಾಡುವುದಕ್ಕೆ ಬರುವುದಿಲ್ಲ. ದಯವಿಟ್ಟು, ಕುಳಿತುಕೊಳ್ಳಿ.

ಚುಕ್ಕೆ ಗುರುತಿನ ಪ್ರಶ್ನೆ 4264
(ಉತ್ತರವನ್ನು ಲಗತ್ತಿಸಲಾಗಿದೆ)

ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ.:– ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಕೊಡಗು ಜಿಲ್ಲೆಗೆ 344 vacant post ಗಳು ಇರುತ್ತವೆ. ಅಲ್ಲಿ ವಿಪರೀತ ಮಳೆ–ಗಾಳಿಯಿಂದ ಗಿಡ–ಮರಗಳು ಬಿದ್ದು, ವಿದ್ಯುತ್ ಇಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಆ ಸಂದರ್ಭದಲ್ಲಿ ಅಧಿಕಾರಿಗಳನ್ನು ಭೇಟಿ ಮಾಡಿದರೆ, ಅವರು sufficient man power ಇಲ್ಲ ಎಂದು ಹೇಳುತ್ತಾರೆ. Man power ಬಂದರೆ, influence ನಿಂದ ವರ್ಗಾವಣೆ ಮಾಡಿಸಿಕೊಂಡು ಬೇರೆ ಕಡೆಗೆ ಹೋಗುತ್ತಾರೆಂದು ಹೇಳುತ್ತಾರೆ. ನಾವು ವರ್ಗಾವಣೆ ಮಾಡಬೇಡಿ ಎಂದು ಹೇಳಿದರೆ, ಪ್ರಭಾವಿ ವ್ಯಕ್ತಿಗಳಿಂದ ದೂರವಾಣಿ ಕರೆ ಬರುತ್ತದೆಂದು ಅವರು ಹೇಳುತ್ತಾರೆ. ಮಾನ್ಯ ಸಚಿವರಲ್ಲಿ ಮನವಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿಕೊಳ್ಳುವುದೇನೆಂದರೆ, ಕೊಡಗು, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ವಿಪರೀತ ಮಳೆಯಿಂದ remote area ಗಳಲ್ಲಿ ಮರಗಳು ಬಿದ್ದು, ವಿದ್ಯುತ್ ಇಲ್ಲದೇ ಸುಮಾರು ಹತ್ತು-ಹದಿನೈದು ದಿವಸ ಕಾಲಕಳೆಯುವಂತಹ ಪರಿಸ್ಥಿತಿ ಬರುತ್ತದೆ. ಮಾನ್ಯ ಸಚಿವರ ಪ್ರಭಾವವನ್ನು ಉಪಯೋಗಿಸಿ, ನಮ್ಮ ಕೊಡಗು ಜಿಲ್ಲೆಗೆ ಶಾಶ್ವತವಾಗಿ ವಿದ್ಯುತ್ ಬರುವಂತೆ ಮಾಡಬೇಕು. ನಮಗೆ ಮಳೆಗಾಲದ ಪರಿಸ್ಥಿತಿಯಾದರೆ, ಬೇಸಿಗೆ ಕಾಲದಲ್ಲಿ power cut ಇದೆ. ದಯವಿಟ್ಟು, power cut ನ್ನು ನಮಗೆ ಮಾನವೀಯತೆಯಿಂದ ಬಿಟ್ಟುಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್:- ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು vacant position ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಾನು ಇಂಧನ ಸಚಿವನಾಗಿ ಬಂದ ನಂತರ, ಸುಮಾರು 23,000 ವಿವಿಧ ಹುದ್ದೆಗಳನ್ನು ತುಂಬಿದ್ದೇನೆ. ಹೊಸ power man ಎಂದು ನೇಮಕ ಮಾಡಿದ್ದೇವೆ. ಇದಕ್ಕೆ ಕೆಲವರು suggest ಮಾಡಿದರು. ಸುಮಾರು 2,000ಕ್ಕೂ ಹೆಚ್ಚು ಇಂಜಿನೀಯರ್‌ಗಳನ್ನು ನೇಮಕ ಮಾಡಿದ್ದೇವೆ. ಇದರಲ್ಲಿ ಸ್ವಲ್ಪ ಸುಧಾರಣೆಯನ್ನು ಮಾಡಬಹುದಾಗಿತ್ತು. ನಮ್ಮ ಕಂಪನಿಯ financial position ನ್ನು ಸಹ ನೋಡಬೇಕಾಗುತ್ತದೆ. ಆ ದೃಷ್ಟಿಯಿಂದ ನಾವು ready ಮಾಡಿಕೊಂಡಿದ್ದೇವೆ. ನಾವು ಎಲ್ಲೆಲ್ಲಿ fill up ಮಾಡಬೇಕು. Especially ನಮ್ಮ CESCOM ನಲ್ಲಿ ಬಹುಶಃ ಹೆಚ್ಚು ಕಡಿಮೆ 80-85 percent ಕೆಲಸ ಆಗಿದೆ. ಮಲೆನಾಡು ಭಾಗದಲ್ಲಿ ವಿಪರೀತ ಮಳೆ ಬಂದು ಸ್ವಲ್ಪ ಕಂಬಗಳು ಹಾನಿಗೊಳಗಾಗಿದೆ. ಕೆಲವು ಎಲ್ಲಿ ರಿಪೇರಿ ಮಾಡಬಹುದು ಅಲ್ಲಿ ರಿಪೇರಿ ಮಾಡಬೇಕೆಂದು ನಾನು ಹೇಳಿತ್ತಿದ್ದೇನೆ. ಮಾನ್ಯ ಸದಸ್ಯರು ಯಾವ್ಯಾವ ಕಡೆಗಳಲ್ಲಿ ಮೂಲಭೂತ ತುರ್ತು ಇದೆ ಎಂದು ಬರೆದುಕೊಟ್ಟರೆ, ಅದನ್ನು top priority ಮೇಲೆ ನಾನು attend ಮಾಡುತ್ತೇನೆ. ಈಗ ನೋಡಿ ಬಳ್ಳಾರಿ ಜಿಲ್ಲೆಯವರದು ಒಂದು ಕೂಗು ಇದೆ ಮತ್ತು ರಾಯಚೂರು ಜಿಲ್ಲೆಯವರದು ಮತ್ತೊಂದು ರೀತಿಯ ಕೂಗು ಇದೆ. ನಮಗೆ 24 hours power ಕೊಡಬೇಕೆಂದು ಕೇಳುತ್ತಿದ್ದಾರೆ. ಇಲ್ಲಿ ಬಹಳ ಕಷ್ಟವಾಗಿದೆ. ಮಧ್ಯೆ ಇಲ್ಲಿ ಏನಾಗಿದೆ ಎಂದರೆ ಇಡೀ ರಾಷ್ಟ್ರದಲ್ಲಿಯೇ Coal ದೊಡ್ಡ ಸಮಸ್ಯೆಯಾಗಿದೆ. ನಮ್ಮ ರಾಜ್ಯದಲ್ಲಿ ಮಾತ್ರವಲ್ಲ ಅಲ್ಲ. 'Hand to mouth' ಅರ್ಧ ದಿನ ರನ್ ಮಾಡುವುದಕ್ಕಾಗುತ್ತಿಲ್ಲ. ನಮ್ಮ RTPS (Raichur Thermal Power Station) ಮುಚ್ಚಿದೆ. Chhattisgarh ವಿಚಾರದ ಬಗ್ಗೆ ಮಾನ್ಯ ಸದಸ್ಯರು ಮಾತನಾಡುತ್ತಿದ್ದರು. ಮಾನ್ಯ ಯಡಿಯೂರಪ್ಪನವರು ಮತ್ತು ಶ್ರೀಮತಿ ಶೋಭಾ ಕರಂದ್ಲಾಜೆಯವರು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Chhattisgarh ಗೆ ಹೋಗಿ ಸಾವಿರಾರು ಎಕರೆ ಜಾಗವನ್ನು agreement ಮಾಡಿಕೊಂಡು ಬಂದಿದ್ದಾರೆ. ನಾವು ಅದನ್ನು ಉಳಿಸಿಕೊಂಡು ಬಂದು, ಕಾಪೌಂಡ್ ಹಾಕಿಸಿದ್ದೇವೆ. ಹೊಸದಾಗಿ Coal lease ಹಾಕಿದ್ದೇವೆ. ಅವರು ಕೊಡುತ್ತೇವೆಂದು ಹೇಳಿ, ನಮ್ಮನ್ನು ಕರೆದು ಮೀಟಿಂಗ್‌ನ್ನು ಮಾಡಿದರು. ನಾನು ಮತ್ತು ಮಾನ್ಯ ಮುಖ್ಯಮಂತ್ರಿಗಳು ಅನೇಕ ಬಾರಿ ಭೇಟಿ ನೀಡಿದ್ದೇವು. ನಾವು ಗಂಟೆಯಗಟ್ಟಲೆ Sri Piyush Goyal ರವರಿಗಾಗಿ ಕಾದಿದ್ದೇವೆ. ಇವತ್ತು ಬಂದು ಇದನ್ನು ರದ್ದು ಮಾಡಿದ್ದೇವೆಂದು statement ಮಾಡಿಬಿಟ್ಟಿದ್ದಾರೆ. ಇದು ನನಗೆ ಬಹಳ ಆಶ್ಚರ್ಯವಾಯಿತು. ಕರ್ನಾಟಕ ಸರ್ಕಾರ ಬಂದಿದ್ದು, ಯಾರಾದರೂ ಕಳುಹಿಸಿಕೊಡುತ್ತಾರಾ? ಇರುವಂತಹ ಅವಕಾಶ ನಾವು ಕಳೆದು ಕೊಳ್ಳುವುದಿಲ್ಲ. I am making it very clear. ಮಾನ್ಯ ರಮಣ್‌ಸಿಂಗ್‌ರವರು ಏನೊಂದು statement ಮಾಡಿದ್ದಾರೆ. ಅದು ಅಕ್ಷರಶಃ ತಪ್ಪು. ಅವರಿಗೆ ಅದು ಮಾಹಿತಿ ಇಲ್ಲದೇ ಕೊಟ್ಟಿದ್ದಾರೆ. ನಾವು ಯಾವ ಕಾರಣಕ್ಕಾಗಿಯೂ ಕೂಡ investment and agreement ನ್ನು ರದ್ದು ಮಾಡುವ ಪ್ರಶ್ನೆಯೇ ಇಲ್ಲ. ತಮ್ಮ ಮೂಲಕ ನಾನು appeal ಮಾಡುತ್ತಿದ್ದೇನೆ. ಆದಷ್ಟು ಬೇಗ ನಮಗೆ Coal Block ನ್ನು allotment ಮಾಡಿದರೆ, ಎಲ್ಲಾ ರೆಡಿಯಾಗಿದೆ. ಒಂದು order ಕೊಟ್ಟು ಬಿಟ್ಟರೆ ನಾವು ಸಧ್ಯದಲ್ಲಿಯೇ ಎಷ್ಟು ಪ್ರಾರಂಭ ಮಾಡುತ್ತೇವೆ. ಏಕೆಂದರೆ ನಮಗೆ ನಮ್ಮದೇ ಆದಂತಹ ಒಂದು Coal Block ಬೇಕು. ಅಲ್ಲಿಯಾದರೂ ಚಿಂತೆಯಿಲ್ಲ. ಅಲ್ಲಿಗೆ ಹೋಗಿ ಅವರ ಕೈಯಲ್ಲಿಯೋ ಅಥವಾ ಯಾರ ಕೈಯಲ್ಲಿಯಾದರೂ ಮಾಡಿಸಿಬಿಟ್ಟು, ನಮಗೆ ವಿದ್ಯುತ್ ತರುವಂತಹ ಕೆಲಸವನ್ನು ಮಾಡುತ್ತೇನೆ. So, what Sri Raman Singh, the Hon'ble Chief Minister of Chhattisgarh has said is totally false and it is baseless. ನಾನು ಅದನ್ನು condemn ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಅವರಿಗೆ ಮಾಹಿತಿ ಇಲ್ಲದೇ statement ಕೊಟ್ಟು ಬಿಟ್ಟಿದ್ದಾರೆ. ದಯವಿಟ್ಟು, ಅವರಿಗೆ ಮಾಹಿತಿಯನ್ನು ತಲುಪಿಸಬೇಕೆಂದು ಹೇಳಿ, ತಮ್ಮ ಮುಖಾಂತರ ಮನವಿ ಮಾಡಿಕೊಳ್ಳುತ್ತೇನೆ.

ಸಭಾಪತಿಯವರು:- ಧನ್ಯವಾದಗಳು. ಮಾನ್ಯ ರಿಜ್ವಾನ್ ಅರ್ಷದ್‌ರವರ ಪರವಾಗಿ ಮಾನ್ಯ ಮಾನೆ ಶ್ರೀನಿವಾಸರವರು ಪ್ರಶ್ನೆಯನ್ನು ಕೇಳುತ್ತಾರೆ.

(ಮುಂದು...)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಆರ್. ಧರ್ಮಸೇನ (ಮುಂದು. .)

ಪಶುಸಂಗೋಪನೆ ಇಲಾಖೆಯವರು ಇವತ್ತಿನವರೆಗೂ ಯಾವುದೇ ಶಾಸಕರನ್ನು ಕರೆದು ಕಾರ್ಯಕ್ರಮಗಳನ್ನು ಮಾಡಿರುವುದು ನಮಗೆ ಗೊತ್ತಿಲ್ಲ. ಕೃಷಿ ಇಲಾಖೆಯ ತಜ್ಞರುಗಳನ್ನು ಕರೆಸಿ ಸಾರ್ವಜನಿಕರಿಗೆ ಮಾಹಿತಿಗಳನ್ನು ಕೊಡುತ್ತಾರೆ. ಆದರೆ ಈ ಇಲಾಖೆಯಲ್ಲಿ ಯಾವುದೇ ವಿಜ್ಞಾನಿಗಳಾಗಲೀ ಅಥವಾ ಶಾಸಕರುಗಳಾಗಲೀ ಇಲ್ಲ. ಇವರು ಕೆಲವು ಮಾಹಿತಿಗಳನ್ನು ಕೊಟ್ಟಿದ್ದಾರೆ. ಅವುಗಳೆಂದರೆ, ಜಾನುವಾರು ಆರೋಗ್ಯ ಶಿಬಿರಗಳನ್ನು, ವಿಸ್ತರಣಾ ಚಟುವಟಿಕೆಗಳನ್ನು ನಡೆಸಿದ್ದೇವೆ, ಸಂತೆಗಳಲ್ಲಿ ರಾಸು ಪ್ರದರ್ಶನಗಳನ್ನು ಮಾಡಿರಬಹುದು, ಕಿಸಾನ್ ಸಂಪರ್ಕ ಸಭೆ ಮತ್ತು ಗ್ರಾಮ ಸಭೆಯನ್ನು ನಡೆಸಿದ್ದೇವೆಂದು ಹೇಳಿದ್ದಾರೆ, ಆದರೆ ಇವುಗಳ ಬಗ್ಗೆ ನಮ್ಮ ಶಾಸಕರುಗಳಿಗೆ ಮಾಹಿತಿ ಇಲ್ಲ. ಇಲಾಖೆಯು ಕಾರ್ಯಕ್ರಮಗಳನ್ನು ಮಾಡುತ್ತಿರುವ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಆದ್ದರಿಂದ ದಯಮಾಡಿ ಮಾನ್ಯ ಸಚಿವರು ಈ ವಿಷಯದ ಬಗ್ಗೆ ತಿಳಿಸಬೇಕೆಂದು ಕೋರುತ್ತೇನೆ.

ಶ್ರೀ ಎ. ಮಂಜು:– ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಧರ್ಮಸೇನ ಅವರು ಕೇಳಿರುವುದಕ್ಕೆ ಸಂಬಂಧಿಸಿದಂತೆ ತಾಲ್ಲೂಕಿಗೆ ಒಂದರಂತೆ ಸಂಚಾರಿ ವಾಹನಗಳನ್ನು ಕೊಟ್ಟಿದ್ದೇವೆ. ಅದರ ಜೊತೆಗೆ ಹೋಬಳಿಯಲ್ಲಿ ಸೇವೆ ಮಾಡಲು ಸಕಲೇಶಪುರ, ಕಾರವಾರ, ಗುಲ್ಬರ್ಗ, ರಾಯಚೂರು, ತುಮಕೂರು ಈ ತಾಲ್ಲೂಕುಗಳಲ್ಲಿ ಹೋಬಳಿಗೆ ಒಂದು ವಾಹನ ಕೊಡುವುದನ್ನು ಪ್ರಾರಂಭ ಮಾಡಿದ್ದೇವೆ. "Tata Sumo" ವಾಹನವನ್ನು ಕೊಡುತ್ತೇವೆ. ಸಂಚಾರಿ ಪಶು ಚಿಕಿತ್ಸಾಲಯವು ಯಾವ ರೀತಿ ಕೆಲಸ ಮಾಡುತ್ತದೆಂದರೆ, ವೈದ್ಯರನ್ನು ಜಾನುವಾರು ಹತ್ತಿರ ಕರೆದುಕೊಂಡು ಹೋಗುವ ಒಂದು ವ್ಯವಸ್ಥೆ ಅಷ್ಟೆ. ರೋಗಿಯನ್ನು ಇಲ್ಲಿಗೆ ಕರೆದುಕೊಂಡು ಬರುವುದಕ್ಕಾಗುವುದಿಲ್ಲ. ಆ ಜಾನುವಾರು ಬಳಿಗೆ ವೈದ್ಯರು ಹೋಗುವುದಾಗಿದೆ. ಇವರು ತಿಳಿದುಕೊಂಡಂತೆ ಆ ರೀತಿಯ ಆ್ಯಂಬುಲೆನ್ಸ್ ಇದಲ್ಲ. ನಾವು ಪಶುವೈದ್ಯರಿಗೆ ಮೆಡಿಕಲ್ ಕಿಟ್, ಇವನ್ನೆಲ್ಲಾ ಕೊಟ್ಟು ಎಲ್ಲಿ ಖಾಯಿಲೆಯಿಂದ ನರಳುತ್ತಿರುವ ರೋಗಗ್ರಸ್ಥ ಜಾನುವಾರು ಇರುವುದೋ ಅಲ್ಲಿಗೆ ವೈದ್ಯರು ಹೋಗುವುದಕ್ಕೆ ವಾಹನವನ್ನು ಕೊಟ್ಟಿದ್ದೇವೆ. ಬಹುಶಃ ಮಾನ್ಯ ಸದಸ್ಯರು ಆ ಕಾರ್ಯಕ್ರಮಕ್ಕೆ ಶಾಸಕರನ್ನು ಕರೆದಿಲ್ಲ ಎಂದು ಹೇಳುತ್ತಿದ್ದಾರೆ, ಕರೆಯದೇ ಇದ್ದರೆ ಶಾಸಕರು ಯಾವ ಯಾವ ತಾಲ್ಲೂಕಿನಲ್ಲಿ ಇರುತ್ತಾರೆ ಅವರನ್ನು ಕರೆಯಬೇಕೆಂದು ಸಂಬಂಧಪಟ್ಟವರಿಗೆ instructions ಕೊಡಿಸುತ್ತೇವೆ. He will be invited for all programmes in future.

ಶ್ರೀ ಆರ್. ಧರ್ಮಸೇನ:– ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನಿರ್ದಿಷ್ಟವಾದ ತಾಲ್ಲೂಕುಗಳಲ್ಲಿ ಸಂಚಾರಿ ಪಶು ಚಿಕಿತ್ಸಾಲಯಗಳು ಸಂಚಾರ ಮಾಡುತ್ತಿದೆ ಎಂದು ಹೇಳುತ್ತಾರೆ ಆದರೆ ಇದರ ಬಗ್ಗೆ ಪತ್ರಿಕೆಗಳಲ್ಲಿ ಕೂಡ ಯಾವುದೇ ಮಾಹಿತಿ ಇಲ್ಲ.

ಸಭಾಪತಿಯವರು:– ಮಾನ್ಯ ಸದಸ್ಯರು ಸಂಚಾರಿ ಪಶು ಚಿಕಿತ್ಸಾಲಯಗಳು ಎಲ್ಲಿ ಸಂಚಾರವಾಗುತ್ತವೆ ಎಂಬ ಬಗ್ಗೆ ನಮಗೆ ಮಾಹಿತಿ ಇಲ್ಲ ಎಂದು ಕೇಳುತ್ತಿದ್ದಾರೆ. ಅವರಿಗೆ ಮಾಹಿತಿ ಕೊಡಿ.

ಶ್ರೀ ಎ. ಮಂಜು:– ಮಾನ್ಯ ಸಭಾಪತಿಯವರೇ, ಸಂಚಾರಿ ಪಶು ಚಿಕಿತ್ಸಾಲಯಗಳು ಎಲ್ಲೆಲ್ಲಿವೆ, ಯಾವ ಯಾವ ಹೋಬಳಿಗಳಲ್ಲಿವೆ ಎಂಬ ಬಗ್ಗೆ ಮಾಹಿತಿಯನ್ನು ಅವರಿಗೆ ಕಳುಹಿಸಿಕೊಡುತ್ತೇನೆ.

ಚುಕ್ಕೆ ಪ್ರಶ್ನೆ ಸಂಖ್ಯೆ: 4267

(ಉತ್ತರದ ಪ್ರತಿ ಲಗತ್ತಿಸಿದೆ)

ಶ್ರೀ ಅರುಣ ಶಹಾಪೂರ:– ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಮಾನ್ಯ ಸಚಿವರು ವಿವರವಾದ ಉತ್ತರವನ್ನು ಒದಗಿಸಿರುವುದಕ್ಕೆ ಮಾನ್ಯ ಸಚಿವರಿಗೆ ಧನ್ಯವಾದಗಳನ್ನು ಹೇಳುತ್ತೇನೆ. ಟೋಲ್‌ಗಳ ಬಗ್ಗೆ ಯಾವುದೇ ದೂರು ಬಂದಿಲ್ಲ ಎನ್ನುವ ಅಂಶ ಆಶ್ಚರ್ಯಕರವಾದ ಸಂಗತಿಯೆಂದು ತಮಗೆ ಅನಿಸುವುದಿಲ್ಲವೇ ಎಂಬುದು ನನ್ನ ಮೊದಲನೇ ಪ್ರಶ್ನೆಯಾಗಿದೆ. ಇಷ್ಟೆಲ್ಲಾ ಒಡಂಬಡಿಕೆ ಮಾಡಿಕೊಂಡ ನಂತರ ಅಲ್ಲಿ ಶೌಚಾಲಯ, ಚಿಕಿತ್ಸಾ ಕೊಠಡಿ, ಆ್ಯಂಬುಲೆನ್ಸ್ ಕೊಡಬೇಕು. ನಾನು ಮತ್ತು ನೀವು ಕೂಡ ಅದೇ ಟೋಲ್‌ನಲ್ಲಿ ಓಡಾಡುತ್ತೇವೆ. ಇದೆಲ್ಲವನ್ನೂ ಪಾಲನೆ ಮಾಡುತ್ತಿದ್ದಾರೆ ಎನ್ನುವ ತೃಪ್ತಿ ನಿಮಗಿದೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಎರಡನೆಯ ಸಂಗತಿಯೆಂದರೆ,

ಸಭಾಪತಿಯವರು:– ಮಾನ್ಯ ಸಚಿವರು ಮೊದಲು ಇದಕ್ಕೆ ಉತ್ತರ ಹೇಳಲಿ ಅದರ ಬಗ್ಗೆ ಚರ್ಚೆಯಾಗಲಿ ನಂತರ ಉಳಿದ ಪ್ರಶ್ನೆಯನ್ನು ಕೇಳಿ.

ಡಾ: ಹೆಚ್.ಸಿ. ಮಹದೇವಪ್ಪ:– ಮಾನ್ಯ ಸಭಾಪತಿಯವರೇ, ಉತ್ತರದಲ್ಲಿ ಎಲ್ಲ ವಿವರವಾದ ಮಾಹಿತಿಗಳನ್ನು ಕೊಟ್ಟಿದ್ದೇನೆ.

ಸಭಾಪತಿಯವರು:– ಅಷ್ಟು ದೊಡ್ಡ ಮಾಹಿತಿಯನ್ನು ಕೊಟ್ಟಿರುವುದನ್ನು ನೋಡಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಡಾ: ಹೆಚ್.ಸಿ. ಮಹದೇವಪ್ಪ:– ಅಲ್ಲಿನ ಸಮಸ್ಯೆಯೆಂದರೆ, ಅಲ್ಲಿರುವ ಸೌಲಭ್ಯಗಳು ಸಮರ್ಪಕವಾಗಿ ಉಪಯೋಗವಾಗುತ್ತಿದೆಯೋ ಇಲ್ಲವೋ ಎಂಬುದಾಗಿದೆ. ಸಮರ್ಪಕವಾದ ಸೌಲಭ್ಯಗಳನ್ನು ಕೊಡಬೇಕೆಂದು ಅವರಿಗೆ Guidelines and Specifications ಎಲ್ಲಾ ಕೊಟ್ಟಿದ್ದೇವೆ. ಅದರ ಪ್ರಕಾರ ಮಾಡಬೇಕಾಗಿದೆ. ಬಹುತೇಕ ಮಾನ್ಯ ಸದಸ್ಯರಿಗೆ ಟೋಲ್‌ಗಳ ಬಗ್ಗೆ ಅಸಮಾಧಾನ ಇದೆ. ಯಾವ ಕಡೆಯೆಂದರೆ, ಅವರು ನಾನು ಜನಪ್ರತಿನಿಧಿಯೆಂಬ ಪ್ರಾವಿಷನ್ ಇದ್ದರೂ ಸರಿಯಾಗಿ ನೋಡಿಕೊಳ್ಳದಿರುವುದು, ವಿ.ಐ.ಪಿ. ಲೇನ್‌ಗಳಲ್ಲಿ ತಕ್ಷಣ ಬಿಡದೇ ಲೇಟ್ ಮಾಡುವುದು ಇದೆಲ್ಲಾ ಇವೆ. ಇವೆಲ್ಲಾ ನಮ್ಮ ಸದಸ್ಯರುಗಳಲ್ಲಿರುವ ಭಾವನೆಯಾಗಿದೆ. ಅವರನ್ನೆಲ್ಲಾ ಪ್ರತ್ಯೇಕವಾಗಿ ಕರೆದು ಸಭೆಯೊಂದನ್ನು ನಡೆಸಿದ್ದೇನೆ. ಆ ಸಭೆಯಲ್ಲಿ ಯಾರು Concessionaires ಇದ್ದಾರೆ ಅವರ ಬಗ್ಗೆ strictly instructions ನೀಡಿದ್ದೇನೆ. Guidelines and Specification of Agreement ಏನಿದೆ ಅದನ್ನು ಚಾಚೂ ತಪ್ಪದೆ ಮಾಡಬೇಕೆಂದು ಸೂಚನೆ ಕೊಟ್ಟಿದ್ದೇನೆ. ಇನ್ನೂ ಕೆಲವು ಕಡೆ ನ್ಯೂನತೆಗಳಿದ್ದು, ಅದನ್ನು ಸರಿಪಡಿಸಬೇಕಾಗಿದೆ, National Highways ಗಳೇನಿವೆ ಆ ಪೈಕಿ ಸುಮಾರು 35 ರಾಷ್ಟ್ರೀಯ ಹೆದ್ದಾರಿಗಳನ್ನು National Highways Authority of India (NHAI) ಅವರೇ ಹೆಚ್ಚಾಗಿ ನಡೆಸುತ್ತಾರೆ. ಅವರ ಜೊತೆ ಕೂಡ ಪ್ರತ್ಯೇಕವಾಗಿ ಮೀಟಿಂಗ್ ಮಾಡಿ ಅವರಿಗೆ ಎಚ್ಚರಿಕೆ ನೀಡಿದ್ದೇನೆ. ಉಭಯ ಸದನಗಳ (ವಿಧಾನಸಭೆ ಮತ್ತು ವಿಧಾನ ಪರಿಷತ್) ಗೌರವಾನ್ವಿತ ಸದಸ್ಯರು ಕಾಲಕಾಲಕ್ಕೆ ನಿಮ್ಮ ನಿರ್ವಹಣೆಯ ಬಗ್ಗೆ ಅಸಮಾಧಾನವನ್ನು ವ್ಯಕ್ತಪಡಿಸುತ್ತಿದ್ದು, Additional Chief Secretary (ACS) ಅವರ ಅಧ್ಯಕ್ಷತೆಯಲ್ಲಿ ಸಭೆಯನ್ನು ನಡೆಸಿದ್ದಾರೆ. ನಾನು ಸಹ ಅಧಿಕಾರಿಗಳೊಂದಿಗೆ ಸಭೆ ನಡೆಸಿದ್ದೇನೆ. ಹಿರಿಯ ಸದಸ್ಯರಾದ ಶ್ರೀ ಬಸವರಾಜ ಹೊರಟ್ಟಿಯವರು, ರೆಡ್ಡಿಯವರು, ಸೋಮಣ್ಣರವರು ಎಲ್ಲರೂ ಕೂಡ ಇದರ ಬಗ್ಗೆ ಆಸಕ್ತಿ ವಹಿಸಿ ಮಾತನಾಡಿದ್ದಾರೆ. ನಾನು 2–3 ಸಭೆಗಳನ್ನು ನಡೆಸಿ ಅವರಿಗೆ ನಿರ್ದಾಕ್ಷಿಣ್ಯವಾಗಿ ಸೂಚನೆಯನ್ನು ಕೊಟ್ಟಿದ್ದೇನೆ. ಪ್ರಾಮಾಣಿಕವಾಗಿ ನಿಮ್ಮ . . .

ಶ್ರೀ ಟಿ.ಎ. ಶರವಣ:– ಮಾನ್ಯ ಸಚಿವರೇ, ತಾವು ಸಭೆಯನ್ನು ನಡೆಸಿದ್ದರೂ ಅದರಿಂದ ಯಾವುದೇ output ಬಂದಿಲ್ಲ.

ಸಭಾಪತಿಯವರು:– ಮಾನ್ಯ ಶರವಣರವರೆ, ಆಯಿತು, ಮಧ್ಯೆ ಮಾತನಾಡಬೇಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಡಾ: ಹೆಚ್.ಸಿ. ಮಹದೇವಪ್ಪ:– ಮಾನ್ಯ ಸಭಾಪತಿಯವರೇ, ಅದನ್ನು ಆದಷ್ಟು ಮಟ್ಟಿಗೆ ಸುಧಾರಣೆ ಮಾಡುತ್ತೇನೆ.

ಸಭಾಪತಿಯವರು:– ಮಾನ್ಯ ಶರವಣರವರೆ, ನನ್ನ ಒಪ್ಪಿಗೆ ತೆಗೆದುಕೊಳ್ಳದೇ ಮಾತನಾಡಬೇಡಿ.

ಶ್ರೀ ಅರುಣ ಶಹಾಪೂರ:– ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆ ಅದಲ್ಲ. ಅವರು ಅರ್ಥ ಮಾಡಿಕೊಂಡಿರುವುದೇ ಬೇರೆಯಾಗಿದೆ.

ಸಭಾಪತಿಯವರು:– ಬೇರೆ ಪ್ರಶ್ನೆ ಕೇಳಿ. What is your question?

ಡಾ: ಹೆಚ್.ಸಿ. ಮಹದೇವಪ್ಪ:– ಮಾನ್ಯ ಸಭಾಪತಿಯವರೇ, ಆ್ಯಂಬುಲೆನ್ಸ್ ಇದೆಯೇ . .

ಶ್ರೀ ಅರುಣ ಶಹಾಪೂರ:– ಮಾನ್ಯ ಸಚಿವರೇ, ನಾನು ಪ್ರಶ್ನೆಯನ್ನು ಕೇಳುತ್ತೇನೆ. ತಾವು ಏನನ್ನೋ ಅರ್ಥ ಮಾಡಿಕೊಳ್ಳಬೇಡಿ.

ಸಭಾಪತಿಯವರು:– ಮಾನ್ಯ ಅರುಣ ಶಹಾಪೂರರವರೆ, ಸುತ್ತಿ ಬಳಸಿ ಮಾತನಾಡಿದರೆ ಅವರು ತಪ್ಪು ತಿಳಿದುಕೊಳ್ಳುತ್ತಾರೆ. ಹೇಳುವುದನ್ನು ನೇರವಾಗಿ ಹೇಳಿ.

ಶ್ರೀ ಅರುಣ ಶಹಾಪೂರ:– ಮಾನ್ಯ ಸಭಾಪತಿಯವರೇ, ನಾನು ನೇರವಾಗಿಯೇ ಹೇಳುತ್ತಿದ್ದೇನೆ. ರಾಜ್ಯದಿಂದಲೂ ಕೆಲವೊಂದು ರಸ್ತೆಗಳನ್ನು ನಿರ್ಮಾಣ ಮಾಡಿ ಟೋಲ್ ಸಂಗ್ರಹ ಮಾಡಲು ಕೊಟ್ಟಿದ್ದೀರಿ. ಕೆಲವೊಂದು Public-Private Partnership (PPP) ಮಾದರಿಯಲ್ಲಿ ಟೋಲ್ ಸಂಗ್ರಹ ಮಾಡಲು ಕೊಟ್ಟಿದ್ದೀರಿ. ಕೇಂದ್ರ ಸರ್ಕಾರದ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಕೂಡ ಟೋಲ್ ಸಂಗ್ರಹ ಮಾಡಲು ಅವಕಾಶ ಕೊಟ್ಟಿದ್ದೀರಿ. ಇಡೀ ರಾಜ್ಯದ ಒಟ್ಟು ಟೋಲ್ ಸಂಗ್ರಹದ ಮೊತ್ತವನ್ನು ನೋಡಿದರೆ, ನಮ್ಮ ರಾಜ್ಯದ ಜನತೆ ಟೋಲ್ ರೂಪದಲ್ಲಿ ಕೊಡುತ್ತಿರುವ ಹಣವೆಷ್ಟು ಎಂದರೆ, ಒಂದು ವರ್ಷಕ್ಕೆ 9.25 ಕಿ.ಮೀ. ಗೆ ಸುಮಾರು 113 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದಾರೆ. 19.5 ಕಿ.ಮೀ. ಗೆ ಸುಮಾರು 43 ಕೋಟಿ ರೂಪಾಯಿಗಳು, ಸುಮಾರು 71.12 ಕಿ.ಮೀ.ಗೆ 39 ಕೋಟಿ ರೂಪಾಯಿಗಳು ಹೀಗೆ ಸಾವಿರಾರು ಕೋಟಿ ರೂಪಾಯಿಗಳು ಟೋಲ್ ರೂಪದಲ್ಲಿ ಹಣ ಸಂಗ್ರಹವಾಗುತ್ತಿದೆ. ಆ ರಸ್ತೆಯನ್ನು ಉಪಯೋಗಿಸುವ ಗ್ರಾಹಕರಿಗೆ ಕೊಡಬೇಕಾದಂತಹ ಸೌಲಭ್ಯಗಳನ್ನು ಇವರು ಕೊಡುತ್ತಿಲ್ಲ. ಇವರು ನಮಗೆ ವಿನಾಯಿತಿ ಕೊಡುವರೋ ಇಲ್ಲವೋ, ನಮ್ಮನ್ನು ನಿಲ್ಲಿಸುವರೋ ಇಲ್ಲವೋ ಅದು ನಮ್ಮ ಪ್ರಶ್ನೆಯಲ್ಲ. ಇವರು ಎಲ್ಲಿಯೂ ಈ ನಿಯಮಗಳ ಮತ್ತು ಒಪ್ಪಂದಗಳ ಪಾಲನೆಯನ್ನು ಮಾಡುತ್ತಿಲ್ಲ. ಆದ್ದರಿಂದ ಸದನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಮಿತಿಯನ್ನು ರಚನೆ ಮಾಡಬೇಕೆಂದು ಈ ಮೂಲಕ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಒಪ್ಪಂದಗಳು ಮತ್ತು ಅವರು ಒದಗಿಸಿರುವ ವ್ಯವಸ್ಥೆಗಳು ಇದರ ಬಗ್ಗೆ ಅಲ್ಲಿ ಪರಿಶೀಲನೆ ಮಾಡೋಣ. ತಾವು ಮುಕ್ತವಾಗಿದ್ದೀರಿ ಮತ್ತು ಸಚಿವರಾಗಿ ಒಳ್ಳೆಯದನ್ನು ಬಯಸುವವರಾಗಿದ್ದೀರಿ. ಸಾವಿರಾರು ಕೋಟಿ ರೂಪಾಯಿಗಳನ್ನು ರಾಜ್ಯದ ಜನತೆ ಟೋಲ್ ರೂಪದಲ್ಲಿ ಕೊಡುತ್ತಿದ್ದಾರೆ, ಅವರಿಗೆ ಕೊಡಬೇಕಾಗಿರುವ ಸೌಲಭ್ಯಗಳನ್ನು ಕೊಡಿ. ದಯವಿಟ್ಟು ನೀವು ಸದನ ಸಮಿತಿಯೊಂದನ್ನು ರಚನೆ ಮಾಡಿ, ಒಪ್ಪಂದಗಳ ಉಲ್ಲಂಘನೆ ಬಗ್ಗೆ ಚರ್ಚೆ ಮಾಡುವುದಕ್ಕೆ ಸಿದ್ಧರಾಗಿರುವಿರಾ ಎನ್ನುವ ಪ್ರಶ್ನೆಯನ್ನು ನೇರವಾಗಿ ಕೇಳಬಯಸುತ್ತೇನೆ.

ಡಾ: ಹೆಚ್.ಸಿ. ಮಹದೇವಪ್ಪ:– ಮಾನ್ಯ ಸಭಾಪತಿಯವರೇ, ಅವರು Specification, Guidelines ನಲ್ಲಿ strict ಆಗಿ ಮಾಡಬೇಕು. Build, Operate, Transfer (BOT), PPP and Hybridality, ಆ ರೀತಿಯಲ್ಲಿ building process ನಲ್ಲಿ ಅವರೆಲ್ಲಾ involve ಆಗಬೇಕು. ಅದಕ್ಕೆ 1997, 2008 ಮತ್ತು 2010 ರ National Toll Policy and Guidelines ಕೆಳಗೆ ಅವರು ಕೆಲಸ ಮಾಡುತ್ತಾರೆ. ಅಲ್ಲೆಲ್ಲಾ ಉಲ್ಲಂಘನೆಯಾಗುವುದಕ್ಕೆ ಸಾಧ್ಯವಿಲ್ಲ. ಉಲ್ಲಂಘನೆಯೆಂದರೆ, ಕೊಡಬೇಕಾಗಿರುವಂತಹ ಸವಲತ್ತುಗಳಲ್ಲಿ ನ್ಯೂನತೆ ಇದೆಯೆಂಬುದನ್ನು ನನ್ನ ಗಮನಕ್ಕೆ ತಂದಿದ್ದಾರೆ, ಮತ್ತೊಂದು ಸಭೆಯನ್ನು ಕರೆದು ಅವರ ಜೊತೆ ಮಾತನಾಡುತ್ತೇನೆ. ಆದರೂ ಅವರು ಮಾಡಲಿಲ್ಲವೆಂದರೆ, ಅವರ ಸಲಹೆಯನ್ನು ಗಮನಿಸಿಕೊಂಡು, we will take action.

(ಗೊಂದಲ)

ಸಭಾಪತಿಯವರು:– ಎಲ್ಲಾ ವಿಚಾರಗಳ ಬಗ್ಗೆ ಚರ್ಚೆ ಮಾಡುತ್ತಾರೆ. ಈಗಾಗಲೇ ಸಮಯ 12.00 ಗಂಟೆಯಾಯಿತು, ಕೇವಲ ನಾಲ್ಕು ಪ್ರಶ್ನೆಗಳಾಗಿದೆ.

ಡಾ: ಹೆಚ್.ಸಿ. ಮಹದೇವಪ್ಪ:– ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದ ಗೈಡ್‌ಲೈನ್ಸ್;

ಸಭಾಪತಿಯವರು:– ಸಾಕು, ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಸಚಿವರು ಸ್ಪಷ್ಟವಾಗಿ ಹೇಳಿದ್ದಾರೆ.

ಡಾ: ಹೆಚ್.ಸಿ. ಮಹದೇವಪ್ಪ:– Infrastructure building ವಿಚಾರದಲ್ಲಿ ನಾನು ಅವರನ್ನೆಲ್ಲಾ ಕರೆದು, ಈ ರೀತಿ National Toll Policy and Guidelines of 1997, 2008 ಮತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

2010 ಅದರ ಅನುಸಾರ ಮಾಡುವಾಗ, ಪದೇ ಪದೇ ಮಾಡುವಾಗ ನಮಗೆ investment ಬರುತ್ತದೆ ಹಾಗೂ infrastructure build ಮಾಡಬಹುದು. ಅವರು ಇರುವ ಗೈಡ್‌ಲೈನ್ಸ್ ಅನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಬೇಕು. ನಾನು ಈಗಾಗಲೇ ಎರಡು ಸಭೆಗಳನ್ನು ಮಾಡಿದ್ದೇನೆ, ಇನ್ನೂ ಒಂದು ಸಭೆಯನ್ನು ಈ ಗೈಡ್‌ಲೈನ್ಸ್ ಕೆಳಗೆ ಮಾಡುತ್ತೇನೆ. ಆಗಲೂ ಅವರು ಮಾಡಲಿಲ್ಲವೆಂದರೆ, ಅವರು ಕೊಟ್ಟಿರುವ ಸಲಹೆಗಳನ್ನು, we will examine.

ಶ್ರೀ ಟಿ.ಎ. ಶರವಣ:– ಮಾನ್ಯ ಸಭಾಪತಿಯವರೇ,

(ಗೊಂದಲ)

ಸಭಾಪತಿಯವರು:– ಧನ್ಯವಾದಗಳು, ಮುಂದಿನ ಪ್ರಶ್ನೆ . . ಬೇಡ

ಶ್ರೀ ಟಿ.ಎ. ಶರವಣ:– ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸಭೆಯನ್ನು ನಡೆಸಿದರೆ ಏನೂ ಪ್ರಯೋಜನವಾಗುವುದಿಲ್ಲ. ಅವರು ಸಭೆ ಮಾಡುತ್ತಾರೆ ಅಷ್ಟೆ. ಸಭೆ ನಡೆಸಿದ್ದರಿಂದ ಏನಾದರೂ ಅನುಷ್ಠಾನಕ್ಕೆ ಬಂದಿತೇ? ಸಭೆ ನಡೆಸಿದರೆ ಏನೂ ಪ್ರಯೋಜನವಿಲ್ಲ.

ಶ್ರೀ ಚೌಡರೆಡ್ಡಿ ತೂಪಲ್ಲಿ:– ಮಾನ್ಯ ಸಭಾಪತಿಯವರೇ, ಇದು ಕೆಳಮನೆ ಮೇಲ್ಮನೆಯಲ್ಲಿ ಅನೇಕ ಸದಸ್ಯರು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ನಾನು ಕೂಡ 2–3 ಬಾರಿ ಪ್ರಶ್ನೆ ಕೇಳಿದ್ದೇನೆ. ಪ್ರತಿ ಟೋಲ್ ನಿಂದ; . . . .

ಶ್ರೀ ಟಿ.ಎ. ಶರವಣ:– ಮಾನ್ಯ ಸಭಾಪತಿಯವರೇ, ಸಮಿತಿಯನ್ನು ರಚನೆ ಮಾಡಿ. ನೀವು ಪಾರದರ್ಶಕವಾಗಿದ್ದೀರಲ್ಲವೇ?

ಸಭಾಪತಿಯವರು:– ಬೇರೆ ಪ್ರಶ್ನೆಗಳು ಬೇಡವೇ?

ಶ್ರೀ ಟಿ.ಎ. ಶರವಣ:– ನೀವು ಮುಕ್ತವಾಗಿ ಚರ್ಚೆ ಮಾಡಲು ತಯಾರಾಗಿದ್ದೀರಲ್ಲವೇ?

ಸಭಾಪತಿಯವರು:– It will not go on record. ನಾಲ್ಕು ಜನರು ಒಟ್ಟಿಗೇ ಮಾತನಾಡುತ್ತಿದ್ದಾರೆ. ಆಗುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಚೌಡರೆಡ್ಡಿ ತೂಪಲ್ಲಿ:– ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇದರ ಬಗ್ಗೆ ದೂರುಗಳು ಬಂದಿಲ್ಲವೆಂದು ಹೇಳಿದರು. ಪ್ರತಿ ಟೋಲ್ ನಿಂದ ಗಲಾಟೆ ಮಾಡಿದಂತಹ ಸಂದರ್ಭದಲ್ಲಿ ದೂರುಗಳನ್ನು ಯಾರಿಗೆ ಕೊಡಬೇಕೆಂದು ಸಭೆಯಲ್ಲಿ ಕೇಳಿದಾಗ ಪ್ರಧಾನ ಕಾರ್ಯದರ್ಶಿಯವರಿಗೆ ಕೊಡಬೇಕೆಂದು ಹೇಳಿದರು. ಆದರೆ ಪ್ರಧಾನ ಕಾರ್ಯದರ್ಶಿಯವರಿಗೆ ನಾನು ಕರೆ ಮಾಡಿ 20 ಬಾರಿ ಕರೆಮಾಡಿದ್ದೇನೆ. ಪ್ರತಿ ಬಾರಿ ದೂರು ನೀಡಿದಾಗ ಅದರ ಬಗ್ಗೆ ಒಂದು ಸಭೆಯನ್ನೂ ಮಾಡಲಿಲ್ಲ, ನಿರ್ಧಾರವನ್ನೂ ಮಾಡಲಿಲ್ಲ. ಆದ್ದರಿಂದ ಇದಕ್ಕೆ ಒಂದು ಸದನ ಸಮಿತಿಯನ್ನು ಮಾಡಬೇಕೆಂದು ಮಾನ್ಯ ಸಚಿವರಿಗೆ ಒತ್ತಾಯ ಮಾಡುತ್ತಿದ್ದೇನೆ.

ಸಭಾಪತಿಯವರು:– ನನಗೆ ಅರ್ಥವಾಯಿತು. ಆಯಿತು ನೀವು ಪ್ರಶ್ನೆ ಕೇಳಿರುವುದಕ್ಕೆ ಸರ್ಕಾರ ಉತ್ತರ ಹೇಳಿದೆ.

(ಗೊಂದಲ)

ಸಭಾಪತಿಯವರು:– ಈಗ ಬೇರೆ ಪ್ರಶ್ನೆಗಳನ್ನು ಕೇಳುವುದು ಬೇಡವೇ? ಪ್ರಶ್ನೋತ್ತರ ವೇಳೆಯನ್ನು ಮುಗಿಸಿಬಿಡಲೇ?

ಶ್ರೀ ಅರುಣ ಶಹಾಪೂರ:– ಉತ್ತರ ಹೇಳಲಿ. ವ್ಯವಸ್ಥೆನೇ ಇಲ್ಲ. ಈ ರಾಜ್ಯದ ಜನರ ಶೋಷಣೆಯಾಗುತ್ತಿದೆ.

ಡಾ: ಹೆಚ್.ಸಿ. ಮಹದೇವಪ್ಪ:– ಮಾನ್ಯ ಸಭಾಪತಿಯವರೇ, infrastructure ಬೆಳೆಯುವುದಕ್ಕೆ ಆ ರೀತಿಯ Concessionaires ಬಿಡಬಾರದು. ಅವರು ಗೈಡ್‌ಲೈನ್ಸ್ ಕೆಳಗಡೆ ಕೆಲಸ ಮಾಡಬೇಕು. ಕೆಲವು ಪ್ರಾವಿಷನ್ಸ್ ಇದೆ, ಸುಮ್ಮನೆ ಒಂದು ಸಮಿತಿಯನ್ನು ರಚನೆ ಮಾಡಿ ಎಂದರೆ, it is not possible.

ಶ್ರೀ ಅರುಣ ಶಹಾಪೂರ:– ಮಾನ್ಯ ಸಭಾಪತಿಯವರೇ, ಟೋಲ್‌ಗಳಲ್ಲಿ ಈ ರಾಜ್ಯದ ಜನರ ಹಣವನ್ನು ಲೂಟಿ ಮಾಡುತ್ತಿದ್ದಾರೆ.

ಶ್ರೀ ಚೌಡರೆಡ್ಡಿ ತೂಪಲ್ಲಿ:– ಮಾನ್ಯ ಸಭಾಪತಿಯವರೇ, ಯಾರಿಗೆ ದೂರನ್ನು ಕೊಡಬೇಕೆಂದು ಕೇಳಿದಾಗ ಪ್ರಧಾನ ಕಾರ್ಯದರ್ಶಿಯವರಿಗೆ ದೂರನ್ನು ಕೊಡಬೇಕೆಂದು ಹೇಳಿದ್ದಿರಿ. ಪ್ರಧಾನ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಾರ್ಯದರ್ಶಿಯವರಿಗೆ ಕರೆ ಮಾಡಿ 20 ಬಾರಿ ದೂರನ್ನು ಕೊಟ್ಟಿದ್ದೇನೆ. ಆದರೆ ಏನೂ ಇತ್ಯರ್ಥವಾಗಲಿಲ್ಲ. ಆದ್ದರಿಂದ ಒಂದು ಸದನ ಸಮಿತಿಯನ್ನು ಮಾಡಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ.ಎ. ಶರವಣ:– ಮಾನ್ಯ ಮಂತ್ರಿಯವರು ಈಗ ಹೇಳಲೇಬೇಕು. ಸದನ ಸಮಿತಿಯನ್ನು ರಚನೆ ಮಾಡಲು ಒಪ್ಪಿಗೆ ಕೊಡಿ.

ಸಭಾಪತಿಯವರು:– ಆಯಿತು, ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಅರುಣ ಶಹಾಪೂರ:– ಮಾನ್ಯ ಸಭಾಪತಿಯವರೇ, ರಾಜ್ಯದ ಜನರ ಹಣ ಲೂಟಿಯಾಗುತ್ತಿದೆ.

(ಮುಂದು . . .

(1110)21–11–2017/12–20/ಕೆಹೆಚ್/ಕೆಎಸ್

ಶ್ರೀ ಹೆಚ್.ಸಿ.ಮಹದೇವಪ್ಪ:– ಮಾನ್ಯ ಸಭಾಪತಿಯವರೇ, National Toll Policy Guidelines ಪ್ರಕಾರ ಅಗ್ರಿಮೆಂಟ್ ಮಾಡಿಕೊಂಡಿದ್ದೇವೆ.

(ಗೊಂದಲ).

ಶ್ರೀ ಎಂ.ಆರ್. ಸೀತಾರಾಂ (ಸಭಾನಾಯಕರು):– ಮಾನ್ಯ ಸಭಾಪತಿಯವರೇ, . . .

ಶ್ರೀ ಅರುಣ ಶಹಾಪುರ:– ಮಾನ್ಯ ಸಭಾಪತಿಯವರೇ, ಅದು ಸರಿಯಾಗಿ ಪಾಲನೆಯಾಗುತ್ತಿಲ್ಲ.

(ಗೊಂದಲ)

ಶ್ರೀ ಎಂ.ಆರ್. ಸೀತಾರಾಂ (ಸಭಾನಾಯಕರು):– ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮಾತನಾಡುತ್ತಿದ್ದಾರೆ. ದಯವಿಟ್ಟು ಇದನ್ನು ಅರ್ಥಮಾಡಿಕೊಳ್ಳಬೇಕು.

ಸಭಾಪತಿಯವರು:– ಶ್ರೀ ಅರುಣ ಶಹಾಪುರ ರವರೇ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಬರೀ ಸದಸ್ಯರಿಗೆ ಮಾತ್ರವಲ್ಲ. ಟೋಲ್ ನಲ್ಲಿ ದುಡ್ಡನ್ನು ಕೊಟ್ಟು ಸಾರ್ವಜನಿಕರು ಅರ್ಧ ಗಂಟೆ ಮುಕ್ಕಾಲು ಗಂಟೆ ನಿಂತಿರುತ್ತಾರೆ. ಇದ್ದರಿಂದ ಸಾರ್ವಜನಿಕರಿಗೆ ಹೆಚ್ಚಾಗಿ ತೊಂದರೆಯಾಗುತ್ತಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಅರುಣ ಶಹಾಪುರ:– ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇದರ ಬಗ್ಗೆ ದಯವಿಟ್ಟು ಪರಿಶೀಲನೆ ಮಾಡಬೇಕು.

ಶ್ರೀ ಹೆಚ್.ಸಿ.ಮಹದೇವಪ್ಪ:– ಮಾನ್ಯ ಸಭಾಪತಿಯವರೇ, ಪರಿಶೀಲನೆ ಏತಕ್ಕಾಗಿ ಬೇಕು, ಯಾವುದರ ಬಗ್ಗೆ ಎಂದು ಸರಿಯಾಗಿ ಮಾನ್ಯ ಸದಸ್ಯರು ಹೇಳಬೇಕು.

ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):– ಮಾನ್ಯ ಸಚಿವರು ಇದರ ಬಗ್ಗೆ ಸರಿಯಾದ ಉತ್ತರವನ್ನು ಕೊಡಬೇಕು.

(ಗೊಂದಲ)

(ಮಾನ್ಯ ಸದಸ್ಯರಾದ ಶ್ರೀ ಅರುಣ ಶಹಾಪುರ ರವರು ಎದ್ದು ನಿಂತು ಮಾತನಾಡುತ್ತಾ ಸಾವಿರಾರು ಕೋಟಿ ರೂಪಾಯಿಗಳು ಲೂಟಿಯಾಗುತ್ತಿದೆ. ಇದನ್ನು ಯಾರಿಗೆ ಹೇಳಬೇಕೆಂದು ಹೇಳುತ್ತಾ ಸದನದ ಬಾವಿಗೆ ಬಂದು ಧರಣಿಯಲ್ಲಿ ನಿರತರಾದರು)

ಶ್ರೀ ಹೆಚ್.ಸಿ.ಮಹದೇವಪ್ಪ:– ಮಾನ್ಯ ಸಭಾಪತಿಯವರೇ, all the members kindly go to your respective seats and speak. Why all of you are coming to the well and speaking here? The Toll and Road formation is strictly governed under the guidelines of National Toll Policy.

(ಈ ಹಂತದಲ್ಲಿ ಮಾನ್ಯ ಸದಸ್ಯರುಗಳಾದ ಶ್ರೀ ಅರುಣ ಶಹಾಪುರ, ಶ್ರೀ ಟಿ.ಎ.ಶರವಣ, ಶ್ರೀ ಸಯದ್ ಮುಧೀರ್ ಆಗಾ, ಶ್ರೀ ಸೋಮಣ್ಣ ಮ. ಬೇವಿನಮರದ, ಶ್ರೀ ರಘುನಾಥ ರಾವ್ ಮಲ್ಕಾಪೂರೆ, ಶ್ರೀ ಭಾನುಪ್ರಕಾಶ, ಶ್ರೀ ಕೆ.ವಿ.ನಾರಾಯಣಸ್ವಾಮಿ, ಶ್ರೀ ಅಮರನಾಥ ಪಾಟೀಲ್, ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ, ಶ್ರೀ ನಿರಾಣಿ ಹಣಮಂತ್ ರುದ್ರಪ್ಪ, ಶ್ರೀ ಕೆ.ಟಿ.ಶ್ರೀಕಂಠೇಗೌಡ, ಕ್ಯಾಪ್ಟನ್ ಗಣೇಶ್ ಕಾರ್ಣಿಕ್, ಶ್ರೀ ರಮೇಶ್ ಬಾಬು, ಶ್ರೀ ಕೆ.ಬಿ. ಶಾಣಪ್ಪ, ಶ್ರೀ ತಾರಾ ಅನೂರಾಧ, ಶ್ರೀ ಪ್ರಾಣೇಶ್ ಎಂ.ಕೆ. ಶ್ರೀ ಕಾಂತರಾಜು (ಬಿಎಂಎಲ್), ಶ್ರೀ ಎನ್.ಅಪ್ಪಾಜಿಗೌಡ, ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್)., ಈ ಎಲ್ಲ ಸದಸ್ಯರುಗಳು ಸದನದ ಬಾವಿಗೆ ಬಂದು ಧರಣಿ ನಡೆಸಿದರು)

ಶ್ರೀ ಎಂ.ಆರ್. ಸೀತಾರಾಂ (ಸಭಾನಾಯಕರು):– ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಅರುಣ ಶಹಾಪುರ ರವರು ಸದನದ ಬಾವಿಯಲ್ಲಿ ನಿಂತು ಮಾತನಾಡಬಾರದು. ಅವರ ಸ್ಥಾನಕ್ಕೆ ತೆರಳಿ ಮಾತನಾಡಬೇಕು. ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಹೇಳಿ, ಯಾವ ರೀತಿಯಾಗಿ ಮಾತನಾಡಬೇಕೆಂದು ಹೇಳಬೇಕು.

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಹೆಚ್.ಸಿ.ಮಹದೇವಪ್ಪ:– ಮಾನ್ಯ ಸಭಾಪತಿಯವರೇ, National Toll Policyಯನ್ನು ಗಣನೆಗೆ ತೆಗೆದುಕೊಳ್ಳುತ್ತಾರೆ. ಇಲ್ಲಿ ಲೂಟಿ ಮಾಡುವ ಪ್ರಶ್ನೆ ಬರುವುದಿಲ್ಲ. ಅಗ್ರಿಮೆಂಟ್‌ನಲ್ಲಿ ನಿಯಮ ಮತ್ತು ಷರತ್ತುಗಳು ಏನಿದೆ. ಅದರ ಪ್ರಕಾರ ಮಾಡುತ್ತಾರೆ. ಏನಾದರೂ ಮಾರ್ಗಸೂಚಿಗಳನ್ನು ಮೀರಿ, ಬೇರೆ ಅವ್ಯವಹಾರಗಳು ದುರುಪಯೋಗವಾದರೆ ಅದು ಬೇರೆ ಮಾತು. It is governed under the guidelines of National Toll Policy, 1997 ಎಂದು ಹೇಳಿದ ಮೇಲೆ . . .

(ಗೊಂದಲ)

ಶ್ರೀ ಕೋಟಾ ಶ್ರೀನಿವಾಸ ಪೂಜಾರಿ:– ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಟೋಲ್ ನೀತಿಯನ್ನು ಪಾಲಿಸಿ ಎಂದು ಹೇಳುತ್ತಾರೆ...

ಶ್ರೀ ಹೆಚ್.ಸಿ.ಮಹದೇವಪ್ಪ:– ಮಾನ್ಯ ಸದಸ್ಯರೇ, ಸುಮ್ಮನೆ ಇದಕ್ಕಾಗಿ ಹೌಸ್ ಕಮಿಟಿ ಮಾಡಿ ಎಂದು ಹೇಳಿದರೆ ಹೇಗೆ?

ಶ್ರೀ ಕೋಟಾ ಶ್ರೀನಿವಾಸ ಪೂಜಾರಿ:– ಮಾನ್ಯ ಸಭಾಪತಿಯವರೇ, . . .

ಶ್ರೀ ಹೆಚ್.ಸಿ.ಮಹದೇವಪ್ಪ:– ಮಾನ್ಯ ಸದಸ್ಯರೇ, tell me, what are the parameters? ನನಗೇನು reservation ಇಲ್ಲ. Please listen to me. Please go to your seats and reply me.

(ಗೊಂದಲ)

ಸಭಾಪತಿಯವರು:– ಮಾನ್ಯ ಸಚಿವರು ದಯಮಾಡಿ ಕುಳಿತುಕೊಳ್ಳಬೇಕು. ಮಾನ್ಯ ಸದಸ್ಯರುಗಳೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ, ಸದನವನ್ನು ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕು.

(ಗೊಂದಲ)

ಸಭಾಪತಿಯವರು:– ಮಾನ್ಯ ಸಚಿವರೇ ತಾಳ್ಮೆಯನ್ನು ಏಕೆ ಕಳೆದುಕೊಳ್ಳುತ್ತೀರಿ? ಮಧ್ಯದಲ್ಲಿ ಮಾತನಾಡಬೇಡಿ. ಸದನವನ್ನು ನಡೆಸಬೇಕು. ಪ್ರಶ್ನೋತ್ತರ ಅವಧಿ ಮುಂದಕ್ಕೆ ಹೋಗಬೇಕು. ಈ ಪ್ರಶ್ನೆಗೆ ಸಾಕು. ಪ್ರಶ್ನೋತ್ತರ ಅವಧಿಯನ್ನು ಮುಕ್ತಾಯಗೊಳಿಸೋಣ. ಬೇರೆ ವಿಷಯದ ಬಗ್ಗೆ ಚರ್ಚೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಬೇಕೆಂಬ ಸದನದ ಅಭಿಪ್ರಾಯವಿದ್ದರೆ ನನ್ನದೇನು ಭಿನ್ನಭಿಪ್ರಾಯವೇನು ಇಲ್ಲ. ಆದರೆ, ಈಗ ಧರಣಿಯಲ್ಲಿ ನಿರತರಾಗಿರುವಂತಹ ಮಾನ್ಯ ಸದಸ್ಯರೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ, ಸಭೆಯನ್ನು ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕು.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಭಾನುಪ್ರಕಾಶ ರವರು ಸದನದ ಬಾವಿಯಿಂದ ತಮ್ಮ ಸ್ಥಾನಕ್ಕೆ ತೆರಳಿ ಮಾತನಾಡುವುದಕ್ಕೆ ಪ್ರಾರಂಭ ಮಾಡಿದರು.)

ಶ್ರೀ ಭಾನುಪ್ರಕಾಶ (ವಿಧಾನಸಭಾ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಟೋಲ್ ಸಭೆಯು 2 ಬಾರಿ ನಡೆದಿರುವುದು ನಿಜ. ಈ ಸಭೆಗೆ ನಾವು ಸಹ ಹಾಜರಾಗಿದ್ದೇವೆ. ಏನು ಪರಿಣಾಮವಿಲ್ಲವೆಂದು ಹೇಳಿ, ಒಬ್ಬ ಜವಾಬ್ದಾರಿಯುತವಾದ ಸದಸ್ಯರು ಆಖಿತವಾಗಿ ಪ್ರಶ್ನೆಯನ್ನು ಕೇಳಿರುವಂತಹ ಸಂದರ್ಭದಲ್ಲಿ ಸದನ ಸಮಿತಿಯನ್ನು ಮಾಡುವುದಕ್ಕೆ ಇನ್ನು ಬರೀ ಕಾನೂನು ಎಂದು ಹೇಳಿದರೆ ಹೇಗೆ? ಪ್ರತಿ ದಿನವು ಸಾವಿರಾರು ಕೋಟಿ ರೂಪಾಯಿಗಳ ಅನ್ಯಾಯ ನಡೆಯುತ್ತಿದ್ದು, ಶೋಷಣೆ ಕೂಡ ನಡೆಯುತ್ತಿದೆ. ನಮಗೆ ವಿನಂತಿಯನ್ನು ಮಾಡಿದರೆ, ಸರ್ಕಾರವು ಇದರ ಬಗ್ಗೆ ಏಕೆ ಮೊಂಡಾಟ ಆಡುತ್ತಿದೆ.

(ಗೊಂದಲ)

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):– ಮಾನ್ಯ ಸಚಿವರೇ, ತಮಗೊಂದು ಸಲಹೆಯನ್ನು ಕೊಡುತ್ತೇನೆ.

ಶ್ರೀ ಎಸ್.ಆರ್.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಟೋಲ್ ವ್ಯವಸ್ಥೆಯಲ್ಲಿ ಮೊದಲು ಗುತ್ತಿಗೆದಾರರು ಹಣವನ್ನು ಹೂಡಿಕೆ ಮಾಡಿ ರಸ್ತೆಯನ್ನು ನಿರ್ಮಾಣ ಮಾಡಿರುತ್ತಾರೆ. ತಿಂಗಳಿಗೆ ಹಣವನ್ನು recovery ಮಾಡಿಕೊಂಡು ಹೋಗುತ್ತಾರೆ. ಟೋಲ್ ವ್ಯವಸ್ಥೆಯಲ್ಲಿ ಹತ್ತು ವರ್ಷನೋ, ಇಪ್ಪತ್ತು ವರ್ಷನೋ ಅವಕಾಶ ಮಾಡಿಕೊಟ್ಟಿರುತ್ತಾರೆ. The Contractors invest their money and construct the roads and later money will be recovered in the form of toll fees. There is no question of scandal and forming a House Committee. The demand made by the Opposition members is quite unreasonable.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:– ಮಾನ್ಯ ಸಭಾಪತಿಯವರೇ, . . .

ಶ್ರೀ ಎಂ.ಆರ್. ಸೀತಾರಾಂ (ಸಭಾನಾಯಕರು):– ಮಾನ್ಯ ಸಭಾಪತಿಯವರೇ, ಅವರು ಕೇಳುತ್ತಿರುವುದು ಅಸಂಬದ್ಧ. ಇದು ಯಾವುದೇ ಕಾರಣಕ್ಕೂ ಒಪ್ಪಿಕೊಳ್ಳುವುದಕ್ಕೂ ಸಾಧ್ಯವಿಲ್ಲ. ಇದು ಒಡಂಬಡಿಕೆಗೆ ಬರುವುದಿಲ್ಲ. ದಯಮಾಡಿ ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕು. ತಮ್ಮೆಲ್ಲರಲ್ಲಿ ಒಂದು ಮನವಿಯನ್ನು ಮಾಡಿಕೊಳ್ಳುವುದೇನೆಂದರೆ, ಈ ಒಂದು ಸಭೆಯು ಸುಸೂತ್ರವಾಗಿ ನಡೆಸುವುದಕ್ಕೆ ಸಹಾಯ ಮಾಡಬೇಕು. ಮಾನ್ಯ ಸಚಿವರು ಈಗಾಗಲೇ ಇದರ ಬಗ್ಗೆ ಹೇಳಿದ್ದಾರೆ.

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:– ಮಾನ್ಯ ಸಚಿವರೇ ತಮಗೊಂದು ಸಲಹೆಯನ್ನು ಕೊಡುವುದೇನೆಂದರೆ, ಸದನ ಸಮಿತಿಯನ್ನು ಮಾಡುವುದಕ್ಕೆ ಬರುವುದಿಲ್ಲ. ಕೇಂದ್ರ ಸರ್ಕಾರದವರು ಇದನ್ನು ಮಾಡಬಹುದು. ಈ ಹಿನ್ನೆಲೆಯಲ್ಲಿ ಇನ್ನೊಂದು ಸಭೆಯನ್ನು ಮಾಡಬೇಕು. ಇದಕ್ಕೂ ಮೊದಲು ತನಿಖೆಯನ್ನು ಮಾಡಿ, ನಂತರ ದಿನಾಂಕವನ್ನು ನಿಗದಿಪಡಿಸಿ ಎಲ್ಲ ಸದಸ್ಯರನ್ನು ಸಭೆಗೆ ಕರೆಯಿಸಿ, ಆಗ ಇದರ ಬಗ್ಗೆ ಚರ್ಚೆ ಮಾಡೋಣ. ಈಗ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಹೆಚ್.ಸಿ.ಮಹದೇವಪ್ಪ:– ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾದ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ರವರು ಹೇಳಿದ ಹಾಗೆ ಉತ್ತರದಲ್ಲಿ ಇದರ ಬಗ್ಗೆ ಹೇಳಿದ್ದೇನೆ. ಆದರೆ ಮಾನ್ಯ ಸದಸ್ಯರು ಇದನ್ನು ಕೇಳಿಸಿಕೊಳ್ಳಲಿಲ್ಲ.

ಶ್ರೀ ಎಸ್.ಆರ್.ಪಾಟೀಲ್:– ಮಾನ್ಯ ಸದಸ್ಯರಾದ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಯವರೇ, ಮಾನ್ಯ ಸಚಿವರು ತಾವೇನು ಹೇಳಿದ್ದೀರಿ. ಅವರು ಅದನ್ನೇ ಪ್ರಸ್ತಾಪ ಮಾಡಿರುವುದು. ಆಗಲೇ ಹೇಳಿದ್ದು. ನಿಮ್ಮ ಸದಸ್ಯರೆಲ್ಲರೂ ಬಾವಿಯಿಂದ ಹೊರಗೆ ಬರುವುದಕ್ಕೆ ತಿಳಿಸಬೇಕು. ಪ್ರಶ್ನೋತ್ತರ ಅವಧಿಯಲ್ಲಿ ಬಾವಿಯಲ್ಲಿ ಇಳಿಯುತ್ತಾರೆಂದರೆ, ಒಂದು ಹೊಸ ಸಂಪ್ರದಾಯವನ್ನು ಹುಟ್ಟು ಹಾಕಿದ್ದೀರಿ.

(ಗೊಂದಲ)

ಶ್ರೀ ವಿ.ಸೋಮಣ್ಣ:– ಮಾನ್ಯ ಸಭಾಪತಿಯವರೇ, . .

ಸಭಾಪತಿಯವರು:– ದಯಮಾಡಿ ಮಾನ್ಯ ಸದಸ್ಯರೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ, ಸದನವನ್ನು ನಡೆಸುವುದಕ್ಕೆ ಅನುವು ಮಾಡಿಕೊಡಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಶರಣಪ್ಪ ಮಟ್ಟೂರ:– ಮಾನ್ಯ ಸಭಾಪತಿಯವರೇ, ದಯಮಾಡಿ ನನಗೆ ಒಂದು ಅವಕಾಶವನ್ನು ಕೊಡಬೇಕು.

ಶ್ರೀ ವಿ.ಸೋಮಣ್ಣ:– ಮಾನ್ಯ ಸಚಿವರೇ ಒಂದು ನಿಮಿಷ. ಮಾನ್ಯ ಸದಸ್ಯರಾದ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಯವರು ಈಗಾಗಲೇ ಏನು ಹೇಳಿದ್ದಾರೆ, ಸದನ ಸಮಿತಿ ಎಂದು ಹೇಳುವುದನ್ನು ಬಿಟ್ಟು, ಬಾಕಿ ಇರುವ ಸವಲತ್ತುಗಳನ್ನು ಕೊಡುವಂತಹದ್ದು, ಅಲ್ಲಿರುವಂತಹ ಕೆಲವು ಅವಶ್ಯಕತೆಗಳನ್ನು ಪೂರೈಸುವಂತಹದ್ದು, ರಾಜ್ಯ ಸರ್ಕಾರದ ಹಿಡಿತವಿಲ್ಲವೆಂದರೆ ಅವರು ಏನು ಮಾಡುವುದಕ್ಕೆ ಆಗುವುದಿಲ್ಲ. ಅಲ್ಲಿ ಏನಾದರೂ ಸಣ್ಣ–ಪುಟ್ಟ ಘಟನೆಗಳೇನಾದರೂ ಆದರೆ ಕರ್ನಾಟಕದ ಪೋಲೀಸ್ ನವರು ತಕ್ಷಣ ಸ್ಪಂದಿಸುತ್ತಾರೆ. ಅದಕ್ಕೋಸ್ಕರ ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ, ಈ ಸದನ ಮುಗಿಯುವುದರೊಳಗೆ ಒಂದು ಸಭೆಯನ್ನು ಮಾಡಿ, ಅದಕ್ಕೆ ಸಂಬಂಧಪಟ್ಟ 4 ಜನ ಸದಸ್ಯರನ್ನು ಕರೆದು ಚರ್ಚೆ ಮಾಡಿ, ಇದರ ಬಗ್ಗೆ ಸ್ವಲ್ಪ ಬಿಗಿ ವ್ಯವಸ್ಥೆ ಮಾಡಬೇಕು. ಮಾನ್ಯ ಸಚಿವರು ಮೈಸೂರು ಜಿಲ್ಲೆಯಲ್ಲಿ ಮಾತ್ರ ಬಿಗಿಯನ್ನು ಮಾಡುತ್ತಾರೆ. ರಾಜ್ಯಕ್ಕೆ ಬಿಗಿ ಮಾಡುವುದಕ್ಕೆ ಆಗುವುದಿಲ್ಲವೇ? ಮೊದಲು ಬಿಗಿ ವ್ಯವಸ್ಥೆಯನ್ನು ಮಾನ್ಯ ಸಚಿವರು ಮಾಡಬೇಕು.

ಶ್ರೀ ಹೆಚ್.ಸಿ.ಮಹದೇವಪ್ಪ:– ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾದಂತಹ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಮತ್ತು ಶ್ರೀ ವಿ.ಸೋಮಣ್ಣ ರವರು ಏನು ಸಲಹೆಯನ್ನು ನೀಡಿದ್ದಾರೆ. ನಾನು ಉತ್ತರವನ್ನು ನೀಡುವಾಗ ಇದರ ಬಗ್ಗೆ ಹೇಳಿದ್ದೇನೆ. ಈ ಸದನ ಮುಗಿಯುವುದರೊಳಗೆ ನಾನು ಸಭೆಯನ್ನು ಕರೆಯುವುದಕ್ಕೆ ಆಗುವುದಿಲ್ಲ. ಏಕೆಂದರೆ, 24ನೇ, 25ನೇ, 26ನೇ ದಿನಾಂಕಗಳಂದು ಮೈಸೂರಿನಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಸಭೆ ಇದ್ದು, ಆ ಸಭೆಗೆ ನಾನು ಅಧ್ಯಕ್ಷನಾಗಿದ್ದು, ಎರಡು ದಿವಸಗಳ ಕಾಲ್ಲ ತಮ್ಮ ಅನುಮತಿ ಮತ್ತು ಮಾನ್ಯ ಸದಸ್ಯರುಗಳ ಅನುಮತಿಯನ್ನು ಕೇಳಿಕೊಂಡು ಗೈರು ಹಾಜರಿಯಾಗುತ್ತಿದ್ದೇನೆ. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಸಭೆಯಾದ ಮೇಲೆ ಎಲ್ಲ ಪಕ್ಷದ ನಾಯಕರನ್ನು ಕರೆದು ಇದನ್ನು streamline ಮಾಡೋಣ. ಸದನ ಸಮಿತಿಗೆ ಒಪ್ಪಿಸುವಂತಹ ವಿಷಯವಲ್ಲ. ಒಪ್ಪಿಸುವಂತಹ ವಿಷಯವಾಗಿದಿದ್ದರೆ, within no second, I would have agreed. ಆದರೆ streamline ಮಾಡಬೇಕು. ಅದಕ್ಕೆ ಮಾನ್ಯ ಸದಸ್ಯರ ಅಭಿಪ್ರಾಯಗಳನ್ನು ಗೌರವಿಸಿ, ಎಲ್ಲ ಪಕ್ಷದ ನಾಯಕರನ್ನು ಸಭೆಗೆ ಕರೆದು, ಅವರುಗಳ ಸಲಹೆಗಳನ್ನು ತೆಗೆದುಕೊಂಡು ಮುಖಾಮುಖಿ ಕುಳಿತುಕೊಂಡು ಚರ್ಚೆ ಮಾಡೋಣ. I appeal all my friends to take their respective seats.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿನಿರತರಾಗಿದ್ದ ಎಲ್ಲ ಪಕ್ಷದ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು)

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:– ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ನಮ್ಮ ಕಡೆಯಿಂದಲೂ ತಪ್ಪುಗಳು ಇವೆ. ಇದಕ್ಕೆ ಸಂಬಂಧವಿಲ್ಲದೆ ಇದ್ದರೂ, ಎಂ.ಎಲ್.ಸಿ., ಬೋರ್ಡ್ ಅನ್ನು ಯಾರು ಬೇಕಾದರೂ ಹಾಕಿಕೊಳ್ಳಬಹುದೇ?

ಸಭಾಪತಿಯವರು:– ಮಾನ್ಯ ಸದಸ್ಯರೇ ಇದರ ಬಗ್ಗೆ ಚರ್ಚೆ ಬೇಡ. ಅದೇ ಒಂದು ಚರ್ಚೆಯಾಗಿ ಬಿಡುತ್ತದೆ.

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:– ಮಾನ್ಯ ಸಭಾಪತಿಯವರೇ, ಇದರ ಬಗ್ಗೆ strict ಮಾಡಿ ಎಂದು ಹೇಳುತ್ತೇನೆ.

ಪ್ರಶ್ನೆ ಸಂಖ್ಯೆ: 4541
(ಉತ್ತರವನ್ನು ಲಗತ್ತಿಸಲಾಗಿದೆ)

ಶ್ರೀ ಎಂ.ಎ.ಗೋಪಾಲಸ್ವಾಮಿ:– ಮಾನ್ಯ ಸಭಾಪತಿಯವರೇ, ಉತ್ತರವನ್ನು ಮಾನ್ಯ ಸಚಿವರು ಒದಗಿಸಿದ್ದಾರೆ. ಹಾಸನ ಜಿಲ್ಲೆಯ ಕೆಲವು ತಾಲ್ಲೂಕುಗಳಲ್ಲಿ ತೆಂಗಿನ ನುಸಿ ಪೀಡೆ ರೋಗವು ಉಲ್ಬಣಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಮಾನ್ಯ ಸಚಿವರಲ್ಲಿ ಪ್ರಶ್ನೆಯನ್ನು ಕೇಳಿದ್ದೇನೆ. ಅದಕ್ಕೆ ಮಾನ್ಯ ಸಚಿವರು ಗಮನಕ್ಕೆ ಬಂದಿದೆ ಎಂದು ಲಿಖಿತ ಉತ್ತರವನ್ನು ಕೊಟ್ಟಿದ್ದಾರೆ.

ಹಾಗೆಯೇ, 2016–17 ನೇ ಸಾಲಿನಲ್ಲಿ ನುಸಿ ಪೀಡೆಯಿಂದ ನಷ್ಟವಾಗಿರುವ ಪ್ರದೇಶವು 94.96 ಹೆಕ್ಟೇರ್‌ಗಳಿಗೆ 14.24 ಲಕ್ಷ ರೂಪಾಯಿಗಳು ಮತ್ತು 2017–18ನೇ ಸಾಲಿನಲ್ಲಿ ನುಸಿ ಪೀಡೆಯಿಂದ ನಷ್ಟವಾಗಿರುವ ಪ್ರದೇಶವು 62.05 ಹೆಕ್ಟೇರ್‌ಗಳಿಗೆ 9.30 ಲಕ್ಷ ರೂಪಾಯಿಗಳ ನಷ್ಟವಾಗಿದೆ ಎಂದು ನನ್ನ ಎರಡನೆಯ ಪ್ರಶ್ನೆಗೆ ಮಾನ್ಯ ಸಚಿವರು ಲಿಖಿತ ಉತ್ತರವನ್ನು ಕೊಟ್ಟಿದ್ದಾರೆ.

ಹಾಸನ ಜಿಲ್ಲೆಯಲ್ಲಿ 2016–17 ಮತ್ತು 2017–18ನೇ ಸಾಲಿನಲ್ಲಿ ತೆಂಗಿನ ನುಸಿ ಪೀಡೆ ರೋಗವನ್ನು ನಿವಾರಣೆ ಮಾಡಲು ತೋಟಗಾರಿಕೆ ಇಲಾಖೆಯಿಂದ ಕೈಗೊಂಡಿರುವ ಕ್ರಮಗಳೇನು? ವಿವರ ನೀಡುವುದು ಎಂದು ನನ್ನ ಮೂರನೆಯ ಪ್ರಶ್ನೆಯನ್ನು ಮಾನ್ಯ ಸಚಿವರಲ್ಲಿ ಕೇಳಿದ್ದೇನೆ. ಮಾನ್ಯ ಸಚಿವರು ಕೊಟ್ಟಿರುವಂತಹ ಉತ್ತರದಲ್ಲಿ ಎರಡನೆಯ ಉಪ ಅಂಶದ ಬಗ್ಗೆ ಕೇಳುವುದಕ್ಕೆ ಇಷ್ಟಪಡುತ್ತೇನೆ. RKVY

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(Rashtriya Krishi Vikas Yojana) ಯಡಿಯಲ್ಲಿ ಬರದಿಂದ ಹಾಗೂ ಕೀಟ/ರೋಗಗಳಿಂದ ಹಾನಿಯಾಗಿರುವ ತೆಂಗಿನ ತೋಟಗಳ ಪುನಶ್ಚೇತನ ಕಾರ್ಯಕ್ರಮದಡಿ ಪ್ರತಿ ಹೆಕ್ಟೇರ್‌ಗೆ ಒಟ್ಟು ಘಟಕ ವೆಚ್ಚ 40,000 ರೂಪಾಯಿಗಳನ್ನು ಶೇಕಡ 50 ರಂತೆ ಕೊಡುತ್ತಿದ್ದಾರೆ. ಅದನ್ನು ಹೆಚ್ಚು ಮಾಡಬೇಕೆಂದು ಸುಮಾರು 50,000 ರೂಪಾಯಿಗಳನ್ನು subsidy ಕೊಡುವಂತಹದ್ದು ಮಾಡಬೇಕು. ಹಾಗೆಯೇ, ರೈತರ ತೋಟಗಾರಿಕೆಯ ಶೇಖರಣಾ ಘಟಕವಿದೆ. ಆ ಘಟಕಕ್ಕೆ 1.00 ಲಕ್ಷ ರೂಪಾಯಿಗಳ ಅನುದಾನವನ್ನು ಸರ್ಕಾರ ಕೊಡಬೇಕು ಮತ್ತು ಈಗಾಗಲೇ ತುಮಕೂರು ಜಿಲ್ಲೆಯಲ್ಲಿ ತೆಂಗಿನ ಮರಕ್ಕೆ ಕಪ್ಪು ಹುಳುಗಳು ಪ್ರಾರಂಭವಾಗಿದೆ. ಅದು ಹಾಸನ, ಮಂಡ್ಯ ಜಿಲ್ಲೆಗೂ ಹರಡುತ್ತದೆ. ಅದನ್ನು ತಡೆಗಟ್ಟುವಂತಹ ಕೆಲಸವನ್ನು ಮಾಡಬೇಕು. ಅಧಿಕಾರಿಗಳು ಫಲಾನುಭವಿಗಳಿಗೆ ಸರಿಯಾದ ಮಾರ್ಗದರ್ಶನವನ್ನು ನೀಡುವುದಕ್ಕೆ ಬೇಕಾದಂತಹ ಕ್ರಮವನ್ನು ಜರುಗಿಸಬೇಕೆಂದು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್:– ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತಹ ಎಲ್ಲ ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟಿದ್ದೇವೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ರೈತರಿಗೋಸ್ಕರ ಸಾಕಷ್ಟು ಯೋಜನೆಗಳನ್ನು ಜಾರಿಗೆ ತಂದಿದ್ದೇವೆ. ತಮಗೆ ಗೊತ್ತಿರುವ ಹಾಗೆ ಎರಡು–ಮೂರು ವರ್ಷಗಳಿಂದ ಬರ ಪೀಡಿತ ಪ್ರದೇಶಗಳಾದ್ದರಿಂದ ನುಸಿ ಪೀಡೆ ರೋಗಕ್ಕೆ ಸಾಕಷ್ಟು ಮರಗಳು ತುತ್ತಾಗಿವೆ. ಅದರಲ್ಲೂ ಹಾಸನ, ಮಂಡ್ಯ, ಮೈಸೂರು ಜಿಲ್ಲೆಗಳಲ್ಲಿ ಈ ರೋಗಕ್ಕೆ ಮರಗಳು ತುತ್ತಾಗಿವೆ. ಇದಕ್ಕೆ ಸೂಕ್ತವಾದಂತಹ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ ಮತ್ತು ಮಾನ್ಯ ಸದಸ್ಯರು subsidy ಬಗ್ಗೆ ಒಂದು ಪ್ರಶ್ನೆಯನ್ನು ಕೇಳಿದರು. ಅದರ ಬಗ್ಗೆ ಕೂಡ ಪರಿಶೀಲನೆಯನ್ನು ಮಾಡುತ್ತೇನೆ.

ಸಭಾಪತಿಯವರು:– ಧನ್ಯವಾದಗಳು

(ಮುಂದು)

(1111)21–11–2017/12:30/ಎಸ್‌ಪಿಆರ್/ಕೆಎಸ್

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 4273

(ಉತ್ತರವನ್ನು ಲಗತ್ತಿಸಿದೆ)

ಶ್ರೀ ರಘುನಾಥ ರಾವ್ ಮಲ್ಕಾಪೂರೆ:– ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಬೀದರ್ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲ್ಲಿ ಸಿಬ್ಬಂದಿಗಳ ಕೊರತೆಯಿಂದಾಗಿ ಸಂಶೋಧನಾ ಕಾರ್ಯಕ್ಕೆ ಹಿನ್ನಡೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎನ್ನುವ ಪ್ರಶ್ನೆಗೆ ಸರ್ಕಾರವು ಬೀದರ್ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಖಾಯಂ ಹಾಗೂ ಸಾಕಷ್ಟು ಗುತ್ತಿಗೆ ಆಧಾರದ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿರುವುದರಿಂದ ಸಂಶೋಧನಾ ಕಾರ್ಯಕ್ಕೆ ಹಿನ್ನಡೆಯಾಗಿರುವುದಿಲ್ಲ ಎಂದು ಲಿಖಿತ ಉತ್ತರದಲ್ಲಿ ತಿಳಿಸಿರುತ್ತಾರೆ. ಆದರೆ ಪ್ರಜಾ ವಾಣಿ, ಕನ್ನಡ ಪ್ರಭ ಹಾಗೂ ಇನ್ನಿತರೆ ಬಹಳಷ್ಟು ಪತ್ರಿಕೆಗಳಲ್ಲಿ ಬಹಳ ಸ್ಪಷ್ಟವಾಗಿ ಸಿಬ್ಬಂದಿ ಕೊರತೆಯಿಂದಾಗಿ ಸಂಶೋಧನೆ ಕಾರ್ಯಕ್ಕೆ ಹಿನ್ನಡೆ ಎಂಬುದಾಗಿ ವರದಿಯಾಗಿರುತ್ತದೆ. ಇದು ಒಂದು ಭಾಗವಾಗಿದೆ. ಮತ್ತೊಂದು ಭಾಗದಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ಎಷ್ಟು ಸಿಬ್ಬಂದಿಗಳನ್ನು ಹುದ್ದೆವಾರು ನೇಮಕಾತಿ ಮಾಡಿಕೊಳ್ಳಲಾಗಿದೆ ಎಂದು ಕೇಳಿರುವ ಪ್ರಶ್ನೆಗೆ, ಕಳೆದ ನಾಲ್ಕು ವರ್ಷಗಳಲ್ಲಿ ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಂಡಿರುವುದಿಲ್ಲ ಮುಂದುವರೆದು ಒಟ್ಟು 287 ಭೋದಕ ಸಿಬ್ಬಂದಿಗಳನ್ನು ನೇಮಕಾತಿ ಮಾಡಲು ಅಧಿಸೂಚನೆಯನ್ನು ಹೊರಡಿಸಲಾಗಿದೆ, ನೇಮಕಾತಿ ಪ್ರಕ್ರಿಯೆ ಜಾರಿಯಲ್ಲಿರುತ್ತದೆ ಎಂದು ಲಿಖಿತ ಉತ್ತರದಲ್ಲಿ ತಿಳಿಸಲಾಗಿರುತ್ತದೆ. ಕಳೆದ ನಾಲ್ಕು ವರ್ಷಗಳಲ್ಲಿ ಅಧಿಸೂಚನೆಯನ್ನು ಹೊರಡಿಸಿದ್ದಾರೆ ಹೊರತು ನೇಮಕಾತಿಯನ್ನು ಮಾಡಿರುವುದಿಲ್ಲ.

ಪ್ರಶ್ನೆಯ ಮತ್ತೊಂದು ಭಾಗದಲ್ಲಿ ಈ ವಿಶ್ವವಿದ್ಯಾಲಯಗಳಲ್ಲಿ ಎಷ್ಟು ವಿಭಾಗಗಳಿವೆ: ಇವುಗಳಲ್ಲಿ ಎಷ್ಟಕ್ಕೆ ಖಾಯಂ ಮುಖ್ಯಸ್ಥರು ಇದ್ದಾರೆ; ಎಂಬ ಪ್ರಶ್ನೆಗೆ ಸರ್ಕಾರವು ಮೊದಲನೆಯದಾಗಿ ವಿಶ್ವವಿದ್ಯಾಲಯದಲ್ಲಿ ಸಿಬ್ಬಂದಿಗಳ ಕೊರತೆಯಿಲ್ಲ ಎಂಬುದಾಗಿ ತಿಳಿಸಿರುತ್ತದೆ. ಇದಕ್ಕೆ ಮುಂದುವರೆದಂತೆ, ವಿಶ್ವವಿದ್ಯಾಲಯದಲ್ಲಿ ಎಲ್ಲಾ ವೃಂದಗಳ ಒಟ್ಟುಗೂಡಿ 1,113 ಹುದ್ದೆಗಳು ಖಾಲಿ ಇದೆ ಎಂಬುದಾಗಿ ಅದೇ ಲಿಖಿತ ಉತ್ತರದಲ್ಲೂ ತಿಳಿಸಿರುತ್ತಾರೆ. ಉತ್ತರ ಒಂದು ಭಾಗದಲ್ಲಿ ಸಿಬ್ಬಂದಿಗಳ ಕೊರತೆಯಿಲ್ಲ ಎಂಬುದಾಗಿಯೂ ಹಾಗೂ ಮತ್ತೊಂದು ಭಾಗದಲ್ಲಿ ವಿವಿಧ ವೃಂದದ ಹುದ್ದೆಗಳು ಖಾಲಿಯಿರುವ ಬಗ್ಗೆ ತಿಳಿಸಿರುತ್ತಾರೆ. ಇವುಗಳೆಲ್ಲವುಕ್ಕಿಂತಲೂ ಬಹಳ ಮುಖ್ಯವಾಗಿ ವಿಶ್ವವಿದ್ಯಾಲಯಗಳಲ್ಲಿ ಎಷ್ಟು ವಿಭಾಗಗಳಿವೆ; ಇವುಗಳಲ್ಲಿ ಎಷ್ಟಕ್ಕೆ ಖಾಯಂ ಮುಖ್ಯಸ್ಥರು ಇದ್ದಾರೆ ಮತ್ತು ವಿಭಾಗವಾರು ಮುಖ್ಯಸ್ಥರ ಸಂಪೂರ್ಣ ವಿವರ ನೀಡಿ ಎಂಬ ಪ್ರಶ್ನೆಗೆ ವಿಶ್ವವಿದ್ಯಾಲಯಗಳಲ್ಲಿ ಒಟ್ಟಾರೆಯಾಗಿ 14 ವಿವಿಧ ವಿಭಾಗಗಳ ಮುಖ್ಯಸ್ಥರುಗಳ ಹುದ್ದೆಗಳ ಪೈಕಿ 13 ಹುದ್ದೆಗಳು ಪ್ರಭಾರವಾಗಿರುತ್ತವೆ. ಉದಾಹರಣೆಗೆ ಹೇಳುವುದಾದರೆ, ವಿಶ್ವವಿದ್ಯಾಲಯದ ಕುಲಪತಿ, ಕುಲಸಚಿವರು, ಸಂಶೋಧನಾ ನಿರ್ದೇಶಕರು, ಶಿಕ್ಷಣ ನಿರ್ದೇಶಕರು (ಸ್ನಾತಕೋತ್ತರ) ಇತ್ಯಾದಿ ಹುದ್ದೆಗಳು ಪ್ರಭಾರದಲ್ಲಿರುತ್ತವೆ. ಈ ಸಂದರ್ಭದಲ್ಲಿ ನಾನು ಬಹಳ ನೊಂದು ಹೇಳುವುದೇನೆಂದರೆ, ಈ ರೀತಿಯಾಗಿ ವಿಶ್ವವಿದ್ಯಾಲಯದಲ್ಲಿ ಸಿಬ್ಬಂದಿಗಳಿಲ್ಲದೇ ಯಾವ ರೀತಿಯ ಸಂಶೋಧನೆಯನ್ನು ಮಾಡಲಿಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗುತ್ತದೆ. ವಿವಿಧ ವಿಭಾಗಗಳ ಹಣವು ಇಲ್ಲಿ ವ್ಯರ್ಥವಾಗುತ್ತಿದೆ. ಸರ್ಕಾರವು ನೀಡಿದ ಲಿಖಿತ ಉತ್ತರದಿಂದಲೇ ನಾನು ಉದಾಹರಣೆಯಾಗಿ ಹೇಳುತ್ತಿರುವುದೇನೆಂದರೆ . . .

ಸಭಾಪತಿಯವರು:– ತಾವು ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ ಅದು ಸರಿ ಆದರೆ, ಈ ವಿಚಾರದಲ್ಲಿ ಸರ್ಕಾರವು ಏನು ಮಾಡಬೇಕು ಎಂಬ ಬಗ್ಗೆ ನೀವು ಪ್ರಸ್ತಾಪ ಮಾಡಿಲಿಲ್ಲ.

ಶ್ರೀ ರಘುನಾಥ ರಾವ್ ಮಲ್ಕಾಪೂರೆ:– ಮಾನ್ಯ ಸಭಾಪತಿಯವರೇ, ಕಳೆದ ನಾಲ್ಕು ವರ್ಷಗಳಿಂದ ವಿಶ್ವವಿದ್ಯಾಲಯದಲ್ಲಿ ವಿವಿಧ ವೃಂದದ ಹುದ್ದೆಗಳು ಖಾಲಿಯಿವೆ. ಅವುಗಳ ಭರ್ತಿ ಸಂಬಂಧ ಪ್ರಕ್ರಿಯೆಯನ್ನು ಮಾಡುತ್ತಿದ್ದಾರೆಯೇ ಹೊರತು ಯಾವುದೇ ಹುದ್ದೆಗಳ ಭರ್ತಿಯಾಗುತ್ತಿಲ್ಲ.

ಸಭಾಪತಿಯವರು:– ಖಾಲಿಯಿರುವ ಹುದ್ದೆಗಳ ಭರ್ತಿ ಕೆಲಸವನ್ನು ಮಾಡಿಸಬೇಕು.

ಶ್ರೀ ರಘುನಾಥ ರಾವ್ ಮಲ್ಕಾಪೂರೆ:– ಮಾನ್ಯ ಸಭಾಪತಿಯವರೇ, ಸರ್ಕಾರವು ವಿಶ್ವವಿದ್ಯಾಲಯದಲ್ಲಿ ವಿವಿಧ ವೃಂದದ ಒಟ್ಟು 1,113 ಹುದ್ದೆಗಳು ಖಾಲಿ ಇವೆ ಎಂಬ ಅಂಶವನ್ನು ಒಪ್ಪಿಕೊಂಡಿದೆ. ಮೊದಲನೆಯದಾಗಿ ಅವುಗಳನ್ನು ಭರ್ತಿ ಮಾಡಬೇಕು. ಎರಡನೆಯದಾಗಿ ವಿಶ್ವವಿದ್ಯಾಲಯದಲ್ಲಿ ಬಹಳಷ್ಟು ಹುದ್ದೆಗಳು ಖಾಲಿಯಿರುವುದರಿಂದ ತಾತ್ಕಾಲಿಕ ನೌಕರರು ಕಾರ್ಯ ನಿರ್ವಹಿಸುತ್ತಿದ್ದಾರೆ. ವಿಶ್ವವಿದ್ಯಾಲಯದ ಒಂದು ವಿಭಾಗವನ್ನು ಹೊರತುಪಡಿಸಿ ಇನ್ನುಳಿದ ಅಂದರೆ, ಕುಲಪತಿ, ಕುಲಸಚಿವರು ಆದಿಯಾಗಿ ಎಲ್ಲಾ ವಿಭಾಗಗಳ ಮುಖ್ಯಸ್ಥರುಗಳ ಹುದ್ದೆಗಳು ಪ್ರಭಾರದಲ್ಲಿವೆ. ಪರಿಸ್ಥಿತಿ ಹೀಗಾದರೆ, ವಿಶ್ವವಿದ್ಯಾಲಯದ ಗತಿಯೇನು? ಉದಾಹರಣೆಗೆ ಹೇಳುವುದಾದರೆ, ಮುಧೋಳ ತಳಿಯ ನಾಯಿಗಳನ್ನು ಸಾಕಲು ಕೋಟ್ಯಾಂತರ ರೂಪಾಯಿಗಳನ್ನು ಸರ್ಕಾರವು ಬಿಡುಗಡೆ ಮಾಡಿದೆ ಆದರೆ, ಅದನ್ನು ಬಳಕೆ ಮಾಡುತ್ತಿಲ್ಲ. ದೇವಳ ತಳಿಯ ಹಸುಗಳ ಸಾಕಾಣಿಗೆ ಮಾಡಲು ಕೋಟ್ಯಾಂತರ ರೂಪಾಯಿಗಳು ಸರ್ಕಾರದಿಂದ ಬಿಡುಗಡೆಯಾಗಿದೆ ಆದರೆ, ಅದು ಸರಿಯಾದ ರೀತಿಯಲ್ಲಿ ಉಪಯೋಗವಾಗುತ್ತಿಲ್ಲ. ಇದಕ್ಕೆ ಕಾರಣವೇನೆಂದರೆ, ವಿಶ್ವವಿದ್ಯಾಲಯದಲ್ಲಿ ಪೂರ್ಣ ಪ್ರಮಾಣದಲ್ಲಿ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿಲ್ಲ ಹೀಗಾಗಿ ಅಲ್ಲಿ ಸರಿಯಾಗಿ ಕೆಲಸಗಳಾಗುತ್ತಿಲ್ಲ. ಮಾನ್ಯ ಸಚಿವರಿಗೆ ನಾನು ಹೇಳುವುದೇನೆಂದರೆ, ಸಿಬ್ಬಂದಿಗಳ ಕೊರತೆಯಿಂದಾಗಿ ಸಂಶೋಧನಾ ಕೆಲಸಗಳು ಹಾಗೂ ಇಲಾಖೆಯ ಕೆಲಸಗಳು ಸರಿಯಾಗಿ ನಡೆಯುತ್ತಿಲ್ಲ. ದಯಮಾಡಿ ಈ ವ್ಯವಸ್ಥೆಯನ್ನು ಸರಿಪಡಿಸಿ. ಇತ್ತೀಚಿಗೆ ವೈದ್ಯರುಗಳು ಮುಷ್ಕರವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೂಡಿದರು. ಏಕೆಂದರೆ ಅವರಿಗೆ ಬಾಯಿ ಇದೆ. ಆದರೆ ಈ ವಿಶ್ವವಿದ್ಯಾಲಯಕ್ಕೆ ಸಂಬಂಧಪಟ್ಟಂತಿರುವ ಮೂಕ ಪ್ರಾಣಿಗಳಿಗೆ ಬಾಯಿ ಇಲ್ಲ. ಮೂಕ ಪ್ರಾಣಿಗಳ ಸೇವೆಯನ್ನು ಮಾಡುವುದಕ್ಕೆ ದೇವರು ನಿಮಗೆ ಒಳ್ಳೆಯ ಅವಕಾಶವನ್ನು ನೀಡಿದ್ದಾರೆ. ಆದ್ದರಿಂದ ಮಾನ್ಯ ಸಚಿವರೇ ದಯಮಾಡಿ ಆ ಇಲಾಖೆಗೆ ನ್ಯಾಯವನ್ನು ಒದಗಿಸಿ, ಮೂಕ ಪ್ರಾಣಿಗಳಿಗೆ ಮತ್ತು ಸಂಶೋಧನಾ ಕಾರ್ಯಕ್ಕೆ ಸಂಬಂಧಪಟ್ಟಂತೆ ಒಳ್ಳೆಯ ಕೆಲಸವನ್ನು ನಿರ್ವಹಿಸಿ. ನಾನು ಕೇಳಿರುವ ಪ್ರಶ್ನೆಗೆ ಸಂಬಂಧಪಟ್ಟಂತೆ ಯಾವ ರೀತಿಯ ಕ್ರಮಗಳನ್ನು ತೆಗೆದುಕೊಳ್ಳುತ್ತೀರಿ ಎಂಬುದನ್ನು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ನಾನು ಕೇಳಲಿಚ್ಛಿಸುತ್ತೇನೆ.

ಶ್ರೀ ಎ.ಮಂಜು:– ಮಾನ್ಯ ಸಭಾಪತಿಯವರೇ, 2013 ನೇ ಸಾಲಿನಲ್ಲಿ ಬೀದರ್ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ 108 ಶಿಕ್ಷಕರಗಳನ್ನು ನೇಮಕ ಮಾಡಲಾಗಿದೆ. ಇದಾದ ನಂತರ ಸಂವಿದಾನ ಅನುಚ್ಛೇದ 371 (ಜೆ) ರೀತ್ಯಾ ಮಾಡಲಾಗಿರುವ ಮೀಸಲಾತಿಯನ್ನು ಪ್ರಶ್ನಿಸಿ ಕೆಲವರು ನ್ಯಾಯಾಲಯಕ್ಕೆ ದಾವೆಯನ್ನು ಸಲ್ಲಿಸಿದ್ದಾರೆ. 2016 ನೇ ಸಾಲಿನಲ್ಲಿ ಒಟ್ಟು 287 ಬೋಧಕ ಸಿಬ್ಬಂದಿಗಳ ನೇರ ನೇಮಕಾತಿಗಾಗಿ ಅಧಿಸೂಚನೆಯನ್ನು ಹೊರಡಿಸಲಾಗಿತ್ತು. ಆದರೆ ಇದಕ್ಕೆ ನ್ಯಾಯಾಲಯವು ತಡೆಯಾಜ್ಞೆಯನ್ನು ನೀಡಿರುತ್ತದೆ. ಪ್ರಸ್ತುತ ಈ ವಿಚಾರವು ನ್ಯಾಯಾಲಯದಲ್ಲಿ ಇತ್ಯರ್ಥವಾಗಿದೆ. ಆದ್ದರಿಂದ ಈಗಾಗಲೇ ಖಾಯಂ ನೇಮಕಾತಿಗಾಗಿ ಅವಶ್ಯವಿರುವ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಇದಕ್ಕೆ ಕಾರಣವೇನೆಂದರೆ, ಇದೇ ತಿಂಗಳ 28 ನೇ ತಾರೀಕಿನಂದು Search Committee ಯು ನಿಗದಿಗೊಂಡಿದೆ. ಸದರಿ ಸಭೆಯಲ್ಲಿ ಖಾಯಂ ಆಗಿ ವಿಶ್ವವಿದ್ಯಾಲಯದ ಉಪಕುಲಪತಿಗಳನ್ನು ನೇಮಕ ಮಾಡಲಾಗುವುದು. ಹಾಲಿ ಉಪಕುಲಪತಿಗಳು ಪ್ರಭಾರ ಹುದ್ದೆಯಲ್ಲಿರುವುದರಿಂದ ಅವರಿಗೆ ಯಾವುದೇ ರೀತಿಯಾದ ಅಧಿಕಾರವಿರುವುದಿಲ್ಲ. ಆದ್ದರಿಂದ Search Committee ನಂತರ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗುವುದು. ಮಾನ್ಯ ಸದಸ್ಯರು ಬಹಳ ಕಳಕಳಿಯಿಂದ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿ ಯಾವುದೇ ರೀತಿಯ ತಪ್ಪು ಇಲ್ಲ. ವಿಶ್ವವಿದ್ಯಾಲಯಗಳನ್ನು ನಡೆಸಬೇಕಾದರೆ, Grant-in-Aid ಮತ್ತು UGC (University Grants Commission) ಮುಂತಾದವುಗಳ ಮಾನ್ಯತೆಯನ್ನು ಉಪಕುಲಪತಿಗಳಿಗೆ ಕೊಡಬೇಕಾಗುತ್ತದೆ. ಆ ಹುದ್ದೆಗೆ ಅರ್ಹತೆಯುಳ್ಳ ಪ್ರೋಫೆಸರ್‌ಗಳಿಗೆ ಮಾತ್ರವೇ ನೇಮಕಾತಿಯನ್ನು ಮಾಡಲಾಗುವುದು. ಇದಲ್ಲದೇ, ನಮ್ಮ ಪಶುಸಂಗೋಪನೆ ಇಲಾಖೆಯಿಂದ ಸುಮಾರು 33 ಪಿ.ಹೆಚ್.ಡಿ. ಪದವಿಯನ್ನು ಹೊಂದಿರುವಂತ ವೈದ್ಯರುಗಳ ಸೇವೆಗಳನ್ನು ಉಪಯೋಗಿಸಿಕೊಂಡು ಈಗಾಗಲೇ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೆಲಸಗಳನ್ನು ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ವಿಶ್ವವಿದ್ಯಾಲಯದಲ್ಲಿಯೇ ಸದರಿ ವೈದ್ಯರುಗಳ ಸೇವೆಗಳನ್ನು ವಿಲೀನಗೊಳಿಸುವ ಬಗ್ಗೆ ಅವಕಾಶ ಮಾಡಬೇಕೆಂದು ಹಾಗೂ ಇದಕ್ಕೆ ಸಂಬಂಧಿತ ಪ್ರಸ್ತಾವನೆಯನ್ನು ಸಚಿವ ಸಂಪುಟದಲ್ಲಿ ಮಂಡಿಸಲು ಅವಶ್ಯವಿರುವ ಕ್ರಮಗಳನ್ನು ಈಗಾಗಲೇ ತೆಗೆದುಕೊಳ್ಳಲಾಗಿದೆ.

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:– ಮಾನ್ಯ ಸಭಾಪತಿಯವರೇ, ಒಂದು ವರ್ಷವಾದರೂ ಸಹ ಇನ್ನೂ ವಿಶ್ವವಿದ್ಯಾಲಯಕ್ಕೆ ಉಪಕುಲಪತಿಗಳ ನೇಮಕವಾಗಿಲ್ಲ. ಮನೆಯ ಯಜಮಾನವಿಲ್ಲದೇ ಮನೆ ಹೇಗೆ ನಡೆಯುತ್ತದೆ? ಅದೇ ರೀತಿಯಾಗಿ ಉಪಕುಲಪತಿಗಳಿಲ್ಲದೇ ವಿಶ್ವವಿದ್ಯಾಲಯವು ಯಾವ ರೀತಿಯಲ್ಲಿ ನಡೆಯುತ್ತದೆ?

ಸಭಾಪತಿಯವರು:– ಇದೇ ವಿಷಯವನ್ನು ಮಾನ್ಯ ಸಚಿವರು ಪ್ರಸ್ತಾಪಿಸುತ್ತಿದ್ದಾರೆ. ಉಪಕುಲಪತಿಗಳನ್ನು ನೇಮಕ ಮಾಡುವುದಾಗಿ ತಿಳಿಸುತ್ತಿದ್ದಾರೆ.

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:– ಮಾನ್ಯ ಸಭಾಪತಿಯವರೇ, ಉಪಕುಲಪತಿಗಳ ಹುದ್ದೆಯು ಬಹಳ ದಿನಗಳಿಂದ ಖಾಲಿಯಿದೆ. ಮತ್ತೊಂದು ವಿಚಾರವೇನೆಂದರೆ, ಬೆಂಗಳೂರು ಭಾಗದ ವ್ಯಕ್ತಿಯನ್ನು ಉಪಕುಲಪತಿಗಳಾಗಿ ನೇಮಕ ಮಾಡುತ್ತಾರೆ. ಅವರು ವಾರಕ್ಕೊಮ್ಮೆ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿ, ಹೊರಟು ಹೋಗುತ್ತಾರೆ. ಅವರ ಉಪಸ್ಥಿತಿ ಹಾಗೂ ಅನುಪಸ್ಥಿತಿಗಳಲ್ಲಿ ಒಂದೇ ರೀತಿಯಾದ ಕೆಲಸಗಳಾಗುತ್ತವೆಯೇ? ಹೀಗೆ ಮಾಡಿದ್ದಲ್ಲಿ ವಿಶ್ವವಿದ್ಯಾಲಯವು ಸಂಪೂರ್ಣವಾಗಿ ನಾಶವಾಗುತ್ತದೆ. ಆದಕಾರಣ ಈ ವಿಚಾರದಲ್ಲಿ ಅಗತ್ಯವಿರುವ ಕ್ರಮಗಳನ್ನು ತೆಗೆದುಕೊಳ್ಳಲಿ.

ಶ್ರೀ ಎ.ಮಂಜು:– ಮಾನ್ಯ ಸಭಾಪತಿಯವರೇ, ಇದೇ ವಿಚಾರವಾಗಿ 28 ನೇ ತಾರೀಕಿನಂದು Search Committeeಯ ಸಭೆಯು ನಿಗದಿಗೊಂಡಿದೆ. ಇತ್ತೀಚೆಗೆ ಸದರಿ ಸಮಿತಿಯ ಸಭೆಯು ನಿಗದಿಯಾಗಿತ್ತು. ಆದರೆ ಸಮಿತಿಯ ಸದಸ್ಯರೊಬ್ಬರು ಸಭೆಗೆ ಹಾಜರಾಗುವುದಕ್ಕೆ ಆಗುವುದಿಲ್ಲವೆಂದು ಕಾಗದ ಮೂಲಕ ತಿಳಿಸಿದ್ದರಿಂದ ಸಭೆಯು ಮುಂದೂಡಲ್ಪಟ್ಟಿತು. ಮುಂಬರುವ ಮಂಗಳವಾರದಂದು ಸಭೆಯು ನಿಗದಿಗೊಂಡಿದೆ. ಸದರಿ ಸಮಿತಿಯ ಸಭೆಯಲ್ಲಿ ಉಪಕುಲಪತಿಗಳ ನೇಮಕಾಗಿ ವಿಚಾರವು ಇತ್ಯರ್ಥಗೊಳ್ಳುತ್ತದೆ. ಇದೇ ತಿಂಗಳ 28 ನೇ ತಾರೀಕಿನಂದು, Search Committee ಯ ಸಭೆಯಲ್ಲಿ ಉಪಕುಲಪತಿಗಳ ನೇಮಕಾತಿಯ ನಂತರ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಯಂತೆ ಖಾಲಿಯಿರುವ ವಿವಿಧ ಹುದ್ದೆಗಳಿಗೆ ನೇಮಕಾತಿಯನ್ನು ಮಾಡಲಾಗುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ರಘುನಾಥ ರಾವ್ ಮಲ್ಕಾಪೂರೆ:– ಮಾನ್ಯ ಸಭಾಪತಿಯವರೇ, ಸಮಿತಿಯ ಸಭೆಯ ನಂತರ ಶೀಘ್ರದಲ್ಲಿ ಉಪಕುಲಪತಿಗಳ ನೇಮಕಾತಿ ಮಾಡುವುದಾಗಿ ಮಾನ್ಯ ಸಚಿವರು ಸರಿಯಾದ ಉತ್ತರವನ್ನು ನೀಡಿದ್ದಾರೆ. ಆದರೆ, ಪ್ರಸ್ತುತ ಪ್ರಭಾರದಲ್ಲಿರುವ ವಿಶ್ವವಿದ್ಯಾಲಯದ 13 ವಿವಿಧ ವಿಭಾಗಗಳ ಮುಖ್ಯಸ್ಥರ ಹುದ್ದೆಗಳಿಗೆ ಅಂದರೆ ಕುಲಸಚಿವರು, ಸಂಶೋಧನಾ ನಿರ್ದೇಶಕರು ಹಾಗೂ ಇತ್ಯಾದಿ ಪ್ರಭಾರ ಹುದ್ದೆಗಳಿಗೆ ಯಾವ ರೀತಿಯ ಕ್ರಮಗಳನ್ನು ತೆಗೆದುಕೊಳ್ಳುತ್ತೀರಿ? ಇವುಗಳ ಜೊತೆಗೆ ಕಳೆದ ನಾಲ್ಕು ವರ್ಷಗಳಿಂದ ಖಾಲಿಯಿರುವ 1,113 ವಿವಿಧ ವೃಂದದ ಹುದ್ದೆಗಳ ಖಾಯಂ ಭರ್ತಿ ಪ್ರಕ್ರಿಯೆಯು ಯಾವ ಹಂತದಲ್ಲಿದೆ ಹಾಗೂ ಯಾವ ರೀತಿಯ ಕ್ರಮಗಳನ್ನು ತೆಗೆದುಕೊಳ್ಳುತ್ತೀರಿ? ಹೊರ ಗುತ್ತಿಗೆ ಆಧಾರದ ಮೇಲೆ ಹುದ್ದೆಗಳನ್ನು ಭರ್ತಿ ಮಾಡುವುದರ ಮೂಲಕ ಸಾಮಾಜಿಕ ನ್ಯಾಯಕ್ಕೆ ಹೊಡೆತವನ್ನು ಕೊಡುವಂತಹ ತಪ್ಪನ್ನು ಮಾಡುತ್ತಿದ್ದಾರೆ. ಇದು ಸರ್ಕಾರದ ಎಲ್ಲಾ ಇಲಾಖೆಗಳಲ್ಲೂ ಚಾಲ್ತಿಯಲ್ಲಿದೆ. ಹೀಗೆ ಮಾಡಿದ್ದಲ್ಲಿ ಸಾಮಾಜಿಕ ನ್ಯಾಯವನ್ನು ಬದಿಗಿಟ್ಟಹಾಗಾಗುತ್ತದೆ ಮತ್ತು ಹಿಂದುಳಿದವರು, ಪರಿಶಿಷ್ಟ ಜಾತಿ ಮತ್ತು ಪಂಗಡದವರುಗಳಿಗೆ ಅನ್ಯಾಯವಾಗುತ್ತದೆ. ಪ್ರಸ್ತುತ ಖಾಲಿಯಿರುವ 1,113 ಹುದ್ದೆಗಳನ್ನು ಯಾವ ರೀತಿಯಲ್ಲಿ ಹಾಗೂ ಯಾವಾಗ ಭರ್ತಿ ಮಾಡುತ್ತೀರಿ ಎಂಬ ಬಗ್ಗೆ ದಯಮಾಡಿ ತಿಳಿಸಬೇಕೆಂದು ತಮ್ಮ ಮುಖಾಂತರ ಕೇಳುತ್ತಿದ್ದೇನೆ.

ಸಭಾಪತಿಯವರು:– ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗಳಿಗೆ ಮಾನ್ಯ ಸಚಿವರು ಉತ್ತರವನ್ನು ನೀಡಲಿ.

ಕ್ಯಾಪ್ಟನ್ ಗಣೇಶ್ ಕಾರ್ಣಿಕ್:– ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿರುವಂತೆ ವಿಶ್ವವಿದ್ಯಾಲಯಗಳ ಸಂಶೋಧನ ಕಾರ್ಯಗಳಿಗೆ ಹೊರ ಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಗಳನ್ನು ನೇಮಕ ಮಾಡುವುದಕ್ಕೆ ಸಾಧ್ಯವಿದೆಯೇ? ಪರಿಸ್ಥಿತಿ ಹೀಗಿರುವಾಗ ವಿಶ್ವವಿದ್ಯಾಲಯಗಳಲ್ಲಿ ಯಾವ ರೀತಿಯ ಸಂಶೋಧನೆಗಳನ್ನು ನಡೆಸುವುದಕ್ಕೆ ಆಗುತ್ತದೆ?

ಶ್ರೀ ಎ.ಮಂಜು:– ಮಾನ್ಯ ಸಭಾಪತಿಯವರೇ, ಯಾವುದೇ ಒಂದು ವಿಶ್ವವಿದ್ಯಾಲಯವನ್ನು ನಡೆಸಬೇಕಾದರೆ, ಅದರಲ್ಲಿ ಪ್ರಾಧ್ಯಾಪಕ, ಸಹಾಯಕ ಪ್ರಾಧ್ಯಾಪಕರುಗಳ ಹುದ್ದೆಗಳಿರಬೇಕು ಎಂಬ ನಿಯಮವಿದೆ. ನಿಗದಿತ ಹುದ್ದೆಗಳಿಲ್ಲದೇ ಹೋದರೆ, ಯಾವುದೇ ಪಶುವೈದ್ಯ ವಿಶ್ವವಿದ್ಯಾಲಯಗಳನ್ನು ನಡೆಸಲು ***'Veterinary Council of India'*** ಅನುಮತಿಯನ್ನು ನೀಡುವುದಿಲ್ಲ. ಹೀಗಾಗಿ ಹಾಲಿ ನಮ್ಮಲ್ಲಿ ಲಭ್ಯವಿರುವ ಪ್ರಾಧ್ಯಾಪಕರುಗಳನ್ನೇ ಆಯ್ಕೆ ಮಾಡಿ ಅನುಮತಿಯನ್ನು ಪಡೆಯಲಾಗುತ್ತಿದೆ. ಮಾನ್ಯ ಸದಸ್ಯರಾದ ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ಪ್ರಸ್ತಾಪಿಸಿರುವ ಅಂಶವು ನಿಜವಾಗಿದೆ. ಮಾನ್ಯ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸದಸ್ಯರಾದ ಶ್ರೀ ರಘುನಾಥ ರಾವ್ ಮಲ್ಕಾಪೂರೆ ರವರು ಕೇಳಿರುವ ಪ್ರಶ್ನೆಗೆ ಪೂರ್ಣ ಪ್ರಮಾಣದಲ್ಲಿ ಉತ್ತರ ದೊರೆಯಬೇಕಾದರೆ, ಮುಂಬರುವ 28 ನೇ ತಾರೀಕಿನಂದು ನಡೆಯಲಿರುವ ಸರ್ಚ್ ಸಮಿತಿಯು ಪೂರ್ಣಗೊಂಡ ನಂತರ ತಕ್ಷಣವೇ ಉಪಕುಲಪತಿಗಳ ನೇಮಕಾತಿಯನ್ನು ಮಾಡಲಾಗುವುದು. ಖಾಯಂ ಉಪಕುಲಪತಿಗಳಿಲ್ಲದೇ ವಿಶ್ವವಿದ್ಯಾಲಯದಲ್ಲಿ ಖಾಲಿಯಿರುವ ವಿವಿಧ ವೃಂದದ ಹುದ್ದೆಗಳ ನೇಮಕಾತಿ ಮಾಡುವುದಕ್ಕೆ ಅವಕಾಶವಿಲ್ಲ. ಖಾಯಂ ಉಪಕುಲಪತಿಗಳ ಹುದ್ದೆಯು ಭರ್ತಿಯಾದ ಮೇಲೆ, ಮಾನ್ಯ ಸದಸ್ಯರು ಆತಂಕ ವ್ಯಕ್ತಪಡಿಸಿರುವಂತೆ ರೋಸ್ಟರ್‌ನಲ್ಲಿ ಯಾವುದೇ ರೀತಿಯ ಬದಲಾವಣೆಗಳಾಗುವುದಿಲ್ಲ. ರೋಸ್ಟರ್ ಪ್ರಕಾರವೇ ನೇಮಕಾತಿಯನ್ನು ಮಾಡಲಾಗುವುದು. ಸಂವಿಧಾನದ ಅನುಚ್ಛೇದ 371(ಜೆ) ರನ್ವಯ ವಿಶ್ವವಿದ್ಯಾಲಯದಲ್ಲಿ ವಿವಿಧ ವೃಂದದ ಹುದ್ದೆಗಳ ವಿಂಗಡಣೆಯು ಸರಿಯಾಗಿ ಮಾಡಿರಲಿಲ್ಲ ಎಂಬ ಕಾರಣಕ್ಕಾಗಿ ನ್ಯಾಯಾಲಯದಲ್ಲಿ ಪ್ರಕರಣವು ಬಾಕಿ ಇದ್ದ ಕಾರಣ ನೇಮಕಾತಿ ಪ್ರಕ್ರಿಯೆಯು ಸ್ಥಗಿತಗೊಂಡಿತ್ತು. ಪ್ರಸ್ತುತ ಪ್ರಕರಣಕ್ಕೆ ಇದ್ದ ತಡೆಯಾಜ್ಞೆಯನ್ನು ನ್ಯಾಯಾಲಯವು ತೆರವುಗೊಳಿಸಿದೆ. ಉಪಕುಲಪತಿಗಳ ಹುದ್ದೆಗೆ ನೇಮಕಾತಿವಾದ ನಂತರದ ಸುಮಾರು 10-15 ದಿನಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿಮಾಡಲಾಗುವುದು.

ಶ್ರೀ ರಘುನಾಥ ರಾವ್ ಮಲ್ಕಾಪೂರೆ:- ಮಾನ್ಯ ಸಭಾಪತಿಯವರೇ, ಖಾಲಿಯಿರುವ 1,113 ಹುದ್ದೆಗಳನ್ನು ಯಾವ ರೀತಿಯಲ್ಲಿ ಭರ್ತಿ ಮಾಡುತ್ತಾರೆ? ಏಕೆಂದರೆ ಹುದ್ದೆಗಳನ್ನು ಭರ್ತಿ ಮಾಡಬೇಕಾದರೆ ಉಪಕುಲಪತಿಗಳು ಅವಶ್ಯಕ. ಮಾನ್ಯ ಸಚಿವರ ಬಗ್ಗೆ ನಮಗೆ ಗೌರವವಿದೆ. ಉದಾಹರಣೆಗೆ ಹೇಳುವುದಾದರೆ, ಇತ್ತೀಚೆಗೆ ಪಶುವೈದ್ಯರುಗಳ ನೇಮಕಾತಿ ಪ್ರಕ್ರಿಯೆಯನ್ನು online ಮುಖಾಂತರ ಭರ್ತಿ ಮಾಡಿ ಸಂವಿಧಾನದ ಅನುಚ್ಛೇದ 371(ಜೆ) ಪ್ರಕಾರ ಹೈದ್ರಾಬಾದ್-ಕರ್ನಾಟಕ ಪ್ರದೇಶದ 52 ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದಾಗಿ ಹೇಳಿದರು. ಆದರೆ ಇಡಿ ರಾಜ್ಯದಲ್ಲಿ 152 ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಪಟ್ಟಿಯನ್ನು ಸಿದ್ಧಪಡಿಸಿ ಅವರುಗಳಿಗೆ ನೇಮಕಾತಿ ಆದೇಶಗಳನ್ನು ಹೊರಡಿಸುತ್ತಿದ್ದಾರೆ. ಸಂವಿಧಾನದ ಅನುಚ್ಛೇದ 371(ಜೆ) ರಡಿ ಬರುವಂತಹ 52 ವೈದ್ಯಾಧಿಕಾರಿಗಳಿಗೆ ನೇಮಕಾತಿ ಆದೇಶವನ್ನು ಈಗ ಸಚಿವ ಸಂಪುಟದಲ್ಲಿ ಅನುಮೋದನೆ ಮಾಡಿ, ನೇಮಕಾತಿ ಪ್ರಕ್ರಿಯೆಯನ್ನು ಬಾಕಿ ಇಟ್ಟಿದ್ದಾರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದು)

(1112) 12.40/ 21-11-2017/ ಸಿಎಸ್:ಜಿಆರ್

ಶ್ರೀ ರಘುನಾಥ ಮಲ್ಕಾಪೂರೆ(ಮುಂದು):-

ಮಾನ್ಯ ಸಚಿವರು ಸದನದಲ್ಲಿ ನೀಡುವ ಭರವಸೆಗಳನ್ನು ಸರಿಯಾಗಿ ಕಾರ್ಯರೂಪಕ್ಕೆ ತರುತ್ತಿಲ್ಲ, ಪಾಲನೆಯನ್ನು ಮಾಡುತ್ತಿಲ್ಲ, ತಾವು ಹೇಳಿದ ರೀತ್ಯಾ ನಡೆದುಕೊಳ್ಳುತ್ತಿಲ್ಲ ಎನ್ನು ಆರೋಪವನ್ನು ನಾನು ಮಾಡುತ್ತಿದ್ದೇನೆ.

ಶ್ರೀ ಎ.ಮಂಜು:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುತ್ತಿರುವುದೇನೆಂದರೆ ನಮ್ಮ ರಾಜ್ಯದಲ್ಲಿರುವ ಆಸ್ಪತ್ರೆಗಳಲ್ಲಿ 660 ಪಶು ವೈದ್ಯರ ಹುದ್ದೆಗಳು ಖಾಲಿಯಿದ್ದವು. ಈ ಹುದ್ದೆಗಳನ್ನು ತುಂಬುವ ಮೂಲಕ ನಮ್ಮ ರಾಜ್ಯ ಇಡೀ ದೇಶದಲ್ಲಿ ಕರ್ನಾಟಕ ರಾಜ್ಯದಲ್ಲಿರುವ ಪಶುಆಸ್ಪತ್ರೆಗಳಲ್ಲಿ ವೈದ್ಯರನ್ನು ನೇಮಕ ಮಾಡಿರುವುದರಲ್ಲಿ ಪ್ರಥಮ ರಾಜ್ಯವಾಗಿದೆ. ಈ ಎಲ್ಲಾ ಹುದ್ದೆಗಳನ್ನು ಮೆರಿಟ್ ಮೇಲೆ ನೇಮಕ ಮಾಡಲಾಗಿದ್ದು, 550 ಹುದ್ದೆಗಳನ್ನು ಜೇಷ್ಠತೆ ಮತ್ತು ಜಾತಿಯ ಆಧಾರದ ಮೇಲೆ ಮಾಡಲಾಗಿತ್ತು. ಅದರಲ್ಲಿ 50-60 ಹುದ್ದೆಗಳು ಈ ಭಾಗಕ್ಕೆ ಬಂದಿತ್ತು. ನಾವು ಎಲ್ಲಾ ಹುದ್ದೆಗಳನ್ನು ಜೊತೆಗೆ ಕೊಡಬೇಕೆಂದು 126 ಹುದ್ದೆಗಳನ್ನು ಸಚಿವಸಂಪುಟದ ಮುಂದಿಟ್ಟು ಅಧಿಸೂಚನೆಯನ್ನು ಹೊರಡಿಸಲಾಗಿದೆ. ಇದರಿಂದ 660 ವೈದ್ಯ ಹುದ್ದೆಗಳನ್ನು ತುಂಬಲಾಗುವುದು. ಇದು ಯಾವುದೇ ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದ್ದಿಲ್ಲ, ಇದು ಪಶು ವೈದ್ಯಕೀಯ ಇಲಾಖೆಗೆ ಸಂಬಂಧಪಟ್ಟಿರುವ ಹುದ್ದೆಗಳು, ಇದರ ನೇಮಕಾತಿಗೆ ಉಪ ಕುಲಪತಿಗಳು ಅನುಮತಿ ಬೇಕಾಗಿಲ್ಲ. ಈ ಹುದ್ದೆಗಳನ್ನು ಸರ್ಕಾರ ಸಚಿವಸಂಪುಟದ ಒಪ್ಪಿಗೆ ಪಡೆದು ನೇರ ನೇಮಕಾತಿಯನ್ನು ಮಾಡಿಕೊಳ್ಳಲಾಗುವುದು. ಇನ್ನು 10 ದಿವಸಗಳ ಒಳಗೆ ಈ ವೈದ್ಯರ ನೇಮಕಾತಿ ಆದೇಶ ಬರುತ್ತದೆ. ಅದರೆ ಈ ಹುದ್ದೆಗಳ ನೇಮಕಾತಿಗೆ ಉಪಕುಲಪತಿಗಳ ನೇಮಕ ಆಗಲೇ ಬೇಕು. ನನಗೆ 10 ದಿವಸಗಳ ಸಮಯಾವಕಾಶವನ್ನು ನೀಡಿದರೆ ನಾನು ಮಾಡಿಕೊಡುತ್ತೇನೆ.

ಪ್ರಶ್ನೆ ಸಂಖ್ಯೆ 4517
(ಉತ್ತರವನ್ನು ಲಗತ್ತಿಸಲಾಗಿದೆ)

ಶ್ರೀಮತಿ ಮೋಟಮ್ಮ:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಉತ್ತರವನ್ನು ಒದಗಿಸಿದ್ದಾರೆ. ಇದು ಬಹಳ ಮುಖ್ಯವಾದ ಪ್ರಶ್ನೆ ಕೂಡ ಆಗಿರುತ್ತದೆ. ಚಿಕ್ಕಮಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗೆ ಸಂಪರ್ಕ ಒದಗಿಸುವ ಎರಡು ರಸ್ತೆಗಳೆಂದರೆ ಒಂದು ಭಾರ್ಮುಡಿ ಘಾಟ್ ಮತ್ತೊಂದು ಶಿರಾಡಿ ಘಾಟ್. ಮಳೆಗಾಲದಲ್ಲಿ ಒಂದೊಂದು ಸಲ ಈ ರಸ್ತೆಗಳು ಬಂದ್ ಆಗುತ್ತವೆ. ಅದಕೋಸ್ಕರ ಈ ರಸ್ತೆಗಳಿಗೆ ಒಂದು ಪರ್ಯಾಯ ರಸ್ತೆಯನ್ನು ಮಾಡಬೇಕೆಂದು ಜನರು ಮನಿಯನ್ನು ಕೊಟ್ಟಿದ್ದಾರೆ, ಹಾಗೆಯೇ ಈ ರಸ್ತೆ ನಿರ್ಮಾಣಕ್ಕಾಗಿ ಸಾಕಷ್ಟು ಒತ್ತಡ

ಕೂಡ ಇದೆ. ಮಂತ್ರಿಗಳು ಸಹ ಈ ರಸ್ತೆ ನಿರ್ಮಾಣದ ವಿಚಾರದಲ್ಲಿ ಆಸಕ್ತಿ ಹೊಂದಿದ್ದಾರೆ. ಆದರೆ ಈ ರಸ್ತೆ ನಿರ್ಮಾಣಕ್ಕಾಗಿ ಕಳೆದ ಒಂದು ವರ್ಷದಿಂದಲೂ ಸರ್ವೇ ಕೆಲಸ ನಡೆಯುತ್ತಲೇ ಇದೆ. ಮೊದಲು ಸರ್ವೇ ಮಾಡಲಿಕ್ಕೆ ಮೆ: ಪ್ರೀತಿ ಕ್ಯಾಡ್ ಕನ್ಸಲ್ಟಿಂಗ್ ಇಂಜಿನಿಯರ್ಸ್ ಪ್ರೈವೇಟ್ ಲಿಮಿಟೆಡ್ ಎನ್ನುವ ಏಜೆನ್ಸಿಗೆ ವಹಿಸಲಾಗಿತ್ತು.. ಇವರಿಗೆ ಈ ಕೆಲಸಕ್ಕಾಗಿ 13.84 ಲಕ್ಷ ರೂಪಾಯಿಗಳ ಅಂದಾಜನ್ನು ಸಹ ಮಾಡಲಾಗಿತ್ತು. . ಆದರೆ ಇವರು ಮಾಡಿದ ಸರ್ವೇ ಸರಿಯಾಗಿಲ್ಲ ಹಾಗೂ ಸಕಾಲಕ್ಕೆ ಆಗಲಿಲ್ಲವೆಂದು ಆ ಸಂಸ್ಥೆಯನ್ನು ಬದಲಾಯಿಸಿ, ಮೆ:ಫಿಕ್ಸೆಲ್ ಸಾಫ್ಟ್ ಟೆಕ್ ಪ್ರೈವೇಟ್ ಲಿಮಿಟೆಡ್ ಇವರಿಗೆ ವಹಿಸಿದ್ದು ಅವರು ಈಗ ಸರ್ವೇಯನ್ನು ಮಾಡುತ್ತಿದ್ದಾರೆನ್ನುವ ಮಾತನ್ನು ಮಾನ್ಯ ಸಚಿವರು ಉತ್ತರದಲ್ಲಿ ಹೇಳಿದ್ದಾರೆ. ಮೊದಲು ಸರ್ವೇ ಮಾಡಿದಂತಹ ಮೆ: ಪ್ರೀತಿ ಕ್ಯಾಡ್ ಕನ್ಸಲ್ಟಿಂಗ್ ಇಂಜಿನಿಯರ್ಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯವರು ಈ ರಸ್ತೆ ವಯಬಲ್ ಅಲ್ಲ, ಇದಕ್ಕೆ ಬಾಳೂರು ಮೀಸಲು ಅರಣ್ಯ ಅಡ್ಡ ಬರುತ್ತದೆ ಎನ್ನುವ ಮಾತನ್ನು ಹೇಳಿದ್ದಾರೆ. ಆದರೆ ವಾಸ್ತವವಾಗಿ ಬಾಳೂರು ಅರಣ್ಯ ಪ್ರದೇಶ ಶಿಶಿಲ ಮತ್ತು ಭೈರಾಪುರ ರಸ್ತೆಯ ಹತ್ತಿರ ಬರುವುದಿಲ್ಲ. ಬಾಳೂರು ಮೀಸಲು ಅರಣ್ಯ ಈಗಿರುವ ಛಾರ್ಮುಡಿ ಘಾಟ್‌ಗೆ adjacent ಆಗಿದೆ. ಮೊದಲಿದ್ದ ಭಾರಿಮಲೈ ಮತ್ತು ಬಂಜಾರ್ ಮಲೈ ಎನ್ನುವ ಕಚ್ಚಾ ರಸ್ತೆಯಲ್ಲಿ ಜನರು ಓಡಾಡುತ್ತಿದ್ದು, ಈ ರಸ್ತೆ ಈಗಾಗಲೇ ಜನರ ಉಪಯೋಗದಲ್ಲಿರುವುದರಿಂದ ಆ ರಸ್ತೆಯನ್ನು ಅಭಿವೃದ್ಧಿಗೊಳಿಸಲು ಸರ್ಕಾರ ಏಕೆ ಪ್ರಯತ್ನ ಮಾಡಬಾರದೆನ್ನುವುದು ನನ್ನದೊಂದು ಸಲಹೆ. ಈ ಸರ್ವೇ ಕಾರ್ಯವನ್ನು ಮುಂದುವರೆಸಿ ಮುಗಿಸುವುದು ಯಾವಾಗ? ಮಾನ್ಯ ಸಚಿವರ ಅಧಿಕಾರವಧಿಯಲ್ಲಿಯೇ ಈ ರಸ್ತೆ ನಿರ್ಮಾಣ ಆಗುತ್ತದೆ ಎಂದು ನಾನು ಹಾಗೂ ಜನರೆಲ್ಲರೂ ನಂಬಿದ್ದೇವೆ. ದಯಮಾಡಿ ಸಚಿವರು ಇದರ ಬಗ್ಗೆ ಯೋಚನೆ ಮಾಡಬೇಕು, ಒಂದು ಭೈರಾಪುರ-ಶಿಶಿಲ ರಸ್ತೆ ಮೇಲೆ ಹೋಗುವುದಕ್ಕೆ ಬಾಳೂರು ಮೀಸಲು ಅರಣ್ಯ ಪ್ರದೇಶ ಅಡ್ಡ ಬರುತ್ತದೆ ಎಂದು ಹೇಳಿದ್ದೀರಿ., ನಾನು ಹೇಳುವುದೇನೆಂದರೆ ಬಾಳೂರು ಮೀಸಲು ಅರಣ್ಯ ಅಲ್ಲಿ ಬರುವುದಿಲ್ಲ. ಅದಕ್ಕೆ ಪಯಾಯವಾಗಿ ಜಾಗ ನೋಡಬೇಕೆಂದರೆ ಈಗಾಗಲೇ ಜನರು ಉಪಯೋಗ ಮಾಡುತ್ತಿರುವ ಕಚ್ಚಾ ರಸ್ತೆಯ ಬಗ್ಗೆಯಾದರೂ ಸಚಿ ವರು ಅಭಿವೃದ್ಧಿಪಡಿಸಬೇಕು.

ಡಾ॥ಹೆಚ್.ಸಿ.ಮಹದೇವಪ್ಪ:- ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾದ ಶ್ರೀಮತಿ ಮೋಟಮ್ಮನವರು ಖುದ್ದಾಗಿ ನನ್ನನ್ನು ಭೇಟಿ ಮಾಡಿ, ಭೈರಾಪುರ ರಸ್ತೆಯ ಬಗ್ಗೆ ಪ್ರಸ್ತಾಪವನ್ನು ಮಾಡಿದ್ದಾರೆ. ಇದು ಛಾರ್ಮುಡಿ ಘಾಟ್ ಮತ್ತು ಶಿರಾಡಿ ಘಾಟ್‌ಗೆ ಪರ್ಯಾಯವಾದ ರಸ್ತೆಯಾಗಿದ್ದು, ಈ ರಸ್ತೆಯ ಸ್ವಲ್ಪ ಭಾಗ ಬಾಳೂರು ಅರಣ್ಯಕ್ಕೆ ಸೇರುವ, ಜಿಲ್ಲಾಪಂಚಾಯಿತಿ ರಸ್ತೆಯಾಗಿರುತ್ತದೆ. ಮೊದಲು 2017ರಲ್ಲಿ ವಹಿಸಿದ್ದ ಸಂಸ್ಥೆಯವರು ಅರಣ್ಯ ಇಲಾಖೆ F.I.R., ಹಾಕಿದ ಮೇಲೆ ಆ ಕೆಲಸ ಮಾಡುವುದನ್ನು

ಬಿಟ್ಟುಬಿಟ್ಟರು. ಈಗ ಈ ಕೆಲಸವನ್ನು ಬೇರೆ ಸಂಸ್ಥೆಯವರಿಗೆ ವಹಿಸಲಾಗಿದೆ. ಈ ಡಿಸೆಂಬರ್ ಅಂತ್ಯಕ್ಕೆ ಅವರಿಗೆ ಡಿ.ಪಿ.ಆರ್., ಮಾಡಿಕೊಡಲಾಗುವುದು. ಈ ಬಗ್ಗೆ ನಾನು ಅರಣ್ಯ ಸಚಿವರಲ್ಲಿಯೂ ಸಹ ಮಾತನಾಡಿದ್ದೇನೆ. ಶಿರಾಡಿ ಘಾಟಿನ 2ನೇ ಫೇಸ್ ಬಗ್ಗೆ ಮೊನ್ನೆ ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ಪ್ರಶ್ನೆಯನ್ನು ಮಾಡಿದಾಗ ಲಘು ವಾಹನಗಳನ್ನೆಲ್ಲ ಈ ಭೈರಾಪುರ ರಸ್ತೆಯಲ್ಲಿ ಕಳುಹಿಸೋಣ ಎನ್ನುವ ಉತ್ತರ ಅವರಿಗೆ ನೀಡಿದ್ದೆನು. I will see that the road is made motorable and after the DP.R., we will take up the road.

ಶ್ರೀ ಎಂ.ಕೆ.ಪ್ರಾಣೇಶ್:– ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಅರಣ್ಯ ಇಲಾಖೆಯ ಅನುಮತಿಯನ್ನು ಏಕೆ ಕೇಳಬೇಕಾಗಿದೆ?

ಡಾ॥ಹೆಚ್.ಸಿ.ಮಹದೇವಪ್ಪ:– ಮಾನ್ಯ ಸಭಾಪತಿಯವರೇ, ಯಾರೇ ಆಗಲಿ, ಇದರ ಬಗ್ಗೆ ಡಿಸ್‌ಪ್ಯೂಟ್ ಮಾಡಬೇಕಾದ ಅಗತ್ಯವಿಲ್ಲ. ಇದು ಜಿಲ್ಲಾಪಂಚಾಯಿತಿಗೆ ಸೇರಿದ ರಸ್ತೆಯಾಗಿದ್ದು ನಮ್ಮ ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೆ ಈ ರಸ್ತೆ ಬರುವುದಿಲ್ಲ. ಸಾರ್ವಜನಿಕ ಹಿತದೃಷ್ಟಿಯಿಂದ ಧಾರ್ಮುಡಿ ಘಾಟ್–ಶಿರಾಡಿ ಘಾಟ್‌ಗೆ ಮಧ್ಯದಲ್ಲಿ ಪರ್ಯಾಯವಾಗಿ ಒಂದು ರಸ್ತೆಯನ್ನು ಮಾಡಿ, distance ಕಡಿಮೆ ಮಾಡಬೇಕೆಂದು ಸ್ವತಃ ನಾವೇ ನಮ್ಮ ಇಲಾಖೆಯ ಇಂಜಿನಿಯರ್‌ಗಳಿಗೆ ಸೂಚನೆಯನ್ನು ನೀಡುತ್ತೇನೆ.

ಶ್ರೀ ಎಂ.ಕೆ.ಪ್ರಾಣೇಶ್:– ಪರ್ಯಾಯ ರಸ್ತೆ ಎನ್ನುವುದಕ್ಕಿಂತ . . .

ಡಾ॥ಹೆಚ್.ಸಿ.ಮಹದೇವಪ್ಪ:– 'ಪರ್ಯಾಯ' ಎನ್ನುವುದಕ್ಕಿಂತ this road will be formed to reduce the distance. I have never said it is an alternative road. ಈಗ ವಾದ ಬೇಡ. ಸರ್ಕಾರಕ್ಕೆ in order to reduce the distance and also to decongest the traffic mobility ಈ ರಸ್ತೆಯನ್ನು ಮಾಡಬೇಕೆನ್ನುವ ಆಸಕ್ತಿ ಇದೆ.

ಶ್ರೀ ಎಂ.ಕೆ.ಪ್ರಾಣೇಶ್:– ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಪ್ರಾಮಾಣಿಕವಾಗಿ ಅಲ್ಲಿ ಒಬ್ಬರ ಖಾಸಗಿ ಜಾಗ ಬರುತ್ತದೆ ಅವರು ಕೂಡ ತಮ್ಮ ಜಾಗ ಬಿಟ್ಟು ಕೊಡುವುದಕ್ಕೆ ತಯಾರಿದ್ದಾರೆ ಎಂದು ಕೂಡ ತಿಳಿಸಿದ್ದಾರೆ. ಆದರೆ ಸರ್ಕಾರ ಏಕೆ ವಿಳಂಬ ಮಾಡುತ್ತಿದೆ ಎನ್ನುವುದು ನನ್ನ ಹಾಗೂ ಶ್ರೀಮತಿ ಮೋಟಮ್ಮನವರ ಪ್ರಶ್ನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಡಾ॥ಹೆಚ್.ಸಿ.ಮಹದೇವಪ್ಪ:– ಮಾನ್ಯ ಸಭಾಪತಿಯವರೇ, ನಮಗೆ ವಿಳಂಬ ಮಾಡಬೇಕೆನ್ನುವುದು ಇದ್ದಿದ್ದರೆ ಡಿ.ಪಿ.ಆರ್., ಮಾಡುವುದಕ್ಕೆ ನಾವು ಕೊಡುತ್ತಲೇ ಇರಲಿಲ್ಲ. ಮಾನ್ಯ ಸದಸ್ಯರು ಕೇಳಿದಂತಹ ಪ್ರಶ್ನೆಗೆ "ಉದ್ಭವಿಸುವುದಿಲ್ಲ" ಎನ್ನುವ ಉತ್ತರವನ್ನು ಕೊಟ್ಟುಬಿಡುತ್ತಿದ್ದೆನು.

ಶ್ರೀ ಎಂ.ಕೆ.ಪ್ರಾಣೇಶ್:– ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಯವರು ಕೂಡ ಆ ಭಾಗಕ್ಕೆ ಬಂದು ಜಾಗವನ್ನು ನೋಡಿದ್ದಾರೆ.

ಡಾ॥ಹೆಚ್.ಸಿ.ಮಹಾದೇವಪ್ಪ:– ಮಾನ್ಯ ಸಭಾಪತಿಯವರೇ, the Government is very much sincere. ಹಿರಿಯ ಸದಸ್ಯರಾದ ಮೋಟಮ್ಮನವರು, ಮಾನ್ಯ ಪ್ರಾಣೇಶ್‌ರವರು ಕೂಡ ಈ ಬಗ್ಗೆ ನನಗೆ ಹೇಳಿದ್ದಾರೆ. ಮಾನ್ಯ ಅಂಗಯ್ಯನವರು ಕೂಡ ನನಗೆ ಹೇಳಿದ್ದಾರೆ. ಆ ಭಾಗದಲ್ಲಿರುವ ಎಲ್ಲಾ ಪಕ್ಷಗಳ ಶಾಸಕರುಗಳು ಬಂದು ಇದು ಬಹಳ ಮುಖ್ಯವಾದುದು ಎನ್ನುವುದನ್ನು ನನಗೆ ಹೇಳಿದ್ದಾರೆ. ಶ್ರೀಮತಿ ಮೋಟಮ್ಮನವರು ಸಹ ನನ್ನನ್ನು 5–6 ಸಲ ಖುದ್ದು ಭೇಟಿ ಮಾಡಿ, ಇದನ್ನು ಮಾಡಬೇಕೆಂದು ಹೇಳಿದ್ದಾರೆ. ಡಿ.ಪಿ.ಆರ್., ಆದ ಮೇಲೆ we will take up the road. The question of saying 'no' will not arise.

ಶ್ರೀ ಎಂ.ಕೆ.ಪ್ರಾಣೇಶ್:– ಈ ರಸ್ತೆಯ ಸರ್ವೇ ಕಾರ್ಯವನ್ನು ಮೆ:ಫಿಕ್ಸೆಲ್ ಸಾಫ್ಟ್ ಟೆಕ್ ಪ್ರೈವೇಟ್ ಲಿಮಿಟೆಡ್ ಎನ್ನುವ ಒಂದು ಸಾಫ್ಟ್‌ವೇರ್ ಕಂಪನಿಗೆ ವಹಿಸಿದ್ದಾರೆ.

ಕ್ಯಾಪ್ಟನ್ ಗಣೇಶ್ ಕಾರ್ಣಿಕ್:– ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಾಣೇಶ್‌ರವರು ತಿಳಿಸಿರುವಂತೆ ಈ ರಸ್ತೆಯ ಸರ್ವೇ ಕಾರ್ಯವನ್ನು ಮೆ:ಫಿಕ್ಸೆಲ್ ಸಾಫ್ಟ್ ಟೆಕ್ ಪ್ರೈವೇಟ್ ಲಿಮಿಟೆಡ್ ಎನ್ನುವ ಒಂದು ಸಾಫ್ಟ್‌ವೇರ್ ಕಂಪನಿಗೆ ಈಗಾಗಲೇ ವಹಿಸಿದ್ದಾರೆ.

ಡಾ॥ಹೆಚ್.ಸಿ.ಮಹದೇವಪ್ಪ:– ಮಾನ್ಯ ಗಣೇಶ್ ಕಾರ್ಣಿಕ್‌ರವರೇ, I don't know and you don't know, who they are. However, they are on the job.

ಸಭಾಪತಿಯವರು:– ಅಲ್ಲಿಗೆ ಮುಗಿಯಿತು, ಸಾಕು ಬಿಡಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಡಾ॥ಹೆಚ್.ಸಿ.ಮಹಾದೇವಪ್ಪ:- ಮಾನ್ಯ ಸಭಾಪತಿಯವರೇ, ಎಷ್ಟೋ ವರ್ಷಗಳಿಂದ ಇದು ನೆನಗುದಿಗೆ ಬಿದ್ದಿದೆ. ನಾನು ಅಧಿಕಾರಕ್ಕೆ ಬಂದ ಮೇಲೆ I have applied my mind to see that the road should be taken up under the P.W.D., When I have said that the road will be developed, where is the question of argument?

ಶ್ರೀ ಎಂ.ಕೆ.ಪ್ರಾಣೇಶ್:- ಈ ಇದಕ್ಕೆ ಒತ್ತಡ ಹಾಕಿ, ಕೆಲಸವನ್ನು speedup ಮಾಡಿಸಿ.

ಡಾ॥ ಹೆಚ್.ಸಿ.ಮಹದೇವಪ್ಪ:- ಮಾನ್ಯ ಸಭಾಪತಿಯವರೇ, definitely D.P.R., ಬಂದ ತಕ್ಷಣ ಮಾಡಿಸುತ್ತೇನೆ.

ಪ್ರಶ್ನೆ ಸಂಖ್ಯೆ 4385
(ಉತ್ತರವನ್ನು ಲಗತ್ತಿಸಲಾಗಿದೆ)

ಶ್ರೀಮತಿ ವೀಣಾ ಅಚ್ಚಯ್ಯ:- ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಕೊಡಗು ಜಿಲ್ಲೆಯ ಭಗಂಡೇಶ್ವರ ಮತ್ತು ತಲಕಾವೇರಿ ದೇವಸ್ಥಾನವನ್ನು ಪ್ರವಾಸೋದ್ಯಮ ಇಲಾಖೆಗೆ ವಹಿಸದೇ ಇರುವ ಸರ್ಕಾರದ ನಿರ್ಧಾರವನ್ನು ನಾನು ಕೊಡಗಿನ ಜನತೆಯ ಪರವಾಗಿ ಸ್ವಾಗತಿಸುತ್ತೇನೆ. ಅದೇ ರೀತಿ ನಮ್ಮ ಮುಜರಾಯಿ ಸಚಿವರಿಗೂ ಸಹ ನಾನು ನನ್ನ ಧನ್ಯವಾದಗಳನ್ನು ಸಲ್ಲಿಸುತ್ತಿದ್ದೇನೆ. ಈ ಎರಡೂ ದೇವಸ್ಥಾನಗಳು ಸಹ ಬಹಳ ಧಾರ್ಮಿಕ ದೇವಸ್ಥಾನಗಳಾಗಿದ್ದು, ಶ್ರದ್ಧಾ ಭಕ್ತಿಯಿಂದ ಈ ದೇವಸ್ಥಾನಗಳನ್ನು ಮುಜರಾಯಿ ಇಲಾಖೆಯಲ್ಲಿಯೇ ಉಳಿಸಿಕೊಳ್ಳಬೇಕೆನ್ನುವುದು ನಮ್ಮ ಕೊಡಗಿನ ಜನರ ಆಶಯವಾಗಿತ್ತು.

ಮಾನ್ಯ ಮುಜರಾಯಿ ಸಚಿವರಲ್ಲಿ ನಾನು ಒಂದೆರಡು ವಿಚಾರಗಳನ್ನು ಪ್ರಸ್ತಾಪಿಸಬಯಸುತ್ತೇನೆ. ಕಳೆದ ಎರಡು ವರ್ಷಗಳಿಂದ ತಲಕಾವೇರಿ ದೇವಸ್ಥಾನಕ್ಕೆ ಒಂದು ವ್ಯವಸ್ಥಾಪನಾ ಸಮಿತಿಯನ್ನು ರಚನೆ ಮಾಡಿರುವುದಿಲ್ಲ. ಕೊಡಗಿನ ಇಗ್ಗುತಪ್ಪ ಹಾಗೂ ಓಂಕಾರೇಶ್ವರ ದೇವಸ್ಥಾನಗಳಿಗೂ ಸಹ ವ್ಯವಸ್ಥಾಪನಾ ಸಮಿತಿ ಇರುವುದಿಲ್ಲ. ಆದ್ದರಿಂದ ಆದಷ್ಟು ಬೇಗ ಈ ದೇವಸ್ಥಾನಗಳಿಗೆ ಮಾನ್ಯ ಸಚಿವರು ವ್ಯವಸ್ಥಾಪನಾ ಸಮಿತಿಗಳನ್ನು ನೇಮಕ ಮಾಡಬೇಕೆಂದು ಒತ್ತಾಯಿಸುತ್ತೇನೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀಮತಿ ವೀಣಾ ಅಚ್ಚಯ್ಯ(ಮುಂದು):–

ಕಳೆದ ಕೆಲವು ದಿನಗಳ ಹಿಂದೆ ಆಂಧ್ರಪ್ರದೇಶದಿಂದ ಎರಡರಿಂದ ಮೂರು ಸಾವಿರ ಜನರು ತಲಕಾವೇರಿಗೆ ಬಂದಿದ್ದಾರೆ. ಇದರ ಬಗ್ಗೆ ಕೊಡಗಿನ ಜನತೆಗೆ ಮತ್ತು ಜಿಲ್ಲಾಡಳಿತದವರಿಗೂ ಗೊತ್ತಿರಲಿಲ್ಲ. ಏಕಾಏಕಿ ಬಂದು ಅಲ್ಲಿನ ಪಾವಿತ್ರತ್ಯೆಯನ್ನು ಹಾಳು ಮಾಡಿದ್ದಾರೆ. ಅದರ ಸಲುವಾಗಿ ನಾವು ಜನಪ್ರತಿನಿಧಿಗಳು ಸೇರಿ ಒಂದು ಸಭೆಯನ್ನು ಮಾಡಿ ಖಂಡಿಸಿದ್ದೇವೆ. ಅಲ್ಲಿ ಏನು ಆಗಿದೆ ಎಂದರೆ, ತಲಕಾವೇರಿಯಲ್ಲಿ ಕೇಶ ಮುಂಡನ ಮಾಡಲು ಮತ್ತು ಪಿಂಡಪ್ರಧಾನ ಮಾಡಲು ಅದಕ್ಕೆ ಆದ ಒಂದು ಸ್ಥಳವಿದೆ. ಆದರೆ ಆಂಧ್ರದಿಂದ ಬಂದವರು ತಮ್ಮ ಅರ್ಚಕರನ್ನು ಕರೆದುಕೊಂಡು ಬಂದು ಅಲ್ಲಿ ಬೇರೆ–ಬೇರೆ ಜಾಗದಲ್ಲಿ ವಿಭಿನ್ನವಾಗಿ ಪದ್ಧತಿಯನ್ನು ಮಾಡಿ ಹೋಗಿದ್ದಾರೆ. ಇದರ ಬಗ್ಗೆ ನಮ್ಮ ಅರ್ಚಕರಿಗೂ ತಿಳಿದಿರುವುದಿಲ್ಲ. ಇದನ್ನು ನಾವು ಕೊಡಗಿನ ಜನರೆಲ್ಲರೂ ಖಂಡನೆ ಮಾಡಿದ್ದೇವೆ. ಮುಂದಿನ ದಿನಗಳಲ್ಲಿ ಈ ರೀತಿಯಾಗದಂತೆ ಕೊಡಗಿನ ತಲಕಾವೇರಿ ಪಾವಿತ್ರತ್ಯೆಗೆ ಧಕ್ಕೆಯಾಗದ ರೀತಿಯಲ್ಲಿ ಸರ್ಕಾರ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು. ಅಲ್ಲಿ ನಿಯಂತ್ರಣ ಮಾಡಲು ಹೋಂ ಗಾರ್ಡ್ಸ್ ಇದ್ದಾರೆ. ಆದರೆ ಅವರ ಸಂಖ್ಯೆ ಬಹಳ ಕಡಿಮೆ ಇದೆ. ಅಲ್ಲಿ ಸಿಬ್ಬಂದಿ ಕೊರತೆ ಇದೆ. ಇನ್ನು ಹೆಚ್ಚಿನ ಹೋಂ ಗಾರ್ಡ್‌ಗಳನ್ನು ಅಲ್ಲಿಗೆ ನಿಯೋಜನೆ ಮಾಡಬೇಕು. ಇದಕ್ಕೆಲ್ಲಾ ಪ್ರತಿಯಾಗಿ ವ್ಯವಸ್ಥಾಪನಾ ಸಮಿತಿಯನ್ನು ಆದಷ್ಟು ಶೀಘ್ರವಾಗಿ ನೇಮಕ ಮಾಡಿ, ಅಲ್ಲಿಯ ಪಾವಿತ್ರತ್ಯೆಯನ್ನು ಕಾಪಾಡಬೇಕು. ಆ ದೇವಸ್ಥಾನದ ವಿಚಾರವಾಗಿ ಮಾನ್ಯ ಮಂತ್ರಿಗಳು ಮತ್ತು ಸರ್ಕಾರ ಇನ್ನಷ್ಟು ಮುತುವರ್ಜಿ ವಹಿಸಿ ಅದನ್ನು ಉತ್ತಮವಾದ ಧಾರ್ಮಿಕ ಕ್ಷೇತ್ರವಾಗಿ ಉಳಿಸಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಸಭಾಪತಿಯವರು:– ಯಾರದೊ ಫೋನ್ ರಿಂಗ್ ಆಗುತ್ತಿದೆ. ಬಂದ್ ಮಾಡಿ, ಇಲ್ಲದಿದ್ದರೆ ನಾನು ತೆಗೆದುಕೊಂಡರೆ ಅದನ್ನು ವಾಪಸ್ ಕೊಡುವುದಿಲ್ಲ.

ಶ್ರೀ ರುದ್ರಪ್ಪ. ಮಾನಪ್ಪ. ಲಮಾಣಿ:– ಮಾನ್ಯ ಸಭಾಪತಿಗಳೆ, ತಲಕಾವೇರಿ ಬಹಳ ಪವಿತ್ರವಾದ ಸ್ಥಳ. ಮಾನ್ಯ ಸದಸ್ಯರು ಇದಕ್ಕೆ ಸಂಬಂಧಪಟ್ಟ ಹಾಗೆ ಎರಡು–ಮೂರು ಪ್ರಶ್ನೆಗಳನ್ನು ಕೇಳಿದ್ದಾರೆ. ಮೊದಲನೆಯದಾಗಿ, ಇದನ್ನು ಪ್ರವಾಸೋದ್ಯಮ ಇಲಾಖೆಯವರು ತೆಗೆದುಕೊಳ್ಳುತ್ತಾರೆ ಎನ್ನುವ ಭಯವಿತ್ತು, ಆದರೆ ಪ್ರವಾಸೋದ್ಯಮ ಇಲಾಖೆಯವರು ತೆಗೆದುಕೊಳ್ಳುವುದಿಲ್ಲ ಎಂದು ಹೇಳಿರುವುದನ್ನು ಸ್ವಾಗತಿಸಿದ್ದಾರೆ. ಎರಡು ದೇವಸ್ಥಾನಗಳಿಗೆ ಸಮಿತಿಯನ್ನು ಮಾಡಬೇಕು ಎಂದು ಹೇಳಿದ್ದಾರೆ. ನಾನು ತಕ್ಷಣ ಈ ವಿಚಾರವನ್ನು ರಾಜ್ಯ ಧಾರ್ಮಿಕ ಪರಿಷತ್ತಿನ ಮುಂದೆ ಇಟ್ಟು ಒಂದು ತಿಂಗಳಲ್ಲಿ ಸಮಿತಿಗಳನ್ನು ರಚನೆ ಮಾಡುತ್ತೇನೆ. ಆಂಧ್ರಪ್ರದೇಶದಿಂದ ಸುಮಾರು ಜನರು ಏಕಾಏಕಿ ಬಂದು ನಮ್ಮ ಅರ್ಚಕರಿಗೂ ಗೊತ್ತಿಲ್ಲದ ಹಾಗೆ ಕೊಡಗಿನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜನರ ಭಾವನೆಗಳಿಗೆ ಧಕ್ಕೆ ಬರುವ ಹಾಗೆ ನಡೆದುಕೊಂಡಿರುವ ವಿಚಾರ ನನಗೆ ಗೊತ್ತಿರಲಿಲ್ಲ. ಇವತ್ತು ಮಾನ್ಯ ಸದಸ್ಯರು ಹೇಳಿದ್ದಾರೆ, ಇನ್ನು ಮುಂದೆ ಹೀಗೆ ಆಗದಂತೆ ಅಲ್ಲಿನ ಸ್ಥಳೀಯ ಅರ್ಚಕರಿಗೆ ಹೇಳಿ ಯಾವ ಪೂಜೆಯನ್ನು ಹೇಗೆ ಮಾಡಬೇಕು ಎನ್ನುವ ಬಗ್ಗೆ ವ್ಯವಸ್ಥೆಯನ್ನು ಮಾಡಿಸುತ್ತೇವೆ. ಅಲ್ಲಿ ಸಿಬ್ಬಂದಿಗಳ ಕೊರತೆ ಇದೆ ಎಂದು ಹೇಳಿದ್ದಾರೆ. ಆದಷ್ಟು ಬೇಗ ನಿವೃತ್ತ ಅಧಿಕಾರಿಗಳನ್ನು ಅಲ್ಲಿಗೆ ನೇಮಿಸಿ ಎಲ್ಲವನ್ನು ವ್ಯವಸ್ಥಿತವಾಗಿ ಮಾಡುತ್ತೇವೆ. ಮಾನ್ಯ ಸದಸ್ಯರ ಜೊತೆಗೆ ವೈಯಕ್ತಿಕವಾಗಿ ಚರ್ಚೆ ಮಾಡಿ ಇನ್ನು ಅಲ್ಲಿ ಏನೇನು ಬೇಕು ಅದನ್ನು ಮಾಡಿಕೊಡುತ್ತೇವೆ. ಅದಕ್ಕಾಗಿ ನಮ್ಮ ಹತ್ತಿರ ಹಣವು ಇದೆ. ಎಲ್ಲ ವ್ಯವಸ್ಥೆಯನ್ನು ಮಾಡಿಕೊಡುತ್ತೇವೆ.

ಶ್ರೀ ಎಂ.ಪಿ.ಸುನೀಲ್ ಸುಬ್ರಹ್ಮಣ್ಯ:– ಮಾನ್ಯ ಸಭಾಪತಿಗಳೆ, ಅಲ್ಲಿಗೆ ಪ್ರವಾಸಿಗರು ತುಂಬಾ ಜನ ಬರುತ್ತಿದ್ದಾರೆ. ಬಂದವರು ತಲಕಾವೇರಿಗೆ ಭೇಟಿ ಕೊಡುತ್ತಿದ್ದಾರೆ. ಅಲ್ಲಿಗೆ ಬಂದವರು ವಿಚಿತ್ರವಾದ ವಸ್ತ್ರಗಳನ್ನು ಧರಿಸಿಕೊಂಡು ಬರುತ್ತಿದ್ದಾರೆ. ಡ್ರೆಸ್ ಕೋಡ್ ಇಲ್ಲ. ಅಲ್ಲಿಯ ಆಡಳಿತ ಮಂಡಳಿ ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ. ಇಲಾಖೆಯಲ್ಲಿ ಕೆಲಸ ಮಾಡಲು ಸಿಬ್ಬಂದಿಗಳು ಇಲ್ಲ. ಆದ್ದರಿಂದ ಆದಷ್ಟು ಬೇಗ ಅಲ್ಲಿ ಸಿಬ್ಬಂದಿಗಳನ್ನು ಆದಷ್ಟು ಬೇಗ ನೇಮಕ ಮಾಡಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎ.ಮಂಜು:– ಮಾನ್ಯ ಸಭಾಪತಿಗಳೆ, ಕಾವೇರಿ ಪುಷ್ಕರ ಎಂದು 12 ವರ್ಷಗಳಿಗೆ ಒಮ್ಮೆ ಬರುತ್ತದೆ. ಆಗ ಕಾವೇರಿ ನದಿಯಲ್ಲಿ ಸ್ನಾನ ಮಾಡಿದರೆ ಒಳ್ಳೆಯದು ಎನ್ನುವ ಭಾವನೆ ಇರುವುದರಿಂದ ಜನರು ಆ ಸಮಯದಲ್ಲಿ ಕಾವೇರಿಯಲ್ಲಿ ಸ್ನಾನ ಮಾಡುತ್ತಾರೆ. ಇದು 12 ವರ್ಷಗಳಿಗೆ ಒಮ್ಮೆ ಎಲ್ಲಾ ನದಿಗಳು ಸೇರಿ ಬರುತ್ತವೆ, ಈ ಸಾರಿ ಕಾವೇರಿ ನದಿಗೆ ಬಂದಿದೆ ಎಂದು ಭಕ್ತಾಧಿಗಳು ಅಲ್ಲಿಗೆ ಬಂದಿದ್ದಾರೆ. ಪ್ರವಾಸಿ ತಾಣವಾಗಿ ಅಲ್ಲಿ ಚೆನ್ನಾಗಿದೆ. ಅದನ್ನು ಉಪಯೋಗಿಸಿಕೊಳ್ಳಲು ವ್ಯವಸ್ಥೆ ಮಾಡಲು ಆಗಲಿಲ್ಲ. ನನ್ನ ಕ್ಷೇತ್ರವಾದ ರಾಮಾಪುರದಲ್ಲಿಯು ಕಾವೇರಿ ಪುಷ್ಕರವನ್ನು ಮಾಡಿದ್ದೆವು. ಅಲ್ಲಿ ಸ್ನಾನ ಮಾಡಿದರೆ ಒಳ್ಳೆಯದು ಎಂದು ಹೆಚ್ಚಾಗಿ ಜನರು ಆಂಧ್ರಪ್ರದೇಶದಿಂದ ಬಂದಿದ್ದಾರೆ. ಇದರಲ್ಲಿ ತಪ್ಪೇನು ಇಲ್ಲ. ಡ್ರೆಸ್ ಕೋಡ್ ಬಗ್ಗೆ...

ಶ್ರೀ ಎಂ.ಪಿ.ಸುನೀಲ ಸುಬ್ರಹ್ಮಣ್ಯ:– ಬಂದವರು ಕೊಳದಲ್ಲಿ ಏನೇನು ಹಾಕಿದ್ದಾರೆ ಎನ್ನುವುದು ನಮಗೆ ಗೊತ್ತು. ಅವರು ನಮಗೆ ತಿಳಿಸಿ ಮಾಡಬೇಕಾಗಿತ್ತು. ಯಾವುದೇ ದೇವಸ್ಥಾನಕ್ಕೆ ಹೋದರು ಅಲ್ಲಿಯವರ ಅನುಮತಿಯನ್ನು ಪಡೆಯಬೇಕು. ಅನುಮತಿ ತೆಗೆದುಕೊಳ್ಳದೆ ಏಕಾಏಕಿ ಬಂದು ಆ ಕೊಳದಲ್ಲಿ ಏನೇನೊ ಹಾಕಿದರೆ ಏನು ಅದರ ಅರ್ಥ?

ಶ್ರೀ ಟಿ.ಎ.ಶರವಣ:– ಮಾನ್ಯ ಸಭಾಪತಿಗಳೆ, ಅಲ್ಲಿ ಯಾವುದೇ ವ್ಯವಸ್ಥೆಯನ್ನು ಮಾಡಿರುವುದಿಲ್ಲ. ಟಿ.ನರಸೀಪುರದಲ್ಲಿ ಯಾವ ರೀತಿ ಪರಿಸ್ಥಿತಿ ಇತ್ತು ಎನ್ನುವುದನ್ನು ನಾನು ನೋಡಿ ಬಂದಿದ್ದೇನೆ. ಹೆಣ್ಣುಮಕ್ಕಳು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಟ್ಟೆ ಬದಲಾವಣೆ ಮಾಡಿಕೊಳ್ಳಲು ಯಾವುದೆ ವ್ಯವಸ್ಥೆ ಇರಲಿಲ್ಲ. ಅಲ್ಲಿ ಎಲ್ಲ ವ್ಯವಸ್ಥೆ ಹದಗೆಟ್ಟಿದೆ. ಮಾನ್ಯ ಸಚಿವರಾದ ಮಹದೇವಪ್ಪನವರು ಹೋಗಿ ಅಲ್ಲಿಯ ಪರಿಸ್ಥಿತಿಯನ್ನು ನೋಡಬೇಕಾಗಿತ್ತು ಅಲ್ಲಿಯ ಪರಿಸ್ಥಿತಿಯನ್ನು.

ಡಾ: ಎಚ್.ಸಿ.ಮಹದೇವಪ್ಪ:– ಈ ಸದನ ಮುಗಿದ ತಕ್ಷಣ ಮಾನ್ಯ ಶರವಣರವರು ಟಿ.ನರಸೀಪುರಕ್ಕೆ ಹೋಗಿ ನೋಡಿಕೊಂಡು ಬಂದು ನನಗೆ ಹೇಳಲಿ.

ಶ್ರೀ ಎಂ.ಪಿ.ಸುನೀಲ ಸುಬ್ರಹ್ಮಣ್ಯ:– ಡ್ರೆಸ್ ಕೋಡ್ ಬಗ್ಗೆ ವ್ಯವಸ್ಥೆ ಮಾಡಬೇಕು.

ಸಭಾಪತಿಯವರು:– ಮಾಡುತ್ತಾರೆ ನೀವು ಕುಳಿತುಕೊಳ್ಳಿ.

ಪ್ರಶ್ನೆ ಸಂಖ್ಯೆ: 4540
(ಉತ್ತರವನ್ನು ಲಗತ್ತಿಸಲಾಗಿದೆ)

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:– ಮಾನ್ಯ ಸಭಾಪತಿಗಳೆ, ಉತ್ತರವನ್ನು ಒದಗಿಸಿದ್ದಾರೆ. ಪರವಾನಗಿಯ ಷರತ್ತನ್ನು ಮೀರಿ ರಸ್ತೆಯ ಗಡಿ ಅಂಚಿನಲ್ಲಿ ಕಟ್ಟಡವನ್ನು ಕಟ್ಟಿದಾಗ ಹೆದ್ದಾರಿ ಅಧಿನಿಯಮದ ಪ್ರಕಾರ ಕಾನೂನು ರೀತಿಯಾಗಿ ನೋಟಿಸ್ ಜಾರಿ ಮಾಡಿ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಎರಡನೆಯದಾಗಿ, ರಸ್ತೆ ಅತಿಕ್ರಮಣ ತಡೆಗಟ್ಟುವಲ್ಲಿ ವಿಫಲರಾಗುವ ಇಂಜಿನಿಯರ್‌ಗಳ ವಿರುದ್ಧ ಕರ್ತವ್ಯಚ್ಯುತಿ ಎಂದು ಪರಿಗಣಿಸಿ ಅಂತಹ ಪ್ರಕರಣಗಳಲ್ಲಿ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು ಎಂದು ಉತ್ತರ ಕೊಟ್ಟಿದ್ದಾರೆ. ಇದು ಅಧಿಕಾರಿಗಳಿಗೆ ಎಚ್ಚರಿಕೆಯನ್ನು ಕೊಡುವಂತಹ ಕೆಲಸವಾಗಿದೆ. ಆದರೆ ನನ್ನ ಪ್ರಶ್ನೆ ಎಂದರೆ, ಈ ನೋಟಿಸ್‌ನ್ನು ಕೊಟ್ಟ ತಕ್ಷಣ ಸಮಸ್ಯೆ ಪರಿಹಾರವಾಗುತ್ತದೆಯೇ? ಅದನ್ನು ತೆರವುಗೊಳಿಸಬೇಕಾಗುತ್ತದೆ ಅಥವಾ ಅದನ್ನು ನಿಯಂತ್ರಿಸಬೇಕಾಗುತ್ತದೆ. ಇಲ್ಲದೆ ಇದ್ದರೆ ನೋಟಿಸ್ ಕೇವಲ ನೋಟಿಸ್ ಆಗಿ ಉಳಿಯುತ್ತದೆ. ಈ ರೀತಿ ಅತಿಕ್ರಮಣ ಮಾಡಿ ಲೋಕೋಪಯೋಗಿ ಇಲಾಖೆಯ ಮಾರ್ಜಿನ್‌ನಲ್ಲಿ ಕಟ್ಟಡಗಳನ್ನು ಕಟ್ಟುತ್ತಲೆ ಇರುತ್ತಾರೆ. ಇದನ್ನು ಮಾನ್ಯ ಸದಸ್ಯರು ಗಮನಿಸಬೇಕಾಗುತ್ತದೆ. ಎರಡನೆಯದಾಗಿ, ಲೋಕೋಪಯೋಗಿ ಇಲಾಖೆಯ ಮಾರ್ಜಿನ್ ಎನ್ನುವುದೆಲ್ಲವು ತಮ್ಮ ಸ್ವತ್ತು. ಆದರೆ ಅದು ಖಾಸಗಿ ಸ್ವತ್ತು ಸಹ ಆಗಿರುತ್ತದೆ. ಅವರಿಗೆ ಕಟ್ಟಡ ಕಟ್ಟಲು ಬಿಡುವುದಿಲ್ಲ ಪರಿಹಾರವನ್ನು ಕೊಡುವುದಿಲ್ಲ. ಅಭಿವೃದ್ಧಿ ಮಾಡಲು ಬಿಡುವುದಿಲ್ಲ ಪರಿಹಾರವನ್ನು ಕೊಡುವುದಿಲ್ಲ. ಅದಕ್ಕೆ ಏನಾದರೂ ಪರಿಹಾರವನ್ನು ಕೊಡಬೇಕಾಗುತ್ತದೆ. ಅದರ ಬಗ್ಗೆ ತಮ್ಮ ಚಿಂತನೆ ಏನು ಎನ್ನುವುದನ್ನು ಹೇಳಿ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಡಾ: ಎಚ್.ಸಿ.ಮಹದೇವಪ್ಪ:– ಮಾನ್ಯ ಸಭಾಪತಿಗಳಗೆ, ಗೌರವಾನ್ವಿತ ಸದಸ್ಯರಿಗೆ ಸಮರ್ಪಕವಾದ ಉತ್ತರವನ್ನು ಕೊಟ್ಟಿದ್ದೇನೆ. ಗ್ರಾಮ ಪಂಚಾಯಿತಿಗಳು ಕಟ್ಟಡ ಕಟ್ಟಲು ಪರವಾನಿಗೆ ನೀಡುವಾಗ ರಸ್ತೆ ಅಂಚಿನಲ್ಲಿ ಕಟ್ಟಬಾರದೆನ್ನುವ ಷರತ್ತು ವಿಧಿಸಿದರೂ ರಸ್ತೆಯ ಮಾರ್ಜಿನ್‌ನಲ್ಲಿ ಕಟ್ಟಡವನ್ನು ಕಟ್ಟುತ್ತಿರುವವರಿಗೆ ನೋಟಿಸ್ ಕೊಡಬೇಕು, ಇದನ್ನು ನೋಡಿಕೊಂಡು ನಿರ್ಲಿಪ್ತರಾಗಿರುವ ಅಧಿಕಾರಿಗಳ ಮೇಲೆ ಕರ್ತವ್ಯ ಚ್ಯುತಿ ಎಂದು ಪರಿಗಣಿಸಿ ಕ್ರಮ ತೆಗೆದುಕೊಳ್ಳಬೇಕು ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅವರ ಸಲಹೆ ಮೇರೆಗೆ ನಾನು ನಮ್ಮ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇನೆ. Eviction ಮಾಡುವುದು, ಲೈಸೆನ್ಸ್ ಕೊಡುವುದು ಪಂಚಾಯಿತಿ ಮತ್ತು ಕಂದಾಯ ಇಲಾಖೆಗಳು. ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟ ಹಾಗೆ ಪಂಚಾಯಿತಿ ವ್ಯಾಪ್ತಿಯಲ್ಲಿ ಟೌನ್ ಪಂಚಾಯಿತಿ 6 meters, 12 meters distance ನಲ್ಲಿ ಕಟ್ಟಬೇಕು ಎಂದು ಇದೆ. ಇವರು ೨೦ ಅಡಿ, ೩೦ ಅಡಿಯಲ್ಲಿ ಸಣ್ಣ ಸಣ್ಣ ಕಟ್ಟಡಗಳನ್ನು ಕಟ್ಟಿಕೊಂಡಿದ್ದಾರೆ ಇಂತಹ ಕಟ್ಟಡಗಳನ್ನು ತೆಗೆದು ಹಾಕಬೇಕೇ ಎಂಬ ಬಗ್ಗೆ ಮಾನವೀಯತೆಯ ದೃಷ್ಟಿಯಿಂದ ಪರಿಶೀಲಿಸುತ್ತೇವೆ. ಈಗ ಕಟ್ಟಿರುವುದನ್ನು ತೆಗೆದು ಹಾಕಿದರೆ crores of rupees compensation ಕೊಡಬೇಕು according to the new Land Reforms Act ಎಂದು ಇದೆ. ಇದೆಲ್ಲವನ್ನು ಗಮನದಲ್ಲಿಟ್ಟುಕೊಂಡು ಬಡ ಜನರಿಗೆ ಅನಾನುಕೂಲವಾಗುವಂತೆ ರಸ್ತೆ ಅಸ್ತಿತ್ವದಲ್ಲಿರಬೇಕು. ಅದನ್ನು carefully watch ಮಾಡಿ, Rural Development and Panchayath Raj Department, Revenue Department and Public Works Department ಇವರುಗಳು collective ಆಗಿ ಸೇರಿ ಅದನ್ನು ಸರಿಯಾದ ರೀತಿಯಲ್ಲಿ ಮಾಡಲು ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:– ಮಾನ್ಯ ಸಭಾಪತಿಗಳೆ, ಲಿಖಿತವಾಗಿ ಕೊಟ್ಟಿರುವ ಉತ್ತರದಷ್ಟು ಸ್ಪಷ್ಟವಾಗಿ ಉತ್ತರವನ್ನು ಅವರು ಹೇಳಲಿಲ್ಲ.ನನ್ನ ಪ್ರಶ್ನೆ ಎಂದರೆ, ಲೋಕೋಪಯೋಗಿ ಇಲಾಖೆಯ ರಸ್ತೆಗಳು ಹಾಯ್ದು ಹೋಗುವ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಹೊಸ ಕಟ್ಟಡಗಳನ್ನು ನಿರ್ಮಾಣ ಮಾಡುವಂತಹ ಸಂದರ್ಭದಲ್ಲಿ ಪರವಾನಿಗೆ ಕೊಡುವಾಗ ಲೋಕೋಪಯೋಗಿ ಇಲಾಖೆಯವರ ಅಭಿಪ್ರಾಯವನ್ನು ಕೇಳುತ್ತಾರೆ. ಲೋಕೋಪಯೋಗಿ ಇಲಾಖೆಯವರು ಕೊಟ್ಟಿರುವ ಅಭಿಪ್ರಾಯವನ್ನು ಕಂಡೀಶನ್ ಆಗಿ ಪರಿಗಣಿಸಿ ಅದರ ಮೇಲೆ ಪರವಾನಿಗೆಯನ್ನು ಕೊಡುತ್ತಾರೆ. ಆಗ ರಸ್ತೆ ಮಾರ್ಜಿನ್‌ನಲ್ಲಿ ಕಟ್ಟಡ ಕಟ್ಟುವಂತಹ ಸಂದರ್ಭದಲ್ಲಿ ಅದರ ಹೊಣೆ ನಿರ್ವಹಣೆ ಮಾಡುವ ಇಲಾಖೆಯ ಜವಾಬ್ದಾರಿನಾ ಅಥವಾ ಗ್ರಾಮ ಪಂಚಾಯಿತಿಗಳ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಜವಾಬ್ದಾರಿಯೇ ಎನ್ನುವುದು ನನ್ನ ಪ್ರಶ್ನೆ. ನನಗೆ ಅನ್ನಿಸಿದ ಮಟ್ಟಿಗೆ ನಿರ್ವಹಣೆ ಮಾಡುವಂತಹ ಇಲಾಖೆಯೇ ಅದರ ಹೊಣೆಯನ್ನು ಹೊರಬೇಕಾಗುತ್ತದೆ.

ಡಾ: ಎಚ್.ಸಿ.ಮಹದೇವಪ್ಪ:– ಮಾನ್ಯ ಸಭಾಪತಿಗಳೆ, ಪಂಚಾಯಿತಿಯವರು ಲೈಸೆನ್ಸ್ ಕೊಡುವಾಗ ಲೋಕೋಪಯೋಗಿ ಇಲಾಖೆಯವರನ್ನು ಕೇಳಬೇಕು. ಅದನ್ನು ಕೊಡಬೇಕೊ ಬೇಡವೊ ಎನ್ನುವುದನ್ನು ಲೋಕೋಪಯೋಗಿ ಇಲಾಖೆಯವರು ಹೇಳಬೇಕು. ಬಹುತೇಕ ಸಂದರ್ಭಗಳಲ್ಲಿ ಕೇಳದೆ ಗ್ರಾಮಪಂಚಾಯಿತಿಯವರು ಲೈಸೆನ್ಸ್ ಕೊಟ್ಟು ಬಿಟ್ಟಿರುತ್ತಾರೆ. ನಿಮ್ಮ ಎರಡು–ಮೂರು ತಾಲ್ಲೂಕುಗಳಲ್ಲಿ ನೋಟಿಸ್ ಕೊಟ್ಟಿದ್ದೇವೆ. Sometimes, PWD notice ಮನೆ ಕಟ್ಟುವವರಿಗೆ ಆಧಾರವಾದ ಹಾಗೆ ಆಗುತ್ತದೆ, ಅದನ್ನು ಇಟ್ಟುಕೊಂಡು ಸ್ಟೇ ತೆಗೆದುಕೊಂಡು ಬಂದು ಮನೆ ಕಟ್ಟಿಬಿಡುತ್ತಾರೆ.

(ಮುಂದು)

(1114)21–11–2017(01–00)ಬಿಎಸ್‌ಡಿ/ಎಂಡಿ

ಡಾಃ ಹೆಚ್.ಸಿ. ಮಹದೇವಪ್ಪ (ಮುಂದು_

ಈ ರೀತಿ 20 ಥ30, 15 ಥ30 ವಿಸ್ತೀರ್ಣದ ಮನೆಗಳನ್ನು ಕಟ್ಟುವವರು ಇರುತ್ತಾರೆ, ಅವರ ಅಸ್ತಿತ್ವ ಮತ್ತು infrastructure, road safety ಗಳೆಲ್ಲವನ್ನೂ ನೋಡಿ ಎಲ್ಲರನ್ನು ಸೇರಿಸಿ ಆಯಾ ಹಂತದಲ್ಲಿ ಜವಾಬ್ದಾರಿ ವಹಿಸಿಕೊಂಡು ಕೆಲಸ ಮಾಡುವುದಕ್ಕೆ ಸೂಚನೆ ಕೊಡುತ್ತೇನೆ ಎಂದು ಸೂಚ್ಯವಾಗಿ ಮಾನ್ಯ ಸದಸ್ಯರಿಗೆ ತಿಳಿಸಿದ್ದೇನೆ.

ಪ್ರಶ್ನೆ ಸಂಖ್ಯೆಃ 4512

ಉತ್ತರದ ಪ್ರತಿ ಲಗತ್ತಿಸಿದೆ

ಡಾಃ ಜಯಮಾಲ ರಾಮಚಂದ್ರಃ– ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಹಳ ಒಳ್ಳೆಯ ಉತ್ತರವನ್ನು ಒದಗಿಸಿದ್ದು, ನನ್ನ ಎರಡು ಪ್ರಶ್ನೆಗಳನ್ನು ಮಾನ್ಯ ಸಚಿವರಿಗೆ ಕೇಳುವುದಕ್ಕೆ ಬಯಸುತ್ತೇನೆ. ರೈತರು ಹೊಲದಿಂದ ಬೆಳೆದ ಬೆಳೆಗಳನ್ನು ಗ್ರಾಹಕರಿಗೆ ತಲುಪಿಸುವಾಗ 40 ಪರ್ಸೆಂಟ್ ನಷ್ಟವಾಗುತ್ತದೆ. ಇವತ್ತಿನ ಬೆಲೆ ನಾಳೆ ಇರುವುದಿಲ್ಲ. ಇವತ್ತು ಟೊಮೋಟೋ ಬೆಲೆ ಪ್ರತಿ ಕೆ.ಜಿ. ಗೆ ರೂ. 2 ಇದ್ದರೆ ನಾಳೆ ರೂ. 70 ಗಳಿಗೆ ಮಾರುತ್ತಾರೆ. ಇಂತಹ ಕೃತಕ ಅಭಾವಗಳನ್ನು ಮಧ್ಯವರ್ತಿಗಳು ಸೃಷ್ಟಿಸಿ ರೈತರಿಗೆ ಅನ್ಯಾಯ ಮಾಡುತ್ತಿದ್ದಾರೆ. ಇದನ್ನು ಹೇಗೆ ತಪ್ಪಿಸುತ್ತಾರೆ ಎಂದು ಕೇಳಬಯಸುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇನ್ನು ಎರಡನೆಯದಾಗಿ, ಕರ್ನಾಟಕದಲ್ಲಿ Cold Storages ಹೆಚ್ಚು ಮಾಡಬೇಕೆಂಬ ಉದ್ದೇಶದಿಂದ ಅದರ ವಿವರಗಳನ್ನು ಕೇಳಿದ್ದೇನೆ. ಬಹಳ ಕಡಿಮೆ Cold Storages ಕರ್ನಾಟಕದಲ್ಲಿ ಇವೆ. ಪ್ರಪಂಚದಲ್ಲಿ ಭಾರತ ಅತಿ ಹೆಚ್ಚು ಹಣ್ಣುಗಳನ್ನು ಉತ್ಪನ್ನ ಮಾಡುವ ದೇಶವಾಗಿದೆ. ಅದೇರೀತಿ ತರಕಾರಿ ಬೆಳೆಯುವುದರಲ್ಲಿ ಪ್ರಪಂಚದಲ್ಲಿಯೇ ಎರಡನೆಯ ಸ್ಥಾನವನ್ನು ಪಡೆದಿದ್ದೇವೆ. ಇಂತಹ ಸಂದರ್ಭದಲ್ಲಿ ನಮಗೆ ಹೆಚ್ಚೆಚ್ಚು Cold Storages ಅವಶ್ಯಕತೆ ಇದೆ. ಅಂದರೆ 30 ಜಿಲ್ಲೆಗಳಲ್ಲಿ 176 ಮತ್ತು 49 ತಾಲ್ಲೂಕುಗಳಲ್ಲಿ ಇದನ್ನು ಹೆಚ್ಚು ಮಾಡುವ Cold Storages ನಲ್ಲಿ ಅವಶ್ಯಕತೆ ಇದೆ. ಅಡಿಕೆ ಮಂಡಿಗಳಲ್ಲಿ ಅಡಿಕೆಯನ್ನು ಇಟ್ಟುಕೊಳ್ಳುವ ಹಾಗೆ raw vegetables ನ್ನು Cold Storages ನಲ್ಲಿ ಇಟ್ಟುಕೊಂಡು ಬೆಲೆ ಸಿಕ್ಕಾಗ ಮಾರಾಟ ಮಾಡಿದರೆ ರೈತರಿಗೆ ಅನುಕೂಲವಾಗುತ್ತದೆ. ಇದರಿಂದ ತರಕಾರಿಗಳ ಬೆಲೆಗಳು ಏರುಪೇರಾಗದೇ, ಮಧ್ಯವರ್ತಿಗಳನ್ನು ನಿಯಂತ್ರಣಕ್ಕೆ ತರಬಹುದಾಗಿದೆ. ಇದರ ಬಗ್ಗೆ ಯಾವ ಕ್ರಮ ಕೈಗೊಳ್ಳುತ್ತಾರೆಂದು ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಜಯಮಾಲಾರವರ ಪ್ರಶ್ನೆಗೆ ಉತ್ತರವನ್ನು ಒದಗಿಸಿದ್ದೇನೆ. ಅವರ ಮುಖ್ಯ ಪ್ರಶ್ನೆ Cold Storages ಬಗ್ಗೆ ಇದ್ದು ನಮ್ಮ ಇಲಾಖೆಯಿಂದ ಸಾಕಷ್ಟು ಯೋಜನೆಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅನುದಾನದಲ್ಲಿ ಪ್ರಾರಂಭ ಮಾಡಿದ್ದೇವೆ. ಅದರಲ್ಲಿ ಎಪಿಎಂಸಿ ಅಥವಾ ತೋಟಗಾರಿಕೆ ಇಲಾಖೆಯಿಂದ ಸಾಕಷ್ಟು Cold Storages ಕೊಡುತ್ತಿದ್ದೇವೆ. ಮುಖ್ಯವಾಗಿ Cold Storages ಗೆ ಸಂಬಂಧಪಟ್ಟಂತೆ 38 ಸಾವಿರ ಮೆಟ್ರಿಕ್ ಟನ್‌ಗಳಷ್ಟು ಗೋದಾಮುಗಳಲ್ಲಿ ಸಂಗ್ರಹಿಸಲು ಅಂದರೆ ಅದು Warehousing Corporation Godown ಇರಬಹುದು, ನಮ್ಮ ಇಲಾಖೆಯ ಎಪಿಎಂಸಿ ಜಾಗದ ಗೋದಾಮುಗಳಲ್ಲಿ ಇರಬಹುದು, PPA (Power Purchase Agreement) Model ಅಡಿಯಲ್ಲಿ ಒಟ್ಟು 38 ಸಾವಿರ ಮೆಟ್ರಿಕ್ ಟನ್‌ಗಳಷ್ಟು ಸಂಗ್ರಹಿಸಲು ಮೊನ್ನೆ ಸಚಿವ ಸಂಪುಟದ ಅನುಮೋದನೆ ಸಿಕ್ಕಿದೆ. ಆದಷ್ಟು ಬೇಗ ಟೆಂಡರ್ ಪ್ರಕ್ರಿಯೆ ಪ್ರಾರಂಭ ಮಾಡಿ ಎಲ್ಲಾ ಕಡೆ Cold Storages ವ್ಯವಸ್ಥೆ ಮಾಡಲು ಸರ್ಕಾರ ತಯಾರಿದೆ.

ಪ್ರಶ್ನೆ ಸಂಖ್ಯೆ: 4396

ಉತ್ತರದ ಪ್ರತಿ ಲಗತ್ತಿಸಿದೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಶ್ರೀ ಎನ್. ಅಪ್ಪಾಜಿಗೌಡಃ– ಮಾನ್ಯ ಸಭಾಪತಿಯವರೇ, ಮದ್ದೂರು ತಾಲ್ಲೂಕು ಕೊಪ್ಪ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿರುವ ಸದಸ್ಯರ ಸಂಖ್ಯೆ ಎಷ್ಟು ಮತ್ತು ಇತ್ಯಾದಿ ಪ್ರಶ್ನೆಗಳಿಗೆ ಮಾಹಿತಿಯನ್ನು ಕೊಟ್ಟಿದ್ದಾರೆ. ಎರಡನೆಯದಾಗಿ ಸದಸ್ಯರ ಷೇರು ಮೊತ್ತವನ್ನು ಅವರ ಖಾತೆಗಳಿಗೆ ಜಮಾ ಮಾಡುವಲ್ಲಿ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬ ಪ್ರಶ್ನೆಗೆ ಗಮನಕ್ಕೆ ಬಂದಿರುವ ಬಗ್ಗೆ ತಿಳಿಸಿದ್ದಾರೆ. ಹಣ ವ್ಯತ್ಯಾಸವಾಗಿರುವ ಬಗ್ಗೆಯೂ ಹೇಳಿದ್ದಾರೆ. ಹಾಗಾದರೆ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಏಕೆ ಕ್ರಮ ತೆಗೆದುಕೊಂಡಿಲ್ಲ ಎಂಬ ಪ್ರಶ್ನೆಗೆ ಸಂಪೂರ್ಣ ವಿವರಗಳನ್ನು ಕೇಳಿದ್ದು, ಆ ವಿವರಗಳನ್ನು ಕೊಟ್ಟಿಲ್ಲ. ಸಂಘದಲ್ಲಿ ಒಂದು ಅವಧಿಗೆ ಎಷ್ಟು ಬಾರಿ ಸಾಲ ನೀಡಬಹುದು; ಒಂದೇ ಅವಧಿಯಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ಸಾಲ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬ ಪ್ರಶ್ನೆಗೆ ಸರ್ಕಾರದ ಗಮನಕ್ಕೆ ಬಂದಿದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಸುಮಾರು ೩೦ ರೈತ ಸದಸ್ಯರಿಗೆ ಎರಡೆರಡು ಬಾರಿ ಸಾಲ ವಿತರಿಸಿರುವುದರ ಬಗ್ಗೆ ಲೆಕ್ಕ ಪರಿಶೋಧನೆ ವರದಿಯಲ್ಲಿ ಉಲ್ಲೇಖವಾಗಿದೆ ಎಂದು ಹೇಳಿದ್ದಾರೆ. ಹೀಗಿರುವಾಗ ಅಧಿಕಾರಿಗಳ ವಿರುದ್ಧ ಏಕೆ ಕ್ರಮ ತೆಗೆದುಕೊಂಡಿಲ್ಲ? ಸಾಲವನ್ನು ವಾಪಸ್ಸು ಪಡೆದಿದ್ದಾರೆಯೇ ಅಥವಾ ಸಾಲವನ್ನು ಪೂರ್ತಿ ಮಾಡಿದ್ದಾರೆಯೇ ಎಂಬ ಬಗ್ಗೆ ಮಾಹಿತಿ ತಿಳಿಸಿಲ್ಲ. ಇದರ ಜೊತೆಗೆ ಸದಸ್ಯರ ಷೇರು ಮೊತ್ತ ಮತ್ತು ಸಾಲ ನೀಡುವಲ್ಲಿ ಅವ್ಯವಹಾರ ಆಗಿರುವುದರ ಬಗ್ಗೆ ಕೈಗೊಂಡ ಕ್ರಮಗಳೇನು ಮತ್ತು ಯಾರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗಿದೆ ಎಂದು ಕೇಳಿದ್ದೇನೆ. ಈ ಪ್ರಶ್ನೆಯನ್ನು ನಾನು ಪ್ರಾರಂಭದಲ್ಲಿ ಗೆದ್ದಾಗಲೂ ಕೇಳಿದ್ದು, ಆಗ ಉತ್ತರದಲ್ಲಿ ನಿಯಮ 64ರಡಿಯ ವಿಚಾರಣೆಯಲ್ಲಿ ಕ್ರಮ ಕೈಗೊಳ್ಳುವ ಬಗ್ಗೆ ತಿಳಿಸಿದ್ದಾರೆ. ಹಿಂದೆ ಅನೇಕ ಸಲ ಇದೇ ಉತ್ತರವನ್ನು ಕೊಟ್ಟಿದ್ದಾರೆ. ಹಾಗಾದರೆ ಇದುವರೆಗೂ ಏಕೆ ಕ್ರಮ ತೆಗೆದುಕೊಂಡಿಲ್ಲ? ವಿಚಾರಣೆ ಮಾಡಿದ್ದಾದರೆ ವಿಚಾರಣೆಯಲ್ಲಿ ತಪ್ಪಿತಸ್ಥರು ಯಾರು ಎಂದು ಹೇಳಿಲ್ಲ. ಕ್ರಮವನ್ನು ಏಕೆ ತೆಗೆದುಕೊಂಡಿಲ್ಲ? ದಿನಾಂಕ 31/03/2016ಕ್ಕೆ ಸಂಘದಲ್ಲಿ ಮೊದಲು ತಗಾದೆಗೆ ಬಂದಂತಹ ಬೆಳೆ ಸಾಲದ ಪೈಕಿ ಸಾಮಾನ್ಯ ಬಡ್ಡಿ ದರದಲ್ಲಿ ರೈತ ಸದಸ್ಯರಿಂದ ವಸೂಲಿ ಮಾಡಲಾದ ಹಣವು ಯಾವ ಖಾತೆಗೆ ಯಾವಾಗ ಜಮಾ ಮಾಡಲಾಗಿದೆ ಎಂಬ ಪ್ರಶ್ನೆಯನ್ನು ಕೇಳಿದ್ದೇನೆ. ಅದಕ್ಕೆ ಸರ್ಕಾರದಿಂದ ಉತ್ತರವನ್ನು ಕೊಟ್ಟಿದ್ದು, ಈ ಉತ್ತರದಲ್ಲಿ ಸುಮಾರು ರೂ. 10 ಲಕ್ಷದ ವ್ಯತ್ಯಾಸ ಕಾಣಿಸುತ್ತಿದೆ. ಹಣ ವ್ಯತ್ಯಾಸವಾಗಿರುವ ಬಗ್ಗೆ ಏಕೆ ಕ್ರಮ ತೆಗೆದುಕೊಂಡಿಲ್ಲ? ಮಾರ್ಚ್ 2016ರಲ್ಲಿಯೂ ಈ ಪ್ರಶ್ನೆಯನ್ನು ಕೇಳಿದ್ದೇನೆ. ಆಗ ಇದ್ದ ಸಚಿವರು ನಿಯಮ 64ರಡಿಯಲ್ಲಿ ಕ್ರಮ ತೆಗೆದುಕೊಳ್ಳುವ ಬಗ್ಗೆ ತಿಳಿಸಿದ್ದಾರೆ. ಇಲ್ಲಿಯವರೆಗೂ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಆಡಿಟ್ ವರದಿ ನಡೆಸಿ ಮೂರು ವರ್ಷಗಳು ಆಗಿರಲಿಲ್ಲ. ನಾನು ಪ್ರಶ್ನೆಯನ್ನು ಕೇಳಿದ

ಮೇಲೆ ಆಡಿಟ್ ವರದಿ ಮಾಡಿಸಿದ್ದಾರೆ. ಇಷ್ಟೆಲ್ಲಾ ಅವ್ಯವಹಾರಗಳಾಗಿದ್ದರೂ ಕ್ರಮ ತೆಗೆದುಕೊಳ್ಳದೇ ಇರುವುದಕ್ಕೆ ಯಾರ ಒತ್ತಡ ಇದೆ ಎಂಬ ವಿಚಾರದ ಬಗ್ಗೆ ಸಂಪೂರ್ಣ ವಿವರಗಳನ್ನು ತಿಳಿಸಬೇಕು.

ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಇದು ನನ್ನ ಊರಿನ ಸೊಸೈಟಿ ವಿಚಾರಕ್ಕೆ ಸಂಬಂಧಪಟ್ಟಿದ್ದರಿಂದ ನೇರವಾಗಿ ಪ್ರಶ್ನೆಗಳನ್ನು ಕೇಳುತ್ತೇನೆ. ಈ ಹಿಂದೆ ಸಾಲ ಮನ್ನಾ ಆದ ಸಂದರ್ಭದಲ್ಲಿ ಸುಮಾರು ರೂ.64 ಲಕ್ಷಗಳನ್ನು ಅಲ್ಲಿನ ಕಾರ್ಯದರ್ಶಿ ತಿಂದು ಹಾಕಿದ. ಮಾನ್ಯ ಸಚಿವರು ತಪ್ಪಾಗಿದೆ ಎಂದು ಒಪ್ಪಿಕೊಂಡಿದ್ದರೂ ಆತನ ಮೇಲೆ ಕ್ರಮ ಆಗಿಲ್ಲ. ರೂ.10 ಲಕ್ಷಗಳ ರೈತರ ಷೇರು ಹಣವನ್ನು ತಿಂದು ಹಾಕಿರುವ ಬಗ್ಗೆ ಸ್ವತಃ ಅವರೇ ಒಪ್ಪಿಕೊಂಡಿದ್ದಾರೆ. ನನ್ನ ಸ್ವಂತ ಸಹೋದರ ರೂ.3,000 ಷೇರು ಹಾಕಿದರೆ ರೂ.100 ಇಟ್ಟು ಉಳಿದ ರೂ.2,900/- ತಿಂದು ಹಾಕಿದ್ದಾನೆ. ಈ ರೀತಿ ಎಲ್ಲಾ ಸದಸ್ಯರಿಗೂ ಮಾಡಿದ್ದಾನೆ. ಬಹಳ ಮುಖ್ಯವಾಗಿ ರೈತರು ಸಾಲ ತೆಗೆದುಕೊಂಡಿದ್ದರೂ ಪುನಃ ಅವರ ಹೆಸರಿನಲ್ಲಿ ಎರಡನೆ ಬಾರಿ ಸಾಲ ತೆಗೆದುಕೊಂಡಿದ್ದಾನೆ. ಇದು ರೈತರಿಗೆ ಗೊತ್ತಿಲ್ಲ. ಅಷ್ಟು ಹಣವನ್ನು ಹೊತ್ತುಕೊಂಡು ಹೋಗಿದ್ದಾನೆ. ರೈತರು ರೂ.17 ಲಕ್ಷ ಬಡ್ಡಿ ಕಟ್ಟಿದ್ದು, ರೂ.10 ಲಕ್ಷಗಳನ್ನು ತೋರಿಸಿ ಉಳಿದ ರೂ.7 ಲಕ್ಷಗಳನ್ನು ಅವನು ಇಟ್ಟುಕೊಂಡಿದ್ದಾನೆ. ಸುಮಾರು ಒಂದೂವರೆ ಕೋಟಿ ರೂಪಾಯಿಗಳ ಹಣ ವ್ಯತ್ಯಾಸವಾಗಿದ್ದರೂ ಇದುವರೆಗೂ ಕ್ರಮ ಜರುಗಿಸಿಲ್ಲ. ಎರಡು ವರ್ಷಗಳಿಂದಲೂ ನಿಯಮ 64ರ ವಿಚಾರಣೆ ನಡೆಯುತ್ತಿದೆ ಎಂದು ಹೇಳುತ್ತಿದ್ದಾರೆ. ವಿಚಾರಣೆಗೆ ಎಷ್ಟು ಸಮಯ ಬೇಕು? ಜಿಲ್ಲಾ Assistant Registrar and Deputy Registrar ಗಳನ್ನು ಕೇಳಿದರೆ ಆತನಿಗೆ ಕುಮ್ಮಕ್ಕು ಕೊಡುತ್ತಾರೆ. ಆಡಿಟ್ ಮಾಡಿಸಿರಲಿಲ್ಲ, ಈಗ ಉತ್ತರ ಕೊಡಬೇಕೆಂದು ಆಡಿಟ್ ಮಾಡಿಸಿದ್ದಾರೆ. ಇಲ್ಲಿ ಸಂಪೂರ್ಣ ಅವ್ಯವಹಾರಗಳ ಆಗರವಾಗಿದ್ದರೂ ಕ್ರಮ ತೆಗೆದುಕೊಂಡಿಲ್ಲ. ಎಷ್ಟು ದಿವಸಗಳಲ್ಲಿ ಕ್ರಮ ತೆಗೆದುಕೊಳ್ಳುತ್ತಾರೆ? ಆತನಿಂದ ಯಾವಾಗ ಹಣವನ್ನು ವಸೂಲು ಮಾಡುತ್ತಾರೆ? ಆತನಿಗೆ ಕುಮ್ಮಕ್ಕು ಕೊಡುತ್ತಿರುವ ಅಧಿಕಾರಿಗಳ ವಿರುದ್ಧ ಯಾವ ಕ್ರಮ ತೆಗೆದುಕೊಳ್ಳುತ್ತಾರೆ? ಈ ಸೊಸೈಟಿಯನ್ನು ಹೇಗೆ ಸರಿದಾರಿಗೆ ತೆಗೆದುಕೊಂಡು ಬಂದು ರೈತರನ್ನು ಹೇಗೆ ಉಳಿಸುತ್ತಾರೆಂದು ಹೇಳಬೇಕೆಂದು ಕೋರುತ್ತೇನೆ.

ಡಾ॥ ಹೆಚ್.ಸಿ. ಮಹದೇವಪ್ಪ (ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು) (ಸಹಕಾರ ಸಚಿವರ ಪರವಾಗಿ):- ಮಾನ್ಯ ಸಭಾಪತಿಯವರೇ, ಹಿಂದೆ ಈ ಪ್ರಶ್ನೆಯನ್ನು ಮಾನ್ಯ ಸದಸ್ಯರು ಪ್ರಸ್ತಾಪಿಸಿದ್ದು, ಅಂದಿನ ಸಹಕಾರ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಈಗಲೂ ಅದೇ ಉತ್ತರವನ್ನು ಕೊಟ್ಟಿದ್ದಾರೆ. ಮುಖ್ಯವಾಗಿ ಮೂರು ಪ್ರಮುಖ ಅಂಶಗಳನ್ನು ಒಳಗೊಂಡಿದೆ. ಮೊದಲನೆಯದಾಗಿ ಸದಸ್ಯರ ಷೇರು ಕಳುವಾಗಿರುವ ಬಗ್ಗೆ ಹೇಳಿದ್ದು, ರೂ.10,20,203 ಗಳ ವ್ಯತ್ಯಾಸ

ಕಂಡು ಬರುತ್ತಿದೆ. ಎರಡನೆಯದಾಗಿ ಒಂದೇ ಬಾರಿಗೆ ರೈತರಿಗೆ ಸಾಲ ಕೊಡುವುದಿದ್ದರೂ, 30 ರೈತರಿಗೆ ಎರಡು ಸಾರಿ ಸಾಲ ಕೊಟ್ಟಿದ್ದಾರೆ. ರೈತರ ಲೆಕ್ಕದಲ್ಲಿ ಸಾಲ ತೆಗೆದುಕೊಂಡಿದ್ದಾನೆ.

ಶ್ರೀ ಕೆ.ಟಿ. ಶ್ರೀಕಂಠೇಗೌಡಃ– ರೈತರಿಗೆ ಗೊತ್ತಿಲ್ಲ, ರೈತರ ಹೆಸರಿಲ್ಲಿ ಆತನೇ ಕಳ್ಳ ಸಹಿ ಹಾಕಿ ಸಾಲ ತೆಗೆದುಕೊಂಡಿದ್ದಾನೆ. ರೈತರು ಹೋದಾಗ ಆಶ್ಚರ್ಯ!.

ಡಾ॥ ಹೆಚ್.ಸಿ. ಮಹದೇವಪ್ಪಃ– ಮಾನ್ಯ ಶ್ರೀಕಂಠೇಗೌಡರ ಊರಿನ ವಿಷಯ ಆಗಿರುವುದರಿಂದ ನಮಗೆಲ್ಲರಿಗಿಂತ ಅವರಿಗೆ ಚೆನ್ನಾಗಿ ಗೊತ್ತಿರುತ್ತದೆ. ಅವನು ಲೆಕ್ಕದಲ್ಲಿ ಕೊಟ್ಟಿದ್ದಾನೆ. I am coming to the point. ರೈತರಿಂದ ರೂ.17,63,806/– ವಸೂಲಾಗಿದ್ದು, ಡಿಸಿಸಿ ಬ್ಯಾಂಕ್‌ಗೆ ರೂ.10,94,000/– ಹಣ ಪಾವತಿಸಿದ್ದು, ಉಳಿದ ರೂ.6,69,807 ಗಳನ್ನು ಆತನ ಬಳಿ ಇಟ್ಟುಕೊಂಡಿದ್ದಾನೆ. ಇವು ಪ್ರಮುಖವಾದ ಮೂರು ಸಂಗತಿಗಳಾಗಿವೆ. ಇದಕ್ಕೆ ಆಡಿಟ್ ಮಾಡಿದ್ದು, ದಿನಾಂಕ 15/11/2017ರಂದು ವರದಿ ಸ್ವೀಕೃತವಾಗಿರುತ್ತದೆ. ಈಗ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ನಿಯಮ 64ರಡಿಯಲ್ಲಿ Departmental Enquiry ಮಾಡಬೇಕು. ಆಡಿಟ್ ಮಾಡಿದ್ದಾರೆ. ಆದರೆ procedure follow ಮಾಡಬೇಕು. To take any disciplinary action against an officer, we have to initiate a Departmental Enquiry called 64 enquiry. ಆಡಿಟ್ ವರದಿ ಬಂದಿದೆ. ಅದರ ಆಧಾರದ ಮೇಲೆ ನಿಯಮ 64ರಡಿಯಲ್ಲಿ Departmental Enquiry ಮಾಡಿ, ಈ ಗೈಡ್‌ಲೈನ್ಸ್, parameter ಕೆಳಗೆ ವಿಚಾರಣೆ ಮಾಡಿ, ತಪ್ಪಿತಸ್ಥರು ಮತ್ತು ಕುಮ್ಮಕ್ಕು ನೀಡಿದವರೆಲ್ಲರನ್ನು ಬುಕ್‌ಗೆ ತಂದು, ತಪ್ಪಿತಸ್ಥರೆಲ್ಲರ ವಿರುದ್ಧ ಸರ್ಕಾರವು ಖಂಡಿತ ನಿರ್ದಿಷ್ಟ ಕ್ರಮ ತೆಗೆದುಕೊಳ್ಳುತ್ತದೆ.

(ಮುಂದು)

(1115)21.11.2017/1.10/ಹೆಚ್‌ವಿಃಎಂಡಿ

ಡಾ॥ಹೆಚ್.ಸಿ.ಮಹದೇವಪ್ಪ(ಮುಂದುವರೆದದ್ದು)ಃ–

ಸನ್ಮಾನ್ಯ ಸಭಾಪತಿಯವರೇ, ಯಾರ್‍ಯಾರು ತಪ್ಪಿತಸ್ಥ ಅಧಿಕಾರಿಗಳಿದ್ದಾರೆ ಅವರ ವಿರುದ್ಧ ನಿರ್ದಿಷ್ಟವಾದ ಕ್ರಮವನ್ನು ಸರ್ಕಾರ ಖಂಡಿತವಾಗಿಯೂ ತೆಗೆದುಕೊಳ್ಳುತ್ತದೆ.

ಶ್ರೀ ಕೆ.ಟಿ.ಶ್ರೀಕಂಠೇಗೌಡಃ– ಸನ್ಮಾನ್ಯ ಸಭಾಪತಿಯವರೇ, ಕಳೆದ ಎರಡು ವರ್ಷಗಳಿಂದ ಸರ್ಕಾರ ಇದೇ ಉತ್ತರವನ್ನು ನೀಡುತ್ತಾ ಬಂದಿದೆ. ಇನ್ನು ಎಷ್ಟು ದಿನಗಳೊಳಗಾಗಿ ಕಲಂ 64ರಡಿಯಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಚಾರಣೆಯನ್ನು ಮುಗಿಸಲಾಗುತ್ತದೆ ಮತ್ತು ತಪ್ಪಿತಸ್ಥರ ವಿರುದ್ಧ ಯಾವಾಗ ಕ್ರಮ ತೆಗೆದುಕೊಳ್ಳಲಾಗುತ್ತದೆ ಎನ್ನುವುದು ನಮ್ಮ ಪ್ರಶ್ನೆಯಾಗಿದೆ. ಒಟ್ಟಿನಲ್ಲಿ ರೈತರು ಉಳಿಯಬೇಕು.

ಡಾ॥ಹೆಚ್.ಸಿ.ಮಹದೇವಪ್ಪಃ– ಸನ್ಮಾನ್ಯ ಸಭಾಪತಿಯವರೇ, Audit is being done. ಕಲಂ 64ರಡಿಯಲ್ಲಿ ವಿಚಾರಣೆ ನಡೆಸಬೇಕಾಗಿದೆ. ಇಲ್ಲಿ ಕೊಟ್ಟಿರುವ ಅಂಕಿಅಂಶಗಳಿಂದ ಮೇಲ್ನೋಟಕ್ಕೆ ಇವೆನ್ನೆಲ್ಲ ಮಾಡಿದ್ದಾರೆ ಎನ್ನುವುದು ಗೊತ್ತಾಗುತ್ತಿದೆ. ವಿಚಾರಣೆ ನಡೆಸಿದ ನಂತರವೇ ಶಿಸ್ತು ಕ್ರಮವನ್ನು ಜರುಗಿಸಬೇಕಾಗಿರುವುದರಿಂದ ಆದಷ್ಟು ಬೇಗ ಕಲಂ 64ರಡಿಯಲ್ಲಿ ವಿಚಾರಣೆಯನ್ನು ಮುಕ್ತಾಯಗೊಳಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳುವ ಪ್ರಯತ್ನ ಮಾಡಲಾಗುವುದು.

ಶ್ರೀ ಎನ್.ಅಪ್ಪಾಜಿಗೌಡಃ– ಸನ್ಮಾನ್ಯ ಸಭಾಪತಿಯವರೇ, ಸರ್ಕಾರ audit ಮಾಡಿ ಕಲಂ 64ರಡಿಯಲ್ಲಿ ವಿಚಾರಣೆ ನಡೆಸಿಲ್ಲವೇ ಎನ್ನುವುದು ನಮ್ಮ ಪ್ರಶ್ನೆಯಾಗಿದೆ.

ಡಾ॥ಹೆಚ್.ಸಿ.ಮಹದೇವಪ್ಪಃ– ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಕೊಟ್ಟಿರುವ ಉತ್ತರದಲ್ಲಿ ಮಾನ್ಯ ಸದಸ್ಯರು ಉಲ್ಲೇಖ ಮಾಡಿರುವ ಮೂರು ಅಂಶಗಳನ್ನು ಒಪ್ಪಿಕೊಳ್ಳಲಾಗಿದೆ. audit ಆಗಿದೆ. ಆದರೆ ಕಲಂ 64ರಡಿಯಲ್ಲಿ ವಿಚಾರಣೆಯನ್ನು ಆದಷ್ಟು ಬೇಗ ಮುಗಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಸಯದ್ ಮುಧೀರ್ ಅಗಾಃ– ಸನ್ಮಾನ್ಯ ಸಭಾಪತಿಯವರೇ, ಪ್ರತಿ ಬಾರಿಯೂ ಒಂದೇ ಉತ್ತರವನ್ನು ನೀಡುತ್ತಿದ್ದಾರೆ.

ಶ್ರೀ ಎಸ್.ನಾಗರಾಜ್(ಸಂದೇಶ್ ನಾಗರಾಜ್)ಃ– ಸನ್ಮಾನ್ಯ ಸಭಾಪತಿಯವರೇ, ಕಲಂ 64ರಡಿಯಲ್ಲಿ ವಿಚಾರಣೆ ಪೂರ್ಣಗೊಂಡಿದೆ.

ಸಭಾಪತಿಯವರುಃ– ಮಾನ್ಯ ಸಂದೇಶ್ ನಾಗರಾಜ್‌ರವರೇ, ಇನ್ನೂ ಕಲಂ 64ರಡಿಯಲ್ಲಿ ವಿಚಾರಣೆ ಪೂರ್ಣಗೊಂಡಿಲ್ಲ.

ಶ್ರೀ ಎನ್.ಅಪ್ಪಾಜಿಗೌಡಃ– ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ತಪ್ಪು ಉತ್ತರವನ್ನು ನೀಡುತ್ತಿದ್ದಾರೆ. ಮಾನ್ಯ ಸಹಕಾರ ಸಚಿವರಿಗೆ ಇದರ ಬಗ್ಗೆ ಸಂಪೂರ್ಣವಾಗಿರುವ ಮಾಹಿತಿ ಇತ್ತು. ಅವರು ಈ ದಿನ ಸದನದಲ್ಲಿ ಉಪಸ್ಥಿತರಿದ್ದಿದ್ದರೆ ಚೆನ್ನಾಗಿರುತ್ತಿತ್ತು.

ಶ್ರೀ ಪುಟ್ಟಣ್ಣಃ– ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈಗಾಗಲೇ ಕಲಂ 64ರಡಿಯಲ್ಲಿ ವಿಚಾರಣೆ ಮುಕ್ತಾಯವಾಗಿದೆ ಎಂದು ಹೇಳುತ್ತಿದ್ದಾರೆ. ಆದರೆ, ಮಾನ್ಯ ಸಚಿವರು ಮುಕ್ತಾಯಗೊಂಡಿಲ್ಲ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಮುಕ್ತಾಯವಾಗಿದೆಯೇ ಇಲ್ಲವೇ ಎನ್ನುವುದನ್ನು ಮಾನ್ಯ ಸಚಿವರು ಸ್ಪಷ್ಟಪಡಿಸಬೇಕಾಗುತ್ತದೆ.

ಶ್ರೀ ಎನ್.ಅಪ್ಪಾಜಿಗೌಡಃ– ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ತಪ್ಪು ಉತ್ತರವನ್ನು ನೀಡಿದೆ. ವಿಚಾರಣೆ ಪೂರ್ಣಗೊಂಡಿದೆ.

ಡಾ॥ಹೆಚ್.ಸಿ.ಮಹದೇವಪ್ಪಃ– ಸನ್ಮಾನ್ಯ ಸಭಾಪತಿಯವರೇ, ಕಲಂ 64ರಡಿಯಲ್ಲಿ ವಿಚಾರಣೆ ಪೂರ್ಣಗೊಂಡು ವರದಿ ಬಂದ ಕೂಡಲೇ we will take action.

ಶ್ರೀ ಎನ್.ಅಪ್ಪಾಜಿಗೌಡಃ– ಸನ್ಮಾನ್ಯ ಸಭಾಪತಿಯವರೇ, ವಿಚಾರಣೆ ಪೂರ್ಣಗೊಂಡಿದೆ. ಹಿಂದೆ, ನಾನು ಈ ಪ್ರಶ್ನೆ ಕೇಳಿದ್ದಾಗ ಇದೇ ಉತ್ತರವನ್ನು ಸರ್ಕಾರ ಕೊಟ್ಟಿತ್ತು.

ಡಾ॥ಹೆಚ್.ಸಿ.ಮಹದೇವಪ್ಪಃ– ಸನ್ಮಾನ್ಯ ಸಭಾಪತಿಯವರೇ, ಕಲಂ 64ರಡಿಯಲ್ಲಿ ವಿಚಾರಣೆ ಪೂರ್ಣಗೊಂಡಿದೆಯೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಆದರೆ, ವಿಚಾರಣೆ ಇನ್ನೂ ಪೂರ್ಣಗೊಂಡಿಲ್ಲ. ವಿಚಾರಣೆ ಪೂರ್ಣಗೊಂಡ ಕೂಡಲೇ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎನ್.ಅಪ್ಪಾಜಿಗೌಡಃ– ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ವಿಚಾರಣೆ ನಡೆಸಿರುವ ಅಧಿಕಾರಿಗಳನ್ನು ಬೇಕಾದರೆ ಕರೆಯಿಸಿ, ವಿಚಾರಣೆ ಪೂರ್ಣಗೊಂಡಿದೆಯೇ ಇಲ್ಲವೇ ಎಂದು ಕೇಳಲಿ. ವಿಚಾರಣೆ ಮಾಡುವುದಕ್ಕೆ ಸರ್ಕಾರಕ್ಕೆ ಒಂದೂವರೆ ಎರಡು ವರ್ಷಗಳ ಕಾಲಾವಕಾಶ ಬೇಕಾಗಿದೆಯೇ?

ಶ್ರೀ ಕೆ.ಟಿ.ಶ್ರೀಕಂಠೇಗೌಡಃ– ಸನ್ಮಾನ್ಯ ಸಭಾಪತಿಯವರೇ, ವಿಚಾರಣೆ ಮಾಡುವುದಕ್ಕೆ ಅವರಿಗೆ ಎಷ್ಟು ದಿನಗಳು ಬೇಕಾಗುತ್ತದೆ?

ಶ್ರೀ ಸಂದೇಶ್ ನಾಗರಾಜ್ಃ– ಸನ್ಮಾನ್ಯ ಸಭಾಪತಿಯವರೇ, ಆರು ತಿಂಗಳಲ್ಲಿ ವಿಚಾರಣೆ ಪೂರ್ಣಗೊಂಡಿದೆ. ಸರ್ಕಾರ ತಪ್ಪು ಮಾಡಿರುವವರಿಗೆ ರಕ್ಷಣೆ ನೀಡುತ್ತಿದೆ.

ಡಾ॥ಹೆಚ್.ಸಿ.ಮಹದೇವಪ್ಪಃ– ಸನ್ಮಾನ್ಯ ಸಭಾಪತಿಯವರೇ, ತಪ್ಪು ಮಾಡಿರುವವರಿಗೆ ರಕ್ಷಣೆ ನೀಡುವ ಪ್ರಮೇಯ ಸರ್ಕಾರಕ್ಕಿಲ್ಲ. ತಪ್ಪಿತಸ್ಥರ ಮೇಲೆ ಖಂಡಿತವಾಗಿಯೂ ಕ್ರಮ ಜರುಗಿಸಲಾಗುವುದು.

ಶ್ರೀ ಎನ್.ಅಪ್ಪಾಜಿಗೌಡಃ– ಸನ್ಮಾನ್ಯ ಸಭಾಪತಿಯವರೇ, ಮಾರ್ಚ್ 2016ರಲ್ಲಿ ಈ ಪ್ರಶ್ನೆಯನ್ನು ಕೇಳಲಾಗಿದೆ. ಆಗಲೂ ಸಹ ಇದೇ ರೀತಿಯ ಉತ್ತರವನ್ನು ನೀಡಲಾಗಿದೆ. ಹಿಂದೆ ಕೇಳಲಾಗಿರುವ ಪ್ರಶ್ನೆಯ ಪ್ರತಿ ನನ್ನ ಬಳಿ ಇದೆ.

ಡಾ॥ಹೆಚ್.ಸಿ.ಮಹದೇವಪ್ಪಃ– ಸನ್ಮಾನ್ಯ ಸಭಾಪತಿಯವರೇ, ಹಿಂದೆ ಈ ವಿಚಾರಕ್ಕೆ ಸಂಬಂಧಪಟ್ಟಂತೆ ಕಲಂ 64ರಡಿಯಲ್ಲಿ ವಿಚಾರಣೆಯನ್ನು ನಡೆಸಿರಲಿಲ್ಲ. Audit ಆಗಿದೆ. ಆದಷ್ಟು ಬೇಗ ಕಲಂ 64ರಡಿಯಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಚಾರಣೆಯನ್ನು ಪೂರ್ಣಗೊಳಿಸುತ್ತೇವೆ. ಅವರೆಲ್ಲ ಈ ರೀತಿ misdeed ಆದರೆ ಸುಮ್ಮನೆ ಇರುವುದಕ್ಕೆ ಸಾಧ್ಯವಾಗುತ್ತದೆಯೇ?

ಶ್ರೀ ಸಯದ್ ಮುಧೀರ್ ಅಗಾಃ– ಸನ್ಮಾನ್ಯ ಸಭಾಪತಿಯವರೇ, ಕಲಂ 64 ಅಡಿಯಲ್ಲಿ ವಿಚಾರಣೆ ಮಾಡಿ ಮುಗಿಸಿದ್ದಾರೆ. ಆದರೆ, ಇಲ್ಲಿಯವರೆಗೆ ತಪ್ಪಿತಸ್ಥರ ವಿರುದ್ಧ ಕ್ರಮವನ್ನು ಜರುಗಿಸಿಲ್ಲ. ಇದರ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ನೀಡಬೇಕಾಗಿದೆ.

(ಗೊಂದಲ)

ಶ್ರೀ ಕೆ.ಟಿ.ಶ್ರೀಕಂಠೇಗೌಡಃ– ಸನ್ಮಾನ್ಯ ಸಭಾಪತಿಯವರೇ, ಒಬ್ಬ ಕಾರ್ಯದರ್ಶಿ ರೈತರ ಹೆಸರಿನಲ್ಲಿ ಸಾಲ ತೆಗೆದುಕೊಂಡರೆ ಆತನ ವಿರುದ್ಧ 24 ಗಂಟೆಗಳೊಳಗಾಗಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಈ ರೀತಿ ಆದರೆ, ರೈತರು ಉಳಿಯುವುದಕ್ಕೆ ಸಾಧ್ಯವಿದೆಯೇ?

ಡಾ॥ಹೆಚ್.ಸಿ.ಮಹದೇವಪ್ಪಃ– ಸನ್ಮಾನ್ಯ ಸಭಾಪತಿಯವರೇ, ಖಂಡಿತವಾಗಿಯೂ ಕಲಂ 64ರಡಿಯಲ್ಲಿ ನಡೆಸಿರುವ ವಿಚಾರಣಾ ವರದಿ ಬಂದ ಕೂಡಲೇ ಕ್ರಮ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಕೆ.ಟಿ.ಶ್ರೀಕಂಠೇಗೌಡಃ– ಸನ್ಮಾನ್ಯ ಸಬಾಪತಿಯವರೇ, ಇದಕ್ಕೊಂದು ಕೊನೆ ಎನ್ನುವುದು ಬೇಡವೇ? ಇದೊಂದು ರೀತಿ ಹಾಡು ಹಗಲು ದರೋಡೆಯಾಗಿದೆ.

(ಗೊಂದಲ)

ಸಭಾಪತಿಯವರುಃ– ಸಾಕು ಕುಳಿತುಕೊಳ್ಳಿ. ಮಾನ್ಯ ಸಚಿವರು ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ.

(ಗೊಂದಲ)

ಶ್ರೀ ಸಯದ್ ಮುಧೀರ್ ಅಗಾಃ– ಸನ್ಮಾನ್ಯ ಸಭಾಪತಿಯವರೇ, ಕಲಂ 64ರಡಿಯಲ್ಲಿ ವಿಚಾರಣೆ ಪೂರ್ಣಗೊಂಡಿದೆ. ವರದಿ ಕೊಟ್ಟಿದ್ದಾರೆ. ಆದರೆ, ಮಾನ್ಯ ಸಚಿವರು ಇನ್ನೂ ವಿಚಾರಣೆ ಮುಗಿದಿಲ್ಲ, ವರದಿ ಕೊಟ್ಟಿಲ್ಲವೆಂದು ಹೇಳುತ್ತಿದ್ದಾರೆ.

ಡಾ॥ಹೆಚ್.ಸಿ.ಮಹದೇವಪ್ಪಃ– ಸನ್ಮಾನ್ಯ ಸಭಾಪತಿಯವರೇ, ಮುಂದಿನ ಆರು ತಿಂಗಳೊಳಗಾಗಿ ವಿಚಾರಣೆಯನ್ನು ಪೂರ್ಣಗೊಳಿಸಿ, ಸಾಧ್ಯವಾದರೆ ಮೂರು ತಿಂಗಳೊಳಗಾಗಿ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಟಿ.ಎ.ಶರವಣಃ– ಸನ್ಮಾನ್ಯ ಸಭಾಪತಿಯವರೇ, ವಿಚಾರಣೆ ಈಗಾಗಲೇ ಪೂರ್ಣಗೊಂಡಿದೆ, ತಪ್ಪಿತಸ್ಥರ ವಿರುದ್ಧ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ ಎನ್ನುವುದರ ಬಗ್ಗೆ ಅವರು ಹೇಳಬೇಕಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಡಾ॥ಹೆಚ್.ಸಿ.ಮಹದೇವಪ್ಪಃ– ಸನ್ಮಾನ್ಯ ಸಭಾಪತಿಯವರೇ, ಈ ವಿಚಾರಕ್ಕೆ ಸಂಬಂಧಪಟ್ಟಂತೆ ನಡೆಯುತ್ತಿರುವ ವಿಚಾರಣೆ ಇನ್ನೂ ಪೂರ್ಣಗೊಂಡಿಲ್ಲ.

ಶ್ರೀ ಟಿ.ಎ.ಶರವಣಃ– ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸದನಕ್ಕೆ ತಪ್ಪು ಮಾಹಿತಿ ನೀಡಬಾರದು. ಕಳೆದ ಬಾರಿ ಕೇಳಿರುವ ಪ್ರಶ್ನೆಗೆ ಸರ್ಕಾರ ಉತ್ತರವನ್ನು ನೀಡಿದೆ. ಸರ್ಕಾರ ಯಾರನ್ನು ರಕ್ಷಣೆ ಮಾಡುತ್ತಿದೆ ಎನ್ನುವುದನ್ನು ಹೇಳಬೇಕಾಗಿದೆ.

ಡಾಃಹೆಚ್.ಸಿ.ಮಹದೇವಪ್ಪಃ– ಸನ್ಮಾನ್ಯ ಸಭಾಪತಿಯವರೇ, ರಕ್ಷಣೆ ಯಾಕೆ ಮಾಡಬೇಕು?

ಸಭಾಪತಿಯವರುಃ– ಇದು ಪ್ರಶ್ನೋತ್ತರ ಅವಧಿ. ಈ ವಿಷಯದ ಮೇಲಿನ ಚರ್ಚೆ ಇಲ್ಲಿಗೆ ಸಾಕು. ಮಾನ್ಯ ಸಚಿವರು ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು ಎನ್ನುವ ಉತ್ತರವನ್ನು ನೀಡಿದ್ದಾರೆ.

ಶ್ರೀ ಸಯದ್ ಮುಧೀರ್ ಅಗಾಃ– ಸನ್ಮಾನ್ಯ ಸಭಾಪತಿಯವರೇ, 2016ನೇ ಇಸವಿಯಲ್ಲಿಯೇ ವಿಚಾರಣೆ ಮುಗಿದಿದೆ. ಪುನಃ ಅದರ ಬಗ್ಗೆಯೇ ವಿಚಾರಣೆ ಮಾಡುತ್ತೇವೆ ಎಂದರೆ ಏನರ್ಥ?

ಶ್ರೀ ಕೆ.ಟಿ.ಶ್ರೀಕಂಠೇಗೌಡಃ– ಸನ್ಮಾನ್ಯ ಸಭಾಪತಿಯವರೇ, ಆ ಕಾರ್ಯದರ್ಶಿ, Assistant Registrar and Deputy Registrar ಅವರಿಗೆ ಕೈತುಂಬ ದುಡ್ಡು ಕೊಟ್ಟಿದ್ದೇನೆ. ಯಾರು ಏನು ಮಾಡುವುದಕ್ಕೂ ಆಗುವುದಿಲ್ಲ ಎಂದು ಹೇಳುತ್ತಿದ್ದಾನೆ. ಇಡೀ ರೈತರ ಹಣವನ್ನು ಆತ ನುಂಗಿ ಹಾಕಿದ್ದಾನೆ. ರೈತರಿಗೆ ಗೊತ್ತಿಲ್ಲದೇ ಅವರ ಹೆಸರಿನಲ್ಲಿ ಸಾಲ ತೆಗೆದುಕೊಳ್ಳುವವನ ವಿರುದ್ಧ ಸರ್ಕಾರ ಯಾವುದೇ ಕ್ರಮವನ್ನು ತೆಗೆದುಕೊಳ್ಳಲಿಲ್ಲವೆಂದರೆ ಇದು ಎಲ್ಲಿಗೆ ಹೋಗಿ ನಿಲ್ಲುತ್ತದೆ?

ಡಾ॥ಹೆಚ್.ಸಿ.ಮಹದೇವಪ್ಪಃ– ಸನ್ಮಾನ್ಯ ಸಭಾಪತಿಯವರೇ, ಸರ್ಕಾರವೇ ಮೂರು ವಿಚಾರಗಳನ್ನು ಹೇಳಿದೆ. 30 ಜನ ರೈತರಿಗೆ ಸಾಲ ಬರೆದು ಆ ಹಣವನ್ನು ಆತನೇ ಇಟ್ಟುಕೊಂಡಿದ್ದಾನೆ. Audit ಮಾಡಿ, ಕಲಂ 64ರಡಿಯಲ್ಲಿ ಇಲಾಖಾ ವಿಚಾರಣೆ ನಡೆಸಿ, ವರದಿ ಪಡೆದುಕೊಂಡು ಮೂರು ತಿಂಗಳೊಳಗಾಗಿ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆಂದು ನಾನು ಹೇಳುತ್ತಿದ್ದೇನೆ. As per section 64 Departmental Enquiry has not been conducted on this issue.

ಶ್ರೀ ಅಪ್ಪಾಜಿಗೌಡಃ– ಸನ್ಮಾನ್ಯ ಸಭಾಪತಿಯವರೇ, ಕಳೆದ ಒಂದೂವರೆ ವರ್ಷದಿಂದ ಇದೇ ಉತ್ತರವನ್ನು ಹೇಳುತ್ತಿದ್ದಾರೆ.

(ಗೊಂದಲ)

ಸಭಾಪತಿಯವರುಃ– ಈ ಚರ್ಚೆಗೆ ಇಲ್ಲಿಗೆ ಸಾಕು. ಈಗ ಮುಂದಿನ ಪ್ರಶ್ನೆ ಶ್ರೀ ರಮೇಶ್‌ಬಾಬು ಅವರದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆಃ 4560

(ಉತ್ತರವನ್ನು ಲಗತ್ತಿಸಲಾಗಿದೆ)

ಶ್ರೀ ರಮೇಶ್ ಬಾಬುಃ– ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನನ್ನ ಪ್ರಶ್ನೆಗಳಿಗೆ ಉತ್ತರಗಳನ್ನು ಒದಗಿಸಿದ್ದಾರೆ. ಕರ್ನಾಟಕ ರಾಜ್ಯದ ಪಶು ಸಂಗೋಪನೆ ಇಲಾಖೆಯಲ್ಲಿ ಸುಮಾರು 10 ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ ಎನ್ನುವ ಮಾಹಿತಿಯನ್ನು ಲಿಖಿತ ಉತ್ತರದಲ್ಲಿ ತಿಳಿಸಿ, ಮುಂದುವರೆದು, ಅನುಬಂಧ–1ರಲ್ಲಿ 2013–14ನೇ ಸಾಲಿನಲ್ಲಿ ಸುಮಾರು 4417.89 ಲಕ್ಷ ರೂಪಾಯಿಗಳಷ್ಟು ಅನುದಾನ ಕೇಂದ್ರ ಸರ್ಕಾರದಿಂದ ಬಂದಿದ್ದು, ಸುಮಾರು 3797.77 ಲಕ್ಷ ರೂಪಾಯಿಗಳು ಬಳಕೆಯಾಗಿದೆ. 2014–15ನೇ ಸಾಲಿನಲ್ಲಿ ಸುಮಾರು 10433.66 ಲಕ್ಷ ರೂಪಾಯಿಗಳಷ್ಟು ಅನುದಾನ ಕೇಂದ್ರ ಸರ್ಕಾರದಿಂದ ಬಂದಿದ್ದು, ಅದರಲ್ಲಿ 9062.55 ಲಕ್ಷ ರೂಪಾಯಿಗಳನ್ನು ಬಳಕೆ ಮಾಡಿಕೊಳ್ಳಲಾಗಿದೆ. 2015–16ನೇ ಸಾಲಿನಲ್ಲಿ ಸುಮಾರು 13339.26 ಲಕ್ಷ ರೂಪಾಯಿಗಳಷ್ಟು ಅನುದಾನ ಕೇಂದ್ರ ಸರ್ಕಾರದಿಂದ ಬಂದಿದ್ದು, ಅದರಲ್ಲಿ ಸುಮಾರು 13279.74 ಲಕ್ಷ ರೂಪಾಯಿಗಳಷ್ಟು ಅನುದಾನ ಬಳಕೆಯಾಗಿದೆ. 2016–17ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ಸುಮಾರು 12886.27 ಲಕ್ಷ ರೂಪಾಯಿಗಳಷ್ಟು ಅನುದಾನ ರಾಜ್ಯಕ್ಕೆ ಬಂದಿದ್ದು, ಅದರಲ್ಲಿ ಸುಮಾರು 13120.31 ಲಕ್ಷ ರೂಪಾಯಿಗಳು ಬಳಕೆಯಾಗಿದೆ ಎನ್ನುವ ಮಾಹಿತಿಯನ್ನು ಕೊಟ್ಟಿದ್ದಾರೆ. ಕೇಂದ್ರ ಸರ್ಕಾರದಿಂದ ಬಂದಿರುವಂತಹ ಅನುದಾನವನ್ನು ಈ ಇಲಾಖೆ ಆಯಾಯ ಸಾಲಿನಲ್ಲಿಯೇ ಬಳಕೆ ಮಾಡಿಕೊಳ್ಳುವುದರಲ್ಲಿ ವಿಫಲವಾಗಿದೆ ಎನ್ನುವ ಅಂಶ ಈ ಅಂಕಿಅಂಶಗಳಿಂದ ತಿಳಿದು ಬರುತ್ತದೆ. ಏಕೆಂದರೆ, ಬಹಳಷ್ಟು ಯೋಜನೆಗಳಿಗೆ ಕೇಂದ್ರ ಸರ್ಕಾರ ನೂರಕ್ಕೆ ನೂರರಷ್ಟು ಅನುದಾನವನ್ನು ನೀಡುತ್ತಿದೆ. ಬಹಳಷ್ಟು ರೈತರಿಗೆ ಎಷ್ಟು ಯೋಜನೆಗಳಿವೆ ಎನ್ನುವ ಮಾಹಿತಿಯೇ ಇಲ್ಲ. ಅದರಲ್ಲೂ ಸಹ ರಾಜ್ಯ ಸರ್ಕಾರದ ಪಶು ಸಂಗೋಪನಾ ಇಲಾಖೆ ಕೇಂದ್ರ ಸರ್ಕಾರದಿಂದ ಬಂದಿರುವಂತಹ ಅನುದಾವನ್ನು ಬಳಕೆ ಮಾಡಿಕೊಳ್ಳುವುದರಲ್ಲಿ ವಿಫಲವಾಗಿದೆ. ಇದಕ್ಕೆ ಕಾರಣವೇನು ಎನ್ನುವ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ರಾಷ್ಟ್ರೀಯ ಪ್ರಾಣಿ ಜಾಡ್ಯ ನಿರೂಪಣಾ ಪದ್ಧತಿಯಲ್ಲಿ ಎಷ್ಟು ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಯಾವ ಜಾಲತಾಣದಲ್ಲಿ ಮಾಹಿತಿಯನ್ನು ಸಾರ್ವಜನಿಕರಿಗೆ ನೀಡಲಾಗುತ್ತಿದೆ ಎನ್ನುವ ಪ್ರಶ್ನೆಯನ್ನು ಕೇಳಿದ್ದೇನೆ. ಇದಕ್ಕೆ ಮಾನ್ಯ ಸಚಿವರು ಸಮರ್ಪಕವಾಗಿರುವ ರೀತಿಯಲ್ಲಿ ಉತ್ತರವನ್ನು ಕೊಟ್ಟಿಲ್ಲ. ನನ್ನ ಪ್ರಶ್ನೆ ಏನೆಂದರೆ, ಪಶು ಸಂಗೋಪನಾ ಇಲಾಖೆಯಲ್ಲಿ ರಾಜ್ಯ ಸರ್ಕಾರದ ವೆಬ್‌ಸೈಟ್

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದೆಯೇ; ಇದ್ದರೆ ಮಾಹಿತಿಯನ್ನು ನೀಡಲಾಗಿದೆಯೇ; ಅದರ ಬಗ್ಗೆ ಸಾರ್ವಜನಿಕರಿಗೆ ಯಾವ ರೀತಿಯಲ್ಲಿ ಮಾಹಿತಿಯನ್ನು ನೀಡಲಾಗಿದೆ ಎನ್ನುವ ಪ್ರಶ್ನೆಯನ್ನು ಕೇಳಿದ್ದೇನೆ. ಅದಕ್ಕೆ ಮಾನ್ಯ ಸಚಿವರು, 'ಸಾರ್ವಜನಿಕರಿಗೆ ಮಾಹಿತಿ ಸಿಗುತ್ತಿಲ್ಲ. ವೆಬ್‌ಸೈಟ್ ಇದೆ' ಎಂದು ಹೇಳಿ ಕೇಂದ್ರ ಸರ್ಕಾರದ ವೆಬ್‌ಸೈಟ್ ವಿಳಾಸವನ್ನು ನೀಡಿದ್ದಾರೆ. ರಾಜ್ಯ ಸರ್ಕಾರದ ಪಶು ಸಂಗೋಪನಾ ಇಲಾಖೆಯ ವೆಬ್‌ಸೈಟ್ ಇದೆಯೇ, ಇಲ್ಲವೇ, ವೆಬ್‌ಸೈಟ್ ಇದ್ದರೆ ಅದನ್ನು ಯಾವ ರೀತಿಯಲ್ಲಿ ಬಳಸಿಕೊಳ್ಳಬೇಕು ಎನ್ನುವುದರ ಬಗ್ಗೆ ಸರ್ಕಾರ ಮಾಹಿತಿಯನ್ನು ನೀಡಿಲ್ಲ. ರಾಜ್ಯದ ತಾಲ್ಲೂಕು ಕೇಂದ್ರಗಳು ಮತ್ತು ಜಿಲ್ಲಾ ಕೇಂದ್ರಗಳಿಗೆ ಇಂಟರ್‌ನೆಟ್ ಹಾಗೂ ಕಂಪ್ಯೂಟರ್ ಪೂರೈಕೆಯನ್ನು *NIC (National Informatics Centre)* ಮೂಲಕ ಪೂರೈಕೆ ಮಾಡಲಾಗುತ್ತಿದೆ ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. NIC is a Central Agency. ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟ ಎಲ್ಲ ವೆಬ್‌ಸೈಟ್‌ಗಳನ್ನು ನಿರ್ವಹಣೆ ಮಾಡುವುದು *NIC*. ರಾಜ್ಯ ಸರ್ಕಾರಕ್ಕೆ ಸಂಬಂಧಪಟ್ಟ ವೆಬ್‌ಸೈಟ್‌ನ ಮಾಹಿತಿಯನ್ನು ಮಾನ್ಯ ಸಚಿವರು ನೀಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಇಲ್ಲಿಯವರೆಗೆ ಎಷ್ಟು ರಾಸುಗಳಿಗೆ ವಿಮಾ ಯೋಜನೆಯನ್ನು ಕಳೆದ ಮೂರು ವರ್ಷಗಳಲ್ಲಿ ನೀಡಲಾಗಿದೆ ಎನ್ನುವ ಪ್ರಶ್ನೆಯನ್ನು ಕೇಳಿದ್ದೇನೆ. ಮಾನ್ಯ ಸಚಿವರು ಮೂರು ವರ್ಷಗಳ ಅಂಕಿಅಂಶಗಳನ್ನು ಕೊಟ್ಟಿದ್ದಾರೆ. 2014-15ನೇ ಸಾಲಿನಲ್ಲಿ ಸುಮಾರು 31,400 ರಾಸುಗಳಿಗೆ ವಿಮೆಯನ್ನು ನೀಡಲಾಗಿದೆ. 2015-16ನೇ ಸಾಲಿನಲ್ಲಿ 231547 ರಾಸುಗಳಿಗೆ, 2016-17ನೇ ಸಲಿನಲ್ಲಿ 90166 ರಾಸುಗಳಿಗೆ ನೀಡಲಾಗಿದೆ. 2016-17ನೇ ಸಾಲಿನಲ್ಲಿ ರಾಸುಗಳಿಗೆ ನೀಡಲಾಗಿರುವ ವಿಮೆಯ ಕಂತಿನ ಮೊತ್ತದ ಪ್ರಮಾಣ ಸುಮಾರು ಶೇಕಡಾ 60ರಷ್ಟು ಕಡಿಮೆಯಾಗಿದೆ. ಇದಕ್ಕೆ ಕಾರಣವೇನು ಎನ್ನುವುದರ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕಾಗಿದೆ.

ಸನ್ಮಾನ್ಯ ಸಭಾಪತಿಯವರೇ, ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಎಷ್ಟು ಪಶು ಸಂಗೋಪನಾ ಆಸ್ಪತ್ರೆಗಳಿವೆ, ಇವುಗಳಲ್ಲಿ ಪೂರ್ಣ ಪ್ರಮಾಣದ ವೈದ್ಯರು ಮತ್ತು ಸಿಬ್ಬಂದಿಗಳು ನೇಮಕವಾಗಿದ್ದಾರೆಯೇ ಎನ್ನುವ ಪ್ರಶ್ನೆಗೆ ಲಿಖಿತ ಉತ್ತರದಲ್ಲಿ ಮಾಹಿತಿಯನ್ನು ಕೊಟ್ಟಿದ್ದಾರೆ. ಆ ಮಾಹಿತಿಯ ಆಧಾರದ ಮೇಲೆ ಹೇಳಬೇಕಾದರೆ, ಶೇಕಡಾ 50ಕ್ಕಿಂತ ಹೆಚ್ಚು ವೈದ್ಯ ಮತ್ತು ವೈದ್ಯಕೀಯ ಹುದ್ದೆಗಳು ಖಾಲಿ ಇವೆ ಎನ್ನುವುದು ಕಂಡು ಬಂದಿದೆ. ಇವುಗಳನ್ನು ಭರ್ತಿ ಮಾಡುವುದಕ್ಕೆ ಸರ್ಕಾರ ಯಾವ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ ಎನ್ನುವ ಮಾಹಿತಿಯನ್ನು ಮಾನ್ಯ ಸಚಿವರಿಂದ ಬಯಸುತ್ತಿದ್ದೇನೆ.

ಶ್ರೀ ಎ.ಮಂಜುಃ– ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ 'ಕೇಂದ್ರ ಸರ್ಕಾರದಿಂದ ಬಂದಿರುವ ಅನುದಾನವನ್ನು ಯಾವ ರೀತಿಯಲ್ಲಿ ಬಳಕೆ ಮಾಡಿಕೊಳ್ಳಲಾಗಿದೆ' ಎನ್ನುವ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದೇನೆ. ರಾಜ್ಯ ಸರ್ಕಾರದಿಂದ ಸುಮಾರು 10 ಪಶು ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದೇವೆ. ಮಾನ್ಯ ಸದಸ್ಯರು ವೆಬ್‌ಸೈಟ್ ಬಗ್ಗೆ ಪ್ರಶ್ನೆ ಕೇಳಿದ್ದಾರೆ. ಪಶು ಸಂಗೋಪನಾ ಇಲಾಖೆಗೆ ತನ್ನದೇ ಆಗಿರುವ ಪ್ರತ್ಯೇಕ ವೆಬ್‌ಸೈಟ್ ಇದೆ. ಆ ವೆಬ್‌ಸೈಟ್‌ಗೆ ಹೋಗಿ ತಾಲ್ಲೂಕು ಮಟ್ಟದ ವೆಬ್‌ಸೈಟ್ ಅನ್ನು ತೆರೆದರೆ ಅಲ್ಲಿ ನಾವು ಏನೇನು ಯೋಜನೆಗಳನ್ನು ತಂದಿದ್ದೇವೆ ಏನು ಮಾಡುತ್ತಿದ್ದೇವೆ ಎನ್ನುವುದರ ಬಗ್ಗೆ ದಾಖಲೆ ಇದೆ. ಇಲ್ಲಿಯೂ ಕೂಡ ಆ ವೆಬ್‌ಸೈಟ್ ಅನ್ನು open ಮಾಡಿಕೊಳ್ಳಬಹುದಾಗಿದೆ. ಮೊದಲು ಕೇಂದ್ರ ಸರ್ಕಾರ ಕೆಲವು ಯೋಜನೆಗಳಿಗೆ ಶೇಕಡಾ ನೂರಕ್ಕೆ ನೂರರಷ್ಟು ಅನುದಾನವನ್ನು ನೀಡುವಂತಹ ಸಂಪ್ರದಾಯವಿತ್ತು. ಈಗ ಕೇಂದ್ರ ಸರ್ಕಾರದವರು ಅನುದಾನದ ಪ್ರಮಾಣವನ್ನು ಕಡಿತಗೊಳಿಸಿ 60:40ರ ಅನುಪಾತದಲ್ಲಿ ಅನುದಾನವನ್ನು ನೀಡುತ್ತಿದ್ದಾರೆ. 'ಪಶು ಭಾಗ್ಯ ಯೋಜನೆ'ಗೆ ರಾಜ್ಯ ಸರ್ಕಾರ ನೂರಕ್ಕೆ ನೂರರಷ್ಟು ಅನುದಾನವನ್ನು ಕೊಡುವುದಕ್ಕೆ ಕ್ರಮ ತೆಗೆದುಕೊಳ್ಳಲಾಗಿದೆ. ನನಗೆ ತಿಳಿದ ಮಟ್ಟಿಗೆ ಶೇಕಡಾ 90 ರಿಂದ 95ರಷ್ಟು ಅನುದಾನವನ್ನು ನಾವು ಬಳಕೆ ಮಾಡಿಕೊಂಡಿರುತ್ತೇವೆ. ಉಳಿದಿರುವ ಅನುದಾನ ಮುಂದಿನ ವರ್ಷಕ್ಕೆ carry over ಆಗುತ್ತದೆ. ವಾಪಸ್ಸು ಹೋಗುವುದಿಲ್ಲ. ಮುಂದಿನ ವರ್ಷ ಆ ಹಣವನ್ನು ತೆಗೆದುಕೊಳ್ಳುತ್ತೇವೆ.

ಸನ್ಮಾನ್ಯ ಸಭಾಪತಿಯವರೇ, ತುಮಕೂರು ಜಿಲ್ಲೆಯಲ್ಲಿ ಪಶು ವೈದ್ಯರ ಕೊರತೆ ಇರುವುದು ನಿಜ. ಈಗಾಗಲೇ ಪಶು ವೈದ್ಯರನ್ನು ನೇಮಕ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಲಾಗಿದೆ. ನೇರ ನೇಮಕಾತಿಯ ಮೂಲಕ 660 ವೈದ್ಯರನ್ನು ನೇಮಕ ಮಾಡಿದ್ದೇವೆ. ಬಹುಶಃ ಒಂದು ವಾರ ಅಥವಾ ಒಂದು ತಿಂಗಳೊಳಗಾಗಿ ಆ ತಾಲ್ಲೂಕಿಗೆ ವೈದ್ಯರನ್ನು ನೇಮಕ ಮಾಡಲಾಗುವುದು. ಬೇರೆ ಏನಾದರೂ ನ್ಯೂನತೆಗಳು ಇದ್ದರೆ ಅವರು ಅದನ್ನು ನನ್ನ ಗಮನಕ್ಕೆ ತಂದರೆ, ನಾನು ಆ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿ ಸರಿಪಡಿಸುವಂತಹ ಕೆಲಸವನ್ನು ಮಾಡುತ್ತೇನೆ.

(ಮುಂದುವರಿದಿದೆ)

(1116)21.11.2017–1.20–ಪಿಕೆ–ಎಕೆ

ಶ್ರೀ ರಮೇಶಬಾಬು:– ಮಾನ್ಯ ಸಭಾಪತಿಯವರೇ, ರಾಜ್ಯ ಪಶುಸಂಗೋಪನಾ ಇಲಾಖೆಗೆ ತನ್ನದೇ ಆದ ವೆಬ್‌ಸೈಟ್ ಇದೆಯೇ, ಇಲ್ಲವೇ ಎಂದು ನೇರವಾಗಿ ಕೇಳಬಯಸುತ್ತೇನೆ. ಮಾನ್ಯ ಸಚಿವರು ಕೇಂದ್ರ ಸರ್ಕಾರದ ವೆಬ್‌ಸೈಟ್ ಬಗ್ಗೆ ಹೇಳುತ್ತಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಎ.ಮಂಜು:– ಕೇಂದ್ರ ಸರ್ಕಾರ ಯಾವ ಯಾವ ಯೋಜನೆಗಳಿಗೆ ಅನುದಾನ ಕೊಡುತ್ತದೆಯೋ ಆ ಕುರಿತು ಇರುವ ವೆಬ್‌ಸೈಟ್ ಮಾತ್ರ ಇದೆ. ಬೇರೆ ಇಲ್ಲ. ರಾಜ್ಯ ಪಶುಸಂಗೋಪನಾ ಇಲಾಖೆಗೆ ಸಂಬಂಧಪಟ್ಟಂತೆ ಪ್ರತ್ಯೇಕ ವೆಬ್‌ಸೈಟ್ ಇರಬೇಕು ಎನ್ನುವುದು ಮಾನ್ಯ ಸದಸ್ಯರ ಅನಿಸಿಕೆಯಾಗಿದೆ. ಈ ನಿಟ್ಟಿನಲ್ಲಿ ನಾವು ವ್ಯವಸ್ಥೆ ಮಾಡುತ್ತೇವೆ.

ಶ್ರೀ ರಮೇಶಬಾಬು:– ಇದು ನನ್ನ ಅನಿಸಿಕೆಯಲ್ಲ. ನಿಮ್ಮ ಆಯವ್ಯದಲ್ಲಿ, ಎಲ್ಲಾ ಇಲಾಖೆಗಳಿಗೆ ಸಂಬಂಧಪಟ್ಟಂತೆ ಇ–ಆಡಳಿತ ಕೊಡುತ್ತೇವೆ, ಜಾಲತಾಣ ಸೃಷ್ಟಿ ಮಾಡುತ್ತೇವೆ ಎಂದು ಹೇಳಲಾಗಿತ್ತು. ಏಕೆ ಇದುವರೆಗೂ ಮಾಡಿಲ್ಲ ಎಂಬುದನ್ನು ದಯವಿಟ್ಟು ತಿಳಿಸಿ.

ಶ್ರೀ ಎ ಮಂಜು:– ಪಶುಸಂಗೋಪನಾ ಇಲಾಖೆಗೆ ಸಂಬಂಧಪಟ್ಟ ಯೋಜನೆಗಳು ಕೇಂದ್ರ ಸರ್ಕಾರದ ಜೊತೆ–ಜೊತೆಗೆ ಇರುತ್ತದೆಯಾದ್ದರಿಂದ ಇನ್ನೊಂದು ವೆಬ್‌ಸೈಟ್‌ನ ಅವಶ್ಯಕತೆ ಇಲ್ಲ ಎಂದು ಭಾವಿಸಿದ್ದೆವು. ಈಗ ಪ್ರತ್ಯೇಕ ವೆಬ್‌ಸೈಟ್ ಮಾಡುತ್ತೇವೆ.

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು):– ಮಾನ್ಯ ಸಭಾಪತಿಯವರೇ, ದಿನಾಂಕ 21ನೇ ನವೆಂಬರ್ 2017 ಸಮೂಹ IIರ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಒಟ್ಟು 134 ಪ್ರಶ್ನೆಗಳ ಪೈಕಿ 81 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

ಸಭಾಪತಿಯವರು:– ಮಂಡಿಸಲಾಯಿತು.

3. ಸಭಾಪತಿಯವರ ಅಪ್ಪಣೆ ಮೇರೆ ಪ್ರಸ್ತಾಪಿಸಲಾದ ವಿಷಯಗಳು

ಅ) ವಿಷಯ: ಹೆಣ್ಣು ಮಕ್ಕಳ ಶಾಲಾ ಹಾಜರಾತಿಗೆ ನೀಡಲಾಗುತ್ತಿದ್ದ ಎರಡು ರೂಪಾಯಿಗಳು ಸ್ಥಗಿತಗೊಂಡಿರುವ ಬಗ್ಗೆ.

.....

ಶ್ರೀಮತಿ ತಾರಾ ಅನೂರಾಧ(ನಾಮ ನಿರ್ದೇಶಿತರು):– ಮಾನ್ಯ ಸಭಾಪತಿಯವರೇ, ಸರ್ಕಾರಿ ಶಾಲೆಗಳಲ್ಲಿ ಹೆಣ್ಣು ಮಕ್ಕಳ ಹಾಜರಾತಿಯನ್ನು ಕಾಯ್ದುಕೊಳ್ಳುವ ಸಲುವಾಗಿ ಸರ್ಕಾರ ಜಾರಿಗೆ ತಂದಿದ್ದ ಎರಡು ರೂಪಾಯಿಗಳ ಪ್ರೋತ್ಸಾಹ ಧನ ಯೋಜನೆ ಸದ್ದಿಲ್ಲದೇ ಸ್ತಬ್ಧಗೊಂಡಿದೆ. ವಿದ್ಯಾಭ್ಯಾಸದಿಂದ ದೂರ ಉಳಿಯುವ ಹೆಣ್ಣು ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಆಕರ್ಷಿಸುವ ಸಲುವಾಗಿ ಈ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ತಮ್ಮ ಆಯವ್ಯದಲ್ಲಿ ಘೋಷಿಸಿದ್ದ ಈ ಯೋಜನೆ ಇದೀಗ ಅನುದಾನದ ಕೊರತೆಯಿಂದ ಹಳ್ಳ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹಿಡಿದಿದೆ. 2014-15, 2015-16ನೇ ಸಾಲಿನಲ್ಲಿ ಈ ಯೋಜನೆಗೆ ಅನುದಾನ ಬಿಡುಗಡೆ ಮಾಡಿದ್ದು ಅದು ಕೂಡ ಸಮರ್ಪಕವಾಗಿ ಹಂಚಿಕೆ ಮಾಡಿಲ್ಲ. ಆದರೆ 2016-17, 2017-18ನೇ ಸಾಲಿನಲ್ಲಿ 1ನೇ ತರಗತಿ ಸೇರಿದ ಹೆಣ್ಣು ಮಕ್ಕಳಿಗೆ ನಯಾ ಪೈಸೆ ನೀಡಿಲ್ಲ. ಇದನ್ನು ಇಲಾಖೆಯ ಅಧಿಕಾರಿಗಳೇ ಸ್ಪಷ್ಟಪಡಿಸಿದ್ದಾರೆ. ಅನೇಕರು ಗಂಡು ಮಕ್ಕಳನ್ನು ಖಾಸಗಿ ಶಾಲೆಗೆ ಹಾಗೂ ಹೆಣ್ಣು ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸುತ್ತಾರೆ. ಗ್ರಾಮೀಣ ಭಾಗದಲ್ಲಿ ಈ ಅಸಮಾನತೆಯ ನಿವಾರಣೆಗೆ ಈ ಪ್ರೋತ್ಸಾಹ ಧನ ಯೋಜನೆ ಅತೀ ಮುಖ್ಯ. ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡಲು ಇನ್ನಷ್ಟು ಇತರ ಯೋಜನೆಗಳನ್ನು ಸರ್ಕಾರ ನೀಡಬೇಕೇ ವಿನಃ ಇರುವ ಯೋಜನೆಯನ್ನು ರದ್ದು ಮಾಡುವುದು ಸರಿಯಲ್ಲ. ಈ ಗಂಭೀರವಾದ ವಿಷಯವನ್ನು ಇಂದಿನ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು):-ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಿಂದ ಇದಕ್ಕೆ ಉತ್ತರ ಒದಗಿಸಿ ಕೊಡುತ್ತೇನೆ.

ಆ) ವಿಷಯ: ರೈತರು ಬೆಳೆದ ಮೆಕ್ಕೆ ಜೋಳ ಹಾಗೂ ಸೋಯಾ ಅವರೆ ಉತ್ವನ್ನಗಳಿಗೆ ಬೆಲೆ ಕುಸಿದಿರುವ ಬಗ್ಗೆ.

.....

ಶ್ರೀ ಮಾನೆ ಶ್ರೀನಿವಾಸ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಬೆಳೆದ ಮೆಕ್ಕೆ ಜೋಳ ಹಾಗೂ ಸೋಯಾ ಅವರೆ ಉತ್ವನ್ನಗಳಿಗೆ ಮಾರುಕಟ್ಟೆ ಬೆಲೆ ಕುಸಿದಿರುವುದರಿಂದ ರೈತರು ಸಂಕಷ್ಟಕ್ಕೆ ಗುರಿಯಾಗಿರುತ್ತಾರೆ. ಸರ್ಕಾರ ತಕ್ಷಣ ಮಧ್ಯ ಪ್ರವೇಶಿಸಿ ಖರೀದಿ ಕೇಂದ್ರಗಳನ್ನು ಪ್ರಾರಂಭಿಸಲು ಹಾಗೂ ಬೆಂಬಲ ಬೆಲೆ ಘೋಷಿಸುವ ಮೂಲಕ ರೈತರಿಗೆ ಒದಗಿರುವ ಸಂಕಷ್ಟಗಳನ್ನು ಪರಿಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೃಷ್ಣಬೈರೇಗೌಡ(ಕೃಷಿ ಸಚಿವರು):-ಮಾನ್ಯ ಸಭಾಪತಿಯವರೇ, ಇದು ಆಹಾರ ಇಲಾಖೆಗೆ ಬರುತ್ತದೆ. ಆದರೂ ಇದಕ್ಕೆ ನಾನೇ ಉತ್ತರ ಕೊಡುತ್ತೇನೆ. ಕೇಂದ್ರ ಸರ್ಕಾರ ಬೆಲೆ ಸ್ಥಿರೀಕರಣ ಯೋಜನೆ (Price Support Scheme) ಎನ್ನುವ ಒಂದು ಯೋಜನೆ ಹೊಂದಿದೆ. ಇದರ ಅಡಿಯಲ್ಲಿ ಮೆಕ್ಕೆ ಜೋಳವೂ ಸೇರಿದಂತೆ ಸುಮಾರು 25 ಬೆಳೆಗಳಿಗೆ ಕೇಂದ್ರ ಸರ್ಕಾರ ಕನಿಷ್ಠ ಬೆಂಬಲ ಬೆಲೆಯನ್ನು ಘೋಷಣೆ ಮಾಡುತ್ತದೆ. ಮಾರುಕಟ್ಟೆಯಲ್ಲಿ ದರ ಕನಿಷ್ಠ ಬೆಂಬಲ ಬೆಲೆಗಿಂತ ಕಡಿಮೆ ಆದಾಗ ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಿ ಅದನ್ನು ಖರೀದಿ ಮಾಡಿ ರೈತರ ಹಿತವನ್ನು ಕಾಪಾಡುವುದು ಈ ಯೋಜನೆಯ ಉದ್ದೇಶವಾಗಿದೆ. Price Support Scheme (P.S.S.) ಏನಿದೆ ಅದನ್ನು M.S.P.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(Minimum Support Price) ದರದಲ್ಲಿ ಖರೀದಿ ಮಾಡಬೇಕು ಎನ್ನುವುದು ಇದರ ಉದ್ದೇಶವಾಗಿದೆ. 2013-14ರಲ್ಲಿ ಇದೇ ಮಾದರಿಯಲ್ಲಿ 7 ಲಕ್ಷ 7 ಸಾವಿರ ಕ್ವಿಂಟಾಲ್ ಮೆಕ್ಕೆ ಜೋಳವನ್ನು ರಾಜ್ಯದಲ್ಲಿ ಖರೀದಿ ಮಾಡಲಾಗಿತ್ತು. ಈ ವರ್ಷವೂ ಸಹ ಮೆಕ್ಕೆ ಜೋಳದ ಬೆಲೆ ಕುಸಿದಿದೆ. ಮಾನ್ಯ ಮುಖ್ಯಮಂತ್ರಿಗಳು ಸೂಚನೆ ಕೊಟ್ಟ ಮೇಲೆ ಈ ಕುರಿತು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದೆವು. P.S.S. ಯೋಜನೆ ಅಡಿ ತಾವು ಮಧ್ಯ ಪ್ರವೇಶ ಮಾಡಬೇಕು, ತಮಗೆ ಬೇಕಾದ ಸಹಕಾರವನ್ನು ಕೊಡಲಿಕ್ಕೆ ರಾಜ್ಯ ಸರ್ಕಾರ ತಯಾರಾಗಿದೆ ಎಂದು ಬರೆದು ತಿಳಿಸಿದ್ದೆವು. ನಮ್ಮ ಈ ಪತ್ರಕ್ಕೆ ಉತ್ತರ ಬರುವುದು ತಡವಾಗಿದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು, ನೀವೇ ಹೋಗಿ ಭೇಟಿ ಮಾಡಿ ಬನ್ನಿ ಎಂದು ಹೇಳಿದ ಹಿನ್ನೆಲೆಯಲ್ಲಿ, ತಮ್ಮ ಅನುಮತಿಯನ್ನು ಪಡೆದುಕೊಂಡು ನಾನು ಮತ್ತು ಅಹಾರ ಇಲಾಖೆಯ ಸಚಿವರು ಕಳೆದ ವಾರ ಕೇಂದ್ರ ಆಹಾರ ಸಚಿವರನ್ನು ಭೇಟಿ ಮಾಡಿದೆವು. ಸುಮಾರು 28 ಲಕ್ಷ ಟನ್‌ನಷ್ಟು ಮೆಕ್ಕೆಜೋಳ ಉತ್ಪಾದನೆಯಾಗಿದೆ, ಇದರಲ್ಲಿ 6 ಲಕ್ಷ ಟನ್‌ನಷ್ಟು ಖರೀದಿ ಮಾಡುವ ಕೆಲಸ ಕೇಂದ್ರ ಸರ್ಕಾರ ಮಾಡಬೇಕು, ಅದಕ್ಕೆ ತಮಗೆ ಬೇಕಾದಂತಹ ಸಹಕಾರವನ್ನು ಕೊಡುವುದಕ್ಕೆ ತಯಾರಾಗಿದ್ದೇವೆ ಎಂದು ತಿಳಿಸಿದೆವು. ಅಂದರೆ, ಅವರಿಗೆ procure ಮಾಡುವುದಕ್ಕೆ ಸ್ಥಳೀಯವಾಗಿ ಏಜೆನ್ಸಿಗಳು ಬೇಕಾದರೆ ನಮ್ಮ ಏಜೆನ್ಸಿಗಳನ್ನು ಕೊಡುತ್ತೇವೆ ಎಂದು ಹೇಳಿದ್ದೇವೆ. ಇದುವರೆಗೂ ಸಹ ಇದಕ್ಕೆ ಸಕಾರಾತ್ಮಕವಾದ ಉತ್ತರ ಬಂದಿಲ್ಲ. 2014ರಿಂದ ಮಾನದಂಡವನ್ನು ಬದಲಾವಣೆ ಮಾಡಿಕೊಂಡು ಇದನ್ನು P.D.S. ವ್ಯವಸ್ಥೆಗೆ ಲಿಂಕ್ ಮಾಡಿದ್ದಾರೆ. ಆ ರೀತಿ ಮಾಡುವುದು ಸೂಕ್ತವಲ್ಲ. ಮೊದಲು ಹೇಗೆ ಮಾರುಕಟ್ಟೆಯಲ್ಲಿ ಬೆಲೆ ಕುಸಿತವಾದಾಗ ಕೇಂದ್ರ ಸರ್ಕಾರ ಮಧ್ಯ ಪ್ರವೇಶ ಮಾಡುತ್ತಿತ್ತೋ ಅದೇರೀತಿ ಮಾಡಬೇಕು ಎಂದು ನಾವು ಅವರನ್ನು ಒತ್ತಾಯ ಮಾಡಿ ಬಂದಿದ್ದೇವೆ. ರಾಜ್ಯದಲ್ಲಿ ಇದು ಪ್ರಚಲಿತವಾಗಿರುವ ಸಮಸ್ಯೆಯಾಗಿದೆ. ವಿಶೇಷವಾಗಿ, ಶಿವಮೊಗ್ಗ, ಹಾವೇರಿ, ದಾವಣಗೆರೆ, ಹಾಸನ ಮತ್ತಿತರ ಉತ್ತರ ಕರ್ನಾಟಕದ ಭಾಗದಲ್ಲಿ ಬೆಳೆಗಳ ಉತ್ಪಾದನೆ ಜಾಸ್ತಿ ಆಗಿರುವುದರಿಂದ ಬೆಲೆ ಕುಸಿತವಾಗಿದೆ. ಕೇಂದ್ರ ಸರ್ಕಾರ ಅನುಮತಿ ಕೊಟ್ಟ ಕೂಡಲೇ ನಾವು ಮಾರುಕಟ್ಟೆ ಪ್ರವೇಶ ಮಾಡುವುದಕ್ಕೆ ತಯಾರಿದ್ದೇವೆ. ನಾನು ಕೆಳಮನೆಯಲ್ಲೂ ಸಹ ವಿರೋಧ ಪಕ್ಷದ ನಾಯಕರ ಸಹಕಾರವನ್ನು ಬಯಸಿದ್ದೇನೆ. ಅದೇರೀತಿ ಇಲ್ಲಿಯೂ ನಾನು ವಿನಂತಿಸಿಕೊಳ್ಳುವುದೇನೆಂದರೆ ಮಾನ್ಯ ವಿರೋಧ ಪಕ್ಷದ ನಾಯಕರು, ಕೇಂದ್ರ ಸರ್ಕಾರದ ಮೇಲೆ ಸ್ವಲ್ಪ ಸಕಾರಾತ್ಮಕವಾಗಿ ಒತ್ತಡ ಹಾಕಿ ಆದಷ್ಟುಬೇಗ ಅನುಮತಿ ಕೊಡಿಸಿದರೆ ಮಾರುಕಟ್ಟೆ ಪ್ರವೇಶ ಮಾಡಲಿಕ್ಕೆ ನಾವು ತಯಾರಿದ್ದೇವೆ. ಕೇಂದ್ರ ಸರ್ಕಾರದ ಅನುಮತಿ ಬಂದ ತಕ್ಷಣ ನಾವು ಮುಂದುವರೆಯುತ್ತೇವೆ.

ಇ) ವಿಷಯ: ರಾಜ್ಯದಲ್ಲಿ ಜಲ್ಲಿ, ಮರುಳು ಕೊರತೆಯಿಂದ ಕಾರ್ಮಿಕರು ನಿರುದ್ಯೋಗಿಗಳಾಗಿರುವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕುರಿತು.

ಶ್ರೀ ಕೆ.ಎಸ್.ಈಶ್ವರಪ್ಪ(ವಿಧಾನಸಭೆಯಿಂದ ಆಯ್ಕೆಯಾದವರು):–ಮಾನ್ಯ ಭಾಪತಿಯವರೇ, ಮಾನ್ಯ ಸಭಾನಾಯಕರು ಗಮನಿಸಬೇಕು. ನಾನು ಈ ವಿಷಯದ ಬಗ್ಗೆ ಸಂಬಂಧಪಟ್ಟ ಮಂತ್ರಿಗಳ ಜೊತೆ ಮಾತನಾಡಿ ಈ ವಿಷಯವನ್ನು ಸದನದ ಗಮನಕ್ಕೆ ತರುತ್ತಿದ್ದೇನೆ. ಅವರು ಸದನಕ್ಕೆ ಬರುತ್ತೇನೆ ಎಂದು ಹೇಳಿದ್ದರು, ಆದರೆ ಬಂದಿಲ್ಲ. ಕರ್ನಾಟಕ ರಾಜ್ಯದಲ್ಲಿ ಜಲ್ಲಿ, ಮರುಳು ಕೊರತೆಯಿಂದ ಎಲ್ಲಾ ಅಭಿವೃದ್ಧಿ ಕಾರ್ಯಗಳಿಗೆ ತೊಂದರೆ ಆಗಿದೆ. ಲಕ್ಷಾಂತರ ಕಾರ್ಮಿಕರು ನಿರುದ್ಯೋಗಿಗಳಾಗಿದ್ದಾರೆ. ಮಾನ್ಯ ಮಂತ್ರಿಗಳಾದ ಶ್ರೀ ವಿನಯ ಕುಲಕರ್ಣಿಗಳು ಸಭೆ ನಡೆಸಿ ಒಂದು ನಿರ್ಣಯ ಮಾಡಿರುವ ವಿಚಾರ ತಿಳಿದು ನಮಗೆ ಸಮಾಧಾನ ಆಗಿತ್ತು. ಆದರೆ ಇದುವರೆಗೆ ಅದು ಜಾರಿಗೆ ಬರಲು ಅಧಿಕಾರಿಗಳ ನಿರ್ಲಕ್ಷ್ಯ ಕಾರಣವೇ? ತಕ್ಷಣ ನಿರ್ಣಯ ಜಾರಿಗೆ ತರಲು ಸರ್ಕಾರದ ಗಮನ ಸೆಳೆಯಬಯಸುತ್ತೇನೆ.

ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು):– ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರನ್ನು ಕರೆಸಿ ಇದಕ್ಕೆ ಉತ್ತರ ಕೊಡುವ ವ್ಯವಸ್ಥೆ ಮಾಡಿಸುತ್ತೇನೆ.

ಈ) ವಿಷಯ: ತೆಲುಗು ಭಾಷೆಯ ಕವಿ ವೇಮನ ಜಯಂತಿ ಆಚರಿಸುವ ಕುರಿತು.

...

ಶ್ರೀ ಡಿ.ಎಸ್.ವೀರಯ್ಯ(ವಿಧಾನಸಭಾ ಕ್ಷೇತ್ರ):–ಮಾನ್ಯ ಸಭಾಪತಿಯವರೇ, ಇತ್ತೀಚಿಗೆ ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ "ವೇಮನ ನಿಂದೇನು, ಕುಮಾರವ್ಯಾಸನ ಕುಂದೇನು?" ಎನ್ನುವ ಶೀರ್ಷಿಕೆ ಅಡಿ ಒಂದು ವರದಿ ಪ್ರಕಟವಾಯಿತು. ಸರ್ಕಾರ ತೆಲುಗು ಭಾಷಿಗ ವೇಮನನ ಜಯಂತಿಯನ್ನು ಆಚರಿಸಲು ಮುಂದೆ ಬಂದಿರುವುದು ಸ್ವಾಗತಾರ್ಹವಾದುದು. ಈ ಆಚರಣೆಗಾಗಿ ರೂ. 69 ಲಕ್ಷ ಹಣ ಮೀಸಲಿಟ್ಟಿರುವುದೂ ಕೂಡ ಸ್ವಾಗತಾರ್ಹವಾದುದು.

ಆಂಧ್ರದ ಕವಿ ವೇಮನನ ಜಯಂತಿಯನ್ನು ಆಚರಿಸಲು ತೀರ್ಮಾನಿಸಿದ ಸರ್ಕಾರಕ್ಕೆ ಕನ್ನಡದ ಆದಿ ಕವಿ ಹಳಗನ್ನಡದಲ್ಲಿ ಬದುಕಿಗೆ ಭಾಷೆ ಬರೆದ, ಕನ್ನಡ ಸಾಂಸ್ಕೃತಿಕ ಲೋಕಕ್ಕೆ ಮಹಾನ್ ಕೊಡುಗೆ ನೀಡಿದ, ಕನ್ನಡ ಕಾವ್ಯ ಲೋಕದ ಅನಭಿಷಿಕ್ತ ದೊರೆ, ಮಹಾಕವಿ, ಗಮಕಿಗಳ ಆರಾಧ್ಯ, ಜಗತ್ತಿನ ಮೇರು ಕವಿ ಎನಿಸಿರುವ ಗದುಗಿನ ನಾರಣಪ್ಪ ಅರ್ಥಾತ್ ಕುಮಾರವ್ಯಾಸರ ಜಯಂತಿಯ ಆಚರಣೆಯನ್ನು ಮರೆತಿರುವುದು ದುರಾದೃಷ್ಟಕರ ಮತ್ತು ದಿಗ್ಭ್ರಮೆ ಮೂಡಿಸುವ ವಿಷಯ.

ಶ್ರೀಯುತರ ಜಯಂತಿಯು 2018ರ ಜನವರಿ ತಿಂಗಳಿನಲ್ಲಿ ಬಂದಿರುವುದರಿಂದ ಕನ್ನಡ ಆದಿಕವಿ ಕುಮಾರವ್ಯಾಸನ ಜಯಂತಿಯನ್ನು ಆಚರಿಸಿ ಕರ್ನಾಟಕದ ಸಾಂಸ್ಕೃತಿಕತೆಯನ್ನು ಮೆರೆಯಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಗಮಕ ಸಾಹಿತ್ಯ ಎನ್ನುವ ಹೊಸ ಪದವನ್ನು ಕನ್ನಡ ಲೋಕಕ್ಕೆ ಕೊಟ್ಟ ಇವರ ಹೆಸರಿನಲ್ಲಿ ವರ್ಷಕ್ಕೊಮ್ಮೆ ಪ್ರಶಸ್ತಿಯನ್ನು ಕೊಡುತ್ತಿದ್ದು, ಈಗಾಗಲೇ 5 ಮಂದಿ ಪ್ರಶಸ್ತಿಯನ್ನು ಪಡೆದಿದ್ದಾರೆ. 29-30 ಗಣ್ಯರ ಜಯಂತಿಯನ್ನು ಆಚರಿಸುವ ನಮ್ಮ ಸರ್ಕಾರ ಕುಮಾರವ್ಯಾಸರ ಜಯಂತಿಯನ್ನು ಮರೆಯವುದು ಸೂಕ್ತವಲ್ಲ.

(ಮುಂದು . . .)

(1117)21-11-2017 1.30 ಡಿಎಸ್-ಎಕೆ

ಶ್ರೀ ಡಿ.ಎಸ್.ವೀರಯ್ಯ(ಮುಂದು):-

ಅವರ ಜಯಂತಿಯನ್ನು ಕೂಡ ಆಚರಿಸಬೇಕೆಂದು ನಾನು ಆಗ್ರಹ ಮಾಡುತ್ತೇನೆ. ಕುಮಾರವ್ಯಾಸನು ಜಾತಿ ಪಂಕ್ತಿಗಳಿಗೂ ಮೀರಿ ಮೇಲ್ಮಟ್ಟಕ್ಕೆ ಏರಿದಂತಹ ಮೇರು ಕವಿ. ನಾವು ಅವರನ್ನು ಮರೆಯಬಾರದು. ಈಗ ಬರುವ ಜನವರಿಯಿಂದಲೇ ಕುಮಾರವ್ಯಾಸನ ಜಯಂತಿಯನ್ನು ಆಚರಿಸಬೇಕೆಂದು ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು):- ಮಾನ್ಯ ಸಭಾಪತಿಯವರೇ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರ ಗಮನಕ್ಕೆ ತಂದು ಅವರಿಂದ ಉತ್ತರ ಕೊಡಿಸುತ್ತೇನೆ.

ಸಭಾಪತಿಯವರು:- ಮುಂದಿನ ವಿಷಯಕ್ಕೆ ಮೂರು ಜನ ಗೌರವಾನ್ವಿತ ಸದಸ್ಯರಾದ ಮಾನ್ಯ ರಮೇಶ್‌ಬಾಬುರವರು, ಮಾನ್ಯ ಕೆ.ಬಿ.ಶ್ರೀಕಂಠೇಗೌಡರು, ಮಾನ್ಯ ಕಾಂತರಾಜುರವರು ಸಹಿ ಮಾಡಿಕೊಟ್ಟಿದ್ದಾರೆ. ವಿಷಯವನ್ನು ಯಾರಾದರೊಬ್ಬರು ಓದಿ.

ಉ) ವಿಷಯ: ನೈಸ್ ಒಪ್ಪಂದ ರದ್ದು ಎಂದು ಪತ್ರಿಕೆಯಲ್ಲಿ ಪ್ರಕಟವಾಗಿರುವ ಕುರಿತು.

.....

ಶ್ರೀ ರಮೇಶ್ ಬಾಬು(ಶಿಕ್ಷಕರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ "ನೈಸ್ ಒಪ್ಪಂದ ರದ್ದು" ಎಂಬ ಶೀರ್ಷಿಕೆಯಡಿ ಪ್ರಜಾವಾಣಿ ಕನ್ನಡ ದಿನಪತ್ರಿಕೆಯಲ್ಲಿ ದಿನಾಂಕ:21-11-2017 ರಂದು ಪ್ರಕಟವಾಗಿರುವ ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ (ಬಿ.ಎಂ.ಐ.ಸಿ.) ಯೋಜನೆ ಸಂಬಂಧ ಬಾರಿ ಅಕ್ರಮವನ್ನು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಸಗಿರುವ ನಂದಿ ಇನ್‌ಫ್ರಾಸ್ಟ್ರಕ್ಚರ್ (ನೈಸ್) ಜೊತೆ ಸರ್ಕಾರವು ಮಾಡಿಕೊಂಡಿರುವ ಒಪ್ಪಂದವನ್ನು ರದ್ದಪಡಿಸುವಂತೆ ಕಾನೂನು ಇಲಾಖೆ ಶಿಫಾರಸ್ಸು ಮಾಡಿ ಹಲವಾರು ತಿಂಗಳುಗಳು ಕಳೆದರೂ, ಅದಲ್ಲದೇ ವಿಧಾನಮಂಡಲದ ಸದನ ಸಮಿತಿಯು ನೈಸ್ ಕಂಪನಿಯ ಅಕ್ರಮವನ್ನು ಸಿ.ಬಿ.ಐ. ಹಾಗೂ ಜಾರಿ ನಿರ್ದೇಶನಾಲಯದಿಂದ ತನಿಖೆ ನಡೆಸಬೇಕೆಂದು ಸರ್ವಾನುಮತದಿಂದ ಅಂಗೀಕರಿಸಿದ್ದರೂ ಸಹ ಇದುವರೆವಿಗೂ ಸರ್ಕಾರವು ಕ್ರಮ ಕೈಗೊಳ್ಳದಿರುವ ಬಗ್ಗೆ ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ದಯಮಾಡಿ ಸರ್ಕಾರ ಈ ಕೂಡಲೇ ಉತ್ತರ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಡಾ:ಹೆಚ್.ಸಿ.ಮಹದೇವಪ್ಪ(ಲೋಕೋಪಯೋಗಿ ಸಚಿವರು):– ಮಾನ್ಯ ಸಭಾಪತಿಯವರೇ, ದಿನಾಂಕ:21–11–2017 ರಂದು ಪ್ರಜಾವಾಣಿಯಲ್ಲಿ ಪ್ರಕಟವಾಗಿರುವ ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ (ಬಿ.ಎಂ.ಐ.ಸಿ.) ಯೋಜನೆ ಬಗ್ಗೆ ವರದಿಯನ್ನು ನಾನು ಓದಿದ್ದೇನೆ. ಈ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಈಗಾಗಲೇ ಸದನ ಸಮಿತಿಯನ್ನು ರಚನೆ ಮಾಡಿ ಅದರ ವರದಿಯನ್ನು ಕೊಟ್ಟಿರುವುದು ಕೂಡ ಮಾನ್ಯ ಸದಸ್ಯರಿಗೆ ಗೊತ್ತಿದೆ. ಈ ನಂದಿ ಇನ್‌ಫ್ರಾಸ್ಟ್ರಕ್ಚರ್ ನೈಸ್ ಏನಿದೆ ಅದರಲ್ಲಿರುವಂತಹ ಲೋಪದೋಷಗಳನ್ನು ಸದನ ಸಮಿತಿ ವರದಿಯಲ್ಲಿ ಉಲ್ಲೇಖ ಮಾಡಿದ್ದಾರೆ. ಈ ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್‌ನಲ್ಲಿ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ನಲ್ಲಿ ಅನೇಕ ಲಿಟಿಗೇಷನ್‌ಗಳಿವೆ. ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ನಲ್ಲಿ ಏನು ತಕರಾರುಗಳಿವೆ ಅದನ್ನು ಗಮನದಲ್ಲಿಟ್ಟುಕೊಂಡೇ ಈ ವರದಿಯನ್ನು ಮಾಡಬೇಕೆಂದು ಸದನ ಸಮಿತಿಯ ವರದಿಯಲ್ಲಿ ಹೇಳಿದ್ದಾರೆ. ಈ ವರದಿಯನ್ನು ಜಾರಿ ಮಾಡುವ ವಿಚಾರದಲ್ಲಿ ಕಾನೂನು ಇಲಾಖೆ ಇನ್ನು ಯಾವುದೇ ಅಭಿಪ್ರಾಯವನ್ನು ಕೊಟ್ಟಿಲ್ಲ. ಲೋಕೋಪಯೋಗಿ ಇಲಾಖೆ ಅವರಿಂದ ವರದಿಯನ್ನು ಪಡೆದು ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ನಲ್ಲಿರತಕ್ಕಂಥ ತಕರಾರುಗಳನ್ನು ಗಮನದಲ್ಲಿಟ್ಟುಕೊಂಡು ನಾವು ಕ್ರಮ ತೆಗೆದುಕೊಳ್ಳಬೇಕಾಗಿರುವುದರಿಂದ ಸದನ ಸಮಿತಿ ಅಂತಹ ಸಲಹೆಗಳನ್ನೇ ಸರ್ಕಾರಕ್ಕೆ ಕೊಟ್ಟಿರುವುದರಿಂದ ಸೂಕ್ಷ್ಮವಾಗಿ ಇದನ್ನೆಲ್ಲಾ ಪರಿಗಣಿಸಿ ಅದಕ್ಕೆ ಕೋರ್ಟ್‌ಗಳಲ್ಲಿರತಕ್ಕಂಥ ತಕರಾರುಗಳೇನಿವೆ ಅದನ್ನೆಲ್ಲಾ ಗಮನದಲ್ಲಿಟ್ಟುಕೊಂಡು, ಸದನ ಸಮಿತಿಯ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ತೀರ್ಮಾನವನ್ನು ಸರ್ಕಾರ ಕೈಗೊಳ್ಳುತ್ತದೆ.

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:– ಮಾನ್ಯ ಸಭಾಪತಿಯವರೇ,....

ಸಭಾಪತಿಯವರು:– ಈಗ ಚರ್ಚೆ ಬೇಡ. ಇದು ಶೂನ್ಯ ವೇಳೆ. ತಾವು ಬೇರೆ ರೀತಿಯಲ್ಲಿ ನೋಟಿಸ್ ಕೊಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:– ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸದನಕ್ಕೆ ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆ. ಅದಕ್ಕೆ ನಾನು ಹೇಳಬೇಕಾಗುತ್ತದೆ. ಇದು ಬಹಳ ಗಂಭೀರವಾದ ವಿಷಯ. ಕಾನೂನು ಇಲಾಖೆ ಯಾವುದೇ ಅಭಿಪ್ರಾಯವನ್ನು ಕೊಟ್ಟಿಲ್ಲ ಎಂದು ಹೇಳಿದ್ದಾರೆ. ಸದನ ಸಮಿತಿಯಲ್ಲಿ ಚರ್ಚೆ ಮಾಡಿ, ಕಾನೂನು ಇಲಾಖೆಯ ಅಭಿಪ್ರಾಯವನ್ನು ಪಡೆದು ಎಲ್ಲಾ ಮಾಡಿದ್ದಾರೆ. ಮಾನ್ಯ ಸಚಿವರೇ, ಅದನ್ನು ಮುಚ್ಚಿ ಹಾಕುವ ಪ್ರಯತ್ನ ಮಾಡಬೇಡಿ. ಇದು ಬಹಳ ಗಂಭೀರವಾದಂತಹ ವಿಚಾರ. ಇದು ಎಷ್ಟು ವರ್ಷಗಳಿಂದ ನಡೆದಿದೆ. ಇಷ್ಟೆಲ್ಲಾ ಹಗಲು ದರೋಡೆ ಮಾಡುವುದಕ್ಕೆ ಬಿಟ್ಟಿದ್ದೀರಿ. ಇನ್ನೂ ಎಲ್ಲಿಯವರೆಗೆ ಬಿಡುತ್ತೀರಿ? ಈ ಕುರಿತು ತಕ್ಷಣ ನಿರ್ಧಾರ ತೆಗೆದುಕೊಂಡು ಸದನದಲ್ಲಿ ಪ್ರಕಟಣೆ ಮಾಡಿ. ನೀವು ಏನೇ ಮಾಡಿದರೂ ಕೂಡ ಅವರು ಕೋರ್ಟ್‌ಗೆ ಹೋಗುತ್ತಾರೆ. ಪ್ರತಿಯೊಂದನ್ನೂ ಕೋರ್ಟ್‌ಗೆ ಹಾಕುತ್ತಾರೆ. ಅದರ ಬಗ್ಗೆ ನೀವು ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಕೆ.ಬಿ.ಶ್ರೀಕಂಠೇಗೌಡ:– ಮಾನ್ಯ ಸಭಾಪತಿಯವರೇ, ಕಾನೂನು ಸಚಿವರ ಅಧ್ಯಕ್ಷತೆಯ ಸದನ ಸಮಿತಿಯೇ ವರದಿ ಕೊಟ್ಟು ಒಂದು ವರ್ಷ ಆಯಿತು. ಕಳೆದ ವರ್ಷ ಇಂತಹದ್ದೇ ಅಧಿವೇಶನದಲ್ಲಿ ವರದಿ ಮಂಡನೆಯಾಗಿದೆ. ಕಾನೂನು ಸಚಿವರೇ ವರದಿ ಕೊಟ್ಟ ಮೇಲೆ ಅಭಿಪ್ರಾಯ ಕೇಳುವುದೇನಿದೆ? ಅಕ್ರಮ ನಡೆದಿದೆ ಎನ್ನುವುದು ಸ್ಪಷ್ಟವಾಗಿದೆ. ಅಭಿಪ್ರಾಯ ಕೇಳುವುದಕ್ಕೆ ಒಂದು ವರ್ಷ ಬೇಕೇ?

ಸಭಾಪತಿಯವರು:– ಈಗ ಇದರ ಬಗ್ಗೆ ಚರ್ಚೆ ಬೇಡ.

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:– ಮಾನ್ಯ ಸಭಾಪತಿಯವರೇ, ಸಾರ್ವಜನಿಕ ಹಿತದೃಷ್ಟಿಯಿಂದ ಚರ್ಚೆ ಮಾಡಬೇಕಾಗುತ್ತದೆ.

ಶ್ರೀ ಕೆ.ಬಿ.ಶ್ರೀಕಂಠೇಗೌಡ:– ಮಾನ್ಯ ಸಭಾಪತಿಯವರೇ, ಸದನ ಸಮಿತಿಯ ಅಧ್ಯಕ್ಷರು ಕಾನೂನು ಸಚಿವರು. ಈ ಕೂಡಲೇ ನೈಸ್ ಒಪ್ಪಂದವನ್ನು ರದ್ದು ಮಾಡಿ ಎಂದು ಕಾನೂನು ಸಚಿವರೇ ಶಿಫಾರಸ್ಸು ಮಾಡಿದ್ದಾರೆ. ಆದರೂ ಏಕೆ ರದ್ದು ಮಾಡಿಲ್ಲ? ಕಾನೂನು ಸಚಿವರೇ ಅಧ್ಯಕ್ಷರಾದ ಮೇಲೆ ಬೇರೆ ಅಭಿಪ್ರಾಯ ಏಕೆ?

ಶ್ರೀ ಐವನ್ ಡಿ'ಸೋಜಾ:– ಮಾನ್ಯ ಸಭಾಪತಿಯವರೇ, ಈ ವಿಚಾರವನ್ನು ಬೇರೆ ರೂಪದಲ್ಲಿ ತರಬೇಕು. ಶೂನ್ಯ ವೇಳೆಯಲ್ಲಿ ಈ ರೀತಿ ಚರ್ಚೆ ಮಾಡುವುದು ಸರಿಯಲ್ಲ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:– ನೀವು ಸರ್ಕಾರಿ ಮುಖ್ಯ ಸಚೇತಕರಾಗಿ ಎಲ್ಲಾ ವಿಷಯಗಳಿಗೂ ಮಾತನಾಡಲು ಎದ್ದು ನಿಲ್ಲುತ್ತೀರಿ.

ಶ್ರೀ ಐವನ್ ಡಿ'ಸೋಜಾ:– ನೀವು ಕಾನೂನು ಪುಸ್ತಕ ತೆಗೆದುಕೊಳ್ಳುವುದಿಲ್ಲವೇ?

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:– ಇದು ಬಹಳ ಮಹತ್ವವಾದ ವಿಷಯ. ಸರ್ಕಾರ ಈ ರೀತಿ ಮಾಡುವುದು ಸರಿಯೇ?

ಶ್ರೀ ರಮೇಶ್ ಬಾಬು:– ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾದಂತಹ ವಿಷಯ. ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

ಸಭಾಪತಿಯವರು:– ಈಗ ಒಂಬತ್ತು ಜನರು ಎದ್ದು ನಿಂತಿದ್ದೀರಿ. ನಾನು ಯಾರ ಮಾತನ್ನು ಕೇಳಲಿ?

ಶ್ರೀ ಕೆ.ಟಿ.ಶ್ರೀಕಂಠೇಗೌಡ:– ಮಾನ್ಯ ಸಭಾಪತಿಯವರೇ, ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ನಾಳೆ ಅವಕಾಶ ಮಾಡಿಕೊಡಿ. It's a burning issue.

ಸಭಾಪತಿಯವರು:– ನೀವು ನೋಟಿಸ್ ಕೊಡಿ.

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:– ಮಾನ್ಯ ಸಭಾಪತಿಯವರೇ, ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಎರಡು–ಮೂರು ನೋಟಿಸ್ ಕೊಟ್ಟಿದ್ದೇವೆ. ಅದು ಇನ್ನು ಚರ್ಚೆಗೆ ಬಂದಿಲ್ಲ. ಈಗ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ನೋಟಿಸ್ ಕೊಡುತ್ತೇವೆ. ನಾಳೆಯಾದರೂ ಅವಕಾಶ ಕೊಡಿ.

ಸಭಾಪತಿಯವರು:– ಪ್ರಯತ್ನ ಮಾಡುತ್ತೇನೆ.

3. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಕಾರ್ಯದರ್ಶಿ:– ಮಾನ್ಯ ಸಭಾಪತಿಯವರೇ, ತಮ್ಮ ಅನುಮತಿಯೊಂದಿಗೆ ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದಿಡುತ್ತಿದ್ದೇನೆ.

ಅ) ಪ್ರಾಣಿಗಳಿಗೆ ಹಿಂಸಾಚಾರ ಮಾಡುವುದನ್ನು ತಡೆಗಟ್ಟುವ (ಕರ್ನಾಟಕ ಎರಡನೇ ತಿದ್ದುಪಡಿ) ವಿಧೇಯಕ, 2017

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆ) ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿರುವ ಸರ್ಕಾರಿ ನೌಕರರಿಗೆ ತತ್ಪರಿಣಾಮದ ಜೇಷ್ಠತೆಯನ್ನು ವಿಸ್ತರಿಸುವ ವಿಧೇಯಕ, 2017

4. ವರದಿಗಳನ್ನೊಪ್ಪಿಸುವುದು

ಅ) ಶ್ರೀ ವಿವೇಕ್‌ರಾವ್ ವಸಂತರಾವ್ ಪಾಟೀಲ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)(ಸದಸ್ಯರು, ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿ):- ಮಾನ್ಯ ಸಭಾಪತಿಯವರೇ, **2016-2017ನೇ ಸಾಲಿನ ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿಯ ಮೂವತ್ತೆರಡನೆಯ** ವರದಿಯನ್ನು ಸದನದಲ್ಲಿ ಒಪ್ಪಿಸುತ್ತಿದ್ದೇನೆ.

ಆ) ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)(ಸದಸ್ಯರು, ವಿಧಾನ ಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿ):- ಮಾನ್ಯ ಸಭಾಪತಿಯವರೇ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆಗಳಿಗೆ ಸಂಬಂಧಿಸಿದಂತೆ **2016-2017ನೇ ಸಾಲಿನ ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿಯ ಇಪ್ಪತ್ತ ನಾಲ್ಕನೆಯ** ವರದಿಯನ್ನು ಸದನದಲ್ಲಿ ಒಪ್ಪಿಸುತ್ತಿದ್ದೇನೆ.

ಇ) ಶ್ರೀ ವಿ.ಸೋಮಣ್ಣ(ವಿಧಾನಸಭಾ ಕ್ಷೇತ್ರ)(ಸದಸ್ಯರು, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ):- ಮಾನ್ಯ ಸಭಾಪತಿಯವರೇ, **2016-2017ನೇ ಸಾಲಿನ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಪರವಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸಂಬಂಧಿಸಿದ ಔಷಧಗಳ ಮತ್ತು ರಾಸಾಯನಿಕ ಖರೀದಿ ಮತ್ತು ವಿತರಣೆ ಬಗ್ಗೆ ಹತ್ತನೆಯ** ವರದಿಯನ್ನು ಸದನದಲ್ಲಿ ಒಪ್ಪಿಸುತ್ತಿದ್ದೇನೆ.

ಸಭಾಪತಿಯವರು:- ವರದಿಗಳನ್ನೊಪ್ಪಿಸಲಾಯಿತು.

5. ಅರ್ಜಿಗಳನ್ನೊಪ್ಪಿಸುವುದು

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೇ,

ಅ) ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಅಮಾಸೆಬೈಲು ಗ್ರಾಮದ **ಶ್ಯಾಮಿಹಕ್ಲು ಹಾಗೂ ಹರಳಹಕ್ಲು** ಜನವಸತಿ ಪ್ರದೇಶಗಳಿಗೆ ರಸ್ತೆ ಸಂಪರ್ಕ ಒದಗಿಸುವ ಬಗ್ಗೆ;

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆ) ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಅಮಾಸೆಬೈಲು ಗ್ರಾಮದ **ಶ್ಯಾಮಿಹಕ್ಲು** ಜನವಸತಿ ಪ್ರದೇಶದ ಕೃಷಿ ಜಮೀನಿಗೆ ನೀರನ್ನು ಒದಗಿಸುವ ಕಿಂಡಿ ಅಣೆಕಟ್ಟು ಮತ್ತು ನೀರಿನ ಚಾನಲ್ ಅನ್ನು ದುರಸ್ತಿಪಡಿಸಿ, ಪುನರ್ ನಿರ್ಮಿಸುವ ಬಗ್ಗೆ;

ಇ) ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಅಮಾಸೆಬೈಲು ಗ್ರಾಮದ **ಹರ್ಲಕ್ಲು** ಜನವಸತಿ ಪ್ರದೇಶದ ಕೃಷಿ ಜಮೀನಿಗೆ ನೀರನ್ನು ಒದಗಿಸುವ ಕಿಂಡಿ ಅಣೆಕಟ್ಟು ಮತ್ತು ನೀರಿನ ಚಾನಲ್ ಅನ್ನು ದುರಸ್ತಿಪಡಿಸಿ, ಪುನರ್ ನಿರ್ಮಿಸುವ ಬಗ್ಗೆ ಅರ್ಜಿಗಳನ್ನು ಒಪ್ಪಿಸುತ್ತಿದ್ದೇನೆ.

ಸಭಾಪತಿಯವರು:– ಅರ್ಜಿಗಳನ್ನು ಒಪ್ಪಿಸಲಾಯಿತು.

6. ಸಚಿವರ ಹೇಳಿಕೆಗಳು

ಅ) ಸರ್ಕಾರಿ ಜಾಗದಲ್ಲಿ ಅಕ್ರಮವಾಗಿ ನಿರ್ಮಾಣ ಮಾಡಿರುವ ಮನೆಗಳನ್ನು ಸಕ್ರಮಗೊಳಿಸುವ ಕುರಿತು.

.....

ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು):– ಮಾನ್ಯ ಸಭಾಪತಿಯವರೇ, ಮಾನ್ಯ ಕಂದಾಯ ಸಚಿವರ ಪರವಾಗಿ ಮಾನ್ಯ ಸದಸ್ಯರಾದ ಮಾನೆ ಶ್ರೀನಿವಾಸರವರು ದಿನಾಂಕ:14.11.2017 ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿರುವ ವಿಷಯಕ್ಕೆ ಸದನದಲ್ಲಿ ಉತ್ತರ ಮಂಡಿಸುತ್ತಿದ್ದೇನೆ.

(ಸಚಿವರ ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ)

ಆ) ಬೆಳಗಾವಿ ಜಿಲ್ಲೆ ಕಿತ್ತೂರು ತಾಲ್ಲೂಕಿನ ಅಂಬಡಗಟ್ಟಿ ಗ್ರಾಮದ ಮಾಜಿ ಸೈನಿಕರಿಗೆ ಶ್ರೀಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡದಿರುವ ಬಗ್ಗೆ.

.....

ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು):– ಮಾನ್ಯ ಸಭಾಪತಿಯವರೇ, ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ ಮಾನ್ಯ ಸದಸ್ಯರಾದ ಮಾನೆ ಶ್ರೀನಿವಾಸರವರು ದಿನಾಂಕ:16.11.2017 ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿರುವ ವಿಷಯಕ್ಕೆ ಸದನದಲ್ಲಿ ಉತ್ತರ ಮಂಡಿಸುತ್ತಿದ್ದೇನೆ.

(ಸಚಿವರ ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ)

ಇ) ಬೆಳಗಾವಿ ಸುವರ್ಣಸೌಧದಲ್ಲಿ ಯಾವುದೇ ಕಛೇರಿಗಳು ಪ್ರಾರಂಭವಾಗದಿರುವ ಬಗ್ಗೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

....

ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು):– ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಮಾನ್ಯ ಸದಸ್ಯರಾದ ಮಾನೆ ಶ್ರೀನಿವಾಸರವರು ದಿನಾಂಕ:20.11.2017 ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿರುವ ವಿಷಯಕ್ಕೆ ಸದನದಲ್ಲಿ ಉತ್ತರ ಮಂಡಿಸುತ್ತಿದ್ದೇನೆ.

(ಸಚಿವರ ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ)

ಈ) ಸಾಲ ಮರುಪಾವತಿ ಅವಧಿ ವಿಸ್ತರಣೆ ಕುರಿತು

....

ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು):– ಮಾನ್ಯ ಸಭಾಪತಿಯವರೇ, ಮಾನ್ಯ ಸಹಕಾರ ಸಚಿವರ ಪರವಾಗಿ ಶ್ರೀಮತಿ ಮೋಟಮ್ಮನವರು ದಿನಾಂಕ:17–11–2017 ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿರುವ ವಿಷಯಕ್ಕೆ ಸದನದಲ್ಲಿ ಉತ್ತರ ಮಂಡಿಸುತ್ತಿದ್ದೇನೆ.

(ಸಚಿವರ ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ)

ಸಭಾಪತಿಯವರು:– ನಾನು ಸದನದ ಮುಂದೆ ಒಂದು ಸಣ್ಣ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ನಾನು ಅನುಮತಿ ಕೊಡುವುದಕ್ಕಿಂತ ಮುಂಚೆ ಪೀಠಿಕೆ ಹಾಕುತ್ತಿದ್ದೇನೆ ಅಷ್ಟೆ. ಹಿರಿಯ ಸದಸ್ಯರಾದ ಮಾನ್ಯ ಶಾಣಪ್ಪನವರು ಬಹಳ ಪ್ರಮುಖವಾಗಿರುವಂತಹ ಅಂಶವನ್ನು ನಾನು ಪ್ರಸ್ತಾಪ ಮಾಡಬೇಕು, ನನಗೆ ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಒಟ್ಟಾರೆ ಹತ್ತು ನಿಮಿಷ ಮಾತ್ರ ಸಾಕು. ಭೋಜನ ವಿರಾಮಕ್ಕೆ ಮುಂಚೆಯೇ ಅದನ್ನು ತೆಗೆದುಕೊಳ್ಳಿ ಎಂದು ನನಗೊಂದು ಪತ್ರ ಕಳುಹಿಸಿಕೊಟ್ಟಿದ್ದಾರೆ. ಈ ವಿಷಯ ಕಾರ್ಯಕಲಾಪ ಪಟ್ಟಿಯಲ್ಲಿ ಕೊನೆಯಲ್ಲಿತ್ತು. ಅದನ್ನು ಭೋಜನ ವಿರಾಮಕ್ಕಿಂತ ಮುಂಚೆಯೇ ತೆಗೆದುಕೊಂಡುಬಿಟ್ಟರೆ ಹತ್ತು ನಿಮಿಷದಲ್ಲಿ ನಾನು ಮುಗಿಸುತ್ತೇನೆಂದು ಹೇಳುತ್ತಿದ್ದಾರೆ. ಸದನ ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಶಾಣಪ್ಪನವರು ವಿಷಯವನ್ನು ಪ್ರಸ್ತಾಪ ಮಾಡಬಹುದು.

7. ನಿಯಮ 68ರಡಿಯಲ್ಲಿ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ಚರ್ಚೆ

ವಿಷಯ: ಗುಂಡಿಗಿರ್ತಿ ಹೋಬಳಿ, ಚಿತ್ತಾಪುರ ತಾಲ್ಲೂಕಿಗೆ ಸಂಬಂಧಪಡುವ ಸಾವತ್‌ಕೇಡು, ಜೀವನ್‌ಮಾಡಗಿ, ಚೊಂಚಿ, ಕಮತ್‌ನೂರು, ನಿಪ್ಪಾಣಿ ಹಾಗೂ ಇನ್ನಿತರೆ ಹಳ್ಳಿಗಳನ್ನು ಚಿತ್ತಾಪುರ ತಾಲ್ಲೂಕಿಗೆ ಒಳಪಡಿಸಿ ಹೆಚ್ಚಿನ ಅನುಕೂಲ ಮಾಡಿಕೊಡುವ ಬಗ್ಗೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಕೆ.ಬಿ.ಶಾಣಪ್ಪ(ನಾಮನಿರ್ದೇಶಿತರು):– ಮಾನ್ಯ ಸಭಾಪತಿಯವರೇ, ನಿಯಮ 68ರಡಿಯಲ್ಲಿ ಬಹಳ ಪ್ರಮುಖವಾಗಿರುವ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. 1956 ನಂತರ ಇಡೀ ಕರ್ನಾಟಕ ಒಂದಾದ ಮೇಲೆ ಶ್ರೀ ಫಜಲ್ ಅಲಿ ಸಮಿತಿ ವರದಿ ಬಂದಿತು. ಅದರ ನಂತರ ಕರ್ನಾಟಕದಲ್ಲಿ ಹೊಸ ಆಯೋಗಗಳನ್ನು ಕೂಡಿಸುವುದಕ್ಕೆ ಪ್ರಾರಂಭ ಮಾಡಿದರು. ಆಯೋಗದಲ್ಲಿ ಮೊದಲು ಶ್ರೀ ವಾಸುದೇವ ರಾವ್ ಸಮಿತಿಯಲ್ಲಿ ಎಲ್ಲಾ ಜಿಲ್ಲೆಗಳಲ್ಲೂ ತಾಲ್ಲೂಕುಗಳನ್ನು ಹೆಚ್ಚಿಗೆ ಮಾಡಬೇಕೆಂದು ವರದಿ ಕೊಟ್ಟರು.

(ಮುಂದು)

1118/21-11-2017/1-40/bkp-rn

ಶ್ರೀ ಕೆ.ಬಿ.ಶಾಣಪ್ಪ(ಮುಂದು)

ತಾಲ್ಲೂಕುಗಳನ್ನು ಹೆಚ್ಚಿಗೆ ಮಾಡಬೇಕೆನ್ನುವ ಬಗ್ಗೆ ಒಂದು ವರದಿಯನ್ನು ಕೊಟ್ಟರು. ಎರಡನೆಯದಾಗಿ, ಶ್ರೀ ಟಿ.ಎಂ. ಹುಂಡೇಕರ್ ಕಮಿಟಿ ಒಂದು ರಿಪೋರ್ಟ್ ಕೊಟ್ಟಿದೆ. ಮೂರನೆಯದಾಗಿ, ಶ್ರೀ ಪಿ.ಸಿ. ಗದ್ದಿಗೌಡರ ವರದಿ ಬಂತು. ಆನಂತರ ಶ್ರೀ ಎಂ.ಬಿ.ಪ್ರಕಾಶ್ ರವರು ಒಂದು ರಿಪೋರ್ಟ್ ಕೊಟ್ಟರು. ಈ 4 ಕಮಿಟಿಯವರೂ ವರದಿಯನ್ನು ಕೊಟ್ಟರು.

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:– ಶ್ರೀಯುತ ಟಿ.ಎಂ. ಹುಂಡೇಕರ್ ರವರು ಸತ್ತು ಹೋದರು.

ಶ್ರೀ ಕೆ.ಬಿ.ಶಾಣಪ್ಪ:– ಸತ್ತವರದ್ದು ಒಂದು ರೆಕಾರ್ಡ್ ಇರಲಿ ಎಂದು ಇಲ್ಲಿ ಹೇಳುತ್ತಿದ್ದೇನೆ.

ಸಭಾಪತಿಯವರು:– ಶ್ರೀಯುತರು ನಿನ್ನೆ ತೀರಿಕೊಂಡಿದ್ದಾರೆ.

ಶ್ರೀ ಕೆ.ಬಿ.ಶಾಣಪ್ಪ:– ಅ ಒಂದು ಆಧಾರದ ಮೇಲೆ ಸನ್ಮಾನ್ಯ ಶ್ರೀ ಜಗದೀಶ್ ಶೆಟ್ಟರ್ ರವರು ಮುಖ್ಯಮಂತ್ರಿಯಾಗಿದ್ದಂತಹ ಸಮಯದಲ್ಲಿ ಇದೇ ಸದನದಲ್ಲಿ 40 ತಾಲ್ಲೂಕುಗಳನ್ನು ಡಿಕ್ಲೇರ್ ಮಾಡಿದರು. ತದನಂತರ ತಮ್ಮ ಸರ್ಕಾರ ಬಂದ ನಂತರ ಇನ್ನು 9 ತಾಲ್ಲೂಕುಗಳನ್ನು ಹೆಚ್ಚುವರಿಯಾಗಿ ಮಾಡಿ ಒಟ್ಟಾರೆ 49 ತಾಲ್ಲೂಕುಗಳನ್ನು ಡಿಕ್ಲೇರ್ ಮಾಡಿದ್ದು ನಮ್ಮ ಜನರಿಗೆ ಆನಂದವಾಯಿತು. ಅವುಗಳು ಇನ್ನೂ function ಮಾಡುತ್ತಿಲ್ಲ. ನಮ್ಮ ಗುಲ್ಬರ್ಗ ಜಿಲ್ಲೆಯಲ್ಲಿ ಕಮಲಾಪುರವನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡಿದ ನಂತರ ನಮ್ಮ ತಾಲ್ಲೂಕಾದ ಚಿತ್ತಾಪುರದ 3 ತಾಲ್ಲೂಕುಗಳಾದವು. ಚಿತ್ತಾಪುರ,

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾಳಗಿ, ಮತ್ತೆ ಶಹಾಬಾದ್. The Government has taken that view for the purpose of administration. ಆದಷ್ಟು ಮಟ್ಟಿಗೆ ತಾಲ್ಲೂಕು ಸಮೀಪ ಹಳ್ಳಿಗಳು ಇರಬೇಕೆಂದು ಮಾಡಲಾಯಿತು. ಆ ಒಂದು ಸಣ್ಣ ವಿಚಾರವನ್ನು ನಾನು ಓದಿ ತಮಗೆ ಹೇಳುತ್ತೇನೆ.

ಈ ಎಲ್ಲಾ ವರದಿಗಳ ನಂತರ ಚಿತ್ತಾಪುರ ತಾಲ್ಲೂಕಿನ ಗುಂಡಗುರ್ತಿ ಹೋಬಳಿಯಲ್ಲಿ ಬರುವಂತಹ ಹಳ್ಳಿಗಳನ್ನು ಕಾಳಗಿ ತಾಲ್ಲೂಕಿನಲ್ಲಿ ಸೇರಿಸದೇ ಪ್ರಸ್ತುತ ಹಳ್ಳಿಗಳು ಚಿತ್ತಾಪುರ ತಾಲ್ಲೂಕಿನಲ್ಲಿಯೇ ಸೇರಿಕೊಂಡು ಹೋಗಬೇಕೆನ್ನುವ ಪ್ರಯತ್ನ ಅಲ್ಲಿ ನಡೆದಿದೆ. ಅದನ್ನು ಯಾರು ಮಾಡುತ್ತಿದ್ದಾರೆಂದು ನಾನು ಹೇಳಲಿಕ್ಕೆ ಹೋಗುವುದಿಲ್ಲ. ಸರ್ಕಾರವೆಂದೇ ನಾನು ಹೇಳಲಿಕ್ಕೆ ಬಯಸುತ್ತೇನೆ. ಆದರೆ, ಪ್ರಸ್ತುತ ಚಿತ್ತಾಪುರ ತಾಲ್ಲೂಕಿನಲ್ಲಿನ ಗುಂಡುಗುರ್ತಿ ಹೋಬಳಿಗೆ ಸಂಬಂಧಪಟ್ಟ ಹಳ್ಳಿಗಳಾದ ಸಾವತಖೇಡ, ಜೀವನಮರಡಗಿ, ತೊಣಚಿ, ಕಾಮಕನೂರು, ನಿಪ್ಪಾಣಿ, ಹೆಬ್ಬಾಳ, ಅಶೋಕನಗರ, ಮಲಘಾಣ, ಗುಂಡಗುರ್ತಿ, ಕೋರವಾರ, ವಾಚಾ, ಮುಚಖೇಡ, ಇಂದನಕಲ್ಲು, ಮಟ್ಟಿಮುಡು, ಹದನೂರು, ಮಾಡಬೀಳು, ಸಂಗವಿ ಮತ್ತು ಬೆನ್ನೂರು ಭೆಡಸೂರು, ಮೊಗಲನಗಾಂವ, ಬೆಲಗುಂಪಾ ಈ ಹಳ್ಳಿಗಳನ್ನೆಲ್ಲಾ ...

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:– ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುತ್ತಿರುವ ಈ ವಿಚಾರವನ್ನು ಯಾರು ಕೇಳುತ್ತಿದ್ದಾರೆ, ಮಂತ್ರಿಗಳ್ಯಾರೂ ಸಹ ಇರುವುದಿಲ್ಲ. ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಕ್ಕರೆ ರಾಜ್ಯ ಸಚಿವರಾದ ಶ್ರೀಮತಿ ಎಂ.ಸಿ. ಮೋಹನ ಕುಮಾರಿ ಒಬ್ಬರು ಮಾತ್ರ ಸದನದಲ್ಲಿ ಕುಳಿತಿದ್ದಾರೆ. ಅವರು ಹೊಸದಾಗಿ ಮಂತ್ರಿಗಳಾಗಿ ಬಂದಿದ್ದಾರೆ.

ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):– ಈಗ ಯಾವ್ಯಾವ ಸಚಿವರು ಸದನದಲ್ಲಿ ಹಾಜರಿರಬೇಕೆಂದು ಸರ್ಕಾರಿ ಮುಖ್ಯ ಸಚೇತಕರು ಹೇಳಬೇಕು. ಈ ಕೆಲಸವನ್ನು ಬಿಟ್ಟು ಒಂದೊಂದು ವೇಳೆ ಸಭಾಪತಿಗಳ ಕೆಲಸವನ್ನೂ ಸಹ ಇವರು ಮಾಡುತ್ತಾರೆ, ಈಗ ಅವರು ಈ ಬಗ್ಗೆ ಹೇಳಬೇಕು. ಸಚಿವರ ಕುರ್ಚಿಗಳೆಲ್ಲವೂ ಖಾಲಿ ಇವೆ. ಇದರ ಅರ್ಥ ಏನು?

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:– ಇದನ್ನು ಅವರಿಗೆ ಹೇಳಬೇಡಿ.

ಶ್ರೀ ಕೆ.ಟಿ.ಶ್ರೀಕಂಠೇಗೌಡ:– ಇಲ್ಲಿ ಅಧಿವೇಶನ ನಡೆಯುತ್ತಿದ್ದರೆ ಅಲ್ಲಿ ಎಲ್ಲೋ ಹೋಗಿ ಕಾರ್ಯಕ್ರಮ ಮಾಡುತ್ತೀರಿ?

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಭಾಪತಿಯವರು:– ಶ್ರೀಯುತ ಕೆ.ಬಿ.ಶಾಣಪ್ಪನವರಿಗೆ ಮಾತನಾಡಲಿಕ್ಕೆ ಬಿಡಿ. ಶ್ರೀಯುತ ಶಾಣಪ್ಪನವರು ಅಪರೂಪಕ್ಕೆ ಮಾತನಾಡಲಿಕ್ಕೆ ನಿಂತಿದ್ದಾರೆ, ನೀವು ಮಧ್ಯ ಏತಕ್ಕೆ ಬಾಯಿ ಹಾಕುತ್ತೀರಿ?

ಶ್ರೀ ಕೆ.ಬಿ.ಶಾಣಪ್ಪ:– ಸಭಾಪತಿಯವರು ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟಿದ್ದಾರೆ.

(ಗೊಂದಲ)

ಸಭಾಪತಿಯವರು:– ಶ್ರೀಯುತ ಶಾಣಪ್ಪನವರೆ, ನಿಮ್ಮ ವಿಚಾರವನ್ನು ಹೇಳಿ.

ಶ್ರೀ ಕೆ.ಬಿ. ಶಾಣಪ್ಪ:– ಮೊದಲು ಈ ಎಲ್ಲಾ ಹಳ್ಳಿಗಳು ಚಿತ್ತಾಪುರ ತಾಲ್ಲೂಕಿನಲ್ಲಿದ್ದವು. ಇವುಗಳು ಕಾಳಗಿ ತಾಲ್ಲೂಕಿನಲ್ಲಿ ಸೇರಬೇಕೆಂದು ಈ 4 ವರದಿಗಳು ಹೇಳಿದ್ದವು. ಆದರೆ, ಹೊಸದಾಗಿ ರಚನೆಯಾಗಿರುವ ಈ ಕಾಳಗಿ ತಾಲ್ಲೂಕಿನಲ್ಲಿ ಸದರಿ ಮೇಲ್ಕಂಡ ಎಲ್ಲಾ ಹಳ್ಳಿಗಳು ಸೇರಬೇಕು. ಇವುಗಳು ಚಿತ್ತಾಪುರಕ್ಕೆ ಸುಮಾರು ೫೦ ಕಿ.ಮೀ ದೂರದಲ್ಲಿವೆ. ನಾನು ಹೆಚ್ಚಿನ ವಿವರ ಕೊಡಲಿಕ್ಕೆ ಹೋಗುವುದಿಲ್ಲ. ಆ ಹಳ್ಳಿಗಳು ಕಾಳಗಿ ತಾಲ್ಲೂಕಿನಲ್ಲಿ ಆದರೆ, ಅಲ್ಲಿ ಪ್ರತಿಯೊಂದು ಸವಲತ್ತುಗಳಿವೆ. ಕೆಲವರು ಏನು ಮಾಡಲಿಕ್ಕೆ ಹೊರಟಿದ್ದಾರೆಂದರೆ ಇದರಲ್ಲಿ ರಾಜಕೀಯ ಮಾಡಲಿಕ್ಕೆ ಹೊರಟಿದ್ದಾರೆ. ಈ ವಿಚಾರದಲ್ಲಿ ರಾಜಕೀಯ ಮಾಡಬಾರದು. We appreciate that Government has taken this view for the purpose of administration. But if the politics comes in between, the purpose of reorganization of talukas is going to be suffered. ಅದಕ್ಕಾಗಿ, ನಾನು ಕೊನೆಯದಾಗಿ ಒಂದು ವಿಚಾರವನ್ನು ಹೇಳಲಿಕ್ಕೆ ಬಯಸುತ್ತೇನೆ. ಈ ನಾಲ್ಕು ಕಮಿಟಿಯ ವರದಿಗಳು ಹೇಳಿದಂತೆ ಈ ಎಲ್ಲಾ ಹಳ್ಳಿಗಳು ಕಾಳಗಿ ತಾಲ್ಲೂಕಿನಲ್ಲಿಯೇ ಇರಬೇಕು. ಅಲ್ಲಿ ಇದ್ದಂತಹ ಶಾಸಕರು, ಅದಕ್ಕೆ ಸಂಬಂಧಪಟ್ಟಂತಹವರು ಯಾವುದೋ ಒಂದು ವಿಚಾರವನ್ನು ತೆಗೆದುಕೊಂಡು ೫೦ ಕಿ.ಮೀ ದೂರದಲ್ಲಿರುವ ಚಿತ್ತಾಪುರ ತಾಲ್ಲೂಕಿಗೆ ಹಾಕಿದರೆ ಉದ್ದೇಶ ಸಫಲವಾಗುವುದಿಲ್ಲ. ಅಲ್ಲಿ ಇರುವಂತಹ ರೈತರಿಗೆ, ಜನರಿಗೆ ಅಂದರೆ ಪ್ರತಿಯೊಬ್ಬರಿಗೆ ತ್ರಾಸ್ ಕೊಟ್ಟಂತಾಗುತ್ತದೆ. ದಯಮಾಡಿ ಈ ಒಂದು ಕೆಲಸವನ್ನು ಸರ್ಕಾರ ಮಾಡಬಾರದು.

ಮತ್ತೆ, ನಾನು ಕೆಲವು ವಿಚಾರಗಳನ್ನು ಹೇಳಲಿಕ್ಕೆ ಬಯಸುತ್ತೇನೆ. ಕಾಳಗಿಯನ್ನು ತಾಲ್ಲೂಕು ಮಾಡಲಿಕ್ಕೆ ಎಲ್ಲಾ ಅನುಕೂಲಗಳಿವೆ. ಈ ತಾಲ್ಲೂಕುಗಳು ಆದನಂತರ ಮೊನ್ನೆ 13ನೇ ಚುನಾವಣೆಯೂ ಸಹ ಆಗಿದೆ. ಈ ತಾಲ್ಲೂಕಿನಲ್ಲಿ ಡಿವೈಎಸ್‌ಪಿ ಕಚೇರಿ ಇದೆ, ಕಾಲೇಜುಗಳಿವೆ, ಕೆ.ಇ.ಬಿ. ಕಚೇರಿಗಳಿವೆ, ಅಸಿಸ್ಟೆಂಟ್ ಕಮಿಷನರ್ ಕಚೇರಿಯನ್ನು ಈಗ ಚಿತ್ತಾಪುರಕ್ಕೆ ಮಾಡಬೇಕೆಂದಿದ್ದಾರೆ. ಈ ಎಲ್ಲಾ ಕೆಲಸ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುವುದರಿಂದ ಜನಗಳಿಗೆ ಅನುಕೂಲವಾಗುತ್ತದೆ. ಈ 19 ಹಳ್ಳಿಗಳನ್ನು ಚಿತ್ತಾಪುರಕ್ಕೆ ಸೇರಿಸಿದರೆ ಕಾಳಗಿ ಬಡವಾಗುತ್ತದೆ. ಯಾವುದೇ ಒಂದು ತಾಲ್ಲೂಕನ್ನು ಮಾಡಬೇಕಾದರೆ ಜನಸಂಖ್ಯೆ, geographical situations ಇವೆಲ್ಲವುಗಳನ್ನು ನೋಡಿಕೊಂಡು ಮಾಡಬೇಕಾಗುತ್ತದೆ. 4 ಕಮಿಟಿಗಳು ಕೊಟ್ಟಂತಹ ವರದಿಯನ್ನು ಸರ್ಕಾರ ಒಪ್ಪಿದೆ. ನಾವು ಸಹ ಒಪ್ಪಿದ್ದೇವೆ. ಯಾವುದೋ ಒಂದು ಕಾರಣದಿಂದ ಜನರಿಗೆ ತ್ರಾಸ್ ಕೊಡುವುದು ಸರಿಯಲ್ಲ. ಈ ಹಳ್ಳಿಗಳು ಚಿತ್ತಾಪುರ ವಿಧಾನಸಭಾ ಕ್ಷೇತ್ರಕ್ಕೆ ಬರುತ್ತವೆ. ಈ ಒಂದು ಕೆಲಸವನ್ನು ನೀವು ಮಾಡಬೇಡಿ. ಅಲ್ಲಿ ಬಂಡಾಯ ನಡೆದಿದೆ. ಜನಗಳ ಮಧ್ಯದಲ್ಲಿ ಒಂದು ರೀತಿಯ ಅಶಾಂತಿ ಪ್ರಾರಂಭವಾಗಿದೆ. ನಾವು 50 ಕಿ.ಮೀ ಹೇಗೆ ಹೋಗಬೇಕು, ಗುಂಡುಗುರ್ತಿ ಹೋಬಳಿಯಲ್ಲಿ ಬರುವ ಒಟ್ಟು ಹಳ್ಳಿಗಳನ್ನು ಚಿತ್ತಾಪುರಕ್ಕೆ ಹಾಕಿದರೆ, you cannot declare Kalagi as a Taluka Headquarter. Therefore, through this House I request the Government to intervene in this matter. ಅಲ್ಲಿ ಇದ್ದವರು ಕೆಲವರು ಈ ವಿಚಾರವಾಗಿ ಶಿಫಾರಸ್ಸು ಮಾಡಿ ಕಳುಹಿಸಬೇಕೆಂದು ಹೇಳುತ್ತಾರೆ. ನಾನು ಶಾಸಕರುಗಳ ಹೆಸರುಗಳನ್ನು ತೆಗೆದುಕೊಳ್ಳಲಿಕ್ಕೆ ಹೋಗುವುದಿಲ್ಲ. ಅವರು ಮಾಡುವಂತಹ ಪ್ರಯತ್ನ ಸರಿ ಹೋಗುವುದಿಲ್ಲ. ಇದಕ್ಕೆ ನಮ್ಮ ಭಾಗದ ದೊಡ್ಡ ನಾಯಕರಾದ ಶ್ರೀಯುತ ಮಲ್ಲಿಕಾರ್ಜುನ್ ಖರ್ಗೆಯವರು, ಶ್ರೀಯುತ ಶುಭಾಷ್. . ಶಾಸಕರುಗಳು ಈ ರೀತಿಯಲ್ಲಿ ಪ್ರತಿಯೊಬ್ಬರು ಈ ಹಳ್ಳಿಗಳು ಕಾಳಗಿಯಲ್ಲಿ ಇರಬೇಕೆಂದು ಶಿಫಾರಸ್ಸು ಮಾಡಿದಂತಹ ಹಳ್ಳಿಗಳಾಗಿವೆ. ಮುಂದಿನ ದಿನಗಳಲ್ಲಿ ನಾವು ಆ ತಾಲ್ಲೂಕಿನಲ್ಲಿ ಬಾಳಬೇಕಾದವರು, ಆ ತಾಲ್ಲೂಕಿನಲ್ಲಿ ಶಾಂತಿ ಇರಬೇಕು, ರೈತರು ಬಂಡಾಯ ಮಾಡುವಂತಹ ಪರಿಸ್ಥಿತಿಯನ್ನು ತರಬಾರದು ಎನ್ನುವಂತಹ ಒಂದು ದೃಷ್ಟಿಕೋನದಿಂದ ತಾವು ಕೊಟ್ಟಂತಹ ಅನುಮತಿಯ ಅವಧಿಯಲ್ಲಿಯೇ ನಾನು ಸರ್ಕಾರಕ್ಕೆ ಕಳಕಳಿಯ ಮನವಿಯನ್ನು ಮಾಡುತ್ತಿದ್ದೇನೆ. ದಯಮಾಡಿ, convey my feelings because I come from that village. ಅನೇಕ ವರ್ಷಗಳಿಂದ ಅಲ್ಲಿ ರಾಜಕೀಯ ಮಾಡಿದ್ದೇವೆ. ಜನರಿಗೆ ತ್ರಾಸ್ ಕೊಡಬೇಡಿ, ರೈತರಿಗೆ ತ್ರಾಸ್ ಕೊಡಬೇಡಿ. ತಾಲ್ಲೂಕು ಕೇಂದ್ರ ಕಚೇರಿಗೆ ಹೋಗಬೇಕೆಂದರೆ ಎಷ್ಟು ಹಣ ಖರ್ಚಾಗುತ್ತದೆನ್ನುವುದನ್ನು ತಾವು ನೋಡಬೇಕು. ಆ ಎಲ್ಲಾ ಹಿನ್ನೆಲೆಯಲ್ಲಿ reorganization of talukas ಬಗ್ಗೆ ಏನು 4 ವರದಿಗಳಿವೆ, ಅದು ಅದರ ಆಧಾರದ ಮೇಲೆ ಇವತ್ತು ಕಾಳಗಿ ತಾಲ್ಲೂಕು ಆಗಿದೆ. ಗುಂಡುಗುರ್ತಿ ಸರ್ಕಲ್‌ನಲ್ಲಿ ಇದ್ದಂತಹ ಹಳ್ಳಿಗಳು ಕಾಳಗಿಯಲ್ಲಿಯೇ ಇರಬೇಕು. ಚಿತ್ತಾಪುರಕ್ಕೆ ಇಂತಹ ಹಳ್ಳಿಗಳು ಇರಬೇಕೆಂದು ಏನು ವರದಿಯಲ್ಲಿ ಹೇಳಲಾಗಿದೆ, ಅವುಗಳು ಚಿತ್ತಾಪುರದಲ್ಲಿಯೇ ಇರಬೇಕು. ಶಹಾಬಾದ್‌ಗೆ ಏನು ತೋರಿಸಲಾಗಿದೆ. ಅದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಶಹಾಬಾದ್‌ಗೆ ಇರಬೇಕು. ಈ ಒಂದು ಮನವಿಯನ್ನು ಸರ್ಕಾರಕ್ಕೆ ಮಾನ್ಯ ಸಭಾನಾಯಕರು ತಿಳಿಸಿ, ಮುಂದೆ ಗೊಂದಲವಾಗದಂತೆ ಮತ್ತು ಕಾನೂನು ವ್ಯವಸ್ಥೆ ಕೆಡದಂತೆ ನೋಡಿಕೊಳ್ಳಬೇಕೆನ್ನುವ ಒಂದು ವಿನಂತಿಯನ್ನು ಮಾಡುತ್ತೇನೆ.

ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು):– ಮಾನ್ಯ ಸಭಾಪತಿಯವರೇ, ನಮ್ಮ ಹಿರಿಯ ಸದಸ್ಯರಾದ ಶ್ರೀಮಾನ್ ಕೆ.ಬಿ.ಶಾಣಪ್ಪನವರ ಅನಿಸಿಕೆಗಳನ್ನೆಲ್ಲಾ ಸರ್ಕಾರ ಗಮನಿಸಿದೆ. ನಾನು ನಮ್ಮ ಮಾನ್ಯ ಕಂದಾಯ ಸಚಿವರ ಗಮನಕ್ಕೆ ಈ ಎಲ್ಲಾ ಅಂಶಗಳನ್ನು ತರುವುದರ ಮೂಲಕ ಯಾವುದೇ ರೀತಿಯಲ್ಲಿ ಅನ್ಯಾಯವಾಗದ ರೀತಿಯಲ್ಲಿ ಸರ್ಕಾರ ಒಂದು ಕ್ರಮವನ್ನು ತೆಗೆದುಕೊಳ್ಳುತ್ತದೆ.

ಸಭಾಪತಿಯವರು:– ಒಂದು ವಿಚಾರವನ್ನು ಸಭೆಯ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಇವತ್ತು ವಿಶೇಷ ಪ್ರಸ್ತಾವ ಎಂದು ಹೇಳಿ ಅಜೆಂಡಾದಲ್ಲಿ ಹಾಕಿಸಿದ್ದೇವೆ. ಅದನ್ನು ನಾನು ಓದುತ್ತೇನೆ;

"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಗಳ ನಿಯಮಗಳ ನಿಯಮ 161ರ ಮೇರೆಗೆ ಕಾರ್ಯಕಲಾಪಗಳ ಸಲಹಾ ಸಮಿತಿಯ ಶಿಫಾರಸ್ಸಿನ ಅನ್ವಯ ಉತ್ತರ ಕರ್ನಾಟಕ ಭಾಗದ ಸಮಗ್ರ ಅಭಿವೃದ್ಧಿಗಾಗಿ ಕೈಗೊಳ್ಳಬೇಕಾಗಿರುವ ಕ್ರಮಗಳ ಬಗ್ಗೆ ಚರ್ಚೆ ಎಂದು ಅಜೆಂಡಾದಲ್ಲಿ ಹಾಕಿಸಿದ್ದೇವೆ.

ಬಹುಶಃ ತಮಗೆಲ್ಲಾ ನೆನಪಿದೆ. ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆ ನಡೆದಂತಹ ದಿವಸ ಅಲ್ಲಿ ಏನು ಚರ್ಚೆ ಮಾಡಿ ತೀರ್ಮಾನವಾಗಿದೆ, ಸಭೆಯ ಒಪ್ಪಿಗೆಯನ್ನು ಕೇಳಿದ್ದೇವೆ, ಸಭೆಯಲ್ಲಿ ತಾವು ಸಹ ಒಪ್ಪಿಗೆಯನ್ನು ಕೊಟ್ಟಿದ್ದೀರಿ. ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ ಚರ್ಚೆಗೆ ಸಮಯದ ಅವಕಾಶ ಕೊಡಬೇಕೆಂದು ತೀರ್ಮಾನವಾಗಿದೆ. ಆ ಒಂದು ತೀರ್ಮಾನ ಅಲ್ಲಿಯೇ ಆಗಿತ್ತು. ಆ ಹಿನ್ನೆಲೆಯಲ್ಲಿ ತುಂಬಾ ಜನ ಸದಸ್ಯರು ಅಂದರೆ, ಶ್ರೀಯುತ ಬಸವರಾಜ ಹೊರಟ್ಟಿಯವರು ಇರಬಹುದು ಹಾಗೂ ಇನ್ನಿತರ ಬಹಳಷ್ಟು ಸದಸ್ಯರುಗಳು ಈ ವಿಷಯದ ಬಗ್ಗೆ ಚರ್ಚೆಯಾಗಬೇಕೆಂದು ಪ್ರಸ್ತಾವನೆಯನ್ನು ಮಂಡಿಸಿದ್ದಾರೆ. ಅಂದರೆ, ಈ ವಿಚಾರದಲ್ಲಿ ಅವರುಗಳು ಪತ್ರಗಳನ್ನು ಬರೆದಿದ್ದಾರೆ. ಈ ಹಿನ್ನೆಲೆಯಲ್ಲಿ ಇವತ್ತು ಮಧ್ಯಾಹ್ನ ಭೋಜನಾ ನಂತರ ಏನು ಸಭೆ ಸೇರುತ್ತದೆ, ಆಗಿನಿಂದ ಸಭೆ ಪೂರ್ಣವಾಗುವವರೆಗೂ ಇವತ್ತು ಪೂರ್ಣವಾಗಿ ಆ ವಿಷಯವಾಗಿ ಮಾತ್ರ ಚರ್ಚೆಯನ್ನು ನಾವು ತೆಗೆದುಕೊಳ್ಳುತ್ತೇವೆ. ಈ ವಿಶೇಷ ಪ್ರಸ್ತಾವನೆ ಏನೆಂದರೆ, ಈ ವಿಚಾರವಾಗಿ ಮಾತನಾಡಬೇಕೆಂದು ಹೇಳಿ ಆ ಭಾಗದ ಎಲ್ಲಾ ಸದಸ್ಯರುಗಳು ಉತ್ತರ ಕರ್ನಾಟಕದ, ಅದು ಗುಲ್ಬರ್ಗ ಇರಬಹುದು, ಬೀದರ್ ಇರಬಹುದು, ರಾಯಚೂರು ಇರಬಹುದು, ಬಳ್ಳಾರಿ ಇರಬಹುದು, ಕೊಪ್ಪಳ ಇರಬಹುದು, ಅಥವಾ ಹುಬ್ಬಳ್ಳಿ, ಯಾದಗಿರಿ ಇರಬಹುದು, ಈ ಜಿಲ್ಲೆಗಳಿಂದ ಬಂದಿರತಕ್ಕಂತಹ ನಮ್ಮ ಗೌರವಾನ್ವಿತ ಸದಸ್ಯರುಗಳಿಗೆ ಮಾತನಾಡಲಿಕ್ಕೆ ನಾನು ಅವಕಾಶ ಕೊಡಬೇಕೆಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನಿಸಿದೆ. ಬೇರೆಯವರು ಮಧ್ಯ ಬಾಯಿ ಹಾಕಬಾರದು ಎಂದೇನೂ ಇಲ್ಲ. ಬೇರೆಯವರು ಮಧ್ಯ-ಮಧ್ಯ ಬಾಯಿ ಹಾಕಬಹುದು. ಆದರೆ, ನನ್ನ ಒಂದು ಮನವಿ ಏನೆಂದರೆ, ಮಾತನಾಡುವವರು ಬಹಳಷ್ಟು ಮಂದಿ ಸದಸ್ಯರಿದ್ದಾರೆ, ನನ್ನ ಹತ್ತಿರ ಸಮಯ ಅಂದರೆ ಮಧ್ಯಾಹ್ನ ಸೇರಿದಂತಹ ಸಮಯದಿಂದ ಹಿಡಿದು 3 ಗಂಟೆ ಅಥವಾ 3-30 ಗಂಟೆ ಸಮಯ ಇರುತ್ತದೆ. ಹೀಗಾಗಿ, ಮಾತನಾಡುವವರು 10 ನಿಮಿಷಗಳಿಗಿಂತ ಹೆಚ್ಚು ಯಾರು ಮಾತನಾಡುವುದು ಬೇಡ. ಒಬ್ಬೊಬ್ಬರು ಒಂದೊಂದು ವಿಷಯದ ಮೇಲೆ ಮಾತನಾಡೋಣ. ಉದಾಹರಣೆಗೆ ನೀರಿನ ಬಗ್ಗೆ ಮಾತನಾಡಿದರೆ ಇಡೀ ಸಮಗ್ರ ನೀರಿನ ಯೋಜನೆ ಬಗ್ಗೆ ಮಾತನಾಡುವ ಬದಲು ಯಾವುದಾದರೊಂದು ಆಲಮಟ್ಟಿಯ ಬಗ್ಗೆಯಾಗಲಿ, ಮತ್ತೊಂದರ ಬಗ್ಗೆ ಆಗಲಿ ಮಾತನಾಡಬಹುದು.

<u>ಮುಂದು.</u> . .

(1119)21.11.2017-01.50-ಎಸ್‌ವಿ(ಎಲ್‌ಎಲ್)-ಆರ್‌ಎನ್

ಸಭಾಪತಿಯವರು:- (ಮುಂದುವರೆದಿದ್ದು...)

ಉದಾಹರಣೆಗೆ ನೀರಿನ ಬಗ್ಗೆ ಮಾತನಾಡುವುದಾದರೆ, ಇಡೀ ಸಮಗ್ರ ನೀರಿನ ಯೋಜನೆ ಬಗ್ಗೆ ಮಾತನಾಡುವ ಬದಲಾಗಿ ಯಾವುದಾದರೂ, ಆಲಮಟ್ಟಿ ಜಲಾಶಯ ಮತ್ತೊಂದು ಜಲಾಶಯದ ಬಗ್ಗೆ ಅಥವಾ ರಸ್ತೆ ಬಗ್ಗೆ, ಈ ರೀತಿ ಒಬ್ಬರು ಒಂದು ವಿಷಯದ ಮೇಲೆ 10-10 ನಿಮಿಷಗಳ ಸಮಯ ಮಾತನಾಡಿದರೆ ಹೆಚ್ಚಿಗೆ ಜನ ತಮ್ಮ ಅಭಿಪ್ರಾಯ ಹೇಳಲು ಅವಕಾಶ ಸಿಗುತ್ತದೆ. Details ಗೆ ಹೋಗದೆ ಹಾಗೆ ಚರ್ಚೆಯಲ್ಲಿ ಭಾಗವಹಿಸಬೇಕು ಮತ್ತು ಮೊನ್ನೆಯ ದಿವಸ ಪ್ರಶ್ನೋತ್ತರ ಅವಧಿಯಲ್ಲಿ ಹೈದರಾಬಾದ್-ಕರ್ನಾಟಕ ಪ್ರದೇಶ ಅಭಿವೃದ್ಧಿ ವಿಷಯ ಬಂದಾಗ ಚರ್ಚೆ ಮಾಡಲು ಅವಕಾಶ ಕೊಡಿ ಎಂದು ಕೇಳಿದ್ದರು, ಅದಕ್ಕೆ ನಾನು ಒಂದು ಪತ್ರ ಕೊಡಿ ಎಂದು ಹೇಳಿದ್ದೆನು. ಅದರ ಪ್ರಕಾರ ಅವರು ಪತ್ರ ಕೊಟ್ಟಿದ್ದಾರೆ. ಆದುದರಿಂದ, ಅವರಿಗೂ ಸಹ ಅವಕಾಶ ಸಿಗಬೇಕು. ಇವತ್ತು ಆಗಲೇ ಮಂಗಳವಾರ, ನಾಳೆ ಬುಧವಾರ, ಗುರುವಾರ, ಶುಕ್ರವಾರ ಮೂರೇ ದಿವಸ ನನ್ನ ಹತ್ತಿರ ಇರುವುದು. ಇನ್ನು ಅನೇಕ ವಿಷಯಗಳು ಮತ್ತು ಹಣಕಾಸಿನ ವಿಧೇಯಕಗಳು ಸಹ ನನ್ನ ಮುಂದೆ ಬರುವುದಿದೆ ಎಂದು ನನಗೆ ಗೊತ್ತಿದೆ. ಹಾಗಾಗಿ, ಎಲ್ಲಾ ವಿಷಯಗಳಿಗೂ ನಾನು ಸಮಯ ಹೊಂದಾಣಿಕೆ ಮಾಡಬೇಕಾಗಿರುವ ಕಾರಣಕ್ಕಾಗಿ ಹೆಚ್ಚಿಗೆ ಸಮಯ ಕೊಡಬೇಕೆಂದು ಮನಸ್ಸಿನಲ್ಲಿ ಆಸೆ ಇದ್ದರೂ...

(ಗೊಂದಲ)

ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಈ ವಿಷಯದಲ್ಲಿ ನನಗೆ ತುಂಬಾ ಆಸೆ ಇದೆ. ನಾನು ಬೆಂಗಳೂರಿನಲ್ಲಿ ಪತ್ರಿಕಾ ಪರಿಷತ್ತಿನಲ್ಲಿ ಪತ್ರಕರ್ತರ ಜೊತೆ ಮಾತನಾಡುತ್ತಾ ಒಂದು ಮಾತನ್ನು ಹೇಳಿದ್ದೆನು. ಅದೇನೆಂದರೆ, "ಬೆಳಗಾವಿ ಅಧಿವೇಶನದಲ್ಲಿ ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ ಹೆಚ್ಚಿನ ಸಂಖ್ಯೆಯಲ್ಲಿ ಚರ್ಚೆ ಮಾಡುವುದಕ್ಕೆ ಸದಸ್ಯರಿಗೆ ಅವಕಾಶ ಕೊಡಬೇಕೆಂಬ ಆಸೆ ನನ್ನ ಮನಸ್ಸಿನಲ್ಲಿದೆ" ಎಂದು ಹೇಳಿದ್ದೇನೆ. ತಮ್ಮೆಲ್ಲರ ಮನಸ್ಸಿನಲ್ಲಿಯೂ ಕೂಡ ಅದೇ ಭಾವನೆಗಳಿದೆ. ಆದರೆ, ನನಗೆ ಸಮಯದ ಅಭಾವವಿದೆ. ಎಲ್ಲಾ ವಿಷಯಗಳಿಗೂ ಸಮಯ ಹೊಂದಾಣಿಕೆ ಮಾಡುವುದಕ್ಕಾಗುವುದಿಲ್ಲ. ಆದುದರಿಂದ, ದಯಮಾಡಿ ಎಲ್ಲರೂ ಸಹಕರಿಸಿ, ಮಾತನಾಡುವಂತಹ ಸದಸ್ಯರು ತಯಾರಾಗಿ ಬನ್ನಿ ಮತ್ತು ಸಾಧ್ಯವಾದರೆ ಒಂದು ಭಾಗದ ವಿಷಯದ ಬಗ್ಗೆ ಇಬ್ಬರು-ಮೂವರು ಸದಸ್ಯರು ಯೋಚನೆ ಮಾಡಿ ಮಾತನಾಡಿದರೆ ಅನುಕೂಲವಾಗುತ್ತದೆ ಎಂಬ ವಿಷಯವನ್ನು ಹೇಳುತ್ತಾ ತಮಗೆ ಮನವಿಯನ್ನು ಸಲ್ಲಿಸಿ ಸದನವನ್ನು ಭೋಜನಕ್ಕಾಗಿ ಮಧ್ಯಾಹ್ನ 3 ಗಂಟೆ 30 ನಿಮಿಷಗಳವರೆಗೆ ಮುಂದೂಡುತ್ತಿದ್ದೇನೆ.

(ಸದನವು ಭೋಜನಕ್ಕಾಗಿ ಮಧ್ಯಾಹ್ನ 1 ಗಂಟೆ 52 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3 ಗಂಟೆ 30 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)

(1120)21.11.2017/3.30.ಕೆ.ಜಿ-ವಿಕೆ

(ಸದನವು ಭೋಜನ ವಿರಾಮದ ನಂತರ ಮಧ್ಯಾಹ್ನ 3 ಗಂಟೆ 33 ನಿಮಿಷಕ್ಕೆ ಪ್ರಾರಂಭವಾಯಿತು)

(ಉಪ ಸಭಾಪತಿಯವರು ಸಭಾಪೀಠದಲ್ಲಿ ಉಪಸ್ಥಿತರಾದರು)

ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಕಳೆದ ಒಂದು ವಾರದಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಆಡಳಿತಾತ್ಮಕ ಸಮಸ್ಯೆಗಳಿಗೆ ಸಂಬಂಧಿಪಟ್ಟ ವಿಷಯ ನಿಯಮ 330 ರಡಿ list ಆಗುತ್ತಿದೆ. ಆದರೆ. ಒಂದು ವಾರದಿಂದ ನನಗೆ ಚರ್ಚೆಗೆ ಅವಕಾಶಗಳು ಸಿಕ್ಕಿಲ್ಲ. ಕಳೆದ ಬುಧವಾರದಿಂದ list ಆಗುತ್ತಿದೆ, ಇವತ್ತು ಸಹ list ಆಗಿದೆ. ಆದರೆ, ಅವಕಾಶ ಸಿಕ್ಕಿಲ್ಲ. ಸಾವಿರಾರು ಗ್ರಾಮ ಪಂಚಾಯಿತಿಗಳ ಬಗ್ಗೆ ಸಮಸ್ಯೆಗಳು ಇವೆ. ಇವತ್ತು ಗ್ರಾಮ ಪಂಚಾಯಿತಿಯ ಸಿಬ್ಬಂದಿ ಸಹ ಬಂದು ಧರಣಿ ಕುಳಿತುಕೊಂಡಿದ್ದಾರೆ. ಪ್ರತಿ ದಿವಸವು ಲಿಸ್ಟ್ ಆಗುತ್ತದೆ. ಆದರೆ, ನಮಗೆ ಚರ್ಚೆಗೆ ಅವಕಾಶ ಸಿಗುತ್ತಿಲ್ಲ. ಆದ್ದರಿಂದ ದಯವಿಟ್ಟು ಇದನ್ನು ಈಗ ತೆಗೆದುಕೊಳ್ಳಿ. ಅರ್ಧಗಂಟೆಯಲ್ಲಿ ಈ ವಿಷಯವನ್ನು ಮುಗಿಸೋಣ. ಇದು ಯಾವ ನ್ಯಾಯ ಹೇಳಿ? ಇದು ಸರಿಯಲ್ಲ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಬಗ್ಗೆ ಇಷ್ಟೊಂದು ನಿರ್ಲಕ್ಷ್ಯವೇ? ಹಾಗಾದರೆ, ಏನು ಮಾಡೋಣ ಹೇಳಿ?

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉಪ ಸಭಾಪತಿಯವರು:– ಮಾನ್ಯ ಪೂಜಾರಿಯವರೇ, ತಮ್ಮ ನೋಟೀಸ್‌ಗೆ ಆದ್ಯತೆಯ ಮೇರೆಗೆ ನಾವು Agenda ದಲ್ಲಿ ಹಾಕಿದ್ದೇವೆ. ಸಮಯದ ಅಭಾವದಿಂದ ತಮಗೆ ಚರ್ಚೆಗೆ ಅವಕಾಶ ಸಿಗುತ್ತಿಲ್ಲ. ತಮ್ಮದು ಮತ್ತು ಮಾನ್ಯ ಶ್ರೀ ಮೋಟಮ್ಮನವರದ್ದು ನಾಳೆ ತೆಗೆದುಕೊಳ್ಳುತ್ತೇನೆ.

ಶ್ರೀ ಕೋಟ ಶ್ರೀನಿವಾಸ ಪೂಜಾರಿ:– ಮಾನ್ಯ ಸಭಾಪತಿಯವರೇ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಮಾತ್ರ ಸಮಯದ ಅಭಾವ ಇದೆಯೇ? ಇದು ಸರಿಯೇ? ಎಲ್ಲ ವಿಷಯನ್ನು ತೆಗೆದುಕೊಂಡಿದ್ದೀರಿ. ನಿನ್ನೆ ಬೇರೆ ವಿಷಯ ತೆಗೆದುಕೊಂಡಿದ್ದೀರಿ.

ಉಪ ಸಭಾಪತಿಯವರು:– ಮಾನ್ಯ ಶ್ರೀನಿವಾಸ ಪೂಜಾರಿಯವರೇ, ನಾಳೆ ಈ ವಿಷಯಕ್ಕೆ ಸಮಯ ಕೊಡುತ್ತೇವೆ.

ಶ್ರೀ ಕೋಟ ಶ್ರೀನಿವಾಸ ಪೂಜಾರಿ:– ಮಾನ್ಯ ಸಭಾಪತಿಯವರೇ, ನಿನ್ನೆ ಸಹ ನಾಳೆ ಕೊಡುತ್ತೇವೆಂದು ಹೇಳಿದ್ದೀರಿ. ಕಳೆದ ಬುಧವಾರ ಸಹ ನಾಳೆ ಅವಕಾಶ ಕೊಡುತ್ತೇವೆಂದು ಹೇಳಿದ್ದೀರಿ. ಗುರುವಾರ ಹೇಳಿದ್ದೀರಿ. ಶುಕ್ರವಾರ ಹೇಳಿದ್ದೀರಿ. ಅದೇ ರೀತಿ ಸೋಮವಾರ ಸಹ ಹೇಳಿದ್ದೀರಿ. ಇವತ್ತು ಸಹ ನಾಳೆ ತೆಗೆದುಕೊಳ್ಳುತ್ತೇವೆಂದು ಹೇಳುತ್ತಿದ್ದೀರಿ. ಯಾವ ಆಧಾರದ ಮೇಲೆ ನಾಳೆ ತೆಗೆದುಕೊಳ್ಳುವುದಾಗಿ ತಾವು ಹೇಳುತ್ತೀರಿ? ಇದು ಸರಿಯಲ್ಲ. ಇದು ಯಾವ ನ್ಯಾಯ? ನಿನ್ನೆ ಈ ವಿಷಯ ಕಲಾಪಗಳ ಪಟ್ಟಿಯಲ್ಲಿ ಮೇಲುಗಡೆ ಬರುತ್ತದೆ ಎಂದು ಹೇಳಿದ್ದೀರಿ. ಈಗ ಎಲ್ಲಿ ಬಂದಿದೆ ಹೇಳಿ?

ಉಪ ಸಭಾಪತಿಯವರು:– ಮಾನ್ಯ ಪೂಜಾರಿಯವರೇ, ಮೇಲುಗಡೆ ಎಲ್ಲಿ ಬರುತ್ತೆ? ನಾಳೆ ಖಂಡಿತ ಸಮಯ ಕೊಡುತ್ತೇವೆ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಕೋಟ ಶ್ರೀನಿವಾಸ ಪೂಜಾರಿ:– ಮಾನ್ಯ ಸಭಾಪತಿಯವರೇ, ಇದು ಸರಿಯಲ್ಲ. ನನಗೆ ಇವತ್ತು ಒಂದು ಅರ್ಧಗಂಟೆ ಕಾಲ ಅವಕಾಶ ಕೊಡಿ. ತಾವು ಎಷ್ಟು ಹೊತ್ತಿಗೆ ಅವಕಾಶ ಕೊಡುತ್ತೀರೋ ಅಲ್ಲಿವರೆಗೆ ನಾನು ಸದನದ ಬಾವಿಯೊಳಗೆ ಧರಣಿ ಕುಳಿತುಕೊಳ್ಳುತ್ತೇನೆ.

(ಈ ಹಂತದಲ್ಲಿ ಕೋಟ ಶ್ರೀನಿವಾಸ ಪೂಜಾರಿಯವರು ಸದನದ ಬಾವಿಗೆ ಇಳಿದು ಧರಣಿ ಕುಳಿತರು)

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಈಗ ಸದನದ ನಿರ್ಧಾರವಾಗಿದೆ...

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀಮತ ಮೋಟಮ್ಮ (ವಿಧಾನಸಭಾ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಗಮನ ಸೆಳೆಯುವ ಸೂಚನೆ ಒಂದೇ ಇರುವುದು. ಈಗ ನಾನು ಸಹ ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರ ಜೊತೆ ಹೋಗಿ ಸದನದ ಬಾವಿಗೆ ಇಳಿದು ಧರಣಿ ಮಾಡಬೇಕಾಗುತ್ತದೆ. ಇದು 5 ರಿಂದ 10 ನಿಮಿಷಗಳಲ್ಲಿ ಮುಗಿದು ಹೋಗುತ್ತದೆ. ಆದ್ದರಿಂದ ದಯಮಾಡಿ ತಾವು ಈ ವಿಷಯಗಳಿಗೆ ಅವಕಾಶ ಮಾಡಿಕೊಡಬೇಕೆಂದು ನಾನು ಸಹ ವಿನಂತಿಸುತ್ತೇನೆ.

(ಗೊಂದಲ)

ಉಪ ಸಭಾಪತಿಯವರು:– ಶ್ರೀಮತಿ ಮೋಟಮ್ಮನವರೇ, ದಯವಿಟ್ಟು ತಾವು ಕುಳಿತುಕೊಳ್ಳಿ. ಮಾನ್ಯ ಶ್ರೀನಿವಾಸ ಪೂಜಾರಿಯವರೇ, ಈಗಾಗಲೇ ಈ ದಿವಸ ಮಧ್ಯಾಹ್ನ ಯಾವ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳುತ್ತೇವೆ ಎಂಬುದನ್ನು ಪ್ರಕಟಿಸಲಾಗಿದೆ. ಈ ಮಧ್ಯೆ ತಾವು ಸದನ ನಡೆಸುವುದಕ್ಕೆ ಅಡ್ಡಿ ಪಡಿಸುವುದು ಸೂಕ್ತವಲ್ಲ. ನಾಳೆಗೆ ಅವಕಾಶ ಕೊಡುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):– ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಇಡೀ ಕರ್ನಾಟಕ ರಾಜ್ಯದ ಗ್ರಾಮ ಪಂಚಾಯಿತಿಗಳ ಸಮಸ್ಯೆ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈ ವಿಷಯ ಆರು ದಿವಸಗಳಿಂದ ಬರುತ್ತಿದೆ. ಆದರೆ, ಈ ವಿಷಯ ಕಾರಣಾಂತರದಿಂದ ಮುಂದಕ್ಕೆ ಹೋಗುತ್ತಿದೆ. ಈಗ ಉತ್ತರ ಕರ್ನಾಟಕದ ಬಗ್ಗೆ ಆದ್ಯತೆ ಕೊಡಬೇಕೆಂದು ತಾವು ಏನು ತೀರ್ಮಾನ ತೆಗೆದುಕೊಂಡಿದ್ದೀರಿ, ಅದಕ್ಕೆ ನಾವು ಬದ್ಧರಾಗಿರುತ್ತೇವೆ. ನಾಳೆ ಪ್ರಶ್ನೋತ್ತರ ಅವಧಿ ಮುಗಿದ ತಕ್ಷಣವೆ ಇದಕ್ಕೆ ಮೊದಲ ಅದ್ಯತೆ ಕೊಡಿ. ಏಕೆಂದರೆ, ನಾಳೆ ವಿಧೇಯಕಗಳು ಇವೆ, ಆ ವಿಧೇಯಕಗಳಿಗೆ ಆದ್ಯತೆ ಕೊಡಬೇಕೆಂದು ಹೇಳಿ ಈ ವಿಷಯವನ್ನು ಮುಂದಕ್ಕೆ ಹಾಕಬೇಡ. ನಾಳೆ ಮಾನ್ಯ ಶ್ರೀನಿವಾಸ ಪೂಜಾರಿಯವರದ್ದು ಮತ್ತು ಶ್ರೀಮತಿ ಮೋಟಮ್ಮನವರು ಪ್ರಸ್ತಾಪಿಸಲಿಚ್ಛಿಸಿರುವ ವಿಷಯಗಳನ್ನು ಮುಗಿಸಿ. ಅದಕ್ಕೆ ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುವುದೇನೆಂದರೆ, ನಾಳೆ ವಿಧೇಯಕಗಳನ್ನು ಚರ್ಚೆಗೆ ತೆಗೆದುಕೊಳ್ಳಬೇಕು. ಅದಕ್ಕೂ ಆದ್ಯತೆ ಕೊಡಬೇಕು. ನಾನು ಖಂಡಿತ ಇಲ್ಲವೆಂದು ಹೇಳುವುದಿಲ್ಲ. ಆದರೆ, ನಾಳೆ ಪ್ರಶ್ನೋತ್ತರ ಅವಧಿ ಮುಗಿದ ತಕ್ಷಣವೆ ದಯವಿಟ್ಟು ಇವರಿಬ್ಬರಿಗೆ ಖಂಡಿತವಾಗಿ ತಾವು ಅವಕಾಶ ಕೊಡಬೇಕೆಂದು ನಾನು ಸಹ ವಿನಂತಿಸುತ್ತಿದ್ದೇನೆ.

ಉಪ ಸಭಾಪತಿಯವರು:– ಮಾನ್ಯ ಶ್ರೀನಿವಾಸ ಪೂಜಾರಿಯವರೇ, ನಾಳೆ ತಮಗೆ ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡುತ್ತೇವೆ. ಈಗ ಸದನ ನಡೆಸುವುದಕ್ಕೆ ಅವಕಾಶ ಮಾಡಿಕೊಡಿ. ಶ್ರೀನಿವಾಸ ಪೂಜಾರಿಯವರೇ, ದಯವಿಟ್ಟು ಧರಣಿ ಕೈಬಿಟ್ಟು ಸದನದ ಬಾವಿಯಿಂದ ಹೊರಗಡೆ ಬನ್ನಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ವಿರೋಧ ಪಕ್ಷದ ನಾಯಕರೇ ತಮಗೆಲ್ಲ ಗೊತ್ತಿದೆ. ತಾವು ಹಿರಿಯರಿದ್ದೀರಿ. ನಾವು ಕಾಯಿದೆ ಮತ್ತು ಅದರ ತಿದ್ದುಪಡಿಗೂ ಕೂಡ ಅಷ್ಟೇ ಪ್ರಾಮುಖ್ಯತೆಯನ್ನು ಕೊಡಬೇಕಾಗುತ್ತೆ. ಒಟ್ಟಾರೆ, ನಾಳೆ ಈ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಮಾನ್ಯ ಶ್ರೀನಿವಾಸ ಪೂಜಾರಿಯವರಿಗೆ ಅವಕಾಶ ಮಾಡಿಕೊಡುತ್ತೇವೆ. ದಯವಿಟ್ಟು ಸದನ ನಡೆಸಲು ಅವಕಾಶ ಮಾಡಿಕೊಡಿ.

(ಗೊಂದಲ)

ಶ್ರೀ ಕೆ.ಸಿ.ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ನಾಳೆ ಪ್ರಶ್ನೋತ್ತರ ಅವಧಿ ಮತ್ತು ಶೂನ್ಯ ವೇಳೆ ಮುಗಿದ ಮೇಲೆ ಇವರಿಬ್ಬರಿಗೂ ಅವಕಾಶ ಮಾಡಿಕೊಡಿ. ನಂತರ ಊಟಕ್ಕೆ ಸಮಯ ಕೊಡಿ.

ಶ್ರೀ ಕೆ.ಎಸ್. ಈಶ್ವರಪ್ಪ:– ಮಾನ್ಯ ಸಭಾಪತಿಯವರೇ, ತಮ್ಮ ತೀರ್ಮಾನಕ್ಕೆ ನಾವು ಬದ್ಧರಿದ್ದೇವೆ. ಮಾನ್ಯ ಸದಸ್ಯರು 6 ದಿವಸಗಳಿಂದ ಅವಕಾಶ ಕೇಳಿದ್ದಾರೆ. ಈಗ ಆಡಳಿತ ಪಕ್ಷದರಲ್ಲಿರುವ ಸದಸ್ಯರು ವಿರೋಧ ಪಕ್ಷದ ಸ್ಥಾನದಲ್ಲಿದ್ದು, ಇಂತಹ ಪರಿಸ್ಥಿತಿ ಬಂದಿದ್ದರೆ ಅವರು ಏನು ಮಾಡುತ್ತಿದ್ದರು? ನಾವು ವಿಧೇಯಕಗಳಿಗೆ ಅವಕಾಶ ಕೊಡಬೇಕು, ನಾವು ಇಲ್ಲವೆಂದು ಹೇಳುವುದಿಲ್ಲ. ನಾಳೆ ಶೂನ್ಯವೇಳೆ ಮುಗಿಯುತ್ತಿದ್ದಂತೆ ದಯವಿಟ್ಟು ಮಾನ್ಯ ಶ್ರೀನಿವಾಸ ಪೂಜಾರಿಯವರಿಗೆ ಅವಕಾಶ ಮಾಡಿಕೊಡಬೇಕೆಂದು ನಾನು ಸಹ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

(ಮುಂದು...)

(1121)21.11.2017–3.40–ಎಂವಿ–ವಿಕೆ

ಶ್ರೀ ಕೆ.ಸಿ.ಕೊಂಡಯ್ಯ):– ಮಾನ್ಯ ಸಭಾಪತಿಯವರೆ, ಊಟದ ಸಮಯ ಒಂದೂವರೆ ಗಂಟೆ ಬೇಡ, ಸದನವನ್ನು ಮುಂದುವರಿಸಿ. ಇಲ್ಲವಾದರೆ ಅವರದ್ದು, ಇವರದ್ದು ಎಂದು ಭಾಷಣ ಆಗಿಬಿಡುತ್ತದೆ. ಬೇಕಿದ್ದವರು ಹೋಗಿ ಊಟವನ್ನು ಮಾಡಿಕೊಂಡು ಬರುತ್ತಾರೆ. We will continue the session.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):– ಮಾನ್ಯ ಸಭಾಪತಿಯವರೇ, ದಯವಿಟ್ಟು ನಾನು ನಿಮಗೆ ಪ್ರಾರ್ಥನೆ ಮಾಡುತ್ತೇನೆ, ಶೂನ್ಯವೇಳೆ ಮುಗಿಯುತ್ತಿದ್ದ ಹಾಗೆ ಮಾನ್ಯ ಸದಸ್ಯರಿಗೆ ಅವಕಾಶವನ್ನು ನೀಡಿ.

ಉಪ ಸಭಾಪತಿಯವರು:– ಮಾನ್ಯ ಸದಸ್ಯರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರೆ ನಿಮ್ಮ ಸ್ಥಾನಕ್ಕೆ ಬನ್ನಿ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರಾದ ಶ್ರೀ ಕೆ.ಸಿ.ಕೊಂಡಯ್ಯನವರು ಹೇಳುತ್ತಿದ್ದಾರೆ, ನಿಮಗೆ ನಾಳೆ ಅವಕಾಶ ಮಾಡಿಸಿಕೊಡುತ್ತೇವೆ.

ಶ್ರೀ ಕೆ.ಸಿ.ಕೊಂಡಯ್ಯ:– ಮಾನ್ಯ ಸಭಾಪತಿಯವರೇ, ಊಟಕ್ಕೆ ಸಮಯವನ್ನು ಕೊಡಬೇಡಿ, ಊಟ ಬೇಕಾದವರು ಹೋಗಿ ಮಾಡಿಕೊಂಡು ಬರುತ್ತಾರೆ. ಮಾನ್ಯ ಸದಸ್ಯರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರೆ, ಊಟಕ್ಕೆ ಸಮಯವನ್ನು ಕೊಡಬೇಡಿ ಎಂದು ಹೇಳಿದ್ದೇವೆ.

ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):– (ಸದನದ ಬಾವಿಯಲ್ಲಿ ನಿಂತು ಮಾತನಾಡಿದರು)

ಉಪ ಸಭಾಪತಿಯವರು:– ಮಾನ್ಯ ಸದಸ್ಯರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರೆ, ಪ್ರಶ್ನೋತ್ತರ ಆದ ಕೂಡಲೆ ಎಂದು ಅಲ್ಲ. ಆದರೆ, ನಾಳೆ ಅವಕಾಶ ಮಾಡಿಕೊಡುತ್ತೇವೆ. ದಯಮಾಡಿ ತಾವು ತಮ್ಮ ಸ್ಥಾನಕ್ಕೆ ಬನ್ನಿ.

ಶ್ರೀ ಕೆ.ಸಿ.ಕೊಂಡಯ್ಯ:– ಮಾನ್ಯ ಸಭಾಪತಿಯವರೇ, ಊಟದ ಸಮಯಕ್ಕಿಂತ ಮುಂಚೆ ಅವಕಾಶ ಕೊಡುತ್ತಾರೆ.

ಶ್ರೀ ಎಂ.ಆರ್.ಸೀತಾರಾಂ (ಸಭಾನಾಯಕರು):– ಮಾನ್ಯ ಸಭಾಪತಿಯವರೇ, ಅವರಲ್ಲಿ ಮನವಿಯನ್ನು ಮಾಡುತ್ತಿದ್ದೇವೆ, ನಾಳೆ ನಿಮಗೆ ಅವಕಾಶವನ್ನು ಮಾಡಿಕೊಡುತ್ತೇವೆ. ನಾಳಿನ ಚರ್ಚೆಯಲ್ಲಿ ಶ್ರೀಮತಿ ಮೋಟಮ್ಮನವರ ವಿಷಯ ಕೂಡ ಇದೆ. ಆದುದರಿಂದ ತಾವು ದಯವಿಟ್ಟು ಹೊರಗೆ ಬನ್ನಿ.

ಶ್ರೀ ಕೆ.ಎಸ್.ಈಶ್ವರಪ್ಪ:– ಮಾನ್ಯ ಸಭಾಪತಿಯವರೇ, ತಾವು ದಯವಿಟ್ಟು ವಿಷಯವನ್ನು ಓದಿ, "ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ನೌಕರರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ಪಿ.ಎಫ್., ಇ.ಎಸ್.ಐ. ಸೌಲಭ್ಯ, ಬಾಪೂಜಿ ಸೇವಾ ಕೇಂದ್ರಗಳಿಗೆ ಕಂಪ್ಯೂಟರ್ ಒದಗಿಸುವುದು" ಎಂದು ಇದರಲ್ಲಿ ಇದೆ. ಇಡೀ ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೌಕರರ ಬಗ್ಗೆ ಪ್ರಸ್ತಾಪ ಮಾಡಬೇಕೆಂದು, ಪ್ರಸ್ತಾಪ ಮಾಡಿದ್ದಾರೆ. ನಾನು ನಿಮ್ಮಲ್ಲಿ ಕೇಳಿಕೊಳ್ಳುವುದು, ಪ್ರಶ್ನೋತ್ತರ ವೇಳೆ ಆಗುತ್ತಿದ್ದಂತೆ ತೆಗೆದುಕೊಳ್ಳಿ ಎಂದು ಹೇಳಿದರೆ, ಅದಕ್ಕೂ ತಾವು ಒಪ್ಪಲಿಲ್ಲವೆಂದರೆ. ಮಾನ್ಯ ಸದಸ್ಯರು ಏನು ಮಾಡುತ್ತಾರೆ, ತಾವೇ ವಿಚಾರ ಮಾಡಿ ನೋಡಿ. ಈಗ ನೀವು ಏನು ಹೇಳಿದರೂ ನಾನು ಅದನ್ನು ಒಪ್ಪುತ್ತೇನೆ, ನನ್ನದೇನೂ ಅಭ್ಯಂತರವಿಲ್ಲ. ಆದರೆ, ತಾವು ಏಕೆ ಹೀಗೆ ಮಾಡುತ್ತಿದ್ದೀರಿ ಎಂದು ನನಗೆ ಅರ್ಥವಾಗುತ್ತಿಲ್ಲ. ತಾವು ಶ್ರೀಮತಿ ಮೋಟಮ್ಮನವರಿಗೆ ಹಾಗೂ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರಿಗೆ ಐದೈದು ನಿಮಿಷ ಕಾಲಾವಕಾಶ ಕೊಡುವುದಕ್ಕೆ ಆಗುವುದಿಲ್ಲವೆ. ಮತ್ತೆ ಮತ್ತೆ ಅದನ್ನೇ ಹೇಳಬೇಡಿ, ನೀವು ಆಗುವುದಿಲ್ಲವೆಂದರೆ ಅದನ್ನು ನಾವು ವಾಪಸ್ಸು ತೆಗೆದುಕೊಳ್ಳುತ್ತೇವೆ. ತಾವು ನಮ್ಮ ಶಾಸಕರ ಹಕ್ಕುಗಳನ್ನು ಕಾಪಾಡಬೇಕು.

ಉಪ ಸಭಾಪತಿಯವರು:– ಮಾನ್ಯ ಸದಸ್ಯರಾದ ಶ್ರೀ ಕೆ.ಸಿ.ಕೊಂಡಯ್ಯನವರೆ ತಾವು ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ವಿರೋಧ ಪಕ್ಷದ ನಾಯಕರೆ ನಾಳೆ ಅವಕಾಶವನ್ನು ಕೊಡುತ್ತೇವೆ ಎಂದರೂ ಕೂಡ, ನೀವು ಹೇಳುತ್ತಿರುವುದು ನಿರ್ದಿಷ್ಟವಾಗಿ ನಾಳೆ ಪ್ರಶ್ನೋತ್ತರ ವೇಳೆ ಆದ ಕೂಡಲೇ ಅವಕಾಶವನ್ನು ನೀಡಬೇಕೆಂದು. ಅವರಿಗೆ ಐದೈದು ನಿಮಿಷ ಅವಕಾಶ ನೀಡಿ ಎಂದು ಹೇಳಿದ್ದೀರಿ. ಆದರೆ, ಆ ಇಬ್ಬರಿಗೂ ಕೂಡ 15–15 ನಿಮಿಷ ಅವಕಾಶವನ್ನು ಕೊಡುತ್ತೇನೆ, ಅದನ್ನು ಮುಗಿಸಿಕೊಡುತ್ತಾರೆಯೆ? ಎಲ್ಲಿ ಮುಗಿಸುತ್ತೀರಾ? ಸದನದಲ್ಲಿ ಅದು ಆಗುವಂಥದ್ದಲ್ಲ.

ಶ್ರೀ ಕೆ.ಪ್ರತಾಪ್‌ಚಂದ್ರ ಶೆಟ್ಟಿ:– ಮಾನ್ಯ ಸಭಾಪತಿಯವರೇ, ಅವರಿಗೆ ಅವಕಾಶ ಮಾಡಿಕೊಡಿ.

ಶ್ರೀ ಕೆ.ಎಸ್.ಈಶ್ವರಪ್ಪ:– ಮಾನ್ಯ ಸಭಾಪತಿಯವರೇ, ನೀವು ಹೇಳಿದ್ದಿರಲ್ಲ, ತಾವು ಸ್ವಲ್ಪ ತಡೆಯಿರಿ, ತಾವು ದಯವಿಟ್ಟು ಕೇಳಿ. ನೀವು 15–15 ನಿಮಿಷ ಎಂದು ಹೇಳಿದ್ದೀರಿ, ನಾನು ಹೇಳುವುದನ್ನು ಕೇಳುವುದಿಲ್ಲವೆಂದರೆ.

ಉಪ ಸಭಾಪತಿಯವರು:– ನಾಳೆ ಆ ಇಬ್ಬರು ಸದಸ್ಯರಿಗೆ ಅವಕಾಶವನ್ನು ಮಾಡಿಕೊಡುತ್ತೇವೆ. ಆದರೆ, ಇಂತಹ ಸಮಯದಲ್ಲೆ ಎಂದು ಅಲ್ಲ. ಅವಕಾಶ ನೀಡುತ್ತೇವೆ, ದಯಮಾಡಿ ಸದನ ನಡೆಯುವುದಕ್ಕೆ ಅವಕಾಶ ನೀಡಿ.

ಶ್ರೀ ಕೆ.ಎಸ್.ಈಶ್ವರಪ್ಪ:– ಮಾನ್ಯ ಸಭಾಪತಿಯವರೇ, ಆಯಿತು ಬೇಡ, ಮಾನ್ಯ ಸದಸ್ಯರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರೆ ದಯವಿಟ್ಟು ನೀವು ತಮ್ಮ ಸ್ಥಾನಕ್ಕೆ ಬನ್ನಿ, ಇದು ಒಳ್ಳೆಯದಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು ಸದನದ ಬಾವಿಯಿಂದ ತಮ್ಮ ಸ್ಥಾನಕ್ಕೆ ತೆರಳಿದರು)

ಶ್ರೀಮತಿ ಮೋಟಮ್ಮ:– ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಕೆ.ಬಿ.ಶಾಣಪ್ಪನವರಿಗೆ ಮಾತ್ರ ವಿಶೇಷವಾಗಿ ಅವಕಾಶವನ್ನು ಕೊಟ್ಟಿದ್ದೀರಿ. ಆದರೆ, ನಮಗೆ ಕೊಡುವುದಿಲ್ಲ ಅಂದರೆ.

ಉಪ ಸಭಾಪತಿಯವರು:– ಮಾನ್ಯ ಸದಸ್ಯರಾದ ಶ್ರೀಮತಿ ಮೋಟಮ್ಮನವರೆ ನಿಮಗೂ ಕೂಡ ಅವಕಾಶವನ್ನು ಮಾಡಿಕೊಡುತ್ತೇವೆಂದು ಹೇಳಿದ್ದೇವೆ.

ಶ್ರೀಮತಿ ಮೋಟಮ್ಮ:– ಮಾನ್ಯ ಸಭಾಪತಿಯವರೇ, ಆಯಿತು, impartial ಆಗಿ ಇರಬೇಕು, partiality ಮಾಡಬಾರದೆಂದು ನನ್ನ ಮನವಿ.

ಉಪ ಸಭಾಪತಿಯವರು:– ಎಲ್ಲಿ partiality ಮಾಡಿದ್ದೇವೆ.

ಶ್ರೀಮತಿ ಮೋಟಮ್ಮ:– ಮಾನ್ಯ ಸಭಾಪತಿಯವರೇ, ಮೊದಲು ಮಾನ್ಯ ಸದಸ್ಯರಾದ ಶ್ರೀ ಕೆ.ಬಿ.ಶಾಣಪ್ಪನವರಿಗೆ ಅವಕಾಶ ಕೊಟ್ಟಾಗ, ನಮಗೂ ಸಹ ಐದೈದು ನಿಮಿಷ ಅವಕಾಶ ಕೊಟ್ಟಿದ್ದರೆ ಅದನ್ನು ಮುಗಿಸುತ್ತಿದ್ದೆವು.

ಉಪ ಸಭಾಪತಿಯವರು:– ಮುಗಿದು ಹೋದಂತಹ ವಿಚಾರ ಬೇಡ, ತಾವು ದಯವಿಟ್ಟು ಕುಳಿತುಕೊಳ್ಳಿ. ಈಗ ಉತ್ತರ ಕರ್ನಾಟಕ ಭಾಗದ ಸಮಗ್ರ ಅಭಿವೃದ್ಧಿಗಾಗಿ ಕೈಗೊಳ್ಳಬೇಕಾಗಿರುವ ಕಾರ್ಯಕ್ರಮಗಳ ಬಗ್ಗೆ ವಿಶೇಷವಾದಂತಹ ಚರ್ಚೆ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವುದು.

ಶ್ರೀ ಕೆ.ಎಸ್.ಈಶ್ವರಪ್ಪ:– ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಮಾತನಾಡುತ್ತಾರೆ.

ಉಪ ಸಭಾಪತಿಯವರು:– ದಯಮಾಡಿ ಮಾನ್ಯ ಸದಸ್ಯರ ಗಮನಕ್ಕೆ ತರುವುದೇನೆಂದರೆ, ಈಗಾಗಲೇ ಪ್ರಕಟಣೆಗೊಂಡಿರುವಂತೆ, ಪ್ರತಿಯೊಬ್ಬ ಸದಸ್ಯರು ಕೂಡ ಸಹಕಾರ ನೀಡಬೇಕು. ಈ ದಿನ ಮೂರು ಗಂಟೆಗಳ ಕಾಲ ಈ ವಿಷಯದ ಚರ್ಚೆಗೆ ಅವಕಾಶವನ್ನು ನೀಡಲಾಗಿದೆ. ದಯವಿಟ್ಟು ಪ್ರತಿಯೊಬ್ಬ ಸದಸ್ಯರು ಕೂಡ ತಮ್ಮ ಚರ್ಚೆಯನ್ನು ಹತ್ತು ನಿಮಿಷಕ್ಕೆ ಸೀಮಿತಗೊಳಿಸಿಕೊಳ್ಳಬೇಕು. ದಯವಿಟ್ಟು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೇಳಿರುವಂತಹವರೆಲ್ಲರಿಗೂ ಕೂಡ, ಅಂದರೆ ಈಗಾಗಲೇ ಸುಮಾರು 22 ಮಂದಿ ಪತ್ರವನ್ನು ಕಳುಹಿಸಿದ್ದಾರೆ, ನನ್ನ ಬಳಿ ಅದರ ಪಟ್ಟಿ ಇದೆ. 22 ಮಂದಿಗೂ 10 ನಿಮಿಷ ಎಂದು ಎಲ್ಲರಿಗೂ ಕೂಡ ಅವಕಾಶ ಕೊಡುವುದಕ್ಕೆ ಆಗುವುದಿಲ್ಲ. ದಯಮಾಡಿ ಬಹಳ ಸಮಯದ ಅಭಾವ ಇದೆ. ದಯವಿಟ್ಟು ಮಾನ್ಯ ಸದಸ್ಯರೆಲ್ಲರೂ ಸಹಕಾರ ಮಾಡಬೇಕು. ಹೆಚ್ಚಿನ ಮಂದಿಗೆ ಅವಕಾಶ ಕೊಡುವಂತಹ ಪ್ರಯತ್ನವನ್ನು ನಾವು ಮಾಡುತ್ತೇವೆ. ಸದಸ್ಯರೆಲ್ಲರೂ ಸಹಕರಿಸಬೇಕೆಂದು ವಿನಂತಿ ಮಾಡುತ್ತೇನೆ. ಈಗ ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಮಾತನಾಡುವುದು.

ಶ್ರೀ ರಘುನಾಥರಾವ್ ಮಲ್ಕಾಪೂರೆ:– ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯ...

ಶ್ರೀ ಸಿ.ಎಂ.ಇಬ್ರಾಹಿಂ:– ಮಾನ್ಯ ಸಭಾಪತಿಯವರೇ, ಮಧ್ಯದಲ್ಲಿ ಎದ್ದು ಏಕೆ ಮಾತನಾಡುತ್ತೀರಿ, ಮಾನ್ಯ ಸದಸ್ಯರು ಮಾತನಾಡಲಿ ಬಿಡಿ.

ಶ್ರೀ ರಘುನಾಥರಾವ್ ಮಲ್ಕಾಪೂರೆ:– ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಸಿ.ಎಂ.ಇಬ್ರಾಹಿಂರವರು ಸಹ ಮಾತನಾಡಲಿ, ಅವರಿಗೆ ನಾವೇನೂ ಮೊಳೆ ಹೊಡೆಯುತ್ತಿದ್ದೇವೆಯೆ? ದಯವಿಟ್ಟು ಸ್ವಲ್ಪ ನಾನು ಏನನ್ನು ಹೇಳುತ್ತಿದ್ದೇನೆಂದು ಕೇಳಿ.

ಉಪ ಸಭಾಪತಿಯವರು:– ಮಾನ್ಯ ಸದಸ್ಯರಾದ ಶ್ರೀ ರಘುನಾಥರಾವ್ ಮಲ್ಕಾಪೂರೆ ಯವರೆ ನನ್ನ ಕಡೆ ನೋಡಿ ಮಾತನಾಡಿ.

ಶ್ರೀ ರಘುನಾಥರಾವ್ ಮಲ್ಕಾಪೂರೆ:– ಮಾನ್ಯ ಸಭಾಪತಿಯವರೇ, ನಾಡಿನ ಜನ ಏನನ್ನು ತಿಳಿಯುತ್ತಾರೆಂದರೆ, ಬೆಳಗಾವಿ ಅಧಿವೇಶನ ಎಂದರೆ ವಿಶೇಷವಾಗಿ ಉತ್ತರ ಕರ್ನಾಟಕ ಭಾಗದ ಬಗ್ಗೆ ಚರ್ಚೆ ಮಾಡುವುದಕ್ಕೆ ಕರೆದಿದ್ದಾರೆಂದು ಎಲ್ಲರ ಕಲ್ಪನೆ ಮತ್ತು ಭಾವನೆ ಇದೆ. ಅದಕ್ಕೆ ತಮ್ಮ ಸಹಮತಿ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ಉತ್ತರ ಕರ್ನಾಟಕದ ಅಭಿವೃದ್ಧಿಯ ಬಗ್ಗೆ ಇನ್ನೂ ಚರ್ಚೆ ಪ್ರಾರಂಭವಾಗಿಲ್ಲ, ಒಬ್ಬೊಬ್ಬ ಸದಸ್ಯರು ಹತ್ತು ನಿಮಿಷ ಮಾತನಾಡಬೇಕೆಂದು ತಾವು ruling ಕೊಟ್ಟರೆ, ಈ ಅಧಿವೇಶನ ಕರೆದಿರುವ ಉದ್ದೇಶ ಏನು? ಈ ರಾಜ್ಯದಲ್ಲಿ ಉತ್ತರ ಕರ್ನಾಟಕಕ್ಕೆ ರಾಜ್ಯ ಸರ್ಕಾರ ಮಲತಾಯಿ ಧೋರಣೆ ಮಾಡುತ್ತಿದೆ ಎನ್ನುವಂತಹ ಅನಿಸಿಕೆ ಶ್ರೀಸಾಮಾನ್ಯನಿಗೆ ಬರುತ್ತಿದೆ.

ಉಪ ಸಭಾಪತಿಯವರು:– ತಾವು ಆ ಚರ್ಚೆಗೆ ಹೋಗಬೇಡಿ, ದಯವಿಟ್ಟು ಕುಳಿತುಕೊಳ್ಳಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಎಂ.ಆರ್.ಸೀತಾರಾಂ (ಸಭಾನಾಯಕರು):– ಮಾನ್ಯ ಸಭಾಪತಿಯವರೇ, ಉತ್ತರ ಕರ್ನಾಟಕದ ಬಗ್ಗೆ ಮಲತಾಯಿ ಧೋರಣೆಯನ್ನು ಅನುಸರಿಸುತ್ತಿದ್ದೇವೆಂದು ನಿಮಗೆ ಯಾರು ಹೇಳಿದ್ದಾರೆ.

ಶ್ರೀ ಎಂ.ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ನಿಮಗೆ ಅವಕಾಶ ಕೊಟ್ಟಾಗ ಮಾತನಾಡಿ, ಯಾರು ಮಲತಾಯಿ ಧೋರಣೆಯನ್ನು ಮಾಡುತ್ತಿರುವುದು, ನಿಮ್ಮ ಕೇಂದ್ರ ಸರ್ಕಾರ ಮಲತಾಯಿ ಧೋರಣೆಯನ್ನು ಮಾಡತಕ್ಕಂಥದ್ದು. ನಾವುಗಳು ಮಲತಾಯಿ ಧೋರಣೆಯನ್ನು ಮಾಡುತ್ತಿಲ್ಲ.

ಶ್ರೀ ರಘುನಾಥರಾವ್ ಮಲ್ಕಾಪೂರೆ:– ಮಾನ್ಯ ಸಭಾಪತಿಯವರೇ, ಇವರ ಮನೋಭಾವ ನೋಡಿದರೆ ಹೌದು ಎನಿಸುತ್ತದೆ.

ಉಪ ಸಭಾಪತಿಯವರು:– ಮಾನ್ಯ ಸದಸ್ಯರಾದ ಶ್ರೀ ರಘುನಾಥರಾವ್ ಮಲ್ಕಾಪೂರೆಯವರೆ ದಯವಿಟ್ಟು ತಾವು ಕುಳಿತುಕೊಳ್ಳಿ. ಮಾನ್ಯ ಸದಸ್ಯರಾದ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಮಾತನಾಡಿ.

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:– ಮಾನ್ಯ ಸಭಾಪತಿಯವರೇ, ತಾವು ಪಕ್ಷವಾರು ಸಮಯವನ್ನು ನಿಗದಿ ಮಾಡಿದ್ದೀರಿ. ಎಲ್ಲರೂ ಹತ್ತು ನಿಮಿಷ ಮಾತನಾಡಬೇಕು ಎಂದರೆ, ಅದಕ್ಕೆ ಅರ್ಥವಿಲ್ಲ. ಕಳೆದ ಒಂದು ವಾರದಿಂದ ಹೇಳುತ್ತಿದ್ದೇವೆ, ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ ಚರ್ಚಿಸಲು, ಸುಮಾರು 35–36 ಕೋಟಿ ರೂಪಾಯಿಗಳ ಹಣವನ್ನು ಖರ್ಚು ಮಾಡಿ, ಇಲ್ಲಿ ಇದನ್ನು ಕರೆಯುವಂತಹ ಅವಶ್ಯಕತೆ ಏನು ಇತ್ತು. ಇದರ ಸಲುವಾಗಿಯೇ, ಅಂದರೆ ಎಲ್ಲವೂ ಬಂತು. ಉತ್ತರ ಕರ್ನಾಟಕದವರು ಒಬ್ಬರೆ ಎಂದು ಅಲ್ಲ, ಎಲ್ಲರೂ ಮಾತನಾಡಲಿ ಮತ್ತು ಎಲ್ಲಾ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಲಿ. ಆದರೆ, ನೀವು ಸಮಯವನ್ನು ನಿಗದಿ ಮಾಡುವಾಗ, ಒಂದು ಗಂಟೆ ಹೆಚ್ಚಿಗೆ ಕುಳಿತುಕೊಳ್ಳೋಣ, ನಮಗೆ ಬೇರೆ ಏನು ಕೆಲಸವಿಲ್ಲ. ರಾತ್ರಿ ಒಂಭತ್ತು ಗಂಟೆಯವರೆವಿಗೂ ಕುಳಿತುಕೊಳ್ಳೋಣ, ಇಲ್ಲಿಗೆ ನಾವುಗಳು ಏತಕ್ಕೆ ಬಂದಿದ್ದೇವೆ.

ಉಪ ಸಭಾಪತಿಯವರು:– ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರೆ, ರಾತ್ರಿ ಹನ್ನೆರಡು ಗಂಟೆಯವರೆವಿಗೂ ಸದನ ನಡೆಸುವುದಕ್ಕೆ ನಾನು ಸಿದ್ಧನಿದ್ದೇನೆ. ದಯವಿಟ್ಟು ತಾವು ಚರ್ಚೆ ಶುರು ಮಾಡಿ.

ಶ್ರೀ ಕೆ.ಎಸ್.ಈಶ್ವರಪ್ಪ:– ಮಾನ್ಯ ಸಭಾಪತಿಯವರೇ, ಆಯಿತು ಸದನವನ್ನು ಹನ್ನೆರಡು ಗಂಟೆಯವರೆವಿಗೂ ಮಾಡೋಣ, ಅದನ್ನು ಸ್ವಲ್ಪ ಚೆನ್ನಾಗಿ ಹೇಳಿ. ನೀವು ಹೇಳುವಂತಹ ಶೈಲಿ ಸರಿಯಿಲ್ಲ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಾನು ಹೇಳುವುದನ್ನು ಕೇಳಿ, ನಾವು ಮಾತನಾಡುವುದಕ್ಕೆ ಬಿಡುವುದಿಲ್ಲ. ಅವರು ಮತ್ತು ಇವರು ಇಬ್ಬರು ಹೇಳುತ್ತಿರುವುದು ಸರಿಯಿದೆ. ಅಯ್ಯೋ ಮಾತನಾಡುವುದಕ್ಕೆ ಬಿಡುವುದಿಲ್ಲವೆಂದರೆ ಏನು ಇದು. ನಾವು ಹೇಳುವುದನ್ನು ತಾವು ಸ್ವಲ್ಪ ಕೇಳಿ. ಹಾಗಾದರೆ ನನ್ನ ಮಾತನ್ನು ಕೇಳುವುದಿಲ್ಲವೆ. ಸ್ವಲ್ಪ ತಡೆಯಿರಿ, ಇದೇನು ಹುಡುಗಾಟವೆ.

(ಗೊಂದಲ)

ಉಪ ಸಭಾಪತಿಯವರು:– ಅವರು ಚರ್ಚೆಯನ್ನು ಪ್ರಾರಂಭ ಮಾಡಲಿ ಬಿಡಿ, ಸಮಯ ಬೇಕು ಎಂದು ಹೇಳುತ್ತೀರಿ.

(ಗೊಂದಲ)

ಶ್ರೀ ಎಂ.ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾನ್ಯ ಸಭಾಪತಿಯವರಿಗೆ ಗೌರವ ಕೊಡುತ್ತಿಲ್ಲ. ಅವರು ಹೇಳಿದ್ದನ್ನು ನಾವು ಕೇಳಬೇಕೆ?

(ಗೊಂದಲ)

ಉಪ ಸಭಾಪತಿಯವರು:– ದಯವಿಟ್ಟು ಎಲ್ಲಾ ಸದಸ್ಯರು ಕುಳಿತುಕೊಳ್ಳಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

8. ನಿಯಮ 161ರ ಮೇರೆಗೆ ವಿಶೇಷ ಪ್ರಸ್ತಾವ,

ಉತ್ತರ ಕರ್ನಾಟಕ ಭಾಗದ ಸಮಗ್ರ ಅಭಿವೃದ್ಧಿಗಾಗಿ ಕೈಗೊಳ್ಳಬೇಕಾಗಿರುವ ಕ್ರಮಗಳ ಬಗ್ಗೆ.

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:- ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಮೊಟ್ಟ ಮೊದಲನೆಯದಾಗಿ ಉತ್ತರ ಕರ್ನಾಟಕ ಭಾಗದ ಬಗ್ಗೆ ಚರ್ಚೆ ಮಾಡುವುದಕ್ಕೆ, ಅನುವು ಮಾಡಿಕೊಟ್ಟಿರುವುದಕ್ಕೆ, ಎಲ್ಲಾ ಮಾನ್ಯ ಸದಸ್ಯರುಗಳಿಗೆ ನಾನು ಕೃತಜ್ಞನಾಗಿದ್ದೇನೆ. ಇವತ್ತಿನ ಪ್ರಮುಖವಾದಂತಹ ವಿಷಯಗಳು ಏನೆಂದು ಹೇಳುತ್ತೇನೆ; ಕಳಸ-ಬಂಡೂರಿ ಮಹದಾಯಿ ಯೋಜನೆಯ ವಿವಾದ ಇತ್ಯರ್ಥವಾಗಬೇಕು. ಮಾನ್ಯ ಕೈಗಾರಿಕಾ ಸಚಿವರು ಇದ್ದಾರೆ, ಕೈಗಾರಿಕೆಗೆ ಸಂಬಂಧಪಟ್ಟಂತೆ ಉತ್ತರ ಕರ್ನಾಟಕ ಮತ್ತು ಬೆಂಗಳೂರಿಗೆ ಹೋಲಿಕೆ ಮಾಡಿ ನೋಡಿದರೆ ಬಹಳಷ್ಟು ತೊಂದರೆ ಇದೆ. ಬಗರ್‌ಹುಕುಂ ಸಾಗುವಳಿ ರೈತರಿಗೆ ಹಕ್ಕುಪತ್ರವನ್ನು ನೀಡಬೇಕು, ಡಾ: ಡಿ.ಎಂ.ನಂಜುಂಡಪ್ಪನವರ ವರದಿ ಜಾರಿ ಆಗಬೇಕು. ವಾಯುವ್ಯ ಮತ್ತು ಈಶಾನ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆಯ ಬಗ್ಗೆ ಸರ್ಕಾರ ನಿಷ್ಕಾಳಜಿ ವಹಿಸಿದೆ, ಅದರ ಬಗ್ಗೆ ಸರಿಯಾಗಬೇಕು. ಕರ್ನಾಟಕ-ಮಹಾರಾಷ್ಟ್ರದ ಮಹಾಜನ ವರದಿಯ ಬಗ್ಗೆ ಹೇಳಬೇಕು. ಕಿತ್ತೂರು ಮಾರ್ಗವಾಗಿ ಬೆಳಗಾವಿಗೆ ಹೋಗುವ ರೈಲು ಮಾರ್ಗವನ್ನು ಮಾಡಬೇಕು. ಇಲ್ಲಿ ಬೆಳೆಯುತ್ತಿರುವಂತಹ ಬೆಳೆಗಳಿಗೆ ಬೆಂಬಲ ಬೆಲೆಯನ್ನು ನೀಡಬೇಕು. ಈ ರೀತಿ ಹತ್ತಾರು ಸಮಸ್ಯೆಗಳಿವೆ. ಅದರ ಜೊತೆಗೆ ಕರ್ನಾಟಕ ಏಕೀಕರಣವಾಗಿ 60 ವರ್ಷಗಳು ಆದರೂ ಸಹ, ಇವತ್ತಿನವರೆವಿಗೂ ಮಹಾಜನ ವರದಿ ಜಾರಿಗೆ ಬಂದಿಲ್ಲ. ಇಂತಹ ಅನೇಕ ಸಮಸ್ಯೆಗಳಿವೆ, ಈ ಸಮಸ್ಯೆಗಳ ಬಗ್ಗೆ ಸ್ವಲ್ಪ-ಸ್ವಲ್ಪ ಹೇಳುತ್ತೇನೆ. ದಯಮಾಡಿ ಸರ್ಕಾರ ಅದರ ಬಗ್ಗೆ ಸೂಕ್ತವಾದಂತಹ ಕ್ರಮವನ್ನು ತೆಗೆದುಕೊಂಡು, ಅವುಗಳನ್ನು ಜಾರಿ ಮಾಡುವುದಕ್ಕೆ ಸಾಧ್ಯವಾದಂತಹ ಪ್ರಯತ್ನವನ್ನು ಮಾಡಬೇಕೆಂದು ನಾನು ಮನವಿಯನ್ನು ಮಾಡುತ್ತೇನೆ.

(ಮುಂದು...)

(1122)21.11.2017/03.50/ಎಲ್‌ಎಲ್(ಎಸ್‌ವಿ)-ಬಿಎನ್‌ಎಸ್

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಮುಂದು):-

ಮಾನ್ಯ ಸಭಾಪತಿಯವರೇ, ಕಳಸಾ ಬಂಡೂರಿ ನಾಲಾ ಜೋಡಣೆ ಯೋಜನೆ ಕಳೆದ ಅನೇಕ ವರ್ಷಗಳಿಂದ ನೆನೆಗುದಿಗೆ ಬಿದ್ದಿದೆ. 675 ದಿವಸಗಳಿಂದ ಇಲ್ಲಿ ರೈತರು ಕಳಸಾ ಬಂಡೂರಿ ನಾಲಾ ಯೋಜನೆಯನ್ನು ಜಾರಿಗೆ ತಂದು ಸಾಲ ಮನ್ನಾ ಮಾಡಬೇಕೆಂದು ಉಪವಾಸವನ್ನು ಮಾಡುತ್ತಿದ್ದಾರೆ. ನವಲಗುಂದ, ನರಗುಂದ, ಅಣ್ಣಿಗೇರಿ, ಹುಬ್ಬಳ್ಳಿ, ಬೈಲಹೊಂಗಲ, ಬಾದಾಮಿ, ರಾಮದುರ್ಗ ಮುಂತಾದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಡೆಯಿಂದ ರೈತರು ಹೋರಾಟ ಮಾಡಲಿಕ್ಕೆ ಪ್ರಾರಂಭಿಸಿ 675 ರಿಂದ 680 ದಿನಗಳಾಯಿತು. ಇವತ್ತಿನವರೆವಿಗೆ ಅಲ್ಲಿ ಯಾವುದೇ ಪ್ರಗತಿ ಇರುವುದಿಲ್ಲ. ಈ ಹೋರಾಟಕ್ಕೆ ರೈತರು, ವಿದ್ಯಾರ್ಥಿಗಳು, ಕನ್ನಡ ಪರ ಸಂಘಟನೆಗಳು, ಚಿತ್ರರಂಗ, ಎಲ್ಲಾ ರಾಜಕೀಯ ಪಕ್ಷಗಳು ಹಾಗೂ ವಿವಿಧ ಸಂಘಟನೆಗಳು ಬೆಂಬಲವನ್ನು ವ್ಯಕ್ತ ಪಡಿಸಿವೆ. ನರಗುಂದ ಮತ್ತು ನವಲಗುಂದಕ್ಕೆ ಮಾತ್ರ ಸೀಮಿತವಾಗಿದ್ದ ಈ ಹೋರಾಟವು ಹುಬ್ಬಳ್ಳಿ ಮತ್ತು ಬೆಂಗಳೂರಿನವರೆವಿಗೂ ಬಂದಿದೆ.

ಮಾನ್ಯ ಸಭಾಪತಿಯವರೇ, ಪ್ರತಿಬಾರಿಯೂ ಕಾವೇರಿ ಹೋರಾಟ ಎಂದರೆ ಕೇವಲ ಹಳೆಯ ಮೈಸೂರು ಭಾಗಕ್ಕೆ ಮಾತ್ರ, ಕೃಷ್ಣಾ ಮತ್ತು ಮಹದಾಯಿ ಎಂದರೆ ಉತ್ತರ ಕರ್ನಾಟಕಕ್ಕೆ ಮಾತ್ರ ಎಂಬಂತೆ ಇತ್ತು. ಆದರೆ ಈ ಬಾರಿ ಮಹದಾಯಿ ವಿಚಾರವಾಗಿ ಅಖಂಡ ಕರ್ನಾಟಕ ಒಂದಾಗಿ ಹೋರಾಟ ಮಾಡಿದಂತಹ ಹಾಗೂ ಪಕ್ಷಾತೀತವಾಗಿ ಎಲ್ಲಾ ಬೆಂಬಲವನ್ನೂ ಕೊಟ್ಟಂತಹ ಸುಧಾರಣೆಯನ್ನು ನೋಡಿದರೆ ನನಗೆ ಅಭಿಮಾನವೆನ್ನಿಸುತ್ತದೆ. ಇದಕ್ಕಾಗಿ ನಾನು ಎಲ್ಲರನ್ನೂ ಅಭಿನಂದಿಸಲಿಚ್ಛಿಸುತ್ತೇನೆ. ಈ ಹಿನ್ನೆಲೆಯಲ್ಲಿ ರಾಜ್ಯದ ಸಮಸ್ತ ಜನರು ಈ ಹೋರಾಟಕ್ಕೆ ಬೆಂಬಲವನ್ನು ಕೊಟ್ಟರೂ ಸಹಿತ ಇನ್ನೂ ಇದು ಆಗಿಲ್ಲ ಎನ್ನುವುದು ಬಹಳ ನೋವಿನ ಸಂಗತಿ.

ಮಾನ್ಯ ಸಭಾಪತಿಯವರೇ, ನಾವು ಎಲ್ಲಾ ಪಕ್ಷದ ಶಾಸಕರು, ಮಂತ್ರಿಗಳು ಎಲ್ಲರೂ ಕೂಡಿ ದಿ:23.08.2017ರಂದು ಬೆಂಗಳೂರಿನಲ್ಲಿ ಸರ್ವಪಕ್ಷದ ಸಭೆಯನ್ನು ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಕರೆಯಲಾಯಿತು. ದಿ:24.08.2017ರಂದು ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರನ್ನು ಭೇಟಿಯಾದೆವು. ಪ್ರಧಾನ ಮಂತ್ರಿಗಳು ಕರ್ನಾಟಕದ ಸರ್ಕಾರದ ಮನವಿಯನ್ನು ಕೇಳಿದರು. 02.11.2015ರಿಂದ ಶ್ರೀ ಫಾಲಿ ನಾರಿಮನ್‌ರವರನ್ನು ಭೇಟಿ ಮಾಡಿ ಮಧ್ಯಂತರ ಅರ್ಜಿಯನ್ನು ಸಲ್ಲಿಸಬೇಕೆಂದು ಸರ್ಕಾರ ಮನವಿಯನ್ನು ಮಾಡಿತ್ತು. ನ್ಯಾಯಾಧಿಕರಣದ ನ್ಯಾಯಮೂರ್ತಿಗಳಾದ ಶ್ರೀ ಪಾಂಚಾಲ್ ಎನ್ನುವವರಿಗೆ ಆರೋಗ್ಯ ಸರಿಯಿಲ್ಲವೆನ್ನುವ ಕಾರಣದಿಂದ ಎರಡು ಬಾರಿ ವಿಚಾರಣೆಯ ದಿನಾಂಕವನ್ನು ಮುಂದೂಡಲಾಯಿತು. ಆಗ 66 ದಿನಗಳ ಕಾಲ ನಿರಂತರ ಹೋರಾಟವನ್ನು ಮಾಡಿದಂತಹ ರೈತರು ಕಳಸಾ-ಬಂಡೂರಿ ನಾಲಾ ಯೋಜನೆ ಹಾಗೂ ರೈತರ ಸಾಲ ಮನ್ನಾ ಕುರಿತು ವಿಶೇಷ ಅಧಿವೇಶನ ಕರೆಯಬೇಕೆಂದು ಸಭಾಧ್ಯಕ್ಷರಿಗೆ ಮನವಿಯನ್ನು ಸಲ್ಲಿಸಿದಾಗ ಸಭಾಧ್ಯಕ್ಷರು ಮುಖ್ಯಮಂತ್ರಿಯವರಿಗೆ 23.09.2016ರಂದು ಪತ್ರವನ್ನು ಬರೆದು ತಿಳಿಸಿದರು. ಸದನದ ನಮ್ಮ ಎಲ್ಲಾ ಗೌರವಾನ್ವಿತ ಸದಸ್ಯರು ಹೋರಾಟಕ್ಕೆ ಬೆಂಬಲವನ್ನು ಕೊಟ್ಟಿದ್ದರು ಎಂದು ಈಗಾಗಲೇ ಹೇಳಿದ್ದೇನೆ. ಹೋರಾಟದ ಸ್ಥಳ ಉತ್ತರ ಕರ್ನಾಟಕದ ಬೆಳಗಾವಿಯಾಗಿದ್ದು, ಪ್ರಧಾನ ಮಂತ್ರಿಯವರು ಅನೇಕ ಬಾರಿ ಇಲ್ಲಿಗೆ ಬಂದಿದ್ದರು. ಅವರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನ್ಯಾಯಾಧಿಕರಣದ ಹೊರಗೆ ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕೆಂಬ ಸಲಹೆಯನ್ನು ಕೊಟ್ಟರು. ಹೊರಗಡೆ ಬಗೆ ಹರಿಸಿಕೊಳ್ಳಬೇಕೆಂದರೆ ಮಹಾರಾಷ್ಟ್ರ, ಗೋವಾ ಮತ್ತು ಕರ್ನಾಟಕದ ನಡುವೆ ಬಗೆ ಹರಿಸಿಕೊಳ್ಳಬೇಕೆಂದು ಹೇಳಿದರು. ಆಗ ನೀವು ಕಾಂಗ್ರೆಸ್‌ನವರನ್ನು ಒಪ್ಪಿಸಿ, ನಾವು ಬಿ.ಜೆ.ಪಿ.ಯವರನ್ನು ಒಪ್ಪಿಸುತ್ತೇವೆಂದು ಹೇಳಿದರು. ಅವರು ಒಪ್ಪಲಿಲ್ಲ. ಸಭೆಯನ್ನು ಕರೆದರು. ಮಹಾರಾಷ್ಟ್ರದಲ್ಲಿ ಕರೆದಾಗ ಯಾರೂ ಹೋಗಲಿಲ್ಲ. ಮತ್ತೊಂದು ಬಾರಿ ಗೋವಾದವರು ಹೋಗಲಿಲ್ಲ. ಹೀಗೆ ಮುಂದುವರೆಯುತ್ತಾ ಇದು ಕಗ್ಗಂಟಾಗಿ ಉಳಿದಿದೆ. ಇದಕ್ಕೊಂದೇ ದಾರಿ ಇರುವುದು, ಏನೆಂದರೆ ಪ್ರಧಾನ ಮಂತ್ರಿಗಳು ಮನಸ್ಸು ಮಾಡಿ ಇದನ್ನು ನ್ಯಾಯಾಧಿಕರಣದಿಂದ ಹೊರಗೆ ಇಟ್ಟು ಹಿಂದಿನ ಪ್ರಧಾನಿಗಳಾದ ಶ್ರೀ ಅಟಲ್ ಬಿಹಾರಿ ವಾಜಪೇಯಿ, ಶ್ರೀ ದೇವೇಗೌಡರು ಅಥವಾ ಶ್ರೀಮತಿ ಇಂದಿರಾಗಾಂಧಿಯವರಿದ್ದಾಗಲಾಗಲೀ ಮಾಡಿದಂತಹ ಕಾರ್ಯಕ್ರಮಗಳಂತೆ ಮಾಡಿದಾಗ ಮಾತ್ರ ಇದಕ್ಕೆ ಪರಿಹಾರ ಸಾಧ್ಯವಾಗುತ್ತದೆ. ಇದು ಇಂದಿನ ಪ್ರಧಾನಮಂತ್ರಿಗಳಿಂದ ಸಾಧ್ಯ. ಅದನ್ನು ಬಿಟ್ಟು ಹರಿ-ಬ್ರಹ್ಮ ಬಂದರೂ ಸಹ ಕಳಸಾ-ಬಂಡೂರಿ ನಾಲಾ ಯೋಜನೆ ಮುಗಿಯಲು ಸಾಧ್ಯವಿಲ್ಲ.

(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜು ಕುಟ್ಟಿ ಹರ್ಷವನ್ನು ವ್ಯಕ್ತ ಪಡಿಸಿದರು.)

ಇದನ್ನು ಹೀಗೆಯೇ ಮುಂದೂಡುತ್ತಾ ಹೋಗುತ್ತಾರೆ. ಕರ್ನಾಟಕದ ಬೆಳಗಾವಿಯನ್ನಾಗಲೀ, ಹುಬ್ಬಳ್ಳಿಯನ್ನಾಗಲೀ ಬಿಟ್ಟರೆ ಗೋವಾದವರಿಗೆ ಏನೊಂದು ನಯಾಪೈಸೆಯಷ್ಟೂ ಸಹ ಲಾಭವಿಲ್ಲ. ನಾವೇನಾದರೂ ಪದಾರ್ಥಗಳನ್ನು ಕಳುಹಿಸದಿದ್ದರೆ ಗೋವಾದವರು ಕೇವಲ ಮೀನು ತಿನ್ನಬೇಕಾಗುತ್ತದೆ. ಏನೂ ಮಾಡುವುದಕ್ಕಾಗುವುದಿಲ್ಲ. ನಮ್ಮ ರಾಜ್ಯದಲ್ಲಿ 28 ಮಂದಿ Member of Parliament (M.P.) ಗಳಿದ್ದಾರೆ. ಅಲ್ಲಿ ಕೇವಲ ಇಬ್ಬರು M.P. ಗಳು. ಇಂತಹ ಪರಿಸ್ಥಿತಿಯಲ್ಲಿಯೂ ಸಣ್ಣ ರಾಜ್ಯದ ಹಿಂದೆಯೇ ಕೇಂದ್ರ ಸರ್ಕಾರವಿದೆ. ಆದ್ದರಿಂದ ಎಲ್ಲರೂ ಕೂಡಿ ಒಂದು resolution ಮಾಡಿ ಪ್ರಧಾನಮಂತ್ರಿಗಳು ಈ ವಿಷಯದಲ್ಲಿ intervene ಆಗುವಂತೆ ಮಾಡಬೇಕು. ಇಂದು ಉತ್ತರ ಕರ್ನಾಟಕದ ಎಷ್ಟೋ ಹಳ್ಳಿಗಳಲ್ಲಿ ಕುಡಿಯುವುದಕ್ಕೆ ನೀರಿಲ್ಲ. ನನ್ನ ವಿನಂತಿಯೇನೆಂದರೆ, ಪ್ರಧಾನ ಮಂತ್ರಿಗಳ ಬಳಿಗೆ ಮುಖ್ಯಮಂತ್ರಿಯವರ ನೇತೃತ್ವದಲ್ಲಿ ನಿಯೋಗವನ್ನು ಒಯ್ಯುವುದಕ್ಕೆ ಪೂರ್ವದಲ್ಲಿ ಮೇಲ್ಮನೆ ಮತ್ತು ಕೆಳಮನೆಯಲ್ಲಿ ಒಂದು resolution ಮಾಡಿ ಪ್ರಧಾನಮಂತ್ರಿಯವರ ಬಳಿ ಮನವಿ ಮಾಡಬೇಕು ಹಾಗೂ ಪಾರ್ಲಿಮೆಂಟಿನ ಎಲ್ಲಾ ಸದಸ್ಯರೂ ಕೂಡಿ ಇದನ್ನು ಚರ್ಚೆ ಮಾಡಿದರೆ ಮಾತ್ರ ಈ ಸಮಸ್ಯೆ ಬಗೆಹರಿಯುವುದು ಎನ್ನುವಂತಹ ಕಟುಸತ್ಯವನ್ನು ಈಗ ನಾವು ತಿಳಿದುಕೊಂಡಿದ್ದೇವೆ. ಈಗ ಎರಡು-ಮೂರು ವರ್ಷಗಳಾದರೂ ಹೋರಾಟ ನಡೆಯುತ್ತಲೇ ಇದೆ. ಆ ಹಿನ್ನೆಲೆಯಲ್ಲಿ ಎಲ್ಲಾ ಸದಸ್ಯರೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಂದು ತೀರ್ಮಾನಕ್ಕೆ ಬಂದು ಪ್ರಧಾನ ಮಂತ್ರಿಯವರಿಗೆ ಒತ್ತಾಯ ಮಾಡಬೇಕು. ಎಲ್ಲಾ ಪಾರ್ಲಿಮೆಂಟ್ ಸದಸ್ಯರ ಸಭೆಯನ್ನು ಇಲ್ಲಿ ಕರೆದು ಏನಾದರೂ ಮಾಡಿ ಇದಕ್ಕೊಂದು ಅಂತಿಮ ತೀರ್ಮಾನ ಮಾಡಬೇಕೆಂದು ಈ ಮೂಲಕ ನಾನು ಒತ್ತಾಯ ಮಾಡಬಯಸುತ್ತೇನೆ.

ಮಾನ್ಯ ದೇಶಪಾಂಡೆಯವರು ಇಲ್ಲಿದ್ದಾರೆ. ಅವರು ಸುಮಾರು 10-12 ವರ್ಷಗಳಿಂದ ಕೈಗಾರಿಕಾ ಸಚಿವರಾಗಿದ್ದಾರೆ. ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಬೆಂಗಳೂರಿನಲ್ಲಿಯೇ ಎಲ್ಲಾ ಕೈಗಾರಿಕೆಗಳೂ ಇವೆ. ಜನಸಂಖ್ಯೆ ಹೆಚ್ಚಾಗಿದ್ದರೂ ಸಹ ಎಲ್ಲಾ ಕೈಗಾರಿಕೆಗಳು ಅಲ್ಲಿಯೇ ಆಗುವುದು. ಉತ್ತರ ಕರ್ನಾಟಕ ಎಂದರೆ ಕೇವಲ ಬೆಳಗಾವಿ ಮತ್ತು ಕಲಬುರಗಿ ವಿಭಾಗಗಳಷ್ಟೆ ಅಲ್ಲದೆ ಹಾಸನ, ತುಮಕೂರು ಈ ರೀತಿ ಎಲ್ಲಾ ಕಡೆಗಳಿಗೂ ಕಳುಹಿಸುವಂತಹ ವ್ಯವಸ್ಥೆ ಆಗಬೇಕು. ಇಂದು ಹುಬ್ಬಳ್ಳಿ-ಧಾರವಾಡ ರಾಜ್ಯದ ಎರಡನೇ ಅತಿ ದೊಡ್ಡ ನಗರವಾಗಿದೆ. ಅಲ್ಲಿಗೆ ಯಾವುದೇ ಕೈಗಾರಿಕೆಗಳು ಬರುವುದಿಲ್ಲ. Information Technology (I.T.) and Bio Technology (B.T.) Companies ಬರುವುದಿಲ್ಲ. ಕಾರಣಗಳನ್ನು ಸರ್ಕಾರ ಕಂಡು ಹಿಡಿದು ಇಲ್ಲಿಗೆ ಕೈಗಾರಿಕೆಗಳು ಬರುವಂತೆ ಮಾಡಬೇಕು. ಧಾರವಾಡದ ಬೇಲೂರು-ಮುಮ್ಮಿಗಟ್ಟಿ ಕೈಗಾರಿಕಾ ಪ್ರದೇಶದಲ್ಲಿ ಟಾಟಾ ಮೋಟಾರ್ಸ್‌ಗೆ ಜಮೀನನ್ನು ಮಂಜೂರು ಮಾಡಿದ್ದಾರೆ. ದಿನಾಂಕ 18.11.2017ರಂದು ಅಂದರೆ ಈಗ ಎರಡು ದಿನಗಳ ಹಿಂದೆ ನಾನು ಈ ಮಾಹಿತಿಯನ್ನು ಪಡೆದುಕೊಂಡಿರುತ್ತೇನೆ. ಮುಖ್ಯ ಅಭಿವೃದ್ಧಿ ಅಧಿಕಾರಿಗಳು ಹಾಗೂ ಮುಖ್ಯ ಅಭಿಯಂತರರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಇವರಿಗೆ ಪತ್ರವನ್ನು ಬರೆದಿದ್ದೆನು. ಅವರು ನನಗೆ ಪತ್ರವನ್ನು ಬರೆದಿದ್ದು ಅದರ ಸಾರಾಂಶ ಹೀಗಿದೆ:-

ಬೇಲೂರು ಹಾಗೂ ಮುಮ್ಮಿಗಟ್ಟಿ ಕೈಗಾರಿಕಾ ಪ್ರದೇಶದಲ್ಲಿ Tata Motors ಅವರಿಗೆ ಭೂಮಿ ಹಂಚಿಕೆ ಕುರಿತು - ದೂರವಾಣಿ ಸಂದೇಶ: ಶ್ರೀ ಬಸವರಾಜ ಹೊರಟ್ಟಿ

"ಮೇಲಿನ ವಿಷಯ ಹಾಗೂ ಉಲ್ಲೇಖದನ್ವಯ ಬೇಲೂರು ಹಾಗೂ ಮುಮ್ಮಿಗಟ್ಟಿ ಕೈಗಾರಿಕಾ ಪ್ರದೇಶದಲ್ಲಿ Tata Motors ರವರಿಗೆ 1985-86ರಲ್ಲಿ 640.36 ಎಕರೆ ಹಂಚಿಕೆ ಮಾಡಲಾಗಿತ್ತು. ಅದರಲ್ಲಿ Tata Marcopolo, Tata Hitachi, ಸದರಿಯವರಿಗೆ sub-lease ಮಾಡಿಕೊಂಡು ಸದರಿ ಘಟಕಗಳು ಉತ್ಪಾದನೆಯಲ್ಲಿವೆ. Tata Marcopolo ಗೆ 123 ಎಕರೆ 45 ಗುಂಟೆ, Tata Hitachi ಗೆ 119 ಎಕರೆ Tata Vendors' Park ಗೆ 341 ಎಕರೆ" ಎಂದಿದೆ. ಇವರಿಗೆ ನೀರು ಪುಕ್ಕಟೆಯಾಗಿ ಕೊಡುತ್ತೇವೆ. ವಿದ್ಯುತ್ ಅನ್ನು ರಿಯಾಯಿತಿಯಲ್ಲಿ ಕೊಡುತ್ತೇವೆ. ಇದೆಲ್ಲವನ್ನು ಕೊಟ್ಟರೂ

ಸಹಿತ ದುರದೃಷ್ಟವಶಾತ್, ಉತ್ತರ ಕರ್ನಾಟಕದವರಿಗೆ ಶೇ.1ರಷ್ಟೂ ಸಹ ಉದ್ಯೋಗಗಳು ದೊರೆತಿರುವುದಿಲ್ಲ. ಈ ಜಮೀನನ್ನು ಆಗ ರೂ.5,000/-ಗಳಿಗೆ, ರೂ.10,000/- ಗಳಿಗೆ ಒಂದು ಎಕರೆಯಂತೆ ತೆಗೆದುಕೊಂಡಿದ್ದಾರೆ. ಇಂದು ಎಕರೆಗೆ ರೂ.10 ಲಕ್ಷ, ರೂ.15 ಲಕ್ಷ, ರೂ.25 ಲಕ್ಷ ಈ ರೀತಿ ಬೆಲೆ ಇದೆ. ಆದ್ದರಿಂದ ಉತ್ತರ ಕರ್ನಾಟಕದ ಸಮಗ್ರ ಅಭಿವೃದ್ಧಿ ಮಾಡುವ ಸಲುವಾಗಿ ಕೈಗಾರಿಕೆಗೆ ಹೆಚ್ಚು ಒತ್ತನ್ನು ನೀಡಬೇಕು. ಬೆಂಗಳೂರಿಗೆ ಯಾವುದೇ ರೀತಿಯ ಕೈಗಾರಿಕೆಗಳನ್ನು ಕೊಡುವ ಪದ್ಧತಿಯನ್ನು ಸರ್ಕಾರ ನಿಲ್ಲಿಸಬೇಕು ಎಂದು ಹೇಳುತ್ತೇನೆ. ಏಕೆಂದರೆ ಅಲ್ಲಿ ನಿಲ್ಲಿಸಿದಾಗ ಮಾತ್ರ ಅವು ಬೇರೆ ಕಡೆಗಳಲ್ಲಿ ಪ್ರಾರಂಭವಾಗಲು ಸಾಧ್ಯ. ಬೆಂಗಳೂರಿನಲ್ಲಿ ಜನಸಂಖ್ಯೆ ಹೆಚ್ಚಿರುವ ಕಾರಣ ಜನರು ಬೇಸತ್ತು ಹೋಗಿದ್ದಾರೆ. ಆ ಮೂಲಕವಾದರೂ ಉತ್ತರ ಕರ್ನಾಟಕದ ಅಭಿವೃದ್ಧಿಗಾಗಿ ಒಳ್ಳೆಯ ಕೆಲಸವನ್ನು ಮಾಡಲು ಸಾಧ್ಯ ಎಂದು ನಾನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಇದು ನನ್ನ ಮನವಿ. ನಂತರ ಬಗರ್ ಹುಕುಂ..

ಶ್ರೀ ಆರ್.ವಿ.ದೇಶಪಾಂಡೆ (ಬೃಹತ್ ಕೈಗಾರಿಕೆ ಸಚಿವರು):- ಮಾನ್ಯ ಸಭಾಪತಿಯವರೇ, Tata Motors, ಧಾರವಾಡಕ್ಕೆ ಬಂದಿದ್ದು, ಈ ಭಾಗದವರಾದ ನಮಗೆ ಗೌರವವಿರಬೇಕು. Tata Industries ಬರಬೇಕಾದಂತಹ ಸಂದರ್ಭದಲ್ಲಿ ಸಾಕಷ್ಟು ಪ್ರಯತ್ನಗಳು ನಡೆಯಿತು. ಆಗ ಶ್ರೀ ಜೆ.ಹೆಚ್. ಪಟೇಲ್‌ರವರು ಮುಖ್ಯಮಂತ್ರಿಗಳಾಗಿದ್ದರು. ಬಹಳಷ್ಟು persuasion ಆದರೂ ಸಹ ಅವರು ಒಪ್ಪಿಕೊಂಡಿರಲಿಲ್ಲ. ಆ ಸಮಯದಲ್ಲಿ ನಾನೇ ಈ ಭಾಗದಲ್ಲಿ ಒಂದು ಕೈಗಾರಿಕೆಯಾಗಬೇಕೆಂದು ಹೇಳಿ ಶ್ರೀ ರತನ್ ಟಾಟಾರವರನ್ನು ಕರೆದುಕೊಂಡು ಬಂದು Centre for Entrepreneurship Development of Karnataka (CEDOK) ಎಂದು ಮಾಡಿ ಅವರ ಕಡೆಯಿಂದ ಉದ್ಘಾಟನೆಯನ್ನು ಮಾಡಿಸಿದೆವು. ಅಲ್ಲಿ ಇಂದು ಮೂರು ಕೈಗಾರಿಕೆಗಳು ಕಾರ್ಯ ನಿರ್ವಹಿಸುತ್ತಿವೆ. More than 10,000 people are working there. ಉನ್ನತ ಮಟ್ಟದಲ್ಲಿ ಇವರು ಹೇಳಿರುವುದು ಸರಿಯಿರಬಹುದು. ಆದರೆ ಡಾ:ಸರೋಜಿನಿ ಮಹಿಷಿ ವರದಿಯನ್ನು ಅವರು ಜಾರಿ ಮಾಡಲೇ ಬೇಕು. ಅಲ್ಲಿ ಎಷ್ಟು ಜನ ಸ್ಥಳೀಯರು, ಎಷ್ಟು ಜನ ಕನ್ನಡಿಗರು ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ಮಾನ್ಯ ಸದಸ್ಯರಿಗೆ ಬೇಕಾದರೆ ಮಾಹಿತಿಯನ್ನು ತರಿಸಿಕೊಡುತ್ತೇವೆ. ಈ ಕೈಗಾರಿಕೆಯು ಬಂದದ್ದು 1985-86ರಲ್ಲಿ. ಇತ್ತೀಚೆಗೆ ಕೈಗಾರಿಕೆ ಅಭಿವೃದ್ಧಿಗೆ ಹಣ ಬಿಡುಗಡೆ ಮಾಡಿದ್ದು, ಅಲ್ಲಿಗೆ ನಾನು ಅಡಿಗಲ್ಲು ಹಾಕುವ ಕಾರ್ಯಕ್ರಮಕ್ಕೆ ಹೋಗಿದ್ದೆನು. ಆಗ ನಾನು CEDOK office ನಲ್ಲಿರುವ ಒಂದು ಫೋಟೊವನ್ನು ನೋಡಿದೆನು. ಅದರಲ್ಲಿ ದಿ:ಶ್ರೀ ಜೆ.ಹೆಚ್.ಪಟೇಲರು, ಶ್ರೀ ರತನ್ ಟಾಟಾ, ನಾನು ಎಲ್ಲರೂ ಇದ್ದೆವು. ಅದನ್ನು ನೋಡಿ

ನನಗೆ ಹಳೆಯ ನೆನಪುಗಳನ್ನು ಮೆಲುಕು ಹಾಕುವಂತಾಯಿತು. ಹಾಗಾಗಿ, Tata Group ಅಂತಹ ದೊಡ್ಡ ಕೈಗಾರಿಕೆಯೊಂದು ಇಲ್ಲಿಗೆ ಬಂದಿರುವುದರ ಬಗ್ಗೆ ನಮಗೆ ಅಭಿಮಾನವಿರಬೇಕು.

ಎರಡನೆಯದಾಗಿ ಮಾನ್ಯ ಹೊರಟ್ಟಿಯವರು ಬೆಂಗಳೂರಿನಿಂದ ಕೈಗಾರಿಕೆಗಳು ಬೆಂಗಳೂರಿನಿಂದ dispersal ಆಗಬೇಕೆಂದು ಹೇಳಿದರು. ಅದರಲ್ಲಿ ಯಾವುದೇ ತರಹದ ಭಿನ್ನಾಭಿಪ್ರಾಯವಿಲ್ಲ. ನಾವು ಸಹ ಬೆಂಗಳೂರಿನಲ್ಲಿ manufacturing industries ಗೆ ಅನುಮತಿಯನ್ನು ಕೊಡುತ್ತಿಲ್ಲ.

(...ಮುಂದು)

(1123)21.11.2017/4.00/ವೈಎಲ್-ಬಿಎನ್ಎಸ್

ಶ್ರೀ ಆರ್.ವಿ.ದೇಶಪಾಂಡೆ(ಮುಂದು):-

ಚೆನ್ನೈ, ಬೆಂಗಳೂರು, ಚಿತ್ರದುರ್ಗಕ್ಕೆ ಒಂದು Corridor ಅನ್ನು ಮಾಡುತ್ತಿದ್ದೇವೆ. ವಸಂತ ನರಸಾಪುರ, ತುಮಕೂರು ಕಡೆ ನಾವು with the co-operation of Government of India ಸಾವಿರಾರು ಎಕರೆ ಭೂಮಿಯನ್ನು acquire ಮಾಡಿ..., Havells Company ಅವರು ಒಂದು ಸಾವಿರ ಕೋಟಿ ರೂಪಾಯಿಗಳನ್ನು ಹೂಡಿಕೆ ಮಾಡುತ್ತಿದೆ. ಕೆಲಸ ಶುರುವಾಗಿದೆ. ಹಲವಾರು Japanese Companies ಹೋಗಿದ್ದಾವೆ. ಕೋಲಾರ ಜಿಲ್ಲೆಯ ವೇಮಗಲ್ ನಲ್ಲಿ Glaxo SmithKline ನ biggest facility in the world ಅಲ್ಲಿ ಬರುತ್ತಿದೆ. Mitsubishi ಯೋಜನೆಯನ್ನು ಈಗಾಗಲೇ ಕೈಗೆತ್ತಿಕೊಳ್ಳಲಾಗಿದೆ. ವೇಮಗಲ್‌ನಲ್ಲಿ, ನರಸಾಪುರದಲ್ಲಿ Honda ಅವರ biggest factories ಬರುತ್ತಿವೆ. ಅವು ಬೆಂಗಳೂರಿನಲ್ಲಿಲ್ಲ. ಮೈಸೂರಿನಲ್ಲಿ Asian Paints ಬರುತ್ತಿದೆ. ಹಾಗಾಗಿ ಕೈಗಾರಿಕೆಗಳು ಬೆಳೆಯುತ್ತಿವೆ. ಇವತ್ತು ಬೆಳಗಾವಿಯಲ್ಲಿ ಕೆಲವು ಹೆಣ್ಣುಮಕ್ಕಳಿಗೆ 'Women Park' ಗೆ land ಬೇಕಾಗಿತ್ತು. ನಮ್ಮ ಅಪರ ಕಾರ್ಯದರ್ಶಿಯವರು request ಮಾಡಿದರು. ಬೆಳಗಾವಿಯಲ್ಲಿ ಸಭೆಯನ್ನು ಮಾಡಿದೆವು. ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ಕೈಗಾರಿಕಾ ಖಾತೆಯಿದ್ದಾಗ, ಕಿತ್ತೂರು, ನಿಪ್ಪಾಣಿಯು, Kolhapur Industrial Area ನಲ್ಲಿ ಬರುತ್ತದೆ ಎಂದು ಹೇಳಿದ್ದರು. ಇದನ್ನು ಬಿಟ್ಟರೆ ಇವತ್ತು ನಮ್ಮ ಕಡೆ ಎಲ್ಲವೂ full ಆಗಿದೆ. ಆದರೂ ನಮ್ಮಲ್ಲಿ Land Bank ಇದೆ. ಹಾಗಾಗಿ ಕೈಗಾರಿಕೆಗಳು ಬರಬೇಕಾಗುತ್ತದೆ. ಕೈಗಾರಿಕೆ ಬಂದಾಗ ಉದ್ಯೋಗ ಸೃಷ್ಟಿಯಾಗುತ್ತದೆ, prosperity

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬರುತ್ತದೆ. ಆದರೆ, ಬೆಂಗಳೂರು ವಿಚಾರ ಏನಾಗಿದೆ ಎಂದರೆ, ಇಡೀ ವಿಶ್ವವನ್ನು ಬೆಂಗಳೂರು attract ಮಾಡಿದೆ. ಹಾಗೆಯೇ, Information Technology (I.T.) Companies ವಿಚಾರ ಬಂದಾಗ, infrastructure ಹುಬ್ಬಳ್ಳಿ-ಧಾರವಾಡದಲ್ಲಿಲ್ಲ. ದೇಶ-ವಿದೇಶದವರು ಹಾಕಿದ್ದಾರೆ, Infosys ಇದೆ. ಸಾಕಷ್ಟು Industries ಇದೆ. ಆದರೆ, ಒಂದು ಮಾತನ್ನು ಹೇಳುವುದೇನೆಂದರೆ ಟಾಟಾ, ಬಿರ್ಲಾ, ಇತ್ಯಾದಿ ಕಂಪನಿಯವರನ್ನು ತರಬೇಕೆನ್ನುವುದಕ್ಕಿಂತ ಸ್ಥಳೀಯರು ಮುಂದೆ ಬರಬೇಕಾಗುತ್ತದೆ. ಏತಕ್ಕೆ ಸ್ಥಳೀಯರು ಮುಂದೆ ಬರಬೇಕೆಂದು ಹೇಳುತ್ತಿದ್ದೇನೆಂದರೆ ಒಂದು ಕಾರ್ಯಕ್ರಮದಲ್ಲಿ ನಾನು ಹಾಗೂ ಮಾನ್ಯ ಜಗದೀಶ್ ಶೆಟ್ಟರ್‌ರವರು ಕುಳಿತುಕೊಂಡು ಮಾತನಾಡುತ್ತಿದ್ದಾಗ ನಾನು ಅವರಿಗೆ ಹೇಳಿದೆ, ನೀವು ದೊಡ್ಡ ದೊಡ್ಡ ಕೈಗಾರಿಕೆಗಳನ್ನು ತರಬೇಕೆಂದು ಹೇಳುತ್ತೀರಿ, ಧಾರವಾಡ, ಬೆಳಗಾವಿಯ ಜನರ ಹತ್ತಿರ ಸಾಕಷ್ಟು ಹಣ ಇದೆ. ನೀವುಗಳೇ ಏಕೆ ಕೈಗಾರಿಕೆಗಳನ್ನು ಪ್ರಾರಂಭ ಮಾಡುವುದಿಲ್ಲವೆಂದು ಕೇಳಿದ್ದೆ. ಅಲ್ಲಿ ವ್ಯಾಪಾರ ಮಾಡುವ trend ಇದೆ. ಇವತ್ತು ಮುಂಜಾನೆ ಸಂಕೇಶ್ವರದ ಕಡೆ ಹೋಗಿದ್ದೆ, ಉದಾಹರಣೆಗೆ, ಕೊಣೆ ಎಂಬಲ್ಲಿ, which is a very backward area ಅಲ್ಲಿ ಒಂದು Textile Park ಮಾಡುತ್ತಿದ್ದು, it is the first park in Public-Private Partnership. ಹಾಗಾಗಿ ಕೈಗಾರಿಕೆ ಉನ್ನತ ಮಟ್ಟದಲ್ಲಿ ತರಬೇಕೆಂದು ಏನು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ ಅವರ intention ಅನ್ನು appreciate ಮಾಡುತ್ತೇನೆ. ಈಗಾಗಲೇ ನಾವು ಪ್ರಯತ್ನ ಮಾಡುತ್ತಿದ್ದೇವೆ. ಇನ್ನು ಮುಂದೆಯು ಪ್ರಯತ್ನವನ್ನು ಮಾಡುತ್ತೇವೆ. ಅದರ ಜೊತೆಗೆ ಮಾನ್ಯ ಸದಸ್ಯರಿಗೆ ಒಂದು ಮಾತನ್ನು ಹೇಳುವುದೇನೆಂದರೆ, ಕೇವಲ ಧಾರವಾಡ ಜಿಲ್ಲೆಗೆ ಕಳೆದ 4 ವರ್ಷಗಳಲ್ಲಿ ನಮ್ಮ ಕೈಗಾರಿಕೆಯಲ್ಲಿ, Industrial infrastructure create ಮಾಡಬೇಕು. Roads and Drains ಮಾಡುವುದಕ್ಕೆ, 182 ಕೋಟಿ ರೂಪಾಯಿಗಳನ್ನು ನೀಡಿದ್ದೆವು. ಬೆಳಗಾವಿ, ಬಿಜಾಪುರ, ಜಿಲ್ಲೆಯಲ್ಲಿ ಎಷ್ಟು Industrial Estates ಇವೆ ಅವೆಲ್ಲದಕ್ಕೂ ಹಣವನ್ನು ಕೊಟ್ಟಿದ್ದೇವೆ. ಗದಗ ಜಿಲ್ಲೆಗೆ ಮಾನ್ಯ ಹೆಚ್.ಕೆ.ಪಾಟೀಲ್‌ರವರು ಬಂದಿದ್ದರು. ಆದರೆ ಪಾಪ ಅವರಿಗೆ ಹಣ ಮಂಜೂರಾಗಿರುವ ಬಗ್ಗೆ ಗೊತ್ತಿರಲಿಲ್ಲ. ನಾನು ಹೇಳಿದ ಮೇಲೆ ಗೊತ್ತಾಗಿತ್ತು. ಹಾಗಾಗಿ ಉತ್ತರ ಕರ್ನಾಟಕ ಭಾಗದಲ್ಲಿ ಕೈಗಾರಿಕೆಗಳು ಬೆಳೆಯಬೇಕೆಂದು ಪ್ರಯತ್ನವನ್ನು ಮಾಡುತ್ತಿದ್ದೇವೆ. ಹಾಗೆಯೇ ಮೈಸೂರು, ಚಾಮರಾಜನಗರ, ಮಂಡ್ಯ ನಗರಗಳಲ್ಲಿಯೂ ಕೈಗಾರಿಕೆಯನ್ನು ಅಭಿವೃದ್ಧಿಪಡಿಸಬೇಕೆಂಬ ಪ್ರಯತ್ನವನ್ನು ಮಾಡುತ್ತಿದ್ದೇವೆ. ಆದರೆ, ಸಾಕಷ್ಟು ಹಣವನ್ನು ಮೂಲಭೂತಸೌಕರ್ಯ ಅಭಿವೃದ್ಧಿಗೆ ಸರ್ಕಾರ ಹಣವನ್ನು ಭರಿಸಿದ್ದೆ. ಇನ್ನು ಹೆಚ್ಚಿನ ಕೈಗಾರಿಕೆಗಳು ನಮ್ಮ

ರಾಜ್ಯದಲ್ಲಿ ಬರಬೇಕೆನ್ನುವುದು ಮಾನ್ಯ ಸದಸ್ಯರ ಸಲಹೆಯೇ ಏನಿದೆ ಅದನ್ನು ಗಮನದಲ್ಲಿಟ್ಟುಕೊಂಡು ಅಭಿವೃದ್ಧಿ ಪಡಿಸುವುದಕ್ಕೆ ಪ್ರಯತ್ನವನ್ನು ಮಾಡುತ್ತೇನೆ.

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ನಮಗೆ ಬಂದಿರತಕ್ಕಂಥ ಮಾಹಿತಿ ತಪ್ಪಿರಬಹುದು. ನಮಗೆ ದಯಮಾಡಿ ಮಾನ್ಯ ಸಚಿವರು ಅದರ particulars ಕೊಡಲಿ. ಏಕೆಂದರೆ ಅವರು ಹೇಳಿದ ಹಾಗೆ ಕೆಲವು ಭೂಸಂತ್ರಸ್ಥರಿಗೆ ಉದ್ಯೋಗವನ್ನು ಕೊಟ್ಟಿರಬಹುದು, ಕೆಲವರಿಗೆ ಕೊಟ್ಟಿರುವುದಿಲ್ಲ. ಕಸ ಗುಡಿಸುವ ಕೆಲಸ, Clerks ಈ ರೀತಿಯ ಉದ್ಯೋಗಗಳನ್ನು ಕೊಟ್ಟಿದ್ದಾರೆ. ಉನ್ನತ ಹುದ್ದೆಗಳನ್ನು ಕೊಟ್ಟಿಲ್ಲ.

ಶ್ರೀ ಆರ್.ವಿ.ದೇಶಪಾಂಡೆ(ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಕರ್ಯ ಅಭಿವೃದ್ಧಿ):– ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಇವತ್ತಿಗೂ ಬೆಲೆ ಇದೆ. ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರೆ, 1995, 1996 ಮತ್ತು 1997ನೇ ಸಾಲಿನಲ್ಲಿ ನಾನು ಸಚಿವನಾಗಿದ್ದಂತಹ ಸಂದರ್ಭದಲ್ಲಿ, Electronic City ಯಲ್ಲಿ ಒಂದು ಎಕರೆಗೆ 12 ಲಕ್ಷ ರೂಪಾಯಿಗಳಿಂದ 15 ಲಕ್ಷ ರೂಪಾಯಿಗಳಂತೆ 20 ವರ್ಷಗಳ ಹಿಂದೆಯೇ ಹಣವನ್ನು ಕೊಟ್ಟಿದ್ದೇವೆ. ಈಗ ಅಲ್ಲಿ ಎರಡು ಕೋಟಿ ರೂಪಾಯಿಯಾದರೆ ನಾನು ಏನು ಮಾಡುವುದಕ್ಕಾಗುತ್ತದೆ?

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:– ಮಾನ್ಯ ಸಭಾಪತಿಯವರೇ, ನಾನು ಸಚಿವರ ಗಮನಕ್ಕೆ ತಂದಿದ್ದು ಅಷ್ಟೇ.

ಶ್ರೀ ಆರ್.ವಿ.ದೇಶಪಾಂಡೆ:– ಮಾನ್ಯ ಸಭಾಪತಿಯವರೇ, 1995, 1996 ಮತ್ತು 1997, 1999ನೇ ಸಾಲಿನಲ್ಲಿ 12 ಲಕ್ಷ, 16 ಲಕ್ಷ, 20 ಲಕ್ಷ ರೂಪಾಯಿಗೆ ಒಂದು ಎಕರೆ ಭೂಮಿಯನ್ನು ವೈಟ್‌ಫಿಲ್ಡ್‌ನಲ್ಲಿ ಕೊಟ್ಟಿದ್ದೇನೆ. ಮಾಜಿ ಪ್ರಧಾನಿಯಾದಂತಹ ದೇವೇಗೌಡರು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ 500 ಎಕರೆ ಜಾಗದಲ್ಲಿ "Export Promotion Park" ಮಾಡಿದ್ದೆವು. ನಾನು ಮತ್ತು ದೇವೇಗೌಡರು ಇಬ್ಬರೂ ಹೋಗಿ ಅಲ್ಲಿ ಅಡಿಗಲ್ಲು ಹಾಕಿದ್ದೇವೆ. ಅಲ್ಲಿ ಒಂದು ಎಕರೆ ಜಾಗಕ್ಕೆ 20 ಲಕ್ಷ, 24 ಲಕ್ಷ ಭೂಮಿಯನ್ನು ಕೊಟ್ಟಿದ್ದೇವೆ. ನಾವೇನು Karnataka Industrial Area Development Board (KIADB) ಗೆ ನಷ್ಟವನ್ನುಂಟು ಮಾಡಿ ಕೊಡಲಿಲ್ಲ. ಲಾಭವನ್ನು ಮಾಡಿಕೊಂಡು ಕೊಟ್ಟಿದ್ದಾರೆ. ಆದರೆ ಇವತ್ತಿನ ದಿವಸ ಅದು 10 ಕೋಟಿ, 20 ಕೋಟಿ ರೂಪಾಯಿಗೆ ಬೆಲೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಾಳುತ್ತದೆ. ಹಾಗಾಗಿ ಈಗ ನಾವು restriction ಮಾಡಿದ್ದೇವೆ. ಹಾಗೆಯೇ, ಇನ್ನು ಮುಂದೆ ನಾವು ಭೂಮಿಯನ್ನು lease ಮೇಲೆ ಕೊಡುತ್ತಿದ್ದೇವೆ. Sale Deed ಮಾಡಿ ಕೊಡುತ್ತಿಲ್ಲ. ಕೇವಲ ಸಣ್ಣ ಕೈಗಾರಿಕೆಗಳಿಗೆ ಎರಡು ಎಕರೆವರೆಗೆ ನಾವು Sale Deed ಮಾಡುತ್ತಿದ್ದೇವೆ. ಉದಾಹರಣೆಗೆ ಹೇಳುವುದಾದರೆ, ಮೈಸೂರಿನಲ್ಲಿ Infosys ನವರು ವಿಶ್ವದಲ್ಲಿಯೇ ದೊಡ್ಡ ಎರಡು ತರಬೇತಿ ಕೇಂದ್ರಗಳಿವೆ. ಇವತ್ತು 10,000 ಕೊಠಡಿಗಳಿವೆ. One portion was inaugurated by Smt. Sonia Gandhi, and another portion was inaugurated by Dr. Manmohan Singh. If the Legislators want to visit that place, I will make arrangements. ಅಲ್ಲಿ ಕೇವಲ ಭೂಮಿಯನ್ನು ಮಾತ್ರ ಕೊಟ್ಟಿದ್ದೇವೆ. ಮೈಸೂರಿನಲ್ಲಿ Industry ಯನ್ನು ಪ್ರಾರಂಭಿಸಲು ಯಾರೂ ತಯಾರಿರಲಿಲ್ಲ. 1995-1996ನೇ ಸಾಲಿನಲ್ಲಿ ಒಂದು ಎಕರೆಗೆ ಒಂದೂವರೆ ಅಥವಾ ಎರಡು ಲಕ್ಷ ರೂಪಾಯಿಗಳ ಬೆಲೆ ಭೂಮಿಯದ್ದಾಗಿತ್ತು. ಆದರೆ, ಈಗ ಆ ಭೂಮಿಯ ಬೆಲೆ ಒಂದು ಕೋಟಿ ರೂಪಾಯಿಗಳಾಗಿರಬಹುದು. ಅದರ ಬಗ್ಗೆ ನಮ್ಮ ಸ್ನೇಹಿತರಿಗೆ ಗೊತ್ತಿರಬಹುದು. What can we do? The situation is like that.

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:- ಮಾನ್ಯ ಸಭಾಪತಿಯವರೇ, ನಾನು ಹೇಳುವುದೇನೆಂದರೆ, ನಮಗೆ ಬಂದಿರತಕ್ಕಂಥ ಮಾಹಿತಿ ಬಗ್ಗೆ ಹೇಳುತ್ತಿದ್ದೇವೆ. ಸರ್ಕಾರದ ಮಾಹಿತಿ ಏನಿದೆ ಅದನ್ನು ಹೇಳಲಿ. ನಮ್ಮದೇ ತಪ್ಪು ಇದ್ದರು ಇರಬಹುದಲ್ಲವೇ?

ಶ್ರೀ ಆರ್.ವಿ.ದೇಶಪಾಂಡೆ:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿರತಕ್ಕಂಥದು ತಪ್ಪೇನು ಇಲ್ಲ.

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:- ಮಾನ್ಯ ಸಭಾಪತಿಯವರೇ, ತಪ್ಪು ಇದ್ದರು ಇರಬಹುದೆಂದು ಹೇಳಿದೆ ಅಷ್ಟೇ. ನಮಗೆ ಮಾಹಿತಿ ಬೇಕಾಗಿತ್ತು. ಆ ಹಿನ್ನೆಲೆಯಲ್ಲಿ ಕೇಳಿದ್ದೇವೆ. ಅದಕ್ಕೆ ಮಾನ್ಯ ಸಚಿವರು ಅದನ್ನು ಮಾಡಿರುವುದರಿಂದ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಆದರೆ, ಮಾಡಿರತಕ್ಕಂಥದ್ದನ್ನು ಒಪ್ಪಿಕೊಳ್ಳುತ್ತೇನೆ. ಆದರೆ, ಇದು ಜನರಿಗೆ ಇರತಕ್ಕಂಥ ಭಾವನೆಯಾಗಿದೆ. ಜನರು ನಮ್ಮ ಮುಂದೆ ಏನು ಹೇಳುತ್ತಾರೆಯೋ ಅದನ್ನು ಸದನದ ಮುಖಾಂತರ ಹೇಳುತ್ತಿದ್ದೇನೆ.

ಬಗರ್ ಹುಕುಂ ಸಾಗುವಳಿಯಲ್ಲಿ ರೈತರಿಗೆ ಹಕ್ಕು ಪತ್ರ ಕೊಡುವುದು ಇವತ್ತಿಗೂ ಬಹಳಷ್ಟು ಕ್ಲಿಷ್ಟವಾದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. 75 ವರ್ಷದಿಂದ 3 ತಲೆಮಾರಿನ ಭೂಮಿ ಸಾಗುವಳಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತಿದ್ದಾರೆ ಎನ್ನುವ ಮಾಹಿತಿಯ ದಾಖಲೆ ಲಗತ್ತಿಸಿದೆ. ಆದರೆ ದಾಖಲೆಯನ್ನು ಲಗತ್ತಿಸಿರುವುದಿಲ್ಲವೆಂದು ತಿಳಿದುಕೊಂಡು ಆ ದಾಖಲೆಗಳನ್ನು ಅಧಿಕಾರಿಗಳು ತಿರಸ್ಕರಿಸಿ ಕಾನೂನು ತಿದ್ದುಪಡಿ 75 ವರ್ಷದಿಂದ ಆ ಪ್ರದೇಶದ ನಿವಾಸಿಗಳೆಂದು ದಾಖಲೆಯನ್ನು ನೀಡಬೇಕೆಂದು ಕೇಳುತ್ತಾರೆ. 75 ವರ್ಷದ ಹಿಂದಿನ ದಾಖಲೆಯನ್ನು ಕೊಡುವುದಕ್ಕೆ ಸಾಧ್ಯವೇ? ಎಲ್ಲಿಂದ ಕೊಡುತ್ತಾರೆ? ಇಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಅದಕ್ಕಾಗಿ ಇದರ ಬಗ್ಗೆಯು ಸರ್ಕಾರ ಗಮನಹರಿಸಬೇಕು. ಇದರಿಂದ ಬಡವರಿಗೆ 1, 2 ಜಾಸ್ತಿ ಎಂದರೆ 3 ಎಕರೆ ಭೂಮಿಯನ್ನು ಇಟ್ಟುಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಸರ್ಕಾರ ಇದರ ಬಗ್ಗೆ ಕಾಳಜಿಯನ್ನು ವಹಿಸಬೇಕೆನ್ನುವ ಮಾತನ್ನು ಹೇಳುತ್ತೇನೆ. ಇವತ್ತು ಶ್ರೀ ಡಿ.ಎಂ.ನಂಜುಂಡಪ್ಪ ಸಮಿತಿಯ ವರದಿ ಬಗ್ಗೆ ಬಹಳ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಎಲ್ಲಾ ಸರ್ಕಾರವೂ ಮುಂದೆ ಬರಬೇಕಾಗುತ್ತದೆ. ನಾನು ಬಿಜೆಪಿ, ಜೆಡಿಎಸ್, ಕಾಂಗ್ರೆಸ್ ಸರ್ಕಾರವೇ ಬರಬೇಕೆಂದು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. 2000ನೇ ಇಸವಿಯಲ್ಲಿ ಈ ಸಮಿತಿಯು ರಚನೆಯಾಗಿದೆ. 2000ನೇ ಇಸವಿಯ ನಂತರ 2017ನೇ ಇಸವಿಗೆ ಬಂದು ನಿಂತಿದೆ. 17 ವರ್ಷದಿಂದಲೂ ಎಷ್ಟು ಪ್ರಗತಿಯಾಗಿದೆ ಎಂಬುದನ್ನು ನೋಡಿದರೆ ಇನ್ನು ಹಾಗೆಯೇ ಇದೆ. ಆದರೆ ಇದು ಇಡೀ ರಾಜ್ಯಕ್ಕೆ ಬೇಕಾಗಿದೆ. ಆದರೆ, ಡಿ.ಎಂ.ನಂಜುಂಡಪ್ಪ ವರದಿಯಲ್ಲಿ ಉತ್ತರ ಕರ್ನಾಟದ ಭಾಗವು ಹೆಚ್ಚಾಗಿ ಬರುತ್ತದೆ. ಕೋಲಾರ, ಚಾಮರಾಜನಗರಗಳನ್ನು ಉತ್ತರ ಕರ್ನಾಟಕ್ಕೆ ಹೋಲಿಸಿದ್ದರೆ ಕಡಿಮೆ ಇಲ್ಲ. 2002ನೇ ಇಸವಿಯಲ್ಲಿ ಡಿ.ಎಂ.ನಂಜುಂಡಪ್ಪ ಸಮಿತಿಯು ವರದಿಯನ್ನು ಸಲ್ಲಿಸಿತು. 2007-2008ನೇ ಸಾಲಿನಲ್ಲಿ ಸಮ್ಮಿಶ್ರ ಸರ್ಕಾರ ಅಧಿಕಾರದಲ್ಲಿದಾಗ ಮಾಜಿ ಮುಖ್ಯಮಂತ್ರಿಯಾದ ಹೆಚ್.ಡಿ.ಕುಮಾರಸ್ವಾಮಿಯವರು 1571 ಕೋಟಿ ಆರ್ಥಿಕ ನೆರವನ್ನು ಅಭಿವೃದ್ಧಿಗೆ SDP ಯೋಜನೆಯಡಿಯಲ್ಲಿ ಕೊಡಲಾಯಿತು. ಆ ಸಂದರ್ಭದಲ್ಲಿ ನಾನು, ಮಾನ್ಯ ವಿರೋಧ ಪಕ್ಷದ ನಾಯಕರೆಲ್ಲರೂ ಇದ್ದೆವು. ನಂತರ 2008ನೇ ಸಾಲಿನಲ್ಲಿ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ Shashil G. Namoshi ಯವರನ್ನು ಅನುಷ್ಠಾನ ಸಮಿತಿಯ ಅಧ್ಯಕ್ಷರನಾಗಿ ನೇಮಿಸಿದ್ದರು. 2010ನೇ ಸಾಲಿನಲ್ಲಿ ರಾಜೀನಾಮೆ ಕೊಟ್ಟ ನಂತರ ಅಂದಿನ ಅಧಿಕಾರಿಗಳು ಮೇಲ್ವಿಚಾರಣೆಯ ಬೆಳವಣಿಗೆಯನ್ನು ನೋಡಿಕೊಳ್ಳುತ್ತಿದ್ದಾರೆಂದು ತಿಳಿಸಿದ್ದಾರೆ. ಅಲ್ಲಿಂದ ಇಲ್ಲಿಯವರೆಗೂ ಅದರ ಬಗ್ಗೆ ಯಾರು ಗಮನ ಹರಿಸುತ್ತಿಲ್ಲ. ಕೇವಲ ಅಧಿಕಾರಿಗಳೆ ನೋಡಿಕೊಳ್ಳುತ್ತಿದ್ದಾರೆ. ಈ ರೀತಿಯಾದರೆ ಹೇಗೆ ಪ್ರಗತಿಯಾಗುತ್ತದೆ. ಜನಪ್ರತಿನಿಧಿಗಳಿದ್ದರೆ ಅದರ ಬಗ್ಗೆ ಏನಾದರೂ ಮಾಡಬಹುದು. ಆದರೆ ಅದು ಇಲ್ಲ. ಕಳೆದ 8 ವರ್ಷಗಳಿಂದ ಡಿ.ಎಂ.ನಂಜುಂಡಪ್ಪ ಸಮಿತಿಯ ವರದಿಯ ಅನುಷ್ಠಾನದ ಬೆಳವಣಿಗೆಯ ಕುರಿತು Centre for Multi-Disciplinary Development Research (CMDR), Dharwad ಇವರಿಗೆ ವಹಿಸಲಾಗಿದೆ. 8 ವರ್ಷಗಳಾದರೂ ಏನು ಪ್ರಗತಿ ಆಗಿಲ್ಲ. ಹೀಗಾಗಿ ವರದಿ ಬಗ್ಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏನಾಗಿದೆ ಎಂಬುದನ್ನು ಸರ್ಕಾರವು ಸ್ಪಷ್ಟಪಡಿಸಬೇಕೆಂದು ಒತ್ತಾಯ ಮಾಡುತ್ತೇನೆ. ಡಿ.ಎಂ.ನಂಜುಂಡಪ್ಪ ವರದಿಯ ಆಧಾರದ ಮೇಲೆ ಬಹಳಷ್ಟು ಜನರಿಗೆ ಹಣವನ್ನು ಬಿಡುಗಡೆ ಮಾಡಿದ್ದಾರೆ. ಕೆಲವರಿಗೆ ಮಾಡಿರುವುದಿಲ್ಲ. ಹೀಗಾಗಿ ಇಲ್ಲಿಯವರೆಗೂ ಆ ವರದಿಯಲ್ಲಿ ಆಗಿರತಕ್ಕಂಥ ಪ್ರಗತಿ ಏನೆಂಬುದನ್ನು ಸಂಪೂರ್ಣವಾದಂತಹ ಮಾಹಿತಿಯನ್ನು ಸರ್ಕಾರದವರು ಕೊಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಾಗೆಯೇ ಉತ್ತರ ಕರ್ನಾಟಕ ಭಾಗದಲ್ಲಿ ಯಾವ ರೀತಿ discrimination ಆಗಿದೆ ಎಂಬುದನ್ನು ನಾನು ಹೇಳುತ್ತೇನೆ. ವಾಯುವ್ಯ ಮತ್ತು ಈಶಾನ್ಯ ಕರ್ನಾಟಕ ಸಾರಿಗೆ ಸಂಸ್ಥೆಯವರಿಗೆ 168 ಕೋಟಿ ರೂಪಾಯಿಗಳು ನಷ್ಟವಾಗಿದೆ. ಗುಲ್ಬರ್ಗಾ ಜಿಲ್ಲೆಯಲ್ಲಿ 140 ಅಥವಾ 142 ಕೋಟಿ ರೂಪಾಯಿಗಳು ನಷ್ಟವಾಗಿದೆ. ಇತ್ತೀಚಿನ ದಿನಗಳಲ್ಲಿ ಏನಾಗುತ್ತಿದೆಯೆಂದರೆ, ಬೆಂಗಳೂರು ನಗರಕ್ಕಾದರೆ ಹೊಸ ಬಸ್ಸುಗಳನ್ನು ತೆಗೆದುಕೊಳ್ಳುತ್ತಾರೆ. ಆದರೆ ಹಳೆಯ ಬಸ್ಸುಗಳನ್ನು ಹುಬ್ಬಳ್ಳಿ-ಧಾರವಾಡ, ಗುಲ್ಬರ್ಗಾ ಮುಂತಾದ ಕಡೆಗಳಿಗೆ ಕಳುಹಿಸುತ್ತಾರೆ. ಅಂತಹ ಬಸ್ಸುಗಳೆಲ್ಲವೂ ರಸ್ತೆಯಲ್ಲಿಯೇ ಕೆಟ್ಟು ನಿಂತಿರುತ್ತದೆ. ಎಲ್ಲಿಯೂ ಹೋಗುವುದಕ್ಕೆ ಆಗುವುದಿಲ್ಲ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಮತ್ತು North-Western Karnataka Road Transport Corporation (NWKRTC), ಈಶಾನ್ಯ ಕರ್ನಾಟಕ ಸಾರಿಗೆ ಸಂಸ್ಥೆಯವರಿಗೆ, ಇವರೆಲ್ಲರಿಗೂ ಇರತಕ್ಕಂಥ ಸಮಸ್ಯೆಯ ಬಗ್ಗೆ ಹೇಳಿದ್ದೇನೆ. ನಾನು ಸಾರಿಗೆ ಸಚಿವರಿಗೆ ಪತ್ರ ಬರೆದಿದ್ದೇನೆ. ಉದಾಹರಣೆಗೆ ಹೇಳುವುದಾದರೆ ಹುಬ್ಬಳ್ಳಿ-ಧಾರವಾಡದಿಂದ ಬೆಂಗಳೂರಿಗೆ ಒಂದು ತಡೆ ರಹಿತ ಬಸ್ ವ್ಯವಸ್ಥೆಯನ್ನು ಕಲ್ಪಿಸಲಾಗಿತ್ತು. ಆ ಬಸ್ಸು ಬೆಳಗ್ಗೆ 7.00 ಗಂಟೆಗೆ ಹೊರಡುತ್ತದೆ. ಅದರಲ್ಲಿ 5 ಮಂದಿ ಮಾತ್ರ ಪ್ರಯಾಣ ಮಾಡುತ್ತಾರೆ. ಆ 5 ಮಂದಿಯನ್ನು ಕುರಿಸಿಕೊಂಡು ಹುಬ್ಬಳ್ಳಿಯಿಂದ ಹೊರಟರೆ ಬೆಂಗಳೂರಿಗೆ ಬರುವವರೆಗೂ ಎಲ್ಲಿಯೂ ನಿಲ್ಲಿಸುವುದಿಲ್ಲ. 2,400 ರೂಪಾಯಿಯನ್ನು ಟೋಲ್ ಶುಲ್ಕವನ್ನಾಗಿ ಕಟ್ಟುತ್ತಾರೆ. ಅದರಿಂದ ಬರುವ ಉತ್ಪನ್ನ 4800 ಅಥವಾ 5800 ರೂಪಾಯಿಗಳು ಮಾತ್ರ ಬರುತ್ತದೆ. ಚಾಲಕ ಮತ್ತು ನಿರ್ವಾಹಕರ ಪಗಾರವೆಷ್ಟುವೆಂಬುದು, wear and tear ಎಷ್ಟೆಂಬುದನ್ನು ಎಷ್ಟು ಸಲ ಹೇಳಿದರೂ ನಿಲ್ಲಲಿಲ್ಲ ಹಾಗೂ ಎಲ್ಲೆಂದರಲ್ಲಿ ವಿಪರೀತವಾಗಿ ಬಸ್ಸನ್ನು ಓಡಿಸುತ್ತಾರೆ. ಹಾಗಾಗಿ ಬಸ್ಸುಗಳ ಸುಧಾರಣೆಯಾಗಿಲ್ಲ. ಇವತ್ತಿನ ದಿನ ಬೆಂಗಳೂರಿನಲ್ಲಿ ಎಂಥೆಂತಹ ಬಸ್ಸುಗಳಿವೆ. ಆದರೆ ಇಲ್ಲಿಲ್ಲ. ಹೀಗಾಗಿ KSRTC ಯವರಾಗಲೀ, NWKRTC ಯವರಾಗಲೀ, ಇವೆಲ್ಲವೂ ನಮ್ಮ ಸಂಸ್ಥೆಗಳೆ ಎನ್ನುವ ಭಾವನೆ ಇಲ್ಲವಾಗಿದೆ. KSRTC ಯವರು ಬಸ್ಸು ನಿಲ್ಲಿಸಬಾರದೆಂದು ದಾವಣಗೆರೆಯಿಂದ ತಕಾರಾರು ಎತ್ತುತ್ತಾರೆ. ಒಂದು ವೇಳೆ ಬಸ್ಸು ನಿಂತಿದ್ದರೆ ಪೊಲೀಸ್ ಠಾಣೆಗೆ ದೂರು ಕೊಟ್ಟಂತಹ ಉದಾಹರಣೆಗಳು ಸಹ ಇದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1124)/21.11.2017/4.10/ಎಸ್‌ಕೆ–ಕೆಎಸ್

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ) ಮುಂದು

ಬೆಂಗಳೂರಿನಿಂದ ಹುಬ್ಬಳ್ಳಿ ಅಥವಾ ಬೆಳಗಾವಿಗೆ ಹೋಗುವ ಬಸ್ಸಿಗೆ ಐದು ಜನರನ್ನು ಕೂರಿಸಿಕೊಂಡು ಹೋಗುವುದರಲ್ಲಿ ಅರ್ಥವೇನಿದೆ. ಇದನ್ನು ಮಾನ್ಯ ಸಚಿವರಿಗೆ ಸಾಕಷ್ಟು ಬಾರಿ ಹೇಳಿದ್ದರೂ ಸಹ ಇದರಲ್ಲಿ ಸುಧಾರಣೆಯಾಗಿಲ್ಲ. ಹೀಗಾಗಿ ಬಸ್ಸ್‌ನ್ನು ಮುಚ್ಚುವಂತಹ ಸ್ಥಿತಿಗೆ ಬಂದಿದೆ. ಮಕ್ಕಳ ಬಸ್ ಪಾಸ್‌ಗೆ ಸಂಬಂಧಿಸಿದ ಸುಮಾರು 160 ಕೋಟಿ ರೂಪಾಯಿಗಳನ್ನು ಇವತ್ತಿನವರೆಗೂ ಕೊಟ್ಟಿಲ್ಲ. ಗುಲ್ಬರ್ಗಾ ಮತ್ತು ಇಲ್ಲಿ ಸಹ ಕೊಟ್ಟಿಲ್ಲ. ಆದರೆ ಮೈಸೂರು, ಬೆಂಗಳೂರು ಇಂತಹ ಕಡೆಗಳಲ್ಲಿ ಕೊಡುತ್ತಾರೆ. ಇದು ಇವತ್ತು discrimination ಆಗಿ ಸಾರಿಗೆ ವಿಭಾಗವನ್ನು ಸಂಪೂರ್ಣವಾಗಿ ಮುಚ್ಚುವಂತೆ ಆಗುತ್ತದೆ ಮತ್ತು ಅಲ್ಲಿ ಯಾವುದೇ ಸುಧಾರಣೆ ಆಗಲು ಸಾಧ್ಯವಿಲ್ಲದಂತಹ ಪರಿಸ್ಥಿತಿಯಾಗುತ್ತದೆ. ಇದಲ್ಲದೇ ಬಸ್ಸುಗಳು ಎಲ್ಲಿ ಬೇಕೋ ಅಲ್ಲಿ ನಿಲ್ಲುತ್ತವೆ. ಖಾಸಗಿ ಬಸ್ಸುಗಳನ್ನು ಸರಿಯಾದ ರೀತಿಯ ವ್ಯವಸ್ಥೆಯಲ್ಲಿಟ್ಟಿರುತ್ತಾರೆ. ಆದರೆ ಇವರು ಏನಿಲ್ಲ, ಬಸ್‌ನಲ್ಲಿ ಒಂದು ಟ್ಯೂಬ್ ಇರುತ್ತದೆ. ಆದರೆ tyre ಇರುವುದಿಲ್ಲ. ಒಂದು ಬಸ್‌ನಲ್ಲಿ door ಇರುತ್ತದೆ, ಆದರೆ ಇನ್ನೊಂದು ಬಸ್‌ನಲ್ಲಿ door ಇರುವುದಿಲ್ಲ. ಇಂತಹ ಎಲ್ಲಾ ಸಮಸ್ಯೆಗಳಿವೆ. ಇದಕ್ಕೆ ನಾನು ಏನು ಹೇಳುತ್ತೇನೆಂದರೆ, ಸರ್ಕಾರ ಇದರ ಬಗ್ಗೆ ಚಿಂತನೆ ಮಾಡಬೇಕು. KSRTC (Karnataka State Road Transport Corporation) ಮತ್ತು NWKRTC (North Western Karnataka Road Transport Corporation) ಸಂಸ್ಥೆಯವರ ಮಧ್ಯೆ ಆದಾಯ ಕಡಿಮೆಯಾಗುತ್ತದೆಂದು ಜಗಳವಾಡುತ್ತಾರೆ. ದಾವಣಗೆರೆಯ ಕಡೆಗೆ ಹೋಗುವ ಬಸ್ಸನ್ನು ನಿಲ್ಲಿಸುವುದಿಲ್ಲವೆಂದರೆ, ಏನು ಇದರ ಅರ್ಥ. ಮಾನ್ಯ ಸಾರಿಗೆ ಸಚಿವರೇ ಇದನ್ನು ತೆಗೆದುಕೊಂಡು ಚರ್ಚೆ ಮಾಡಬೇಕು. ನಾನು ಇವರಿಗೆ ಪತ್ರವನ್ನು ಬರೆದಿದ್ದೇನೆ. ಮೊನ್ನೆ ನಾನು ಇದರ ಬಗ್ಗೆ ಹೇಳಿದ್ದೇನೆ. ಇದರ ಬಗ್ಗೆ ಏನಾದರೊಂದು ತೀರ್ಮಾನವಾಗಿ ಈಶಾನ್ಯ ಕರ್ನಾಟಕ ಮತ್ತು NWKRTC ದಷ್ಟೇ, ಆದರೆ ಇನ್ನುಳಿದವು ಹೇಗೆ ಸುಧಾರಣೆಯಾಗುತ್ತದೆ. ಮೈಸೂರು ಬೆಂಗಳೂರಿನಲ್ಲಿ ಹೇಗಿದೆ? ಇಲ್ಲಿ ಮತ್ತೆ ಇಷ್ಟೆಲ್ಲಾ ಬಸ್ಸುಗಳೆಲ್ಲಾ ಓಡಾಡಿದರೂ ಸಹಿತ, ಇವರು ನಷ್ಟದಲ್ಲಿದೆ ಇದ್ದಂತಹ ಪ್ರಮಾಣ ಕಡಿಮೆ ಎಂದು ಹೇಳುತ್ತಾರೆ. ನನಗಂತೂ ಇದು ಅರ್ಥವಾಗಲಿಲ್ಲ. ಇಲ್ಲಿ ಬಹಳಷ್ಟು ಅವ್ಯವಹಾರಗಳಾಗಿರುವುದರಿಂದ ಸದನ ಸಮಿತಿ ನೇಮಿಸುವಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಇದರ ಬಗ್ಗೆ ಸಾಕಷ್ಟು ಪ್ರಯತ್ನ ಮಾಡಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ.

ಮಾನ್ಯ ಸಭಾಪತಿಯವರೆ, ಮಹತ್ವವಾದ ವಿಷಯದ ಬಗ್ಗೆ ನಾವು ಇವತ್ತು ಬೆಳಗಾವಿಯಲ್ಲಿ ಸಭೆಯನ್ನು ಕರೆದಿದ್ದೇವೆ. ಬೆಳಗಾವಿ ಸಭೆಯನ್ನು ಕರೆದಾಗ, ಬೆಳಗಾವಿ ಕರ್ನಾಟಕ ಮತ್ತು ಮಹಾರಾಷ್ಟ್ರದ ಜಗಳದ ಬಗ್ಗೆ ಇನ್ನೂ ಮುಗಿದಿಲ್ಲ. ಮಹಾಜನ್ ವರದಿ ಕೇಂದ್ರ ಸರ್ಕಾರಕ್ಕೆ ಸಲ್ಲಿಕೆಯಾಗಿ ಸುಮಾರು ೫೦ ವರ್ಷಗಳು ಕಳೆದವು. ಮೇಹರಚಂದ ಮಹಾಜನ್ ವರದಿ ಅಂತಿಮ ವರದಿಯನ್ನು ತಿಳಿದುಕೊಂಡು, ಮಾನ್ಯ ನಿಜಲಿಂಗಪ್ಪನವರು ಆವತ್ತಿನ ದಿನ ಮುಖ್ಯಮಂತ್ರಿಯಾಗಿದ್ದರು. ಕರ್ನಾಟಕ ಮತ್ತು ಮಹರಾಷ್ಟ್ರದ ನಡುವೆ ಮೇಹರಚಂದ ಮಹಾಜನ್ ಎಂದು ತಿಳಿದುಕೊಂಡು ಹೇಳಿ, ಅವರನ್ನು ನೇಮಕಾತಿ ಮಾಡಿ, ಅವರು ಆ ಒಂದು ವರದಿಯನ್ನು ಕೊಟ್ಟರು. ಆ ವರದಿಯನ್ನು ಮನಸ್ಸಿಲ್ಲದ ಮನಸ್ಸಿನಿಂದ ಒಪ್ಪಿದರು. ಏಕೆಂದರೆ ಕರ್ನಾಟಕದ ನಮ್ಮ ಅಕ್ಕಲಕೋಟೆ ಇರಬಹುದು. ಬೇರೆ ಬೇರೆ ಎಲ್ಲಾ ಹೋಗಿದೆ. ಆಗ ಮಹಾರಾಷ್ಟ್ರದವರು ಒಪ್ಪಿಕೊಳ್ಳಲಿಲ್ಲ, ನಾವು ಒಪ್ಪಿಕೊಂಡೆವು. ಮಾನ್ಯ ನಿಜಲಿಂಗಪ್ಪನವರು ನಮ್ಮ ರಾಜ್ಯದ ಮುಖ್ಯಮಂತ್ರಿಯಿದ್ದರು. ಅಲ್ಲಿ ವಿ.ಪಿ. ನಾಯಕ್‌ರವರು ಮುಖ್ಯಮಂತ್ರಿಯಾಗಿದ್ದರು. ಆಗ ಅದನ್ನೆಲ್ಲಾ ಒಪ್ಪಿಕೊಂಡರು. ಅದನ್ನು ಒಪ್ಪಿಕೊಂಡ ನಂತರ ಆ ಮಹಾಜನ್ ವರದಿ ಬಂದು ಸುಮಾರು ೫೦ ವರ್ಷಗಳು ಕಳೆದು, ಈಗ ೬೦ ನೇ ವರ್ಷಕ್ಕೆ ಕಾಲಿಟ್ಟಿದ್ದೇವೆ. ಏಕೀಕರಣ ಆಗಿ ಆರವತ್ತು ವರ್ಷವಾದರೆ, ಮೈಸೂರು ರಾಜ್ಯ ಹೋಗಿ ಕರ್ನಾಟಕ ಎಂದು ನಾಮಕರಣವಾಗಿ ಸುಮಾರು 43 ವರ್ಷಗಳಾದವು. ಇವತ್ತಿನವರೆಗೂ ಸಮಸ್ಯೆಗಳು ಬಗೆಹರಿದಿಲ್ಲ. ಇಲ್ಲಿಯೂ ಇವರುಗಳಿಗೆ ಜಗಳವಾಯಿತು, ಚರ್ಚೆಯಾಯಿತು, ಕೊನೆಗೆ ಕೋರ್ಟ್‌ಗೆ ಹಾಕಿದ್ದಾರೆ. ಮಹಾಜನ್ ವರದಿ ಕೇಂದ್ರ ಸರ್ಕಾರಕ್ಕೆ ಸಲ್ಲಿಕೆಯಾಗಿ ಸುಮಾರು ೫೦ ವರ್ಷಗಳು ಕಳೆದವು. ಇದರ ಬಗ್ಗೆ ನಮ್ಮ ಲೋಕಸಭೆಯ ಸದಸ್ಯರು ಸದರಿ ವಿಷಯವನ್ನು ಲೋಕಸಭೆಯಲ್ಲಿ ಏಕೆ ಚರ್ಚಿಸಿಲ್ಲ. ಒಂದು ದಿವಸ ಇದರ ಬಗ್ಗೆ ಚರ್ಚೆ ಮಾಡಬೇಕೆಂದರೆ, ದಿನನಿತ್ಯ ಇವತ್ತು ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ತೆಗೆದುಕೊಳ್ಳಬೇಕೆಂದು ಹೇಳಿ, ಅವರು ಅಲ್ಲಿ ಗುದ್ದಾಟವಾಡುತ್ತಿದ್ದಾರೆ. ನಮ್ಮವರು ಯಾವ ರೀತಿಯಿಂದಲೂ ಇಲ್ಲ. ನಾವೆಲ್ಲರೂ ಬೆಳಗಾವಿ ಇದ್ದರೆ ಏನು? ಇಲ್ಲದಿದ್ದರೆ ಏನು ಎನ್ನುವ ಭಾವನೆಗೆ ಬಂದುಬಿಟ್ಟಿದ್ದೇವೆ. ಮಹಾರಾಷ್ಟ್ರ ಮತ್ತು ಕರ್ನಾಟಕದ ಜಗಳದಲ್ಲಿ "ಬೆಳಗಾವಿಯು ಕರ್ನಾಟಕದ ಗಂಡು ಮೆಟ್ಟಿದ ಸ್ಥಳ" ಎನ್ನುವ ದೃಷ್ಟಿಯಿಂದ ಇವತ್ತು ಇಲ್ಲಿ ಸುವರ್ಣ ವಿಧಾನಸೌಧವಾಗಿದೆ ಮತ್ತು ಎಲ್ಲವೂ ಕೂಡ ಆಗಿದೆ. ಆದರೆ, ಅದರ ಬಗ್ಗೆ ಇವತ್ತಿನವರೆಗೆ ಏನು ಇಲ್ಲ. ಅವರು ಏನು ಮಾಡುತ್ತಾರೆಂದರೆ, ಬೆಳಗಾವಿಗೆ ಹೋಗಿ ನೋಡಿ ಇವತ್ತಿನವರೆಗೂ ಎಲ್ಲಾ ಕಡೆಗಳಲ್ಲಿ ಮರಾಠಿ ಬೋರ್ಡ್‌ಗಳು ರಾರಾಜಿಸುತ್ತಿದೆ. ಮರಾಠಿಯವರು ಹೊರಗಿನವರರನ್ನೆ ಇವತ್ತು ತೆಗೆದುಕೊಂಡು ಬಂದು ಇಲ್ಲಿ ಇಟ್ಟಿದ್ದಾರೆ. ಕರ್ನಾಟಕದಲ್ಲಿ ಇದನ್ನೆಲ್ಲಾ ನೋಡುತ್ತೇವೆ. ನಮ್ಮ ಶಾಸನ ಸಭೆಯಲ್ಲಿ ಸಹಿತ; ನಮ್ಮ ದುರ್ದೈವವೆಂದರೆ, ಇಲ್ಲಿಯ ಅನ್ನವನ್ನು ಊಟ ಮಾಡುತ್ತಾರೆ. ಇಲ್ಲಿಯೇ ನೀರು ಕುಡಿಯುತ್ತಾರೆ. ಇಲ್ಲಿಯೇ ಎಲ್ಲ ಮಾಡುತ್ತಾರೆ. ಇಲ್ಲಿಯ ಇವರು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇದ್ದುಕೊಂಡು ನವೆಂಬರ್ ಒಂದರಂದು 'ಕರಾಳ ದಿನ' ವನ್ನಾಗಿ ಆಚರಣೆ ಮಾಡುತ್ತಾರೆಂದರೆ, ಇವರಿಗೆ ನಾಚಿಕೆ ಮಾರ್ಯಾದೆ ಬೇಡವೇ. ಮೇಯರ್ ಇದ್ದಂತಹವರು ಕಪ್ಪು ಪಟ್ಟಿ ಕಟ್ಟಿಕೊಂಡು, ಕರಾಳ ದಿನವನ್ನಾಗಿ ಆಚರಿಸಿ, ಕರ್ನಾಟಕ ಸರ್ಕಾರದ ವಿರುದ್ಧ ಘೋಷಣೆ ಮಾಡಿದರು. ಸರ್ಕಾರದವರು ಇವತ್ತಿನವರೆಗೂ ಅವರನ್ನು ಹಾಗೆಯೇ ಬಿಟ್ಟಿದ್ದಾರೆ. ಅವರಿಗೆ ನಾಚಿಕೆಯಾಗಬೇಕು. ಸರ್ಕಾರ ಇವರ ಬಗ್ಗೆ ಏಕೆ ಮೃದು ಧೋರಣೆ ತೋರಿಸುತ್ತಿದೆ? ಇಲ್ಲಿ ಯಾರು ಎಂಎಲ್.ಎ.ಗಳಿದ್ದಾರೆ ಅವರು ಕರ್ನಾಟಕದ ಅನ್ನವನ್ನು ಊಟ ಮಾಡಿ, ಇಲ್ಲಿ ಬಂದು ಬೇಕಾದಂತಹ ಮಾತುಗಳನ್ನಾಡುತ್ತಾರೆ. ನವೆಂಬರ್ ಒಂದರಂದು ರಾಜ್ಯೋತ್ಸವ ಆಚರಿಸುವಂತಹ ಕಾರ್ಯಕ್ರಮದಲ್ಲಿ ಕಪ್ಪು ಪಟ್ಟಿ ಕಟ್ಟಿಕೊಂಡು, 'ಕರ್ನಾಟಕಕ್ಕೆ ಧಿಕ್ಕಾರ' ಎಂದು ಘೋಷಣೆ ಮಾಡಿದರೆ, ಇವತ್ತು ಅವರಿಗೆ ಮಹಾ ಮೇಳ ಮಾಡುವುದಕ್ಕೆ ಅನುಮತಿ ಕೊಡುತ್ತಾರೆ. ಅವರಿಗೆ ಹೇಳುವರು-ಕೇಳವರಿಲ್ಲ ಎಂಬಂತೆ ಮಾಡಿದ್ದೀರಿ. ಸೊಲ್ಲಾಪೂರದಲ್ಲಿ ಶೇ. 100 ಕ್ಕೆ 70 ರಷ್ಟು ಕನ್ನಡ ಮಾತನಾಡುತ್ತಾರೆ. ಡಾ॥ ಹೆಗಡೆ ಎಂಬ ಬೋರ್ಡ್‌ನ್ನು ಬಿಟ್ಟರೆ, ನಾವೂ ಒಂದು ಬೋರ್ಡ್ ನೋಡಲಿಲ್ಲ. ಇಲ್ಲಿ ಯಾರೂ ಹೇಳೋರಿಲ್ಲ ಮತ್ತು ಕೇಳೋರಿಲ್ಲ. ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಮನೋಜ್ ಪಾಟೀಲ್ ಒಂದು article ಬರೆದಿದ್ದರು. ಕರ್ನಾಟಕ ಏಕೀಕರಣವಾಗಿ ಸುಮಾರು 60 ವರ್ಷಗಳಾದರೂ, ಈ ಪರಂಪರೆ ಅನೂಚಾನವಾಗಿ ಮುಂದುವರೆಯುತ್ತಾ ಬಂದಿದೆ. ಇಲ್ಲಿ ಜಾತಿ ಭೇದವಿಲ್ಲ. ಧರ್ಮ ಭೇದ ಇಲ್ಲ, ಭಾಷೆಯ ಭೇದವಿಲ್ಲ. ನಮ್ಮ ಮತದಾರ ಎಂಬ ಒಂದೇ ಒಂದು ಜಾತಿ ಇದ್ದರೆ ಸಾಕು. ಇದು ಇಲ್ಲಿರುವಂತಹ ಪರಿಸ್ಥಿತಿ. ಇದಕ್ಕೆ ನಾವೇ ಕಾರಣ. ಇಲ್ಲಿ ಮರಾಠಿ ಜನ ಕನ್ನಡ ಭಾಷೆಯಲ್ಲಿ ಮಾತನಾಡಿದರೆ, ನಮ್ಮ ಕನ್ನಡ ಜನ ಮರಾಠಿ ಭಾಷೆಯಲ್ಲಿ ಮಾತನಾಡುತ್ತಾರೆ. ನಾವು ರೈಲಿನಲ್ಲಿ ಬರುವಾಗ, ಶಾಸಕರವರು ಮರಾಠಿಯವರಾಗಿದ್ದು, ಅವರು ಕನ್ನಡದಲ್ಲಿ ಮಾತನಾಡುತ್ತಾರೆ. ಇವರು ಮರಾಠಿಯಲ್ಲಿ ಮಾತನಾಡುತ್ತಾರೆ. ನಮಗೆ ಸ್ವಾಭಿಮಾನದ ಕೊರತೆ ಇದೆ. ಇದಕ್ಕೆ ಸ್ವಾಭಿಮಾನ ಬೇಕಲ್ಲವೇ? ಇದೊ ಒಂದೇ ಅಲ್ಲ. ಏನಾದರೂ ಅನುಕೂಲತೆಗಳು ಸಿಕ್ಕಿದರೆ ಮೊದಲು ಅವರಿಗೆ ಸಿಗುತ್ತಿದೆ. ಬೆಳಗಾವಿಯಲ್ಲಿ ಗಲಾಟೆಯಾಗಿದೆ. ಅದಕ್ಕೆ ಇನ್ನು ಇಲ್ಲಿಯವರೆಗೆ ಆಗಿಲ್ಲ. ಆಮೇಲೆ ವರದಿ ಸುಮಾರು 50 ವರ್ಷದಿಂದ ಲೋಕಸಭೆಯಲ್ಲಿ ಇದೆ. ಅದನ್ನು ಕೋರ್ಟ್‌ಗೆ ಹಾಕಿದ್ದಾರೆ. ಮುಂದೆ ಕೋರ್ಟ್‌ಗೆ ಹೋಗಬೇಕಾದರೆ, ದಯವಿಟ್ಟು ನಮ್ಮ ಸರ್ಕಾರ ಇದರ ಬಗ್ಗೆ ಕಾಳಜಿಯನ್ನು ವಹಿಸಬೇಕು ಎಂದು ನಾನು ಮಾನ್ಯ ಸಭಾನಾಯಕರಿಗೆ ಹೇಳಬಯಸುತ್ತೇನೆ. ಅಕಸ್ಮಾತ್ತಾಗಿ, ಕೆಟ್ಟದಾಗಿ ವಿಚಾರ ಮಾಡಿದರೆ, ಇದಕ್ಕೆನಾದರೂ ಆಗಿ, ಅಲ್ಲಿ ಕೋರ್ಟಿನಲ್ಲಿ ಸರಿಯಾಗಿ ನಮ್ಮ ಅಧಿಕಾರಿಗಳು ಸರಿಯಾದಂತಹ ಮಾಹಿತಿ ಕೊಡುವುದಿಲ್ಲ. ಕಾವೇರಿ ಮತ್ತು ಮಹದಾಯಿ ಪರಿಸ್ಥಿತಿ ಆಗಿದೆಯೆಲ್ಲಾ, ಅದೇ ತರಹ ಇದು ಸಹ ನಾಳೆ, ಆದರೆ ಪರಿಸ್ಥಿತಿ ಏನಾಗಬಹುದೆಂಬುದನ್ನು ವಿಚಾರ ಮಾಡಿ. ಇದು ಬಹಳ ಗಂಭೀರವಾದಂತಹ ಸಮಸ್ಯೆ. ಸರ್ಕಾರ ಇದನ್ನು ಹಗುರವಾಗಿ ತೆಗೆದುಕೊಳ್ಳಬಾರದು.

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರ ಅದಕ್ಕೆ ಸಂಪೂರ್ಣವಾದಂತಹ ಕಾಳಜಿಯನ್ನು ವಹಿಸಬೇಕೆಂದು ನಾನು ಮತ್ತೊಮ್ಮೆ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಮಾನ್ಯ ಸಭಾಪತಿಯವರೆ, ನಮ್ಮ ಕರ್ನಾಟಕ ರಾಜ್ಯಕ್ಕೆ 'ಒಂದು ಕಣ್ಣು' ಇದ್ದ ಹಾಗೆ ಬೆಳಗಾವಿ. ಇಷ್ಟೆಲ್ಲಾ ಇದ್ದರೂ ಸಹಿತ ಇವತ್ತಿನವರೆಗೂ ಮಹಾರಾಷ್ಟ್ರದವರು ಬೆಳಗಾವಿ ನಮ್ಮದು ಎಂದು ಹೇಳುತ್ತಾರೆ. ಈ ಪರಿಸ್ಥಿತಿ ಇದೆ. ಇದಕ್ಕೆ ನಾನು ಹೇಳುತ್ತೇನೆಂದರೆ, ಸರ್ಕಾರ ಇದನ್ನು ಕಾವೇರಿ, ಮಹದಾಯಿ ಅದೇ ತರಹವೇ ಕೋರ್ಟ್‌ಗೆ ಹಾಕಿದ್ದಾರೆ. ಕೇಂದ್ರದಲ್ಲಿ ಯಾವ ಸರ್ಕಾರ ಬಂದರೂ ಮಾಡುವುದಕ್ಕೆ ಆಗಲಿಲ್ಲ. ಮಹಾಜನ್ ವರದಿಯನ್ನೇ ಅಂತಿಮ ವರದಿ ಎಂದು ತಿಳಿದುಕೊಂಡು, ಮಾನ್ಯ ಮಹಾಜನ್‌ರವರು ಒಬ್ಬ ದೊಡ್ಡ ನ್ಯಾಯಾಧೀಶರು. ಭಾರತ ಮತ್ತು ಪಾಕಿಸ್ತಾನ ಇಬ್ಭಾಗವಾದಾಗ, boundary fix ಮಾಡಿದಂತಹ ಕೀರ್ತಿ ಇವರಿಗೆ ಸಲ್ಲುತ್ತದೆ. ಅವರು ಯಾವುದೇ ರೀತಿಯಿಂದ ಆ ಕಡೆ ಮತ್ತು ಈ ಕಡೆಯಿಲ್ಲ. ಅವರು ನೇರ ನಿಷ್ಠೂರವಾದಂತಹ ವರದಿಯನ್ನು ಕೊಟ್ಟರು. ವರದಿ ಕೊಡುವಾಗ ಸ್ವಲ್ಪ ಹೆಚ್ಚು ಕಡಿಮೆಯಾಗಿತ್ತು. ಆದರೂ ಸಹಿತ ಅವರು ನ್ಯಾಯವಾಗಿ ಕೊಟ್ಟರು. ಆ ವರದಿಯನ್ನು ಕೊಟ್ಟ ನಂತರ ಒಟ್ಟಾರೆ ಕರ್ನಾಟಕದ ವಿಸ್ತೀರ್ಣ 1,92,204 ಚ. ಕಿಲೋ ಮೀಟರ್ ಅಂದಾಜು ಇದೆ. ನಮ್ಮ ರಾಜ್ಯದ ಎರಡರಷ್ಟು ವಿಸ್ತೀರ್ಣ ಮಹಾರಾಷ್ಟ್ರ ಹೊಂದಿದ್ದರೂ ಸಹ ನಮ್ಮ ಕರ್ನಾಟಕದ ಬೆಳಗಾವಿ ಸಹ ಬೇಕು ಎನ್ನುತ್ತಾರೆ. ಅವರು ಎಷ್ಟು ಆಸೆ ಬುರುಕರು ಇದ್ದಾರೆಂದು ನಾನು ಹೇಳುವುದು ಬೇಡ. ನಮ್ಮವರು ಇದನ್ನು ಮಾಡುತ್ತಿಲ್ಲ. ನಾವು ದೃಢವಾದಂತಹ ತೀರ್ಮಾನ ಮಾಡುತ್ತಿಲ್ಲ. ಅವರು ಮಹಾರಾಷ್ಟ್ರದ Assembly ನಲ್ಲಿ ಎರಡು ಬಾರಿ Bill ಅನ್ನು pass ಮಾಡಿದರು. ನಮ್ಮಲ್ಲಿ ಇದನ್ನು ಮಾಡುವುದಕ್ಕೆ ಆಗಿಲ್ಲ. ಹೀಗಾಗಿ ಇವತ್ತು ಮಹಾರಾಷ್ಟ್ರ ರಾಜಕೀಯ, ಸುಮಾರು 814 ಹಳ್ಳಿಗಳನ್ನು 9 ಪಟ್ಟಣ ಪ್ರದೇಶಗಳನ್ನು ಈಗ ಅದನ್ನು ತೆಗೆದುಕೊಳ್ಳಬೇಕೆಂದು ತೆಗೆದುಕೊಂಡು ನಡೆಸಿದ್ದಾರೆ. ಅವರು ಇವತ್ತು ಕೋರ್ಟ್‌ನಲ್ಲಿ plea ಹಾಕಿದ್ದಾರೆ. ಅವರ ಮನವಿಯೇನೆಂದರೆ, 814 ಹಳ್ಳಿಗಳನ್ನು ಪಟ್ಟಣ ಪ್ರದೇಶಗಳನ್ನು ಕಬಳಿಸುವ ಹುನ್ನಾರದಿಂದ ಆಗ ಸಲ್ಲಿಸಿದ ಮನವಿ. ಈಗ ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದೆ. ಇವೆಲ್ಲಾ ಕರ್ನಾಟಕದೊಳಗಡೆ ಇದ್ದಂತಹವುಗಳು. ಇನ್ನುವರೆಗೆ ಏನಾಗುತ್ತದೆಂದರೆ, ಸರ್ಕಾರ ಬರುತ್ತದೆ ಮತ್ತು ಹೋಗುತ್ತದೆ. ನಮ್ಮ ಸರ್ಕಾರ ಮಾಡಿದೆ. ಬಿ.ಜೆ.ಪಿ.ಯವರು ಮತ್ತು ಎಲ್ಲಾ ಪಕ್ಷದ ಸರ್ಕಾರಗಳು ಮಾಡಿದ್ದಾರೆ. ಯಾವ ಸರ್ಕಾರ ಬಂದರೂ ಇದಕ್ಕೆ ಪರಿಹಾರ ಕಂಡಿಲ್ಲ. ನಾನು ಒಬ್ಬ ಸರ್ಕಾರದ ಮೇಲೆ ದೂಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಈಗ ನಾನು ಹೇಳುತ್ತೇನೆಂದರೆ, ಈಗ ಪರಿಸ್ಥಿತಿ ಬೇರೆಯಾಗಿದೆ. ಈ ಹಿಂದೆ ಇದ್ದಂತಹ ಸರ್ಕಾರವೇ ಬೇರೆ. ಈಗ ಏನಾಗಿದೆ ಎಂದರೆ, ಸರ್ವೋಚ್ಚ ನ್ಯಾಯಾಲಯ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇರುವುದರಿಂದ based on records ನಮ್ಮವರೇ ನಿಷ್ಕಾಳಜಿ ಮಾಡಿದರೆ, ಇದೊಂದು ಅನಾಹುತವಾಗಬಾರದೆಂದು ಮಾನ್ಯ ಸಭಾನಾಯಕರಿಗೆ ಕೇಳಿಕೊಳ್ಳುತ್ತೇನೆ. ಗಡಿ ಉದ್ದಕ್ಕೂ ಸುಮಾರು 500 ಮೈಲು ಹಾಗೂ ಸುಮಾರು 2,806 ಚದುರ ಕಿ.ಮೀಟರ್ ಭೂ ಪ್ರದೇಶವನ್ನು ಅವರು ಲೆಕ್ಕ ಮಾಡಿದ್ದಾರೆ. ನಾನು website ನಲ್ಲಿ ಮಾಹಿತಿಯನ್ನು ತೆಗೆದುಕೊಂಡಿದ್ದೇನೆ. ಮಹಾರಾಷ್ಟ್ರಕ್ಕೆ ಹೊಂದಿಕೊಂಡು ಕರ್ನಾಟಕ ಗಡಿ ಉದ್ದಕ್ಕೂ ಸುಮಾರು 500 ಮೈಲು ಹಾಗೂ ಸುಮಾರು 2806 ಚದುರ ಕಿ.ಮೀಟರ್ ಭೂ ಪ್ರದೇಶವನ್ನು ಪಡೆಯುವ ಮ್ಯಾಪ್-ಗೀಪು ಹಾಕಿ ಅಲ್ಲಿ ಮರಾಠಿಯವರು ಇದ್ದಾರೆ. ಇದನ್ನು ಕೋರ್ಟ್‌ನಲ್ಲಿ ಹಾಕಿ ಸಂಪೂರ್ಣವಾಗಿ ಮಹಾರಾಷ್ಟ್ರಕ್ಕೆ ಹೋಗಬೇಕು ಎನ್ನುವಂತಹ ಭಾವನೆ ಬರುವಂತಹ ರೀತಿಯಾಗಿದೆ. ಮಹಾಜನ್ ವರದಿ ಸುಮಾರು 50 ವರ್ಷ ತುಂಬಿ 60 ವರ್ಷಕ್ಕೆ ಪಾದಾರ್ಪಣೆಯಾಗಿದೆ. ಇವತ್ತಿನವರೆಗೆ ಯಾವುದೇ ರೀತಿಯ ಪ್ರಗತಿಯಿಲ್ಲ. ಕನ್ನಡದ ಭೂ ಪ್ರದೇಶಗಳ ಬಗ್ಗೆ ಪರಿಣಾಮಕಾರಿಯಾಗದಂತಹ ಹೆಜ್ಜೆ ಇಡಬೇಕಾಗಿದೆ. ಕಳೆದು ಹೋದದ್ದನ್ನು ಮರಳಿ ಪಡೆಯಬೇಕಾಗಿದೆ. ನಮಗೆ ಏನು ಕಳೆದು ಹೋಗಿದೆಯೋ, ಅವು ಹೋದದ್ದು ಹೋದವು.

(ಮುಂದು...)

(1125)21.11.2017/4.20,ಟಿಸಿಹೆಚ್-ಕೆಎಸ್

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಮುಂದು)

ಇಲ್ಲೇ ಸುಮಾರು 15 ಕಿ.ಲೋ ಮೀಟರ್‌ನಲ್ಲಿ ಹರಳೂರು ಎಂದು ಇದೆ. ಇದನ್ನು ನಾನು ನಮ್ಮ ನಿಷ್ಕಾಳಜಿಯಿಂದ ಹೇಳುತ್ತೇನೆ. ಈಗ ತಾವು ಮೀರಜ್ ಸಾಂಗ್ಲಿಗೆ ಹೋದರೆ, ಎಡಗಡೆ ಮಹಾರಾಷ್ಟ್ರ ಮತ್ತು ಬಲಗಡೆ ನಮ್ಮ ರಾಜ್ಯ ಇದೆ. ಆ ಮಹಾರಾಷ್ಟ್ರದ ಪ್ರದೇಶವೆಲ್ಲಾ ಹಸಿರು ಹಸಿರಿನಿಂದ ಕೂಡಿದೆ. ಆದರೆ ನಮ್ಮ ರಾಜ್ಯದ ಪ್ರದೇಶವೆಲ್ಲಾ ಒಣ ಪ್ರದೇಶವಾಗಿದೆ. ಅಲ್ಲಿ ಅವರೆಲ್ಲರೂ ನಾವು ಮಹಾರಾಷ್ಟ್ರಕ್ಕೆ ಹೋಗುತ್ತೇವೆಂದು ಬರದುಕೊಟ್ಟರು. ಅಥಣಿಯ ಮಾನ್ಯ ಶಾಸಕರು ಇದ್ದಂತಹವರು ಈ ಹಿಂದೆ ನಾಲ್ಕೈದು ಹಳ್ಳಿಗಳ ಮಹಾರಾಷ್ಟ್ರದ ಜನರು ಕರ್ನಾಟಕಕ್ಕೆ ಬರುತ್ತಾರೆ ಎನ್ನುವಂತಹ ಒಂದು ಹೇಳಿಕೆಯನ್ನು ಕೊಡಿಸಿದರು. ಇವತ್ತು ನಮ್ಮ ರಾಜ್ಯದಲ್ಲಿ ಕನ್ನಡ ಶಾಲೆಗಳಿವೆ. ಆ ಕನ್ನಡ ಶಾಲೆಗಳಿಗೆ ಇವರು ಶಿಕ್ಷಕರನ್ನು ಕೊಡುವುದಿಲ್ಲ. ಹಿಂದೆ ನಾನು ಶಿಕ್ಷಣ ಸಚಿವನಾಗಿದ್ದಾಗ, ಮಹಾರಾಷ್ಟ್ರದವರು ಮುಂಬೈನಲ್ಲಿ ಸುಮಾರು 47 ಹೈಸ್ಕೂಲ್‌ಗಳನ್ನು ಮತ್ತು 56 ಪ್ರಾಥಮಿಕ ಶಾಲೆಗಳಿಗೆ ಶಿಕ್ಷಕರನ್ನು ಕೊಡಲಿಲ್ಲ. ಂಣಾಂಟಾಚಿಣಾಖಿಚಿಟಟಥಿ ಅವುಗಳನ್ನು ಮುಚ್ಚಲ್ಪಡುತ್ತಿದ್ದವು. ಆಗ ಮಾಧ್ಯಮ ಸ್ನೇಹಿತರು ಈ ವಿಚಾರದ ಬಗ್ಗೆ ನನ್ನನ್ನು ಕೇಳಿದಾಗ,

ನಾನು ಮಾಹಿತಿಯನ್ನು ತರಿಸಿಕೊಂಡೆವು. ಅದಕ್ಕೆ ನಾವು ಹೇಳಿದ್ದು, ಇಲ್ಲಿ ಯಾವುದೇ ಮರಾಠಿ ಶಾಲೆಗಳನ್ನು ಕೊಡುವುದಿಲ್ಲ. ಒಂದು ಹುದ್ದೆಗಳನ್ನು ಕೊಡುವುದಿಲ್ಲವೆಂದು ನಾನು ,ಣಡಿಖಿಣ ಮಾಡಿ ಕೊಡಲಿಲ್ಲ. ಇದೆಲ್ಲಾ ಬಹಳ ಗಂಭೀರವಾದಾಗ ನಂತರ ಅವರು ಕೊಟ್ಟರು, ನಾವು ಕೊಟ್ಟೆವು. ನಾನು ಹೇಳುತ್ತೇವೆಂದರೆ ಇಲ್ಲಿ ನಾವು ಆಳುವವರು ಸುಮ್ಮಸುಮ್ಮನೆ ಹೇಳುತ್ತಾರೆ, ಇಲ್ಲಿ ಬೇರೆ ಬೇರೆ ದೊಡ್ಡ ಸದಸ್ಯರು ಮಾತನಾಡುತ್ತಾರೆ, ಉತ್ತರ ಕರ್ನಾಟಕ ಆಗಬೇಕೆಂದು ಹೇಳುತ್ತಾರೆ, ಇವರು ಮೊದಲು ಮಹಾರಾಷ್ಟ್ರದವರನ್ನು ನಿಯಂತ್ರಿಸುವುದಕ್ಕೆ ಆಗುತ್ತಿಲ್ಲ. ಆದರೆ ಉತ್ತರ ಕರ್ನಾಟಕ ಮಾಡಲು ಹೊರಟಿದ್ದಾರೆ, ಆದರೆ ಮೊದಲು ಮಹಾರಾಷ್ಟ್ರದವರಿಂದ ಬಿಡಿಸಿಕೊಳ್ಳುವಂತಹ ಕೆಲಸ ಮಾಡುತ್ತಿಲ್ಲ. ಆದ್ದರಿಂದ ಮೊದಲು ಅದನ್ನು ಮಾಡಬೇಕೆಂದು ಹೇಳುತ್ತೇವೆ, ಅದು ನಮ್ಮ ನಿಮ್ಮೆಲ್ಲರ ಕರ್ತವ್ಯವಾಗಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ಜನತೆ ಒಳ್ಳೆಯವರೆಂಬುದು ಇಡೀ ದೇಶಕ್ಕೆ ಗೊತ್ತು. ಇವತ್ತಿನ ದಿವಸ ಇಡೀ ದೇಶದಲ್ಲಿ ನೀರಾವರಿಯಲ್ಲಿ ನಮಗೆ ಟಥ ನೀವು ಬಾರ್ಡರ್‌ಗೆ ಹೋಗಿ ಅಲ್ಲಿ ನಮಗೆ ಟಥ ಏಕೆಂದರೆ, ನಾವು ಬಹಳ ಸಭ್ಯಸ್ಥರು ಎಂದು ಇಡೀ ಜಗತ್ತಿಗೆ ಗೊತ್ತಿದೆ. ಆ ಸಭ್ಯತೆಯನ್ನು ದುರುಪಯೋಗ ಮಾಡುವಂತಹವರಿಗೆ ನಾವು ಏನಾದರೂ ಮಾಡದಿದ್ದರೆ, ನಾವು ಎಲ್ಲಿಗೆ ಹೋಗುತ್ತೇವೆ ಎನ್ನುವುದನ್ನು ನಾವು ವಿಚಾರ ಮಾಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ, ನಾನು ಸರ್ಕಾರಕ್ಕೆ ಹೇಳುವುದೇನೆಂದರೆ, 1967 ಆಗಸ್ಟ್ 25ನೇ ತಾರೀಖಿಗೆ ಆ ಏಕಸದಸ್ಯ ಆಯೋಗ ಏನಾಯಿತು ಆವೊತ್ತಿನಿಂದ ಇವತ್ತಿನವರೆಗೂ ಕೇಂದ್ರ ಸರ್ಕಾರ ತಮ್ಮ ವರದಿಯನ್ನು ಒಪ್ಪಿಸಿದರು. ಅದನ್ನು ಒಪ್ಪಿಸಿದ ನಂತರ, ಶ್ರೀ ಎಸ್.ನಿಜಲಿಂಗಪ್ಪನವರು ಕರ್ನಾಟಕದ ಮುಖ್ಯಮಂತ್ರಿಯಾಗಿದ್ದರು. ಆಮೇಲೆ ಮಹಾರಾಷ್ಟ್ರದ ಮುಖ್ಯಮಂತ್ರಿಗಳಾದ ಶ್ರೀ.ಸಿ.ಪಿ.ನಾಯಕ್‌ರವರು 1967ನೇ ನವೆಂಬರ್ 4ರಂದು ತನ್ನ ವರದಿ ಒಪ್ಪಿಕೊಂಡರು. ಇವರು ವರದಿಯನ್ನು ಕೊಟ್ಟು 8 ದಿವಸಗಳಲ್ಲಿ ಒಪ್ಪಿಕೊಂಡರು, ಅವರು ನಂತರ ನಾಲ್ಕೈದು ತಿಂಗಳಿನಲ್ಲಿ ಒಪ್ಪಿಕೊಂಡರು. ಇಷ್ಟೆಲ್ಲಾ ಆದನಂತರ, ಮಹಾಜನ್‌ರವರ ವರದಿ ಕೊಟ್ಟು ಅದರಲ್ಲಿ ಉಲ್ಲೇಖ ಮಾಡಿದ್ದಾರೆ. ಅವರಿಗೆ ಏನಾದರೂ ಹೇಳಬೇಕು ಏಕೆಂದರೆ, ಮಹಾರಾಷ್ಟ್ರದವರ ಬುದ್ಧಿವಂತಿಕೆ ಏನೆಂದರೆ, ತಮಗೆ ಏನು ಅನುಕೂಲ ಬೇಕೋ ಅದನ್ನು ಕೊಟ್ಟಿದ್ದಾರೆ. ಮಹಾಜನ್‌ರವರ ವರದಿಯನ್ನು ನಾನು ತೆಗೆದುಕೊಂಡಿದ್ದೇನೆ. ಶ್ರೀ ಮೇಯರ್ ಚಂದ್ ಮಹಾಜನ್‌ರವರು ದೇಶ ಕಂಡ ಮಹಾನ್ ವ್ಯಕ್ತಿಗಳಲ್ಲಿ ನ್ಯಾಯಮೂರ್ತಿಗಳು ಹಾಗೂ ಅವರು ಹಿಮಾಚಲ ಪ್ರದೇಶದವರು ಆಗಿರುತ್ತಾರೆ. ಹಿಮಾಚಲ ಪ್ರದೇಶದವರು ಭಾರತ ಮತ್ತು ಪಾಕಿಸ್ತಾನ ಎಂದು ಬೇರೆ ಬೇರೆಯಾದಾಗ, ಅಲ್ಲಿ ಕಾಶ್ಮೀರ ರಾಜ್ಯವನ್ನು ಉಳಿಸಿಕೊಟ್ಟವರು ಇವರು. ಆವೊತ್ತು ಇವರು ಇರಲಿಲ್ಲವೆಂದರೆ, ಕಾಶ್ಮೀರ ಹೋಗುತ್ತಿತ್ತು. ಇವೆಲ್ಲಾ ಮಾಹಿತಿ ಅಂತರ್ಜಾಲದಲ್ಲಿ ಸಿಗುತ್ತದೆ. ಆಮೇಲೆ ಪಂಜಾಬ್ ಬಾರ್ಡರ್ ಮಾಡುವಾಗ, ಆ ಗಡಿ ರೇಖೆಗಳ ಸಹಿತ ಇವರೇ ಮಾಡಿದರು. ಇಂತಹವರು ವರದಿ ಕೊಟ್ಟು, ಅದು ಇನ್ನೂ ಅಲ್ಲೇ ಇದೆ ಎಂದರೆ,

ಮುಂದೆ ಏನು ಮಾಡಬೇಕೆಂದು ನಾವು ವಿಚಾರ ಮಾಡಬೇಕಾಗುತ್ತದೆ. ಹಾಗಾಗಿ, ಬೆಳಗಾವಿಗೆ ಏನೆಲ್ಲಾ ಸಮಸ್ಯೆಗಳು ಇವೆ, ಅವು ಇಷ್ಟೆಲ್ಲಾ ಕಾಟವನ್ನು ಕೊಡುತ್ತವೆ. ಬೆಳಗಾವಿಯನ್ನು ಇವರು ಸುಸೂತ್ರವಾಗಿ ಬಿಡಲು ಹೊರಟಿಲ್ಲ. ಇವತ್ತು ಏನು ಆಗ ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ತೆಗೆದುಕೊಳ್ಳುತ್ತಾರೆ ಎನ್ನುವಂತಹ ಹಿನ್ನೆಲೆಯಲ್ಲಿ, ಎಲ್ಲಾ ಸರ್ವಪಕ್ಷದವರೂ ಜೊತೆಗೂಡಿ ಬೆಳಗಾವಿಯಲ್ಲಿ ಸುವರ್ಣಸೌಧವನ್ನು ಕಟ್ಟಿ, ವಿಧಾನಸೌಧವನ್ನು ಪ್ರಾರಂಭ ಮಾಡಬೇಕೆಂದು ಮಾಡಿದ್ದೀರಿ. ಸುವರ್ಣಸೌಧ ಕಟ್ಟಿದ್ದು ದುರ್ದೈವದ ಸಂಗತಿ ಮಾನ್ಯ ಸಭಾಪತಿಯವರೆ, ಈಗ ಏನಾಗಿದೆ ನೋಡಿ ಇದರ ಹಣೆ ಬರಹ. ಇದನ್ನು ಕಟ್ಟದಿದ್ದರೆ ಚೆನ್ನಾಗಿರುತ್ತಿತ್ತು ಎಂದು ಈಗ ನನಗೆ ಅನ್ನಿಸುತ್ತದೆ. ಏಕೆಂದರೆ, ಈ ಸುವರ್ಣಸೌಧವನ್ನು ಕಟ್ಟಿದ ನಂತರ ಇಲ್ಲಿ ಅಧಿವೇಶನ ಬಂದಾಗ ಮಾತ್ರ ಇಲ್ಲಿ ನಡೆಯುತ್ತದೆ. ಇದನ್ನು ಕಟ್ಟಬೇಕೆಂದು ಯಾವ ಪುಣ್ಯಾತ್ಮರು ಕಟ್ಟಿದರೋ ಗೊತ್ತಿಲ್ಲ. ನನಗೆ ಬೆಂಗಳೂರಿನಲ್ಲಿ ವಿಧಾನಸೌಧ ಇದೆ. ಅಲ್ಲಿ ಒಬ್ಬರು ಸಚಿವರನ್ನು ಭೇಟಿ ಮಾಡಬೇಕಾದರೆ, ಒಬ್ಬ ಸಣ್ಣ ಹುಡುಗನೂ ಸಹ ಅವರನ್ನು ಭೇಟಿ ಮಾಡುತ್ತಾನೆ. ಆದರೆ ಇಲ್ಲಿ ನೀವು ಯಾವುದೇ ಒಬ್ಬರು ಸಚಿವರ ಕಛೇರಿಯನ್ನು ಹುಡುಕಿ ನೋಡೋಣ. ಇಲ್ಲಿ ಯಾವುದೋ ಒಂದು ಚಾರಣಕ್ಕೆ ಹೋದಂತೆ ಆಗುತ್ತದೆ. ಇವತ್ತಿನ ದಿವಸ ಇಲ್ಲಿ ಯಾವುದೇ ಒಂದು ಕಛೇರಿ ಇರುವುದಿಲ್ಲ. ಆದರೆ ಏನು ಒಂದು ವಿಧಾನಸೌಧ ಇದೆ, ಟಿ ಣಠಾಚಿಟ ವಿಧಾನಸೌಧವನ್ನು ಇಲ್ಲಿಗೆ ತಂದು ಸಣ್ಣದಾಗಿ ಇದನ್ನು ಕಟ್ಟಿದ್ದರೆ ಚೆನ್ನಾಗಿ ಇರುತ್ತಿತ್ತು. ಇವತ್ತಿನ ದಿವಸ ಅಲ್ಲಿ ಮೊದಲನೆಯ ಮಹಡಿ, ಮತ್ತು ಎರಡನೆಯ ಮಹಡಿ, ಅಲ್ಲಿ ಹೇಗೆ ಆರ್ಥಿಕ ಇಲಾಖೆಗಳಿವೆ ಅಲ್ಲಿ ಮತ್ತೆ ವಿಧಾನ ಮಂಡಲದ ಬೇರೆ ಬೇರೆ ಖಾತೆಗಳಿವೆ ಮತ್ತು ಡಿ.ಪಿ.ಎ.ಆರ್ ಇಲಾಖೆಗಳು ಇರುತ್ತವೆ. ಆದರೆ ಇಲ್ಲಿ ಆ ರೀತಿ ಇರುವುದಿಲ್ಲ. ಅಧಿವೇಶನ ಮುಗಿದರೆ ಈ ಸುವರ್ಣ ಸೌಧವು ಮುಚ್ಚಲ್ಪಡುತ್ತದೆ. ನಾವು ಇಲ್ಲಿಯವರೆಗೆ ಅಧಿವೇಶನಕ್ಕೆ 9 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದೇವೆಂದು ತಿಳಿದುಬಂದಿದೆ. ಇವತ್ತಿನದ ದಿವಸ ನಾವು ನಾಳೆ ಕಛೇರಿ ಮಾಡುವಂತೆ ಹೇಳುತ್ತೇವೆ. ನಾನು ಭರವಸೆ ಸಮಿತಿಯ ಅಧ್ಯಕ್ಷನಾಗಿದ್ದು, ಒಂದು ವರದಿಯನ್ನು ಕೊಟ್ಟಿದ್ದೇನೆ. 13 ಸಮಿತಿ room ಗಳು ಇವೆ. ಅದರಲ್ಲಿ ಮೂರು room ಗಳನ್ನು ಇಟ್ಟುಕೊಂಡು, 10 room ಗಳನ್ನು ಕೊಡುತ್ತೇನೆ. 30 ಅಡಿ ಜಾಗವನ್ನು corridor ಗೆ ಬಿಟ್ಟಿದ್ದಾರೆ. ಮುಖ್ಯ ಇಂಜಿನಿಯರ್‌ನ್ನು ಕರೆಸಿ ಪರಿಶೀಲನೆ ಮಾಡಿಸಿದಾಗ, 15 ಅಡಿಯನ್ನು ಲೆಕ್ಕ ಮಾಡಿದರೆ, ಇಂತಹ ಪರಿಸ್ಥಿತಿಯಲ್ಲಿ ಸುಮಾರು 10 ಕಛೇರಿಗಳನ್ನಾದರೂ ಮಾಡಬಹುದು. ಇಲ್ಲ, ಇಲ್ಲ ಇಲ್ಲಿ ಕಛೇರಿ ಮಾಡುವುದಕ್ಕೆ ಬರುವುದಿಲ್ಲವೆಂದು ಮೊದಲು ಅವರೇ ಹೇಳಿ ಬಿಡುತ್ತಾರೆ. ಕಛೇರಿ ಮಾಡುವುದಕ್ಕೆ ಬರುವುದಿಲ್ಲವೆಂದರೆ, ಸುಮಾರು 400 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಪ್ರತಿ ವರ್ಷ ನಾವು ಇಷ್ಟು ದುಡ್ಡನ್ನು ಖರ್ಚು ಮಾಡಿದರೆ, ಇದರಿಂದ ಉಪಯೋಗವೇನಿದೆ. ನಾನು ಮಾನ್ಯ ಸಭಾನಾಯಕರಿಗೆ ವಿನಂತಿ ಮಾಡಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದಕ್ಕೇನಾದರೂ ಒಂದು ದಾರಿ ಹುಡುಕಿ, ಕನಿಷ್ಟ 8-10 ಕಛೇರಿಗಳು ಇಲ್ಲಿ ಕಾರ್ಯನಿರ್ವಹಿಸಿದರೆ ಒಳ್ಳೆಯದು. ಇಲ್ಲಿ ಕಸ ಹೊಡೆಯುವವರಾದರೂ ಇರುತ್ತಾರೆ. ಮಾನ್ಯ ಸಭಾನಾಯಕರೆ ಇಲ್ಲಿ ಏನಾಗಿದೆ ಎಂದರೆ, ತಮಗೆ ಇದನ್ನು ಹೇಳುತ್ತೇನೆ. ನಿಮಗೆ ಮತ್ತು ನಮಗೆ ಈ ಬಗ್ಗೆ ಕಾಳಜಿ ಇದ್ದು, ಇಲ್ಲಿ ಅಧಿವೇಶನ ನಡೆಸಬೇಕು, ಇಲ್ಲಿ ಕಛೇರಿಗಳು ಕಾರ್ಯನಿರ್ವಹಿಸಲು ಏನಾದರೊಂದು ಮಾಡಬೇಕೆಂದು ಇದೆ. ಇವತ್ತಿನ ದಿವಸ ಅಧಿಕಾರಿಗಳು ಇದ್ದಾರೆ, ನಿಮ್ಮ ಒಬ್ಬ ಐ.ಎ.ಎಸ್. ಅಧಿಕಾರಿ ಈ ಸುವರ್ಣಸೌಧದಲ್ಲಿ ಬರುವುದಕ್ಕೆ ಸಾಧ್ಯವಿಲ್ಲ. ಈಗ ನಾನು ಮಾನ್ಯ ಸಭಾಪತಿಯವರ ಬಳಿ ಮಾತನಾಡುತ್ತಿದ್ದೆನು. ಭದ್ರಾವತಿಯಲ್ಲಿ ಒಂದು steel factory ಇತ್ತಂತೆ. ಆಗ ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯವರು ಆಗಿದ್ದರು. ಶ್ರೀ ರಾಮಕೃಷ್ಣ ಹೆಗಡೆಯವರ ಹತ್ತಿರ ನಮ್ಮ ಸದನದ ಸಭಾಪತಿಯವರಾದ ಶ್ರೀ ಡಿ.ಹೆಚ್.ಶಂಕರಮೂರ್ತಿಯವರು ಹೋದರಂತೆ, ಹೀಗೆ ಇಲ್ಲಿ ಫ್ಯಾಕ್ಟರಿ ಇಲ್ಲಿದೆ. ಕಛೇರಿ ಮಾತ್ರ ಬೆಂಗಳೂರಿನಲ್ಲಿದೆ. ಅದಕ್ಕೆ ದಯಮಾಡಿ ಏನೆಂದರೆ, ಕಛೇರಿಯನ್ನು ಬೆಂಗಳೂರಿಗೆ ಸ್ಥಳಾಂತರಿಸಿ ಎಂದರಂತೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಇದು ನನಗೆ ಗೊತ್ತೇ ಇಲ್ಲವಲ್ಲ ರೀತಿ ಆಯಿತು immediately ಇನ್ನೊಂದು ವಾರದಲ್ಲಿ ಇದನ್ನು ಮಾಡುತ್ತೇನೆಂದು ಹೇಳಿದರಂತೆ. ಒಂದು ವಾರವಾದ ನಂತರ ಮಾನ್ಯ ಸಭಾಪತಿಯವರಾದ ಶ್ರೀ ಡಿ.ಹೆಚ್.ಶಂಕರಮೂರ್ತಿಯವರನ್ನು ಕರೆದು, ಕ್ಷಮಿಸಬೇಕು ಆಗುವುದಿಲ್ಲ ಎಂದರಂತೆ. ಇವತ್ತಿನ ದಿವಸ ಅದಕ್ಕಿಂತ ತೀಕ್ಷಣ ಪರಿಸ್ಥಿತಿ ಬಂದಿದೆ. ಅದಕ್ಕೆ ಯಾವುದೇ ಒಂದು ಸರ್ಕಾರವನ್ನು blame ಮಾಡುವುದಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇದು ನಾವು ಇದ್ದಾಗಲೂ ಆಯಿತು ಮತ್ತು ನೀವು ಅಧಿಕಾರದಲ್ಲಿ ಇದ್ದಾಗಲೂ ಆಯಿತು, ಅದಕ್ಕೆ ನಾನು ಹೇಳುವುದೇನೆಂದರೆ, ಮಾನ್ಯ ಸಭಾಪತಿಯವರೆ, ಯಾವ ಸರ್ಕಾರ ಅಧಿಕಾರಕ್ಕೆ ಬಂದರೂ ಅವರದ್ದೇ ನಡೆಯುತ್ತದೆ. ಅವರು ಹೇಳಿದಂತೆಯೇ ನಾವು ಕೂಡ ಸಹಿ ಮಾಡುತ್ತೇವೆ. ಇಂತಹ ಪರಿಸ್ಥಿತಿಯಾದರೆ ಹೇಗೆ? ಇದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತೇನೆ, S. Nijalingappa Sugar Institute ಎಂದು ಬೆಳಗಾಂನಲ್ಲಿ ಇದೆ. ಇಲ್ಲಿ ಒಟ್ಟು 68 sugar factory ಗಳಿವೆ. ಈ 68 ರಲ್ಲಿ, 57 sugar factory ಗಳು ಬೆಳಗಾಂ ಮತ್ತು ಗುಲಬರ್ಗಾ division ನಲ್ಲಿ ಇವೆ. 11 sugar factory ಗಳು ಮೈಸೂರಿನಲ್ಲಿ ಇವೆ. ತಾವು ಆದರೆ ಇದರ ಕಛೇರಿಗಳು ಎಲ್ಲಿವೆಯೆಂದರೆ ಬೆಂಗಳೂರಿನಲ್ಲಿ ಇವೆ. ಇಲ್ಲಿ ಎಲ್ಲಾ sugar factory ಗಳು ಇವೆ, ತಾವು ಆ ಕಛೇರಿಗಳನ್ನು ಇಲ್ಲಿಗೆ ಏಕೆ ತರಬಾರದು? ನಾನು ಹೇಳುತ್ತಿದ್ದೇನೆ ಮಾನ್ಯ ಸಭಾಪತಿಯವರೇ, ಇದರ ಬಗ್ಗೆ immediately ಕ್ರಮ ತೆಗೆದುಕೊಳ್ಳಬೇಕು. ಅವರು ಇಲ್ಲಿಗೆ ಬರಲಿ, ಅವರು ಏಕೆ ಇಲ್ಲಿಗೆ ಬರುವುದಿಲ್ಲ. ಅವರು ಬರೀ ಬೆಂಗಳೂರು, ಬೆಂಗಳೂರು ಎನ್ನುತ್ತಾರೆ. ಈಗ ಇಲ್ಲಿ 57 sugar factory ಗಳು ಇವೆ. ಇಲ್ಲಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಶ್ರೀ ಲಕ್ಷ್ಮೀ ನಾರಾಯಣರವರು ಇದ್ದಾರೋ ಅಥವಾ ಇಲ್ಲವೋ ಗೊತ್ತಿಲ್ಲ. ಅವರು ಈ textile ಗಳ ಸಲುವಾಗಿ ಹುಬ್ಬಳ್ಳಿಯಲ್ಲಿ ಕಛೇರಿಯನ್ನು ಮಾಡಿದ್ದಾರೆ. ಅದಕ್ಕೆ ಎಷ್ಟೋ ಕೋಟಿ ರೂಪಾಯಿಗಳು ಹಾಕಿ ಕಛೇರಿ ಮಾಡಿದ್ದಾರೆ ಮತ್ತೆ ಕಛೇರಿ ಇರುವುದು ಬೆಂಗಳೂರಿನಲ್ಲಿ. ಇಲ್ಲಿಂದ ಹೋಗುತ್ತಿದೆ. ಅದಕ್ಕೆ ನಾನು ಸರ್ಕಾರಕ್ಕೆ ಹೇಳುವುದೇನೆಂದರೆ, ಇವತ್ತಿನ ದಿವಸ ನಾವು ಬರೀ ಉತ್ತರ ಕರ್ನಾಟಕ, ಉತ್ತರ ಕರ್ನಾಟಕ ಎಂದು ಹೇಳುತ್ತೇವೆ. ಈ ಕಛೇರಿಗಳು ಏಕೆ ಇಲ್ಲಿಗೆ ಬರುವುದಿಲ್ಲ? ಈಗ ಹೈದ್ರಾಬಾದ್-ಕರ್ನಾಟಕದಲ್ಲಿ ಹೆಚ್‌ಕೆಡಿಬಿ ಇದೆಯಲ್ಲಾ ಅಲ್ಲಿಗೂ ಸಹಿತ ಎಷ್ಟೋ ಜನ ಅಧಿಕಾರಿಗಳು ಹೋಗುತ್ತಿಲ್ಲ. ಅಲ್ಲಿಗೆ ಒಬ್ಬರು, ಇಲ್ಲಿಗೆ ಒಬ್ಬರು ಎಂದು ಅಪ್ಪಾ, ಅಣ್ಣ ಎಂದು ಕಳುಹಿಸಬೇಕಾಗುತ್ತದೆ. ಈ ಪರಿಸ್ಥಿತಿಯನ್ನು ನಾವು ಯಾವಾಗ ಸರಿಪಡಿಸಬೇಕು ಎಂಬುದನ್ನು ಇವತ್ತು ನಾನು ಹೇಳುತ್ತಿದ್ದೇನೆ, ಒಂದು sugar institute and textile ಇವುಗಳಿಗೆ ಹೋಗುವಂತೆ ಮಾಡಿ, ಅವರು ಇಲ್ಲಿಗೆ ಏಕೆ ಹೋಗುವುದಿಲ್ಲ, ಅವರು ಹೋಗಲಿಲ್ಲವೆಂದರೆ, ಅವರ ಮೇಲೆ ತಕ್ಷಣ ನೀವು ಕ್ರಮ ತೆಗೆದುಕೊಳ್ಳಿ. ಈಗ ಯಾರಾದರೊಬ್ಬರು ಸಾಮಾನ್ಯ ಶಿಕ್ಷಕನು ವರ್ಗಾವಣೆ ಬಯಸಿ ನನ್ನ ಹತ್ತಿರ ಬಂದರೆ, ನಾನು ಅವರಿಗೆ ಬೈದು ಕಳುಹಿಸುತ್ತೇನೆ, ಆದರೆ ಇವರಿಗ್ಯಾಕೆ ಮಾಡಬಾರದು ಹೇಳಿ ನೋಡೋಣ. ಇವತ್ತಿನ ದಿವಸ ಕಛೇರಿಯಲ್ಲಿ Divisional Commissioner ಹುದ್ದೆ ಸುಮಾರು ನಾಲ್ಕು ವರ್ಷಗಳಿಂದ ಖಾಲಿ ಇತ್ತು, ಕಳೆದ ನಾಲ್ಕು ವರ್ಷಗಳಿಂದ ಜಿಲ್ಲಾಧಿಕಾರಿಯಾಗಿದ್ದಂತಹ ಶ್ರೀ ಜಯರಾಂ ಅವರೇ Divisional Commissioner ಹುದ್ದೆಯ ಪ್ರಭಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಈಗ ಅದನ್ನು ತುಂಬಿದ್ದಾರೋ ಅಥವಾ ಇಲ್ಲವೋ ಗೊತ್ತಿಲ್ಲ. ಅಂದರೆ ಐ.ಎ.ಎಸ್.ಅಧಿಕಾರಿಗಳ ಅವರ whims and fancies ಪ್ರಕಾರವೇ ಸರ್ಕಾರ ನಡೆಯಬೇಕು. ಅವರು ಬರುವುದಿಲ್ಲವೆಂದರೆ ಮುಂದೇನಾಗುತ್ತದೆ, ಅದಕ್ಕೆ ಸರ್ಕಾರಕ್ಕೆ, ನಾನು ಹೇಳುವುದೇನೆಂದರೆ, ನಮ್ಮದೂ ಸಹ ತಪ್ಪಿದೆ ಮಾನ್ಯ ಸಭಾಪತಿಯವರೆ, ಜನಪ್ರತಿನಿಧಿಗಳಾಗಿರುವಂಥವರು ನಮ್ಮ ನಮ್ಮ ರಾಜ್ಯದ ಬಗ್ಗೆ, ನಮ್ಮ ನಮ್ಮ ಜಿಲ್ಲೆ ಬಗ್ಗೆ, ನಮ್ಮ ಉತ್ತರ ಕರ್ನಾಟಕದ ಬಗ್ಗೆ ಅಭಿಮಾನವನ್ನು ನಾವೇ ಇಟ್ಟುಕೊಳ್ಳಲಿಲ್ಲವೆಂದರೆ, ಇನ್ನು ಯಾರು ಇಟ್ಟುಕೊಳ್ಳಬೇಕು. ಅದಕ್ಕೆ ನಾನು ಹೇಳುತ್ತಿದ್ದೇನಲ್ಲಾ, ಮಹಾರಾಷ್ಟ್ರದವರು ಇಲ್ಲಿಗೆ ಬಂದು ಏನು ಬೇಕಾದರೂ ಮಾಡಿದರೆ ನಡೆಯುತ್ತದೆ. ಮಹಾರಾಷ್ಟ್ರದವರು ಇಲ್ಲಿಗೆ ಬಂದು factory ತೆಗೆಯಬಹುದು, ಅಂಗಡಿ ತೆರೆಯಬಹುದು ಮತ್ತು ಜಮೀನುಗಳನ್ನು ಖರೀದಿ ಮಾಡಬಹುದು. ಆದರೆ ಇವರು ಅಲ್ಲಿಗೆ ಹೋಗುವಂತಿಲ್ಲ. ಇಂತಹ ಪರಿಸ್ಥಿತಿ ನಿರ್ಮಾಣವಾಗುವುದನ್ನು ದಯಮಾಡಿ ನಾವು ಅರ್ಥ ಮಾಡಿಕೊಳ್ಳಬೇಕು. ಇದಕ್ಕೆ ಏನಾದರೊಂದು ಕಾನೂನನ್ನು ಮಾಡಬೇಕು. ನೋಡಿ, ಕಾರ್ಪೋರೇಷನ್ ಮರಾಠಿನಲ್ಲಿ ಬೇಕು ಎನ್ನುತ್ತಾರೆ. ಬಸ್‌ಗಳಲ್ಲಿ ನಾಮಫಲಕವನ್ನು ಏಕೆ ಮರಾಠಿಯಲ್ಲಿ ಹಾಕುತ್ತಾರೆ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕದಲ್ಲಿ ಕನ್ನಡ ಭಾಷೆಯೇ supreme, ಇಲ್ಲಿ ಕನ್ನಡವೇ ನಮ್ಮ ಮೊದಲ ಭಾಷೆ. ಮಹಾರಾಷ್ಟ್ರದಲ್ಲಿ ಹೀಗೆ ಹಾಕುತ್ತಾರೆಯೇ? ಮಹಾರಾಷ್ಟ್ರದಲ್ಲಿ ಹೀಗೆ ಇದೆಯೇ ಹೋಗಿ ನೋಡಿ. ನಮ್ಮಲ್ಲಿ ಬಸ್‌ಗಳು ಈ ರೀತಿ ಹೋಗುತ್ತಿದ್ದರೆ ನಾವೆಲ್ಲರೂ ಸುಮ್ಮನೆ ಕುಳಿತುಕೊಳ್ಳುತ್ತೇವೆ. ಅವರು ಬೇಕಾದ್ದನ್ನು ಮಾತನಾಡುತ್ತಾರೆ, ಕೆಟ್ಟದಾಗಿ ಮಾತನಾಡುತ್ತಾರೆ. ಈಗ ಎಂ.ಎಲ್.ಎಗಳು ಇಲ್ಲಿಗೆ ಬಂದಿದ್ದಾರೆ, ನಾನೊಂದು ಬೆಳಗಾಂ ನ Khanapur ಎಂಬ ಪಟ್ಟಣಕ್ಕೆ ಕನ್ನಡ ಮಾಧ್ಯಮದ ಹೈಸ್ಕೂಲ್ ಅನ್ನು ಕೊಟ್ಟಿದ್ದೆನು. ಅನ್ಯಾಯವಾಗಿ ಅದನ್ನು ತೆಗೆಸಿದರು, ಆದರೆ, ಅದರ ಬಗ್ಗೆ ಯಾರೊಬ್ಬರು ಸಹ ಸ್ಪಂದಿಸಲಿಲ್ಲ. ಇಲ್ಲಿ ಬಿ.ಇ.ಓ ಮತ್ತು ಡಿ.ಡಿ.ಪಿ.ಐಗಳು ಇದ್ದಾರೆ, ಅವರೂ ಸಹ ಇದರ ಬಗ್ಗೆ ಲಕ್ಷ್ಯ ಕೊಡುವುದಿಲ್ಲ. ನಾನು ನಿಪ್ಪಾಣಿಯಲ್ಲಿ 136 ಹೈಸ್ಕೂಲ್‌ಗಳನ್ನು ಕಡ್ಡಾಯವಾಗಿ ತೆಗೆಸಿದ್ದೇನೆ. 56 ಸರ್ಕಾರಿ ಜೂನಿಯರ್ ಕಾಲೇಜುಗಳನ್ನು ಸಹ ತೆಗೆಸಿದ್ದೇನೆ. ಏಕೆಂದರೆ, ಇದೊಂದು ಕರ್ನಾಟಕದ ಹೆಬ್ಬಾಗಿಲು. ಇಲ್ಲಿ ಇರುವಂಥ ಸೌಕರ್ಯ ಎಲ್ಲೂ ಇಲ್ಲ. ಅದಕ್ಕೆ ಇದು ಸುಧಾರಣೆ ಆಗದಿದ್ದರೆ, ಮಹಾರಾಷ್ಟ್ರದವರು ನಮಗೆ ಇನ್ನೂ ಬಹಳ ತೊಂದರೆ ಕೊಡುತ್ತಾರೆ. ಆ ಹಿನ್ನೆಲೆಯಲ್ಲಿ, ನಾನು ಈ ಮಾತನ್ನು ಹೇಳುತ್ತಿದ್ದೇನೆ. ಇಲ್ಲಿ ಜನರ ಮತಗಳೇ ಬಹಳ ಮುಖ್ಯ. ನಮ್ಮ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಸುಮಾರು 2 ಲಕ್ಷ ಜನ ಮರಾಠಿ ಜನ ಇದ್ದಾರೆ. ಆದ್ದರಿಂದ ನಾವು ಏನು ಮಾಡಬೇಕು, ಅವರನ್ನು ನಾವು please ಮಾಡಲೇಬೇಕಾಗುತ್ತದೆ ಎನ್ನುತ್ತಾರೆ. ಸೊಲ್ಲಾಪುರದಲ್ಲಿ ಶೇ.75 ರಿಂದ ಶೇ. 76 ರಷ್ಟು ಕನ್ನಡ ಮಾತನಾಡುವವರು ಇದ್ದಾರೆ, ಆದರೆ ಅಲ್ಲಿ ಆ ರೀತಿ ಏನೂ ಇಲ್ಲ. ಅವರಿಗೆ commitment ಇದೆ, ಆದರೆ ನಮಗೆ ಇಲ್ಲ. ಅದಕ್ಕೆ ನಾನು ಹೇಳುವುದೇನೆಂದರೆ, ನಾವು ಕೇವಲ ಸರ್ಕಾರವನ್ನು ಟೀಕೆ ಮಾಡುವುದಲ್ಲ. ತಾವು ನಮ್ಮೆಲ್ಲರ ಜೊತೆಯಲ್ಲಿ ಇದರ ಬಗ್ಗೆ ಚರ್ಚೆ ಮಾಡಬೇಕು.

ಉಪ ಸಭಾಪತಿಯವರು:– ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರೇ, ತಾವು ಸಮಯ ಆಗಿದೆ.

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:– ಮಾನ್ಯ ಸಭಾಪತಿಯವರೇ, ಇನ್ನೊಂದು 5–10 ನಿಮಿಷಗಳ ಕಾಲ ಮಾತನಾಡಲು ಅವಕಾಶ ಕೊಡಿ.

ಉಪ ಸಭಾಪತಿಯವರು:– ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಯವರೇ, ಈಗ ತಾವು ಮಾತನಾಡಿದ್ದು 40 ನಿಮಿಷ ಆಯಿತು.

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:– ಮಾನ್ಯ ಸಭಾಪತಿಯವರೇ, ಶ್ರೀ ಆರ್.ವಿ.ದೇಶಪಾಂಡೆಯವರು 25 ನಿಮಿಷ ಮಾತನಾಡಿದರು. ಅದಕ್ಕೆ ನಾನು ಏನು ಮಾಡಲಿ, ಆಯಿತು

ಇನ್ನು 5 ನಿಮಿಷ ಮಾತನಾಡುತ್ತೇನೆ. ಯಾರಾದರೂ ಸಚಿವರು ಮಾತನಾಡಲು ನಿಂತರೆ ನಾವು ಅವರಿಗೆ ಯೀಲ್ಡ್ ಆಗಬೇಕಾಗುತ್ತದೆ.

(ಮುಂದು.)

(1126)/21.11.2017/4.30/ಎಂ.ಎಂ/ಜಿ.ಆರ್

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:– ಮಾನ್ಯ ಸಭಾಪತಿಯವರೇ, ಮಾನ್ಯ ದೇಶಪಾಂಡೆಯವರು 25 ನಿಮಿಷಗಳ ಸಮಯವನ್ನು ತೆಗೆದುಕೊಂಡಿದ್ದರು. ನಾನು ಇನ್ನು ಐದು ನಿಮಿಷಗಳ ಕಾಲ ಮಾತನಾಡುತ್ತೇನೆ.

ಉಪಸಭಾಪತಿಯವರು:– ಮಾನ್ಯ ಹೊರಟ್ಟಿಯವರೆ, ಬಹಳ ಮಹತ್ವವಾದ ವಿಚಾರಗಳನ್ನು ಮಾತನಾಡುತ್ತಿದ್ದೀರಿ ಅದನ್ನು ಆದಷ್ಟು ಬೇಗ ಮುಗಿಸಿ.

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:– ಮಾನ್ಯ ಸಭಾಪತಿಯವರೇ, ಆಗಲಿ ಬೇಗನೆ ಮುಗಿಸುತ್ತೇನೆ. ಯಾರಾದರೂ ಸಚಿವರು ಮಾತನಾಡಿದರೆ ನಾವು yield ಆಗಬೇಕಾಗುತ್ತದೆ. ಜಿಲ್ಲಾಧಿಕಾರಿಗಳು, ಎಸ್.ಪಿ ಅಥವಾ ದೊಡ್ಡ ಅಧಿಕಾರಿಗಳಲ್ಲಿ ಎಷ್ಟು ಜನರು ಉತ್ತರ ಕರ್ನಾಟಕದವರಿರುವರು ತೋರಿಸಿ? ಏಕೆಂದರೆ, ಅಲ್ಲಿ ವಿದ್ಯಾಭ್ಯಾಸ ಮಾಡಲು ಮೂಲಭೂತ ಸೌಕರ್ಯಗಳೇ ಇಲ್ಲ. ಐ.ಎ.ಎಸ್., ಐ.ಪಿ.ಎಸ್., ಅಧಿಕಾರಿಗಳಿಲ್ಲ. ಹಳ್ಳಿಗಳಲ್ಲಿ ವಾಸ ಮಾಡುವವರಲ್ಲಿ ಕೆಲವರು ಕನ್ನಡ ಮಾಧ್ಯಮ ಶಾಲೆಗೆ ಮತ್ತೆ ಕೆಲವರು ಇಂಗ್ಲೀಷ್ ಮೀಡಿಯಂಗೆ ಶಾಲೆಗೆ ಹೋಗಿ ವಿದ್ಯಾಭ್ಯಾಸ ಮಾಡುತ್ತಾರೆ. ಸುಮಾರು ಐವತ್ತು ವರ್ಷಗಳಿಂದ ಇಲ್ಲಿನವರು ಐ.ಎ.ಎಸ್., ಐ.ಪಿ.ಎಸ್., ಅಧಿಕಾರಿಗಳಾದವರು ಶೇ.1ರಷ್ಟು ಮಾತ್ರ. ಒಂದು ದುರ್ದೈವದ ಸಂಗತಿಯೆಂದರೆ, ಕೆ.ಪಿ.ಎಸ್.ಸಿ., ಯಲ್ಲಿ ತಮಿಳುನಾಡು ಮತ್ತು ಆಂಧ್ರಪ್ರದೇಶದ ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ. ನಮ್ಮವರು ಆಗಿಲ್ಲ. ಏಕೆಂದರೆ, ನೀವು ಕನ್ನಡವನ್ನು ಕಡ್ಡಾಯ ಮಾಡಿಲ್ಲ. ಮಾನ್ಯ ಸಭಾನಾಯಕರೇ, ಕೆ.ಪಿ.ಎಸ್.ಸಿ ಸದಸ್ಯರುಗಳಲ್ಲಿ ಉತ್ತರ ಕರ್ನಾಟಕದವರು ಎಷ್ಟು ಜನರಿದ್ದಾರೆ? ಇದಕ್ಕೆ ತಾವು ಉತ್ತರ ಹೇಳಬೇಕು. ಕೆ.ಪಿ.ಎಸ್.ಸಿ., ಯಲ್ಲಿ ಜಾತಿವಾರು ಸದಸ್ಯರಿದ್ದಾರೆ. ಯಾವ್ಯಾವ ಜಾತಿಯ ಸದಸ್ಯರಿರುತ್ತಾರೆ ಅವರು ಆ ಜಾತಿಯ ಅಭ್ಯರ್ಥಿಗಳನ್ನು ಆಯ್ಕೆ ಮಾಡುತ್ತಾರೆ. ಲಿಂಗಾಯತ ಅಭ್ಯರ್ಥಿ ಇದ್ದರೆ, ಲಿಂಗಾಯತ ಸದಸ್ಯರಾಗಿರುವವರು ಆ ಅಭ್ಯರ್ಥಿಯನ್ನು ಸಂದರ್ಶನಕ್ಕೆ ಆಯ್ಕೆ ಮಾಡುತ್ತಾರೆ. ಆ ಅಭ್ಯರ್ಥಿಯು ಲಿಂಗಾಯತನಲ್ಲದಿದ್ದರೆ ಅವನಿಗೆ ನೌಕರಿ ಸಿಗುವುದಿಲ್ಲ. ಉದಾಹರಣೆಗೆ ಪರಿಶಿಷ್ಟ ಜಾತಿಯ ಅಭ್ಯರ್ಥಿ ಇದ್ದರೆ, ಪರಿಶಿಷ್ಟ ಜಾತಿಯ ಸದಸ್ಯರೇ ಅವನನ್ನು ಸಂದರ್ಶನಕ್ಕೆ ಆಯ್ಕೆ ಮಾಡುತ್ತಾರೆ, ಈ ರೀತಿಯ ಪದ್ಧತಿ ಇದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇಲ್ಲಿ ಉತ್ತರ ಕರ್ನಾಟಕದ ಸದಸ್ಯರೇ ಇಲ್ಲ. ಅಂದರೆ, ಗುಲ್ಬರ್ಗ ಅಥವಾ ಬೆಳಗಾವಿ ವಿಭಾಗ ಇರಬಹುದು, ಯಾವ ಸದಸ್ಯರು ಇದ್ದಾರೆ ಹೇಳಿ? ಎಲ್ಲರೂ ಬೆಂಗಳೂರು ಮತ್ತು ಮೈಸೂರಿನವರಾಗಿದ್ದಾರೆ. ಬೆಂಗಳೂರು-ಮೈಸೂರಿನಲ್ಲಿ 30 ವರ್ಷಗಳಿಂದ ಇರುವಂತಹ ಉತ್ತರ ಕರ್ನಾಟಕದವರನ್ನು ಉತ್ತರ ಕರ್ನಾಟಕದ ಕೋಟಾ ಅಡಿಯಲ್ಲಿ ಕೊಡುತ್ತಾರೆ. ಆತನು ಈ ಕಡೆ ಕಣ್ಣೆತ್ತಿಯೂ ನೋಡುವುದಿಲ್ಲ. ಇದು ಇಲ್ಲಿನ ಸಮಸ್ಯೆಯಾಗಿದೆ. 10-12 ಜನರಿದ್ದಾಗ ಒಬ್ಬರದ್ದು ಏನು ನಡೆಯುತ್ತದೆ? ತಮಗೆ ಬೇಕಾದ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳುತ್ತಾರೆ. ಈಗ ಹತ್ತು ಹಲವಾರು ಸಮಸ್ಯೆಗಳಿವೆ. ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ನಾವು ಎಲ್ಲಿಯವರೆಗೆ ಲಕ್ಷ್ಯ ಕೊಡುವುದಿಲ್ಲ, ಕಾಳಜಿ ವಹಿಸುವುದಿಲ್ಲ ಅಲ್ಲಿಯವರೆಗೂ ಹೀಗೆ ಆಗುತ್ತದೆ. ಕೆ.ಪಿ.ಎಸ್.ಸಿ., ಸಕ್ಕರೆ ಕಾರ್ಖಾನೆ, ಟೆಕ್ಸ್‌ಟೈಲ್ ಇತ್ಯಾದಿಗಳಲ್ಲಿ ಈ ರೀತಿ ಆಗುತ್ತದೆ. ಈ ಸುವರ್ಣ ಸೌಧದಲ್ಲಿ ಏನಾದರೂ ಮಾಡಿ ಇಂಜಿನಿಯರ್‌ರವರನ್ನು ಕೇಳಿ ಇದನ್ನು ಚೇಂಜ್ ಮಾಡಿ ಸುಮಾರು 7-10 ಕಛೇರಿಗಳು ಇಲ್ಲಿ ನಡೆಯುವಂತೆ ಮಾಡಿದರೆ ಇಷ್ಟು ಹಣವನ್ನು ಖರ್ಚು ಮಾಡಿ ನಿರ್ಮಿಸಿರುವುದಕ್ಕೆ ಸಾರ್ಥಕವಾಗುತ್ತದೆ. ಬೆಂಗಳೂರು ಎಂದರೆ ನಮಗೆಲ್ಲಾ ಅಡ್ಜಸ್ಟ್ ಆಗಿಬಿಡುತ್ತದೆ. ಏಕೆಂದರೆ, ಅಲ್ಲಿ ಎಲ್ಲಾ ಅನುಕೂಲತೆಗಳಿರುತ್ತವೆ. ಇಲ್ಲಿ 8-10 ದಿವಸ ಅಧಿವೇಶನ ನಡೆಸಲು 'ಅಪ್ಪಯ್ಯಣ್ಣ' ಎನ್ನುತ್ತಾರೆ. ಇಲ್ಲಿಗೆ ಬಂದ ಎಷ್ಟೋ ಜನರು ಆಸ್ಪತ್ರೆಗೆ ದಾಖಲಾಗುತ್ತಾರೆ. ಮಾನ್ಯ ಸದಸ್ಯರಾದ ಪುಟ್ಟಸ್ವಾಮಿಯವರು ಕೂಡ ಬಂದಿಲ್ಲ, ಅವರು ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿದ್ದಾರೆ. ಅಟ್‌ಲೀಸ್ಟ್ ಶಾಸಕರು ಮತ್ತು ಅಧಿಕಾರಿಗಳಿಗೆ ಆರಾಮವಾಗಿ 15 ದಿವಸ ಸದನವನ್ನು ನಡೆಸಲು ಒಳ್ಳೆಯ ವಾತಾವರಣವನ್ನು ನಿರ್ಮಾಣ ಮಾಡದಿದ್ದರೆ ಏನಾಗುತ್ತದೆ? ಊಟ ಮತ್ತು ವಸತಿಗೆ ಸಮಸ್ಯೆ ಮತ್ತು ನೀರಿನ ಸಮಸ್ಯೆ ಇದೆ. ಇಂತಹ ಸಮಸ್ಯೆಗಳಿಂದ ಬೆಳಗಾವಿಯಲ್ಲಿ ಅಧಿವೇಶನವೇ ಬೇಡ ಎನ್ನುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಹಿನ್ನೆಲೆಯಲ್ಲಿ ಸರಿಯಾದಂತಹ ವ್ಯವಸ್ಥೆಯನ್ನು ಮಾಡಿ 15-20 ದಿವಸಗಳ ಕಾಲ ಶಾಸನ ಸಭೆಯನ್ನು ನಡೆಸಿದರೆ ಚರ್ಚೆಗಳಾಗುತ್ತವೆ. ನಾವು ಎಷ್ಟರಮಟ್ಟಿಗೆ ಮಾಹಿತಿಗಳನ್ನು ಸಂಗ್ರಹಿಸಿದ್ದೇವೆ? ಎಷ್ಟರ ಮಟ್ಟಿಗೆ ಸರಿ ಇದೆ? ಎಷ್ಟರ ಮಟ್ಟಿಗೆ ತಪ್ಪಿದೆ? ಎಂಬ ಬಗ್ಗೆ ಚರ್ಚೆ ಮಾಡುತ್ತೇವೆ. ಆ ವಿಷಯ ಬೇರೆ. ಆದರೆ ಅದು ಬೆಳಕಿಗೆ ಬರುತ್ತದೆ. ಅದೇ ಬೆಂಗಳೂರಿನಲ್ಲಿ ಚರ್ಚೆ ಮಾಡಿದರೆ ಕೆಲವು ಬಾರಿ ಅಡಚಣೆಗಳಾದರೆ, ಅಲ್ಲಿಯೂ ಆಗುವುದಿಲ್ಲ.

ಬೆಂಗಳೂರಿನಲ್ಲಿ ರಾಜೀವ್ ಗಾಂಧಿ ವಿಶ್ವವಿದ್ಯಾನಿಲಯವಿದೆ. ಇಲ್ಲಿ ಟೆಕ್ನಿಕಲ್ ವಿಶ್ವವಿದ್ಯಾನಿಲಯವಿದೆ. ಟೆಕ್ನಿಕಲ್ ವಿಶ್ವವಿದ್ಯಾನಿಲಯದ ಬ್ರಾಂಚ್ ಎಲ್ಲಾ ಕಡೆಯೂ ಇವೆ. ಕೆ.ಪಿ.ಎಸ್.ಸಿ., ಬ್ರಾಂಚ್ ಅನ್ನು ಬೆಳಗಾವಿಯಲ್ಲೊಂದು ಹೈದರಾಬಾದ್-ಕರ್ನಾಟಕದ ಭಾಗದಲ್ಲೊಂದು ತೆರೆಯಲಿ, ಅದರಲ್ಲಿ ತಪ್ಪೇನಿದೆ? (ಈ ಹಂತದಲ್ಲಿ ಮಾನ್ಯ ಸದಸ್ಯರು ಪುಸ್ತಕವೊಂದನ್ನು ಪ್ರದರ್ಶಿಸಿದರು) ರಾಜ್ಯದಲ್ಲಿರುವ ಸಕ್ಕರೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾರ್ಖಾನೆಗಳಲ್ಲಿ ಸುಮಾರು 57 ಕಾರ್ಖಾನೆಗಳು ಇಲ್ಲಿದ್ದು, ಸುಮಾರು 11 ಕಾರ್ಖಾನೆಗಳು ಮಾತ್ರ ಬೆಂಗಳೂರಿನಲ್ಲಿದೆ. ಬೆಂಗಳೂರಿಗೆ ಸಕ್ಕರೆ ನಿರ್ದೇಶಕರ ಕಛೇರಿ ಏಕೆ ಬೇಕು? ಯಾರಾದರೂ ಒಬ್ಬ ಐ.ಎ.ಎಸ್., ಅಧಿಕಾರಿಯನ್ನು ಸಮಾಧಾನ ಮಾಡುವುದಕ್ಕೆ ಬೇಕಾಗಿದೆಯೇ? ಇಲ್ಲಿ ಕುಡಿಯುವುದಕ್ಕೆ ನೀರಿಲ್ಲ, ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಕಡತವನ್ನು ತೆರೆದು ನೋಡಿದರೆ, ಮಂಡ್ಯ ಜಿಲ್ಲೆಯಲ್ಲಿ ಜಾಸ್ತಿ ಇದೆ ಅದು ಬಿಟ್ಟರೆ ಈ ಭಾಗದಲ್ಲಿ ರೈತರ ಆತ್ಮಹತ್ಯೆ ಜಾಸ್ತಿ ಇದೆ. ಏಕೆಂದರೆ, ರೈತರಿಗೆ ಬೆಂಬಲ ಬೆಲೆ ಸಿಗುತ್ತಿಲ್ಲ. ಮತ್ತೊಂದು ದುರ್ದೈವದ ಸಂಗತಿಯನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಇಲ್ಲಿ ಎ.ಪಿ.ಎಂ.ಸಿ., ಗಳಿವೆ. ಎ.ಪಿ.ಎಂ.ಸಿ., ಗಳು ರೈತರ ಸಲುವಾಗಿ ಇವೆ. ಆದರೆ ಒಬ್ಬ ಎ.ಪಿ.ಎಂ.ಸಿ., ಸದಸ್ಯನೂ ಕೂಡ ರೈತರಿಗೆ ಸ್ಪಂದಿಸುವ ಕೆಲಸ ಮಾಡುವುದಿಲ್ಲ. ದಲ್ಲಾಳಿಗಳೇ ಎಲ್ಲವನ್ನೂ ಮಾಡುತ್ತಾರೆ. ಕೃಷಿ ಸಚಿವರು, ರೇಷ್ಮೆ ಸಚಿವರ್‍ಯಾರಾದರೂ ಎ.ಪಿ.ಎಂ.ಸಿ., ಗೆ ಬಂದರೆ ಪರಿಸ್ಥಿತಿ ಗೊತ್ತಾಗುತ್ತದೆ. ನಾವು ಕೂಡ ಬೆಳೆಯನ್ನು ಬೆಳೆಯುತ್ತೇವೆ. ಬೆಳೆಗಳನ್ನು ತರಬೇಕಾದರೆ ಅಲ್ಲಿಂದ ತರುವುದೇ ದೊಡ್ಡ ಕಷ್ಟ ತಂದ ನಂತರ ದಲ್ಲಾಳಿಗಳದ್ದೇ ಎಲ್ಲ ನಡೆಯುತ್ತದೆ. ರೈತ ಸಂತೆಗಳೆಂದು ಮಾಡಿದ್ದಾರೆ. ಇದು ಬಹಳ ಒಳ್ಳೆಯ ಕೆಲಸವಾಗಿದೆ. ಆಗ ಮಾನ್ಯ ಬಿ.ಎಸ್. ಪಾಟೀಲ ಸಾಸನೂರು ಸಚಿವರಾಗಿದ್ದರು ಅವರು ಎ.ಪಿ.ಎಂ.ಸಿ., ಅನ್ನು ಮಾಡಿದರು. ರೈತ ಸಂತೆಗೆ ಎಲ್ಲಾ ರೈತರೂ ಬೆಳೆಗಳನ್ನು ತರುತ್ತಿದ್ದರು ಆದರೆ ಅವರೆಲ್ಲರನ್ನೂ ಹೊಡೆದು ಬಡಿದು ಅಲ್ಲಿಗೆ ಬರದಂತೆ ಮಾಡಿ ರೈತ ಸಂತೆಗಳನ್ನು ಬಂದ್ ಮಾಡಿದರು.

ಉತ್ತರ ಕರ್ನಾಟಕದಲ್ಲಿ ಎರಡು ಸಮಸ್ಯೆಗಳಿವೆ. ಇಲ್ಲಿ ಮಳೆ ಹೆಚ್ಚಾದರೂ ಕಷ್ಟ, ಮಳೆ ಕಡಿಮೆಯಾದರೂ ಕಷ್ಟ. ನಾನು ಕೂಡ ರೈತನಾಗಿದ್ದೇನೆ. ಮಾನ್ಯ ಸಚಿವರಾದ ವಿನಯ ಕುಲಕರ್ಣಿಯವರು ಹೋದರು. ರೈತರಿಗೆ ಸರಿಯಾದ ಮಾರ್ಗದರ್ಶನಗಳನ್ನು ಮಾಡುವುದಿಲ್ಲ. ಇಲ್ಲಿಗೆ ಅಧಿಕಾರಿಗಳು ಬಂದರೆ, ವಾರದಲ್ಲಿ ಒಂದು ದಿವಸ ಇರುತ್ತಾರೆ, ಶುಕ್ರವಾರದ ದಿವಸ ರಾಣೆ ಬೆನ್ನೂರಿಗೆ ಪ್ರವಾಸ ಹೋಗುತ್ತಾರೆ, ಸೋಮವಾರದ ದಿನ ಮತ್ತೆ ಹಿರೇಕೆರೂರಿಗೆ ಹೋಗಿ ವಾಪಸ್ ಬರುತ್ತಾರೆ. ಹೀಗೆ ಇಲ್ಲಿಗೆ ಬಂದ ಯಾರೇ ಅಧಿಕಾರಿಗಳು ಅವರು Animal Husbandry Department, Agriculture Department ಅಧಿಕಾರಿ ಇರಬಹುದು ಯಾವ ಟಾಪ್ ಅಧಿಕಾರಿಯೇ ಇರಬಹುದು ಇವತ್ತಿಗೂ ಉತ್ತರ ಕರ್ನಾಟಕದಲ್ಲಿ ಕೇವಲ ಬೆರಳೆಣಿಕೆಯಷ್ಟು ಜನರು ಮಾತ್ರ ಇದ್ದಾರೆ. ಹೀಗಾಗಿ ಇದು ಸುಧಾರಣೆಯಾಗುತ್ತಿಲ್ಲ. ಅದಕ್ಕೆ ನಾನು ಹೇಳುವುದೇನೆಂದರೆ, ಸರ್ಕಾರ ಇದಕ್ಕೆ ಚಿಂತನೆಯನ್ನು ಮಾಡಬೇಕಾಗಿದೆ. ಹೈದರಾಬಾದ್ ಕರ್ನಾಟಕ ಇರಬಹುದು, ಬೆಳಗಾಂ ವಿಭಾಗ ಇರಬಹುದು, ಗುಲ್ಬರ್ಗ ವಿಭಾಗ ಇರಬಹುದು ಈ ವಿಭಾಗಗಳಿಗೆ ಕಲಂ 371 (ಜೆ) ಬಂದಿರುವುದರಿಂದ ಸ್ವಲ್ಪ ಪರವಾಗಿಲ್ಲ. ಆದರೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದು ಕೂಡ ಸರಿಯಾದ ರೀತಿಯಲ್ಲಿ ಇಂಪ್ಲಿಮೆಂಟ್ ಆಗಿಲ್ಲ. ಆದ್ದರಿಂದ ತಮ್ಮ ಮೂಲಕ ಸರ್ಕಾರಕ್ಕೆ ಕಳಕಳಿಯ ಮನವಿ ಮಾಡುವುದೇನೆಂದರೆ, ಉತ್ತರ ಕರ್ನಾಟಕ ಎಂದರೆ, ಗುಲ್ಬರ್ಗ ವಿಭಾಗ ಮತ್ತು ಬೆಳಗಾವಿ ವಿಭಾಗದಲ್ಲಿ ಏನಾದರೂ ಮಾಡಿ ಬ್ಯಾಲೆನ್ಸ್ ಆಗುವ ರೀತಿಯಲ್ಲಿ ಯೋಜನೆಯೊಂದನ್ನು ಹುಡುಕಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತಾ, ನನಗೆ ಇಷ್ಟು ಮಾತನಾಡಲು ಸಮಯ ಕೊಟ್ಟಿರುವುದು ಜಾಸ್ತಿಯಾಗಿದೆ ಇನ್ನೂ ಅನೇಕ ರೀತಿಯ ಸಮಸ್ಯೆಗಳಿವೆ ಅವನ್ನೆಲ್ಲಾ ಚರ್ಚೆ ಮಾಡಲು ಹೋಗುವುದಿಲ್ಲ. ಬೆಳಗಾವಿ ವಿಷಯದಲ್ಲಿ ಮಹಾಜನ ವರದಿ ಅಂತಿಮವಾದಾಗ . . .

ಶ್ರೀ ಕೃಷ್ಣ ಭೈರೇಗೌಡ (ಕೃಷಿ ಸಚಿವರು):– ಮಾನ್ಯ ಸಭಾಪತಿಯವರೇ, ಒಂದೇ ಒಂದು ನಿಮಿಷ ಮಾತನಾಡುತ್ತೇನೆ. ಜಾಸ್ತಿ ಸಮಯವನ್ನು ತೆಗೆದುಕೊಳ್ಳುವುದಿಲ್ಲ, ಬೇರೆ ಯಾವುದೇ ವಿಚಾರದ ಬಗ್ಗೆಯು ಪ್ರಸ್ತಾಪ ಮಾಡುವುದಿಲ್ಲ. ಆದರೆ ಕೃಷಿ ಬಗ್ಗೆ ಮಾತ್ರ ಮಾತನಾಡುತ್ತೇನೆ. ಇವತ್ತಿನ ದಿವಸ ಕರ್ನಾಟಕದಲ್ಲಿ ಕೃಷಿ ;

(ಗೊಂದಲ)

ಶ್ರೀ ಕೃಷ್ಣ ಭೈರೇಗೌಡ:– ಮಾನ್ಯ ಸಭಾಪತಿಯವರೇ, ಅವರ ಮಾತಿಗೆ ನಾನು ಉತ್ತರವನ್ನು ಹೇಳುತ್ತಿಲ್ಲ. ವಿಚಾರವನ್ನು ಹಂಚಿಕೊಳ್ಳುತ್ತಿದ್ದೇನೆ ಅಷ್ಟೇ. ವ್ಯವಸಾಯ ಕ್ಷೇತ್ರಕ್ಕೆ ಬಂದರೆ, ನಿಜವಾಗಿ ಕರ್ನಾಟಕದ ವ್ಯವಸಾಯದ ಹೃದಯ ಉತ್ತರ ಕರ್ನಾಟಕದಲ್ಲಿದೆ ಇದನ್ನು ತಿಳಿದುಕೊಳ್ಳಿ. ಈ ಭಾಗದಲ್ಲಿರುವಷ್ಟು ಕೃಷಿ ಚಟುವಟಿಕೆ, ಉತ್ಪಾದನೆ, ಉತ್ಪಾದಕತೆ, ತಂತ್ರಜ್ಞಾನ ಅಳವಡಿಕೆ ಎಲ್ಲಾ ವಿಚಾರವನ್ನು ನೋಡಿದಾಗ ಬಾಂಬೆ ಕರ್ನಾಟಕ ಆಗಿರಬಹುದು ಅಥವಾ ಹೈದರಾಬಾದ್ ಕರ್ನಾಟಕ ಆಗಿರಬಹುದು ಕೃಷಿಯನ್ನು ನಿಜವಾಗಿ ನೋಡಬೇಕೆಂದರೆ ಈ ಭಾಗಕ್ಕೆ ಬರಬೇಕು. ದಕ್ಷಿಣ ಕರ್ನಾಟಕದಲ್ಲಿಯೂ ಇದೆ, ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಕೃಷಿಯಲ್ಲಿ ಮಾತ್ರ ಇವತ್ತು ಉತ್ತರ ಕರ್ನಾಟಕ ಇಡೀ ರಾಜ್ಯದಲ್ಲಿಯೇ ಮುಂದೆ ಇದೆ. ನಮ್ಮ ಅನುದಾನವೂ ಅಷ್ಟೇ, ಅಧಿಕಾರಿಗಳೂ ಅಷ್ಟೇ. ವಿಜಯಪುರ ಜಿಲ್ಲೆಯಲ್ಲಿರುವಷ್ಟು ಕೃಷಿ ಇಲಾಖೆಯ ಅಧಿಕಾರಿಗಳು ಬೇರೆ ಯಾವ ಜಿಲ್ಲೆಯಲ್ಲಿಯೂ ಇಲ್ಲ ಮತ್ತು ಕೆಲವು ಅಧಿಕಾರಿಗಳು ಅಲ್ಲಿಗೇ ಹೋಗಬೇಕೆಂದು ಒತ್ತಡ ಹಾಕುತ್ತಾರೆ. ಕೃಷಿ ಇಲಾಖೆಯು ಒಂದು ಸಣ್ಣ ಇಲಾಖೆಯಾಗಿದೆ. ಇದರಲ್ಲಿ ಆಯವ್ಯಯ, ಅನುದಾನ ಬಹಳ ದೊಡ್ಡದಾಗಿಲ್ಲ. ಬೆಳಗಾವಿ ಜಿಲ್ಲೆಯೊಂದರ ಅನುದಾನವೇ ಸುಮಾರು 150 ಕೋಟಿಗಿಂತ ಹೆಚ್ಚು ಇದೆ. ನಮ್ಮ ಯೋಜನೆಗಳು ಎಲ್ಲಿ ಹೆಚ್ಚು ಉಪಯುಕ್ತವಾಗುತ್ತಿವೆ ಎಂಬುದನ್ನು ನೋಡಿದರೆ, ನಮ್ಮ ಇಲಾಖೆಯಲ್ಲಿರುವ ಅನೇಕ ಯೋಜನೆಗಳು ಉತ್ತರ ಕರ್ನಾಟಕದಲ್ಲಿಯೇ ಹೆಚ್ಚಾಗಿ ಉಪಯುಕ್ತವಾಗಿ ಉಪಯೋಗವಾಗುತ್ತಿವೆ ಹಾಗೂ ರೈತರಿಗೆ

ತಲುಪುತ್ತಿವೆ. ಬೇರೆ ಕ್ಷೇತ್ರಗಳು, ಕೈಗಾರಿಕೆ ಅದೆಲ್ಲಾ ತಾವು ಹೇಳುವುದು ನಿಜ ಇರಬಹುದು. ಆದರೆ ಕೃಷಿ ವಿಷಯಕ್ಕೆ ಬಂದಾಗ ಕೃಷಿಯನ್ನು ನೊಡಬೇಕಾದರೆ ಹೆಚ್ಚಾಗಿ ಉತ್ತರ ಕರ್ನಾಟಕದಲ್ಲಿಯೇ ಇದೆ. ಅನುದಾನವು ಕೂಡ ಹೆಚ್ಚಾಗಿ ಈ ಭಾಗದಲ್ಲಿಯೇ ಖರ್ಚಾಗುತ್ತಿದೆ. ಅದನ್ನು ರೈತರು ಉಪಯೋಗ ಮಾಡಿಕೊಂಡು ಕೃಷಿಯಲ್ಲಿ ಮುಂದುವರಿಯುತ್ತಿದ್ದಾರೆ. ತಮಗೆ ಗೊತ್ತಿರುವ ಹಾಗೆ ನೀರಾವರಿ ಯೋಜನೆಗಳು ಕೂಡ ಹೆಚ್ಚಾಗಿ ಈ ಭಾಗದಲ್ಲಿಯೇ ಅನುಷ್ಠಾನಗೊಳ್ಳುತ್ತವೆ. ನನ್ನ ಹೆಚ್ಚಿನ ಪ್ರವಾಸ ಕಾರ್ಯಕ್ರಮಗಳು ಕೂಡ ನಾಲ್ಕುವರೆ ವರ್ಷಗಳಿಂದ ಸುಮಾರು ಶೇ.70ರಷ್ಟು ಈ ಭಾಗದಲ್ಲಿಯೇ ಆಗಿದೆ. ಏಕೆಂದರೆ, ಇಲ್ಲಿನ ರೈತರ ಜೊತೆ ಮಾತನಾಡಲು ನಮಗೂ ಹೆಚ್ಚಿಗೆ ಖುಷಿಯಾಗುತ್ತದೆ. ಅದನ್ನು ಅವರು ಕೂಡ ಅಳವಡಿಸಿಕೊಳ್ಳುತ್ತಾರೆ. ಕೃಷಿ ಕ್ಷೇತ್ರದಲ್ಲಿ ಉತ್ತರ ಕರ್ನಾಟಕದ ಕೊಡುಗೆಯನ್ನು ರಾಜ್ಯ ಗುರುತಿಸಬೇಕು ಎನ್ನುವುದನ್ನಷ್ಟೇ ನಾನು ಹೇಳಬಯಸುತ್ತೇನೆ.

(ಮುಂದು . .

(1127)21-11-2017/4-40/ಕೆಹೆಚ್/ಜಿಆರ್

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ದುರ್ದೈವ ಸಂಗತಿಯೆಂದರೆ, ತಾಂತ್ರಿಕವಾಗಿ ಕೆಲಸ ಮಾಡುವಂತಹ ಜನರು ಏನಿದ್ದಾರೆ, ಇವರು ಸರಿಯಾದ ಮಾಹಿತಿಯನ್ನು ನೀಡುವುದಿಲ್ಲ. ನಾನು ಸಹ ವ್ಯವಸಾಯವನ್ನು ಮಾಡುತ್ತೇನೆ. ಮಾನ್ಯ ಸಚಿವರು ಸಹ ನನ್ನ ತೋಟವನ್ನು ನೋಡಿದ್ದಾರೆ. ನಮ್ಮ ತೋಟದಲ್ಲಿ ಪಶುಸಂಗೋಪನೆ, ಮೀನುಗಾರಿಕೆ, ತೋಟಗಾರಿಕೆ, ವ್ಯವಸಾಯ ಮತ್ತು ಇನ್ನಿತರ ಎಲ್ಲಾ ಕೆಲಸವನ್ನು ಮಾಡುತ್ತಿದ್ದೇವೆ. ಇಷ್ಟೆಲ್ಲ ಪ್ರಯತ್ನವನ್ನು ಮಾಡಿದರೂ ಸಹ ಇದಕ್ಕೆ ತುಂಬಾ ತೊಂದರೆಯಾಗಿದೆ. ಏಕೆಂದರೆ, ಇವತ್ತಿನ ದಿವಸ ಒಂದು ಆಕಳಿಗೆ ಅಥವಾ ಎಮ್ಮೆಗೆ ಏನಾದರೂ ತೊಂದರೆಯಾದರೆ, ಅದಕ್ಕೆ ಚಿಕಿತ್ಸೆ ಕೊಡಲು ವೈದ್ಯರು ಬರಬೇಕಾದರೆ ಕನಿಷ್ಟ ಪಕ್ಷ ಎರಡು ಗಂಟೆಗಳಾಗುತ್ತದೆ. ಇಲ್ಲಿ ಯಾವುದೇ ರೀತಿಯ ಕಮಿಟ್‌ಮೆಂಟ್‌ಗಳಿರುವುದಿಲ್ಲ. ನಾನು ಸಲಹೆ ಕೊಡುವುದೇನೆಂದರೆ, ಒಂದೊಂದು ಇಲಾಖೆಯನ್ನು ಮಾಡಿ, ನಮ್ಮ ರಾಜ್ಯದಲ್ಲಿ 34 ಮಂದಿ ಸಚಿವರುಗಳಿದ್ದಾರೆ. 34 ಮಂದಿ ಮಾನ್ಯ ಸಚಿವರೊಳಗೆ 26 ಮಂದಿ ಸಚಿವರುಗಳು ರಾಜ್ಯದ ಎಲ್ಲ ಜಿಲ್ಲೆಗಳಿಗೆ ಭೇಟಿ ಕೊಟ್ಟಿಲ್ಲ. ಉಳಿದ ಕೆಲವು ಸಚಿವರು ಭೇಟಿ ಕೊಟ್ಟು ಒಂದೊಂದು ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಹೋಗುತ್ತಾರೆ. ಅದಕ್ಕೆ ನಾನೇನು ಹೇಳುತ್ತೇನೆಂದರೆ, ಎಲ್ಲಾ ಮಂತ್ರಿಗಳು ಎಲ್ಲಾ ಜಿಲ್ಲೆಗಳಿಗೆ ಪ್ರವಾಸವನ್ನು ಮಾಡಬೇಕು. ನಮ್ಮ ರಾಜ್ಯದಲ್ಲಿ ವ್ಯವಸಾಯದಲ್ಲಿ ನಷ್ಟ ಆಗುತ್ತಿದೆ. ಅದನ್ನು ಯಾವ ರೀತಿಯಲ್ಲಿ ತಡೆಯಬೇಕು ಎನ್ನುವುದರ ಬಗ್ಗೆ ಯೋಚಿಸಬೇಕು. ಸರ್ಕಾರದಿಂದ ವ್ಯವಸಾಯಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಲಕರಣೆಗಳನ್ನು ಕೊಡುವ ಕೆಲಸವನ್ನು ಮಾಡಲಾಗುತ್ತಿದೆ. ಅದರಲ್ಲಿ ಯಾವ ರೀತಿಯಲ್ಲಿ ಭ್ರಷ್ಟಚಾರವಾಗುತ್ತಿದೆ ಎಂದು ನೋಡುತ್ತಿದ್ದಾರೆಯೇ? ಮಾನ್ಯ ಸಚಿವರು ಇದರಲ್ಲಿ ಬಹಳಷ್ಟು ಕೆಲಸಗಳನ್ನು ಮಾಡಿದ್ದಾರೆ. ಅದಕ್ಕೆ ನಾನೇನು ಅವರ ಬಗ್ಗೆ ಹೇಳುವುದಕ್ಕೆ ಸಾಧ್ಯವಿಲ್ಲ. ಕೃಷಿಗೆ ಸಂಬಂಧಿಸಿದಂತೆ ಸಾಕಷ್ಟು ಪ್ರಯತ್ನಗಳನ್ನು ಮಾಡಿದ್ದಾರೆ. ಯಂತ್ರೋಪಕರಣಗಳನ್ನು ಕೊಡುವ ಹಾಗೆ ಮಾಡಬೇಕು. ನಮ್ಮೆಲ್ಲ ರಾಜಕಾರಣಿಗಳು ಇವರೇ ಯಾರಾದರೂ ಹೆಸರಿನೊಳಗೆ ಇವರೇ ಟೆಂಡರ್ ಕರೆದು ಇವರೇ ಯಂತ್ರೋಪಕರಣಗಳನ್ನು ತೆಗೆದುಕೊಳ್ಳುವುದು ಇದೆ. ಇದಕ್ಕೆ ಶೇಕಡ ೨೦ ರಷ್ಟು ನಡೆಯುತ್ತಿದೆ. ಯಂತ್ರೋಪಕರಣಗಳನ್ನು ರೈತರಿಗೆ ಕೊಡುವುದರಲ್ಲಿಯೂ ನಮಗೆ ಮಾನವೀಯತೆ ಎಂಬುವುದೇ ಇಲ್ಲ. ಒಬ್ಬ ರೈತ ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತೇನೆ. ಇಂತಹ ಪರಿಸ್ಥಿತಿ ಬೇರೆಯವರಿಗೆ ಬರಬಾರದೆಂದು ಎಲ್ಲರೂ ಸೇರಿ ಸರಿಪಡಿಸಬೇಕೆಂಬ ಮನೋಭಾವನೆ ನಮಗಿಲ್ಲ. ರೈತರಿಗೆ ವ್ಯವಸಾಯಕ್ಕೆ ಬೇಕಾದ ಸಾಮಗ್ರಿಗಳನ್ನು ಕೊಡಬೇಕೆಂದು 20 ರೂಪಾಯಿ ಖರ್ಚು ಆಗುವ ಜಾಗದಲ್ಲಿ ೮೦ ರೂಪಾಯಿ ಖರ್ಚನ್ನು ಹಾಕುತ್ತಾರೆ. ಈ ರೀತಿಯಾಗಿ ಮಾಡುತ್ತಾರೆ. ಇದನ್ನು ಸರಿಪಡಿಸುವುದಕ್ಕೆ ಒಬ್ಬ ಮಂತ್ರಿಗಳಿಲ್ಲ, 10 ಮಂದಿ ಮಂತ್ರಿಗಳು ಸೇರಿ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದರೆ ಸರಿಯಾಗುತ್ತದೆ ಎಂಬ ಮಾತನ್ನು ಹೇಳಿ, ಇವತ್ತಿನ ದಿವಸ ಉತ್ತರ ಕರ್ನಾಟಕದಲ್ಲಿ ೯೬ ವಿಧಾನಸಭಾ ಕ್ಷೇತ್ರಗಳು ಇವೆ. ಅಂದರೆ ಗುಲ್ಬರ್ಗಾ, ಬೆಳಗಾವಿ ಜಿಲ್ಲೆಯಲ್ಲಿ ಸರಾಸರಿ ಅರ್ಧ ಭಾಗ ಜನರು ಇಲ್ಲಿ ಇದ್ದಾರೆ. ಅರ್ಧ ಭಾಗದ ಜನರು ಇದ್ದಾಗ ಅದನ್ನು ಸುಧಾರಣೆ ಮಾಡುವುದಕ್ಕೆ ಆಗುವುದಿಲ್ಲವೇ? ಕೋಟಿ ಕೋಟಿ ರೂಪಾಯಿಗಳ ಹಣವನ್ನು ಖರ್ಚು ಮಾಡಿದ್ದೇವೆಂದು ಮಾನ್ಯ ಸಚಿವರು ಹೇಳಿದರು. ಅದನ್ನು ನಾನು ಇಲ್ಲವೆಂದು ಹೇಳುವುದಿಲ್ಲ. ಸರ್ಕಾರ discriminate ಮಾಡಿತ್ತು ಎಂದು ಸಹ ಹೇಳುವುದಿಲ್ಲ. ಹಳೆಯ ಮೈಸೂರು ಭಾಗದಲ್ಲಿ ಸದುಪಯೋಗವಾಗುತ್ತದೆ. ಉತ್ತರ ಕರ್ನಾಟಕದಲ್ಲಿ ಆ ರೀತಿಯಲ್ಲಿ ಸದುಪಯೋಗವಾಗುವುದಿಲ್ಲ. ನಿಮ್ಮಲ್ಲಿ ಯಾರಾದರೂ ಮಂಡ್ಯ ಜಿಲ್ಲೆಗೆ ಹೋದರೆ, ರೈತರು ಅಧಿಕಾರಿಗಳನ್ನು ಶರ್ಟ್ ಹಿಡಿದುಕೊಂಡು ಕೇಳುತ್ತಾರೆ. ಆದರೆ ಇಲ್ಲಿ ಆ ರೀತಿಯಲ್ಲಿ ಇಲ್ಲ. ನಾನು ಇನ್ನು ಒಂದು ಮಾತನ್ನು ಹೇಳುತ್ತೇನೆ. ರೈತರೇ ಹೋಗಿ ಅಧಿಕಾರಿಗಳಿಗೆ 2 ಸಾವಿರ ರೂಪಾಯಿಗಳನ್ನು ತೆಗೆದುಕೊಳ್ಳಿ ಎಂದು ಕೊಡುತ್ತಾರೆ. ಅಂದರೆ ಅವರನ್ನು please ಮಾಡುವುದಕ್ಕೆ ಹೊರಟು ಬಿಟ್ಟಿದೆ. ಅಂತಹ ಮನೋಭಾವನೆ ನಮ್ಮ ರೈತರಲ್ಲಿ ಬೆಳೆದು ಬಿಟ್ಟಿದೆ. ಅದು ಏನೋ ಇರಲಿ, ಒಟ್ಟಾರೆಯಾಗಿ ಏನೆಂದರೆ, ಇವತ್ತಿನ ದಿವಸ ನನಗೆ ಬಹಳ ಅಭಿಮಾನ ಮತ್ತು ಆನಂದವಾಗುತ್ತಿದೆ. ಉತ್ತರ ಕರ್ನಾಟಕದ ಬಗ್ಗೆ ಚರ್ಚೆ ಮಾಡುವುದಕ್ಕೆ ಅನೇಕ ಸದಸ್ಯರು ಈ ಸದನದಲ್ಲಿ ಇದ್ದಾರೆ. ಇದರ ಬಗ್ಗೆ ಮಾತನಾಡಲು ನನಗೆ ಸಮಯಾವಕಾಶವನ್ನು ಕೊಟ್ಟಿದ್ದೀರಿ. ಇನ್ನು ಹೆಚ್ಚಾಗಿ 5 ರಿಂದ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

10 ನಿಮಿಷಗಳ ಕಾಲಾವಕಾಶವನ್ನು ತೆಗೆದುಕೊಂಡಿದ್ದೇನೆ. ತಮ್ಮಗೆಲ್ಲ ಧನ್ಯವಾದಗಳನ್ನು ಆರ್ಪಿಸಿ. ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ.ಎಂ. ಇಬ್ರಾಹಿಂ (ವಿಧಾನಸಭಾ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಮಾತನಾಡಲು ಸಮಯವನ್ನು ಕೊಟ್ಟಿರುವುದಕ್ಕೆ ತಮಗೆ ಧನ್ಯವಾದಗಳನ್ನು ತಿಳಿಸಿ, ಇವತ್ತಿನ ದಿವಸ 30 ವರ್ಷದ ನಂತರ ಈ ಸದನದಲ್ಲಿ ನಾನು ಭಾಷಣವನ್ನು ಮಾಡುತ್ತಿದ್ದೇನೆ. ನನಗೆ ಒಂದು ಸಂತೋಷವೇನೆಂದರೆ, ಇದು ಎಲ್ಲರಿಗೂ ಗೊತ್ತಿದೆಯೋ, ಇಲ್ಲವೋ ಗೊತ್ತಿಲ್ಲ. ಬಾಂಬೆ–ಕರ್ನಾಟಕ ನನ್ನ ಜನ್ಮ ಭೂಮಿ. ರಾಣಿಬೆನ್ನೂರಿನ ಐರಣಿ ಗ್ರಾಮದಲ್ಲಿ ಹುಟ್ಟಿದವನು. ಇವತ್ತಿನ ದಿವಸ ಮಾನ್ಯ ಸದಸ್ಯರಾದ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಯವರು ಬಹಳ ವಿಸ್ತಾರವಾಗಿ ಮಾತನಾಡಿದ್ದಾರೆ.

"ಒಲವಿಲ್ಲದ ಪೂಜೆ, ನೇಹವಿಲ್ಲದ ಮಾಟ: ಆ ಪೂಜೆಯು, ಆ ಮಾಟವು ಚಿತ್ರದೊಳಗಿನ ರೂಹು ಕಾಣಿರಣ್ಣಾ, ಚಿತ್ರದ ಕಬ್ಬು ಕಾಣಿರಣ್ಣಾ, ಅಪ್ಪಿದಡೆ ಸುಖವಿಲ್ಲ, ಮೆಲಿದಡೆ ರುಚಿ ಇಲ್ಲ. ಕೂಡಲ ಸಂಗಮ ದೇವಾ" ಎಂದು ಬಸವಣ್ಣನವರು ಒಂದು ಮಾತನ್ನು ಹೇಳಿದ್ದಾರೆ. 60 ವರ್ಷದಿಂದ ಉತ್ತರ ಕರ್ನಾಟಕ ಭಾಗಕ್ಕೆ ಏನು ಒಲವನ್ನು ತೋರಬೇಕಾಗಿತ್ತು. ಆ ಒಲವು ಸಿಗಲಿಲ್ಲ ಎನ್ನುವಂತಹದ್ದು, ಇಲ್ಲಿರುವಂತಹ ಜನರ ನೋವು. ಈ ಭಾಗ ತುಂಬಾ ಪವಿತ್ರವಾದ ಭೂಮಿ. ಭಕ್ತ ಭಂಡಾರಿ ಬಸವಣ್ಣನವರ ಜನ್ಮ ನಾಡು, ಬಸವಣ್ಣನವರ ಕರ್ಮ ಭೂಮಿ ಇದು. ಹೈದರಾಬಾದ್–ಕರ್ನಾಟಕ ಕರ್ಮ ಭೂಮಿ, ಬಾಂಬೆ–ಕರ್ನಾಟಕ ಜನ್ಮ ಭೂಮಿ. 800 ವರ್ಷಗಳಿಂದ ಜನರು ಅದೇ ಆದರ್ಶದಲ್ಲಿ ಇದ್ದಾರೆ. ಒಂದೇ ಭಾಷೆ, ಒಂದೇ ಜಾತಿ, ಸಮಗಾರ ಅರಳಯ್ಯ, ಮಾದರ ಚೆನ್ನಯ್ಯ, ಅವನಮ್ಮ ಅಣ್ಣಯ್ಯ, ಓಹೋ ಎಂದು ಕರೆಯಿರಿ, ಕೂಡಲ ಸಂಗಯ್ಯ ಎಂದು ಹೇಳಿ ಕೂಗಿದಂತಹ ನಾಡು ಇದು. ಇವತ್ತಿನ ದಿವಸ 3 ಗಂಟೆಗಳ ಕಾಲ ಚರ್ಚೆ ಮಾಡಿದರೆ ಸಮಸ್ಯೆ ಪರಿಹಾರವಾಗುವುದಿಲ್ಲ. ಇದರ ಬಗ್ಗೆ ಸುಮಾರು ಹತ್ತು ದಿವಸಗಳ ಕಾಲ ಚರ್ಚೆ ಮಾಡಿದರೂ ಕೂಡ ಚರ್ಚೆ ಮುಗಿಯುವುದಿಲ್ಲ. ನಾನು ಇದರ ಬಗ್ಗೆ ಹೆಚ್ಚು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಒಂದು ಸರ್ಕಾರದ ಗಮನಕ್ಕೆ ತರುವುದೇನೆಂದರೆ, ಯೋಜನಾ ಆಯೋಗದ ಉಪಾಧ್ಯಕ್ಷನಾಗಿ ನನಗೆ ಬಂದಿರುವಂತಹ ಅನುಭವವೆಂದರೆ ಡಾ॥ ನಂಜುಂಡಪ್ಪನವರು ಕೊಟ್ಟಿರುವಂತಹ ವರದಿಯನ್ನು ನಾನು ಆಳವಾಗಿ ಅಭ್ಯಾಸ ಮಾಡಿದ ಮೇಲೆ, ನಾನೊಂದು ಸೂಚನೆ ಕೊಟ್ಟಿದ್ದೇನೆ. ನೀವು ಯಾವ ರೀತಿ Hyderabad Karnataka Region Development Board (HKRDB) ಎಂದು ಮಾಡಿದ್ದೀರೋ, ಬಾಂಬೆ–ಕರ್ನಾಟಕದ ಆರು ಜಿಲ್ಲೆಗೂ ಕೂಡ ಡೆವಲಪ್‌ಮೆಂಟ್ ಬೋರ್ಡ್ ಮಾಡುವ ಬಗ್ಗೆ ಇವತ್ತಿನ ದಿವಸ ಇದರ ಬಗ್ಗೆ ವಿಚಾರ ಮಾಡಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎರಡನೆಯದು, ಇವತ್ತಿನ ದಿವಸ ಕೃಷಿಯಲ್ಲಿ ಮನೆ ಮಂದಿಯೆಲ್ಲ ಅಂದರೆ ಗಂಡ, ಹೆಂಡತಿ, ಮಕ್ಕಳು ಎಲ್ಲರೂ ಸಹ ಕೆಲಸ ಮಾಡುತ್ತಾರೆ. ಈ ಭಾಗದ ಜನ ಶೋಕಿ ಮಾಡುವಂತಹ ಜನರಲ್ಲ ಎಂದು ನೀವು ನೋಡಿರಬಹುದು. ಒಂದು ಧೋತಿ ಪಂಚೆ, ಜುಬ್ಬ, ತಲೆಗೊಂದು ಪೆಟ್ಟಿಗೆ ಇದನ್ನು ಬಿಟ್ಟರೆ ಕೋಟು, ಪ್ಯಾಂಟು, ಸೂಟು, ಬೂಟು ಹಾಕುವಂತಹವರ ಸಂಖ್ಯೆ ಇಲ್ಲಿ ತೀರಾ ಕಡಿಮೆ. ಏಕೆಂದರೆ ಕೃಷಿವೊಂದನ್ನು ಬಿಟ್ಟರೆ, ಅವರಿಗೆ ಬೇರೆ ಯಾವುದೇ ವಿಧವಾದ ವರಮಾನ ಈ ಭಾಗದ ಜನರಿಗೆ ಇಲ್ಲ. ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರನ್ನು ನಾನು ಅಭಿನಂದಿಸುತ್ತೇನೆ. ಇವತ್ತಿನ ದಿವಸ ಈ ಸರ್ಕಾರ ಬಂದ ಮೇಲೆ ನೀರಾವರಿಗಾಗಿ ೫೦,೦೦೦ ಕೋಟಿ ರೂಪಾಯಿಕ್ಕಿಂತ ಹೆಚ್ಚಿನ ಮೊತ್ತವನ್ನು ಈ ಭಾಗಕ್ಕೆ ಕೊಟ್ಟಿದ್ದಾರೆ. ಆಲಮಟ್ಟಿ ಜಲಾಶಯವನ್ನು ಏನಾದರೂ ಮಾಡಿ 4 ಅಡಿ ಎತ್ತರ ಮಾಡಿ, ಆ ನೀರನ್ನು ಸರಿಯಾಗಿ ಉಪಯೋಗ ಮಾಡಿಕೊಂಡರೆ ಅನುಕೂಲವಾಗುತ್ತದೆ. ಹಿಂದೆ ಶ್ರೀ ಹೆಚ್.ಡಿ.ದೇವೇಗೌಡ ರವರು ಪ್ರಧಾನ ಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ ಶ್ರೀ ಚಂದ್ರಬಾಬು ನಾಯ್ಡು ರವರ ಜೊತೆಗೆ ದೊಡ್ಡ ಗಲಾಟೆಯಾಯಿತು. ಶ್ರೀ ಚಂದ್ರಬಾಬು ನಾಯ್ಡು ರವರು ನನ್ನ ಬೆಂಬಲವನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ ಎಂದು ಕುಳಿತುಕೊಂಡರು. ಆಗ ಶ್ರೀ ಶರದ್ ಯಾದವ್ ಎಂದು ಇದ್ದವರು, ಶ್ರೀ ಹೆಚ್.ಡಿ.ದೇವೇಗೌಡರು ನೀರಿಗಾಗಿ ಏಕೆ ಇಷ್ಟು ದೊಡ್ಡ ಜಗಳ ಮಾಡುತ್ತೀರಿ, ಬೇಡ ಎಂದು ಅವರು ಹೇಳಿದರು. ಆದರೆ ಇಲ್ಲ, ನಾವು ಗೇಟು ತೆಗೆಯುತ್ತೇವೆ. ನೀರು ಏನು ಬರುತ್ತದೋ ಅದನ್ನು ಉಪಯೋಗಿಸಿಕೊಂಡು, ವಿದ್ಯುಚ್ಛಕ್ತಿ ಉತ್ಪಾದನೆಗೆ ಅಷ್ಟೇ ನೀರನ್ನು ನಿಮಗೆ ಆದರೆ ಕೊಡುತ್ತೇವೆ ಎಂದು ಹೇಳಿದರೂ ಕೂಡ ಆಗ ಅವರು ಒಪ್ಪಿಗೆಯನ್ನು ಸೂಚಿಸಲಿಲ್ಲ. ಇವತ್ತಿನ ದಿವಸ ನಾವು ಪೂರ್ಣವಾಗಿ "ಕೃಷಿತೋ ನಾಸ್ತಿ ದುರ್ಭಿಕ್ಷಃ, ಧರ್ಮತೋ ನಾಸ್ತಿ ಪಾಪ ನಾಶಃ" ಇದು ನಮ್ಮ ಸಂಸ್ಕೃತಿಯಾಗಿದೆ. ಇವತ್ತಿನ ದಿವಸ ಈ ಭಾಗದಲ್ಲಿ ಕೃಷಿಗೆ, ತೋಟಗಾರಿಕೆಯಲ್ಲಿ ಬೆಳೆಯುತ್ತಿದ್ದೇವೋ, ಕೃಷಿಯಲ್ಲಿ ಈ ಭಾಗದ ಜನರು ಬೆಳೆಯುತ್ತಿದ್ದಾರೆ. ಆದರೆ ಅವರಿಗೆ ಸರಿಯಾದ ದರ ಸಿಗುತ್ತಿಲ್ಲ. ಅದಕ್ಕೆ ತೋಟಗಾರಿಕೆ ಇಲಾಖೆಯವರು ಕೋಲ್ಡ್‌ಸ್ಟೋರೇಜ್‌ಗಳನ್ನು ತಾಲ್ಲೂಕಿಗೆ ಒಂದರಂತೆ ಸರ್ಕಾರಿ ಕೋಲ್ಡ್ ಸ್ಟೋರೇಜ್‌ಗಳನ್ನು ಮತ್ತು ಅದರಲ್ಲಿ ಬೆಳೆಯುವಂತಹ ಹಣ್ಣು ಏನಿದೆ, ಆ ಹಣ್ಣಿನ ಉತ್ಪಾದನೆಯನ್ನು ಇವತ್ತಿನ ದಿವಸ ದಾಳಿಂಬೆ ಹಣ್ಣು ಏನಿದೆ, ಇದರಿಂದ ಜ್ಯೂಸ್ ಮಾಡಿ ಟೆಟ್ರಾ ಪ್ಯಾಕ್ ನಲ್ಲಿ ಅದನ್ನು ಪ್ಯಾಕ್ ಮಾಡಿ, ರೈತರ ಸಹಕಾರ ಸಂಘದಿಂದ ಕೋ-ಆಪರೇಟಿವ್ ಶುಗರ್ ಫ್ಯಾಕ್ಟರಿಗಳು ಆಗಿವೆಯೋ? ತೋಟಗಾರಿಕೆಯಲ್ಲೂ ಕೂಡ ಶುಗರ್ ಫ್ಯಾಕ್ಟರಿಗಳನ್ನು ಮಾಡಿ, ಇವತ್ತಿನ ದಿವಸ ಈ ಭಾಗದಲ್ಲಿ ದಾಳಿಂಬೆ ಹಣ್ಣು, ನಿಂಬೆ ಹಣ್ಣು ಅತೀ ಉತ್ತಮವಾಗಿ ಬೆಳೆಯುವಂತಹ ಕೆಲಸವಾಗಿದೆ. ಮೆಕ್ಕೆ ಜೋಳ ಇದೆ. ಆ ಮೆಕ್ಕೆ ಜೋಳದಿಂದ ಬರುವಂತಹ byproduct ಅನ್ನು ಇವತ್ತಿನ ದಿವಸ ಅದನ್ನು

ತಿದ್ದುಪಡಿಯಾಗದ ಪ್ರತಿ. ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ವೈಜ್ಞಾನಿಕವಾಗಿ ಮಾಡಿ, ಹೊರ ದೇಶಕ್ಕೆ ಮಾರಿದರೆ, ಖಂಡಿತವಾಗಿಯೂ ಇಲ್ಲಿರುವಂತಹ ರೈತರಿಗೆ industries ಗಳೂ ಆಗುತ್ತದೆ ಮತ್ತು ಉದ್ಯೋಗವು ಸಿಗುತ್ತದೆ.

ಮೂರನೆಯದು, ಹೈನುಗಾರಿಕೆ ಬಗ್ಗೆ ಹೇಳುತ್ತೇನೆ. ಇವತ್ತಿನ ದಿವಸ ಉತ್ತಮವಾದ ಹಾಲಿನಿಂದ ಹುಬ್ಬಳ್ಳಿ, ಧಾರವಾಡ, ಬೆಳಗಾವಿ ಜಿಲ್ಲೆಗಳಲ್ಲಿ ಮಿಶ್ರಾ ಎಂದು ಹೇಳಿ ಪೇಡಾವನ್ನು ಮಾಡುವುದಕ್ಕೆ ಬಂದ. ಇವನಿಗೆ ಹಳೇ ಮೈಸೂರಿನ ಕಡೆ ಸಿಗುವ ಹಾಲಿನಲ್ಲಿ ಪೇಡಾ ಮಾಡುವುದಕ್ಕೆ ಬರುವುದಿಲ್ಲ. ಈ ಜಿಲ್ಲೆಗಳಿರುವಂತಹ ಎಮ್ಮೆಯ ಹಾಲಿನ ಗುಣ ಏನಿದೆ ಮತ್ತು ಮೊಸರಿನ ಗುಣ ಏನಿದೆ, ಇದು ಬಾರೀ ಶೇಷ್ಠವಾಗಿರತಕ್ಕದ್ದು, ಇದನ್ನು byproduct ಅನ್ನು ಬೆಂಗಳೂರಿನಲ್ಲಿ ಯಾವ ರೀತಿ ಕೆ.ಎಂ.ಎಫ್., ಡೈರಿಯವರು ಮಾಡಿದ್ದಾರೋ, ಅದೇ ರೀತಿ ಉತ್ತರ ಕರ್ನಾಟಕದಲ್ಲೂ ಕೂಡ ಬಹುಶಃ byproduct ಅನ್ನು ಮಾಡುವುದಕ್ಕೆ ಒಂದು industry ಪ್ರಾರಂಭ ಮಾಡುವುದಕ್ಕೆ ಸಾಧ್ಯವೇ ಎನ್ನುವುದು ನನ್ನ ಪ್ರಶ್ನೆಯಾಗಿದೆ.

ನಾಲ್ಕನೆಯದು, ಮಾನ್ಯ ಕೃಷಿ ಸಚಿವರಿಗೆ ಹೇಳುವುದು ಇಷ್ಟೆ. ಪ್ರತಿಯೊಂದು ಗ್ರಾಮದಲ್ಲೂ ಅನೇಕ ಜನ ಹುಡುಗರು ಈ ಭಾಗದಲ್ಲಿ ಏನಿದೆ ಎಂದರೆ, ತೋಟಗಾರಿಕೆ ವಿಶ್ವವಿದ್ಯಾನಿಲಯದಲ್ಲಿ ಡಿಪ್ಲೋಮಾ ಕೋರ್ಸ್‌ಗಳನ್ನು ಮಾಡಿಕೊಂಡಿದ್ದಾರೆ. ಒಂದೊಂದು ಹಳ್ಳಿಗೆ ಒಬ್ಬೊಬ್ಬ ಹುಡುಗರನ್ನು ತೆಗೆದುಕೊಂಡು, ಅವನಿಗೆ 15 ರಿಂದ 20 ಸಾವಿರ ರೂಪಾಯಿಗಳ ಸಂಬಳವನ್ನು ಕೊಟ್ಟರೆ, ಒಬ್ಬ ಹುಡುಗ ಹಳ್ಳಿಯಲ್ಲೇ ಇರಬೇಕು. ಅವನು ಅಲ್ಲಿರುವಂತಹ ಮಣ್ಣು ಪರೀಕ್ಷೆ, ಅಲ್ಲಿರುವಂತಹ ರೈತರಿಗೆ ಸಲಹೆ, ಅಲ್ಲಿರುವಂತಹ ಪ್ರತಿಯೊಂದು ರೈತರಿಗೆ ಜ್ಞಾನ ಇರುತ್ತದೆ. ಅವನು ಆ ರೈತನನ್ನು ತಯಾರು ಮಾಡಿದರೆ, ಈ ಭೂಮಿಯಲ್ಲಿ ಬಂಗಾರ ಬೆಳೆಯಬಹುದು.

(ಮುಂದು)

(1128)21-11-2017/4:50/ಎಸ್‌ಪಿಆರ್/ಎಂಡಿ

ಶ್ರೀ ಸಿ.ಎಂ.ಇಬ್ರಾಹಿಂ(ಮುಂದು):-

ನಮ್ಮ ಭೂಮಿಯನ್ನು ಪವಿತ್ರವಾದ ಸಗರ್ ನಾಡು ಎಂದು ಹೇಳುತ್ತಾರೆ. ಸ್ವಲ್ಪ ಮಳೆಯಾದರೂ ಕೂಡ ಬೆಳೆ ಬೆಳೆಯಲು ಅನುಕೂಲವಾಗುತ್ತದೆ. ಈ ಭೂಮಿಯಲ್ಲಿರುವ ಸಕ್ಕರೆಯ ಅಂಶವನ್ನು ಗಮನಿಸಿದಾಗ, ಎಲ್ಲಾ ಕಡೆಗಳಲ್ಲೂ ಶೇಕಡಾ 8 ರಷ್ಟು ಇಳುವರಿ ಬಂದರೆ, ಉತ್ತರ ಕರ್ನಾಟಕ ಭಾಗದ ಬೆಳಗಾವಿ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ಶೇಕಡಾ 11 ರಿಂದ 12 ರ ವರೆಗೆ ಇಳುವರಿ ಬರುತ್ತದೆ. ಸಕ್ಕರೆ ಕಾರ್ಖಾನೆಗಳ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಚಾರದಲ್ಲಿ ದಿವಂಗತ ಅಪ್ಪಣ್ಣಗೌಡ ಪಾಟೀಲ್ ರವರು ಮಹಾ ಪುಣ್ಯಾತ್ಮರಾಗಿದ್ದರು. ಅವರು ರತ್ನಪ್ಪ ಎಂಬುವವರು ಕುಂಬಾರರಾಗಿದ್ದರು. ಈ ಮಾತನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ, 1972 ನೇ ಇಸವಿಯಲ್ಲಿ ನಾನು ಬೆಳಗಾವಿ ಜಿಲ್ಲೆಗೆ ಬಂದಾಗ, ಇಡೀ ದೇಶದಲ್ಲಿ ಸಕ್ಕರೆಗೆ ಅತ್ಯಧಿಕ ಬೆಲೆಯನ್ನು ಕೊಟ್ಟಿದ್ದರೆ ಅದು ಹಿರಣ್ಯಕೇಶವ ಎನ್ನುವ ಹೆಸರಿನ ಸಕ್ಕರೆ ಕಾರ್ಖಾನೆಗೆ ಕೊಟ್ಟಿದ್ದರು. ಶ್ರೀಮಾನ್ ಅಪ್ಪಣ್ಣಗೌಡ ಪಾಟೀಲ್‌ರವರು ಅಂದು ಈ ಒಂದು ದೊಡ್ಡ ಕಾರ್ಖಾನೆಯನ್ನು ಸ್ಥಾಪಿಸಿದರು. ಮಾನ್ಯ ಹೊರಟ್ಟಿಯವರೇ, ಇವತ್ತಿನ ದಿವಸ ಇಲ್ಲಿ 56 ಕಾರ್ಖಾನೆಗಳು ಸ್ಥಾಪನೆಯಾಗುವುದಕ್ಕೆ ಕಾರಣವೇನೆಂದರೆ, ಈ ಭಾಗದಲ್ಲಿ ಬೆಳೆಯುವ ಸಕ್ಕರೆಯ ಉಷ್ಣಾಂಶ ಹೆಚ್ಚು ಇದೆ. ಆಂಧ್ರಪ್ರದೇಶ ರಾಜ್ಯದ ರೈತರುಗಳಿಗಿಂತ ಹೆಚ್ಚಾಗಿ ಸಕ್ಕರೆಯ ಇಳುವರಿಯನ್ನು ಪಡೆಯುವಂತಹ ರೈತರು ಯಾರಾದರೂ ಇದ್ದರೆ ಅದು ಮುಂಬೈ-ಕರ್ನಾಟಕ ಪ್ರದೇಶದ ರೈತರು. ಅದರಲ್ಲೂ ವಿಶೇಷವಾಗಿ ಬೆಳಗಾವಿ ಮತ್ತು ಬಾಗಲಕೋಟೆ ಜಿಲ್ಲೆಗಳ ರೈತರು ಆಗಿರುತ್ತಾರೆ. ಇವತ್ತಿನ ದಿವಸ 56 ಸಕ್ಕರೆ ಕಾರ್ಖಾನೆಗಳಿವೆ. ನಾಳೆಯ ದಿವಸವೇ ಮಾನ್ಯ ಮುಖ್ಯಮಂತ್ರಿಗಳಿಂದ ಹೇಳಿಸಬೇಕು. **"ಕ್ಯಾರೇ ಖಾಸಿಮ್ ಎಂದರೆ ಹುವಾ ಸಾಬ್ ಕಾಮ್"** ಎನ್ನುವ ರೀತಿಯಲ್ಲಿ ಕೆಲಸಗಳಾಗಬೇಕು. ಅದರ ಬದಲು ನೋಡುತ್ತೇನೆ ಸ್ವಾಮಿ, ಮಾಡುತ್ತೇನೆ ಸ್ವಾಮಿ ಎನ್ನುವಂತಹ ಪದ್ಧತಿಗಳನ್ನು ಅಳವಡಿಸಿದರೆ, ಸರ್ಕಾರದಲ್ಲಿ ಕೆಲಸಗಳಾಗುವುದಿಲ್ಲ.

ಮಾನ್ಯ ಸದಸ್ಯರು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಬಗ್ಗೆ ಪ್ರಸ್ತಾಪ ಮಾಡಿದರು. ನಾನು ಯೋಜನಾ ಆಯೋಗದ ಉಪಾಧ್ಯಕ್ಷನಾಗಿ ಕೆಲಸವನ್ನು ನಿರ್ವಹಿಸಿದ್ದೇನೆ. ಆ ಸಂದರ್ಭದಲ್ಲಿ ಒಮ್ಮೆ ಕೆ.ಎಸ್.ಆರ್.ಟಿ.ಸಿ.ಯವರು ನನ್ನ ಬಳಿ ಬಂದಾಗ ನಾನು ಅವರಿಗೆ, ನಮ್ಮೂರಿನಲ್ಲಿರುವ ಹುಸೇನ್ ಸಾಬಿ ಎಂಬುವವನು ಎರಡು ಬಸ್‌ಗಳನ್ನಿಟ್ಟುಕೊಂಡು ಮೂರು ಜನ ಹೆಂಡತಿಯರನ್ನು, 12 ಮಕ್ಕಳನ್ನು ಆರಾಮವಾಗಿ ಸಾಕುತ್ತಾನೆ ಆದರೆ, ನೀವು 6000 ಬಸ್‌ಗಳನ್ನಿಟ್ಟುಕೊಂಡು ಅನುದಾನವನ್ನು ಕೇಳಲು ಏಕೆ ಬಂದಿದ್ದೀರಾ ಎಂಬುದಾಗಿ ಕೇಳಿದೆನು. ನಾನು ಹುಸೇನ್ ಸಾಬಿಯನ್ನು ಬಸ್‌ಗಳು ಹೇಗೆ ನಡೆಯುತ್ತಿದೆ ಎಂದು ಕೇಳಿದರೆ, ಅದಕ್ಕವನು ಆರಾಮವಾಗಿ ಬಸ್‌ಗಳು ಓಡುತ್ತಿವೆ ಎಂದು ಹೇಳುತ್ತಾನೆ. ಆದರೆ ಕೆ.ಎಸ್.ಆರ್.ಟಿ.ಸಿ.ಯಲ್ಲಿ 6000 ಬಸ್‌ಗಳಿದ್ದರೂ ಅವುಗಳು ಸರಿಯಾಗಿ ನಡೆಯುತ್ತಿಲ್ಲ. ಇಲ್ಲಿನ ಪರಿಸ್ಥಿತಿ ಏನಾಗಿದೆ ಎಂದರೆ, ನಿಗಮದಲ್ಲಿನ ಒಂದು ಬಸ್ ಪಾಂಚಾಲಿ ತರಹ ಆಗಿತ್ತು. ಚಾಲಕರುಗಳ, ನಿರ್ವಾಹಕರುಗಳ ಮತ್ತು ಮೆಕ್ಯಾನಿಕ್‌ಗಳಿಗೆ ಅನುಗುಣವಾಗಿ ಬಸ್‌ಗಳಿರಲಿಲ್ಲ. ಯೋಜನಾ ಆಯೋಗದ ಅಧ್ಯಕ್ಷನಾಗಿ ನಿಗಮಕ್ಕೆ ಈ ವಿಚಾರದಲ್ಲಿ ಆಳವಾಗಿ ಅಭ್ಯಾಸ ಮಾಡಿ ಎಂಬ ಸಲಹೆಯನ್ನು ನೀಡಿದೆನು. Denationalize ಮಾಡಬೇಡಿ, ಅದರ ಬದಲಾಗಿ route action ಮಾಡಿ ಎಂದು ಹೇಳಿದೆ. ಅಲ್ಲಿ ನಿಗಮದ ಚಾಲಕರು ಮತ್ತು ನಿರ್ವಾಹಕರುಗಳಿರುತ್ತಾರೆ. ಹುಬ್ಬಳ್ಳಿ-ಧಾರವಾಡಕ್ಕೆ 7.00 ಗಂಟೆಗೆ ಬಸ್ಸಿನ

ಸಮಯವನ್ನು ನಿಗದಿಪಡಿಸಿದರೆ, ಅಂತಹ ಬಸ್‌ಗಳಲ್ಲಿ ಯಾರೂ ಸಹ ಪ್ರಯಾಣಿಸುವುದಿಲ್ಲ. ಅಲ್ಲಿನ ಖಾಸಗಿ ಬಸ್‌ಗಳೊಂದಿಗೆ ಒಪ್ಪಂದವನ್ನು ಮಾಡಿಕೊಂಡಿರುತ್ತಾರೆ. ರಾತ್ರಿ ಸಮಯದಲ್ಲಿ ಖಾಸಗಿ ಬಸ್‌ಗಳು ಜನರಿಂದ ತುಂಬಿ ಹೋಗಿರುತ್ತವೆ ಆದರೆ ಸರ್ಕಾರಿ ಬಸ್‌ಗಳಲ್ಲಿ ಪ್ರಯಾಣಿಕರು ಇರುವುದೇ ಇಲ್ಲ. ಬೇಲಿಯೇ ಎದ್ದು ಹೊಲ ಮೇಯ್ದರೆ, ಆ ಹೊಲದ ಗತಿ ಏನಾಗಬೇಕು?

ಇವತ್ತಿನ ದಿವಸ ನಾವು ಮುಂಬೈ-ಕರ್ನಾಟಕ ಹಾಗೂ ಹೈದ್ರಾಬಾದ್-ಕರ್ನಾಟಕ ಎರಡೂ ಪ್ರದೇಶಗಳ ಬಗ್ಗೆ ಪಕ್ಷಾತೀತವಾಗಿ ಒಂದು ಶಾಶ್ವತವಾದಂತಹ ಶಾಸಕರು ಇರುವಂತಹ ಸಮಿತಿ ಹಾಗೂ ಈ ಭಾಗದ ಶಾಸಕರು ಸದರಿ ಸಮಿತಿಗೆ ಅಧ್ಯಕ್ಷರು ಇರುವಂತೆ ಒಂದು ಶಾಶ್ವತ ಶಾಸಕಾಂಗ ಸಮಿತಿಯನ್ನು ರಚನೆ ಮಾಡಿ. ಸದರಿ ಸಮಿತಿಯು ಇಲ್ಲಿನ ವಿಚಾರಗಳ ಬಗ್ಗೆ ತಿಂಗಳಿಗೊಮ್ಮೆ ಎಲ್ಲಾ ಇಲಾಖಾಧಿಕಾರಿಗಳ ಸಭೆಯನ್ನು ನಡೆಸಿ ಇಲ್ಲಿನ ಜನರ ಸಮಸ್ಯೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಸೂಕ್ತ ಸಲಹೆ ಸೂಚನೆಗಳನ್ನು ಸರ್ಕಾರಕ್ಕೆ ನೀಡಬೇಕು. ಈ ಭಾಗದ ಸಭೆಗಳಿಗೆ ಐ.ಎ.ಎಸ್.ವೃಂದದ ಅಧಿಕಾರಿಗಳು ಹಾಜರಾಗುವುದಿಲ್ಲ. ಅವರುಗಳ ಮೇಲೆ ಜವಾಬ್ದಾರಿಯನ್ನು ವಹಿಸಬೇಕು. ಅಧಿಕಾರಿಗಳಿಗೆ ಇಲ್ಲಿಗೆ ಬರುವ ಅಭ್ಯಾಸವಿರುವುದಿಲ್ಲ. ಇಲ್ಲಿನ ಮೊಸರು ಗಡಿಗೆ, ಕಾಯಿಪಲ್ಲೆ, ಜೋಳದ ರೊಟ್ಟಿಪಲ್ಲೆಗಳ ರುಚಿ ಒಮ್ಮೆ ಅಧಿಕಾರಿಗಳಿಗೆ ಹತ್ತಿದರೆ, ಅವರುಗಳು ಈ ಭಾಗವನ್ನು ಬಿಟ್ಟುಹೋಗುವುದಿಲ್ಲ. ಇವತ್ತಿನ ದಿವಸ ಅಂತಹ ಅಧಿಕಾರಿಗಳಿಗೆ ಜವಾಬ್ದಾರಿಯನ್ನು ವಹಿಸಬೇಕು.

ಈ ಭಾಗದಲ್ಲಿ ತಾಂತ್ರಿಕ, ಐ.ಟಿ.ಐ. ಮತ್ತು ಇಂಜನಿಯರಿಂಗ್ ಕಾಲೇಜುಗಳನ್ನು ಪ್ರಾರಂಭ ಮಾಡಬೇಕು. ಇದು ಮತ್ತೊಂದು ವಿಚಾರ. ಕರ್ನಾಟಕ ಲಿಂಗಾಯತ್ ಸಂಘದ (ಕೆ.ಎಲ್.ಇ.) ಬಗ್ಗೆ ನನಗೆ ಸಂತೋಷವೆನಿಸುತ್ತದೆ. ಸಣ್ಣದಾಗಿ ಪ್ರಾರಂಭವಾದ ಸಂಘ ಇವತ್ತಿನ ದಿವಸ ಬೃಹತ್ ಪ್ರಮಾಣದಲ್ಲಿ ದೊಡ್ಡದಾಗಿ ಬೆಳೆದಿದೆ. ಇವತ್ತಿನ ದಿವಸ ಲಿಂಗಾಯತ್ ಸಮಾಜ, ಸ್ವಾಮಿಗಳು, ಮಠಗಳು ಕರ್ನಾಟಕಕ್ಕೆ ದೊಡ್ಡ ಪ್ರಮಾಣದಲ್ಲಿ ವಿದ್ಯಾ ದಾಸೋಹದ ಕೊಡುಗೆಯನ್ನು ಕೊಟ್ಟಿದ್ದಾರೆ. ಇದನ್ನು ನಾವು ಯಾರೂ ಮರೆಯುವುದಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ನಾನು ಅವತ್ತಿನ ದಿವಸ ಈ ಬಗ್ಗೆ ಪ್ರಸ್ತಾಪವನ್ನು ಮಾಡಿದ್ದೆನು.

ಶ್ರೀ ಕೆ.ಬಿ.ಶಾಣಪ್ಪ(ನಾಮನಿರ್ದೇಶಿತರು):- ಮಾನ್ಯ ಸಭಾಪತಿಯವರೇ, ಖಾಸಿಮ್ ಸಾಬಿಗೆ ಒಂದಕ್ಕಿಂತ ಹೆಚ್ಚು ಮದುವೆಗಳನ್ನು ಮಾಡಿಕೊಳ್ಳಲು ಪರವಾನಿಗೆ ಇದೆ ಆದರೆ ನಮ್ಮ ಮಲ್ಲಪ್ಪನಿಗೆ ಆ ರೀತಿಯ ಪರವಾನಿಗೆ ಇಲ್ಲ. ಒಂದು ವೇಳೆ ಅವನು ಹೆಚ್ಚು ಮದುವೆಯಾದರೆ, ಅವನನ್ನು ಒದ್ದು ಜೈಲಿಗೆ ಹಾಕುತ್ತಾರೆ.

ಶ್ರೀ ಸಿ.ಎಂ.ಇಬ್ರಾಹಿಂ(ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಐ.ಐ.ಟಿ.ಗಳನ್ನು, ಉನ್ನತ ಶಿಕ್ಷಣ ಸಂಸ್ಥೆಗಳನ್ನು ಜಾಸ್ತಿ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಪಡಬೇಕು. ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ, ಕೆ.ಎಸ್.ಆರ್.ಟಿ.ಸಿ. ಬಸ್‌ಗಳ ಮಾರ್ಗಗಳನ್ನು ವ್ಯವಸ್ಥಿತವಾಗಿ ಸಂಪೂರ್ಣವಾಗಿ ಜಾರಿಗೊಳಿಸಬೇಕು. ಮಾನ್ಯ ಮಂತ್ರಿಗಳು ಖುದ್ದಾಗಿ ಕುಳಿತುಕೊಂಡು ನಿಗಮದ ಲಾಭದಾಯಕದ ಬಗ್ಗೆ ಯೋಜನೆಗಳನ್ನು ಮಾಡಬೇಕು. ಮಾನ್ಯ ದೇವೇಗೌಡರು ದೇಶದ ಪ್ರಧಾನ ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ನಾನು ವಿಮಾನಯಾನ ಮಂತ್ರಾಲಯದ ಮಂತ್ರಿಯಾಗಿ ಕರ್ತವ್ಯವನ್ನು ನಿರ್ವಹಿಸಿದ್ದೇನೆ. ನಾನು ಅಧಿಕಾರ ವಹಿಸಿಕೊಂಡ ಸಂದರ್ಭದಲ್ಲಿ Indian Airlines and Air India Limited ಸಂಸ್ಥೆಗಳು ನಷ್ಟದಲ್ಲಿದ್ದವು. ಎರಡು ವರ್ಷಗಳು ಸತತವಾಗಿ Indian Airlines ಸಂಸ್ಥೆಯು ೫೦ ಕೋಟಿ ರೂಪಾಯಿಗಳಷ್ಟು ಲಾಭವನ್ನು ಪಡೆಯಿತು. ಇದು ಇತಿಹಾಸದಲ್ಲಿಯೇ ಮೊದಲ ಬಾರಿಯಾಗಿತ್ತು. ಆ ರೀತಿಯ ಕೆಲಸಗಳನ್ನು ನಾವು ಮಾಡಿ ತೋರಿಸಿದ್ದೇವೆ. ನಮ್ಮ ಕಾರ್ಯವನ್ನು ಶ್ಲಾಘಿಸಿದರು. ಅಂದಿನ ದಿವಸ ನನ್ನ ಹತ್ತಿರ ಅನಿಲ್ ಬೈಜಲ್ ಎಂಬ ಅಧಿಕಾರಿಯು ಕರ್ತವ್ಯ ನಿರ್ವಹಿಸುತ್ತಿದ್ದರು. ಇವತ್ತಿನ ದಿವಸ ಕೇಂದ್ರದಲ್ಲಿರುವ ಮಾನ್ಯ ನರೇಂದ್ರ ಮೋದಿಯವರ ಸರ್ಕಾರ ಸದರಿ ಅಧಿಕಾರಿಯನ್ನು *Lieutenant Governor* ಆಗಿ ನಿಯೋಜಿಸಿದ್ದಾರೆ. ನೀವು ಈ ಹಿಂದೆ ಅಧಿಕಾರ ವಹಿಸಿಕೊಂಡಾಗ ಸದರಿ ಸಂಸ್ಥೆಯು ಎಷ್ಟು ಲಾಭವನ್ನು ಮಾಡಿದೆ, ಆದ್ದರಿಂದ ನೀವು ಪುನ: ಏಕೆ ಸದರಿ ಸಂಸ್ಥೆಗಳ ಉಸ್ತುವಾರಿಯನ್ನು ವಹಿಸಿಕೊಳ್ಳಬಾರದು ಎಂಬುದಾಗಿ ಈ ಹಿಂದೆ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಸರ್ಕಾರದವರು ನನ್ನನ್ನು ಕರೆದು ಕೇಳಿದರು. ಆ ಸಂದರ್ಭದಲ್ಲಿ ಹಿಂದಿನ ಪ್ರಧಾನ ಮಂತ್ರಿಗಳಾದ ಶ್ರೀ ಮನ್‌ಮೋಹನ್ ಸಿಂಗ್ ರವರಿಗೆ ಕೇಂದ್ರ ಸಚಿವ ಸಂಪುಟದಲ್ಲಿ ಕ್ಯಾಬಿನೆಟ್ ದರ್ಜೆಯ ಮಂತ್ರಿಯಾಗಿದ್ದ ನಾನು ಈಗ ಅಧ್ಯಕ್ಷನಾಗಿ ಹುದ್ದೆಯನ್ನು ಅಲಂಕರಿಸಿದರೆ ಹೇಗೆ ಎಂಬುದಾಗಿ ಹೇಳಿದೆನು. ಅನಿಲ್ ಬೈಜಲ್ ಎನ್ನುವ ಅಧಿಕಾರಿಯು ಪ್ರಸ್ತುತ Kingfisher Airlines ಸಂಸ್ಥೆಯು ನಷ್ಟದಲ್ಲಿ ನಡೆಯುತ್ತಿದೆ, ಆದ್ದರಿಂದ ಅದರ ಉಸ್ತುವಾರಿಯನ್ನು ನಾನು ಏಕೆ ವಹಿಸಿಕೊಳ್ಳಬಾರದು ಎಂಬುದಾಗಿ ನನ್ನನ್ನು ಕೇಳಿದರು. ಸದರಿ ಸಂಸ್ಥೆಯು ನಿಜವಾಗಿಯೂ ನಷ್ಟವನ್ನು ಹೊಂದಿಲ್ಲ. ಒಂದು ವಿಮಾನ 18 ಗಂಟೆಗಳ ಕಾಲ ಹಾರಾಟವನ್ನು ಮಾಡಿ ಶೇಕಡಾ ೦೦ ರಷ್ಟು ಆಸನಗಳು ಭರ್ತಿಯಾಗಿದ್ದರೆ ಅದು ಲಾಭದಲ್ಲಿರುತ್ತದೆ ಹೊರತು ನಷ್ಟವನ್ನು ಅನುಭವಿಸುವುದಿಲ್ಲ. ಆದರೆ ಆದದ್ದು ಏನೆಂದು ಹೇಳಿದರೆ, ನಾವು ಎಲ್ಲಾ ಮಾರ್ಗಗಳನ್ನು ವಿದೇಶಗಳಿಗೆ ಮಾರಾಟ ಮಾಡಿದೆವು. ಹೀಗೆ ಮಾರ್ಗಗಳನ್ನು ಮಾರಾಟ ಮಾಡಿದಾಗ, ನಮ್ಮ ವಿಮಾನಗಳು ಪ್ರಯಾಣಿಕರಿಲ್ಲದೇ ಖಾಲಿಯಾಗಿ ಹೋದವು. ಪರದೇಶದವರ

ವಿಮಾನಗಳ ಹಾರಾಟ ಜಾಸ್ತಿಯಾಯಿತು. ಇದರಿಂದ Indian Airlines and Air India Limited ಸಂಸ್ಥೆಗಳಿಗೆ ನಷ್ಟವಾಯಿತು. Unless and until ವಿದೇಶಗಳಿಗೆ ಮಾರಾಟ ಮಾಡಿರುವ ಮಾರ್ಗಗಳನ್ನು ವಾಪಸ್ಸು ಪಡೆಯದ ಹೊರತು ಸಂಸ್ಥೆಗಳಿಗೆ ಲಾಭ ಬರುವುದಿಲ್ಲ. ನಾನು ಖುದ್ದಾಗಿ ಮೂರು ಪುಟಗಳಷ್ಟು ವರದಿಯನ್ನು ಮಾನ್ಯ ಪ್ರಧಾನ ಮಂತ್ರಿಗಳಿಗೆ ಕಳುಹಿಸಿ ಕೊಟ್ಟಿದ್ದೇನೆ. ಇದನ್ನು ಮಾಡಿದರೆ, ಈ ಸಂಸ್ಥೆಗಳು ಲಾಭವನ್ನು ಗಳಿಸುತ್ತದೆ ಎಂದು ಹೇಳಿದ್ದೇನೆ. Air India Limited ಸಂಸ್ಥೆಯನ್ನು ಮಾರುವುದಕ್ಕೆ ಹೋಗಬೇಡಿ. ಅದು ನಮ್ಮ ದೇಶದ ಸ್ವತ್ತಾಗಿದೆ. ಸಿಂಗಾಪುರ್ ದೇಶದ ವಿಮಾನಯಾನ ಕಂಪೆನಿಗಳು ನಮ್ಮ ದೇಶಕ್ಕೆ ಬಂದು ನಮ್ಮಲ್ಲಿನ domestic routeಗಳನ್ನು ನಡೆಸುತ್ತೇವೆ ಎಂದು ಕೇಳಿದಾಗ, ನಾನು ಹಾಗೂ ಮಾನ್ಯ ದೇವೇಗೌಡರು ಒಟ್ಟಿಗೆ ನಮ್ಮ ದೇಶದಲ್ಲಿ ವಿದೇಶಿ ವಿಮಾನಗಳನ್ನು ಹಾರುವುದಕ್ಕೆ ಬಿಡಬಾರದು ಎಂಬ ತೀರ್ಮಾನವನ್ನು ತೆಗೆದುಕೊಂಡೆವು. ಮಾನ್ಯ ದೇವೇಗೌಡರು ವಿದೇಶಿ ವಿಮಾನಗಳನ್ನು ಸ್ವದೇಶದಲ್ಲಿ ಹಾರಲು ಅವಕಾಶ ಕೊಡಬಾರದು ಎಂಬುದಾಗಿ ನನಗೆ ಹೇಳಿದರು. ಆದರೆ ಇವತ್ತಿನ ದಿವಸ ನಮ್ಮ ದೇಶದಲ್ಲಿ 14 ಸ್ವದೇಶಿ ವಿಮಾನ ಕಂಪೆನಿಗಳು ಉದಾಹರಣೆಗೆ ಹೇಳುವುದಾದರೆ, Jio Airlines, Jet Airways, SpiceJet Airlines ಎಂಬಿತ್ಯಾದಿಯಾದ ಕಂಪೆನಿಗಳು ಬಂದಿವೆ. ವಿಮಾನಯಾನ ಕ್ಷೇತ್ರ ಬೆಳೆಯಲು ಅವುಗಳು ದೊಡ್ಡ ಕಾರಣವಾಗಿವೆ. Unless and until Bangalore, Hubli or Gulbarga ಗಳಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳನ್ನು ನಿರ್ಮಿಸದಿದ್ದರೆ ಸೂಟು-ಬೂಟುನವರು ಯಾರೂ ಬರುವುದಿಲ್ಲವೆಂದು ನಾನು ಶ್ರೀಯುತ ದೇಶಪಾಂಡೆರವರಿಗೆ ಹೇಳುತ್ತಿದ್ದೆನು. ಅವರುಗಳು ರೈಲಿನಲ್ಲಿ, ಕಾರಿನಲ್ಲಿ ಬರುವುದಿಲ್ಲ. ಮಾನ್ಯ ಎಸ್.ಆರ್.ಬೊಮ್ಮಾಯಿ ರವರ ಅಧಿಕಾರಾವಧಿಯಲ್ಲಿ ಹುಬ್ಬಳ್ಳಿಯಲ್ಲಿ ಅಂತರರಾಷ್ಟ್ರೀಯ ಮಟ್ಟದ ವಿಮಾನ ನಿಲ್ದಾಣ ಮಾಡಲು ಅಗತ್ಯ ಕ್ರಮಗಳನ್ನು ಕೈಗೊಂಡಿದ್ದರೆ ಅನುಕೂಲವಾಗುತ್ತಿತ್ತು. ನಾನು ಸಚಿವನಾಗಿದ್ದಂತಹ ಸಂದರ್ಭದಲ್ಲಿ ಇದೇ ವಿಚಾರದಲ್ಲಿ ಅವರು ಪದೇ ಪದೇ ಯಾವ ಕ್ರಮಗಳನ್ನು ತೆಗೆದುಕೊಂಡಿದ್ದೀಯಾ ಎಂದು ನನ್ನನ್ನು ಕೇಳುತ್ತಿದ್ದರು. ನಾವು ಏನು initiative ತೆಗೆದುಕೊಂಡವೋ ನಂತರ ಅಧಿಕಾರಕ್ಕೆ ಬಂದ ಸರ್ಕಾರದ ಅವಧಿಯಲ್ಲಿ ಅದು ಅಲ್ಲಿಗೆ ನಿಂತುಕೊಂಡು ಹೋಯಿತು. ಈಗಲೂ ಕೂಡ ಹುಬ್ಬಳ್ಳಿಯಲ್ಲಿರುವ ವಿಮಾನ ನಿಲ್ದಾಣದಲ್ಲಿ 12000 ಚದರಡಿಯ runway ಅನ್ನು ನಿರ್ಮಿಸಿದರೆ, ವಿದೇಶಗಳಿಗೆ ಇಲ್ಲಿಂದಲೇ ವಿಮಾನಗಳನ್ನು ಹಾರಾಟ ಮಾಡುವಂತಹ ಅವಕಾಶಗಳನ್ನು ಮಾಡಿದರೆ ಈ ಭಾಗವು ಪೂರ್ಣವಾಗಿ ಅಭಿವೃದ್ಧಿಯನ್ನು ಹೊಂದುತ್ತದೆ ಎನ್ನುವಂತಹ ಮಾತನ್ನು ನಾನು ಹೇಳುತ್ತೇನೆ. ಅದೇ ರೀತಿಯಾಗಿ ಕಲಬುರಗಿ ಜಿಲ್ಲೆಯಲ್ಲಿಯೂ ಸಹ ಅಂತರರಾಷ್ಟ್ರೀಯ ಮಟ್ಟದ ವಿಮಾನ ನಿಲ್ದಾಣ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಬೇಕು. ಈ ಭಾಗದ ಎಷ್ಟೋ ಜನರು ವಿದೇಶದಲ್ಲಿದ್ದಾರೆ ಎಂಬುದನ್ನು ನಾವು ನೋಡಿದ್ದೇವೆ. ಆರ್ಥಿಕವಾಗಿ ವಿಮಾನಗಳ ಹಾರಾಟವಾಗುತ್ತದೆ. ಆರ್ಥಿಕವಾಗಿ ಕೆಲಸಗಳಾಗಲು ಸಾಧ್ಯವಿದೆ ಎನ್ನುವಂತಹ ಸಲಹೆಯನ್ನು ನಾನು ಈ ಸಂದರ್ಭದಲ್ಲಿ ನೀಡುತ್ತೇನೆ.

ನೀರಾವರಿ ವಿಚಾರಕ್ಕೆ ಸಂಬಂಧಪಟ್ಟಂತೆ ಮಹದಾಯಿ ವಿಚಾರದಲ್ಲಿ ದಯವಿಟ್ಟು ನಾವು ಎಲ್ಲಾ ರಾಜಕೀಯ ಪಕ್ಷದವರು ಒಂದಾಗಿ ಸಂಕಲ್ಪವನ್ನು ಮಾಡಬೇಕು. **"ಜೈ ಭಾರತ ಜನನಿಯ ತನುಜಾತೆ ಜಯ ಹೇ ಕರ್ನಾಟಕ ಮಾತೆ"** ಎನ್ನುವ ಗಾನವನ್ನು ರಾಷ್ಟ್ರಕವಿ ಪುಟ್ಟಪ್ಪನವರು ಹಾಡಿ ಹೋಗಿದ್ದಾರೆ. ನಾವು ನಮ್ಮ ರಾಜಕೀಯದ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು, ನಾವು ರಾಜಕೀಯ ಪಕ್ಷಗಳಾದ ಕಾಂಗ್ರೆಸ್, ಭಾರತೀಯ ಜನತಾ ಪಕ್ಷ ಹಾಗೂ ಜನತಾ ದಳ ಎಂಬ ಪಕ್ಷಗಳನ್ನು ಮರೆತು ಬಿಟ್ಟು, ಯಾವುದೇ ಪಕ್ಷಗಳಿಲ್ಲ. **"ಕನ್ನಡಿಗರು ಕನ್ನಡಕ್ಕಾಗಿ ಕೈ ಎತ್ತು, ನಿನ್ನ ಕೈ ಕಲ್ಪವೃಕ್ಷವಾಗುವುದು, ಕನ್ನಡಕ್ಕೆ ಕೊರಳೆತ್ತು, ನಿನ್ನ ಕೊರಳು ಕೋಗಿಲೆಯ ಗಾನವಾಗುವುದು"** ಎಂಬ ಹಾಡುಗಳನ್ನು ನಮ್ಮ ಸಾಹಿತಿಗಳು ಹಾಡಿ ಹೋಗಿದ್ದಾರೆ. ಇವತ್ತಿನ ದಿವಸ ಶಾಸಕರುಗಳೆಲ್ಲರೂ ಸೇರಿಕೊಂಡು ವಿಧಾನ ಪರಿಷತ್ ಹಾಗೂ ವಿಧಾನ ಸಭೆಗಳಲ್ಲಿ ನಿರ್ಣಯ ಮಾಡುವ ಮೂಲಕ ಮಹದಾಯಿ ವಿಚಾರ ಇತ್ಯರ್ಥಗೊಳ್ಳಲೇ ಬೇಕು, ಮಾನ್ಯ ಪ್ರಧಾನ ಮಂತ್ರಿಗಳು ಈ ವಿಚಾರದಲ್ಲಿ ಮಧ್ಯಸ್ಥಿಕೆಯನ್ನು ವಹಿಸಿಕೊಳ್ಳಲೇ ಬೇಕು ಎಂಬ ನಿರ್ಣಯಗಳನ್ನು ತೆಗೆದುಕೊಳ್ಳಬೇಕು. ನಮ್ಮ ರಾಜ್ಯದ ಎಲ್ಲಾ ಲೋಕಸಭಾ ಸದಸ್ಯರುಗಳು ಈ ವಿಚಾರ ಇತ್ಯರ್ಥಗೊಳ್ಳದೇ ಹೋದರೆ ಅವರುಗಳು ಇವತ್ತಿನ ದಿವಸ ತಮ್ಮ ತಮ್ಮ ಸ್ಥಾನಗಳಲ್ಲಿ ಇರಲು ತಯಾರಿಲ್ಲ ಎಂಬಂತಹ ನಿರ್ಣಯವನ್ನು ತೆಗೆದುಕೊಳ್ಳಬೇಕು. Political compulsion ಗೆ ಎಲ್ಲರೂ ಬಗ್ಗಲೇಬೇಕು ಎಂಬ ಮಾತನ್ನು ನಾನು ಹೇಳುತ್ತೇನೆ. ಚುನಾವಣೆ ಸನಿಹವಾದಾಗ ನೋಡಿಕೊಳ್ಳೋಣ. ಮತ ಹಾಕುವ ಮಹಾಜನತೆ ಯಾವ ಪಕ್ಷಕ್ಕೆ ಮತ ನೀಡುತ್ತಾರೆ, ಯಾವ ಪಕ್ಷವು ಮುಂದೆ ಅಧಿಕಾರಕ್ಕೆ ಬರುತ್ತದೆಯೋ ಎನ್ನುವುದನ್ನು ನೋಡೋಣ. ಈ ಬಗ್ಗೆ ಚಿಂತೆಯಿಲ್ಲ. ಯಾರು ಅಧಿಕಾರವನ್ನು ನಡೆಸುತ್ತಿದ್ದಾರೆ ಎನ್ನುವ ಬಗ್ಗೆಯೂ ಸಹ ಚಿಂತೆಯಿಲ್ಲ. ಅಧಿಕಾರ ಹೇಗೆ ನಡೆಯುತ್ತಿದೆ, ಇದಕ್ಕೆ ಜನರು ಹೇಗೆ ಸ್ಪಂದಿಸುತ್ತಿದ್ದಾರೆ ಎನ್ನುವಂತಹ ಅಂಶಗಳು ನಮಗೆ ಇವತ್ತಿನ ದಿವಸ ಬಹಳ ಪ್ರಾಮುಖ್ಯತೆಯನ್ನು ಹೊಂದಿರುವ ವಿಷಯವಾಗಿದೆ. ಶಾಸಕರುಗಳು, ಸಂಸದರುಗಳು ಈ ರೀತಿಯ ನಿರ್ಣಯಗಳನ್ನು ಕೈಗೊಳ್ಳದೇ ಹೋದರೆ, ಇನ್ನೂ ಒಂದು ಶತಮಾನವಾದರೂ ಸಹ ನೀರಿಗಾಗಿ ಅವರು-ಇವರನ್ನು ಕೇಳುವಂತಹ ಸಂದರ್ಭಗಳು ತಪ್ಪುವುದಿಲ್ಲ ಎಂಬ ಮಾತನ್ನು ನಾನು ಈ ಸಂಧರ್ಭದಲ್ಲಿ ಹೇಳುತ್ತೇನೆ. ಅವರು-ಇವರುಗಳನ್ನು ಕರೆದುಕೊಂಡು ಬರುವಂತಹ ಸಂದರ್ಭಗಳೂ ಸಹ ತಪ್ಪಿದ್ದಲ್ಲ. ನಾವುಗಳೆಲ್ಲರೂ ಒಂದಾಗಿ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯ, ಸಂಸದರಾದ ಶ್ರೀ ಯಡ್ಡಿಯ್ಯೂರಪ್ಪ ಹಾಗೂ ದೇವೇಗೌಡ ರವರುಗಳ ನೇತೃತ್ವದಲ್ಲಿ ಮಾನ್ಯ

ಪ್ರಧಾನ ಮಂತ್ರಿಗಳನ್ನು ಸಂಪರ್ಕಿಸಿ, ನಮ್ಮೆಲ್ಲರದ್ದೂ ಒಂದೇ ನಿರ್ಣಯ; ನಮಗೆ ನೀರನ್ನು ಕೊಡಿ ಎಂದು ಕೇಳದ ಹೊರತು ಸಮಸ್ಯೆ ಬಗೆಹರಿಯುವುದಿಲ್ಲ.

ಇವತ್ತಿನ ದಿವಸ ಆಲಮಟ್ಟಿ ಜಲಾಶಯವನ್ನು ಇನ್ನು ಎತ್ತರಕ್ಕೆ ಏರಿಸುವಂತಹದ್ದು, ಮಹದಾಯಿ ನದಿ ನೀರಿನ ವಿಚಾರ ಮತ್ತು ನಾವು ಯಾವ್ಯಾವ ನೀರಾವರಿ ಯೋಜನೆಗಳನ್ನು ಹಾಕಿಕೊಂಡಿದ್ದೇವೆ ಅವುಗಳೆಲ್ಲವೂ ಪೂರ್ಣಗೊಳ್ಳಬೇಕೆಂಬ ಸಂಕಲ್ಪವನ್ನು ನಾವು ಮಾಡಬೇಕು. ಮನಸ್ಸಿದ್ದರೆ ಮಾರ್ಗವಿದೆ. ಮೂರು ದಿನಗಳಲ್ಲಿ ನಾವು ವ್ಯವಸ್ಥೆಗಳನ್ನು ಸರಿಪಡಿಸಬಹುದು. ಇವತ್ತಿನ ದಿವಸ ನಾನು ತಮ್ಮ ಮೂಲಕ ಸರ್ಕಾರವನ್ನು ಪ್ರಾರ್ಥಿಸಿಕೊಳ್ಳುವುದೇನೆಂದರೆ, ಈ ಭಾಗದ ಜನರ ಕ್ಷಮಾ ಹಾಗೂ ತಾಳ್ಮೆಯ ಮನೋಭಾವಗಳನ್ನು ಪರೀಕ್ಷೆ ಮಾಡುವುದಕ್ಕೆ ಹೋಗಬೇಡಿ. ಇದಕ್ಕೆ ಕಾರಣ ಜನರು ಬೇಸತ್ತು ಹೋಗಿದ್ದಾರೆ. ಕೇವಲ ಕೃಷಿ ಒಂದರಿಂದಲೇ ಈ ಭಾಗದ ಜನರು ಬದುಕುವುದಕ್ಕೆ ಸಾಧ್ಯವಿಲ್ಲ. ಅವರುಗಳಿಗೆ ಯಾವುದಾದರೂ ಒಂದು ಉದ್ಯೋಗದ ಅವಶ್ಯಕತೆಯಿದೆ. ಇಡೀ ಮುಂಬೈ-ಕರ್ನಾಟಕ, ಹೈದ್ರಾಬಾದ್-ಕರ್ನಾಟಕ ಪ್ರದೇಶಗಳಲ್ಲಿ ಇವತ್ತಿನ ದಿವಸ ಜಾತಿ, ಮತ, ಪಂಥ ಇತ್ಯಾದಿ ಯಾವುದೇ ಭೇದ-ಭಾವನೆಗಳಿಲ್ಲ ಇದಕ್ಕೆ ಕಾರಣ ಶಿವ-ಶರಣರು, ಸೂಫಿ ಸಂತರುಗಳು ಹಾಕಿ ಕೊಟ್ಟಂತಹ ಮಾರ್ಗಗಳಲ್ಲಿ ಹಾಗೂ ಇಳಕಲ್‌ನ ಮಹಾಸ್ವಾಮಿಗಳು, ಮರ್ತುದಾ ಖಾದರಿಯವರು ಕಲಬುರಗಿಗೆ ಹೋದರೆ ಬಂದೇ ನವಾಜ್, ಶರಣ ಬಸಪ್ಪ ಅಪ್ಪಾರವರುಗಳು ಹಾಕಿಕೊಟ್ಟ ಮಾರ್ಗಗಳಲ್ಲಿ ನಡೆಯುತ್ತಿದೇವೆ. ನಮ್ಮ ರಾಜ್ಯದ ಈ ಭಾಗವು ಧರ್ಮದ ಸಮ್ಮೇಳನವಾಗಿರುವಂತಹ ಪವಿತ್ರವಾದ ಜಾಗವಾಗಿದೆ. ಒಂದು ಕಡೆ ಬಸವಣ್ಣನವರು ಹುಟ್ಟಿರುವಂತಹ ಕೂಡಲ ಸಂಗಮ ನಾಡು. ಈ ಭಾಗದ ಜನರು ಇನ್ನು ಕಷ್ಟಪಡುವಂತಹ ಪರಿಸ್ಥಿತಿ ಇಲ್ಲ. ಈ ಕೂಡಲೇ ಮುಂಬೈ-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯನ್ನು ಮಾಡಿ ಇದಕ್ಕೆ ವರ್ಷಕ್ಕೆ 1,87,000 ಕೋಟಿ ರೂಪಾಯಿಗಳ ಆಯವ್ಯಯವನ್ನು ಮಾಡುತ್ತಿದ್ದೇವೆಂದು ಮಾನ್ಯ ಸದಸ್ಯರಾದ ಶ್ರೀಯುತ ಹೊರಟ್ಟಿರವರು ಹೇಳಿದರು.

(ಮುಂದು)

(1129) 5.00/21-11-2017/ಸಿಎಸ್:ಎಂಡಿ

ಶ್ರೀ ಸಿ.ಎಂ.ಇಬ್ರಾಹಿಂ(ಮುಂದು):- ಆಯವ್ಯಯದಲ್ಲಿ ಅರ್ಧ ಭಾಗ ಈ ಕಡೆಗೆ ಇದೆ. ಆದ್ದರಿಂದ ಒಂದು ತಜ್ಞರ ಸಮಿತಿಯನ್ನು ಮಾಡಿ, ಅದು ಈ ಭಾಗಕ್ಕೆ ಎಷ್ಟು ಹಣ ಬರುತ್ತಿದೆ, ಎಷ್ಟರ ಮಟ್ಟಿಗೆ ಈ ಭಾಗದಲ್ಲಿ ಅಭಿವೃದ್ಧಿಗಳಾಗುತ್ತಿದೆ, ಈ ಭಾಗದಲ್ಲಿ ಎಷ್ಟು ಜನರು ಉದ್ಯೋಗದಲ್ಲಿದ್ದಾರೆ? ಬಾಂಬೆ-ಕರ್ನಾಟಕ ಹಿಂದುಳಿದವರು ಎಂದು ಉದ್ಯೋಗದಲ್ಲಿ ಮೀಸಲಾತಿಯನ್ನು ನೀಡಲು ಸಾಧ್ಯವೇ ಎನ್ನುವುದನ್ನು ಆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಮಿತಿ ಅಧ್ಯಯನ ಮಾಡಬೇಕು. ಜೊತೆಗೆ ಈ ಭಾಗದಲ್ಲಿ ಕೈಗಾರಿಕೆಗಳನ್ನು ತೆರೆಯಲು ಸಾಧ್ಯವೇ? ಈ ಭಾಗದಲ್ಲಿ ಕೈಗಾರಿಕೆಗಳು ಬಂದಲ್ಲಿ ಸರ್ಕಾರದಿಂದ 10 ರಿಂದ 30% ವರೆಗೆ ಸಬ್ಸಿಡಿಯನ್ನು ಕೊಡುತ್ತೇವೆ ಎಂದು ಹೇಳಲಿ. ಇವತ್ತು agricultural based industries, tetra pack based industries ಅನ್ನು ಈ ಭಾಗದಲ್ಲಿ ತರುವುದಕ್ಕೆ ಸರ್ಕಾರ ಉತ್ತೇಜನವನ್ನು ನೀಡಬೇಕಾಗುತ್ತದೆ. ಇನ್ಫೋಸಿಸ್‌ನ ಮಾನ್ಯ ನಾರಾಯಣ ಸ್ವಾಮಿಯವರಿಗೆ ಕೈ ಮುಗಿದು "ಸ್ವಾಮಿ ಮೈಸೂರಿನಲ್ಲಿ ನಿಮ್ಮ ಸಂಸ್ಥೆ ಇದೆ, ಈ ಭಾಗದಲ್ಲಿಯೂ ನಿಮ್ಮ ಸಂಸ್ಥೆಯನ್ನು ತನ್ನಿ, ಅಷ್ಟೇ ಉತ್ತೇಜನವನ್ನು ಇಲ್ಲಿನವರಿಗೂ ಕೊಡಿ, ನಿಮ್ಮನ್ನೇ ಸಂಸ್ಥೆಯ ಛೇರ್ಮನ್ ಮಾಡಿ, ನಿಮ್ಮ ಸಲಹೆಗಳನ್ನು ಪಡೆಯುತ್ತೇವೆ ಎಂದು ಸರ್ಕಾರ ಅವರ ಹೆಗಲಿನ ಮೇಲೆ ಭಾರವನ್ನು ಹಾಕಿದರೆ ಖಂಡಿತವಾಗಿ ಉತ್ತರ ಕರ್ನಾಟಕದ ಭಾಗವನ್ನು ಇನ್ನು 10 ವರ್ಷಗಳಲ್ಲಿ ಅಭಿವೃದ್ಧಿಗೊಳಿಸಬಹುದು.

ಈಗ ಬೆಂಗಳೂರು ಜಾಸ್ತಿನೇ ಬೆಳೆದು ಬಿಟ್ಟಿದೆ, ಈಗಿರುವ ಬೆಂಗಳೂರು ಇನ್ನು ಜಾಸ್ತಿ ಬೆಳೆದರೆ ಬೆಂಗಳೂರನ್ನೇ ಬೇರೆ ರಾಜ್ಯ ಮಾಡಿ ಎಂದು ಕೇಳುವ ಕಾಲ ದೂರ ಇರಲಿಕ್ಕಿಲ್ಲ. ಏಕೆಂದರೆ ಬೆಂಗಳೂರಿಗೆ ಹೋದರೆ ಅಲ್ಲಿ ಯಾರು ಯಾವ ಭಾಷೆ ಮಾತನಾಡುತ್ತಾರೆ ಎನ್ನುವುದೇ ತಿಳಿಯುವುದಿಲ್ಲ.

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:– ಮಾನ್ಯ ಸಭಾಪತಿಯವರೇ, ಬೆಂಗಳೂರಿನಲ್ಲಿ ಶೇಕಡ 77ರಷ್ಟು ಬೇರೆ ಭಾಷಿಕರು ಇದ್ದಾರೆ. ಶೇಕಡ 23 ರಷ್ಟು ಮಾತ್ರ ಕನ್ನಡ ಮಾತನಾಡುವವರಿದ್ದಾರೆ. ಇರುವ ಕನ್ನಡಿಗರಲ್ಲಿಯೂ ಸಹ ಅರ್ಧ ಜನರು ತೆಲುಗು ಭಾಷೆ ಮಾತನಾಡಿದರೆ ಉಳಿದರ್ಧ ಜನರು ತಮಿಳನ್ನು ಮಾತನಾಡುತ್ತಾರೆ.

ಶ್ರೀ ಸಿ ಎಂ.ಇಬ್ರಾಹಿಂ:– ಇನ್ನು ನಮ್ಮ ಬಿಡಿಎ ನವರು ಕವರ್ ಮಾಡುವ pothole, sicked hole ಇದೆ, ರಸ್ತೆ ಸರಿಯಾಗಿಲ್ಲ ಎನ್ನುವ ತೊಂದರೆಗಳಿವೆ. ಇಲ್ಲಿ ಹಳ್ಳಿಯಲ್ಲಿ ಯಾರು ಸತ್ತರೂ ಕೂಡ ಯಾವ hole ಎಂದು ನೋಡುವವರು ಇಲ್ಲ. ನಮ್ಮಲ್ಲಿನ hole ಗಳು ಸರ್ಕಾರಕ್ಕೆ ಕಾಣುವುದೇ ಇಲ್ಲ. ಈ ಭಾಗ ಇಷ್ಟು ದೊಡ್ಡದಾಗಿ ಬೆಳೆದಿದ್ದರೂ ಸಹ ಬೆಂಗಳೂರಿನಲ್ಲಿರುವ ಸಮಸ್ಯೆಗಳ ಬಗ್ಗೆ ಹೆಚ್ಚೆಚ್ಚು ಚರ್ಚೆ ನಡೆಯುತ್ತದೆ. ಹಾಗಂತ ಬೆಂಗಳೂರಿನ ಬಗ್ಗೆ ಚರ್ಚೆ ಮಾಡುವುದೇ ಬೇಡವೆಂದು ನಾನು ಹೇಳುವುದಿಲ್ಲ. ಯಾರಿಗೆ ಸೌಲಭ್ಯಗಳ ಕೊರತೆ ಇದೆ, ಅವರಿಗೆ ಮೊದಲು ಸೌಲಭ್ಯಗಳನ್ನು ಒದಗಿಸಬೇಕು.

"ಉಂಬದ ಲಿಂಗಕ್ಕೆ ನೈವೇದ್ಯ ಮಾಡುವರು,
ಉಂಬುವ ಜಂಗಮ ಬಂದರೆ ಮುಂದೆ ಹೋಗು ಎನ್ನುವರು,
ಕಲ್ಲಿನ ನಾಗರಕ್ಕೆ ಹಾಲೆರೆವರು,

ನಿಜ ನಾಗರ ಕಂಡರೆ ಕೊಲ್ಲೆನ್ನುವರು
ಎಲಾ ಹುಚ್ಚ ಶರಣರಿಗೆ ಎನೆಂದು ಕರೆಯಲೋ
ಕೂಡಲಸಂಗಮ ದೇವಾ"

ಎಂದು ಬಸವಣ್ಣನವರು 12ನೇ ಶತಮಾನದಲ್ಲಿಯೇ ಹೇಳಿ ಹೋಗಿದ್ದಾರೆ. ಇವತ್ತು ಹಸಿದಿರುವ ಜನರು ಈ ಭಾಗದಲ್ಲಿದ್ದಾರೆ. ಆದ್ದರಿಂದ ಈ ಭಾಗದಲ್ಲಿ ಸಮರೋಪಾದಿಯಲ್ಲಿ ಇಲ್ಲಿನ ಅಭಿವೃದ್ಧಿ ಕೆಲಸಗಳನ್ನು ಕೈಗೆತ್ತಿಕೊಂಡರೆ ಕರ್ನಾಟಕ ರಾಜ್ಯದಲ್ಲಿ ಒಂದು ಸಮಾನತೆ ಬರುತ್ತದೆ. ಸಮಾನತೆ ಬಂದಾಗ ಈ ಭಾರತ ದೇಶದಲ್ಲಿ ಕರ್ನಾಟಕ ರಾಜ್ಯ ಅಖಂಡ ರಾಜ್ಯವಾಗಿ ತಲೆ ಎತ್ತಿ ನಿಲ್ಲಬಹುದು. ನಮ್ಮ ಭಾಗದ ಜನ ಎಷ್ಟು ಶಾಂತಿಯುತ ಎನ್ನುವುದಕ್ಕೆ ನಮ್ಮ ರಾಜ್ಯಕ್ಕೆ ಒಳ್ಳೊಳ್ಳೆ ಸಾಹಿತಿಗಳನ್ನು, ಶರಣರನ್ನು, ಪರಿವರ್ತನಾಕಾರರನ್ನು, ನೀಡಿದೆ. ನನ್ನ ತಾಯಿ ಕಿತ್ತೂರು ಚೆನ್ನಮ್ಮನ ನಾಡು ಇದು. ಸಂಗೊಳ್ಳಿ ರಾಯಣ್ಣನ ನಾಡು ಇದೆ. ಸ್ವಾತಂತ್ರಕ್ಕಾಗಿ ಜೀವನವನ್ನೇ ತ್ಯಾಗ ಮಾಡಿದ ಈ ಮಹಾತಾಯಿ ಈಕೆ. ಆ ನಾಡಿನ ಮಕ್ಕಳು ಇವತ್ತು ಅರೆಬಟ್ಟೆಯಲ್ಲಿದ್ದಾರೆ ಎಂದರೆ ಹೇಗೆ? ನಮ್ಮ ಭಾಗದಲ್ಲಿ ನೀವು ಬಂದು ನೋಡಿದರೆ ಮುಸಲ್ಮಾನರು ಯಾರು ಹಿಂದೂಗಳು ಯಾರು ಎನ್ನುವುದು ತಿಳಿಯುವುದಿಲ್ಲ. ಏಕೆಂದರೆ ಎಲ್ಲರೂ ಒಂದೇ ರೀತಿಯಲ್ಲಿ ಕಚ್ಚೆ ಪಂಚೆಯನ್ನು ಹಾಕಿರುತ್ತಾರೆ. ಈಗಲೂ ನನ್ನ ಮಾವ ನನ್ನ ಅಜ್ಜ ಎಲ್ಲರೂ ಕಚ್ಚೆ ಪಂಚೆಯನ್ನೇ ಧರಿಸುವುದು. ಮಾತನಾಡುವುದು ಕೂಡ ಕನ್ನಡವನ್ನೇ, ಇದು ಏನಾದಿದೆ ಎಂದರೆ ಕ–ಕರುಣೆ, ನ–ನಣ್ಣಿ, ಡ–ಡಮರುಗ ಎಂದು ಕರುಣಮಯಿಯಾದ ಮುಕ್ಕಣ್ಣೇಶ್ವರ ಎಂದು ಕನ್ನಡ ಡಮರುಗವನ್ನು ಬಾರಿಸಿದನೋ ಅಂದೇ ಈ ಭಾಷೆಗೆ ಕನ್ನಡ ಎಂದು ನಾಮಾಂಕಿತವಾಯಿತು. ಅಂತಹ ಕನ್ನಡದ ಅಭಿಮಾನಿಗಳು ಎಲ್ಲಾದರೂ ಇದ್ದರೆ ಅದು ಈ ಭಾಗದಲ್ಲಿ ಎಂದು ಹೇಳಬಯಸುತ್ತೇನೆ. ಅದರಿಂದ ಇವತ್ತು 10 ನಿಮಿಷಗಳಲ್ಲಿ ಇದರ ಬಗ್ಗೆ ಮಾತನಾಡಬೇಕೆಂದು ತಾವು ನನಗೆ ಹೇಳಿದಿರಿ, ಆದರೆ 3 ಗಂಟೆಗಳ ಕಾಲ ಮಾತನಾಡಿದರೂ ಸಹ ವಿಷಯಗಳು ಮುಗಿಯುವುದಿಲ್ಲ. ಏಕೆಂದರೆ ಕೃಷಿ, ನೀರಾವರಿ, ವಿದ್ಯುಚ್ಛಕ್ತಿ, ನಿರುದ್ಯೋಗ, ಸಾಹಿತ್ಯ ಪ್ರವಾಸೋದ್ಯಮ ಇವುಗಳೆಲ್ಲದರ ಬಗ್ಗೆ ಮಾತನಾಡಬೇಕಾಗಿದೆ. ಬಾದಾಮಿ ಎಂತಹ ದೊಡ್ಡ ಜಾಗ ಅದು ಎಂದೋ ಅಭಿವೃದ್ಧಿ ಹೊಂದಬೇಕಾಗಿತ್ತು., ಆದರೆ ಇವತ್ತು ಅಲ್ಲಿಗೆ ಸಂಪರ್ಕ ಸರಿಯಿಲ್ಲ, ಅಲ್ಲಿಗೆ ಹೋಗುವ ರಸ್ತೆ ಸರಿಯಾಗಿಲ್ಲ, ಗದಗ್‌ನಲ್ಲಿರುವ ಮಹಾನ್ ಸ್ವಾಮಿಗಳು ದಳವಾಯಿಯವರು ಕುರುಡರು, ಅವರ ಸಂಗೀತ ಎಷ್ಟು ಚೆನ್ನಾಗಿತ್ತು, ಶ್ರೀಮತಿ ಹಾನಗಲ್ ಗಂಗೂಬಾಯಿಯವರು, ಶ್ರೀ ಮನ್ಸೂರ್ ಆಲಿ ಖಾನ್ ರವರು, ಶ್ರೀ ಮಲ್ಲಿಕಾರ್ಜುನ ಮನ್ಸೂರ್‌ರವರು, ಶ್ರೀ ಭೀಮಸೇನಾ ಜೋಷಿಯವರಂತಹ ಮಹಾನ್ ವ್ಯಕ್ತಿಗಳು ಹುಟ್ಟಿದಂತಹ ನಾಡು ಇದು, ಇದನ್ನೆಲ್ಲ ನಾವು preserve ಮಾಡಬೇಕು. ಈ ಬೆಳಗಾವಿ ಏನೇ ಆದರೂ ಸಹ ಮಹಾರಾಷ್ಟ್ರಕ್ಕೆ ಹೋಗುವುದಿಲ್ಲ, ಚೆನ್ನಮ್ಮನ ಪುತ್ತಳಿ ಇಲ್ಲಿದೆ, ಸಂಗೊಳ್ಳರಾಯಣ್ಣನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಕ್ಕಳಿದ್ದಾರೆ. ಇವತ್ತು ಯಾರು ಏನೇ ಹೋರಾಟವನ್ನು ಮಾಡಿದರೂ ಸಹ ಬೆಳಗಾವಿ ಮಹಾರಾಷ್ಟ್ರಕ್ಕೆ ಸೇರುವುದಿಲ್ಲ. ಮಹಾರಾಷ್ಟ್ರದವರು ಅವರ ಪಾಡಿಗೆ ಅವರು ಹಾರಾಡಿಕೊಂಡರೂ ಸಹ ಬೆಳಗಾವಿ ಇಲ್ಲಿಯೇ ಇರುತ್ತದೆ. ಇದರ ಬಗ್ಗೆ ತಿಳಿದುಕೊಳ್ಳಬೇಕೆಂದರೆ ಮಹಾಜನ್ ವರದಿಯನ್ನು ತೆಗೆದು ನೋಡಿ. ಹಿಂದೆ ಮರಾಠಿಗರ ಬಳಿ ಭೂಮಿಯೇ ಇರಲಿಲ್ಲ. ಭೂಮಿ ಇದ್ದದ್ದು ಮುಸಲ್ಮಾನರು ಮತ್ತು ಲಿಂಗಾಯಿತರ ಬಳಿಯಲ್ಲಿ ಮರಾಠಿಗರು ಬಾಡಿಗೆದಾರರಾಗಿದ್ದರು. Karnataka *Land Reforms Act* ಬಂದ ಮೇಲೆ ಇವರೆಲ್ಲರೂ ಭೂಮಿಯ ಮಾಲೀಕರಾಗಿ ಬಿಟ್ಟರು. ಮಾಲೀಕರಾಗಿದ್ದವರು ಭಿಕ್ಷುಕರಾದರು. ಭೂಮಿ ಅವರ ಹೆಸರಿಗೆ ಹೋದ ಮೇಲೆ "ಅಮ್‌ಚಾ ಪಾಜೆ, ಅಮ್‌ಚಾ ಪಾಜೆ, ಜಾಲಟ್ ಪಾಜೆ" ಎಂದು ಹೇಳುತ್ತಾರೆಯೇ ಹೊರತು ಮುಂಚೆ ಅವರಿಗೆ ಯಾವುದೇ ಜಮೀನು ಇರಲಿಲ್ಲ. ಇಲ್ಲೆಲ್ಲ ಕೂಲಿ ಕೆಲಸವನ್ನು ಮಾಡಲು ಬಂದ ಜನ ಅವರು. ಇಲ್ಲಿ ದುಡಿಯಲಿಕ್ಕೆ ಬಂದವರು ಇದನ್ನು ನಮ್ಮ ನಾಡು ಎಂದು ಹೇಳುತ್ತಿದ್ದಾರೆ. ಹಿಂದೆ ಇಲ್ಲಿ ಮುಸಲ್ಮಾನರು ದೊಡ್ಡ ಜಾಗೀರುದಾರರಾಗಿದ್ದರು ಮತ್ತು ಲಿಂಗಾಯತರಿಗೆ ಭೂಮಿ ಇತ್ತು. ಇವತ್ತು Karnataka *Land Reforms Act* ನಿಂದ ಭೂಮಿ ಅವರಿಗೆ ಸಿಕ್ಕಿದೆ. ಆದ್ದರಿಂದ ಇಲ್ಲಿ ಕೈಗಾರಿಕೆಗಳನ್ನು ಸೃಷ್ಟಿಸಿ, ನಮ್ಮ ಜನರ ಸಂಖ್ಯೆಯನ್ನು ಹೆಚ್ಚಿಗೆ ಮಾಡಬೇಕು. ಮಾನ್ಯ ದೇಶಪಾಂಡೆಯವರು ಇದರ ಬಗ್ಗೆ ಬಹಳ ಒಳ್ಳೆಯ ಮಾತನ್ನು ಹೇಳಿದರು. ಯಾವುದೇ Multi National Companies ಆಗಲೀ ಸ್ಥಳೀಯರಿಗೆ ನೌಕರಿ ನೀಡುವುದಕ್ಕೆ ಅವರು ಒಪ್ಪಿಕೊಳ್ಳುವುದಿಲ್ಲ. ಅಲ್ಲಿಂದಲೇ ಅವರು ರೆಡಿಮೇಡ್ ನೌಕರರನ್ನು ಕರೆದು ತಂದಿರುತ್ತಾರೆ. ಇಂತಹ ಕಂಪನಿಗಳಿಗೆ ಇಲ್ಲಿ ಭೂಮಿಯನ್ನು ನೀಡುವಾಗಲೇ ಸರೋಜಿನಿ ಮಹಿಷಿ ಆಯೋಗದ ವರದಿಯ ಪ್ರಕಾರ ಇಷ್ಟು ಜನ ಸ್ಥಳೀಯರಿಗೆ ನೀನು ಇಲ್ಲಿ ನೌಕರಿಯನ್ನು ನೀಡಬೇಕೆನ್ನುವ ಷರತ್ತುಗಳನ್ನು ಹಾಕಬೇಕು. ಇನ್ನು ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳನ್ನು ತೆರೆಯುವುದಕ್ಕೆ ನಮ್ಮ ಜನರು ಕೂಡ ಮುಂದಾಗಬೇಕು. ಮಾನ್ಯ ಹೊರಟ್ಟಿಯವರು ಹೇಳಿದ ಹಾಗೆ ನಮ್ಮ ಜನರು ಸಣ್ಣ ಸಣ್ಣ ವ್ಯಾಪಾರಗಳನ್ನು ಮಾಡಿಕೊಂಡು ಸಂಜೆಗೆ ಕಮೀಷನ್ ಪಡೆದು ಮನೆಗೆ ಹೋಗುವವರೇ ಹೊರತು ಅವರಿಗೆ ಕೈಗಾರಿಕೆಗಳನ್ನು ನಡೆಸಬೇಕೆನ್ನುವ ಹುಮ್ಮಸ್ಸು ಇರಲಿಲ್ಲ. ಇತ್ತೀಚೆಗೆ ಅದು ನಮ್ಮವರಿಗೆ ಬರುತ್ತಿದೆ. I am very happy. ನಾನು ಕೂಡ ಒಂದು ತೀರ್ಮಾನವನ್ನು ಮಾಡಿ ನಾನು ಬೆಂಗಳೂರಿನಲ್ಲಿ ಸೇವೆ ಮಾಡಿದ್ದು ಸಾಕು, ಇನ್ನು ನಾನು ಸಾಯಬೇಕಾದರೆ ರಾಣಿಬೆನ್ನೂರಿನ 'ಐರಣಿ' ಗ್ರಾಮಯಲ್ಲಿಯೇ ಸಾಯುತ್ತೇನೆ, ಹುಬ್ಬಳ್ಳಿಯಲ್ಲಿ ಮನೆ ಮಾಡುತ್ತೇನೆ ಎಂದು declare ಮಾಡಿದೆನು. ಆದ್ದರಿಂದ ಸರ್ಕಾರಕ್ಕೆ ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ವಿನಂತಿಯನ್ನು ಮಾಡಿಕೊಳ್ಳುವುದೇನೆಂದರೆ, ಸಂಗೊಳ್ಳಿ ರಾಯಣ್ಣನ ಪರಂಪರೆ ಮತ್ತು

ಕಿತ್ತೂರು ಚೆನ್ನಮ್ಮನ ಪರಂಪರೆಯನ್ನು ಹೊಂದಿರುವ ನಾವು ಏಕೆ ಹೆದರಬೇಕು? ಮಾನ್ಯ ಈಶ್ವರಪ್ಪನವರು ನಮ್ಮೆಲ್ಲರ ಮುಂದಾಳತ್ವನ್ನು ವಹಿಸಿಕೊಳ್ಳಲಿ. ನಾವೆರಲ್ಲರೂ ಅವರಿಗೆ ಬೆಂಬಲ ಕೊಟ್ಟು ಅವರ ಜೊತೆಗಿರುತ್ತೇವೆ, ಅವರ ಮುಂದಾಳತ್ವದಲ್ಲಿ ಈ ಭಾಗದ ಅಭಿವೃದ್ಧಿಗೆ ಮುಂದಾದರೆ, ಮುಂದೆ ಒಂದು ಕಾಲದಲ್ಲಿ ಕಾಲಜ್ಞಾನಿಗಳು ಇಂತಹ ಪುಣ್ಯಾತ್ಮರು ಬಂದು ಪಕ್ಷ ಬೇಧ, ಎಲ್ಲವನ್ನು ಮರೆತು ಈ ಭಾಗದ ಅಭಿವೃದ್ಧಿ ಮಾಡಿದರು ಎನ್ನುವುದನ್ನು ಬರೆದಿಡುತ್ತಾರೆ. ಆದ್ದರಿಂದ ಈಗ ಕಾಂಗ್ರೆಸ್, ಜನತಾದಳ, ಮತ್ತು ಭಾರತೀಯ ಜನತಾ ಪಕ್ಷಗಳೆಲ್ಲ ಒಟ್ಟಿಗೆ ಸೇರಿ, ಈ ಮೂರು ಪಕ್ಷಗಳ ಸಂಗಮ ಕೂಡಲಸಂಗಮದಲ್ಲಿ ಆದ ಹಾಗೆ ಈ ಅಧಿವೇಶನದಲ್ಲಿಯೇ ಇದಕ್ಕೆ ನಾಂದಿಯಾಗಲಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಜೈ ಹಿಂದ್, ಜೈ ಕರ್ನಾಟಕ.

ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):– ಮಾನ್ಯ ಸಭಾಪತಿಯವರೇ, ಸದನದಲ್ಲಿ ಒಬ್ಬರು ಐಎಎಸ್ ಅಧಿಕಾರಿಗಳಿಲ್ಲ, ಒಬ್ಬರಾದರೂ ಇದ್ದಿದ್ದರೆ ಚೆನ್ನಾಗಿರುತ್ತಿತ್ತು.

ಶ್ರೀ ಐವನ್ ಡಿ'ಸೋಜಾ(ಸರ್ಕಾರದ ಮುಖ್ಯ ಸಚೇತಕರು):– ಮಾನ್ಯ ಸಭಾಪತಿಗಳೇ, ಉತ್ತರ ಕರ್ನಾಟಕದ ಅಭಿವೃದ್ಧಿಯ ಬಗ್ಗೆ ಚರ್ಚೆ ನಡೆಸಲು ಮಾನ್ಯ ಮುಖ್ಯಮಂತ್ರಿಗಳು ಒಂದು ಸಭೆಯನ್ನು ಕರೆದಿದ್ದಾರೆ. ಎಲ್ಲಾ ಐಎಎಸ್ ಅಧಿಕಾರಿಗಳು ಅಲ್ಲಿಗೆ ಹೋಗಿದ್ದಾರೆ. ಇನ್ನು 15 ನಿಮಿಷಗಳ ನಂತರ ಬರುತ್ತೇವೆ ನನಗೆ ಚೀಟಿ ಬರೆದು ಕಳುಹಿಸಿದ್ದಾರೆ.

ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):– ಮಾನ್ಯ ಸಭಾಪತಿಯವರೇ, ಇವತ್ತು ಸದನದಲ್ಲಿ ಹಾಜರಿರಬೇಕಾದ ಮಂತ್ರಿಗಳು ಸಹ ಇಲ್ಲ. ಅದು ಕೂಡ ಮುಖ್ಯ ಸಚೇತಕರದ್ದೇ ಜವಾಬ್ದಾರಿ. ಇವತ್ತು ಸದನದಲ್ಲಿ ಹಾಜರಿರಬೇಕಿದ್ದ ಸಚಿವರುಗಳಾದ ಶ್ರೀ ಆರ್.ವಿ.ದೇಶಪಾಂಡೆ, ಶ್ರೀ ಶರಣ ಬಸಪ್ಪ ರುದ್ರಪ್ಪ ಪಾಟೀಲ್, ಶ್ರೀ ಸಂತೋಷ್ ಎಸ್ ಲಾಡ್, ಶ್ರೀ ಬಸವರಾಜ್ ರಾಯರೆಡ್ಡಿ, ಶ್ರೀ ಪ್ರಿಯಾಂಕ ಖರ್ಗೆ, ಶ್ರೀ ಪ್ರಮೋದ್ ಮಧ್ವರಾಜ್, ಶ್ರೀ ಹೆಚ್.ಎಂ.ರೇವಣ್ಣ ಇವರು ಈಗ ಸದನದಲ್ಲಿ ಇಲ್ಲ, ಇವರೆಲ್ಲರೂ ಅದೇ ಸಭೆಗೆ ಹೋಗಿದ್ದಾರೆಯೇ?

ಶ್ರೀ ಐವನ್ ಡಿ'ಸೋಜಾ:– ಕೆಲವರು ಹೋಗಿದ್ದಾರೆ, ಈಗ ಬರುತ್ತಾರೆ, ಈಶ್ವರಪ್ಪನವರು ಮಾತನಾಡುವುದು ಅವರಿಗೆ ಗೊತ್ತಿಲ್ಲ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಕೆ.ಎಸ್.ಈಶ್ವರಪ್ಪ:– ಮಾನ್ಯ ಸಭಾಪತಿಯವರೇ, ನಾನು ಮಾತನಾಡಿದರೆ ಮಾತ್ರ ಸಚಿವರು ಇರಬೇಕೆ, ಬೇರೆ ಮಾನ್ಯ ಸದಸ್ಯರುಗಳು ಮಾತನಾಡುವ ಸಂದರ್ಭದಲ್ಲಿ ಇರುವುದು ಬೇಡವೇ? ಇನ್ನು ಮೇಲೆ ಈಶ್ವರಪ್ಪ ಮಾತನಾಡುವಾಗ ಬರಬೇಕೆಂದು ಚೀಟಿಯಲ್ಲಿ ಹಾಕಿಬಿಡಿ. ನನಗೆ ಹೆದರುವುದು ಬೇಡ.

ಮಾನ್ಯ ಸಭಾಪತಿಯವರೇ, ಉತ್ತರ ಕರ್ನಾಟಕದ ಅಭಿವೃದ್ಧಿಯ ಬಗ್ಗೆ ಸದನದಲ್ಲಿ ವಿಶೇಷ ಪ್ರಸ್ತಾವದಡಿಯಲ್ಲಿ ಚರ್ಚೆ ನಡೆಯುತ್ತಿರುವ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಏಕೆ ಈ ಸಭೆಯನ್ನು ನಡೆಸುತ್ತಿದ್ದಾರೆ ಎನ್ನುವುದು ನನಗೂ ಸಹ ಗೊತ್ತಿಲ್ಲ. ಇಂತಹ ಸಭೆಗಳನ್ನು ಸಂಜೆಯ ಮೇಲಾಗಲಿ ಅಥವಾ ಬೆಳಗ್ಗೆ ಆಗಲೀ ಇಟ್ಟುಕೊಳ್ಳಬಹುದಿತ್ತು. ಸದನದಲ್ಲಿ ಮಾನ್ಯ ಸದಸ್ಯರುಗಳಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು, ಶ್ರೀ ಸಿ.ಎಂ.ಇಬ್ರಾಹಿಂ ಅವರು ಈ ವಿಚಾರದ ಬಗ್ಗೆ ಮಾತನಾಡಿದರು. ನಾನು ರಾತ್ರಿ 12 ಗಂಟೆ ಆದರೂ ಮಾತನಾಡುವುದಕ್ಕೆ ತಯಾರಿರುವಾಗ ಅಧಿಕಾರಿಗಳಿಗೆ ಬೇರೆ ಏನು ಕೆಲಸವಿದೆ? ಇಂತಹ ಚರ್ಚೆ ನಡೆಯತಕ್ಕ ಸಂದರ್ಭದಲ್ಲಿ ಹೊರಗಡೆ ಸಮಾರಂಭಗಳಿಗೆ ಹೋಗಬಾರದೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ಸಚೇತಕರು ತಿಳಿಸಬೇಕು.

ನಿನ್ನೆ ಕೂಡ ಅನೇಕ ಸಚಿವರು ಸಮಾರಂಭಗಳಿಗೆ ಹೋಗಿದ್ದಾರೆ. ಈ ರೀತಿ ಸಚಿವರುಗಳು ಬೇರೆ ಬೇರೆ ಸಮಾರಂಭಗಳಿಗೆ ಹೋಗುವುದಾದರೆ ಇಂದು ಸದನವನ್ನು ಏಕೆ ನಡೆಸಬೇಕಾಗಿತ್ತು? ಸದನದಲ್ಲಿ ಅಧಿಕಾರಿಗಳೂ ಇಲ್ಲ, ಸಚಿವರು ಇಲ್ಲ ಎಂದರೆ ನಾವು ಯಾರನ್ನು ಉದ್ದೇಶಿಸಿ ಮಾತನಾಡಬೇಕೆನ್ನುವುದು ಗೊತ್ತಿಲ್ಲ.

(ಮುಂದು)

(1130)/21–11–2017/5–10/ಎಲ್ಎಂ/ಎಕೆ

ಶ್ರೀ ಕೆ.ಎಸ್.ಈಶ್ವರಪ್ಪ(ಮುಂದು):– ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಿ ಅಷ್ಟಕ್ಕೇ ಸೀಮಿತವಾಗುವಂತಹ ಕೆಲಸ ಅಧಿವೇಶನಗಳಲ್ಲಿ ಆಗುತ್ತಿದೆ. ಬೆಳಗಾವಿಯಲ್ಲಿ ಬಂದು ಅಧಿವೇಶನ ಮಾಡುವ ಉದ್ದೇಶ ಉತ್ತರ ಕರ್ನಾಟಕದ ಬಗ್ಗೆ ಚರ್ಚೆ ಮಾಡಬೇಕು ಎನ್ನುವುದು. ಈಗ ನಾಲ್ಕೈದು ಸಾರಿ ಅಧಿವೇಶನವಾಗಿದೆ. ಇದರಿಂದ ಏನಾದರೂ ಪ್ರಯೋಜನವಾಗಿದೆಯೇ? ಉದ್ಯೋಗ ಸೃಷ್ಟಿಯಾಗಬೇಕು, ನೀರಾವರಿ ಅಭಿವೃದ್ಧಿಯಾಗಬೇಕು ಎಲ್ಲ ಹೇಳುತ್ತೇವೆ. ಆದರೆ ಪರಿಸ್ಥಿತಿ ಏನು ಇದೆ? ಹಿರಿಯ ಮಂತ್ರಿಗಳಾದ ಮಾನ್ಯ ಎಚ್.ಕೆ.ಪಾಟೀಲ್‌ರವರಾದರೂ ಇದ್ದಾರೆ ಅದೊಂದೇ ಸಮಾಧಾನ ನಮಗೆ. ಸಚಿವ ಸಂಪುಟದಲ್ಲಿ ಅತಿ ಹೆಚ್ಚು ಜಾಹೀರಾತು ಕೊಡುವಂತಹ ಮಂತ್ರಿಗಳು ಎಂದರೆ ಮಾನ್ಯ ನೀರಾವರಿ ಸಚಿವರು ಇರಬಹುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ಪರ್ಧೆ ಇರಲಿ. ಸಾಧನೆ ಮಾಡಿ ಸ್ಪರ್ಧೆ ಮಾಡಿದರೆ ತುಂಬಾ ಸಂತೋಷ. 2017-18ನೇ ಸಾಲಿನಲ್ಲಿ 9.25.805 ಹೆಕ್ಟಾರ್‌ಗೆ ನೀರಾವರಿ ಕಲ್ಪಿಸಲಾಗುವುದು ಎಂದು ತಿಳಿಸಿದ್ದು, ಅಂದರೆ 20,27,512 ಎಕರೆಗೆ ... ಇವರ ಜಾಹೀರಾತನ್ನು ನೋಡಿ ನನಗೆ ತುಂಬಾ ಆಶ್ಚರ್ಯವಾಗಿದೆ, ನಾನು ಕೂಡಾ ನೀರಾವರಿ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಜಲಸಂಪನ್ಮೂಲ ಇಲಾಖೆಯಿಂದ ಇವರು ಜಾಹೀರಾತು ನೀಡಿದ್ದಾರೆ "ನುಡಿದಂತೆ ನಡೆದಿದ್ದೇವೆ" " ನೀರಾವರಿ ಕ್ಷೇತ್ರದಲ್ಲಿ ಹೊಸ ಪರ್ವ" target 5 ವರ್ಷಕ್ಕೆ 20,27,512 ಎಕರೆ. ಇವರು ಹೇಳುವುದು, ಪ್ರಸಕ್ತ ಸರ್ಕಾರದ ನಾಲ್ಕೂವರೆ ವರ್ಷದ ಅವಧಿಯಲ್ಲಿ ಈವರೆಗೆ 6.40.925 ಎಕರೆ ಪ್ರದೇಶಕ್ಕೆ ನೀರಾವರಿ ಸಾಮರ್ಥ್ಯ ಕಲ್ಪಿಸಲಾಗಿದೆ ಎಂದು ಹೇಳಿದ್ದಾರೆ " ನುಡಿದಂತೆ ನಡೆದಿದ್ದೇವೆ " ಎಂದು banner headlines ಹಾಕಿಕೊಂಡಿದ್ದಾರೆ. ಅಂದರೆ 31% ನುಡಿದ ಹಾಗೆ ನಡೆದಿದ್ದಾರೆ. ಹೀಗಾದರೆ ಉತ್ತರ ಕರ್ನಾಟಕದ ಅಭಿವೃದ್ಧಿ ಹೇಗೆ ಆಗುತ್ತದೆ? ಇಲ್ಲಿ ಇಚ್ಛಾಶಕ್ತಿಯ ಕೊರತೆ ಇದೆ. ಬರೀ ಭಾಷಣ, ಭರವಸೆಗಳು, ನಾವು 165 ಅಂಶಗಳ ಪ್ರಣಾಳಿಕೆಯನ್ನು ಕೊಟ್ಟಿದ್ದೇವು, 157 ಅಂಶಗಳನ್ನು ಈಡೇರಿಸಿದ್ದೇವೆ ಎಂದು ಹೇಳಿದ್ದಾರೆ. ಹೀಗೇನಾ ಮುಗಿಸುವುದು? ಅದಕ್ಕೆ ನಾನು ಹೇಳುವುದು ಯಾವುದೆ ಒಂದು ಕೆಲಸವನ್ನು ಮಾಡುವಾಗ ಅದಕ್ಕೆ ಇಚ್ಛಾಶಕ್ತಿ ಇಲ್ಲ ಎಂದರೆ ಏನು ಉಪಯೋಗ ಆಗುವುದಿಲ್ಲ. ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಮಾನ್ಯ ಎಚ್.ಕೆ.ಪಾಟೀಲ್‌ರವರು ಹಿರಿಯರು ಹೇಗಾದರೂ ಮಾಡಿ ನೀರಾವರಿಗೆ ಒಂದು ರೂಪವನ್ನು ಕೊಡಿ. ಬೇರೆ ಎಲ್ಲಾ ಇಲಾಖೆಗಳು ಏನು ಮಾಡುತ್ತಿವೆ ಎನ್ನುವ ವಿವರಕ್ಕೆ ನಾನು ಹೋಗುವುದಿಲ್ಲ. 16-12-2014ರಲ್ಲಿ ಬೆಳಗಾವಿ ಅಧಿವೇಶನದಲ್ಲಿ ನಿಯಮ 68ರ ಮೇಲೆ ಉತ್ತರ ಕರ್ನಾಟಕದ ನೀರಾವರಿ ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ನೀರಾವರಿ ಸಚಿವರಾದ ಮಾನ್ಯ ಎಂ.ಬಿ.ಪಾಟೀಲ್‌ರವರು ಉತ್ತರ ನೀಡಿದ್ದಾರೆ. ದಿನಾಂಕ: 05-06-17ರ ಕನ್ನಡ ಪ್ರಭ ಪತ್ರಿಕೆಯಲ್ಲಿ ಕೊಟ್ಟಿರುವ ಜಾಹೀರಾತು; "9 ಉಪಯೋಜನೆಗಳ ಪೈಕಿ ಈ ಕೆಳಗಿನ ಯೋಜನೆಗಳ ಕಾಮಗಾರಿಗಳು ಪೂರ್ಣವಾಗಿವೆ" ಎಂದು ಹೇಳಿದ್ದಾರೆ. ಅದರಲ್ಲಿ ಚಿಮ್ಮಲಗಿ ಏತ ನೀರಾವರಿ ಯೋಜನೆ, ಇಂಡಿ ಏತ ನೀರಾವರಿ ಯೋಜನೆ, ಮಲ್ಲಾಬಾದ್ ಏತ ನೀರಾವರಿ ಯೋಜನೆ ಈ ಮೂರು ಯೋಜನೆಗಳು ಸೇರಿ 1.41,487 ಹೆಕ್ಟಾರ್, ಇನ್ನು ಉಳಿದವು, ಮುಳವಾಡ ಏತ ನೀರಾವರಿ ಯೋಜನೆ, ನಾರಾಯಣಪುರ ಬಲದಂಡೆ ಕಾಲುವೆ ವಿಸ್ತರಣೆ ಯೋಜನೆ, ರಾಂಪುರ ಏತ ನೀರಾವರಿ ಯೋಜನೆ, ಕೊಪ್ಪಳ ಏತ ನೀರಾವರಿ ಯೋಜನೆ, ಹೆರಕಲ್ ಏತ ನೀರಾವರಿ ಯೋಜನೆ ಮತ್ತು Bheema Flank, ಈ ಎಲ್ಲವು ಸೇರಿದರೆ 3,88,985 ಹೆಕ್ಟಾರ್ ಆಗುತ್ತದೆ. ಅಂದರೆ ಒಟ್ಟು 5,30,675 ಹೆಕ್ಟಾರ್ ಪ್ರದೇಶ ನೀರಾವರಿ ಆಗಬೇಕು. ಈ 9 ಯೋಜನೆಗಳಲ್ಲಿ Bheema Flank 21,572 ಹೆಕ್ಟಾರ್‌ಗೆ ಈಗ ಟೆಂಡರ್ ಕರೆಯುತ್ತಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ, Upper Krishna ದ ಮೂರನೇ ಹಂತದ ಕೆಲಸವನ್ನು ಮುಗಿಸಬೇಕು ಎನ್ನುವ ಕಳಕಳಿ ಇದ್ದಿದ್ದರೆ ಈ ಪರಿಸ್ಥಿತಿ ಬರುತ್ತಾ ಇತ್ತಾ? ನೀವು target ದೊಡ್ಡದಾಗಿ ಇಟ್ಟುಕೊಂಡಿದ್ದೀರಿ. ಹಿರಿಯರು ಒಂದು ಗಾದೆ ಮಾತನ್ನು ಹೇಳುತ್ತಾರೆ " ಗುಡ್ಡಕ್ಕೆ ಹಗ್ಗ ಕಟ್ಟಬೇಕು, ಬಂದರೆ ಗುಡ್ಡ ಹೋದರೆ ಹಗ್ಗ" ಎಂದು. ಇದನ್ನು ಇನ್ನೂ ಕೆಟ್ಟದಾಗಿಯು ಹೇಳುತ್ತಾರೆ. ಅದನ್ನು ನಾನು ಹೇಳಲು ಹೋಗುವುದಿಲ್ಲ. ಬಂದರೆ ಗುಡ್ಡ ಹೋದರೆ ಹಗ್ಗ ಈ ಸರ್ಕಾರ ಆ ದಿಕ್ಕಿನಲ್ಲಿ ನಡೆಯುತ್ತಿದೆಯೇ? ನೀವು 22ಲಕ್ಷ ಹೆಕ್ಟಾರ್ ಸಾಧನೆ ಮಾಡುತ್ತೇವೆ ಎಂದು ಹೇಳಿ ಇಷ್ಟೇ ಸಾಧನೆ ಮಾಡಿದರೆ ಇದನ್ನು ಏನು ಎಂದು ಕರೆಯಬೇಕು? ಯುಕೆಪಿ ಮೂರನೇ ಹಂತದ ಬಗ್ಗೆ ಪೂರ್ಣ ಗಮನವನ್ನು ಕೊಡದೇ ಇದ್ದರೆ, ಏನು ಲಾಭವಾಗುವುದಿಲ್ಲ. ಈ ಭಾಗದ ಜನರಿಗೆ ತುಂಬಾ ಅನ್ಯಾಯವಾಗುತ್ತದೆ ಎಂದು ನನಗನ್ನಿಸುತ್ತದೆ. ಈ ದಿಕ್ಕಿನಲ್ಲಿ ಸರ್ಕಾರ ಗಮನ ಹರಿಸಬೇಕು. ಆದಷ್ಟು ಬೇಗ ಏನು target ಇಟ್ಟುಕೊಂಡಿದ್ದೇವೆ ಅದನ್ನು ಮುಟ್ಟಬೇಕು. ಎಲ್ಲಾ ಇಲಾಖೆಗಳಲ್ಲಿ ನಿಗಮಗಳು ಇವೆ ಅಲ್ಲಿ ಅಧಿಕಾರಿಗಳಿದ್ದಾರೆ. ಇಲ್ಲಿ ಏನು ಆಗಿದೆ ಎಂದರೆ ಯಾರಿಗೆ ಯಾವ ಇಲಾಖೆ, ಯಾರಿಗೆ ಯಾವ ಯೋಜನೆ ಎನ್ನುವ target ನ್ನು ಕೊಟ್ಟಿರುವುದಿಲ್ಲ. ಈ ಯೋಜನೆಯನ್ನು ನೀನು ಮುಗಿಸು, ಅದಕ್ಕೆ ಎಷ್ಟು ಹಣ ಬೇಕು, ಎಷ್ಟು ಜನ ಬೇಕು ತೆಗೆದುಕೋ, time bound ಮೇಲೆ ಕೆಲಸ ಮಾಡಿ, financial achievement ಇಷ್ಟು ಮಾಡು, physical achievement ಇಷ್ಟು ಮಾಡು ಎಂದು target ನ್ನು ಕೊಟ್ಟು ಅದನ್ನು ತಾವು verify ಮಾಡಿದರೆ ಆಗ ಖಂಡಿತವಾಗಿಯೂ ಲಾಭವಾಗುತ್ತದೆ. ಆದರೆ ಒಂದು ಕಡೆಯಿಂದ ನೋಡಿಕೊಂಡು ಬನ್ನಿ ಇಲ್ಲಿ ಹೇಳುವವರು ಕೇಳುವವರು ಯಾರು ಇಲ್ಲ. ಉತ್ತರ ಕರ್ನಾಟಕದ ಭಾಗಕ್ಕೆ ಮಾನ್ಯ ಧರ್ಮಸಿಂಗ್‌ರವರು, ಮಾನ್ಯ ಖರ್ಗೆಯವರು ಬಹಳ ಶ್ರಮ ಹಾಕಿ ಈ ಯೋಜನೆಗಳನ್ನು ತಂದಿದ್ದಾರೆ. ಆ ಕಾಲದಿಂದಲೂ ನಡೆದುಕೊಂಡು ಬಂದಿದೆ. ಮಾನ್ಯ ದೇವೇಗೌಡರು, ಮಾನ್ಯ ಯಡಿಯೂರಪ್ಪನವರು, ಮಾನ್ಯ ಬೊಮ್ಮಾಯಿಯವರು, ನಾನು ನಾವೆಲ್ಲ ಎಷ್ಟು ಸಾಧ್ಯ ಅಷ್ಟು ಮುಂದುವರೆಸಿಕೊಂಡು ಬಂದಿದ್ದೇವೆ. ಆದರೆ ಈ ಭಾಗದ ಜನರಿಗೆ ನೀರು ಕೊಡಲು 36% ಕೆಲಸ ಮಾಡಿದರೆ ಹೇಗೆ ಸಾಧ್ಯ? ಈ ದಿಕ್ಕಿನಲ್ಲಿ ದಯಮಾಡಿ ಗಮನ ಹರಿಸಬೇಕು. ಇಲ್ಲಿ ಕೃಷ್ಣ ಮೇಲ್ದಂಡೆ ಯೋಜನೆ ಸಂತ್ರಸ್ತರ ಹಿತರಕ್ಷಣಾ ಸಮಿತಿಗಳು ಲೆಕ್ಕ ಇಲ್ಲದಷ್ಟು ಆಗಿವೆ. ಅವರ ಬೇಡಿಕೆ ಏನು, ನಾವು ನಮ್ಮ ಭೂಮಿಯನ್ನು ಕಳೆದುಕೊಂಡಿದ್ದೇವೆ, ಮನೆ ಕಳೆದುಕೊಂಡಿದ್ದೇವೆ ನಮಗೆ ಸ್ವಲ್ಪ ಹಣ ಕೊಡಿ ಎಂದು ಕೇಳಿದರೆ ಹಣ ಕೊಡದಿದ್ದರೆ ಏನು ಮಾಡಬೇಕು ಅವರು? F.R.L. (Full Reservoir Level) 524 ಮೀಟರ್ ಎತ್ತರದ ಕೃಷ್ಣಾ ಮೇಲ್ದಂಡೆ

ಯೋಜನೆ ಮೂರನೇ ಹಂತದ ಭೂಸ್ವಾಧೀನ ಪ್ರಕ್ರಿಯೆಯಲ್ಲಿ 2013ರ ಹೊಸ ಭೂ ಸ್ವಾಧೀನ ಕಾಯಿದೆ ಯಥಾವತ್ತಾಗಿ ಪಾಲನೆಯಾಗಿರುವುದಿಲ್ಲ.

ಶ್ರೀ ಬಸವರಾಜ ಪಾಟೀಲ್ ಇಟಗಿ:- ಮಾನ್ಯ ಸಭಾಪತಿಗಳೆ, ಒಂದು ವಿಷಯವನ್ನು ಸದನದ ಗಮನಕ್ಕೆ ತರಲು ಬಯಸುತ್ತೇನೆ, ಮಾನ್ಯ ಮಾಜಿ ಸಚಿವರು ಮತ್ತು ವಿರೋಧ ಪಕ್ಷದ ನಾಯಕರು Krishna basin ನ ಮೂರನೇ ಹಂತದ ಬಗ್ಗೆ ಹೇಳಿದರು. ಇನ್ನೊಂದು ವಿಷಯವನ್ನು ಅವರ ಗಮನಕ್ಕೆ ತರುತ್ತೇನೆ, 524 ಮೀಟರ್ ಬಂದಾಗ 'B' Scheme complete implement ಅಗತಕ್ಕದ್ದು. ನಮ್ಮ ಕಾಂಗ್ರೆಸ್ ಸರ್ಕಾರ, ಮಾನ್ಯ ಸಿದ್ದರಾಮಯ್ಯನವರ ಸರ್ಕಾರ, ಇನ್ನು 519 ಮೀಟರ್‌ನಿಂದ 524 ಮೀಟರ್‌ಗೆ raise ಮಾಡಿಲ್ಲ, ಈಗಾಗಲೇ 524 ಮೀಟರ್‌ಗೆ ಏನೇನು ಬೇಕಾಗಿದೆ ಎಲ್ಲವನ್ನು well in advance complete ಮಾಡುವಂತಹ ಕೆಲಸವನ್ನು ಈ ಸರ್ಕಾರ ಮಾಡಿದೆ. ಆಂಧ್ರಪ್ರದೇಶ ಇನ್ನು ವಿಂಗಡಣೆಯಾಗದ ಸಮಯದಲ್ಲಿ ಅವರು ಇದನ್ನು ಮೊದಲೇ ಮಾಡಿದ್ದರು. ಆಗ ಅವರಿಗೆ ಹೆಚ್ಚಿಗೆ ನೀರು ಹೋಗುವಂತೆ ಆಗಿತ್ತು. ಅದನ್ನು ಇವತ್ತು ನಮ್ಮ ಕಾಂಗ್ರೆಸ್ ಪಕ್ಷದ ಮಾನ್ಯ ಸಿದ್ದರಾಮಯ್ಯನವರ ಸರ್ಕಾರ ಮಾಡಿದೆ ಆದುದರಿಂದ ಕೃಷ್ಣಾ ಬೇಸಿನ್‌ನ ಮೂರನೇ ಹಂತದ ಕೆಲಸಗಳು ಈಗಾಗಲೇ ಪೂರ್ಣವಾಗುವ ಹಂತದಲ್ಲಿ ಇವೆ ಎನ್ನುವ ವಿಷಯವನ್ನು ಅವರ ಗಮನಕ್ಕೆ ತರಲು ಬಯಸುತ್ತೇನೆ.

(ಮುಂದು)

(1131)21-11-2017(05-20)ಬಿಎಸ್‌ಡಿ/ಎಕೆ

ಶ್ರೀ ಕೆ.ಎಸ್. ಈಶ್ವರಪ್ಪಃ- ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರು ನನ್ನ ಮಾತನ್ನು ಕ್ಲಿಯರ್ ಮಾಡಿಕೊಳ್ಳಲಿಲ್ಲ, ನಾನು ಈಗಿನಿಂದ ಹೇಳುತ್ತಿಲ್ಲ, ಇದು 5 ವರ್ಷದ target ಆಗಿದೆ. 5 ವರ್ಷಗಳಲ್ಲಿ ಇಡೀ ಕರ್ನಾಟಕಕ್ಕೆ ಎಷ್ಟು ನೀರು ಕೊಡುತ್ತೇವೆ ಎಂದು ಹೇಳಿದ್ದೇವು. ಅದರ ಪ್ರಕಾರ ನುಡಿದಂತೆ ನಡೆದ ಸರ್ಕಾರ ಎಂದು advertisementಗಳನ್ನು ಪತ್ರಿಕೆಗಳಿಗೆ ಕೊಟ್ಟಿದ್ದಾರೆ. 20,27,512 ಎಕರೆ ಣಚಿಡಿಜಾ ಇದ್ದದ್ದು, ಮುಟ್ಟಿರುವುದು 6,40,000 ಎಕರೆ ಆಗಿದೆ. ಅವರಿಗೆ ಆಸಕ್ತಿ ಇದೆ. ನಾನು ಟೀಕೆ ಮಾಡುತ್ತಿಲ್ಲ. ಅವರಿಗೆ ಆಸಕ್ತಿ ಇದ್ದಂತೆ ನನಗೂ ಆಸಕ್ತಿ ಇದೆ. ಅವರು ಏನೂ ಕೆಲಸ ಮಾಡಿಲ್ಲ ಎಂದು ಹೇಳುತ್ತಿಲ್ಲ. ನಾನು ಕೆಲಸ ಮಾಡಿರಿ ಎಂದು ಹೇಳುತ್ತಿದ್ದೇನೆ. 20 ಲಕ್ಷ ಎಕರೆಗೆ ನೀರನ್ನು ಒದಗಿಸಲಾಗುವುದೆಂದು target ಇಟ್ಟುಕೊಂಡು ಸುಮಾರು 6 ಲಕ್ಷ ಎಕರೆ ನೀರನ್ನು ಒದಗಿಸಿದರೆ ಇದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರಿಯೇ ಎಂದು ಮಾನ್ಯ ಸದಸ್ಯರು ಹೇಳಬೇಕು. ಮಾನ್ಯ ಬಸವರಾಜ ಪಾಟೀಲ್ ಇಟಗಿಯವರು ಮಾನ್ಯ ಸಿದ್ದರಾಮಯ್ಯನವರ ಸರ್ಕಾರದ ಪರವಾಗಿ ವಹಿಸಿಕೊಂಡು ಮಾತನಾಡುವುದಕ್ಕೆ ನಾನು ಖಂಡಿತ ಬೇಡ ಎನ್ನುವುದಿಲ್ಲ, ಅದು ಅವರ duty ಕೂಡ ಆಗಿದೆ. ಇಲ್ಲಿ ಎಂಎಲ್‌ಸಿ ಆಗಿ ಬಂದಿರುವುದು ಪುಗಸಟ್ಟೆಯೇ? ಅದನ್ನು ಮಾಡಲಿ, ಅದಕ್ಕಾಗಿ ಇರುವುದು. ನಾನು ಇಲ್ಲ ಎಂದು ಹೇಳುವುದಿಲ್ಲ. ನಾನು ವಿರೋಧ ಪಕ್ಷದ ನಾಯಕನಾಗಿ ಏನು ಹೇಳಿದ್ದಾರೆ ಮತ್ತು ಏನು ಮಾಡಿದ್ದಾರೆ ಎಂದು ಅವರ ಮುಂದೆ ಇಟ್ಟಾಗ ಅವರಿಗೇಕೆ ಸಿಟ್ಟು ಬರುತ್ತದೆ?

ಶ್ರೀ ಬಸವರಾಜ ಪಾಟೀಲ್ ಇಟಗಿಃ– ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹಿಂದಿನ ಸರ್ಕಾರದಲ್ಲಿ ನೀರಾವರಿ ಮಂತ್ರಿಗಳಾಗಿದ್ದರು. ಅದಕ್ಕಾಗಿ ನಾನು ಅವರ ಗಮನಕ್ಕೆ ತಂದಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪಃ– ಮಾನ್ಯ ಸಭಾಪತಿಯವರೇ, ನಾನೂ ಸಹ target ಏನು ಇಟ್ಟಿದ್ದರು ಮತ್ತು ಏನು achieve ಮಾಡಿದ್ದಾರೆ ಎಂಬುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳಿಗೆ ಅವರ ಪಕ್ಷದ ಸದಸ್ಯರು ಹೇಳಲಿ. ಅವರು ಸದನದಲ್ಲಿ ಕುಳಿತಿದ್ದರೆ ಚೆನ್ನಾಗಿರುತ್ತಿತ್ತು. ಮಾನ್ಯ ನೀರಾವರಿ ಸಚಿವರು ಸದನದಲ್ಲಿ ಕುಳಿತಿದ್ದರೆ ಚೆನ್ನಾಗಿರುತ್ತಿತ್ತು. ಉತ್ತರ ಕರ್ನಾಟಕದ ಬಗ್ಗೆ ಚರ್ಚೆಯಾಗುತ್ತಿರುವ ಸಂದರ್ಭದಲ್ಲಿ ಮಾನ್ಯ ಎಂ.ಬಿ. ಪಾಟೀಲರು ಎಲ್ಲಿ ಹೋಗಿದ್ದಾರೆ ಎಂದು ನನಗೆ ಗೊತ್ತಿಲ್ಲ. ಇಂತಹ ಸಂದರ್ಭದಲ್ಲಿ ಅವರು ಸದನದಲ್ಲಿ ಇದ್ದರೆ ಚೆನ್ನಾಗಿರುತ್ತಿತ್ತು. ನಾನು ಅವರು ಹೋಗಿದ್ದಾರೆ ಎಂದು ಆಪಾದನೆ ಮಾಡುವುದಿಲ್ಲ. ಅವರು ಎಲ್ಲೋ ಒಳ್ಳೆಯ ಕೆಲಸಕ್ಕೆ ಹೋಗಿರಬಹುದು. ಇವತ್ತು ಅನೇಕರು ಮಾತನಾಡುವುದರಿಂದ ಬಹಳ ಸಮಯ ಆಗುತ್ತದೆ, ಆದ್ದರಿಂದ ಮಂತ್ರಿಗಳನ್ನು ಸದನಕ್ಕೆ ಕರೆಸಿರಿ ಮತ್ತು ಅಧಿಕಾರಿಗಳನ್ನು ಕರೆಸಿರಿ. ಮುಖ್ಯ ಸಚೇತಕರು ಎಷ್ಟೊತ್ತಿನವರೆಗೂ ಸಭೆ ನಡೆಯುತ್ತದೆ ಎಂದು ಹೇಳಿದರು. ಈ ರೀತಿ ಉತ್ತರ ಕೊಟ್ಟು ಸರ್ಕಾರದ ಜವಾಬ್ದಾರಿಯಿಂದ ಸರಿದುಕೊಂಡರೆ ಸರ್ಕಾರಕ್ಕೆ ಗೌರವ ಬರುವುದಿಲ್ಲ.

ಶ್ರೀ ಎಂ.ಆರ್. ಸೀತಾರಾಂ (ಸಭಾನಾಯಕರು)ಃ– ಮಾನ್ಯ ಸಭಾಪತಿಯವರೇ, ಸಭೆಯ ಸಂಜೆ 4 ಗಂಟೆಗೆ ಪ್ರಾರಂಭವಾಗಿದ್ದು, ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇರುವುದರಿಂದ ಮುಗಿದ ತಕ್ಷಣ ಬರುವುದಕ್ಕೆ ಮುಖ್ಯ ಕಾರ್ಯದರ್ಶಿಯವರಿಗೆ ಬರುವುದಕ್ಕೆ ಸೂಚನೆ ಕೊಟ್ಟಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪಃ– ಮಾನ್ಯ ಸಭಾಪತಿಯವರೇ, ಆ ಕೆಲಸ ಮಾಡಲಿ, ಇದಕ್ಕೆ ನನ್ನದೇನೂ ಅಭ್ಯಂತರ ಇಲ್ಲ, ವಿಷಯವನ್ನು ಅವರ ಗಮನಕ್ಕೆ ತರುತ್ತಿದ್ದೇನೆ. ಅವರು ಏನಾದರೂ ಮಾಡಲಿ. ಮಾನ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೆಚ್.ಕೆ.ಪಾಟೀಲರಿಗೆ ತಿಳಿದಂತೆ ಕೂಡಲಿ ಸ್ಥಾವರ ಆಗುವ ಸಂದರ್ಭದಲ್ಲಿ ವಿಶೇಷವಾಗಿ ಬಿಜಾಪುರದ ಜನರು ಭೂಮಿಯನ್ನು ಕೊಟ್ಟರು. ಅವರು ಭೂಮಿ ಕೊಡದಿದ್ದರೆ N.T.P.C. (National Thermal Power Corporation Limited) ಯಿಂದ ಸ್ಥಾವರವೇ ಆಗುತ್ತಿರಲಿಲ್ಲ. ಕೇಂದ್ರದಲ್ಲಿ ಹೋಗಿ ಕುಳಿತು ಮಾಡಿಕೊಂಡದ್ದು ಆಯಿತು. ಈ ಸಂದರ್ಭದಲ್ಲಿ ಮಾನ್ಯ ಜಯರಾಂ ರಮೇಶ್‌ರವರನ್ನು ನೆನಪು ಮಾಡಿಕೊಳ್ಳಬೇಕು. ನಾನು ನೀರಾವರಿ ಮಂತ್ರಿಯಾಗಿದ್ದ ಸಂದರ್ಭದಲ್ಲಿ ಮಾನ್ಯ ಜಯರಾಂ ರಮೇಶ್‌ರವರ ಬಳಿ ಪ್ರಾರ್ಥನೆ ಮಾಡಿದೆ. ದಕ್ಷಿಣ ಭಾರತದ ತಮಿಳುನಾಡು, ಕೇರಳ, ಮಹಾರಾಷ್ಟ್ರ ಮತ್ತು ಪಾಂಡುಚೇರಿಗಳಲ್ಲಿ N.T.P.C. ಇದೆ. ಆದರೆ ನಾವು ಏನು ತಪ್ಪು ಮಾಡಿದ್ದೇವೆ? ಕರ್ನಾಟಕದಲ್ಲಿ ಮಾತ್ರ ಇಲ್ಲ, ದಯವಿಟ್ಟು ಅವಕಾಶ ಮಾಡಿಕೊಡಬೇಕೆಂದು ಎಂದು ವಿನಂತಿ ಮಾಡಿದೆ. ಆಗ ಎಲ್ಲಾ ಪ್ರಯತ್ನ ಮಾಡಿ N.T.P.C. sanction ಆದ ಸಂದರ್ಭದಲ್ಲಿ ಭೂಮಿ ಕೊಡಲು ತಯಾರಿರಲಿಲ್ಲ. ಉತ್ತರ ಕರ್ನಾಟಕ ಜನರು ತ್ಯಾಗಿಗಳು ಎಂದು ಹೇಳುವುದಕ್ಕೆ ಇದೊಂದು ಉದಾಹರಣೆ ಸಾಕು. ಅವರು ನಮ್ಮಲ್ಲಿ ಭೂಮಿಯನ್ನು ತೆಗೆದುಕೊಳ್ಳಿ ಎಂದು ಹೇಳಿದರು. ಆ ಭೂಮಿಯನ್ನು ತೆಗೆದುಕೊಂಡ ಸಂದರ್ಭದಲ್ಲಿ ಒಂದು ಎಕರೆ ಖುಷ್ಕಿ ಜಮೀನಿಗೆ ರೂ.7.25 ಲಕ್ಷ ಮತ್ತು ನೀರಾವರಿ ಜಮೀನಿಗೆ ರೂ.9.00 ಲಕ್ಷಗಳನ್ನು ಸರ್ಕಾರದಿಂದ ಕೊಟ್ಟಿದ್ದೇವೆ. ಅವರ ತ್ಯಾಗಕ್ಕೆ ತಕ್ಕಂತೆ ಹಣ ಕೊಡದಿದ್ದರೆ ಸರ್ಕಾರ ಎಂದು ಕರೆಯಬೇಕೆ? ಈಗ ಒಂದು ಎಕರೆಗೆ ರೂ.2.40 ಲಕ್ಷ ಮತ್ತು ನೀರಾವರಿಗೆ ರೂ.6.40 ಲಕ್ಷಗಳನ್ನು ಕೊಡುತ್ತಿದ್ದಾರೆ. ಯಾರ್‍ಯಾರೋ ಲೂಟಿ ಹೊಡೆಯುವ ಬಗ್ಗೆ ನಾವು ಚರ್ಚೆ ಮಾಡುತ್ತೇವೆ. ಅದು ಹೌದು, ಅಲ್ಲ ಎಂಬುದನ್ನು ಬಿಡಿ. ಆದರೆ ರೈತರಿಗೆ ರೂ.2-40 ಲಕ್ಷ ಮತ್ತು ರೂ.6-40 ಲಕ್ಷಗಳನ್ನು ಕೊಟ್ಟರೆ ಹೇಗೆ? ರೈತರ ತಾತನ ಕಾಲದಿಂದ ಬಂದ ಭೂಮಿ ಮತ್ತು ಆ ಭೂಮಿಯೇ ರೈತರ ಜೀವಾಳವಾಗಿದೆ. ಅದರಿಂದ ಒಂದು ಹನಿ ನೀರು ಅವರ ಜಮೀನಿಗೆ ಇಲ್ಲ. ಅಂತಹವರು ಜಮೀನು ಬಿಟ್ಟುಕೊಡುತ್ತಿದ್ದಾರೆ.

ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):- ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಅರ್ಧ ಮಾಹಿತಿಯನ್ನು ಕೊಟ್ಟಿದ್ದಾರೆ. ಈಗ ನಾವು ರೂ. 2.40 ಲಕ್ಷಗಳನ್ನು ಕೊಡುತ್ತಿದ್ದೇವೆಯೇ? ಈಗಾಗಲೇ ಸಚಿವ ಸಂಪುಟದ ಉಪ ಸಮಿತಿಯನ್ನು ನೇಮಿಸಿ, ಈ ಜಮೀನಿನ ದರಗಳನ್ನು ಪರಿಷ್ಕರಣೆ ಮಾಡಬೇಕು. ಪರಿಷ್ಕರಣೆ ಮಾಡುವಾಗ ಸಚಿವ ಸಂಪುಟದಲ್ಲಿ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಯವರು ಮುಖ್ಯವಾಗಿ ರೈತರೊಡನೆ ಖುದ್ದಾಗಿ ತಮ್ಮ ಸಮಾಲೋಚನೆ ಆಗಬೇಕು ಎಂಬ ಇಂಗಿತವನ್ನು ವ್ಯಕ್ತ ಮಾಡಿದ್ದಾರೆ. ಆದ್ದರಿಂದ ಆ ಪ್ರಕ್ರಿಯೆಯನ್ನು

ನಾವು ಪ್ರಾರಂಭ ಮಾಡಿದ್ದೇವೆ. ಈ ಹಳೆಯ ದರಗಳನ್ನು ತೆಗೆದುಕೊಂಡು ಜಮೀನು ಖಾಲಿ ಮಾಡಿ, ಅಲ್ಲಿಂದ ಎದ್ದು ಹೋಗಿ ಎಂದು ಹೇಳಿದ್ದೇವೆ ಎಂಬುದನ್ನು ರೈತರ ಹತ್ತಿರ ಕೇಳಲಿ.

ಶ್ರೀ ಕೆ.ಎಸ್. ಈಶ್ವರಪ್ಪಃ– ನಾನು ಆ ರೀತಿ ಹೇಳಲಿಲ್ಲ.

Sri H.K. PATIL: Mr. Chairman, Sir, the Leader of the Opposition mentioned the rates but that is not the rate fixed for it by the government now.

ಶ್ರೀ ಕೆ.ಎಸ್. ಈಶ್ವರಪ್ಪಃ– ಮಾನ್ಯ ಸಭಾಪತಿಯವರೇ, ಹಾಗಾದರೆ ಎಷ್ಟು ಕೊಡುತ್ತಾರೆ ಎಂಬುದನ್ನು ಹೇಳಲಿ.

ಶ್ರೀ ಹೆಚ್.ಕೆ. ಪಾಟೀಲ್ಃ– ಮಾನ್ಯ ಸಭಾಪತಿಯವರೇ, ರೈತರೊಡನೆ ಸಮಾಲೋಚನೆ ಮಾಡಿ ಹಿಂದೆ ಕೊಟ್ಟದ್ದಕ್ಕಿಂತ ಹೆಚ್ಚು ಮತ್ತು ಯೋಗ್ಯ ಬೆಲೆಯನ್ನು ಕೊಡುತ್ತೇವೆ.

ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರ ಕ್ಷೇತ್ರ)ಃ– ಮಾನ್ಯ ಸಭಾಪತಿಯವರೇ, ಈಗಾಗಲೇ ಐತೀರ್ಪು ಮಾಡಿ ರೂ.2.40 ಲಕ್ಷ ಮತ್ತು ರೂ.6.40 ಲಕ್ಷಗಳನ್ನು ರೈತರಿಗೆ ಪರಿಹಾರ ಕೊಡಲಾಗಿದೆ. ಈಗಾಗಲೇ ಕುಂದರಗಿ ಮತ್ತು ಭವಲತಿ ಪುನರ್ವಸತಿ ಕೇಂದ್ರ ಹಾಗೂ ಎಡಳ್ಳಿ ಪುನರ್ವಸತಿ ಕೇಂದ್ರಗಳಲ್ಲಿ ಭೂಸ್ವಾಧೀನ ಮಾಡಿ ರೈತರ ಖಾತೆಗಳಿಗೆ ಹಣವನ್ನು ಮಂಜೂರು ಮಾಡಲಾಗಿದ್ದು, ನನ್ನ ಬಳಿ ಐತೀರ್ಪಿನ ಕಾಪಿ ಕೂಡ ಇದೆ. ಸರ್ಕಾರದಿಂದ ನಂತರ ನಿಗದಿಯಾಗಬಹುದಾದರೂ ಈಗಾಗಲೇ 50ರಷ್ಟು ಅನುದಾನ ಕೊಟ್ಟಿದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪಃ– ಮಾನ್ಯ ಸಭಾಪತಿಯವರೇ, ನಾನು dispute ಮಾಡುತ್ತಿಲ್ಲ, ಈಗಿನ ಪರಿಸ್ಥಿತಿಯಲ್ಲಿ ಭೂಮಿಯನ್ನು ಕೊಡುತ್ತಿರುವಾಗ ಒಂದು ಎಕರೆಗೆ ಕನಿಷ್ಟ ಖುಷ್ಕಿ ಜಮೀನಿಗೆ ರೂ.30 ಲಕ್ಷ ಮತ್ತು ನೀರಾವರಿ ಜಮೀನಿಗೆ ರೂ.40 ಲಕ್ಷಗಳನ್ನು ಕೊಡಬೇಕು. ಭೂಮಿಯನ್ನು ಸರ್ಕಾರ ತೆಗೆದುಕೊಂಡು ಬಿಡುತ್ತದೆ, ಭೂಮಿ ಕೊಡುವ ಬಿಡುವ ವಿಚಾರ ಅವನ ಕೈಯಲ್ಲಿ ಇಲ್ಲ. ರೈತನ ಹತ್ತಿರ ಭೂಮಿ ಕೊಡುತ್ತೀಯಾ ಅಥವಾ ಬಿಡುತ್ತೀಯಾ ಎಂದು ಕೇಳುವುದಿಲ್ಲ. ಅವನ ಹತ್ತಿರ ಭೂಮಿ ತೆಗೆದುಕೊಂಡು ರೂ.2 ಲಕ್ಷ ಮತ್ತು ರೂ.4 ಲಕ್ಷಗಳನ್ನು ಕೊಟ್ಟರೆ ಆತನ ಮಕ್ಕಳು–ಮರಿ ಹೇಗೆ ಬದುಕಬೇಕು? ದರವನ್ನು ಪರಿಷ್ಕರಣೆ ಮಾಡುವುದು ಯಾವಾಗ? ಆತನಿಗೆ ಕೊಡುವುದು ಯಾವಾಗ? ಹಣ ಕೊಡುವ ಸಂದರ್ಭದಲ್ಲಿ ಕನಿಷ್ಟ 50 ಪರ್ಸೆಂಟ್ ಅಂದರೆ ರೂ.20 ಲಕ್ಷ ಕೊಟ್ಟು ನಂತರ ನೋಡೋಣ ಎಂದಾದರೆ ರೈತ

ಬದುಕುತ್ತಾನೆ. ಇಲ್ಲದಿದ್ದರೆ ಆತ ಹೇಗೆ ಬದುಕುತ್ತಾನೆ? ನಾನು ಹೆಚ್ಚು ಹಣವನ್ನು ಕೊಡದೇ ಕಂಜೂಸ್‌ತನ ಮಾಡುತ್ತಿದ್ದಾರೆ ಎಂದು ಹೇಳುತ್ತಿಲ್ಲ.

ಶ್ರೀ ನಿರಾಣಿ ಹಣಮಂತ್ ರುದ್ರಪ್ಪಃ- ಮಾನ್ಯ ಸಭಾಪತಿಯವರೇ, ರೂ.2-40 ಲಕ್ಷ ಮತ್ತು ರೂ.6.40 ಲಕ್ಷ ಕೊಡುವ ಬಗ್ಗೆ ಸರ್ಕಾರದಿಂದ ಆಗಿರುವ ಐತೀರ್ಪಿನ ಪ್ರತಿ ನೀಡುತ್ತಿದ್ದೇನೆ. ತಪ್ಪು ಮಾಹಿತಿ ಹೇಳುತ್ತಿಲ್ಲ.

Sri SHARANAPPA MATTUR (TEACHERS' CONSTITUENCY): Mr. Chairman, Sir, the Hon'ble Member being an Advocate practising matters relating to land acquisition, he is well aware about the determination of market value of lands. Secondly, many of the Advocates, particularly, from Bagalkot and Belgaum districts have dealt with land acquisition cases. ಎರಡೂವರೆ ಲಕ್ಷ ರೂಪಾಯಿಗಳಲ್ಲ, ಒಂದು imple ಉದಾಹರಣೆ ಕೊಡುತ್ತೇನೆ. ಅವರು ಆಗಿರಬಹುದು ಅಥವಾ ನಮ್ಮ ಸರ್ಕಾರ ಬಂದ ಮೇಲೆ ಆಗಿರಬಹುದು. SC/ST ಗೆ ಅಥವಾ ಕೆಲವು land acquisition ಮಾಡಿದಾಗ Land Grant Rules ಕೆಳಗೆ ರೂ.7.50 ಲಕ್ಷದಿಂದ ರೂ.12.50 ಲಕ್ಷಗಳವರೆಗೆ ನೀಡುವ notification ಬಗ್ಗೆ ಅವರಿಗೆ ಗೊತ್ತಿದೆ. ಎರಡನೆಯದಾಗಿ ಸೆಕ್ಷನ್ 18 ಕೆಳಗೆ initial compensation ಅನ್ನು ಕೊಟ್ಟು Assistant Commissioner ಗೆ representation ಕೊಟ್ಟಾಗ ಒಂದು ಎಕರೆಗೆ ರೂ.25 ಲಕ್ಷಗಳಿಂದ ರೂ.40 ಲಕ್ಷಗಳವರೆಗೆ ಆಗಿರುವ ಉದಾಹರಣೆಗಳು ಇವೆ. ದಯಮಾಡಿ ಅದನ್ನು ಹೇಳಬೇಕೆಂದು ವಿನಂತಿಸುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪಃ- ಮಾನ್ಯ ಸಭಾಪತಿಯವರೇ, ನನ್ನ, ಮಾನ್ಯ ನಿರಾಣಿರವರ, ಮಾನ್ಯ ಶರಣಪ್ಪ ಮಟ್ಟೂರ್ ಹಾಗೂ ಮಾನ್ಯ ಹೆಚ್.ಕೆ. ಪಾಟೀಲ್ ರವರ ಅಪೇಕ್ಷೆ ರೈತರಿಗೆ ಹೆಚ್ಚು ಹಣ ಕೊಡಬೇಕೆಂದು ಇದೆ. ಹೆಚ್ಚಿನ ಹಣ ಕೊಡುವುದಕ್ಕೆ ಸರ್ಕಾರಕ್ಕೆ ಅವಕಾಶ ಇದೆ. ನಾನು ಬಹಳ ಹೆಮ್ಮೆಯಿಂದ ಹೆಚ್ಚಿನ ಹಣ ಕೊಟ್ಟಿದ್ದೇನೆ ಎಂದು ಹೇಳಿಕೊಳ್ಳುತ್ತಿದ್ದೇನೆ. ಕೂಡಗಿ ಸ್ಥಾವರದ ಬಗ್ಗೆ ನಾನು ಕೇವಲ ಒಂದೆರಡು ಲಕ್ಷ ಕೊಡುವುದಕ್ಕೆ ಆಗುತ್ತಿತ್ತು. ಯಾವ ವರ್ಷದಲ್ಲಿ ಕೊಟ್ಟಿದ್ದು?

ಶ್ರೀ ಕೆ.ಬಿ. ಶಾಣಪ್ಪಃ– ಮಾನ್ಯ ಸಭಾಪತಿಯವರೇ, ಆಗ ರೂ.9 ಲಕ್ಷ ಕೊಟ್ಟಿದ್ದೇವೆ. ಈಗ ACC Plant ಗೆ ರೂ.13 ಲಕ್ಷ ಕೊಡುತ್ತಿದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪಃ– ನಾವು ಹೆಮ್ಮೆಯಿಂದ ರೂ.9 ಲಕ್ಷ ಕೊಟ್ಟಿದ್ದೇವೆ ಎಂದು ಹೇಳುತ್ತಿದ್ದೇನೆ. ಭೂಮಿಯ ಬೆಲೆಗೆ ಸಂಬಂಧಪಟ್ಟಂತೆ ನಾವು 10 ವರ್ಷದ ಹಿಂದೆ ಕೊಟ್ಟ ಹಣಕ್ಕೂ ಈಗ ಕೊಡುವ ಹಣಕ್ಕೂ ಬಹಳ ವ್ಯತ್ಯಾಸ ಇದೆ. ಈಗ ರೂ.40 ಲಕ್ಷ ಕೊಡಲಿ, ರೈತರು ನೆನಪು ಮಾಡಿಕೊಳ್ಳುತ್ತಾರೆ.

(ಮುಂದು)

(1132)21.11.2017/5.30/ಹೆಚ್‌ವಿಃಆರ್‌ಎನ್

ಶ್ರೀ ಕೆ.ಎಸ್.ಈಶ್ವರಪ್ಪ(ಮುಂದುವರೆದದ್ದು)ಃ–

ಸನ್ಮಾನ್ಯ ಸಭಾಪತಿಯವರೇ, 'ಕಟ್ಟಡ ಸ್ವಾಧೀನಪಡಿಸಿಕೊಂಡು ದರ ನಿಗದಿಪಡಿಸುವಾಗ ಲೋಕೋಪಯೋಗಿ ಇಲಾಖೆಯ ಎಸ್.ಆರ್.ದರವನ್ನು ಕೊಡಬೇಕು' ಎಂದು ಇದೆ. ಭೂಮಿ ಮುಳುಗಡೆಯಾಗುತ್ತಿರುವ ಸಂದರ್ಭದಲ್ಲಿ ಆ ಭೂ ಮಾಲೀಕರಿಗೆ ಪ್ರತ್ಯೇಕವಾದ ವ್ಯವಸ್ಥೆಯನ್ನು ಮಾಡಬೇಕಾಗಿದೆ. ಲಕ್ಷಾಂತರ ಎಕರೆ ಜಮೀನಿಗೆ ನೀರಾವರಿ ಕಲ್ಪಿಸಿಕೊಡುವ ಉದ್ದೇಶಕ್ಕಾಗಿ ಅಲ್ಲಿನ ಜನರು ತಮ್ಮ ಭೂಮಿಯನ್ನು ಬಿಟ್ಟುಕೊಟ್ಟಿದ್ದಾರೆ. ಅಂತಹವರಿಗೆ ಅನ್ಯಾಯ ಮಾಡದೇ ಅವರು ಕೇಳುತ್ತಿರುವ ದರ ಎಕರೆಗೆ 30–40 ಲಕ್ಷ ರೂಪಾಯಿಗಳನ್ನು ಸರ್ಕಾರ ಕೊಡಬೇಕೆನ್ನುವುದು ನನ್ನ ವಿನಂತಿಯಾಗಿದೆ. ಸರ್ಕಾರ ದರ ಪುನರ್‌ಪರಿಶೀಲನೆ ಮಾಡುವುದಕ್ಕಾಗಿ ಸಮಿತಿಯನ್ನು ರಚನೆ ಮಾಡಲಾಗುತ್ತದೆ ಎನ್ನುವ ಮಾತನ್ನು ಹೇಳಿದೆ. ಸಮಿತಿಯನ್ನು ರಚನೆ ಮಾಡಲಿ ನನ್ನ ಅಭ್ಯಂತರವೇನು ಇಲ್ಲ. ಆದರೆ, ಭೂಮಿ ಮುಳುಗಡೆಯಾಗಿರುವುದರಿಂದ ಅವರ ಮಕ್ಕಳು ಉಪವಾಸ ಬೀಳಬಾರದು ಎನ್ನುವ ದೃಷ್ಟಿಯಿಂದ ಶೇಕಡಾ 50ರಷ್ಟು ಹಣವನ್ನು ಸರ್ಕಾರ ಪಾವತಿ ಮಾಡಿದರೆ ಜನರು ಈ ಸರ್ಕಾರವನ್ನು ನೆನಪಿಸಿಕೊಳ್ಳುತ್ತಾರೆ.

ಸನ್ಮಾನ್ಯ ಸಭಾಪತಿಯವರೇ, 'ಈಗ ಮುಳುಗಡೆ ಜಮೀನಿಗೆ ನಿಗದಿಪಡಿಸಿರುವ ದರವನ್ನು ಪುನರ್ವಸತಿ ಮತ್ತು ಕಾಲುವೆ ಭೂಸ್ವಾಧೀನಕ್ಕೆ ಅನ್ವಯಿಸುವುದು' ಎಂದು ಹೇಳುತ್ತಿದ್ದಾರೆ. ಮುಳುಗಡಯಿಂದ ಸಂತ್ರಸ್ತರಾಗಿರುವವರನ್ನು ಸರ್ಕಾರ ಕರೆದು ಅವರೊಡನೆ ಮಾತನಾಡಿ, 'ನಿಮಗೆ ಸ್ವಲ್ಪ ಹೆಚ್ಚಿನ ಹಣವನ್ನು ಕೊಡುತ್ತೇವೆ, ನೀವೇನು ಚಿಂತೆ ಮಾಡಬೇಡಿ' ಎನ್ನುವ ಮಾತುಗಳ ಮೂಲಕ ಅವರಲ್ಲಿ ಧೈರ್ಯ ತುಂಬಿದರೆ, ಈ ಸರ್ಕಾರದ ಬಗ್ಗೆ ಅವರಿಗೆ ವಿಶ್ವಾಸ ಬರುತ್ತದೆ ಮತ್ತು ಆ ಯೋಜನೆಯಿಂದ ಬಹಳಷ್ಟು ರೈತರಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಕೂಲವಾಗುತ್ತದೆ. ಈ ನಿಟ್ಟಿನಲ್ಲಿ ಸರ್ಕಾರ ಗಮನಹರಿಸಬೇಕೆನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, 2016ನೇ ಇಸವಿಯಲ್ಲಿ ಹೈದ್ರಾಬಾದ್-ಕರ್ನಾಟಕ ಅಭಿವೃದ್ಧಿಯ ಬಗ್ಗೆ ಗುಲ್ಬರ್ಗಾ ಜಿಲ್ಲೆಯಲ್ಲಿ ವಿಶೇಷ ಸಚಿವ ಸಂಪುಟ ಸಭೆಯನ್ನು ನಡೆಸಲಾಯಿತು. 2014ನೇ ಇಸವಿಯ ಹೊತ್ತಿಗೆ ಸುಮಾರು 50 ಸಾವಿರ ಜನರಿಗೆ ಉದ್ಯೋಗಾವಕಾಶವನ್ನು ನೀಡುತ್ತೇವೆ ಎನ್ನುವ ನಿರ್ಣಯವನ್ನು ಆ ಸಚಿವ ಸಂಪುಟ ಸಭೆಯಲ್ಲಿ ಮಾಡಲಾಯಿತು. ಆದರೆ, ಇಲ್ಲಿಯವರೆಗೆ ಶೇಕಡಾ 25ರಷ್ಟು ಉದ್ಯೋಗಾವಕಾಶವನ್ನು ಮಾತ್ರ ಈ ಸರ್ಕಾರ ನೀಡಿದೆ.

ಶ್ರೀ ಎಂ.ಆರ್.ಸೀತಾರಾಂ(ಸಭಾ ನಾಯಕರು)ಃ- ಸನ್ಮಾನ್ಯ ಸಭಾಪತಿಯವರೇ, ಸುಮಾರು 13 ಸಾವಿರ ಉದ್ಯೋಗಾವಕಾಶವನ್ನು ಒದಗಿಸಲಾಗಿದೆ ಎನ್ನುವ ಮಾಹಿತಿಯನ್ನು ಕಳೆದ ವರ್ಷ ಈ ಬಗ್ಗೆ ಸದನಕ್ಕೆ ಕೊಟ್ಟಿದ್ದೇವೆ. ಇತ್ತೀಚಿನ ಅಂಕಿಅಂಶಗಳನ್ನು ತರಿಸಿ 2-3 ದಿನಗಳಲ್ಲಿ ಸದನಕ್ಕೆ ಕೊಡುತ್ತೇವೆ. ಈಗ ಸುಮಾರು 20-25 ಸಾವಿರ ಉದ್ಯೋಗಾವಕಾಶವನ್ನು ಕಲ್ಪಿಸಿರಬಹುದು.

ಶ್ರೀ ಕೆ.ಎಸ್.ಈಶ್ವರಪ್ಪಃ- ಸನ್ಮಾನ್ಯ ಸಭಾಪತಿಯವರೇ, ಕಳೆದ ವರ್ಷ ಕೇವಲ 3 ಸಾವಿರ ಉದ್ಯೋಗಾವಕಾಶವನ್ನು ಕಲ್ಪಿಸಲಾಗಿತ್ತು. ಇಲ್ಲಿಯವರೆಗೆ ಒಟ್ಟು 13 ಸಾವಿರ ಉದ್ಯೋಗಗಳನ್ನು ಕಲ್ಪಿಸಿಕೊಡಲಾಗಿದೆ. ಹೆಚ್ಚಿನ ಅವಕಾಶಗಳನ್ನು ಕಲ್ಪಿಸಿಕೊಟ್ಟಿದ್ದರೆ ಸರ್ಕಾರ ಉತ್ತರ ಕೊಡುವ ಸಂದರ್ಭದಲ್ಲಿ ಹೇಳಲಿ. ಅದು ಸಂತೋಷದ ವಿಚಾರವಾಗಿದೆ.

ಶ್ರೀ ರಘುನಾಥ್‌ರಾವ್ ಮಲ್ಕಾಪೂರೆಃ- ಸನ್ಮಾನ್ಯ ಸಭಾಪತಿಯವರೇ, ಸೆಪ್ಟೆಂಬರ್ 2014ರಂದು ಗುಲ್ಬರ್ಗಾದಲ್ಲಿ ನಡೆದಂತಹ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ನವೆಂಬರ್ 2014ರೊಳಗೆ 50 ಸಾವಿರ ಉದ್ಯೋಗಗಳನ್ನು ನಾವು ಕಲ್ಪಿಸಿಕೊಡುತ್ತೇವೆ' ಎನ್ನುವ ಘೋಷಣೆಯನ್ನು ಮಾಡಿದ್ದರು. ಕಳೆದ ವರ್ಷ ಬೆಳಗಾವಿಯಲ್ಲಿ ನಡೆದಂತಹ ಚಳಿಗಾಲದ ಅಧಿವೇಶನದಲ್ಲಿ ಮಾನ್ಯ ಅಮರನಾಥ್ ಪಾಟೀಲ್‌ರವರು ಮತ್ತು ನಾನು ಈ ಬಗ್ಗೆ ಚರ್ಚೆ ಮಾಡಿದಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ನೀಡುತ್ತಾ, '13 ಸಾವಿರ ಉದ್ಯೋಗಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ಪ್ರಗತಿಯಲ್ಲಿದೆ' ಎನ್ನುವ ಮಾತನ್ನು ಹೇಳಿದ್ದರು. ಆಗ ನಾವಿಬ್ಬರೂ ಸೇರಿ, 'ಉದ್ಯೋಗ ಒದಗಿಸಿಕೊಡುವ ಕಾರ್ಯ ಪ್ರಗತಿಯಲ್ಲಿದೆ ತಾವು ಉದ್ಯೋಗ ಕೊಟ್ಟಿಲ್ಲ' ಎಂದು ಕೇಳಿದ ಹಿನ್ನೆಲೆಯಲ್ಲಿ ಸದನದಲ್ಲಿ ಮಂಡಿಸಿದ ಉತ್ತರವನ್ನು ಅವರು ವಾಪಸ್ಸು ಪಡೆದುಕೊಂಡಿದ್ದಾರೆ.

ಶ್ರೀ ಕೆ.ಎಸ್.ಈಶ್ವರಪ್ಪಃ- ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಹೆಚ್.ಕೆ.ಡಿ.ಬಿ.ಯ ಅಧ್ಯಕ್ಷರಾಗಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಶ್ರೀ ಎಂ.ಆರ್.ಸೀತಾರಾಂಃ– ಸನ್ಮಾನ್ಯ ಸಭಾಪತಿಯವರೇ, ಈಗ ಡಾಃಶರಣಪ್ರಕಾಶ್ ಪಾಟೀಲ್‌ರವರು ಹೆಚ್.ಕೆ.ಡಿ.ಬಿ.ಯ ಅಧ್ಯಕ್ಷರಾಗಿದ್ದಾರೆ.

ಶ್ರೀ ಕೆ.ಎಸ್.ಈಶ್ವರಪ್ಪಃ– ಸನ್ಮಾನ್ಯ ಸಭಾಪತಿಯವರೇ, ಡಾಃಶರಣಪ್ರಕಾಶ್ ಪಾಟೀಲ್‌ರವರು ಹೆಚ್.ಕೆ.ಡಿ.ಬಿ.ಯ ಅಧ್ಯಕ್ಷರಾಗಿದ್ದರೂ, ಮಾನ್ಯ ಸಭಾ ನಾಯಕರ ಖಾತೆಯ ವ್ಯಾಪ್ತಿಗೆ ಅದು ಬರುತ್ತದೆ. ಈ ಸರ್ಕಾರ ಇನ್ನು ಕೇವಲ 3–4 ತಿಂಗಳು ಮಾತ್ರ ಅಧಿಕಾರದಲ್ಲಿರುತ್ತದೆ.

ಶ್ರೀ ಹೆಚ್.ಕೆ.ಪಾಟೀಲ್ಃ– ಸನ್ಮಾನ್ಯ ಸಭಾಪತಿಯವರೇ, I am heading the Cabinet Sub-Committee for implementation and monitoring of Article 371(J). ಇದು ಸಚಿವ ಸಂಪುಟದ ಉಪ ಸಮಿತಿಯಾಗಿದೆ. ಅದಕ್ಕೆ ನಾನು ಅಧ್ಯಕ್ಷನಾಗಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ರಘುನಾಥ್‌ರಾವ್ ಮಲ್ಕಾಪೂರೆಯವರ ಮಾತಿಗೆ ನಾನು ತಕ್ಷಣ ಪ್ರತಿಕ್ರಿಯೆ ವ್ಯಕ್ತಪಡಿಸಲಿಲ್ಲ. ಸರಿಯಾದ ಅಂಕಿಅಂಶಗಳನ್ನು ತರಿಸಿಕೊಡಬೇಕೆನ್ನುವ ಕಾರಣಕ್ಕಾಗಿ ನಾನು ಸುಮ್ಮನೆ ಕುಳಿತಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುತ್ತಿರುವ ಅಂಕಿಸಂಖ್ಯೆಗಳು ಸತ್ಯಕ್ಕೆ ದೂರವಾಗಿವೆ.

ಶ್ರೀ ಕೆ.ಎಸ್.ಈಶ್ವರಪ್ಪಃ– ಸನ್ಮಾನ್ಯ ಸಭಾಪತಿಯವರೇ, ನನ್ನ ಬಳಿ ಲಭ್ಯವಿರುವ ಅಂಕಿಅಂಶಗಳನ್ನು ನಾನು ಹೇಳುತ್ತಿದ್ದೇನೆ. ಸರ್ಕಾರದ ಬಳಿ ಅಧಿಕೃತವಾದ ಅಂಕಿಅಂಶಗಳು ಇರುತ್ತವೆ. ಅದನ್ನು ಅವರು ಹೇಳಲಿ. 2014ನೇ ಇಸವಿಯಲ್ಲಿ '50 ಸಾವಿರ ಉದ್ಯೋಗಾವಕಾಶಗಳನ್ನು ಕಲ್ಪಿಸಿಕೊಡಲಾಗುತ್ತದೆ' ಎನ್ನುವ ಮಾತುಗಳನ್ನು ಹೇಳಿದ್ದರು. 50 ಸಾವಿರವಲ್ಲ 1 ಲಕ್ಷ ಉದ್ಯೋಗಗಳನ್ನು ಕಲ್ಪಿಸಿಕೊಟ್ಟರೆ ನಮಗೂ ಸಂತೋಷ.

ಶ್ರೀ ಹೆಚ್.ಕೆ.ಪಾಟೀಲ್ಃ– ಸನ್ಮಾನ್ಯ ಸಭಾಪತಿಯವರೇ, ಒಮ್ಮೆಲೇ 50–60 ಸಾವಿರ ಉದ್ಯೋಗಾವಕಾಶಗಳನ್ನು ಸೃಷ್ಟಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಸರ್ಕಾರದಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ, ಆ ಹುದ್ದೆಗಳನ್ನು ಮಾತ್ರ ಭರ್ತಿ ಮಾಡಬಹುದಾಗಿದೆ.

ಶ್ರೀ ಕೆ.ಎಸ್.ಈಶ್ವರಪ್ಪಃ– ಸನ್ಮಾನ್ಯ ಸಭಾಪತಿಯವರೇ, "ಬೀದರ್‌ನಿಂದ ಚಾಮರಾಜನಗರದವರೆಗೆ ಕರ್ನಾಟಕ ಕಲ್ಯಾಣ ಪಥ' ಎಂಟು ರಸ್ತೆಗಳ ನಿರ್ಮಾಣ ಹಾಗೂ ಕೈಗಾರಿಕಾ ಪಾರ್ಕ್ ಹಾಗೂ ಹೊಸ ಬಡಾವಣೆಗಳನ್ನು ನಿರ್ಮಾಣ ಮಾಡುವ ಮೂಲಕ ಸುಮಾರು 50 ಲಕ್ಷ ಉದ್ಯೋಗಗಳನ್ನು ಸೃಷ್ಟಿಸಲಾಗುವುದು" ಎನ್ನುವುದು ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಣಾಳಿಕೆಯಾಗಿದೆ. ಇದನ್ನು ನಾನು ಹೇಳುತ್ತಿಲ್ಲ. ಈ ಸರ್ಕಾರಕ್ಕೆ ಇಚ್ಛಾಶಕ್ತಿ ಇಲ್ಲವೆಂದು ನಾನು ಹೇಳುತ್ತಿಲ್ಲ. ಸರ್ಕಾರಕ್ಕೆ ಇಚ್ಛಾಶಕ್ತಿ ಇದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಹೆಚ್.ಕೆ.ಪಾಟೀಲ್ಃ– ಸನ್ಮಾನ್ಯ ಸಭಾಪತಿಯವರೇ, ಸದನದಲ್ಲಿ ಉಪಸ್ಥಿತರಾಗಿರುವ ಯಾವ ಸದಸ್ಯರಿಗೂ ತಪ್ಪು ಮಾಹಿತಿ ಹೋಗಬಾರದು. 'ಉದ್ಯೋಗವನ್ನು ಸೃಷ್ಟಿಸಲಾಗುವುದು' ಎಂದ ಮಾತ್ರಕ್ಕೆ ಸರ್ಕಾರಿ ನೌಕರಿಯನ್ನು ಸೃಷ್ಟಿಸುತ್ತೇವೆ ಎನ್ನುವುದು ಇದರರ್ಥವಲ್ಲ. ಉದಾಹರಣೆಗೆ ಹೇಳಬೇಕಾದರೆ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಇಷ್ಟು ಕೋಟಿ ಉದ್ಯೋಗವನ್ನು ಸೃಷ್ಟಿಸುತ್ತೇವೆಂದು ಹೇಳುತ್ತೇವೆ ಇದರರ್ಥ it doesn't mean to create government posts. We will create that opportunity of work.

ಶ್ರೀ ಕೆ.ಎಸ್.ಈಶ್ವರಪ್ಪಃ– ಸನ್ಮಾನ್ಯ ಸಭಾಪತಿಯವರೇ, ಅದಕ್ಕೆ ಗುದ್ದಲಿಪೂಜೆಯನ್ನಾದರೂ ಮಾಡಿದ್ದರೆ ಹೆಚ್.ಕೆ.ಪಾಟೀಲ್‌ರವರು ಹೇಳುತ್ತಿರುವುದನ್ನು ನಾನು ಒಪ್ಪಿಕೊಳ್ಳುತ್ತಿದ್ದೆ.

ಶ್ರೀ ಶರಣಪ್ಪ ಮಟ್ಟೂರಃ– ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಹೆಚ್.ಕೆ.ಪಾಟೀಲ್‌ರವರು ಹೇಳುತ್ತಿರುವುದು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಅರ್ಥವಾಗಲಿಲ್ಲವೆಂದು ಕಾಣುತ್ತದೆ.

ಶ್ರೀ ಕೆ.ಎಸ್.ಈಶ್ವರಪ್ಪಃ– ಸನ್ಮಾನ್ಯ ಸಭಾಪತಿಯವರೇ, ನನಗೆ ಅರ್ಥವಾಗುವುದಿಲ್ಲ.

ಶ್ರೀ ವಿ.ಸೋಮಣ್ಣಃ– ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಹೆಚ್.ಕೆ.ಪಾಟೀಲ್‌ರವರು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತಹ ಮಾತುಗಳು ನಮ್ಮೆಲ್ಲರಿಗೂ ಅರ್ಥವಾಗಿದೆ. ಎಂಟು ಪಥದ ರಸ್ತೆಗಳನ್ನು ನಿರ್ಮಾಣ ಮಾಡುವಂತಹ ಸಂದರ್ಭದಲ್ಲಿ ಅದರ ಅಕ್ಕಪಕ್ಕ ಬರುವಂತಹ ಕಿರಾಣಿ ಅಂಗಡಿಯಿಂದ ಹಿಡಿದು ಹೋಟೆಲ್ ಇತ್ಯಾದಿ ವ್ಯವಸ್ಥೆಗಳು ಆಗುವ ಮೂಲಕ ಉದ್ಯೋಗ ಸೃಷ್ಟಿಯಾಗುತ್ತದೆ ಎನ್ನುವುದು ಮಾನ್ಯ ಹೆಚ್.ಕೆ.ಪಾಟೀಲ್‌ರವರ ಮಾತಿನ ಅರ್ಥವಾಗಿದೆ. ಆದರೆ, ಮಾನ್ಯ ವಿರೋಧ ಪಕ್ಷದ ನಾಯಕರು 'ನೀವು ಇಷ್ಟೆಲ್ಲ ಹೇಳಿದ್ದೀರಿ, ಎಂಟು ಪಥದ ರಸ್ತೆಯಲ್ಲಿ ಒಂದು ಕಿಲೋಮೀಟರ್‌ನಷ್ಟು ರಸ್ತೆಯನ್ನು ಪ್ರಾರಂಭ ಮಾಡಲಾಗಿದೆಯೇ' ಎಂದು ಕೇಳುತ್ತಿದ್ದಾರೆ.

ಶ್ರೀ ಕೆ.ಎಸ್.ಈಶ್ವರಪ್ಪಃ– ಸನ್ಮಾನ್ಯ ಸಭಾಪತಿಯವರೇ, ಎಂಟು ಪಥದ ರಸ್ತೆ ನಿರ್ಮಾಣ ಕಾರ್ಯ ಪ್ರಾರಂಭವಾಗಿದ್ದರೆ, ಉದ್ಯೋಗಗಳ ಸೃಷ್ಟಿ ಹೆಚ್ಚು ಕಡಿಮೆ ಆಗಬಹುದಾಗಿತ್ತು. ಆದರೆ, ಕೆಲಸ ಪ್ರಾರಂಭವೇ ಆಗಿಲ್ಲವೆನ್ನುವುದು ನೋವಿನ ಸಂಗತಿಯಾಗಿದೆ. 'ಬಿಜಾಪುರ ಬಳ್ಳಾರಿ ಚಿತ್ರದುರ್ಗ ಮತ್ತು ಹಾಸನ ಜಿಲ್ಲೆಗಳಲ್ಲಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಲ್ಲ ಮೂಲಭೂತ ಸೌಲಭ್ಯಗಳಿರುವ ವಿಮಾನ ನಿಲ್ದಾಣಗಳನ್ನು ಅಭಿವೃದ್ಧಿಪಡಿಸಲಾಗುವುದು' ಎಂದು ಹೇಳಲಾಗಿದೆ. ಕೈಗಾರಿಕೆಗಳು ಸ್ಥಾಪನೆಯಾಗದೇ ಯಾವ ರೀತಿಯಲ್ಲಿ ಉದ್ಯೋಗಗಳನ್ನು ಸೃಷ್ಟಿಸುವುದಕ್ಕೆ ಸಾಧ್ಯವಾಗುತ್ತದೆ? ಉದ್ಯೋಗ ಸಿಗಬೇಕಾದರೆ ಕೈಗಾರಿಕೆಗಳು ಸ್ಥಾಪನೆಯಾಗಬೇಕು. ಬಿಜಾಪುರ, ಬಳ್ಳಾರಿ, ಹಾಸನ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಯಾವ ಪರಿಸ್ಥಿತಿ ಇದೆ ಎನ್ನುವುದನ್ನು ಅವರೇ ಹೇಳಬೇಕಾಗಿದೆ. ಗುರಿ ಗುಡ್ಡದ ಗಾತ್ರದಲ್ಲಿದೆ. ಆದರೆ, ಗುರಿಯನ್ನು ತಲುಪುವ ಪ್ರಯತ್ನವನ್ನೇ ಮಾಡಿಲ್ಲ. ಸರ್ಕಾರ ಇಚ್ಛಾಶಕ್ತಿಯಿಂದ ಆಯವ್ಯಯದಲ್ಲಿ ಈ ಗುರಿಗಳನ್ನು ಘೋಷಣೆ ಮಾಡಿದೆ. ಅದಕ್ಕಾಗಿ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಆದರೆ, ಆಯವ್ಯಯದಲ್ಲಿ ಕೇವಲ ಘೋಷಣೆ ಮಾಡಿ ಸುಮ್ಮನೆ ಇರುವುದು 'ಉತ್ತರಕುಮಾರನ ಪೌರುಷ'ದಂತೆ ಆಗಲಿಲ್ಲವೇ?

ಸನ್ಮಾನ್ಯ ಸಭಾಪತಿಯವರೇ, ಗ್ರಾಮ ಪಂಚಾಯಿತಿ ಕೇಂದ್ರಗಳಲ್ಲಿ ಪಶು ವೈದ್ಯಕೀಯ ಆಸ್ಪತ್ರೆಗಳ ಸ್ಥಾಪನೆಯ ಬಗ್ಗೆ ಹೇಳಿದ್ದಾರೆ. 'ಪ್ರತಿ ಗ್ರಾಮ ಪಂಚಾಯಿತಿ ಕೇಂದ್ರಕ್ಕೆ ಒಂದು ಪಶು ವೈದ್ಯಕೀಯ ಆಸ್ಪತ್ರೆಯನ್ನು ತೆರೆಯಲಾಗುವುದು.' ಎನ್ನುವ ಘೋಷಣೆ ಮಾಡಲಾಗಿತ್ತು. ಕಳೆದ ನಾಲ್ಕು ವರ್ಷಗಳಲ್ಲಿ 100 ಪಶು ಆಸ್ಪತ್ರೆಗಳನ್ನು ಮಾತ್ರ ತೆರೆಯಲಾಗಿದೆ. ನನಗೆ ತಿಳಿದ ಮಟ್ಟಿಗೆ ಮೂರೂವರೆ ಸಾವಿರ ಗ್ರಾಮ ಪಂಚಾಯಿತಿ ಕೇಂದ್ರಗಳಲ್ಲಿ ಪಶು ವೈದ್ಯಕೀಯ ಆಸ್ಪತ್ರೆಗಳು ಇಲ್ಲ. ಆ ಗ್ರಾಮಗಳ ಜಾನುವಾರುಗಳು ಹೇಗೆ ಬದುಕಬೇಕೆನ್ನುವುದು ನನ್ನ ಪ್ರಶ್ನೆಯಾಗಿದೆ.

ಶ್ರೀ ಎಂ.ಆರ್.ಸೀತಾರಾಂಃ– ಸನ್ಮಾನ್ಯ ಸಭಾಪತಿಯವರೇ, ನನಗೆ ತಿಳಿದ ಮಟ್ಟಿಗೆ ಇದು ಪಶು ಸಂಗೋಪನಾ ಇಲಾಖೆಯ ಮಾಹಿತಿ ಅಲ್ಲವೆಂದು ಕಾಣುತ್ತಿದೆ.

ಶ್ರೀ ಕೆ.ಎಸ್. ಈಶ್ವರಪ್ಪಃ– ಸನ್ಮಾನ್ಯ ಸಭಾಪತಿಯವರೇ, ಪಶು ಸಂಗೋಪನಾ ಇಲಾಖೆಯ ಮಾಹಿತಿ ಅಲ್ಲವೆಂದರೇ, ನಾನು ಬೇಜವಾಬ್ದಾರಿಯಿಂದ ಮಾತನಾಡುತ್ತಿದ್ದೇನೆಯೇ? ನಾನು ಹೇಳುತ್ತಿರುವ ಮಾತುಗಳನ್ನು ಅವರು ಜವಾಬ್ದಾರಿಯಿಂದ ಕುಳಿತುಕೊಂಡು ಕೇಳಬೇಕಾಗಿದೆ. ನಾನು ಸಭೆ ಕರೆದು ಅಲ್ಲಿ ಚರ್ಚೆ ನಡೆಯುತ್ತಿದ್ದ ಸಂದರ್ಭದಲ್ಲಿ ಪಶು ಸಂಗೋಪನಾ ಇಲಾಖೆಗೆ ಸಂಬಂಧಪಟ್ಟಂತೆ ಈ ಬಗ್ಗೆ ಪ್ರಶ್ನೆ ಕೇಳಿದಂತಹ ಸಂದರ್ಭದಲ್ಲಿ ಅವರು ಸುಮ್ಮನಾದರು. ಮಾನ್ಯ ಸಭಾ ನಾಯಕರಿಗೆ ಮಾಹಿತಿ ಇಲ್ಲವೆಂದರೆ ಅವರು ತಿಳಿದುಕೊಳ್ಳಲಿ. ನನಗೆ ಮಾಹಿತಿ ಇರುವುದರಿಂದ ನಾನು ಮಾತನಾಡುತ್ತಿದ್ದೇನೆ. ಸರ್ಕಾರ ಉತ್ತರ ಕೊಡುವಂತಹ ಸಂದರ್ಭದಲ್ಲಿ 'ತಾವು ತಿಳಿದುಕೊಂಡಿರುವುದು ತಪ್ಪಾಗಿದೆ' ಎಂದು ಸ್ಪಷ್ಟಪಡಿಸಲಿ. ನನಗೆ

ಗೊತ್ತಿರುವ ವಿಚಾರವನ್ನು ನಾನು ಅವರಿಗೆ ತಿಳಿಸಬೇಕಾಗಿದೆ. ಅವರಿಗೆ ಇಚ್ಛಾಶಕ್ತಿ ಇದ್ದ ಕಾರಣ ಚುನಾವಣಾ ಪ್ರಣಾಳಿಕೆಯಲ್ಲಿ ಮತ್ತು ಆಯವ್ಯಯದಲ್ಲಿ ಘೋಷಣೆ ಮಾಡಿದರು. ಕೇವಲ ಪತ್ರಿಕೆಗಳಲ್ಲಿ ಜಾಹಿರಾತುಗಳನ್ನು ನೀಡುವುದೇ ಆಯಿತು.

(ಮುಂದುವರಿದಿದೆ)

(1133)21.11.20175.40-ಪಿಕೆ-ಆರ್ಎನ್

ಶ್ರೀ ಕೆ.ಎಸ್.ಈಶ್ವರಪ್ಪ(ಮುಂದುವರೆದಿದೆ)

ಇದು ಯಾವ ನ್ಯಾಯ? ಆ ಪೇಪರ್‌ನ ಜಾಹೀರಾತು ನೋಡಿದರೆ ಎರಡೂ ಇಲಾಖೆಗಳಲ್ಲಿ ಏನೋ ಮಹತ್ಕಾರ್ಯ ನಡೆದಿದೆ ಎಂದೆನಿಸುತ್ತದೆ. ಮಾನ್ಯ ಸಭಾಪತಿಯವರೇ, ನಾನು ಎಲ್ಲಾ ಇಲಾಖೆಗಳ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ.

"ಕಿತ್ತೂರು ರಾಣಿ ಚೆನ್ನಮ್ಮ ಬ್ಯಾಂಕ್ ಅನ್ನು 200 ಕೋಟಿ ರೂಪಾಯಿಗಳ ಮೂಲ ನಿಧಿಯೊಂದಿಗೆ ಸ್ಥಾಪಿಸಲಾಗುವುದು ಮತ್ತು ಶಾಖೆಗಳನ್ನು ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದಲ್ಲಿ ತೆರೆಯಲಾಗುವುದು" ಎಂದು ಹೇಳಿದ್ದೀರಿ. ಹೆಣ್ಣು ಮಕ್ಕಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಏನಾದರೂ ಪ್ರೊಸೆಸ್ ಶುರು ಆಯಿತೇ? ಉತ್ತರ ಕರ್ನಾಟಕದ ಅಭಿವೃದ್ಧಿ ಬಗ್ಗೆ ಚರ್ಚೆ ಮಾಡಬೇಕು, ಕಿತ್ತೂರು ರಾಣಿ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಭಕ್ತ ಕನಕದಾಸ, ವಾಲ್ಮೀಕಿ ಈ ಹೆಸರುಗಳೇ ನಮ್ಮ ಮುಖ್ಯಮಂತ್ರಿಗಳ ಬಾಯಿಯಿಂದ ಬರುತ್ತಿತ್ತು. ಸಾರ್ವಜನಿಕವಾಗಿ ಅವರೇನು ಮಾತುಗಳನ್ನಾಡಿದ್ದರೋ ಆ ದಿಸೆಯಲ್ಲಿ ಒಂದು ಹೆಜ್ಜೆಯಾದರೂ ಮುಂದೆ ಹೋಗಬೇಕು ಅಲ್ಲವೇ?

ಶ್ರೀ ವಿ.ಸೋಮಣ್ಣ:- ಒಂದು ಕಡೆ ಕಿತ್ತೂರು ರಾಣಿ ಚೆನ್ನಮ್ಮನ ಬಗ್ಗೆ ಹೇಳುತ್ತಾರೆ, ಇನ್ನೊಂದು ಕಡೆ ಸಂಗೊಳ್ಳಿ ರಾಯಣ್ಣನ ಬಗ್ಗೆ ಹೇಳುತ್ತೀರಿ, ಮತ್ತೊಂದು ಕಡೆ ಕನಕದಾಸರ ಬಗ್ಗೆ ಹೇಳುತ್ತೀರಿ. ಆದರೆ ಬಸವಣ್ಣನವರ ಗತಿ ಏನಾಗಬೇಕು?

ಶ್ರೀ ಕೆ.ಎಸ್.ಈಶ್ವರಪ್ಪ:- ಇದರ ಬಗ್ಗೆ ಮಾತನಾಡಿದರೆ ವಿಷಯ ಎಲ್ಲೆಲ್ಲಿಗೋ ಹೋಗುತ್ತದೆ. ಅದನ್ನು ಮಾತನಾಡುವುದು ಬೇಡ. ಮಾನ್ಯ ಸಭಾಪತಿಯವರೇ, ಸದನದಲ್ಲಿ ಮಾನ್ಯ ಹೆಚ್.ಕೆ.ಪಾಟೀಲರು, ಮಾನ್ಯ ಸಭಾನಾಯಕರು, ಮಾನ್ಯ ಕೃಷ್ಣಭೈರೇಗೌಡರು ಸೇರಿ 4-5 ಜನ ಮಂತ್ರಿಗಳು ಇದ್ದಾರೆ. ಇದು ತುಂಬಾ ಸಂತೋಷವಾದುದು. ನೀವೂ ಸದನದಲ್ಲಿ ಇಲ್ಲದೇ ಇದ್ದಿದ್ದರೆ ನಾನು ಯಾರ ಮುಂದೆ ಮಾತನಾಡಬೇಕಾಗಿತ್ತೋ ಗೊತ್ತಿಲ್ಲ. ಸದನದಲ್ಲಿ ಒಬ್ಬ ಅಧಿಕಾರಿಗಳೂ ಕೂಡ ಇಲ್ಲ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಎಂ.ಆರ್.ಸೀತಾರಾಂ:– ಮಾನ್ಯ ವಿರೋಧ ಪಕ್ಷದ ನಾಯಕರೆ, ಕೃಷಿ ಇಲಾಖೆಯ ಕಾರ್ಯದರ್ಶಿಯವರು ಈಗ ಸದನಕ್ಕೆ ಬಂದಿದ್ದಾರೆ.

ಶ್ರೀ ಕೆ.ಎಸ್.ಈಶ್ವರಪ್ಪ:–ನಮ್ಮಲ್ಲಿ, "ಸರ್ವ ದೇವ ನಮಸ್ಕಾರಃ ಕೇಶವಂ ಪ್ರತಿ ಗಚ್ಛತಿ" ಎನ್ನುವ ಮಾತಿದೆ. ಅಂದರೆ, ನೀವು ಯಾವುದೇ ದೇವರನ್ನು ಪೂಜೆ ಮಾಡಿದರೂ ಅದು ಒಬ್ಬ ದೇವರಿಗೆ ಮಾತ್ರ ತಲುಪುತ್ತದೆ. ಹಾಗೆಯೇ, ಎಲ್ಲಾ ಇಲಾಖೆಗಳಿಗೂ ಒಬ್ಬನೇ ಅಧಿಕಾರಿ.

ಶ್ರೀ ಹೆಚ್.ಕೆ.ಪಾಟೀಲ್:– ಎಲ್ಲಾ ಮಾತುಗಳನ್ನು ಹೇಳಿ ಕೊನೆಗೆ ಕೇಶವ ಕೃಪಗೆ ಬಂದು ನಿಲ್ಲುತ್ತೀರಿ. ದಯವಿಟ್ಟು ಮುಂದೆ ಹೋಗಿ.

ಶ್ರೀ ಕೆ.ಎಸ್.ಈಶ್ವರಪ್ಪ:– ನನ್ನ ರಕ್ತ ರಕ್ತದಲ್ಲೂ ಕೂಡ ಕೇಶವ ಕೃಪದ ಸಂಸ್ಕಾರ ಇದೆ.

ಶ್ರೀ ರಾಮಚಂದ್ರಗೌಡ:– ಕನಕದಾಸರು, " ಉಂಡಾಡಿದರೂ ಇಲ್ಲ, ಗುದ್ದಾಡಿದರೂ ಇಲ್ಲ, ಕೇಶವನ ಕೃಪೆ ಇದ್ದರೆ ಉಂಟು ಇಲ್ಲದಿದ್ದರೆ ಇಲ್ಲ" ಎಂಬ ಮಾತನ್ನು ಹೇಳಿದ್ದಾರೆ. ಇಲ್ಲಿ ಕೇಶವಕೃಪದ ಬಗ್ಗೆ ಹೇಳಿಲ್ಲ. ಕನಕದಾಸರು ಹೇಳಿದ್ದನ್ನು ಗಮನಿಸಬೇಕು.

ಶ್ರೀ ಹೆಚ್.ಕೆ.ಪಾಟೀಲ್:– ತಾವು ಆಗಾಗ, ನಾನು ನಿವೃತ್ತಿಯಾಗುತ್ತಿದ್ದೇನೆ ಎಂದು ಹೇಳುತ್ತಿದ್ದೀರಿ. ಅದಕ್ಕೋಸ್ಕರ ನಿಮಗೆ ಕೃಷ್ಣನ ಕೃಪೆ ಬೇಕು, ಎಲ್ಲರಿಗೂ ಬೇಕು. ಆದರೆ ನಮ್ಮ ಈಶ್ವರಪ್ಪನವರ ಲಕ್ಷ್ಯ, ಗುರಿ ಕೇಶವ ಕೃಪದ ಕಡೆ ಮಾತ್ರ ಇದೆ. ಬಸವಣ್ಣನಿಂದ ಹಿಡಿದು ಕೊನೆಗೆ ಕೇಶವ ಕೃಪದ ಕಡೆ ಬಂದುಬಿಟ್ಟರು.

ಶ್ರೀ ಕೆ.ಎಸ್.ಈಶ್ವರಪ್ಪ:– ಕೇಶವಕೃಪದ ಹಿರಿಯರ ಮಾರ್ಗದರ್ಶನ ಇದ್ದುದರಿಂದ ನಾನು ಇಲ್ಲಿಯ ತನಕ ಬಂದಿದ್ದೇನೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತೇನೆ. ಅವರು, ಪ್ರಾಮಾಣಿಕವಾಗಿ ಬೆಳೆಯಬೇಕು ಎಂದು ಪಾಠ ಹೇಳಿದ್ದಕ್ಕೋಸ್ಕರ ನನಗೆ ಸಂಸ್ಕಾರ ಸಿಕ್ಕಿತು. ನನಗೊಬ್ಬನಿಗೆ ಅಲ್ಲ, ಇಡೀ ರಾಜ್ಯದಲ್ಲಿ ಮತ್ತು ದೇಶದ ಕೋಟ್ಯಾಂತರ ಜನರಿಗೆ ಆ ಕೇಶವಕೃಪ ಸಂಸ್ಕಾರವನ್ನು ಕೊಟ್ಟಿದೆ. ಇದನ್ನು ನಾನು ಹೆಮ್ಮೆಯಿಂದ ಹೇಳಿಕೊಳ್ಳುತ್ತೇನೆ.

ಶ್ರೀ ಕೋಟ ಶ್ರೀನಿವಾಸ ಪೂಜಾರಿ:– ಮಾನ್ಯ ಹೆಚ್.ಕೆ.ಪಾಟೀಲರಿಗೆ ಅನುಮಾನ ಬೇಡ. ಮಾನ್ಯ ರಾಮಚಂದ್ರಗೌಡರವರು ರಾಜಕೀಯದಿಂದ ನಿವೃತ್ತಿಯಾದರೆ ಅವರು ಕೇಶವ ಕೃಪದಲ್ಲೇ ಇರುತ್ತಾರೆ.

(ಸದನದಲ್ಲಿ ನಗು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಕೆ.ಎಸ್.ಈಶ್ವರಪ್ಪ:–ಮಾನ್ಯ ಸಭಾಪತಿಯವರೇ, ದಲಿತರಿಗೆ, ಹಿಂದುಳಿದ ಮಕ್ಕಳಿಗೆ ಲ್ಯಾಪ್‌ಟಾಪ್ ಕೊಡುತ್ತೇವೆ ಎಂದು ಹೇಳಿದರು. ಇಡೀ ಉತ್ತರ ಕರ್ನಾಟಕಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ ಒಂದೇ ಒಂದು ಲ್ಯಾಪ್‌ಟಾಪ್ ಕೊಟ್ಟಿದ್ದಾರೆಯೇ? ಈಗ ಟೆಂಡರ್ ಕರೆದಿದ್ದೀರಿ. ಅದಕ್ಕೂ ಸದನ ಸಮಿತಿ ಆಗಿದೆ. ಪರಿಸ್ಥಿತಿ ಹೀಗಿದೆ. ನಾಲ್ಕು ವರ್ಷದಿಂದ ಏಕೆ ಕೊಡಲಿಲ್ಲ? ಇದು ಇತ್ತೀಚಿನ ಘೋಷಣೆಯಲ್ಲ, 2013–14ನೇ ಸಾಲಿನ ಬಜೆಟ್‌ನಲ್ಲಿ ಘೋಷಣೆ ಆಗಿರುವಂಥದ್ದಾಗಿದೆ. ದಲಿತರಿಗೆ, ಹಿಂದುಳಿದ ಮಕ್ಕಳಿಗೆ ನಾವು ಲ್ಯಾಪ್‌ಟಾಪ್ ಕೊಡುತ್ತೇವೆ ಎಂದು ಹೇಳಿದ್ದಿರಿ. ಎಲ್ಲಿ ಕೊಟ್ಟಿದ್ದೀರಿ, ಒಂದು ಉದಾಹರಣೆ ತೋರಿಸಿ?

ಶ್ರೀ ರುದ್ರಪ್ಪ ಮಾನಪ್ಪ ಲಾಮಾಣಿ(ಜವಳಿ ಮತ್ತು ಮುಜರಾಯಿ ಸಚಿವರು):– ದಲಿತ ಮಕ್ಕಳಿಗೆ ಲ್ಯಾಪ್‌ಟಾಪ್ ಕೊಟ್ಟಿದ್ದೇವೆ. ಹಿಂದುಳಿದ ಮಕ್ಕಳಿಗೆ ಕೊಡಬೇಕಿದೆ. ಈ ತಿಂಗಳ ಒಳಗೆ ಕೊಡಬೇಕು ಎಂದು ಎಲ್ಲಾ ವ್ಯವಸ್ಥೆ ಮಾಡಿಕೊಂಡಿದ್ದೇವೆ.

ಶ್ರೀ ಕೆ.ಎಸ್.ಈಶ್ವರಪ್ಪ:– ನಿನ್ನೆ ನೀವು ಸದನದಲ್ಲಿ ಇರಲಿಲ್ಲ. ಈ ವಿಚಾರವಾಗಿ ನಿನ್ನೆ ಚರ್ಚೆಯಾಗಿ ಸದನ ಸಮಿತಿ ರಚನೆಯಾಯಿತು. ಸದನ ಸಮಿತಿ ಮಾಡಲು ಮಾನ್ಯ ಬಸವರಾಜ ರಾಯರೆಡ್ಡಿಯವರು ಒಪ್ಪಿಕೊಂಡಾಗ, ಹಿಂದೆ ಕುಳಿತಿದ್ದವರು, ಒಪ್ಪಿಕೊಳ್ಳಬಾರದಿತ್ತು ಎಂದು ಹೇಳುತ್ತಿದ್ದರು. ಇರಲಿ, ಆ ಕುರಿತು ಈಗ ಮಾತನಾಡುವುದು ಬೇಡ.

ಹಿಂದುಳಿದವರ ಮಕ್ಕಳಿಗೆ ಉಚಿತವಾದ ಲ್ಯಾಪ್‌ಟಾಪ್ ಕೊಡಬೇಕು ಎಂಬ ಕಲ್ಪನೆಯನ್ನು ಇಟ್ಟುಕೊಂಡು ಹೊರಟಿರಿ. ವಿಶೇಷವಾಗಿ ಉತ್ತರ ಕರ್ನಾಟಕದ ಭಾಗದಲ್ಲಿ ಅತಿ ಹೆಚ್ಚು ಹಿಂದುಳಿದ ಜನಾಂಗಗಳಿವೆ. ನಿಮಗೆ ಇದು ತಿಳಿದಿರಲಿ. ಇವರ ಮಕ್ಕಳಿಗೆ ಲ್ಯಾಪ್‌ಟಾಪ್ ಯಾವಾಗ ಕೊಡುತ್ತೀರಿ? ಈ ಅಂಶ 2013–14ರ ಬಜೆಟ್‌ನಲ್ಲಿ ಘೋಷಣೆಯಾಗಿತ್ತು. ನಾಲ್ಕು ವರ್ಷಗಳಿಂದ ಕೊಟ್ಟಿಲ್ಲ. ಮಾನ್ಯ ಸಭಾಪತಿಯವರೇ, ನಾನು ಬಹಳ ಸಮಯ ತೆಗೆದುಕೊಳ್ಳುವುದಿಲ್ಲ. ಇನ್ನೂ ಅನೇಕ ಜನ ಮಾತನಾಡಬೇಕು ಎನ್ನುವುದು ನನಗೆ ಗೊತ್ತಿದೆ. ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ, ಬಹಳ ಬೇಗ ನನ್ನ ಮಾತುಗಳನ್ನು ಮುಗಿಸುತ್ತೇನೆ. ಸರ್ಕಾರದಲ್ಲಿರುವ ಪ್ರಮುಖ ಮಂತ್ರಿಗಳ ಗಮನಕ್ಕೆ ಈ ವಿಚಾರ ಬರಲಿ, ಕ್ಯಾಬಿನೆಟ್‌ನಲ್ಲಿ ಚರ್ಚೆ ಆಗಲಿ, ಅಧಿಕಾರಿಗಳ ಕಿವಿ ಹಿಂಡಲಿ ಎನ್ನುವ ಉದ್ದೇಶಕ್ಕೆ ಮಾತನಾಡುತ್ತಿದ್ದೇನೆ. ನೀವು ಏನನ್ನೂ ಮಾಡಿಲ್ಲ ಎಂದು ಹೇಳುತ್ತಿಲ್ಲ. ಆದರೆ, ಏನು ಮಾಡುತ್ತೇವೆ ಎಂದು ಹೇಳಿದ್ದಿರೋ ಅದನ್ನು ಮುಟ್ಟುವುದಕ್ಕೆ ಆಗಲೇ ಇಲ್ಲ, ಆ ದಿಕ್ಕಿಗೆ ಹೋಗುವುದಕ್ಕೇ ಆಗುತ್ತಿಲ್ಲ.

ಮಾನ್ಯ ಸಭಾಪತಿಯವರೇ, ಈ ಭಾಗದಲ್ಲಿ ನೇಕಾರರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. "ನೆರೆ ರಾಜ್ಯದಲ್ಲಿರುವಂತೆ ನೇಕಾರರು ತಯಾರಿಸಿದ ಉಡುಪುಗಳ ಮಾರಾಟದ ಮೇಲೆ ರಿಯಾಯಿತಿ ಸೌಲಭ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೀಡಲಾಗುವುದು, ಈಗ ಇರುವ ಶೇಕಡ 20ರ ರಿಯಾಯಿತಿಯನ್ನು ಶೇಕಡ 35ಕ್ಕೆ ಹೆಚ್ಚಿಸುವುದು" ಎಂದು ಹೇಳಿದ್ದೀರಿ. ತಮಿಳುನಾಡಿನಲ್ಲಿ ಈ ಸೌಲಭ್ಯ ಇದೆ. ನಾವೂ ಕೂಡ ಮಾಡುತ್ತೇವೆ ಎಂದು ಸರ್ಕಾರ ಹೇಳಿತ್ತು. ನೇಕಾರರು ಇಂದು ಜೀವನ ಮಾಡುವುದಕ್ಕೆ ಆಗುತ್ತಿಲ್ಲ. ಮೊನ್ನೆ ನೀವೊಂದಿಷ್ಟು ನೇಕಾರರ ಸಾಲವನ್ನು ಮನ್ನಾ ಮಾಡಿದ್ದೀರಿ. ಅದಕ್ಕೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ಆದರೆ ಈಗಿನ ಪರಿಸ್ಥಿತಿ ಏನು? ಏಕೆ ರಿಯಾಯಿತಿ ಕೊಡುತ್ತಿಲ್ಲ? ಏಕೆ ಘೋಷಣೆ ಮಾಡಿದಿರಿ? ಕರ್ನಾಟಕ ರಾಜ್ಯದಲ್ಲಿ ನೇಕಾರರ ಪರಿಸ್ಥಿತಿ ಬಹಳ ಭೀಕರವಾಗಿದೆ.

ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:– ನೇಕಾರರ ಪರಿಸ್ಥಿತಿ ಭೀಕರವಾಗಿದೆ ಎಂದು ಹೇಳಿದ್ದಕ್ಕೆ ನಾನು ಆಕ್ಷೇಪಣೆ ವ್ಯಕ್ತಪಡಿಸುತ್ತೇನೆ. ನಾವು ಕೆಹೆಚ್‌ಡಿಸಿ ಯಿಂದ ಹೋದ ಸಲ 65 ಲಕ್ಷ ಲಕ್ಷ ಮೀಟರ್ ಬಟ್ಟೆಯನ್ನು ವಿದ್ಯಾ ವಿಕಾಸ ಯೋಜನೆ ಅಡಿಯಲ್ಲಿ ತೆಗೆದುಕೊಂಡೆವು. ಈ ಸಲ ನಾವು ಮತ್ತು ಆ ಡಿಪಾರ್ಟ್‌ಮೆಂಟ್ ಜೊತೆ ಎಂ.ಓ.ಯು ಮಾಡಿಕೊಂಡು, ಅವರಿಗೆ ಮುಂಗಡವಾಗಿ, ನೂಲು ಮತ್ತು ನೇಕಾರರಿಗೆ ಕೂಲಿ ಕೊಡುವುದಕ್ಕೆ ಯಾವುದೇ ತೊಂದರೆ ಆಗಬಾರದು ಎಂದು ಹಣ ಕೊಟ್ಟಿದ್ದೇವೆ. ಮೊದಲಿನ ಪರಿಸ್ಥಿತಿಗೂ ಈಗಿನ ಪರಿಸ್ಥಿತಿಗೂ ಹೋಲಿಸಿದರೆ ಈಗ ಬಹಳ ಸುಧಾರಣೆಯಾಗಿದೆ ಎಂದು ಹೇಳಬಯಸುತ್ತೇನೆ.

ಶ್ರೀ ಕೆ.ಎಸ್.ಈಶ್ವರಪ್ಪ:–ನಾನೇನು ಹೇಳುತ್ತಿದ್ದೇನೆ ಎನ್ನುವುದು ನಿಮಗೆ ಅರ್ಥವಾಗಲಿಲ್ಲ. ಅಂಗಡಿಗೆ ಹೋಗಿ ಸಾಸಿವೆ ಕಾಳು ಇದೆಯೇ ಎಂದರೆ, ಕಸಪೊರಕೆ ಇದೆ ಎಂದು ಹೇಳಿದ ಹಾಗಾಯಿತು. ನೀವು, ಶೇಕಡ 20ರಷ್ಟು ಇದ್ದ ರಿಯಾಯಿತಿಯನ್ನು ಶೇಕಡ 35ರಷ್ಟು ಮಾಡುತ್ತೇವೆ ಎಂದು ಹೇಳಿದ್ದೀರಿ. ಇದುವರೆಗೂ ಏಕೆ ಮಾಡಲಿಲ್ಲ ಎಂದು ನಿಮ್ಮನ್ನು ಕೇಳುತ್ತಿದ್ದೇನೆ. ಒಂದು ಸರ್ಕಾರ ಇದ್ದಾಗ ಕೆಲವು ಕೆಲಸಗಳನ್ನು ಮಾಡಬೇಕಾಗುತ್ತದೆ, ಆ ಕೆಲಸಗಳನ್ನು ಮಾಡಿದ್ದೀರಿ ನಿಜ. ತಾವು ಆ ದಿಕ್ಕಿನಲ್ಲಿ ಹೋಗಿಲ್ಲ ಎಂದು ಹೇಳುತ್ತಿಲ್ಲ. ಆದರೆ ರಿಯಾಯಿತಿಯನ್ನು ಹೆಚ್ಚು ಮಾಡುತ್ತೇವೆ ಎಂದು ಹೇಳಿದುದರ ಬಗ್ಗೆ ಏನು ಮಾಡುತ್ತೀರಿ? ಏಕೆ ಘೋಷಣೆ ಮಾಡಿದಿರಿ? ಘೋಷಣೆ ಮಾಡಿ ನಾಲ್ಕೂವರೆ ವರ್ಷಗಳಾಗುತ್ತಾ ಬಂತು.

ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ(ಅಣ್ಣಯ್ಯ):– ಮಾನ್ಯ ಸಭಾಪತಿಯವರೇ, ನನಗೆ ಸ್ವಲ್ಪ ಮಾತನಾಡಲು ಅವಕಾಶ ಕೊಡಿ.

ಶ್ರೀ ಕೆ.ಎಸ್.ಈಶ್ವರಪ್ಪ:– ಮಾತನಾಡಿ. ನೀವು ವಿರೋಧ ಪಕ್ಷದಲ್ಲಿದ್ದಾಗ ಹೇಗೆ ಮಾತನಾಡುತ್ತಿದ್ದೀರೋ ಹಾಗೆಯೇ ಆಡಳಿತ ಪಕ್ಷದಲ್ಲಿದ್ದಾಗಲೂ ನೇಕಾರರ ಪರಿಸ್ಥಿತಿ ಬಗ್ಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನ್ಯಾಯಯುತವಾಗಿ ಮಾತನಾಡಬೇಕು. ಆಡಳಿತ ಪಕ್ಷದವರ ಋಣ ತೀರಿಸಬೇಕು ಎನ್ನುವ ದೃಷ್ಟಿಯನ್ನಿಟ್ಟುಕೊಂಡು ಮಾತನಾಡುವುದು ಬೇಡ.

ಶ್ರೀ ಹೆಚ್.ಕೆ.ಪಾಟೀಲ್:– ಮಾನ್ಯ ಲಕ್ಷ್ಮೀನಾರಾಯಣರವರು ಎಲ್ಲೇ ಇದ್ದರೂ ಸತ್ಯವಾಗಿಯೇ ಮಾತನಾಡುತ್ತಾರೆ.

ಶ್ರೀ ಕೆ.ಎಸ್.ಈಶ್ವರಪ್ಪ:– ಹಿಂದೆ ಬಿಜೆಪಿ ಯಲ್ಲಿದ್ದಾಗ ಸತ್ಯವಾಗಿ ಮಾತಾಡುತ್ತಿದ್ದರು. ಈಗ ಹೇಗೆ ಮಾತನಾಡುತ್ತಾರೋ ಗೊತ್ತಿಲ್ಲ.

ಶ್ರೀ ಹೆಚ್.ಕೆ.ಪಾಟೀಲ್:– ಹಿಂದೆಂದಿಗಿಂತಲೂ ಇಂದು ಮಾನ್ಯ ಲಕ್ಷ್ಮೀನಾರಾಯಣ್‌ರವರು ಸಂತೋಷದಿಂದ ಇದ್ದಾರೆ.

ಶ್ರೀ ಕೆ.ಎಸ್.ಈಶ್ವರಪ್ಪ:– ಇನ್ನು 3–4 ತಿಂಗಳು ಸಂತೋಷದಿಂದ ಇರುತ್ತಾರೆ ಅಷ್ಟೆ. ಇರಲಿ, ನಾನು ಬೇಡ ಎಂದು ಹೇಳುವುದಿಲ್ಲ.

ಶ್ರೀ ಮಾನೆ ಶ್ರೀನಿವಾಸ್:– ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ, ಮಾನ್ಯ ಲಕ್ಷ್ಮೀನಾರಾಯಣ್‌ರವರು ಬಿಜೆಪಿ ಯಲ್ಲಿದ್ದಾಗ ಸತ್ಯವನ್ನು ನುಡಿಯುತ್ತಿದ್ದರು ಎಂದು ಹೇಳಿದರು. ಸತ್ಯ ಇರುವ ತನಕ ಅಲ್ಲಿದ್ದರೂ, ಅಲ್ಲಿ ಸತ್ಯ ಕಳೆದು ಹೋದಮೇಲೆ ಎಲ್ಲಿ ಸತ್ಯ ಇತ್ತೋ ಆಕಡೆ ಬಂದರು.

ಶ್ರೀ ಭಾನುಪ್ರಕಾಶ್:– ಮಾನ್ಯ ಸದಸ್ಯರು ಯಾವಾಗಲೂ ಸತ್ಯವನ್ನೇ ಹೇಳುತ್ತಾರೆ. ಆದರೆ ಅದು ಯಾರಿಗೆ ಪ್ರಿಯವಾಗುತ್ತದೆ ಎನ್ನುವುದು ಅವರು ಹೇಳಿದ ಮೇಲೆ ಗೊತ್ತಾಗುತ್ತದೆ.

ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ(ಅಣ್ಣಯ್ಯ):– ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು, ಶೇಕಡ 35 ರಷ್ಟು ರಿಯಾಯಿತಿ ಕೊಡುವುದರ ಬಗ್ಗೆ ಮಾತನಾಡಿದರು. ಹಿಂದಿನಿಂದಲೂ ಕೂಡ ಕೇಂದ್ರ ಸರ್ಕಾರದ ರಿಯಾಯಿತಿ ಶೇಕಡ 10ರಷ್ಟಿತ್ತು, ರಾಜ್ಯ ಸರ್ಕಾರದ್ದು ಶೇಕಡ 10ರಷ್ಟು ಇತ್ತು. ಕಳೆದ 5 ವರ್ಷದ ಹಿಂದೆ, ಕೇಂದ್ರ ಸರ್ಕಾರ 10 ಪರ್ಸೆಂಟ್ ಸಬ್ಸಿಡಿ ಕೊಡುವುದನ್ನು ನಿಲ್ಲಿಸಿದ ಮೇಲೆ, ನಾವೆಲ್ಲರೂ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ನಿಯೋಗ ಹೋಗಿ, ಈ ಸಬ್ಸಿಡಿಯನ್ನು ಕೂಡ ರಾಜ್ಯ ಸರ್ಕಾರವೇ ಭರಿಸಬೇಕು ಎಂದು ಕೇಳಿಕೊಂಡಾಗ, 15 ಪರ್ಸೆಂಟ್ ಜಾಸ್ತಿ ಮಾಡಿ ಆದೇಶ ಮಾಡಿದರು. ಇದು ಇಂಪ್ಲಿಮೆಂಟ್ ಆಗುತ್ತದೆ. ಯಾವುದೇ ಕಾರಣಕ್ಕೂ ಅನ್ಯಾಯವಾಗುವುದಿಲ್ಲ.

ಶ್ರೀ ಕೆ.ಎಸ್.ಈಶ್ವರಪ್ಪ:–ನಾನೂ ಕೂಡ ಅದನ್ನೇ ನಿರೀಕ್ಷೆ ಮಾಡುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ರಘುನಾಥ್‌ರಾವ್ ಮಲ್ಕಾಪೂರೆ:–ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು, ನೇಕಾರರ ಅನುಕೂಲಕ್ಕೆ ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದೇವೆ ಎಂಬ ಮಾತನ್ನು ಹೇಳಿದರು. ತುಂಬಾ ಸಂತೋಷ. ನಾವು ಉತ್ತರ ಕರ್ನಾಟಕದ ಅಭಿವೃದ್ಧಿ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಯಾದಗಿರಿ ಜಿಲ್ಲೆಯ ಕಡೆಚೂರ್ ಎಂಬ ಊರಿನಲ್ಲಿ 2500 ಎಕರೆ ಜಮೀನನ್ನು ಖರೀದಿ ಮಾಡಿ ಅಲ್ಲಿ ಟೆಕ್ಸ್‌ಟೈಲ್ ಪಾರ್ಕ್ ಮಾಡುವ ಯೋಜನೆಯನ್ನು ಕೈಗೊಂಡಿತ್ತು. ಅಲ್ಲಿನ ಇವತ್ತಿನ ಪರಿಸ್ಥಿತಿ ಏನಿದೆ ಎಂಬುದನ್ನು ದಯವಿಟ್ಟು ಹೇಳುತ್ತೀರಾ?

(ಮುಂದು . . .)

(1134)21–11–2017 5.50 ಡಿಎಸ್–ವಿಕೆ

ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು):– ಮಾನ್ಯ ವಿರೋಧ ಪಕ್ಷದ ನಾಯಕರೇ, ಈ ಚರ್ಚೆಗೆ ಉತ್ತರ ಕೊಡುವುದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳೇ ಬರುತ್ತಾರೆ. ಆಗ ನಾವು ಸಮಗ್ರವಾಗಿ ಉತ್ತರ ಕೊಡುತ್ತೇವೆ. ನೀವು ಹೇಳಿದಾಗಲೆಲ್ಲಾ ಉತ್ತರ ಕೊಡುವುದಕ್ಕಿಂತ ನೀವೆಲ್ಲರೂ ಹೇಳಿಬಿಡಿ, ಆಮೇಲೆ ನಾವು ಸಮಗ್ರವಾಗಿ ಉತ್ತರ ಕೊಡುತ್ತೇವೆ.

ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):– ನೀವು ಎದ್ದು ನಿಂತರೆ ನಾನೇನು ಮಾಡಲಿ? ಈಗ ನಾನಾಗಿಯೇ ಕುಳಿತುಕೊಳ್ಳಲಿಲ್ಲ. ಮಾನ್ಯ ಲಕ್ಷ್ಮೀನಾರಾಯಣರವರು ಎದ್ದು ನಿಂತರು, ಅದಕ್ಕಿಂತ ಮುಂಚೆ ಮತ್ತೊಬ್ಬರು ಎದ್ದರು. ನಾನು ಗೌರವ ಕೊಡುವುದಕ್ಕಾಗಿ ಕುಳಿತುಕೊಳ್ಳುತ್ತಿದ್ದೇನೆ. ನಾನಾಗಿಯೇ ನೀವು ಎದ್ದೇಳಿ ಎಂದು ಹೇಳುತ್ತಿದ್ದೇನೆಯೇ? ನೀವು ಅವರಿಗೆ ಏಕೆ ನಿಂತಿದ್ದೀರಿ, ಕುಳಿತುಕೊಳ್ಳಿ ಎಂದು ಹೇಳಿ, ಅವರು ನಿಮ್ಮ ಮಾತು ಕೇಳುತ್ತಾರೆಯೋ ಏನೋ ನನಗೆ ಗೊತ್ತಿಲ್ಲ.

ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ:– ಮಾಹಿತಿ ಕೊಡಬೇಕಲ್ಲವೆ?

ಶ್ರೀ ಕೆ.ಎಸ್.ಈಶ್ವರಪ್ಪ:– ಮಾನ್ಯ ಸಭಾನಾಯಕರು ಅದನ್ನೇ ಹೇಳುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಬಂದ ಮೇಲೆ ಉತ್ತರ ಕೊಡುತ್ತಾರೆ, ಈಗ ಉತ್ತರ ಕೊಡುವುದು ಬೇಡ ಎಂದು ಹೇಳುತ್ತಿದ್ದಾರೆ. ಮುಖ್ಯಮಂತ್ರಿಯವರನ್ನು ಬಿಟ್ಟು ನಾನು ಉತ್ತರ ಕೊಡುತ್ತೇನೆಂದರೆ ನಾನು ಕುಳಿತುಕೊಳ್ಳುತ್ತೇನೆ. ಈಗ ನಾನೇನು ಮಾಡಲಿ?

ಶ್ರೀಮತಿ ಮೋಟಮ್ಮ:– ನೀವು ಯಾರಿಗೂ yield ಆಗಬೇಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಎಂ.ಆರ್.ಸೀತಾರಾಂ:– ನೀವು ಮುಗಿಸಿ.

ಶ್ರೀ ಕೆ.ಎಸ್.ಈಶ್ವರಪ್ಪ:– ನಾನು ನಿಮ್ಮನ್ನು ಮುಗಿಸುವತನಕ ಬಿಡುವುದಿಲ್ಲ.

ಶ್ರೀ ಎಂ.ಆರ್.ಸೀತಾರಾಂ:– ನಾವು ನಿಮ್ಮನ್ನು ಮುಗಿಸಬೇಕೆಂದು ನಿಂತಿರುತ್ತೇವೆ, ನೀವು ನಮ್ಮನ್ನು ಮುಗಿಸಬೇಕೆಂದು ನಿಂತುಕೊಳ್ಳುತ್ತೀರಿ.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ:– ಮಾನ್ಯ ಎಚ್.ಕೆ.ಪಾಟೀಲ್‌ರವರಿಗೆ 18 ವರ್ಷವೋ 70 ವರ್ಷವೋ ನನಗೆ ಗೊತ್ತಿಲ್ಲ. ಮೇಲಿಂದ ಮೇಲೆ 18 ವರ್ಷದ ಹುಡುಗನ ರೀತಿ ಆಡುತ್ತಿದ್ದೀರಲ್ಲಾ ಇದರ ಗುಟ್ಟೇನು ಎಂಬುದರ ಬಗ್ಗೆ ಹೇಳಬೇಕು. ಈ ಗುಟ್ಟಿಗೆ ಉತ್ತರ ಕೊಡುತ್ತೀರಾ?

ಶ್ರೀ ಎಚ್.ಕೆ.ಪಾಟೀಲ್:– ಮಾನ್ಯ ಸಭಾಪತಿಯವರೇ, ಮಾನ್ಯ ಸೀತಾರಾಂರವರು ಭಯಭೀತರಾದರು. ಮುಗಿಸುತ್ತೇನೆ ಎಂದ ಕೂಡಲೇ ಇವರು ನಮ್ಮನ್ನು ಮುಗಿಸುತ್ತಾರೆಯೇ ಎಂದು ಭಯಭೀತರಾದರು. ಮಾನ್ಯ ಸೀತಾರಾಂರವರ ನಂಬರ್ ಬಹಳ ತಡವಾಗಿದೆ. 8, 10 ಅಥವಾ 11ನೆಯದಿದೆ. ಅವರು ಯಾವಾಗಲೂ ಮಾತನಾಡುವಾಗ ಸ್ನೇಹಕ್ಕಾಗಿ ಮಾನ್ಯ ಸಿದ್ದರಾಮಯ್ಯನವರ ಹೆಸರು ತೆಗೆದುಕೊಳ್ಳುತ್ತಿರುತ್ತಾರೆ. ಅದು ಒಂದು, ಎರಡನೆಯದು ಮಾನ್ಯ ಯಡಿಯೂರಪ್ಪನವರದ್ದು, ಮೂರನೆಯದು ಎಚ್.ಕೆ.ಪಾಟೀಲರು, ಹೀಗೆ ಎಲ್ಲಾ ಆಗಿ ಮಾನ್ಯ ಸೀತಾರಾಂರವರ ಹೆಸರು ಬಹಳ ತಡವಾಗಿ ಬರುತ್ತದೆ. ಅವರು ಮುಗಿಸುತ್ತೇನೆ ಎಂದು ಹೇಳುತ್ತಾರಲ್ಲಾ ಆ ಉದ್ದೇಶ ಅವರಿಗಿಲ್ಲ. ಅವರು ಏನೋ ಒಂದು expression ಮಾಡುತ್ತಾರೆ ಅದಕ್ಕೆ ಭಯಭೀತರಾಗಬೇಕಾಗಿಲ್ಲ.

ಶ್ರೀ ಎಂ.ಆರ್.ಸೀತಾರಾಂ:– ಅವರು ಈಗ ಏನು ಮಾತನಾಡುತ್ತಿದ್ದಾರೆ ಅದನ್ನು ಮುಗಿಸಿ ಎಂದು ಹೇಳಿದೆ ಅಷ್ಟೆ.

ಶ್ರೀ ಕೆ.ಎಸ್.ಈಶ್ವರಪ್ಪ:– ನೀವು ಏನು ಹೇಳುತ್ತಿದ್ದೀರಿ ಎಂಬುದು ಇಡೀ ರಾಜ್ಯಕ್ಕೆ ಗೊತ್ತಿದೆ. ನಾನು ಹೇಳಿರುವುದು ರಾಜ್ಯಕ್ಕೆ ಗೊತ್ತಿದೆ. ಮೊದಲು ಮಾನ್ಯ ಸಿದ್ದರಾಮಯ್ಯನವರ ಹೆಸರನ್ನು ಹೇಳಿದ್ದೀರಿ, ಇದನ್ನು ಅವರೇ ಹೇಳಿದ್ದು, ನಾನಲ್ಲ. ಸಿದ್ದರಾಮಯ್ಯನವರನ್ನು ಮುಂಚೆ ಮುಗಿಸುತ್ತಾರೆ ಎಂದು ಹೇಳಿದಿರಿ, ಅದು ಮುಂಚೆ ಮುಗಿಯಲಿ. ಆಮೇಲೆ 2, 3, 4, 5 ನೋಡೋಣ.

ಶ್ರೀ ಎಚ್.ಕೆ.ಪಾಟೀಲ್:– ಮಾನ್ಯ ಸಭಾಪತಿಯವರೇ,.....

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಕೆ.ಎಸ್.ಈಶ್ವರಪ್ಪ:– ನೀವೇ ಹೇಳಿ ಮತ್ತೆ ನೀವೇ ಎದ್ದು ನಿಂತುಕೊಂಡರೆ ನಾನೇನು ಮಾಡಲಿ? ಅದಕ್ಕೆ 18 ವರ್ಷದ ಹುಡುಗನ ರೀತಿ ಆಡುತ್ತಿದ್ದೀರಿ ಎಂದು ಹೇಳುತ್ತಿದ್ದೇನೆ.

ಶ್ರೀ ಎಚ್.ಕೆ.ಪಾಟೀಲ್:– ಅರ್ಧ ಅರ್ಧ ವಿವರಣೆ ಕೊಡಬಾರದು.

ಶ್ರೀ ಕೆ.ಎಸ್.ಈಶ್ವರಪ್ಪ:– ಮಾನ್ಯ ಸಭಾಪತಿಯವರೇ, ಈ ಉದಯವಾಣಿ ಪತ್ರಿಕೆಯ ಪ್ರಮುಖರ ಬಳಿ ನಾನು ಈ ಉತ್ತರ ಕರ್ನಾಟಕದ ಅನೇಕ ಸಮಸ್ಯೆಗಳ ಬಗ್ಗೆ ಪ್ರಸ್ತಾಪ ಮಾಡಿದೆ. ನಮ್ಮ ಕಚೇರಿಯಿಂದಲೂ ತರಿಸಿಕೊಂಡೆ. ಬೇರೆ ಕಡೆಯಿಂದಲೂ ತರಿಸಿಕೊಂಡೆ, ಇನ್ನೂ ಪ್ರಸ್ತಾಪ ಮಾಡುವ ವಿಚಾರಗಳು ಬಹಳ ಇವೆ. ಈಗಾಗಲೇ ಆರು ಗಂಟೆಯಾಗುತ್ತಿದೆ. ನಾನು ತಮಗೆ ಕೈಮುಗಿಯುತ್ತೇನೆ, ಯಾರ್ಯಾರು ಮಾತನಾಡಬೇಕೆಂದು ಇಷ್ಟಪಡುತ್ತಾರೋ 9 ಗಂಟೆಯಾಗಲಿ, 12 ಗಂಟೆಯಾಗಲಿ ದಯವಿಟ್ಟು ಅವರೆಲ್ಲರಿಗೂ ಅವಕಾಶ ಕೊಡಬೇಕು. ನಾನು ತುಂಬಾ ಮಾತನಾಡುವುದಿದೆ. ಆದರೂ ನಾನು ಈಗ ಮಾತನಾಡುವುದಕ್ಕೆ ಹೋಗುವುದಿಲ್ಲ. ನಾನು ವಿಶೇಷವಾಗಿ ನೀರಾವರಿಯ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಕೃಷ್ಣ ಮೇಲ್ದಂಡೆ ಯೋಜನೆಯ 3ನೇ ಹಂತ ಏನಿದೆ ಅದನ್ನು ಮುಗಿಸುವುದಕ್ಕೆ ಮೊದಲನೆಯ ಆದ್ಯತೆ ಕೊಡಿ. ಎಷ್ಟು ಬೇಕಾದರೂ ಜಾಹೀರಾತನ್ನು ಕೊಟ್ಟುಕೊಳ್ಳಿ ಅದಕ್ಕೆ ನಾನು ಅಡ್ಡ ಬರುವುದಿಲ್ಲ. ಸುಮಾರು 22 ಲಕ್ಷ ಚಿಲ್ಲರೆ ಎಂದು ಟಾರ್ಗೆಟ್ ಇಟ್ಟುಕೊಂಡಿದ್ದಾರಲ್ಲಾ ಅದನ್ನು ಮುಟ್ಟುವುದಕ್ಕೆ ಪ್ರಯತ್ನ ಮಾಡಲಿ. ಕೃಷ್ಣ ಮೇಲ್ದಂಡೆ ಯೋಜನೆಯ 3ನೇ ಹಂತವನ್ನು ಮುಗಿಸುವುದಕ್ಕೆ ದಯವಿಟ್ಟು ಮೊದಲನೆ ಆದ್ಯತೆ ಕೊಡಿ. ನನ್ನ ಪ್ರಶ್ನೆ ಏನೆಂದರೆ, ಇದನ್ನು ನಾನು ರಾಜಕೀಯವಾಗಿ ಯೋಚನೆ ಮಾಡುತ್ತಿದ್ದೇನೆಂದು ದಯವಿಟ್ಟು ತಿಳಿದುಕೊಳ್ಳಬೇಡಿ. ಮಾನ್ಯ ಎಂ.ಬಿ.ಪಾಟೀಲ್‌ರವರಿಗೆ ಇತ್ತೀಚೆಗೆ ಕೆಲಸ ಜಾಸ್ತಿಯಾಗಿಬಿಟ್ಟಿದೆ. ನೀರಾವರಿ ಬಿಟ್ಟು ಉಳಿದೆಲ್ಲಾ ಮಾಡುತ್ತಿದ್ದಾರೆ. ಮಾನ್ಯ ಸಭಾನಾಯಕರು ಇರಬಹುದು, ಮಾನ್ಯ ಎಚ್.ಕೆ.ಪಾಟೀಲ್‌ರವರು ಇರಬಹುದು. ನೀರಾವರಿ ಬಗ್ಗೆ ಅವರಿಗೆ ಸಮಯ ಕಡಿಮೆ ಇದ್ದರೆ, ನೀರಾವರಿ ಇಲಾಖೆಗೆ ಮತ್ತೊಬ್ಬರು ಮಂತ್ರಿಯನ್ನು ಮಾಡಿ. ಇಲ್ಲದಿದ್ದರೆ, ಅವರಿಗೆ ನೀರಾವರಿಯ ಕೆಲಸವನ್ನೇ ಜಾಸ್ತಿ ಮಾಡಿ. ಇಲ್ಲದಿದ್ದರೆ ರಾಜ್ಯದ ಜನತೆಗೆ ಈ ಸರ್ಕಾರ ದ್ರೋಹ ಮಾಡಿದ ಹಾಗೆ ಆಗುತ್ತದೆ. ಅದಕೋಸ್ಕರ ನೀರಾವರಿಯ ಬಗ್ಗೆ ಒತ್ತು ಕೊಡಬೇಕು. ಚುನಾವಣಾ ಪ್ರಣಾಳಿಕೆಯಲ್ಲಿ, ಆಯವ್ಯಯದಲ್ಲಿ ಏನು ಘೋಷಣೆ ಮಾಡಿದ್ದಾರೆ ಅದನ್ನು ಪೂರ್ಣಗೊಳಿಸುವ ದಿಕ್ಕಿನಲ್ಲಿ ಗಮನ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಮಾನ್ಯ ಸಭಾಪತಿಯವರೇ, ನಾನು ಮಾತನಾಡಿರುವುದರಲ್ಲಿ ತಮಗೇನಾದರೂ ನೋವಾಗಿದ್ದರೆ ದಯವಿಟ್ಟು ಕ್ಷಮಿಸಬೇಕು. ಉಳಿದ ಎಲ್ಲಾ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಪಕ್ಷದ ಸದಸ್ಯರುಗಳಿಗೂ ಅವಕಾಶ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೊಡಿ. ಮಾನ್ಯ ಮುಖ್ಯಮಂತ್ರಿಗಳು ಬೇಗ ಸಭೆಯನ್ನು ಮುಗಿಸಿ ಅವರು ಸದನಕ್ಕೆ ಬಂದು ಕುಳಿತುಕೊಳ್ಳಲಿ. ನಾನು ಕೈಮುಗಿದು ಪ್ರಾರ್ಥನೆ ಮಾಡುತ್ತೇನೆ. ಇಷ್ಟೊಂದು ಜನ ಮಾತನಾಡುತ್ತಿರುವಂತಹ ಸಂದರ್ಭದಲ್ಲಿ ಯಾರಿಗೆ ಮಾತನಾಡೋಣ? ಅವರು ನಾವು ಬರೆದುಕೊಳ್ಳುತ್ತೇವೆಂದು ಹೇಳುತ್ತಾರೆ. ಇಲ್ಲಿ ಬಹಳಷ್ಟು ಚರ್ಚೆಯಾಗುತ್ತಿದೆ, ಅಧಿಕಾರಿಗಳು ಎದುರಿಗೆ ಕುಳಿತುಕೊಂಡರೆ ಪರಿಸ್ಥಿತಿ ಏನಿದೆ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಅಧಿಕಾರಿಗಳು ಅಲ್ಲೆಲ್ಲೋ ಇದ್ದು ಯಾರೋ ಬರೆದುಕೊಟ್ಟಿರುವುದನ್ನು ನೋಡಿದರೆ ಸರಿಯಾಗುತ್ತದೆಯೇ? ಇದು ಆಗುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಆದಷ್ಟು ಬೇಗ ಸದನಕ್ಕೆ ಬರಲಿ. ಸಂಬಂಧಪಟ್ಟ ಅಧಿಕಾರಿಗಳೆಲ್ಲಾ ಬಂದು ಕುಳಿತುಕೊಳ್ಳಲಿ ಎಂದು ಪ್ರಾರ್ಥನೆ ಮಾಡಿ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಪ್ರಕಟಣೆ

ಮಾನ್ಯ ಸದಸ್ಯರಾದ ಶ್ರೀ ರಘುನಾಥ ರಾವ್ ಮಲ್ಕಾಪೂರೆಯವರು ದಿನಾಂಕ:17.11.2017 ರಂದು ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:407(3917)ರಲ್ಲಿ, ರಾಜ್ಯದಲ್ಲಿ ಕಾಲೇಜು ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ವತಿಯಿಂದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್‌ಗಳನ್ನು ವಿತರಿಸಲು ಹಾಗೂ ಖರೀದಿಸಲು ಅನುಸರಿಸಿರುವ ಮಾನದಂಡ ಹಾಗೂ ಖರೀದಿಗೆ ತಗುಲಿದ ವೆಚ್ಚ ಮತ್ತು ಈವರೆಗೆ ವಿದ್ಯಾರ್ಥಿಗಳಿಗೆ ವಿತರಿಸಲಾಗಿರುವ ಲ್ಯಾಪ್‌ಟಾಪ್‌ಗಳ ಬಗ್ಗೆ ಸದನದಲ್ಲಿ ಪ್ರಸ್ತಾಪಿಸಿದ್ದು, ಈ ಬಗ್ಗೆ ಪರಿಶೀಲಿಸಲು ಈ ಕೆಳಕಂಡ ಸದಸ್ಯರನ್ನು ಒಳಗೊಂಡಂತೆ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 242(ಎ) ರೀತ್ಯಾ ವಿಶೇಷ ಸದನ ಸಮಿತಿಯನ್ನು ರಚಿಸಲಾಗಿರುತ್ತದೆ.

1. ಶ್ರೀ ಕೆ.ಸಿ.ಕೊಂಡಯ್ಯ : ಅಧ್ಯಕ್ಷರು
2. ಶ್ರೀ ಐವನ್ ಡಿ'ಸೋಜಾ : ಸದಸ್ಯರು
3. ಶ್ರೀ ಕೆ.ಟಿ.ಶ್ರೀಕಂಠೇಗೌಡ : ಸದಸ್ಯರು
4. ಶ್ರೀ ರಘುನಾಥ ರಾವ್ ಮಲ್ಕಾಪೂರೆ : ಸದಸ್ಯರು
5. ಶ್ರೀ ಶರಣಪ್ಪ ಮಟ್ಟೂರ : ಸದಸ್ಯರು
6. ಶ್ರೀ ಅರುಣ ಶಹಾಪುರ : ಸದಸ್ಯರು
7. ಶ್ರೀ ಆರ್.ಪ್ರಸನ್ನ ಕುಮಾರ್ : ಸದಸ್ಯರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಅಲ್ಲಂ ವೀರಭದ್ರಪ್ಪ(ವಿಧಾನಸಭಾ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೇನೆ. ಉತ್ತರ ಕರ್ನಾಟಕದ ಅಭಿವೃದ್ಧಿ ಬಗ್ಗೆ ಕೆಲವು ಮಾಹಿತಿಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಈಗಾಗಲೇ ಉತ್ತರ ಕರ್ನಾಟಕ ವಿಶೇಷವಾಗಿ ಅಭಿವೃದ್ಧಿಯಾಗಬೇಕೆಂದು 2000 ರಲ್ಲಿ ಶ್ರೀ ನಂಜುಂಡಪ್ಪ ಆಯೋಗವನ್ನು ನಮ್ಮ ಸರ್ಕಾರ ರಚನೆ ಮಾಡಿತ್ತು. ಆ ವರದಿಯಲ್ಲಿ ಬಹಳಷ್ಟು ಹಿಂದುಳಿದ ಜಿಲ್ಲೆಗಳು ಹೈದರಾಬಾದ್–ಕರ್ನಾಟಕ ಮತ್ತು ಉತ್ತರ ಕರ್ನಾಟಕ ಆಗಿವೆ ಎಂದು ಹೇಳಿದ್ದರು. ನಾವು ಇಷ್ಟು ಹಣ ಕೊಡಿ ಎಂದು ಹೇಳುವುದಕ್ಕಾಗುವುದಿಲ್ಲ. ಇವತ್ತು ನಮ್ಮ ಕಳಕಳಿ ಏನೆಂದರೆ, ನಾವು ಬೇರೆ ರಾಜ್ಯಕ್ಕೆ ಹೋಲಿಸುವುದಕ್ಕಾಗುವುದಿಲ್ಲ. ಎಲ್ಲಿ ಅಭಿವೃದ್ಧಿಯಾಗಿರುತ್ತದೆಯೋ ಆ ಜಿಲ್ಲೆಗೆ ನಾವು ಹೋಲಿಸುತ್ತೇವೆ. ಇವತ್ತು ಮೈಸೂರು ಜಿಲ್ಲೆಯಲ್ಲಿ ಹೆಚ್ಚಿನ ಶಾಲೆಗಳಿವೆ. ನಮ್ಮ ಜಿಲ್ಲೆಗಳಲ್ಲಿ ಶಾಲೆಗಳು ಇಲ್ಲ ಎಂದಾಗ ನಾವು ಅದಕ್ಕೆ ಹೋಲಿಸುತ್ತೇವೆ. ಈಗಾಗಲೇ ಕರ್ನಾಟಕದಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್‌ಗಳು ಸರಿಯಾಗಿ ಇಲ್ಲ ಎಂದು ಮಾನ್ಯ ಬಸವರಾಜ ಹೊರಟ್ಟಿಯವರು ಹೇಳಿದರು. ಇದಕ್ಕೆ ಮೊದಲ ಕಾರಣ ಬಸ್‌ಗಳು ಸರಿಯಾಗಿ ಇಲ್ಲ, ಎರಡನೆಯ ಕಾರಣ ಇಲ್ಲಿ ರಸ್ತೆಗಳ ವ್ಯವಸ್ಥೆಯೂ ಸರಿಯಾಗಿಲ್ಲ. ಇವತ್ತು ಹಣವನ್ನು ಕೇಳಿದಾಗ ಆರ್ಥಿಕ ಸಚಿವರು ಅಥವಾ ಅಧಿಕಾರಿಗಳು ಏನು ಹೇಳುತ್ತಾರೆಂದರೆ, ಎಲ್ಲಾ ಜಿಲ್ಲೆಗಳಿಗೂ ಸಮಾನವಾಗಿ ಹಣ ಹಂಚಿಕೆ ಮಾಡಿದ್ದೇವೆಂದು ಹೇಳುತ್ತಾರೆ. ಇವತ್ತು ನಾನು ಆ ಭಾಗ ಈ ಭಾಗ ಎಂದು ಹೇಳುತ್ತಿಲ್ಲ. ಮೈಸೂರು, ಚಾಮರಾಜನಗರ, ಮಂಡ್ಯ, ಬೆಂಗಳೂರು, ಹಾಸನ, ಇವೆಲ್ಲಾ ಜಿಲ್ಲೆಗಳನ್ನು ನೋಡಿದಾಗ ಇವು 150 ಕಿ.ಮೀ. roundabout ನಲ್ಲಿ ಇವೆ.

ಶ್ರೀ ಕೆ.ಎಸ್.ಈಶ್ವರಪ್ಪ:– ಮಾನ್ಯ ಸಭಾಪತಿಯವರೇ, ಎಷ್ಟು ಸಮಯ ಸದನ ನಡೆಯುತ್ತದೆ ಎಂದು ಹೇಳಿದರೆ ಅಷ್ಟು ಸಮಯಕ್ಕೆ ನಾವೆಲ್ಲರೂ mindset ಮಾಡಿಕೊಳ್ಳುತ್ತೇವೆ. ತಾವು ಹೇಗೆ ತೀರ್ಮಾನ ಮಾಡುತ್ತೀರೋ ಹಾಗೆ.

ಶ್ರೀ ಐವನ್ ಡಿ'ಸೋಜಾ(ಸರ್ಕಾರದ ಮುಖ್ಯ ಸಚೇತಕರು):– ಮಾನ್ಯ ಸಭಾಪತಿಯವರೇ, ನಮ್ಮ ಪಕ್ಷದ ಸುಮಾರು 13 ಸದಸ್ಯರು ಮಾತನಾಡುವವರಿದ್ದಾರೆ. ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕೆನ್ನುವುದು ನಮ್ಮ ಉದ್ದೇಶವಾಗಿದೆ. ಹಾಗಾಗಿ 9 ಗಂಟೆಯವರೆಗೆ ನಡೆಸೋಣ ಎಂದು ಹಿರಿಯ ಸದಸ್ಯರೆಲ್ಲರೂ ಸಲಹೆಯನ್ನು ಕೊಟ್ಟಿದ್ದಾರೆ.

ಶ್ರೀ ಕೆ.ಎಸ್.ಈಶ್ವರಪ್ಪ:– ಆಗಬಹುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:– ಮಾನ್ಯ ಸಭಾಪತಿಯವರೇ, ೨ ಗಂಟೆಯವರೆಗೂ ನಡೆಯಲಿ.

ಶ್ರೀ ಕೆ.ಎಸ್.ಈಶ್ವರಪ್ಪ:– ಮಾನ್ಯ ಸಭಾಪತಿಯವರೇ, ನಮ್ಮದೇನೂ ಅಭ್ಯಂತರವಿಲ್ಲ. ಏಕೆಂದರೆ, ಎಷ್ಟು ಗಂಟೆಯವರೆಗೆ ನಡೆಯುತ್ತದೆಂದು ನಮ್ಮ ಶಾಸಕರುಗಳಿಗೆ ಹೇಳಬೇಕು.

ಶ್ರೀ ಐವನ್ ಡಿ'ಸೋಜಾ:– ೨ ಗಂಟೆಯವರೆಗೂ ನಡೆಸೋಣ.

ಶ್ರೀ ಕೆ.ಎಸ್.ಈಶ್ವರಪ್ಪ:– ಇವತ್ತೇ ಉತ್ತರ ಕೊಡುತ್ತೀರಾ?

ಶ್ರೀ ಐವನ್ ಡಿ'ಸೋಜಾ:– ಇವತ್ತು ಉತ್ತರ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ವಿ.ಸೋಮಣ್ಣ:– ಮಾನ್ಯ ಸಭಾಪತಿಯವರೇ, ಸದನದಲ್ಲಿ ಒಬ್ಬರು ಅಧಿಕಾರಿಯನ್ನು ಬಿಟ್ಟರೆ ಬೇರೆ ಯಾರೂ ಇಲ್ಲ.

(ಮುಂದು)

1135/21-11-2017/6-00/ಬಿಕೆಪಿ-ವಿಕೆ

ಶ್ರೀ ಐವನ್ ಡಿ'ಸೋಜಾ:– ಮಾನ್ಯ ಸಭಾಪತಿಯವರೇ, 5 ಮಂದಿ ಸಚಿವರು ಸದನದಲ್ಲಿ ಕುಳಿತಿದ್ದಾರೆ.

ಶ್ರೀ ವಿ.ಸೋಮಣ್ಣ(ವಿಧಾನಸಭಾ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಮಾನ್ಯ ಸಭಾ ನಾಯಕರು ಈ ಸಂಬಂಧ ಉತ್ತರವನ್ನು ನಾಳೆ ಕೊಡಿಸುತ್ತಾರೆಯೋ ಅಥವಾ ಇಂದೇ ಉತ್ತರವನ್ನು ಕೊಡಿಸುತ್ತಾರೋ ಎಂದು ಹೇಳಬೇಕು.

ಶ್ರೀ ಎಂ.ಆರ್.ಸೀತಾರಾಂ(ಸಭಾ ನಾಯಕರು):– ಮಾನ್ಯ ಸಭಾಪತಿಯವರೇ, ನಾಳೆ ಉತ್ತರವನ್ನು ಕೊಡಿಸಲಾಗುವುದು.

ಉಪ ಸಭಾಪತಿಯವರು:– ಇಂದು ಸದನವನ್ನು ರಾತ್ರಿ ೨-00 ಗಂಟೆಯವರೆಗೂ ನಡೆಸಲಾಗುತ್ತದೆ. ಅದರಲ್ಲಿ ಎಷ್ಟು ಮಂದಿ ಮಾತನಾಡಲು ಅವಕಾಶವಾಗುತ್ತದೋ ಅಷ್ಟು ಮಂದಿಗೆ ಅವಕಾಶವನ್ನು ಕೊಡಲಾಗುತ್ತದೆ. ಸರ್ಕಾರದ ಕಡೆಯಿಂದ ಉತ್ತರವನ್ನು ನಾಳೆ ಕೊಡಲಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ.ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಅಲ್ಲಂ ವೀರಭದ್ರಪ್ಪ(ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಹಳೆಯ ಮೈಸೂರು ಭಾಗದ ಜಿಲ್ಲೆಗಳನ್ನು ಹೋಲಿಸಿದಾಗ, ಆ ಭಾಗದ geological distance ಗಳನ್ನು ನೋಡಿದಾಗ 5-6 ಜಿಲ್ಲೆಗಳು 200 ಕಿ.ಮೀ ಒಳಗಡೆ ಬರುತ್ತವೆ. ಉದಾಹರಣೆಗೆ ಚಾಮರಾಜ ನಗರ, ಮೈಸೂರು, ಮಂಡ್ಯ, ಹಾಸನ ಇತ್ಯಾದಿ ಜಿಲ್ಲೆಗಳು ಬರುತ್ತವೆ. ಈ ವಿಚಾರವಾಗಿ ಮಾನ್ಯ ಸದಸ್ಯರಾದ ಶ್ರೀಮಾನ್ ಶಾಣಪ್ಪಣ್ಣನವರು ಗಮನಿಸಬೇಕು. ಆದರೆ, ನಮ್ಮ ಉತ್ತರ ಕರ್ನಾಟಕದ ವ್ಯಾಪ್ತಿಯಲ್ಲಿ ಬರುವಂತಹ ಕ್ಷೇತ್ರಗಳು ಒಂದೊಂದು ಕೇತ್ರದಿಂದ ಇನ್ನೊಂದು ಕ್ಷೇತ್ರಕ್ಕೆ 200 ಕಿ.ಮೀ ದೂರದಲ್ಲಿವೆ. PWD developments ಮಾಡುವಂತಹ ಸಂದರ್ಭದಲ್ಲಿ ಉತ್ತರ ಕರ್ನಾಟಕಕ್ಕೆ ಅಷ್ಟೊಂದು ಹಣವನ್ನು ಕೊಟ್ಟಿದ್ದೇವೆ, ಆ ತಾಲ್ಲೂಕಿಗೆ ಅಷ್ಟು ಹಣವನ್ನು ಕೊಟ್ಟಿದ್ದೇವೆ, ಮೈಸೂರು ಭಾಗಕ್ಕೆ ಇಷ್ಟು ಹಣವನ್ನು ಕೊಟ್ಟಿದ್ದೇವೆಂದು ಹೇಳಲಾಗುತ್ತದೆ. ತಾವು ಬಜೆಟ್‌ನಲ್ಲಿ ಕೊಟ್ಟಂತಹ 10% ರಷ್ಟು ರಸ್ತೆಯನ್ನು ಸಹ ಅಭಿವೃದ್ಧಿ ಮಾಡಲಿಕ್ಕೆ ಸಾಕಾಗುವುದಿಲ್ಲ. ಆದಕಾರಣ, ವಸ್ತುಸ್ಥಿತಿಯನ್ನು ನೀವು ನೋಡಿ.

ಯಾವುದೇ ಒಂದು ಕೆಲಸವನ್ನು PWD sanction ಮಾಡುವ ಕಾಲಕ್ಕೆ length and breadth of the constituency, district ಎಲ್ಲವನ್ನೂ ನೋಡಿಕೊಂಡು ಅದನ್ನು ಅಭಿವೃದ್ಧಿ ಮಾಡಬೇಕೆನ್ನುವುದು ನಂಜುಂಡಪ್ಪನವರ ವರದಿಯ ವಿಚಾರವಾಗಿದೆ. ಇಷ್ಟು ಹಣ ಕೊಡಬೇಕು, ಅಷ್ಟು ಹಣ ಕೊಡಬೇಕೆಂದು ನಾವು ಹೇಳುವುದಿಲ್ಲ. ಕನಿಷ್ಠ ಪಕ್ಷ ಒಂದೊಂದು ಭಾಗ 200 ಕಿ.ಮೀ ದೂರ ಇದ್ದರೆ, 3-4 ವರ್ಷಗಳಲ್ಲಿ ಅದನ್ನು ಪೂರ್ಣಗೊಳಿಸುವಂತಹ ಯೋಜನೆ, commitment ನಮ್ಮ ಸರ್ಕಾರಕ್ಕೂ ಬೇಕು, ಅಧಿಕಾರಿಗಳಿಗೂ ಬೇಕೆಂದು ಈ ಮೂಲಕ ನಾನು ತಿಳಿಸಲಿಕ್ಕೆ ಬಯಸುತ್ತೇನೆ.

ಇವತ್ತು ನಮ್ಮ ಉತ್ತರ ಕರ್ನಾಟಕದ ಬಗ್ಗೆ ನಮ್ಮ ಹಿರಿಯ ಸದಸ್ಯರಾದಂತಹ ಶ್ರೀಮಾನ್ ಸಿ.ಎಂ. ಇಬ್ರಾಹಿಂ ರವರು ಮತ್ತು ನಮ್ಮ ಕೃಷಿ ಸಚಿವರು ಇಲ್ಲಿ ಬಹಳ ಮಹತ್ವವಾದಂತಹ ಭೂಮಿ ಇದೆ, ಒಳ್ಳೆಯ ಕೃಷಿ ಬೆಳೆ ಬೆಳೆಯಲಿಕ್ಕೆ ಅನುಕೂಲವಿದೆ ಎಂದು ಈಗಾಗಲೇ ಹೇಳಿದ್ದಾರೆ. ಅದಕ್ಕೋಸ್ಕರ ನಮಗೆ ನೀರಾವರಿ ಬೇಕು. ಉದಾಹರಣೆಗೆ ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ ಇರತಕ್ಕಂತಹ ತುಂಗಾಭದ್ರಾ ಡ್ಯಾಂ ವಿಷಯವಾಗಿ ಮಾತನಾಡಬೇಕೆಂದರೆ ಅದರ ವ್ಯಾಪ್ತಿಯಲ್ಲಿ ಬರುವಂತಹ ಜಮೀನುಗಳಲ್ಲಿ ಬೆಳೆಯತಕ್ಕಂತಹ ಭತ್ತ ವಿಶೇಷವಾಗಿ ಅಂದರೆ, ಸೋನಾ ಮಸೂರಿ ತಳಿ ಬಗ್ಗೆ ವಿಶ್ವ ಮಟ್ಟದಲ್ಲಿ ಮಾನ್ಯತೆ ಇರಬೇಕಾಗುತ್ತದೆ. ನಾವು ಸೋನಾ ಮಸೂರಿಯನ್ನು ಮಂಡ್ಯದಲ್ಲಿ ಬೆಳೆಯುತ್ತೇವೆ, ಮಡಿಕೇರಿಯಲ್ಲಿ ಬೆಳೆಯುತ್ತೇವೆ ಎನ್ನುವ ವಿಚಾರವಲ್ಲ. ಈ ಭಾಗದ climatic conditions and agro-climatic conditions

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

are good. ಹೀಗಾಗಿ, ನಾವು ಅದನ್ನು ಬೆಳೆಯಬಹುದು. ಎಲ್ಲಿ ಯಾವ ಒಂದು ಬೆಳೆ ಬೆಳೆಯುತ್ತದೋ ಅದಕ್ಕೆ ನಾವು ಮಹತ್ವವನ್ನು ಕೊಟ್ಟು ಅದಕ್ಕೆ ಸಂಬಂಧಪಟ್ಟಂತೆ ಒಳ್ಳೆಯ ಬೆಳೆಯನ್ನು ಬೆಳೆಯುವುದಕ್ಕೆ ನಾವು ಸಹಕಾರವನ್ನು ಕೊಡಬೇಕಾಗುತ್ತದೆ. ಇವತ್ತು ತುಂಗಾಭದ್ರಾ ಡ್ಯಾಂನಲ್ಲಿ ಬಹಳ ಅಂದರೆ 33 ಟಿಎಂಸಿ ಹೂಳು ತುಂಬಿದೆ, ಅದನ್ನು ತೆಗೆಯಲಿಕ್ಕೆ ಯಾರನ್ನೇ ಕೇಳಿದರೂ ಸಹ technically it is not viable ಎಂದು ಹೇಳುತ್ತಾರೆ. ಅದಕ್ಕೆ ನಿನ್ನೆ ನಡೆದಂತಹ ಸಭೆಯಲ್ಲಿ ಅದಕ್ಕೆ ಪರ್ಯಾಯ ಯೋಜನೆಯನ್ನು ಮಾಡಿದ್ದೇವೆಂದು By gravity ಎಂದು "ನವಲಿ ಹಳ್ಳ" ಎಂದು ಹೇಳಿ ಗಂಗಾವತಿ ತಾಲ್ಲೂಕಿನಲ್ಲಿ ಸುಮಾರು 30 ರಿಂದ 40 ಟಿಎಂಸಿ ನೀರನ್ನು ಅಲ್ಲಿ ಸಂಗ್ರಹಿಸಬಹುದೆಂದು ಹೇಳಿದ್ದಾರೆ. But, it is only on paper, nothing has been planned and there is no Budget allocation for this. ಇವೆಲ್ಲವುಗಳು approvals ಆದಮೇಲೆ ಅಂತಿಮಕ್ಕೆ ಬರುತ್ತದೆ. ಇವತ್ತಿನಿಂದ ಕನಿಷ್ಠ ಪಕ್ಷ 2-3 ವರ್ಷಗಳಲ್ಲಿ ಇದನ್ನು ಪ್ರಾರಂಭ ಮಾಡಿದರೆ ಆ ಭಾಗದ ಜನರಿಗೆ ಅನುಕೂಲವಾಗುತ್ತದೆ. Legally or illegally ನಮಗೆ ಇರುವುದು 2 ಲಕ್ಷ ಎಕರೆ ಜಮೀನು ಮಾತ್ರ. ಅದರಲ್ಲಿ ಯಾವುದೇ ಜಗಳವಿಲ್ಲದಂತೆ 6 ಲಕ್ಷದಷ್ಟು ರೈತರು, ಜನರು ಆಹಾರ ಧಾನ್ಯಗಳನ್ನು ಬೆಳೆದುಕೊಂಡು ಜೀವನ ಮಾಡುತ್ತಿದ್ದಾರೆನ್ನುವುದು ಬಹಳ ವಿಶೇಷವಾದಂತಹ ಸುದ್ದಿ ಎಂದು ಹೇಳಲಿಕ್ಕೆ ಬಯಸುತ್ತಿದ್ದೇನೆ. ಅಷ್ಟು ಉತ್ಪತ್ತಿ ದೇಶಕ್ಕೆ ಆಗುತ್ತದೆ, ರಾಜ್ಯಕ್ಕೆ ಆಗುತ್ತದೆ.

ಅದರ ಜೊತೆಗೆ ಈಗಾಗಲೇ ಅನೇಕ ಹಿರಿಯ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಉತ್ತರ ಕರ್ನಾಟಕದ ಭಾಗದ ವ್ಯಾಪ್ತಿಯಲ್ಲಿ ನಮ್ಮ ಮತ್ತೊಂದು ಡ್ಯಾಂ ಯಾವುದು ಎಂದರೆ ನಮ್ಮ ಆಲಮಟ್ಟಿ ಡ್ಯಾಂ ಆಗಿದೆ. ಆಲಮಟ್ಟಿ ಡ್ಯಾಂನಿಂದ ನೂರಾರು ಟಿಎಂಸಿ ನೀರು ಆಂಧ್ರ ಪ್ರದೇಶಕ್ಕೆ ಹೋಗುತ್ತಿದೆ. ಆ ಡ್ಯಾಂನಿಂದ ಹೊರಗಡೆ ಬಂದ ಮೇಲೆ ಹೆಚ್ಚುವರಿಯಾಗಿ ಒಂದು drop of water ಅನ್ನೂ ಸಹ As per the Bachawat Award, ಕರ್ನಾಟಕಕ್ಕೆ ಉಪಯೋಗಿಸುವಂತಿಲ್ಲ. ಅದಕ್ಕೆ ನಾವು ಏನಾದರೂ ನೀರನ್ನು ಕ್ರೋಢಿಕರಿಸಬೇಕೆಂದರೆ, ಸಂಗ್ರಹಿಸಬೇಕೆಂದರೆ, ನಾವು ಆ ಡ್ಯಾಂ ಅನ್ನು ಎತ್ತರ ಮಾಡಬೇಕಾಗುತ್ತದೆ. ಎತ್ತರವನ್ನು ನಾವು ಬೇಗ ಮಾಡಿದರೆ ಈ ಭಾಗದ ಬಹಳಷ್ಟು ಜಾಗ ನೀರಾವರಿಯಾಗುತ್ತದೆ. ಬಹಳಷ್ಟು ನೀರಾವರಿ schemes ಗಳಿವೆ, ಅವುಗಳನ್ನು ನಾವು ಮಾಡಬೇಕಾಗುತ್ತದೆ. ನಾವು 25 ಲಕ್ಷ ಎಕರೆ ನೀರಾವರಿ ಮಾಡಬೇಕೆಂದರೆ ಅದನ್ನು ಎತ್ತರ ಮಾಡಿದರೆ ಮಾತ್ರ ಆಗುತ್ತದೆ. ಇಲ್ಲದಿದ್ದರೆ ಆಗುವುದಿಲ್ಲ. ಅದರ ಬಗ್ಗೆ ಬಹಳಷ್ಟು ಗಮನ ಕೊಡಬೇಕಾಗುತ್ತದೆ. ಇವತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ಭಾಗದಲ್ಲಿ ಅಂದರೆ ಹುಬ್ಬಳ್ಳಿ–ಧಾರವಾಡದಲ್ಲಿ ಕುಡಿಯುವ ನೀರಿನ ಅಗತ್ಯ ಬಹಳ ಇದೆ. ನಾವು ಮಹದಾಯಿ ನೀರಿನಿಂದ ಮಾತ್ರ ನೀರನ್ನು ತರಲಿಕ್ಕೆ ಸಾಧ್ಯವಿದೆ. ಇಲ್ಲದಿದ್ದರೆ, ಅದಕ್ಕೆ ಮೋಕ್ಷವಿಲ್ಲವೆಂದು ಈಗಾಗಲೇ ಈ ಭಾಗದ ಹಿರಿಯರಾದಂತಹ ಶ್ರೀಮಾನ್ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಹೇಳಿದ್ದಾರೆ. ನಾವೆಲ್ಲರೂ ಪಕ್ಷಭೇದ ಬಿಟ್ಟು ಕನ್ನಡ ನಾಡಿನ ಹಿತಕ್ಕೋಸ್ಕರ ನಾವೆಲ್ಲರೂ ಒಂದಾಗಿ ಒಂದು ಡಿಲಿಗೇಷನ್ ಅನ್ನು ಪ್ರಧಾನ ಮಂತ್ರಿಗಳ ಹತ್ತಿರ ತೆಗೆದುಕೊಂಡು ಹೋದರೆ ಅನುಕೂಲವಾಗುತ್ತದೆ.

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀಮಾನ್ ಅಲ್ಲಂ ವೀರಭದ್ರಪ್ಪನವರು ಇಲ್ಲಿ ಗಮನಿಸಬೇಕು. ಕಾಂಗ್ರೆಸ್‌ನವರು ಬಿಜೆಪಿಯವರನ್ನು ಕರೆಸಿ ಎಂದು ಹೇಳುತ್ತಾರೆ, ಬಿಜೆಪಿಯವರು ಕಾಂಗ್ರೆಸ್‌ನವರನ್ನು ಕರೆಸಿ ಎಂದು ಹೇಳುತ್ತಾರೆ. ಆದ್ದರಿಂದ, ಪಕ್ಷಭೇದ ಬಿಟ್ಟು ಈ ಒಂದು ಕೆಲಸ ಮಾಡಬೇಕಾಗುತ್ತದೆ. ಪ್ರಧಾನ ಮಂತ್ರಿಗಳು ಈ ವಿಚಾರದಲ್ಲಿ ಮನಸ್ಸು ಮಾಡಿದರೆ ಕೆಲಸವಾಗುತ್ತದೆ. ಆದ್ದರಿಂದ, ಪ್ರಧಾನ ಮಂತ್ರಿಗಳ ಹತ್ತಿರ ಅವರನ್ನು ಕರೆಸಿ, ಇವರನ್ನು ಕರೆಸಿ ಎಂದು ಹೇಳಬಾರದು. ಪ್ರಧಾನ ಮಂತ್ರಿ ಎಂದರೆ ದೇಶದ ಮುಖ್ಯಸ್ಥ. ಅವರಿಗೆ ಎಲ್ಲರನ್ನೂ ಕರೆಯುವಂತಹ ಅಧಿಕಾರ ಇದ್ದು, ಅವರು ಈ ನಿಟ್ಟಿನಲ್ಲಿ ಕರೆಯಬೇಕು. ನಾಯಕರು, ಅಂದರೆ, ನಮ್ಮ ಬಿಜೆಪಿ ನಾಯಕರು ಹಿಂದಿಯಲ್ಲಿ ಏನು ಹೇಳುತ್ತಾರೆ, ಅದನ್ನೇ ಪ್ರಧಾನ ಮಂತ್ರಿಗಳು ಹೇಳಿದರು. "ಕಾಂಗ್ರೆಸ್ ಪಕ್ಷದ ಆಡಳಿತ ಇರುವಂತಹ ನೀವು ಗೋವಾದಲ್ಲಿಯೂ ಸಹ ಕಾಂಗ್ರೆಸ್ ಆಡಳಿತವಿದ್ದು ಅವರನ್ನು, ಮಹರಾಷ್ಟ್ರದವರನ್ನು ಕರೆದುಕೊಂಡು ಬನ್ನಿ ಎಂದವರು ಹೇಳಿದರು. ನೀವು ನಿಮ್ಮ ವಿಚಾರವನ್ನು ಹೇಳಿದಿರಿ. ಅದಕ್ಕೋಸ್ಕರ ನಾನು ಹೇಳುವುದೇನೆಂದರೆ ಈಗ ಈ ವಿಚಾರದಲ್ಲಿ ನಾವೆಲ್ಲರೂ ಒಂದು ತೀರ್ಮಾನಕ್ಕೆ ಬರೋಣ. ಪಕ್ಷಭೇದ ಮರೆತು ಎಲ್ಲರೂ ಈ ನಿಟ್ಟಿನಲ್ಲಿ ಕೆಲಸ ಮಾಡೋಣ. ಪ್ರಧಾನ ಮಂತ್ರಿಗಳೇ ಇದಕ್ಕೆ ಜವಾಬ್ದಾರರಾಗುತ್ತಾರೆ. ಆದ್ದರಿಂದ, ಅವರು ಈ ದೇಶದ ಮುಖ್ಯಸ್ಥರಿರುವುದರಿಂದ ಅವರನ್ನು ಇವರನ್ನು ಕರೆಯುವಂತೆ ಹೇಳುವ ಅವಶ್ಯಕತೆ ಇರುವುದಿಲ್ಲ. ಕಾಂಗ್ರೆಸ್‌ನವರು ಬಿಜೆಪಿಯವರನ್ನು ಕರೆಯುವಂತಹ ಅವಶ್ಯಕತೆ ಇರುವುದಿಲ್ಲ. ಬಿಜೆಪಿಯವರು ಕಾಂಗ್ರೆಸ್‌ನವರನ್ನು ಕರೆಯುವಂತಹ ಅವಶ್ಯಕತೆ ಇರುವುದಿಲ್ಲ. ಎಲ್ಲರೂ ಒಟ್ಟಾಗಿ ಮಾಡಬೇಕೆಂದು ಒಂದು resolution ಮಾಡೋಣ.

ಶ್ರೀ ಅಲ್ಲಂ ವೀರಭದ್ರಪ್ಪ:– ಮಾನ್ಯ ಸಭಾಪತಿಯವರೇ, ಇದು ಬಹಳ ಒಳ್ಳೆಯ ಸಲಹೆ.

ಶ್ರೀ ಕೆ.ಬಿ.ಶ್ರೀಕಂಠೇಗೌಡ(ಪದವೀಧರ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಇನ್ನೂ ಒಂದು ವಿಚಾರವನ್ನು ಹೇಳಬೇಕೆಂದರೆ ನಿನ್ನೆಯಷ್ಟೇ ಎಲ್ಲಾ ಹೋರಾಟ ಸಮಿತಿಯವರು ಮತ್ತು ಬಹಳ ಜನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೈತರು ದೆಹಲಿಯಲ್ಲಿ ಒಂದು ಪ್ರತಿಭಟನಾ ರ್‍ಯಾಲಿಯನ್ನು ಮಾಡಿದ್ದಾರೆ. ಅದರ ಬಗ್ಗೆ ಈಗಾಗಲೇ ಪ್ರಧಾನ ಮಂತ್ರಿಗಳ ಗಮನಸೆಳೆದಿದ್ದಾರೆ. ನಾನು ನಿಮ್ಮ ಈ ವಿಚಾರಕ್ಕೆ ಈ ಅಂಶವನ್ನು ಸೇರ್ಪಡೆ ಮಾಡುತ್ತೇನೆ.

ಶ್ರೀ ಅಲ್ಲಂ ವೀರಭದ್ರಪ್ಪ:– ಮಾನ್ಯ ಸಭಾಪತಿಯವರೇ, ನಾನು delegation ತೆಗೆದುಕೊಂಡು ಹೋಗಬೇಕೆಂದು ನನ್ನ ಭಾಷಣದಲ್ಲಿ ಹೇಳಿದ್ದೇನೆ. I have not talked anything more than that. ಆದರೆ, ಈಗ ಮಾನ್ಯ ಸದಸ್ಯರಾದ ಶ್ರೀಮಾನ್ ಬಸವರಾಜ ಹೊರಟ್ಟಿಯವರು ಹೇಳಿರುವುದಕ್ಕೋಸ್ಕರ ನಾವು ನಮ್ಮ ಕನ್ನಡ ನಾಡಿನ ಹಿತಕ್ಕೋಸ್ಕರ ನಾವೆಲ್ಲರೂ ಕಲೆತು ಒಂದು resolution ಮಾಡಬೇಕಾಗಿದೆ. It is a must. ಅದನ್ನು ಮಾಡುವುದರಿಂದ ಮಾತ್ರ ಮಾರ್ಗ ಸಿಕ್ಕುತ್ತದೆ. ಇಲ್ಲದಿದ್ದರೆ, ಸಿಕ್ಕುವುದಿಲ್ಲ. ಆದರೆ, ಇಲ್ಲಿ ಏನಾಗಿದೆ ಎಂದರೆ delegation ಅನ್ನು ನೀವು ಹೋಗಿ, ನಾವು ಹೋಗಬೇಕು ಎನ್ನುವುದಾಗಿದೆ. It is not good also. ಯಾವುದೇ ಒಂದು ಒಳ್ಳೆಯ ಕೆಲಸವನ್ನು ಮಾಡುವುದಕ್ಕೆ ನಾವು ಅದನ್ನೆಲ್ಲಾ ಬಿಟ್ಟು ಬಿಡಬೇಕು. So, once again we are ready to start. ಮತ್ತೆ ಪ್ರಾರಂಭ ಮಾಡಿ, ಎರಡು ಸದನಗಳಲ್ಲಿಯೂ ಈ ಬಗ್ಗೆ ನಾವು ಒಂದು resolution ಮಾಡಿ ಎಲ್ಲರೂ ಜೊತೆಯಲ್ಲಿ ಸೇರಿಕೊಂಡು ಅಂದರೆ ಜೆಡಿ(ಎಸ್), ಬಿಜೆಪಿ, ಕಾಂಗ್ರೆಸ್ ಹೀಗೆ ಎಲ್ಲರೂ ಒಂದೇ ಮನಸ್ಸಿನಿಂದ ಮಾಡಿದರೆ ಅನುಕೂಲವಾಗುತ್ತದೆ ಎಂದು ಹೇಳಲಿಕ್ಕೆ ಬಯಸುತ್ತೇನೆ.

ಇವತ್ತು ಇನ್ನೊಂದು ವಿಷಯವನ್ನು ಹೇಳಬೇಕಾಗಿದ್ದು ಹೆಚ್ಚಿಗೆ ನಾನು ಮಾತನಾಡುವುದಿಲ್ಲ. ಇವತ್ತು Budget allocation ಅನ್ನು ಉತ್ತರ ಕರ್ನಾಟಕಕ್ಕೆ ಮಾಡುವಂತಹ ಕಾಲಕ್ಕೆ ಅಂತರ ಜಾಸ್ತಿ ಇದೆ. ಜೊತೆಗೆ ರಸ್ತೆಗಳು ಹೆಚ್ಚಿನದಾಗಿ ಎತ್ತರದ ಭಾಗದಲ್ಲಿ ಬರುತ್ತವೆ. ಕೆಲವು ರಸ್ತೆಗಳು ದಕ್ಷಿಣ ಕನ್ನಡ ಭಾಗದಲ್ಲಿ ಬರುತ್ತವೆ. ನಮ್ಮ ರಸ್ತೆಗಳು ಬಹಳ ಉತ್ತರ ಭಾಗದಲ್ಲಿ ಬರುತ್ತವೆ. ಜಿಲ್ಲೆಗೆ ಇಷ್ಟು ಹಣವನ್ನು ಕೊಡುತ್ತೇವೆಂದಾಗ ಜಿಲ್ಲೆಗೆ 10 per cent of the roads ಸಹ ಆಗುವುದಿಲ್ಲ. Budget allocation ಆಗಲಿ, electricity developments ಆಗಲಿ, ಮತ್ತೆ ಬೇರೆ ಬೇರೆ ಮನೆಗಳಾಗಿರಲಿ, ನಮಗೆ ಬಹಳ ಮನೆಗಳು ಬೇಕಾಗುತ್ತವೆ. ಸಮವಾಗಿ ಕೊಟ್ಟಿದ್ದೇವೆಂದಾಗ ಅದು ಆಗುವುದಿಲ್ಲ. ಜನಸಂಖ್ಯೆಯ ಆಧಾರದ ಮೇಲೆ ಹೆಚ್ಚಿನ ಸಂಖ್ಯೆಯಲ್ಲಿ, ಎಲ್ಲಾ ಆಧಾರದ ಮೇಲೆ ಹೆಚ್ಚಿನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಟ್ಟದಲ್ಲಿ ಕೊಟ್ಟಾಗ ಮಾತ್ರ proportionally ಕೊಟ್ಟರೆ ನಾವು ಏನಾದರು level ನಲ್ಲಿ ತರಲಿಕ್ಕೆ ಆಗುತ್ತದೆ. ಅಭಿವೃದ್ಧಿ ಮಾಡಿದಂತಾಗುತ್ತದೆ.

ಕೊನೆಯದಾಗಿ, ಹೇಳಬೇಕೆಂದರೆ ಸದನದಲ್ಲಿ ನಮ್ಮ ಕೃಷಿ ಮಂತ್ರಿಗಳಿದ್ದಾರೆ, ಅವರು ನಾನು ಹೇಳುವಂತಹ ವಿಚಾರವನ್ನು ಗಮನಿಸಬೇಕು. ನಾನು ಕೆಲವು ದಿವಸಗಳ ಹಿಂದೆ R.V. College of Engineering, Bangalore ಗೆ ಹೋಗಿದ್ದೆ. ನಾನು ಒಂದು article ಓದಿದ್ದೆ. ಆ ವಿದ್ಯಾರ್ಥಿಗಳು ಒಂದು ಸಣ್ಣ solar cold storage ಮಾಡಿದ್ದರು. ಆಗ ನಾನು ಅಲ್ಲಿ ಹೋಗಿ ಅವರ ಹತ್ತಿರ ಮಾತನಾಡದೆ. ನಾನು ಆ ಒಂದು ಸಣ್ಣ solar storage ಬಗ್ಗೆ ಕೇಳಿದಾಗ ಅವರು "೩೦-೩೫ ಸಾವಿರದೊಳಗಡೆ ೩೦-೪೦ ಕೆ.ಜಿ. capacity ಯ cold storage ಆಗುತ್ತದೆ" ಎಂದವರು ಹೇಳಿದರು. ಆಗ ನಾನು ಮಾನ್ಯ ಸಚಿವರಿಗೆ ಈ ವಿಚಾರವಾಗಿ ಹೇಳುವುದೇನೆಂದರೆ, ಇವತ್ತು ಮಾನ್ಯ ಹಿರಿಯ ಸದಸ್ಯರಾದ ಶ್ರೀಮಾನ್ ಸಿ.ಎಂ. ಇಬ್ರಾಹಿಂ ರವರು cold storages are for long term storages ಎಂದು ಹೇಳಿದರು. Cold storages ಏನೂ ದೊಡ್ಡದಾಗಿರಬೇಕಾಗಿಲ್ಲ. ಇವತ್ತು ರೈತರು ತಾವು ಬೆಳೆದಂತಹದ್ದನ್ನು ನೇರವಾಗಿ ಮಾರುಕಟ್ಟೆಗೆ ತರುತ್ತಾರೆ. ಇವತ್ತು ನೀವು ಬಳ್ಳಾರಿ ಬಿಸಿಲನ್ನು ನೋಡಿರಬಹುದು. ಅದರಿಂದಾಗಿ ನಾವೇ ಮೆತ್ತಾಗಾಗುತ್ತೇವೆ. Perishable items; ಕರಿಬೇವು ಆಗಿರಬಹುದು, ಕೊತ್ತೊಂಬರಿ ಆಗಿರಬಹುದು, ನಿಂಬೆಹಣ್ಣು ಆಗಿರಬಹುದು ಅವುಗಳು ಒಂದೇ ದಿವಸದಲ್ಲಿ ಒಣಗಿ ಹೋಗುತ್ತವೆ. ಅದನ್ನು ಎರಡನೆಯ ದಿವಸಕ್ಕೆ ಯಾರು ತೆಗೆದುಕೊಳ್ಳುವವರು ಇರುವುದಿಲ್ಲ. ಏಕೆಂದರೆ, ಮತ್ತೆ ಬೇರೆ ಕಡೆಯಲ್ಲಿ fresh ಆಗಿರುವಂತಹದ್ದು ಬಂದಿರುತ್ತದೆ. ರೈತನು ಬೆಳೆಯುವುದೇ ಅರ್ಧ ಬೆಳೆ. ಕಷ್ಟಪಟ್ಟು ಬೆಳೆದರೂ ಸಹ ಅರ್ಧ ಬೆಳೆ ಬಂದಿರುತ್ತದೆ. ಮಳೆ ಬಾರದೇ ಅರ್ಧ ಬೆಳೆಯಾಗಿರುತ್ತದೆ. ಅದನ್ನು ತಂದು ವ್ಯಾಪಾರ ಮಾಡುವಷ್ಟರಲ್ಲಿ 10% ಮಾರಿ ೨೦% ರಷ್ಟು ಬೆಳೆ ಹಾಳಾಗುತ್ತದೆ. So, at all levels he is the looser. ಹೀಗಾಗಿ, ಇದಕ್ಕೆ ಕೃಷಿ ಮತ್ತು ತೋಟಗಾರಿಕೆ ಮಂತ್ರಿಯವರು ಈ ನಿಟ್ಟಿನಲ್ಲಿ small cold storage ಮಾಡಿದರೆ ಅನುಕೂಲವಾಗುತ್ತದೆ. ರೈತರು ತಾವು ಬೆಳೆದಂತಹ ಕೃಷಿ ಉತ್ಪನ್ನಗಳನ್ನು ೫೦ ಕೆ.ಜಿ. 100 ಕೆ.ಜಿ. 200 ಕೆ.ಜಿ. ಯಂತೆ ಹಳ್ಳಿಗಳಿಂದ ಮಾರುಕಟ್ಟೆಗೆ ಮಾರಲಿಕ್ಕೆ ತಂದಿರುತ್ತಾರೆ, ಅದನ್ನು cold storage ನಲ್ಲಿಟ್ಟು ಪ್ರತಿದಿನ ಎಷ್ಟು ಬೇಕೋ ಅಷ್ಟನ್ನು ತೆಗೆದುಕೊಂಡು ಮಾರಿದರೆ ಅವರಿಗೂ ಪೂರ್ಣವಾಗಿ ಮಾರ್ಕೆಟಿಂಗ್

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸೌಲಭ್ಯ ಸಿಕ್ಕುತ್ತದೆ. ಯಾವುದೇ ಪದಾರ್ಥ ವ್ಯರ್ಥವಾಗುವುದಿಲ್ಲ. ಇದರ ಬಗ್ಗೆ, no Scientist has ever thought of it.

ಮುಂದು. . .

(1136)21.11.2017/06.10/ಎಸ್‌ವಿ-ಬಿಎನ್‌ಎಸ್

ಶ್ರೀ ಅಲ್ಲಂ ವೀರಭದ್ರಪ್ಪ(ಮುಂದು):-

Agricultural growth ಆಗಬೇಕು ಎಂದು ಹೇಳುತ್ತೇವೆ. Hybrid yield ಬೇಕೆಂದು ಹೇಳುತ್ತೇವೆ. But, How to preserve them to maintain their freshness ಎಂಬುದನ್ನು ಆಲೋಚನೆ ಮಾಡಬೇಕಾಗಿದೆ. ಅದರ ಬಗ್ಗೆ ಸ್ವಲ್ಪ ಹೆಚ್ಚಿನ ಮಾಹಿತಿಯನ್ನು ಮಾನ್ಯ ಕೃಷಿ ಸಚಿವರಿಗೆ ಕೊಡುತ್ತೇನೆ. ಇದರ ಜೊತೆಗೆ ಕಾಲೇಜುಗಳು, ವಿದ್ಯಾರ್ಥಿ ನಿಲಯಗಳು, ತಾಂತ್ರಿಕ ವಿದ್ಯಾಲಯಗಳು, Indian Institute of Technology (I.I.T.) ಗಳನ್ನು population wise ನೀಡಬೇಕಾಗಿದೆ. ಈ ಭಾಗದಲ್ಲಿ ಏನಾಗಿದೆಯೆಂದರೆ ಮಾನ್ಯ ಸಿ.ಎಂ.ಇಬ್ರಾಹಿಂರವರು ಹೇಳಿದಂತೆ ಕೃಷಿಯನ್ನು ಬಿಟ್ಟು ಬೇರೇನೂ ಮಾಡುವುದಕ್ಕೆ ತಿಳಿಯುವುದಿಲ್ಲ. ಬಳ್ಳಾರಿ ಜಿಲ್ಲೆಗೆ ಕೈಗಾರಿಕೆಗಳು ಬರುವುದಕ್ಕೆ ಸಿದ್ಧವಿದೆ. ಆದರೆ, some concession has to be given by the Government. ಉದಾಹರಣೆಗೆ ಸೀಮಾಂಧ್ರದಲ್ಲಿ ಶ್ರೀ ಚಂದ್ರಬಾಬು ನಾಯ್ಡುರವರು, for all the Steel Industries, ಒಂದು ರೂಪಾಯಿ ಕಡಿಮೆ ವಿದ್ಯುಚ್ಛಕ್ತಿ ಎಂದು ಮಾಡಿದರು. All the people in and around Karnataka and other people went to Andhra Pradesh. ಏಕೆಂದರೆ ವಿದ್ಯುಚ್ಛಕ್ತಿಯಲ್ಲಿ ಒಂದು ರೂಪಾಯಿ ಉಳಿತಾಯವಾಗುತ್ತದೆ. When you are comparing yourself with your neighboring States, how they will develop ಎನ್ನುವಾಗ ಕುಳಿತುಕೊಂಡು ನಾವು ಮಾತನಾಡಿ ಯಾವುದು ಒಳ್ಳೆಯದಿದೆಯೋ ಅದನ್ನು ಅಳವಡಿಸಿಕೊಂಡು, ಯಾವ ರೀತಿಯಲ್ಲಿ ಅಭಿವೃದ್ಧಿಯಾಗುತ್ತದೆ ಎನ್ನುವ ಚಿಂತನೆಯಿಂದ ಸರ್ಕಾರ ಅದನ್ನು ಆಲೋಚನೆ ಮಾಡಿದರೆ, definitely, we will develop ಎಂದು ಹೇಳುತ್ತಾ ನನಗೆ ಮಾತನಾಡಲಿಕ್ಕೆ ಅವಕಾಶವನ್ನು ಮಾಡಿಕೊಟ್ಟಂತಹ ಮಾನ್ಯ ಸಭಾಪತಿಯವರಿಗೆ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ರಮೇಶ್ ಬಾಬು(ಶಿಕ್ಷಕರ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಸದನ ಸಮಿತಿಯ ಬಗ್ಗೆ ತಾವು announcement ಮಾಡಿದಿರಿ. ಅದಕ್ಕೆ ಸಂಬಂಧಪಟ್ಟಂತೆ ಒಂದು ಸ್ಪಷ್ಟೀಕರಣ ಬೇಕು. ಮಾನ್ಯ ಸದಸ್ಯರಾದ ಶ್ರೀ ರಘುನಾಥರಾವ್ ಮಲ್ಕಾಪೂರೆಯವರು Laptop ಗಳ ಖರೀದಿಯಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ ಸದನದಲ್ಲಿ ಪ್ರಸ್ತಾಪಿಸಿದ್ದು, ಅದಕ್ಕೆ ಸಂಬಂಧಪಟ್ಟಂತೆ ಸದನ ಸಮಿತಿಯೊಂದನ್ನು ರಚಿಸಲಾಗಿದೆ. ಸಮಿತಿಗೆ ಸದಸ್ಯರನ್ನು ನೇಮಕ ಮಾಡುವುದಕ್ಕೆ ಮುಂಚೆ ಆಯಾ ಪಕ್ಷಗಳ ನಾಯಕರ ಪತ್ರವನ್ನು ಪಡೆದುಕೊಂಡಿದ್ದಾರೆ. ನಮ್ಮ ಪಕ್ಷಕ್ಕೆ ಸಭಾಪತಿಯವರು ಎರಡು ಅವಕಾಶಗಳನ್ನು ಕೊಡುತ್ತೇವೆಂದು ಹೇಳಿದ್ದರು. ಈಗ ಒಂದು ಹೆಸರನ್ನು ಅವರು ಘೋಷಣೆ ಮಾಡಿದ್ದಾರೆ. ನಾವು ಪಕ್ಷದಿಂದ ಕೊಟ್ಟಿರುವ ಪತ್ರದಲ್ಲಿರುವ ಹೆಸರೇ ಬೇರೆ. ಅವರೇ ನಿರ್ಧರಿಸುವುದಾದರೆ ಸದನದಲ್ಲಿ ನಮ್ಮನ್ನು ಏಕೆ ಕೇಳಬೇಕು? ನಮ್ಮ ನಾಯಕರನ್ನು ಏಕೆ ಕೇಳಬೇಕು? ಅವರು ತಮ್ಮ ವಿಶೇಷಾಧಿಕಾರವನ್ನು ಚಲಾವಣೆ ಮಾಡುವುದಾದರೆ ಅವರು ನಮ್ಮನ್ನು ಕೇಳುವುದು ಬೇಡ. ಕೇಳಿದ ಮೇಲೆ ನಮ್ಮ ಪಕ್ಷದ ನಾಯಕರು ಪತ್ರ ಮುಖೇನ ನೀಡುವುದನ್ನು ಪರಿಗಣಿಸಬೇಕು.

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ನಾವು ಮೊದಲು ಇಬ್ಬರು ಎಂದು ತಿಳಿದುಕೊಂಡಿದ್ದೆವು. ಆದರೆ ಪತ್ರದಲ್ಲಿ ಒಬ್ಬರ ಹೆಸರನ್ನು ಮಾತ್ರ ನೀಡಿದ್ದೇವೆ. ಅದರಲ್ಲಿ ಶ್ರೀ ರಮೇಶ್ ಬಾಬು ಅವರ ಹೆಸರನ್ನು ಹಾಕಿಕೊಳ್ಳುವಂತೆ ಪತ್ರ ನೀಡುತ್ತೇವೆ. ಮಾನ್ಯ ಶ್ರೀಕಂಠೇಗೌಡರ ಹೆಸರನ್ನು ತೆಗೆಯಬೇಕೆಂದು ಕೋರುತ್ತೇವೆ.

ಶ್ರೀ ಕೆ.ಎಸ್.ಈಶ್ವರಪ್ಪ:– ಮಾನ್ಯ ಸಭಾಪತಿಯವರೇ, ಇಬ್ಬರನ್ನೂ ಸದನ ಸಮಿತಿಗೆ ನೇಮಕ ಮಾಡಿ. ಅದರಲ್ಲಿ ತಪ್ಪೇನಿದೆ? ಆಡಳಿತ ಪಕ್ಷದವರಿಗೂ ಒಂದು ಸದಸ್ಯತ್ವ ಜಾಸ್ತಿ ಕೊಡಿ. ಸಭಾಪತಿಯವರೊಡನೆ ಚರ್ಚೆ ಮಾಡಿ. ದಯಮಾಡಿ ಒಂದೇ ಬಾರಿಗೆ ರೂಲಿಂಗ್ ಅನ್ನು ಕೊಡಬೇಡಿ.

ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ಐದು ಮಂದಿ ಪಕ್ಷೇತರರು ಇದ್ದಾರೆ. ಅವರನ್ನೇಕೆ ನೀವು ಪರಿಗಣಿಸುವುದಿಲ್ಲ. ಪ್ರತಿಯೊಂದಕ್ಕೂ ಕಾಂಗ್ರೆಸ್, ಜೆಡಿಎಸ್, ಬಿಜೆಪಿ ಹಂಚಿಕೊಳ್ಳುವಂತಹ ಪದ್ಧತಿಯನ್ನು ತೆಗೆದುಹಾಕಬೇಕು. ಸದಸ್ಯರು ಎಂದರೆ ಇಲ್ಲಿರುವ ಎಲ್ಲರೂ ಸದಸ್ಯರೇ. ಐದು ಜನ ಪಕ್ಷೇತರರಲ್ಲಿ ನೀವು ಯಾರನ್ನಾದರೂ ತೆಗೆದುಕೊಳ್ಳಿ, ನನ್ನನ್ನೇ ತೆಗೆದುಕೊಳ್ಳಬೇಕು ಎಂದು ಹೇಳುವುದಿಲ್ಲ. ನಿಮ್ಮ ಕಡೆಯಿಂದ ಮಾತ್ರ ಇದಕ್ಕೆ ನ್ಯಾಯ ಒದಗಿಸಲು ಸಾಧ್ಯ ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏಕೆಂದರೆ ಪಕ್ಷೇತರರ ಬಗ್ಗೆ ಸ್ವಲ್ಪ ವಿಶೇಷವಾದ ಕಾಳಜಿ ತಮಗೆ ಇದೆ. ಇತ್ತೀಚೆಗೆ ನಾನು ಮತ ಚಲಾಯಿಸಿದ ನಂತರ ಸಭಾಪತಿಯವರಿಗೆ ಕಾಳಜಿ ಹೆಚ್ಚಾಗಿದೆ.

(ಸದನದಲ್ಲಿ ನಗೆಯ ಅಲೆ)

ಇಲ್ಲವಾದರೆ ನಾನು ಎದ್ದು ನಿಂತ ತಕ್ಷಣ ಕುಳಿತುಕೊಳ್ಳಿ, ಕುಳಿತುಕೊಳ್ಳಿ ಎಂದು ಹೇಳುತ್ತಿದ್ದರು. ಹಾಗಾದರೆ ನಾವು ಇಲ್ಲಿ ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಬರುತ್ತೇವೆಯೇ?

ಉಪ ಸಭಾಪತಿಯವರು:– ಆಗಲಿ ಮಾನ್ಯ ಯತ್ನಾಳ್‌ರವರೇ, ಈಗ ಈ ವಿಷಯವನ್ನು ಮಾನ್ಯ ಬಸವರಾಜ ಹೊರಟ್ಟಿಯವರು ಹೇಳಿದ್ದಾರೆ ಹಾಗೂ ವಿರೋಧಪಕ್ಷದ ನಾಯಕರೂ ಹೇಳಿದ್ದಾರೆ. ಅದರ ಬಗ್ಗೆ ಪೀಠ ತೀರ್ಮಾನವನ್ನು ತೆಗೆದುಕೊಳ್ಳುತ್ತದೆ.

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:– ಮಾನ್ಯ ಸಭಾಪತಿಯವರೇ, ಅವರು ಹೇಳಲಿ ಬಿಡಿ. ಸ್ವಲ್ಪ ತಾಳ್ಮೆಯಿಂದ ಕೇಳಿ. ಒಮ್ಮೆಲೆ ಏಕೆ ಅವಸರಿಸುತ್ತೀರಿ? ತಾವು ಪೀಠದಲ್ಲಿ ಕುಳಿತಿದ್ದೀರಿ. ಅದಕ್ಕೆ ಒಂದು ಗೌರವ ಭಾವನೆ ಇದೆ. ಒಂದು ಹೆಸರನ್ನು ಸೇರಿಸಿ. ಅದರಲ್ಲಿ ತಪ್ಪೇನಿದೆ?

ಸಭಾಪತಿಯವರು:– ಮಾನ್ಯ ಬಸವರಾಜ ಹೊರಟ್ಟಿಯವರೇ, ಈಗ ತಾವು, ವಿರೋಧಪಕ್ಷದ ನಾಯಕರು, ಮಾನ್ಯ ಯತ್ನಾಳ್‌ರವರು ಎಲ್ಲರೂ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ. ಇದನ್ನು ಪರಿಶೀಲಿಸಲಾಗುವುದು. ದಯವಿಟ್ಟು ಆ ವಿಚಾರವನ್ನು ಬಿಟ್ಟುಬಿಡಿ. ಮುಂದಿನ ಸರದಿ ಶ್ರೀ ಕೆ.ಬಿ.ಶಾಣಪ್ಪನವರದು.

ಶ್ರೀ ಕೆ.ಬಿ.ಶಾಣಪ್ಪ (ನಾಮನಿರ್ದೇಶಿತರು):– ಮಾನ್ಯ ಸಭಾಪತಿಯವರೇ, ಉತ್ತರ ಕರ್ನಾಟಕದ ಅಭಿವೃದ್ಧಿಯ ಬಗ್ಗೆ ನಮ್ಮ ನಾಯಕರಾದ ಶ್ರೀ ಈಶ್ವರಪ್ಪನವರು, ಶ್ರೀ ಸಿ.ಎಂ.ಇಬ್ರಾಹಿಂರವರು, ಶ್ರೀ ಬಸವರಾಜ ಹೊರಟ್ಟಿಯವರು ಮತ್ತು ಅನೇಕರು ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಇದನ್ನು ನಾನು ಮಾತನಾಡಕೂಡದು, ಏಕೆಂದರೆ ಅನೇಕ ಸಲ ನಾನು ಈ ಸದನದಲ್ಲಿ ಈ ವಿಷಯದ ಬಗ್ಗೆ ಮಾತನಾಡಿದ್ದೇನೆ. ಇಲ್ಲಿ ಮಾತನಾಡಲಿಕ್ಕೆ ಒಂದು ಉಲ್ಲಾಸ ಬೇಕು. ನಾವು ಮಾತನಾಡಿದ್ದು ಎಷ್ಟರ ಮಟ್ಟಿಗೆ implement ಆಗುತ್ತಿದೆ ಎಂಬುದನ್ನು review ಮಾಡಬೇಕು. 2013 ರಿಂದ 2017ರವರೆವಿಗೂ ನಾವು ಮಾತನಾಡುತ್ತಲೇ ಬಂದಿದ್ದೇವೆ. ಬರುವ ಆಗಸ್ಟ್ ತಿಂಗಳಿನಲ್ಲಿ ನಾವು ನಿವೃತ್ತಿ ಹೊಂದುತ್ತೇವೆ. What is that we have given to this House and have they accepted

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

our proposals? ಯಾವ ಭಾಗದಿಂದ ನಾವು ಇಲ್ಲಿಗೆ ಬಂದಿದ್ದೇವೆಯೋ ಅಲ್ಲಿರುವ ಜನರಿಗೆ ನಾವು ನಿವೃತ್ತಿಯಾದ ನಂತರ ಏನು ಹೇಳಬೇಕು? ಅದೇ ಬಡತನ, ಅದೇ unemployment, ೪೦ ವರ್ಷಗಳ ಹಿಂದೆ ನಾವು ಹುಟ್ಟಿದಾಗ ಇದ್ದಂತೆಯೇ ಇರುವ ಹಳ್ಳಿ, ಅದೇ ಗಲ್ಲಿ, ಅದೇ migration, ಅದೇ ರೋಗ, ಅದೇ ಏಡ್ಸ್. 1,20,000 ಇದ್ದಂತಹ ಹೈದರಾಬಾದ್-ಕರ್ನಾಟಕ (ಬಳ್ಳಾರಿಯೂ ಸೇರಿದಂತೆ) (Totally Six Districts) ಜನಸಂಖ್ಯೆ ಯಾವುದೇ ಅಭಿವೃದ್ಧಿಯನ್ನು ಕಂಡಿರುವುದಿಲ್ಲ. I don't want to talk about Mumbai-Karnataka region. Mumbai-Karnataka region ನಲ್ಲಿ Mumbai ನಿಂದ ಬಂದವರು, Bombay Presidency region ನಲ್ಲಿ ಬಹಳಷ್ಟು ಅಭಿವೃದ್ಧಿಯಾಗಿದೆ. ಒಳ್ಳೆಯ irrigation ಆಗಿದೆ. ಹಳೆ ಮೈಸೂರು ಭಾಗದವರು ಮಹಾರಾಜರ ಆಡಳಿತಾವಧಿಯಲ್ಲಿ ತಮ್ಮದೇ ಆದಂತಹ ಸುಂದರವಾದ ಒಂದು irrigation ಆಗಲೀ, ಶಿಕ್ಷಣವಾಗಲೀ, ಶಿಕ್ಷಣ ಸಂಸ್ಥೆಯಾಗಲೀ ಮಾಡಿದ್ದಾರೆ. ಕಲಬುರಗಿ, ಬೀದರ್, ರಾಯಚೂರು, ಯಾದಗಿರಿ, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳು ಹೈದರಾಬಾದ್-ಕರ್ನಾಟಕಕ್ಕೆ ಸೇರಿವೆ. ಬಳ್ಳಾರಿ 1953ರಲ್ಲಿ ಕರ್ನಾಟಕಕ್ಕೆ ಬಂದು ಸೇರಿತು. 1956ರಲ್ಲಿ ಫಜಲ್ ಅಲಿ ಕಮಿಟಿಯು ಬಂದ ನಂತರ ಕರ್ನಾಟಕ ಏಕೀಕರಣಗೊಂಡಿತು. ಕರ್ನಾಟಕದ ಬೇರೆ ಭಾಗಗಳಿಗೆ ಹೋಲಿಸಿ ನೋಡಿದಾಗ, ನಮ್ಮ ಆಶಯ ಏನಿತ್ತೆಂದರೆ ಮುಂಬರುವ ದಿನಗಳಲ್ಲಿ, we will be on par with old Mysore region. 1956ರಲ್ಲಿ ನನ್ನ ವಯಸ್ಸೆಷ್ಟಿತ್ತೆಂದರೆ, I was around 20-25 years old. ಆಗಿದ್ದ ಸ್ಥಿತಿಯಲ್ಲಿಯೇ ಈಗಲೂ ಇದೆ. ಹೈದ್ರಾಬಾದ್-ಕರ್ನಾಟಕಕ್ಕೆ ಸರ್ಕಾರ ಬಹಳ meager amount ಕೊಡುತ್ತದೆ. ಆರ್ಟಿಕಲ್ 371(ಜೆ) ಬಗ್ಗೆ ನಾನು ನಂತರ ಮಾತನಾಡುತ್ತೇನೆ. ಹೊಸ ತಾಲ್ಲೂಕುಗಳು ರಚನೆ ಮಾಡಿದಾಗ 27 ತಾಲ್ಲೂಕುಗಳನ್ನು ಹೈದರಾಬಾದ್ ಕರ್ನಾಟಕಕ್ಕೆ ನೀಡಲಾಗಿದೆ. ಅವು ಎಲ್ಲಿವೆ? Are they functioning? ಇದೇ ಸದನದಲ್ಲಿ ಶ್ರೀ ಜಗದೀಶ್ ಶೆಟ್ಟರ್‌ರವರು ಘೋಷಿಸಿದ್ದರು. ಐದಾರು ವರ್ಷಗಳು ಕಳೆದರೂ ಸಹ ಒಂದು ತಾಲ್ಲೂಕು ಕಾರ್ಯ ನಿರ್ವಹಿಸುತ್ತಿಲ್ಲ. ಶ್ರೀ ಸಿದ್ದರಾಮಯ್ಯನವರ ಸರ್ಕಾರ ಬಂದ ನಂತರ ಮಾನ್ಯ ಕಾಗೋಡು ತಿಮ್ಮಪ್ಪನವರು ಇನ್ನೂ 9 ತಾಲ್ಲೂಕುಗಳನ್ನು ಸೇರಿಸಿ ಒಂದೊಂದು ತಾಲ್ಲೂಕಿಗೆ ಇಷ್ಟು ಕೋಟಿ ರೂಪಾಯಿಗಳು ಬೇಕಾಗುತ್ತದೆ ಎಂದು ಹೇಳಿದರು. Where is that money and infrastructure? ಒಂದು ತಾಲ್ಲೂಕು ಕೇಂದ್ರವಾಗಬೇಕಾದರೆ ಯಾವ ಯಾವ ಕಛೇರಿಗಳಿರಬೇಕು ಎಂಬ ರೂಪುರೇಷೆಗಳೇನಾದರೂ ಇದೆಯೇ?

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಮ್ಮ ಭಾಗದಲ್ಲಿ ಬೋರ್‌ವೆಲ್‌ಗಳನ್ನು ಕೊರೆದರೆ ಸಿಹಿನೀರಿನ ಬದಲಾಗಿ ಫ್ಲೋರೈಡ್ ನೀರು ಬರುತ್ತದೆ. ಹೈದ್ರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿಯಾಗಲು ಬೇಕಾದಂತಹ ಕಾನೂನನ್ನು ಮಾಡಿದಂತಹ ಮಾನ್ಯ ಹೆಚ್.ಕೆ.ಪಾಟೀಲರು ಇಲ್ಲಿಯೇ ಇದ್ದಾರೆ. ಸನ್ಮಾನ್ಯ ದಿ:ಧರ್ಮಸಿಂಗ್‌ರವರು, ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಇವರೆಲ್ಲಾ ಬಹಳ ಹೋರಾಟ ಮಾಡಿ ಹೈದ್ರಾಬಾದ್-ಕರ್ನಾಟಕಕ್ಕೆ ವಿಶೇಷ ಸ್ಥಾನಮಾನವನ್ನು ಕೊಡಿಸಿದರು. What is the new thing that we could achieve now? ಬೀದರ್, ಕಲಬುರಗಿ, ಕೊಪ್ಪಳ, ಯಾದಗಿರಿ ಇಲ್ಲಿ ಏನಾದರೂ ಬದಲಾವಣೆ ಕಾಣುತ್ತಿದೆಯೇ? ಮಾನ್ಯ ಹೆಚ್.ಕೆ.ಪಾಟೀಲರು ನೀರಾವರಿ ಸಚಿವರಾಗಿದ್ದಾಗ ಎಲ್ಲಾ ನದಿಗಳಿಗೂ ಚೆಕ್ ಡ್ಯಾಂ ಅನ್ನು ನಿರ್ಮಾಣ ಮಾಡಿದ್ದಾರೆ. That is the beautiful programme that you have done. ಇವತ್ತು ನದಿಗಳಲ್ಲಿ ನೀರು ನಿಂತಿದೆ. ಕೃಷ್ಣಾ ಮೇಲ್ದಂಡೆ ಯೋಜನೆಗೆ 1966ರಲ್ಲಿ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಯವರು ಅಡಿಪಾಯ ಹಾಕಿದ್ದು, ಲಕ್ಷಾವಧಿ ಎಕರೆಗೆ ನೀರು ಕೊಡುವುದಕ್ಕಾಗಿ ಆ ಯೋಜನೆಗೆ ಇದುವರೆವಿಗೂ ಅಂದಾಜು 2000 ಕೋಟಿ ರೂಪಾಯಿಗಳು ಖರ್ಚಾಗಿರಬಹುದು. ಆದರೂ ಸಹ ಇನ್ನೂ ಮೂರನೇ ಹಂತಕ್ಕೆ ಬಂದಿರುವುದಿಲ್ಲ. ಬೆಣ್ಣೆತೊರಾ ಯೋಜನೆಯನ್ನು 1972ರಲ್ಲಿ ಪ್ರಾರಂಭಿಸಲಾಯಿತು. ಇನ್ನು ಮುಗಿದಿಲ್ಲ. ಮುಲ್ಲಾ-ಮಾರಿ ಯೋಜನೆ ಸಹ ಇನ್ನೂ ಮುಗಿದಿಲ್ಲ.

(...ಮುಂದು)

(1137)21.11.2017/6.20.ಕೆ.ಜಿ-ಬಿಎನ್‌ಎಸ್

ಶ್ರೀ ಕೆ.ಬಿ.ಶಾಣಪ್ಪ (ಮುಂದು)- ಇನ್ನೂ ನೀರು ರೈತರ ಜಮೀನಿಗೆ ಬಂದಿಲ್ಲ. ಸುಮ್ಮನೆ ಅದು ಕಣ್ಣಿಗೆ ಕಾಣಿಸುತ್ತಿದೆ ಅಷ್ಟೇ. ಗಂಡೂರಿ ನಾಲಾ, ನಾರಂಜಾ ಇವೆಲ್ಲವು ಹೈದಾರ್‌ಬಾದ್-ಕರ್ನಾಟಕ ಪ್ರದೇಶದಲ್ಲಿ ಇವೆ. ಹಳೇ ಮೈಸೂರಿನ ಭಾಗದದಲ್ಲಿ ಯಾವುದೇ ನೀರಾವರಿ ಯೋಜನೆಗಳು ಬಾಕಿ ಉಳಿದಿಲ್ಲ. ಎಲ್ಲಾ ಯೋಜನೆಗಳನ್ನು ಮೈಸೂರು ಮಹಾರಾಜರ ಕಾಲದಲ್ಲೇ ಮುಗಿಸಿಕೊಂಡು ಬಿಟ್ಟಿದ್ದೀರಿ. ನಮ್ಮಲ್ಲಿ ಸಪ್ತನದಿಗಳಿವೆ.

ಶ್ರೀ ವಿ.ಸೋಮಣ್ಣ(ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಉತ್ತರ ಕರ್ನಾಟಕದ ಭಾಗದಲ್ಲಿರುವಂತಹ ಜನರ ಅದೃಷ್ಟ ಹೇಗೆ ಇದೆ ಎಂದರೆ, ಎಲ್ಲಾ ಜೀವನದಿಗಳು ಸಹ ಈ ಭಾಗದಲ್ಲಿವೆ. ನಮ್ಮ ಭಾಗದಲ್ಲಿ ಕಾವೇರಿ ಒಂದೇ ಒಂದು ಮಾತ್ರ ಇದೆ. ಕಬಿನಿ ಸಹ ಇದೆ. ಅದರಲ್ಲಿ 20% ನಮಗೆ, 65 ರಿಂದ 75% ತಮಿಳುನಾಡು ರಾಜ್ಯಕ್ಕೆ ಉಳಿದ 10 ರಿಂದ 15% ನೀರು ಸಮುದ್ರಕ್ಕೆ ಹೋಗುತ್ತದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೇರಳಕ್ಕೆ ಬಹಳ ಕಡಿಮೆ ಪ್ರಮಾಣದ ನೀರು ಹೋಗುತ್ತದೆ. ಕಬಿನಿ ಮತ್ತೆ ಕಾವೇರಿಯನ್ನು ಹೊರತು ಪಡಿಸಿದರೆ, ಪ್ರಾಯಶಃ ಇದು ಯಾವ ಸೃಷ್ಟಿಕರ್ತನ ದಯೆಯೋ ಅದು ನನಗೆ ಗೊತ್ತಿಲ್ಲ, ಇದಕ್ಕೆ ಇನ್ನು ಹೆಚ್ಚಿನ ಆದ್ಯತೆ ಕೊಟ್ಟಿದ್ದರೆ, ಕರ್ನಾಟಕ ರಾಜ್ಯದಲ್ಲಿ ಉತ್ತರ ಕರ್ನಾಟಕ ಸಂಪದ್ಭರಿತವಾಗುತ್ತಿತ್ತು. ಅದರಲ್ಲಿ ಎರಡು ಮಾತಿಲ್ಲ. ಆದರೆ, ನಮಗೆ ಆ ಭಾಗದಲ್ಲಿ ಅಂತಹ ಯಾವುದೇ ಅವಕಾಶ ಇಲ್ಲ. ಕೋಲಾರ, ಚಾಮರಾಜನಗರದಿಂದ ಮಂಡ್ಯ ಜಿಲ್ಲೆಯಲ್ಲಿಯೂ ಸಹ ತಮಗೆ ಗೊತ್ತಿರುವಂತೆ ಅಲ್ಲಿಯೂ ಸಹ ಪೂರ್ತಿ 100% ನೀರಾವರ ವ್ಯವಸ್ಥೆ ಇವತ್ತಿಗೂ ಸಹ ಇಲ್ಲ. ನಾಗಮಂಗಲಕ್ಕಿಂತ ಹೆಚ್ಚಾಗಿ ಮದ್ದೂರಿನಲ್ಲಿ ಸಹ ಇವತ್ತು 60% ಇದೆ. ಹಾಗೆಯೇ ಮಳವಳ್ಳಿಯಲ್ಲಿ 70% ಇದೆ. ಒಂದಂತೂ ಸತ್ಯ. ನಾವು ಇದು ಆಗಬಾರದೆಂದು ಹೇಳುವುದಿಲ್ಲ. ಆ ಭಾಗದಲ್ಲಿ ನಂಜುಂಡಪ್ಪನವರ ವರದಿಯನ್ನು ಗಣನೆಗೆ ನೀವು ತೆಗೆದುಕೊಂಡರೆ, ಇಲ್ಲಿ ಒಂದಲ್ಲ ಒಂದು ರೂಪದಲ್ಲಿ ದಾರಿಗೆ ತರಬಹುದು. ಆದರೆ, ಅಲ್ಲಿ ಶಾಶ್ವತವಾಗಿ ನಾವು ಜಾರಿಗೆ ತರುವಂತಹ ಯೋಜನೆಗಳೆ ನಮಗೆ ಇಲ್ಲ. ಆದ್ದರಿಂದ ಇದನ್ನು ಮಾಡುವುದಕ್ಕೆ ಆದ್ಯತೆ ಕೊಡಬೇಕು. ಆ ಭಾಗದಲ್ಲಿ ಎಲ್ಲ ನೀರಾವರಿ ಯೋಜನೆಗಳನ್ನು ಮುಗಿಸಿಕೊಂಡಿದ್ದಾರೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಆದರೆ, ಅಲ್ಲಿ ನಮಗೆ ಏನೇನೂ ಇಲ್ಲ.

ಶ್ರೀ ಕೆ.ಬಿ.ಶಾಣಪ್ಪ:– ಮಾನ್ಯ ಸಭಾಪತಿಯವರೇ, ನಮ್ಮ ಭಾಗದಲ್ಲಿ ನದಿಗಳಿವೆ. ತಾವು ತಿಳಿದುಕೊಂಡಿರುವಂತೆ ಕೃಷ್ಣ ನದಿ ನೀರು ನಮ್ಮ ಭಾಗಕ್ಕೆ ಮಾತ್ರ ಬರುತ್ತಿಲ್ಲ, ನಾವು ಆಂಧ್ರಪ್ರದೇಶಕ್ಕೆ ಕೊಡುತ್ತಿದ್ದೇವೆ. ಆಂಧ್ರಪ್ರದೇಶದಿಂದ 4 ಟಿಎಂಸಿ ನೀರು ತಮಿಳುನಾಡಿಗೆ ಹೋಗುತ್ತಿದೆ. ಈ ಯೋಜನೆಗಳು ಏಕೆ ಮುಗಿಯುತ್ತಿಲ್ಲ. ನಮ್ಮ ಭಾಗದಲ್ಲಿನ ಸನ್ಮಾನ್ಯ ವಿರೇಂದ್ರಪಾಟೀಲ್ ರವರು 2 ಬಾರಿ ಮುಖ್ಯಮಂತ್ರಿಯಾದರು, ಮಾನ್ಯ ದಿವಂಗತ ಧರ್ಮಸಿಂಗ್‌ರವರು 20 ತಿಂಗಳು ಮುಖ್ಯಮಂತ್ರಿಯಾಗಿದ್ದರು ಅವರು ಸಹ ನಮ್ಮ ಭಾಗದವರು. ಉತ್ತರ ಕರ್ನಾಟಕ ಭಾಗದ ಮಾನ್ಯ ದಿವಂಗತ ರಾಮಕೃಷ್ಣಹೆಗಡೆಯವರು ಮುಖ್ಯ ಮಂತ್ರಿಗಳಾದರು, ಮಾನ್ಯ ದಿವಂಗತ ಎಸ್.ಆರ್.ಬೊಮ್ಮಯಿಯವರು ಮುಖ್ಯಮಂತ್ರಿಯವರಾಗಿದ್ದರು. ಮಾನ್ಯ ಜಗದೀಶ ಶೆಟ್ಟರ್ ರವರು ಮುಖ್ಯಮಂತ್ರಿಯಾದರು. ನಮ್ಮದು 11 ತಿಂಗಳ ಕಾಲಾವಧಿ ಮಾತ್ರ. ಹಾಗಾಗಿ, ಅವರು 11 ತಿಂಗಳು ಕೆಲಸ ಮಾಡಿದರು. ಅದನ್ನು ನಾವು ಒಪ್ಪಿಕೊಳ್ಳುವುದು ಇಲ್ಲ. ಅವರು ಏತಕ್ಕೆ, ಅಧಿಕಾರಕ್ಕೆ ಬಂದಂತೆ ಆಯಿತು ಅಷ್ಟೇ.. ಅವರನ್ನು ನಾವು ಲೆಕ್ಕದಿಂದ ಬಿಟ್ಟಂತೆಯೆ. Just to satisfy them, ನಾವು ಮಾಜಿ ಮುಖ್ಯ ಮಂತ್ರಿಗಳೆಂದು ಅನಿಸಿಕೊಳ್ಳುವುದಕ್ಕೆ ಬಂದರು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):– ಮಾನ್ಯ ಸದಸ್ಯರೇ, ಆ ರೀತಿ ಕೆಲಸಕ್ಕೆ ಬಾರದವರನ್ನು ಏಕೆ ಮುಖ್ಯ ಮಂತ್ರಿಗಳನ್ನಾಗಿ ಮಾಡಿದ್ದೀರಿ?

ಶ್ರೀ ಕೆ.ಬಿ.ಶಾಣಪ್ಪ :– ಮಾನ್ಯ ಸಭಾಪತಿಯವರೇ, I am sorry, I can't accept their statement. ಮಾನ್ಯ ಯತ್ನಾಳ್‌ರವರು ಗಟ್ಟಿಯಾಗಿದ್ದಾರೆ. ಅವರು ಏನು ಮಾತನಾಡಿದರೂ ಅರಗಿಸಿಕೊಳ್ಳುತ್ತಾರೆ. ಅವರಿಗೆ ಹೇಳುವವರಿಲ್ಲ, ಕೇಳುವವರಿಲ್ಲ. ಅವರು ನಮಗೆ ನಾವೇ ರಾಜ. ನಮಗೆ ನಾವೇ ಪ್ರಧಾನಿ ಎಂಬುವಂತಿದ್ದಾರೆ. .

(ಗೊಂದಲ)

ಶ್ರೀ ಎಸ್.ವ್ಹಿ.ಸಂಕನೂರ(ಪದವೀಧರರ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಮಾನ್ಯ ಯತ್ನಾಳ್‌ರವರು ಯಾವ ಆಧಾರದ ಮೇಲೆ ಅವರನ್ನು ಕೆಲಸಕ್ಕೆ ಬಾರದವರದು ಎಂದು ಹೇಳುತ್ತಾರೆ. ಹಾಗಾದರೆ, ಅವರು ಏನು ಅಭಿವೃದ್ಧಿ ಕೆಲಸ ಮಾಡಿಲ್ಲವೇ? ಮಾನ್ಯ ಸದಸ್ಯರು ಕೇಂದ್ರದಲ್ಲಿ ಮಂತ್ರಿಯಾಗಿದ್ದವರು ಅವರಿಗೂ ಸಹ ಜವಬ್ದಾರಿ ಇದೆ. ಅವರು ಹಿರಿಯ ಸದಸ್ಯರಾಗಿದ್ದೂ, ಈ ರೀತಿ ಮಾತನಾಡುವುದು ಸರಿಯಲ್ಲ.

(ಗೊಂದಲ)

ಸಭಾಪತಿಯವರು:– ಮಾನ್ಯ ಸಂಕನೂರ ರವರೇ, ದಯವಿಟ್ಟು ತಾವು ಕುಳಿತುಕೊಳ್ಳಿ.

ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್):– ಮಾನ್ಯ ಸಭಾಪತಿಯವರೇ, ಅವರು ಅವರ ಮನೆ ತುಂಬಿಸಿಕೊಳ್ಳುವುದನ್ನು ಬಿಟ್ಟು ಬೇರೆ ಏನೂ ಮಾಡಿಲ್ಲ.

ಶ್ರೀ ಕೆ.ಬಿ.ಶಾಣಪ್ಪ:– ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಮಾತನ್ನು ನಾನು ಒಪ್ಪುವುದಿಲ್ಲ. ಅವರಿಗೆ ಸಾಕಷ್ಟು ಸಮಯ ಸಿಕ್ಕಿಲ್ಲ. 45–46 ವರ್ಷಗಳ ಕಾಲ ಕ್ರಾಂಗೆಸ್ ಪಕ್ಷದವರಿಗೆ ಸಯಮ ಸಿಕ್ಕರೂ ಅವರು ಈ ಭಾಗಕ್ಕೆ ಏನು ಮಾಡುವುದಕ್ಕೆ ಆಗಲಿಲ್ಲ. ಇವರು ಮುಖ್ಯ ಮಂತ್ರಿಗಳಾಗಿದ್ದು, 11 ತಿಂಗಳು ಮಾತ್ರ ಅಷ್ಟು ಕಡಿಮೆ ಅವಧಿಯಲ್ಲಿ ಅಧಿಕಾರ ಮಾಡಿ ಈ ಭಾಗಕ್ಕೆ ಏನು ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂಬ ಹಿನ್ನೆಲೆಯಲ್ಲಿ ನಾನು ಹೇಳದೆ ಹೊರತು, they were not capable ಎಂದಲ್ಲ. They were capable. Unfortunately, they were in the position for a very short period. Time was not sufficient. ಮಾನ್ಯ ಯಡಿಯೂರಪ್ಪನವರು ಮಾಡಿದರು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Sri RAMACHANDRA GOWDA:- Time was not sufficient.

Sri H.K.PATIL:- Anyway you satisfied Sri Shankanur and Sri Yatnal.

ಶ್ರೀ ಕೆ.ಬಿ.ಶಾಣಪ್ಪ:– ಮಾನ್ಯ ಸಭಾಪತಿಯವರೇ, ಅವರು ನನ್ನ ಭಾವನೆಗಳನ್ನು ಯಾವ ರೀತಿ ಅರ್ಥಮಾಡಿಕೊಳ್ಳುತ್ತಾರೆ ಎಂಬುದೇ ನನಗೆ ಗೊತ್ತಾಗುತ್ತಿಲ್ಲ. ನಮ್ಮ ಭಾಗದ ಅಭಿವೃದ್ಧಿಗೆ ಮಾನ್ಯ ಸಚಿವರು ಅಧ್ಯಕ್ಷರಾಗಿದ್ದಾರೆ. ಕಾನೂನಿನಲ್ಲಿ ರೂಲ್ಸ್‌ಗಳನ್ನು ಇನ್ನೂ ಸರಿಯಾಗಿ ಮಾಡಿಲ್ಲ. ದಯಮಾಡಿ ಅದನ್ನು review ಮಾಡಬೇಕು. ಎಷ್ಟು employment ಅನ್ನು ಇಲ್ಲಿಯವರೆಗೆ ಕೊಟ್ಟಿದ್ದೇವೆ ಎಂಬುದನ್ನು ತಾವು ನೋಡಬೇಕು. Hyderabad-Karnataka Region Development Board (HKRDB) ರಚನೆ ಮಾಡಿದ್ದೀರಿ. ಡಾ॥ನಂಜುಂಡಪ್ಪ ವರದಿ ಪ್ರಕಾರ, HKRDB ಆಯಿತು, ಎಲ್ಲ ಆಯಿತು. ಆದರೆ, ಆ ಭಾಗ ಎಷ್ಟರ ಮಟ್ಟಿಗೆ ಅಭಿವೃದ್ಧಿ ಆಗಿದೆ? ಎಷ್ಟು ಶಾಲೆಗಳನ್ನು ತೆರೆದ್ದೀರಿ? ಒಂದು ವರ್ಷಕ್ಕೆ ಎಷ್ಟು ವಿದ್ಯಾರ್ಥಿಗಳು ಹೊರಗಡೆ ಬರುತ್ತಾರೆ, ತಾವು ಅವರಿಗೆ ಎಲ್ಲಿ ಕೆಲಸ ಕೊಟ್ಟಿದ್ದೀರಿ. I.T.I. (Industrial Training Institute) ವಿದ್ಯಾರ್ಥಿಗಳು ಹೊರಗಡೆ ಬಂದ ಮೇಲೆ ಅವರು ಎಲ್ಲಿಗೆ ಹೋಗಬೇಕು? Is there any planning for it by the Government? Ultimately, the Government which has the supreme power, has to see to it that everyone is satisfied. ಒಬ್ಬ ಇಂಜಿನೀಯರ್ ಹೊರಗಡೆ ಬರುತ್ತಾನೆಂದರೆ, ಅವರಿಗೆ ಏನು ಸೌಲಭ್ಯಗಳನ್ನು ಇಲ್ಲಿ ಕೊಡಬೇಕು, ಎಷ್ಟು ಫ್ಯಾಕ್ಟರಿಗಳನ್ನು ಕಟ್ಟಬೇಕು. ಒಬ್ಬ ವಿದ್ಯಾರ್ಥಿ ವೈದ್ಯಕೀಯ ವ್ಯಾಸಂಗ ಮುಗಿಸಿ ಹೊರಗಡೆ ಬರುತ್ತಾನೆ ಎಂದರೆ, ಅವರಿಗೆ ಉದ್ಯೋಗಾವಕಾಶ ಕಲ್ಪಿಸಿಕೊಟ್ಟು ಅವರ ಸೇವೆಯನ್ನು ಪಡೆದುಕೊಳ್ಳಲು ಎಷ್ಟು ಆಸ್ಪತ್ರೆಗಳನ್ನು ಕಟ್ಟಬೇಕು ಎನ್ನುವ ಬಗ್ಗೆ ಸರ್ಕಾರ ವಿಚಾರ ಮಾಡಿ ಕೆಲಸ ಮಾಡಬೇಕಾಗುತ್ತದೆ.

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):– ಮಾನ್ಯ ಸಭಾಪತಿಯವರೇ ನಮ್ಮ ರಾಜ್ಯದಲ್ಲಿ ಸುಮಾರು 6,800 ಜನ M.Tech., ಪದವೀಧರರು unemployed ಇದ್ದಾರೆ.

ಶ್ರೀ ಕೆ.ಬಿ.ಶಾಣಪ್ಪ:– ಮಾನ್ಯ ಸಭಾಪತಿಯವರೇ, ಇವತ್ತು ಇಷ್ಟು educated community ಇದೆ. ನಮ್ಮ ಭಾಗಗಳಲ್ಲಿ ಎಷ್ಟು ಇಂಜಿನೀಯರಿಂಗ್ ಕಾಲೇಜುಗಳು ಇವೆ? ಗುಲ್ಬರ್ಗಾ ಮತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಯಚೂರಿಗೆ ಒಂದು Indian Institute of Technology (IIT) ಕಾಲೇಜು ಬಂತು. ಇದನ್ನು ನಾನು ನಮ್ಮ ಮಂದಿಗೆ ಹೇಳಬೇಕಾಗುತ್ತದೆ. IIT ಕಾಲೇಜ್‌ನ್ನು ರಾಯಚೂರಿನಲ್ಲಿ ಪ್ರಾರಂಭ ಮಾಡಬೇಕೆಂದು ಇತ್ತು. ಆದರೆ, ಏಕೆ ಇದನ್ನು ರಾಯಚೂರಿನಲ್ಲಿ ಪ್ರಾರಂಭಿಸಲಿಲ್ಲ? ನಾನು ಆ ಬಗ್ಗೆ ನಮ್ಮವರಿಗೂ ಕೇಳುತ್ತೇನೆ., Why everyone supported for commencing IIT in Dharwad? ಹುಬ್ಬಳ್ಳಿಯಲ್ಲಿ ಮಾತ್ರ ಪ್ರಾರಂಭ ಮಾಡಬೇಕೆ? ಏಕೆ ನಿಮಗೆ ಹೈದರಾಬಾದ್-ಕರ್ನಾಟಕ ಅಭಿವೃದ್ಧಿಯಾಗಬೇಕೆಂದು ಕಾಳಜಿ ಇಲ್ಲವೇ? ರಾಯಚೂರಿಗೆ ಒಂದು IIT ಕಾಲೇಜು ಹೋಗಲಿ ಎಂದು ದೊಡ್ಡ ಮನಸ್ಸು ಮಾಡಲಿಲ್ಲ? ಈ ವಿಚಾರದಲ್ಲಿ ನಾವು ಹೋರಾಟ ಮಾಡಿದ್ದೇವೆ. ಮತ್ತೊಬ್ಬರ ಮೇಲೆ ಏಕೆ ಬೆರಳು ಮಾಡಿ ತೋರಿಸುತ್ತೀರಿ? ನಮ್ಮವರು ರಸ್ತೆಗೆ ಇಳಿದಿಲ್ಲ. ಹುಬ್ಬಳ್ಳಿಗೆ ಬೇಕೆಂದು ಅವರು ಮಾಡಿಕೊಂಡರು. ಏಕೆಂದರೆ, ನಮ್ಮಲ್ಲಿ ನಾಯಕತ್ವ ಇಲ್ಲ. We don't have leadership in Hyderabad-Karnataka region. ಪಾಪ, ಇದ್ದವಂತಹವರೂ ತೀರಿಕೊಂಡರು. ಈಗ ಒಬ್ಬರು ಇದ್ದಾರೆ, ಅವರು ದೆಹಲಿಯಲ್ಲಿ ಇದ್ದಾರೆ. ಉಳಿದವರಿಗೆ ಯಾವುದೇ ಪಕ್ಷದಿಂದ ನಾಯಕತ್ವ ಬಂದಿಲ್ಲ. ನಾವು ನಮ್ಮ ಪರಿಸ್ಥಿತಿಯೇ ಬೇರೆ. ನಮಗೆ ಒಂದೊಂದು ಬಾರಿ ನಾವು ಎಲ್ಲಿದ್ದೇವೆಂದು ನಮಗೆ ಗೊತ್ತಾವುದಿಲ್ಲ. ಏಕೆಂದರೆ, ಅಲ್ಲಿ ಕೇಳುವವರೇ ಇಲ್ಲ. They must atleast ask our suggestion as to what are the Industries to be commenced in Hyderabad-Karnataka region. ಇವರ ಸಲುವಾಗಿ ಎಷ್ಟು ಮಂದಿ Technicians ಆಗಿದ್ದಾರೆ? ಈ ವರ್ಷ ಎಷ್ಟು ಕಾಲೇಜುಗಳನ್ನು ಕಟ್ಟಬೇಕು? ಎಷ್ಟು ಕೈಗಾರಿಕೆಗಳನ್ನು ಕಟ್ಟಬೇಕು? ಎ.ಸಿ.ಸಿ. ಸಿಮೆಂಟ್ ಫ್ಯಾಕ್ಟರಿ, ನಂತರ Birla ಸಿಮೆಂಟ್ ಫ್ಯಾಕ್ಟರಿ, UltraTech ಸಿಮೆಂಟ್ ಫ್ಯಾಕ್ಟರಿ, ರಾಜಶ್ರೀ ಸಿಮೆಂಟ್ ಫ್ಯಾಕ್ಟರಿ ಪ್ರಾರಂಭವಾದವು. ನಮ್ಮಲ್ಲಿ ಸುಣ್ಣದ ಕಲ್ಲು ಇದೆ. ಸಿಮೆಂಟ್ ಫ್ಯಾಕ್ಟರಿ ತಂದು ಕೋಟ್ಯಾಂತರ ರೂಪಾಯಿಗಳನ್ನು ತೆಗೆದುಕೊಂಡು ಅದನ್ನು ರಾಜಸ್ಥಾನಕ್ಕೆ ಕಳುಹಿಸಿಬಿಟ್ಟಿರಿ. What is left to Hyderabad-Karnataka region? Iron Ore ತೆಗೆದುಕೊಂಡಿರಿ, ಗೋವಾಕ್ಕೆ ಹೋದರಿ, ಅದನ್ನು ಇಡೀ ಚೀನಾಕ್ಕೆ ಕಳುಹಿಸಿದಿರಿ, ನಮ್ಮ ಬಳ್ಳಾರಿ ಜಿಲ್ಲೆಗೆ ಏನು ಕೊಟ್ಟಿರಿ? ನಮ್ಮಲ್ಲಿ ಚಿನ್ನ ಇದೆ. ನಮ್ಮ ಹೈದರಾಬಾದ್ ಕರ್ನಾಟಕದ ಭಾಗದಲ್ಲಿ ಏನಿಲ್ಲ ಹೇಳಿ? Hutti Gold Mines ನಲ್ಲಿ gold ಇದೆ. ಇಡೀ ಪ್ರಪಂಚದಲ್ಲೇ highest quality of gold is available in Hutti Gold Mines. What is the standard of Hutti? 1960ರಲ್ಲಿ Union ಸರ್ಕಾರ ಇರುವಾಗ ನಾನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮತ್ತು ಪೈ ಹೂಡ ಮತ್ತು ನಾರಾಯಣಗೌಡ ಇದ್ದೆವು I was hardly 20 years old at that time. ಆಗ ಯಾವ ರೀತಿ ಹಟ್ಟಿ ಇತ್ತೋ, ಇವತ್ತಿಗೂ ಅದೇ ರೀತಿ ಇದೆ. ನೀವು ಬಂಗಾರ ತೆಗೆದುಕೊಂಡಿರಿ. ಆದರೆ ಹಟ್ಟಿಯಲ್ಲಿ ಏನು change ಮಾಡಿದ್ದೀರಿ? ಸಿಮೆಂಟ್ ತೆಗೆದುಕೊಂಡು ಶಹಾಬಾದ್‌ನಲ್ಲಿ ಏನು ಮಾಡಿದ್ದೀರಿ? ವಾಡಿಯಲ್ಲಿ ಏನು ಮಾಡಿದ್ದೀರಿ? ಸಿಮೆಂಟ್ ಕಂಪನಿಗಳಿರುವ ಸೇಡಂ ತನಕ ಏನು ಮಾಡಿದ್ದೀರಿ? Why have you not put a Clause as to 20% to 30% of your earning from that region to be spent towards improvement of villages in that region. ಹಳ್ಳಿಗಳಿಗೆ ರಸ್ತೆಗಳನ್ನು ಮಾಡಿಲ್ಲ. ಯಾವುದೇ Clause ಆಗಲಿಲ್ಲ. ಅವರ ಸಿಮೆಂಟ್ ಲಾರಿಗಳ ಸಂಚಾರದಿಂದ ನಮ್ಮ ರಸ್ತೆಗಳು ಒಂದೂ ಉಳಿಯಲಿಲ್ಲ. ಮೊದಲೇ ನಮ್ಮದು black soil. Black soil ಇರುವ ಪ್ರದೇಶದಲ್ಲಿ ರಸ್ತೆ ತಯಾರು ಮಾಡಬೇಕಾದರೆ, ಒಂದು ಕೀಲೋಮಿಟರ್ ರಸ್ತೆ ನಿರ್ಮಾಣ ಮಾಡಲು 20 ಲಕ್ಷ ರೂಪಾಯಿಗಳು ಬೇಕಾಗುತ್ತದೆ. ನಿಮ್ಮ ಕಡೆ ಒಂದು ಕೀಲೋಮಿಟರ್ ರಸ್ತೆ ತಯಾರು ಮಾಡಲು ಒಂದು ಲಕ್ಷ ರೂಪಾಯಿಗಳಷ್ಟು ವೆಚ್ಚ ಆಗುತ್ತದೆ. ಇಲ್ಲಿನ ಮಣ್ಣು sink ಆಗುತ್ತದೆ. ಇದರ ಬಗ್ಗೆ ಯಾರೇನೂ ಕಾಳಜಿ ಮಾಡಲಿಲ್ಲ. ಈಗ HKRDB ಬಂದ ನಂತರ ಕೆಲವು ರಸ್ತೆಗಳು ಅದರಲ್ಲೂ ಮಾನ್ಯ ನಿತಿನ್ ಗಡ್ಕರಿ ಯವರು ಬಂದ ನಂತರ ಕೆಲವು National Highway ರಸ್ತೆಗಳು ಆಗುತ್ತಿವೆ. ಗುಲ್ಬರ್ಗಾಗೆ National Highway ನೇ ಇರಲಿಲ್ಲ. ಈಗ ಒಂದು National Highway-150 ಬಂದಿದೆ. ಮತ್ತೆ Civilization ಹೇಗೆ improve ಆಗಬೇಕು. 1990 ರಲ್ಲಿ Airport ಆಯಿತು ಅದಕ್ಕೂ ಅಡಿಕಲ್ಲು ಇಟ್ಟರು Railway Line ಆಯಿತು. ಮಾನ್ಯ ಪ್ರಧಾನ ಮಂತ್ರಿಯವರು ಬಂದ ನಂತರ ಬೀದರ್ ನಿಂದ ಗುಲ್ಬರ್ಗಾದವರೆ Railway Line ಅನ್ನು ಪ್ರಾರಂಭ ಮಾಡಿದರು. ಇವತ್ತಿಗೆ ಎಷ್ಟು ವರ್ಷ ಆಯಿತು? Airport ತಯಾರಾಯಿತು. Parliament ತನಕ ಹೋಗಿ ಮಾತನಾಡುತ್ತಿದ್ದೇವೆ. ಆದರೆ, ಅದು ಇನ್ನು ಮುಗಿಯುತ್ತಿಲ್ಲ. ಇಲ್ಲಿ ಬೆಳೆಯುವಂತಹ ತೊಗರಿಯನ್ನು ಇಡೀ ರಾಜ್ಯದಲ್ಲಿ ಎಲ್ಲೂ ಬೆಳೆಯುವುದಿಲ್ಲ. ಇಡೀ ರಾಜ್ಯದ ಒಟ್ಟು ಉತ್ಪಾದನೆಯಲ್ಲಿ 35% ತೊಗರಿಯನ್ನು ನಾವು ಬೆಳೆಯುತ್ತೇವೆ. ಅದರಲ್ಲಿ by-products ಎಷ್ಟು ಆಗುತ್ತದೆ? Railway tariff ನಿಂದ ಎಷ್ಟು ಹಣ ಗಳಿಸುತ್ತೀರಿ? ಸಿಮೆಂಟ್ dispatch ನಿಂದ ಎಷ್ಟು ಹಣ ಗಳಿಸಿದ್ದೀರಿ? ಇದರಿಂದ ಬಂದ ಹಣವನ್ನು ನಮ್ಮ ಭಾಗಕ್ಕಾಗಿ ಏನು ಖರ್ಚು ಮಾಡಿದ್ದೀರಿ? ನಮ್ಮ natural resources ಎಲ್ಲವನ್ನು ತೆಗೆದುಕೊಂಡು ಹೋಗುತ್ತೀರಿ. ಆದರೆ, ನಮ್ಮ ಹೈದರಾಬಾದ್ ಕರ್ನಾಟಕಕ್ಕೆ

ಏನು ಕೊಟ್ಟಿದ್ದೀರಿ? Is there any answer for it by the State Government or by the people who are representing us in the Union Government?

(ಮುಂದು...)

(1138)21.11.2017-6.30-ಎಂವಿ-ಕೆಎಸ್

ಶ್ರೀ ಕೆ.ಬಿ.ಶಾಣಪ್ಪ (ಮುಂದು...):-

ನೌಕರಿ ಇಲ್ಲದೇ ಕೆಲವರು ಫ್ಯಾಕ್ಟರಿಗಳನ್ನು ಬಿಟ್ಟಿದ್ದಾರೆ. ಒಂದು ಕಾಲದಲ್ಲಿ ಎಸಿಸಿ ಸಿಮೆಂಟ್ ಫ್ಯಾಕ್ಟರಿ ಇತ್ತು. ಅಲ್ಲಿ ನಾನು ನೌಕರಿಯಲ್ಲಿದ್ದೆ. ABL factory ಇತ್ತು. ಅಲ್ಲಿಂದ ಬಂದಂತಹ ಹಣ ಇಡೀ ಗುಲ್ಬರ್ಗಕ್ಕೆ ಖರ್ಚಾಗುತ್ತಿತ್ತು. Now these factories are closed. ABL factory close down ಆಯಿತು. MSK mill close down ಆಯಿತು. ಹಾಗಾದರೆ ಹಣ ಎಲ್ಲಿಂದ ಬರಬೇಕು? Educational institutionಗೆ ಹುಡುಗರು ಎಷ್ಟು ಜನ ಬರುತ್ತಾರೆ. ಆಂಧ್ರಪ್ರದೇಶ ಮತ್ತು ಉತ್ತರ ಪ್ರದೇಶದಿಂದ ಬಂದವರು ಎಷ್ಟು ಹಣವನ್ನು ಖರ್ಚು ಮಾಡುತ್ತಾರೆ. ನಾನು ನಿಮಗೆ ಹೇಳುತ್ತಿದ್ದೇನೆ, ಅಲ್ಲಿನ ಜನರು ರೋಗದಿಂದ ಸಾಯುತ್ತಿದ್ದಾರೆ, various diseases have spread over in those parts. People are migrating from Yadgir to Bengaluru. ಎರಡರಿಂದ ಐದು ಲಕ್ಷ ಯಾದಗಿರಿ ಜನ ಇಲ್ಲಿಗೆ ಬಂದು ನೆಲೆಸಿದ್ದಾರೆ. Are they not the citizen of Hyderabad-Karnataka? What is the contribution by the Government to those area people? The migration of those people has to be stopped. ಅಲ್ಲಿ ಒಂದು ಕೈಗಾರಿಕೆಯನ್ನು ತೆರೆದಿದ್ದೀರಾ? ದೊಡ್ಡ ದೊಡ್ಡ factory ಗಳನ್ನು ತೆರೆದಿದ್ದೀರಾ? ಅಲ್ಲಿ ಇದ್ದಂತಹ ಮಕ್ಕಳಿಗೆ ನೌಕರಿ ಕೊಟ್ಟಿದ್ದೀರಾ? ಅಲ್ಲಿ ಓದಿದಂತಹ ಪ್ರತಿಯೊಬ್ಬರು ಬೆಂಗಳೂರಿಗೆ ಬಂದು ಸೇರುತ್ತಿದ್ದಾರೆ. ಈಗ ನನ್ನ ಮೊಮ್ಮಕ್ಕಳು ಸಹ ಬೆಂಗಳೂರಿಗೆ ಬಂದು ಸೇರುತ್ತಿದ್ದಾರೆ. ಹಾಗಾದರೆ ನಮ್ಮ ಗತಿ ಏನು? ಇದಕ್ಕೆ ಸರ್ಕಾರ ಒಂದು ಯೋಜನೆ ಮಾಡಬೇಕು. ಬೀದರ್ ಮತ್ತು ಕೊಪ್ಪಳ ಇವುಗಳೆಲ್ಲಾ ಬಹಳ ಹಿಂದುಳಿದ ಜಿಲ್ಲೆಗಳು ಎನ್ನುತ್ತೇವೆ. ಈ ಹಿಂದುಳಿದ ಜಿಲ್ಲೆಗಳಲ್ಲಿ ಬೇಕಾದಂತಹ ಸಂಪನ್ಮೂಲಗಳಿವೆ. ಅದರಿಂದ ಬಂದಂತಹ ಹಣವನ್ನು ನಮಗೆ ಖರ್ಚು ಮಾಡಿದರೆ ಸಾಕು, ನಾವುಗಳು ಬದುಕುತ್ತೇವೆ. ನಿಮ್ಮಲ್ಲಿ ಬರೀ ಅಡವಿ ಇದೆ. ಕುದುರೆಮುಖ ಇತ್ತು, ಪರಿಸರದ ಕಾರಣ ನೀಡಿ ಅದನ್ನು ನೀವು ಮುಚ್ಚಿದ್ದೀರಿ. ಹಾಗಾಗಿ ನಿಮಗೆ ಹೈದ್ರಾಬಾದ್ ಕರ್ನಾಟಕ ಜನರ ಬಡತನವನ್ನು

ಹೋಗಲಾಡಿಸುವುದಕ್ಕೆ ಆಗುವುದಿಲ್ಲ. ಹೋಗಲಾಡಿಸಬೇಕೆಂದರೆ the Government has to look into these issues and should have a blueprint. ಬೀದರ್ ಜಿಲ್ಲೆ ಶ್ರೀ ಬಸವಣ್ಣನವರು ಮೆರೆದಂತಹ ನಾಡು. ವಚನ ಸಾಹಿತ್ಯ ರಚನೆಯಾಗಿರುವುದು ಹೈದ್ರಾಬಾದ್ ಕರ್ನಾಟಕದಲ್ಲೆ. ರನ್ನ, ಪೊನ್ನ ಮತ್ತು ಪಂಪ ಇವರೆಲ್ಲರೂ ಹುಟ್ಟಿದ್ದು ಉತ್ತರ ಕರ್ನಾಟಕದಲ್ಲೆ. ನೀವು ಯಾರನ್ನಾದರೂ ತೆಗೆದುಕೊಳ್ಳಿ. ವಚನ ಸಾಹಿತ್ಯ ರಚನೆಯಾಗಿ, ಇಡೀ ಪ್ರಪಂಚಕ್ಕೆ ಶ್ರೀ ಬಸವಣ್ಣನಂತಹವರಿಂದ, ಶ್ರೀ ಕನಕದಾಸರವರಿಂದ ಅಪಾರ ಕೊಡುಗೆಯಾಗಿದೆ. ಎಲ್ಲರೂ ಸಹ ಉತ್ತರ ಕರ್ನಾಟಕದಿಂದ ಬಂದಿರುವುದು. ಸಾಹಿತಿಗಳು ಬಹಳ ಜನ ಬಂದಿದ್ದಾರೆ. ಎಲ್ಲರೂ ಬಂದು ಹೋದರು, ಆದರೆ ಏನಾಯಿತು? "ನೃಪತುಂಗ ಆಳಿದ ನಾಡು ಮಳಕೇಡು" ಎಂದು ಹೇಳುತ್ತೇವೆ, ವ್ಹಾವ್ಹಾ. ಈಗ ಆ ಮಳಕೇಡು ಏನಾಗಿದೆ ಎಂದು ನೀವು ನೋಡಿದ್ದೀರಾ? What the Archaeological Department is doing? Who is looking after the Archaeology....? ಆ ಪುರಾತತ್ವ ಇಲಾಖೆಯನ್ನು ಯಾರು ನೋಡುತ್ತಿದ್ದಾರೆ. ಅದು ಕವಿರಾಜ ಮಾರ್ಗವನ್ನು ನಿರ್ಮಾಣ ಮಾಡಿದಂತಹ ಊರು. ಹಾಳಾದ ಹಂಪೆ ಈಗ ಚೆನ್ನಾಗಿ ಆಗಿದೆ. ಆದರೆ ಬೀಳುತ್ತಿರುವ ಆ ಮಳಕೇಡ ಅನ್ನು ನೋಡುವುದಕ್ಕೂ ಸಹ ಆಗುವುದಿಲ್ಲ, ಇವುಗಳೆಲ್ಲಾ ಇತಿಹಾಸ. ಬಹಮನಿ ಕಾಲಕ್ಕೆ ತಯಾರಾದಂತಹ ಬೀದರ್ ಕೋಟೆಗಳು, ಎಂತಹ-ಎಂತಹ ಕಟ್ಟಡಗಳು, ಕೋಟೆಗಳು ಇವೆಲ್ಲವನ್ನೂ ನೋಡುವುದಕ್ಕೆ ಅದ್ಭುತ. ಅದಕ್ಕಾಗಿ ನಾನು ಹೇಳುವುದು ಇಷ್ಟೆ. ಸ್ವಾಮಿ, ಹೈದರಾಬಾದ್ ಕರ್ನಾಟಕದ ಬಗ್ಗೆ ಮಾತನಾಡುವುದಕ್ಕೆ ಇಲ್ಲಿ ಬೇಕಿಲ್ಲ, ನಾವು ಅಲ್ಲಿಯೂ ಸಹ ಮಾತನಾಡಬೇಕು. ನೀವು ಬೆಳಗಾವಿಯಲ್ಲೇ ಬಂದು ಮಾತನಾಡಬೇಕೆಂದು ಏನು ನಿಯಮವಿಲ್ಲ, because we are representing the entire State. ಇವತ್ತಿನ ದಿವಸ ವಿಶೇಷ ಚರ್ಚೆಯನ್ನು ಮಾಡುತ್ತಿದ್ದೇವೆ. ನಾವು ಈ ಭಾಗದಲ್ಲಿ ಮಾಡುತ್ತಿದ್ದೇವೆಂದು ಸರ್ಕಾರ ಒಂದು package ಅನ್ನು ಕೊಡಬೇಕು. ಡಾ.ಡಿ.ಎಂ.ನಂಜುಂಡಪ್ಪ ವರದಿಯ ಪ್ರಕಾರ ಇಷ್ಟು ದುಡ್ಡನ್ನು ಖರ್ಚು ಮಾಡಿದ್ದೇವೆ. ಇವರು ಬಂದ ನಂತರ ಎಲ್ಲರಿಗೂ ಸ್ವಲ್ಪ amount ಕೊಟ್ಟಿದ್ದಾರೆ. ಇವತ್ತು ಎಷ್ಟು backlog ಹುದ್ದೆಗಳು ಇವೆ, ನೀವು ಆ ತಗ್ಗಿನಲ್ಲಿ ಎಷ್ಟೇ ನೀರನ್ನು ತುಂಬಿದರೂ, ತುಂಬುವುದಕ್ಕೆ ಆಗುವುದಿಲ್ಲ, ಅಷ್ಟು backlog ಇದೆ. ವಿವಿಧ ಇಲಾಖೆಗಳಲ್ಲಿ ಹದಿನಾರು ಸಾವಿರಕ್ಕೂ ಹೆಚ್ಚು backlog ಹುದ್ದೆಗಳಿವೆ. ಮಾನ್ಯ ಸಚಿವರಾದ ಶ್ರೀ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಬಂದ ನಂತರ ಪರವಾಗಿಲ್ಲ. We have to appreciate him. ಆದಷ್ಟು ಮಟ್ಟಿಗೆ HKRDB

(Hyderabad Karnataka Region Development Board) ಹಣವನ್ನು ತೆಗೆದುಕೊಂಡು ಗುಲ್ಬರ್ಗದ ಸುತ್ತಮುತ್ತ ರಸ್ತೆಗಳನ್ನು ಮಾಡುತ್ತಿದ್ದಾರೆ. ಇಲ್ಲಿಗೆ ಆಸ್ಪತ್ರೆಗಳನ್ನು ತಂದಿದ್ದಾರೆ. ಯಾವುದನ್ನೂ ಮಾಡಿಲ್ಲವೆಂದು ನಾನು ಹೇಳುವುದಿಲ್ಲ. ಜಯದೇವ ಆಸ್ಪತ್ರೆಯನ್ನು ಬಹಳ ಸುಂದರವಾಗಿ ನಿರ್ಮಾಣ ಮಾಡಿದ್ದಾರೆ. ಇಂತಹ ಕೆಲಸಗಳನ್ನು ಮಾಡಿದರೆ ನಾವು ಮೆಚ್ಚುಗೆ ವ್ಯಕ್ತಪಡಿಸುತ್ತೇವೆ. ಉಳಿದಿರುವಂಥದ್ದಕ್ಕೆ ಏನು ಮಾಡುತ್ತೀರಾ ಮತ್ತು ನಿರುದ್ಯೋಗ ಸಮಸ್ಯೆಗೆ ಏನು ಮಾಡುತ್ತೀರಾ? ಹಣವೇ ಉತ್ಪನ ಆಗಲಿಲ್ಲವೆಂದರೆ ನಿರುದ್ಯೋಗ ಸಮಸ್ಯೆಯನ್ನು ಹೇಗೆ ಹೋಗಲಾಡಿಸುತ್ತೀರಾ? ಅದಕ್ಕೆ ನಿಮ್ಮ ಸರ್ಕಾರದಲ್ಲಿ ಏನಾದರೂ ಯೋಜನೆ ಇರಬೇಕು. ನಾನು ನಮ್ಮ ಪಕ್ಷದಲ್ಲಿ ಕೂಡ ಹೇಳಿದ್ದೇನೆ. ನೀವು ಕೇಂದ್ರದವರ ಮೇಲೆ ಒತ್ತಡ ಹೇರಿ. ಈ ಭಾಗದಿಂದ ಹೋದಂತಹ ಲೋಕಸಭಾ ಸದಸ್ಯರಾದ ಶ್ರೀ ಮಲ್ಲಿಕಾರ್ಜುನ ಖರ್ಗೆ ಸಾಹೇಬರು ಅಲ್ಲೇ ಇದ್ದಾರೆ. ನಮ್ಮ ಪಕ್ಷದ ಸಭೆಯಲ್ಲಿ ನಾವು ನಮ್ಮ ನಾಯಕರಿಗೆ ಹೇಳಿದ್ದೇವೆ, ನೀವು ಆ ಭಾಗಕ್ಕೆ ವಿಶೇಷ ಲಕ್ಷ್ಯವನ್ನು ಕೊಡಬೇಕು. ಅಲ್ಲಿನ ಬಡತನ ಹೋಗಬೇಕಾದರೆ Central units ಗಳು ಬೇಕು. HMT (Hindustan Machine Tools) ಮತ್ತು HAL (Hindustan Aeronautics Limited) ಅಂತಹವುಗಳು ಅಲ್ಲಿ ಬರಬೇಕು. ಈ ತರಹದ factory ಹಾಕಿದರೆ, ಇಂತಹ ದೊಡ್ಡ-ದೊಡ್ಡ ಫ್ಯಾಕ್ಟರಿಗಳನ್ನು ಹಾಕಿದರೆ, ಸಾವಿರಾರು ಮಂದಿ ಹುಡುಗರು ಯಾರು ನಿರುದ್ಯೋಗಿಗಳಾಗಿ ಕುಳಿತಿದ್ದಾರೆ, migrate ಆಗುವ ಬದಲಾಗಿ, ವಿದೇಶಕ್ಕೆ ಹೋಗುವ ಬದಲಾಗಿ, ಆ ಭಾಗದಲ್ಲಿ ಉಳಿದುಕೊಂಡು ಅವರು ನಮ್ಮಂತಹವರ ರಕ್ಷಣೆ ಮಾಡುವಂತಹ ಅವಕಾಶ ಅವರಿಗೆ ಸಿಗುತ್ತದೆ. ಅದಕ್ಕೆ ಸಂಬಂಧಪಟ್ಟಂತೆ ಈ ಚರ್ಚೆಯನ್ನು ಮಾಡುವುದಕ್ಕೆ ವಿಷಯವನ್ನು ಕೊಟ್ಟಿದ್ದೀರಿ. ಇದು ಸರಿಯಾಗಿ ಉಪಯೋಗ ಆಗಬೇಕು ಎಂದರೆ, ನೀವು ಮನಸ್ಸು ಬಿಚ್ಚಿ ಹೇಳಿ, a lot of money has to be released for the development of these areas. ನಾನು ರಾಜಕೀಯವನ್ನು ಮಾತನಾಡುವುದಕ್ಕೆ ಹೋಗುವುದಿಲ್ಲ. ಯಾವ ಸರ್ಕಾರ ಬಂದರೂ ನಮಗೆ ಏನೂ ಮಾಡಿಲ್ಲ. ಮನುಷ್ಯ '***Political Animal***' ಎಂದು '***Aristotle***' ಹೇಳಿದ್ದಾನೆ. Aristotle says, '***Man is a Political Animal***'. For one or other reason we enter into Politics. As a Politician, if we are not contributing for the development of these areas then, how far we are called as a Politician. ನನ್ನಿಂದ ಏನೂ ಉಪಯೋಗ ಆಗಲಿಲ್ಲವೆಂದರೆ, what is the use of it?

1960ರಿಂದ ರಾಜಕೀಯ ಮಾಡಿ, ಇಂದು ವಾಪಸ್ಸು ಹೋಗುತ್ತಿದ್ದೇನೆ. I am not happy. ನೀವು ಆ ಭಾಗಕ್ಕೆ ಏನು ಮಾಡಿದ್ದೀರಿ? ಅದಕ್ಕೆ ನೀವು ಇಲ್ಲಿ ಸಭೆಯನ್ನು ಕರೆದಿರುವುದು. In future Hyderabad-Karnataka change ಆಗಿದೆ ಎಂದು ತಿಳಿಯಬೇಕಾಗಿತ್ತು. ಅಲ್ಲಿಗೆ ಕೈಗಾರಿಕೆಗಳನ್ನು ತೆಗೆದುಕೊಂಡು ಬನ್ನಿ. ಅಲ್ಲಿರುವಂತಹ ಆಸ್ಪತ್ರೆಗಳನ್ನು ನವೀಕರಣ ಮಾಡಿ. ಅಲ್ಲಿರುವಂತಹ ರೋಗಿಗಳಿಗೆ ರೋಗ ಹರಡುವುದನ್ನು ತಡೆಯಿರಿ, ಇದು ಸರ್ಕಾರದ ಜವಾಬ್ದಾರಿ. ಈಗ ಗುಲ್ಬರ್ಗದಲ್ಲಿ ಸುಮಾರು ಒಂದು ವರ್ಷದಿಂದ ಬಹಳ ಮನೆಗಳ್ಳತನ ನಡೆಯುತ್ತಿವೆ. Poverty is not the part of this issue. Poverty ತೆಗೆಯುವುದಕ್ಕೆ ಸರ್ಕಾರದಿಂದ ಕೆಲವು ಯೋಜನೆಗಳು ಬೇಕಲ್ಲವೆ? Poverty ತೆಗೆಯುತ್ತೇನೆ ಎನ್ನುವುದಕ್ಕೆ, ಅದು ಆಗುವುದಿಲ್ಲ. Law and Order situation is worst in those areas. ಅಲ್ಲಿ ಇದ್ದಂತಹ ಮೂರು ಲಕ್ಷ ಮತ್ತು ಐದು ಲಕ್ಷ ರೂಪಾಯಿಗಳು ಇಂದು ನಿರಂತರವಾಗಿ ಕಳುವಾಗುತ್ತಿದೆ ಎಂದು ವೃತ್ತಪತ್ರಿಕೆಗಳಲ್ಲಿ ಪ್ರತಿದಿನ ಓದುತ್ತೇವೆ. ನಾನು ಈ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಬೇಕು ಅಂದುಕೊಂಡಿದ್ದೆ, ಆದರೆ ಮನಸ್ಸಾಗಲಿಲ್ಲ, ಒಂದು ಸಲ 32 ಕೋಟಿ, ಇದೇ ಸದನದಲ್ಲಿ ಕೇಳಿದಾಗ 35 ಕೋಟಿ ರೂಪಾಯಿಯ ಆಸ್ತಿ ಅಲ್ಲಿ ಕಳುವಾಗಿದೆ. ಆದರೆ, ಸಿಕ್ಕಿರುವುದು ಎಷ್ಟು ಬರೀ ಮೂರು ಕೋಟಿ. ಶ್ರೀ ಅಲೋಕ್ ಕುಮಾರ್ ಮತ್ತು ಶ್ರೀ ಶಶಿಕುಮಾರ್‌ನಂತಹವರು ಒಳ್ಳೆಯ ಪೋಲೀಸ್ ಅಧಿಕಾರಿಗಳು ಅಲ್ಲಿದ್ದಾರೆ. They are very good Officers. What is wrong with them? Why are they not tightening the Law and Order? Commissionerate Office ಮಾಡುತ್ತೇವೆಂದು ಹೇಳಿದ್ದರು, ಅದು ಆಯಿತೆ? ಇದೇ ಸದನದಲ್ಲಿ Commissionerate Office ಅನ್ನು ತೆರೆಯುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಹೇಳಿದ್ದರು. ಗುಲ್ಬರ್ಗದಲ್ಲಿ ರೌಡಿಗಳಿಂದ open ಆಗಿ murder ಆಗುತ್ತಿವೆ. They are openly challenging the civilized people during night time. Both during day and night, murders are taking place. ಇದಕ್ಕೆ ಸ್ವಲ್ಪ ಲಕ್ಷ್ಯ ನೀಡಿ. ಯಾವುದೇ ಸರ್ಕಾರ ಬಂದರೂ ಒಂದೇ ದಿನದಲ್ಲಿ ಎಲ್ಲವನ್ನೂ ಬದಲಾವಣೆ ಮಾಡುವುದಕ್ಕೆ ಆಗುವುದಿಲ್ಲ. ಆದರೆ, ತಮ್ಮ ಸರ್ಕಾರದ ಮೇಲೆ ನಮಗೆ ನಂಬಿಕೆ ಇತ್ತು. ಮಾನ್ಯ ಸದಸ್ಯರಾದ ಶ್ರೀ ಎಸ್.ಆರ್.ಪಾಟೀಲ್‌ರವರು ಹೇಳುತ್ತಾರೆ, ನಾವು ಹೇಳಿದಂತೆ ನಡೆಯುವವರು ಎಂದು. ಅವರ ಬಗ್ಗೆ ನಮಗೆ ತುಂಬಾ ಹೆಚ್ಚಿನ ಅಭಿಮಾನ. He is a man with certain

commitments. ನೀವು ಕೂಡ ಚೆನ್ನಾಗಿ ಮಾಡಿ. ಸರ್ಕಾರವೆಂದರೆ ನೀವು ಶಾಶ್ವತವಲ್ಲ. ನಾವು ಸಹ ಅಲ್ಲಿ ಇದ್ದೆವೂ, ಈಗ ಈ ಕಡೆ ಬಂದಿದ್ದೇವೆ. ಈಗ ಮತ್ತೆ ಐದು ತಿಂಗಳಿನಲ್ಲಿ ಅಲ್ಲಿಗೆ ಹೋಗುತ್ತೇವೆ. Ultimately, the people are waiting. ನಮಗೆ ಓಟು ಹಾಕುವವರು ಇದ್ದಾರೆ. ಈಗ ನಾವು ಬಹಳ ಹಾರಾಡುತ್ತಿದ್ದೇವೆ, ಜುಲುಸು ತೆಗೆದಿದ್ದೇವೆ, ಸಭೆ ಮಾಡಿದ್ದೇವೆ. ನಮ್ಮ ಪಕ್ಷದ ಸಭೆಯಲ್ಲಿ ನಾನು ಹೇಳಿದ್ದೇನೆ. ಮಲ್ಕಪೇಟೆಗೆ ನಾನು ಒಂದು ಬಾರಿ ರೇಸ್ ಆಡುವುದಕ್ಕೆ ಹೋಗಿದ್ದೆ. ಆಗ ನನಗೆ 150 ರೂಪಾಯಿಗಳ ಪಗಾರ ಇತ್ತು. ನನ್ನ ಸ್ನೇಹಿತರು ಹೇಳಿದರು, ಸುಮ್ಮನೆ ಹೋಗೋಣ ಶಾಣಪ್ಪ ಅಂದರು, ಅದಕ್ಕೆ ನಾನು ಹೋದೆ. ನನ್ನ ಜೇಬಿನಲ್ಲಿ ಹತ್ತು ರೂಪಾಯಿ ಇತ್ತು. ಬಹಳ ವಿಧವಾದ ಕುದುರೆ ಅವು, ಇವು ಎಂದು ತೆಗೆದುಕೊಂಡು ಬರುತ್ತಾರೆ, ಅವುಗಳನ್ನು ನೀವು ನೊಡಬೇಕು. ರೇಸ್‌ಗೆ ಹೋಗುವುದಕ್ಕಿಂತ ಮೊದಲು ಕುದುರೆಗಳ ಶಬ್ಬ ಕಟಾ-ಕಟಾ ಒಂದೊಂದು ಕುದುರೆ ಒಂದೊಂದು ತರಹ, ಅಬ್ಬಬ್ಬಾ! ಒಂದು ಬಾರಿ ಮಾನ್ಯ ಯಡಿಯೂರಪ್ಪ ಸಾಹೇಬರು ನಗುವುದಕ್ಕೆ ಪ್ರಾರಂಭ ಮಾಡಿದರು.

ಶ್ರೀ ವಿ.ಸೋಮಣ್ಣ:- ಮಾನ್ಯ ಸಭಾಪತಿಯವರೆ, ಒಂದು ಬಾರಿ ಇವರಿಗೆ ಆರೋಗ್ಯ ಸರಿ ಇರಲಿಲ್ಲ. ನಮ್ಮ ನಾಯಕರಾದಂತಹ ಪಟೇಲರು ನನ್ನನ್ನು ಕರೆದು ಮಾನ್ಯ ಸದಸ್ಯರಾದ ಶ್ರೀ ಕೆ.ಬಿ.ಶಾಣಪ್ಪನವರಿಗೆ ಆರೋಗ್ಯ ಸರಿಯಿಲ್ಲವಂತೆ, ಹೋಗಿ ನೋಡಿಕೊಂಡು ಬರುವಂತೆ ಹೇಳಿದರು.

(ಮುಂದು...)

(1139)21.11.2017-06.40-ಎಲ್‌ಎಲ್-ಕೆಎಸ್

ಶ್ರೀ ವಿ. ಸೋಮಣ್ಣ:- (ಮುಂದುವರೆದಿದ್ದು...)

ನಾನು ಮಾನ್ಯ ಶಾಣಪ್ಪನವರು ಭೇಟಿ ಮಾಡಲು ಶಾಸಕರ ಭವನಕ್ಕೆ ಹೋಗಿ ನಮಸ್ಕಾರ ಎಂದು ಹೇಳಿದನು. ಆ ಸಮಯದಲ್ಲಿ ಅವರು ತಮ್ಮ ಬಟ್ಟೆ ಬದಲಿಸಿಕೊಳ್ಳುತ್ತಿದ್ದರು. ನಾನು, "ಮುಖ್ಯಮಂತ್ರಿಗಳಾದ ಶ್ರೀ ಜೆ.ಹೆಚ್. ಪಟೇಲ್‌ರವರು ತಮ್ಮ ಆರೋಗ್ಯ ವಿಚಾರಿಸಲು ಕಳುಹಿಸಿದ್ದಾರೆಂದು" ಹೇಳಿ, 'ಹೇಗಿದ್ದೀಯಾ ಅಣ್ಣಾ' ಎಂದು ಕೇಳಿದೆ. ಆಗ ಮಾನ್ಯ ಸದಸ್ಯರು "ನಾನು ಹೇಗಿದ್ದೀನಿ ಎಂದು ನನ್ನನ್ನು ಏತಕ್ಕೆ ಕೇಳುತ್ತೀಯೋ, ನಮ್ಮ ಮನೆಯವಳನ್ನು(ಹೆಂಡತಿಯನ್ನು) ಕೇಳೋ" ಎಂದು ಉತ್ತರ ನೀಡಿದರು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಕೆ.ಎಸ್. ಈಶ್ವರಪ್ಪ:– ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಬಿ. ಶಾಣಪ್ಪನವರು ಈ ಮಾತನ್ನು ಆವೊತ್ತಿನ ದಿನ ಮಾನ್ಯ ವಿ. ಸೋಮಣ್ಣನವರಿಗೆ ಹೇಳಿದ್ದರು. ಆದರೆ, ನನಗೆ ಈ ದಿನ ಬೆಳಗ್ಗೆ ಈ ಮಾತನ್ನು ಹೇಳಿದರು.

ಶ್ರೀ ಕೆ.ಬಿ. ಶಾಣಪ್ಪ:– ಮಾನ್ಯ ಸಭಾಪತಿಯವರೇ, ಏಕೆಂದರೆ ನಾವು ಶ್ರೀ ಜೆ.ಹೆಚ್. ಪಟೇಲ್‌ರವರ ಶಿಷ್ಯರು. ಶ್ರೀ ಜೆ.ಹೆಚ್ ಪಟೇಲರು ಮುಖ್ಯ ಮಂತ್ರಿಗಳಾಗಿದ್ದಾಗ, ನನ್ನನ್ನು ಸಾರಾಯಿ ಮಿನಿಸ್ಟರ್ ಮಾಡಿದ್ದರು. ಅವರ ಜೊತೆ ಕುಳಿತರೆ ಅವರು ಮುಖ್ಯಮಂತ್ರಿಗಳು ಮತ್ತು ನಾವು ಸಚಿವ ಸಂಪುಟದ ಮಂತ್ರಿಗಳೆಂದು ಅವರಾಗಲೀ, ನಾನಾಗಲೀ, ಶ್ರೀ ಯಂ.ಸಿ. ನಾಣಯ್ಯನವರಾಗಲೀ ಯಾವತ್ತೂ ಭಾವಿಸಿರಲಿಲ್ಲ. ಅದೊಂದು wonderful company. ಅವರು ಮುಖ್ಯಮಂತ್ರಿಗಳಾಗಿದ್ದರೂ ಸಹ ಯಾರನ್ನೂ ಕೂಡ ಸಣ್ಣವರೆಂದು ನೋಡುತ್ತಿರಲಿಲ್ಲ. ನಾನು, ಶ್ರೀ ಕೆ.ಎಸ್. ಈಶ್ವರಪ್ಪ ಮತ್ತು ಹೆಚ್.ಎಂ. ರೇವಣ್ಣ ನವರು ಸಹ ಅವರ ಜೊತೆ ಇದ್ದೆವು. ಒಂದು ದಿನ ನಾನು ಅಧಿಕಾರಿಗಳ ವರ್ಗಾವಣೆಗಾಗಿ ಪಟ್ಟಿ ತೆಗೆದುಕೊಂಡು ಅವರ ಬಳಿ ಹೋದಾಗ, ಅವರು ನನಗೆ, "ಲೇ ಶಾಣಪ್ಪ, ನೀನು ಸಚಿವ ಸಂಪುಟದ ಮಂತ್ರಿಯಾಗಿದ್ದೀಯಾ ನಿನಗೆ ಒದಿಲೇನು," ಎಂದು ಕೇಳಿದರು. ನಾನು ವರ್ಗಾವಣೆ ಮಾಡಿ ಎಂದು ಕೇಳಿದ್ದೇ ತಪ್ಪಾಯಿತೇ ಎಂದು ಕೇಳಿದೆನು, ಅದಕ್ಕೆ ಅವರು, "ನೀನು, ಸಚಿವ ಸಂಪುಟ ಮಂತ್ರಿಯಾಗಿದ್ದೀಯಾ, ನೀನು ಯಾವ ಕೆಲಸ ಮಾಡಬೇಕೆಂದು ಗೊತ್ತಿದೆ. ಅದನ್ನು ಮಾಡು," ಎಂದು ಹೇಳಿದರು. ಅಂತಹ ಮುಖ್ಯಮಂತ್ರಿಯನ್ನು ನಾವು ಇವತ್ತಿಗೂ ನೋಡಲಿಲ್ಲ ಆದುದರಿಂದ, ನಾವು ಅವರನ್ನು ಇವತ್ತಿಗೂ ಕೂಡ ನೆನಪು ಮಾಡಿಕೊಳ್ಳುತ್ತೇವೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:– ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕುದುರೆ ಎಲ್ಲಿ ಹೋಯಿತೆಂದು ಹೇಳಲೇ ಇಲ್ಲ.

ಶ್ರೀ ಕೆ.ಬಿ. ಶಾಣಪ್ಪ:– ಮಾನ್ಯ ಸಭಾಪತಿಯವರೇ, ಕುದುರೆ ವಿಚಾರವನ್ನು ಮಾನ್ಯ ವಿ. ಸೋಮಣ್ಣನವರು ಬದಲಾವಣೆ ಮಾಡಿದರು. ಆ ಕುದುರೆ ಏನಾಯಿತೆಂದರೆ, ನಮ್ಮ ಹಣೆಬರಹವೆಂದರೆ, ಕಡು ಬಡತನ ಇದ್ದಾಗಲೂ ಕೂಡ ನಮ್ಮ ಸ್ನೇಹಿತರ ಜೊತೆ ಕುದುರೆ ಓಟ ನೋಡಲು ಹೋಗಿ ನಾನು ಇದ್ದಂತಹ 10 ರೂಪಾಯಿ ಹಣ ಕಳೆದುಕೊಂಡೆನು. ಕೊನೆಗೆ ಏನಾಯಿತೆಂದರೆ, ಕುದುರೆ ಓಟದಲ್ಲಿ ಕುದುರೆಗಳು 6 ಸುತ್ತು ಸುತ್ತುತ್ತವೆ. 6 ಸುತ್ತಿನಲ್ಲಿ ಕುದುರೆಗಳು ಕುಣಿಯುತ್ತವೆ. ಆದರೆ, ಕೊನೆಯದಾಗಿ, ನಾನು ಹೇಳಿದಂತಹ ಒಂದೂ ಕುದುರೆ ಗೆಲ್ಲಲಿಲ್ಲ. ನಮ್ಮ ಸ್ನೇಹಿತರು, ಬಾಪೂಸ್ ಗಿಫ್ಟ್ ಎಂಬ ಕುದುರೆ ಗೆಲ್ಲುತ್ತದೆಯೆಂದು ಹೇಳಿದರು. ಆ ಕುದುರೆ ಕುಣಿಯುವುದನ್ನು ನೋಡಿ, ಈ ಕುದುರೆ ಗೆಲ್ಲುತ್ತದೆಂದು ಬಾಕಿ ಇದ್ದಂತಹ 5

ರೂಪಾಯಿ ಹಣವನ್ನೂ ಸಹ ಹಚ್ಚಿಬಿಟ್ಟೆನು. ಆ ಕುದುರೆ ಓಟ ಮುಗಿಯುತು. ಆ ಓಟದಲ್ಲಿ ಬೇರೆ ಕುದುರೆಗಳು ಓಟ ಮುಗಿಸಿದೆವು. ಆ ಓಟದಲ್ಲಿ ಗೆದ್ದಂತಹ ಕುದುರೆಗಳ ವಿವರಣೆಯನ್ನು ಧ್ವನಿವರ್ಧಕಗಳಲ್ಲಿ ಹೇಳುತ್ತಿದ್ದರು. ಆದರೆ, ನಮ್ಮ ಕುದುರೆ ಎಲ್ಲಿದೆಯೆಂದು ನೋಡಿದರೆ, ಆ ಕುದುರೆ ಓಡುವುದು ಇರಲಿ, ನಡೆದುಕೊಂಡು ಹೋಗುತ್ತಿತ್ತು. ನಮ್ಮ ಜೊತೆಯಲ್ಲಿ ಶ್ರೀ ಬಸವರಾಜು ಕೂಡ ಇದ್ದನು. ಅವನಿಗೆ ನಾನು ಒಂದು ಏಟು ಬಿಟ್ಟು, "ಮಗನಾ, ನಿನ್ನ ಮಾತು ಕೇಳಿ ಇದ್ದ 5 ರೂಪಾಯಿ ಹಣವನ್ನು ಆ ಕುದುರೆ ಗೆಲ್ಲುತ್ತದೆಂದು ಕಟ್ಟಿ ಹಣ ಕಳೆದುಕೊಂಡೆ, ಈಗ ನಾವು ಹೈದರಾಬಾದ್‌ನಿಂದ ಗುಲ್ಬಾರ್ಗದ ಶಹಬಾದ್‌ಗೆ ಹೋಗಲು 1 ಪೈಸೆ ಹಣ ಸಹ ನಮ್ಮ ಬಳಿ ಇಲ್ಲ, ಏನು ಮಾಡುವುದು" ಎಂದು ಕೇಳಿದೆನು. ಆಗ ನನ್ನ ಕೊರಳಿನಲ್ಲಿ ಒಂದು necklace ಇತ್ತು. ನನ್ನ ಸ್ನೇಹಿತರು ಸುಮ್ಮನೆ ನಿಂತುಕೊಂಡು ಅದನ್ನೇ ದಿಟ್ಟಿಸಿ ನೋಡುತ್ತಿದ್ದರು. ಆಗ ನಾನು, "ನಿಮ್ಮ ಕೈ ಜೋಡಿಸುತ್ತೇನೆ, ನಾನು ಮಾತ್ರ ಈ ಚಿನ್ನದ ಸರವನ್ನು ಕೊಡುವುದಿಲ್ಲವೆಂದು" ಎಂದು ಹೇಳಿದೆನು. ನಮ್ಮ ಕಥೆಯನ್ನು ಏನು ಕೇಳುತ್ತೀರಿ, ಕೊನೆಗೆ, ನಮ್ಮ ಸ್ನೇಹಿತರಾದಂತಹ ಗೋಪಾಲಕೃಷ್ಣ ಎಂಬುವವರ ಅತ್ತೆ-ಮಾವನ ಮನೆಯಲ್ಲಿತ್ತು, ಅಲ್ಲಿಗೆ ಹೋಗಿ 40 ರೂಪಾಯಿಗಳನ್ನು ಪಡೆದುಕೊಂಡು ಬಂದವರು ಹೈದರಾಬಾದ್ ಮುಖವನ್ನೇ ನಾವು ನೋಡಲಿಲ್ಲ. ಆ ರೀತಿ ಈಗ ಚುನಾವಣೆ ಬಂದಿದೆ, ಕುದುರೆಗಳು ಹೇಗೆ ಕುಣಿಯುತ್ತಿವೆಯೆಂದರೆ, ಅವುಗಳ ಗತಿ ಮುಂದೆ ಏನಾಗುತ್ತಿದೆಯೆಂದು ಅವುಗಳಿಗೆ ಗೊತ್ತಿಲ್ಲ.

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದ ರೀತಿ, ಅವರ ಎಲ್ಲಾ ಕುದುರೆಗಳು ಕುಣಿಯುತ್ತಿದೆ. ಕೊನೆಗೆ ನಡೆದುಕೊಂಡು ಹೋಗುತ್ತವೆ.

ಶ್ರೀ ಕೆ.ಬಿ. ಶಾಣಪ್ಪ:- ಮಾನ್ಯ ಸಭಾಪತಿಯವರೇ, ಚುನಾವಣೆ ಬಂದಾಗ ಜನ, they are waiting for the decision.....

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ:- ಮಾನ್ಯ ಸಭಾಪತಿಯವರೇ, ನಮ್ಮ ಕುದುರೆಗಳು ನಡೆದುಕೊಂಡು ಹೋಗುವುದಿಲ್ಲ. ಕಾಂಗ್ರೆಸ್ ಪಕ್ಷದ ಕುದುರೆಗಳು ಆ ರೀತಿ ಹೋಗುತ್ತವೆ. ಅಲ್ಲದೇ, ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರ ಕುದುರೆಗಳೇ ಇರುವುದಿಲ್ಲ.

ಶ್ರೀ ಕೆ.ಬಿ. ಶಾಣಪ್ಪ:- ಮಾನ್ಯ ಸಭಾಪತಿಯವರೇ, ಒಟ್ಟಿನಲ್ಲಿ ಕುದುರೆಗಳಿಗಾಗಿ ತಯಾರಿ ನಡೆದಿದೆ. ಇನ್ನು ಕೇವಲ 5 ತಿಂಗಳಿನಲ್ಲಿ ಯಾವ ಕುದುರೆಯೂ ನನ್ನ ಬಾಪೂಸ್ ಗಿಫ್ಟ್ ಕುದುರೆ ಆದ ರೀತಿಯಲ್ಲಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆಗಬಾರದು. ಕುದುರೆಗಳನ್ನು ಜನ ಸರಿಯಾಗಿ ಆರಿಸುತ್ತಾರೆ. Ultimately, the people are waiting for making a right choice. 150, 130, 180 ಸ್ಥಾನಗಳು ಗೆಲ್ಲುತ್ತೇವೆಂದು ನಾವು ಹೇಳುತ್ತೇವೆ. ಆದರೆ, ಈಗಿರುವಂತಹ ಹವಾಮಾನವನ್ನು ನೋಡಿದರೆ, ಈ ಸರ್ಕಾರ ಸ್ವಲ್ಪ ಚೆನ್ನಾಗಿಲ್ಲವೆಂದು ಜನ ಭಾವಿಸಿದ್ದಾರೆಂದು ನನಗನ್ನಿಸುತ್ತದೆ. ನಾನು ನೇರವಾಗಿ ಹೇಳುವುದು, ಸುಳ್ಳು ಮಾತನಾಡುವುದಿಲ್ಲ. ಹವಾ ಬಹಳ ಕೆಟ್ಟದಾಗಿದೆ ಎಂದು ಹೇಳುತ್ತಾರೆ. ಬರುವಂತಹ ದಿನಗಳಲ್ಲಿ ನಮ್ಮ ಪಕ್ಷಕ್ಕೆ ಒಳ್ಳೆಯ ಅವಕಾಶವಿದೆ. ಜನರಿಗೂ ಕೂಡ ಈ ಸರ್ಕಾರ ಸಾಕಾಗಿದೆ. ಈಗಿನ ಸರ್ಕಾರ ಏನು ಕೆಟ್ಟದ್ದು ಮಾಡಿದೆ ಎನ್ನುವುದು ಜನರಿಗೆ ಮತ್ತು ಈಗಿನ ಸರ್ಕಾರಕ್ಕೆ ಬಿಟ್ಟಂತಹ ವಿಚಾರ. ಆದರೆ, ಈ ಸರ್ಕಾರ ಇನ್ನು 5 ತಿಂಗಳು ಅಧಿಕಾರದಲ್ಲಿರುತ್ತದೆ, ಮುಂದಿನ ಚುನಾವಣೆಯಲ್ಲಿಯೂ ಸಹ ಈಗಿನ ಸರ್ಕಾರ ಗೆಲ್ಲಬಹುದು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ನಾವು ಕೂಡ ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಾಡುತ್ತೇನೆ. ಆದರೆ, ಈ ಸಮಸ್ಯೆ ಮುಂದುವರೆಯುತ್ತದೆ. ಅದು ಎಲ್ಲಿಯವರೆಗೂ ಎಂದರೆ, ಉತ್ತರ ಕರ್ನಾಟಕ ದಕ್ಷಿಣ ಕರ್ನಾಟಕಕ್ಕೆ ಎಲ್ಲಿಯವರೆಗೂ ಸಮನಾಗುವುದಿಲ್ಲ, ಇದರಲ್ಲಿ ವ್ಯತ್ಯಾಸಗಳನ್ನು ಬದಲಾವಣೆಯಾಗುವುದಿಲ್ಲವೋ ಅಲ್ಲಿಯವರೆಗೆ ಜನಗಳ ಮನಸ್ಸು ಕೂಡ ಒಂದಾಗುವುದಿಲ್ಲ. ಅನೇಕ ವರ್ಷಗಳಿಂದ ನಾವು ತುಳತಕ್ಕೆ ಒಳಗಾಗುತ್ತಾ ಬಂದಿದ್ದೇವೆ. ಇದು ಸರಿಯಾಗುವುದಿಲ್ಲ. ಇನ್ನು smart city ಎಂದು ಹೇಳುತ್ತಾರೆ. ಆದರೆ, ನಮ್ಮ ಉತ್ತರ ಕರ್ನಾಟಕದ ಯಾವುದೇ ನಗರಗಳ ಹೆಸರು ಈ ಯೋಜನೆಯಲ್ಲಿ ಬರುವುದಿಲ್ಲ. ರಸ್ತೆಗಳು ಚೆನ್ನಾಗಿಲ್ಲ.

ಶ್ರೀ ರಮೇಶ್‌ಬಾಬು:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದಂತಹ ಶ್ರೀ ಹೆಚ್.ಕೆ. ಪಾಟೀಲರವರು ಈ ಸದನದಲ್ಲಿ ಇದ್ದಾಗ ಹೈದರಾಬಾದ್-ಕರ್ನಾಟಕ ಅಭಿವೃದ್ಧಿಯಾಗಿಲ್ಲವೆಂದು ಹೇಳುವುದನ್ನು ಕೇಳುವುದಕ್ಕೆ ನಮಗೆ ಕಷ್ಟವಾಗುತ್ತಿದೆ. ಏಕೆಂದರೆ, ಆಲಮಟ್ಟಿ ಜಲಾಶಯ ನಿರ್ಮಾಣದಲ್ಲಿ ಸರ್ಕಾರ ಕೊಟ್ಟಿರುವ ಕೊಡುಗೆಯನ್ನು ಮಾನ್ಯ ಸದಸ್ಯರು ನೆನಪು ಮಾಡಿಕೊಳ್ಳಬೇಕಲ್ಲವೇ?

ಶ್ರೀ ಕೆ.ಬಿ. ಶಾಣಪ್ಪ:- ಮಾನ್ಯ ಸಭಾಪತಿಯವರೇ, ನಮ್ಮ ಉತ್ತರ ಕರ್ನಾಟಕದವರೇ ಮಂತ್ರಿಗಳಾಗಿದ್ದಾಗಲೂ ಕೂಡ ನಮ್ಮ ಕಡೆ ಹೆಚ್ಚು ರಸ್ತೆಗಳಾಗಿರುವುದಿಲ್ಲ. ದಕ್ಷಿಣ ಕರ್ನಾಟಕದ ಮಂತ್ರಿಗಳಂತಲೂ ನಮ್ಮ ರಸ್ತೆಗಳನ್ನು ಅಭಿವೃದ್ಧಿ ಮಾಡುವುದೇ ಇಲ್ಲ. ಏತಕ್ಕೆ ಈ ತಾರತಮ್ಯ ಮಾಡುತ್ತಾರೆ, you mean to say that, ನಿಜಾಮನ ಕಾಲಕ್ಕೆ ಆತ ಹೈದರಾಬಾದ್-ಕರ್ನಾಟಕದಲ್ಲಿ ಏನು ಅಭಿವೃದ್ಧಿ ಮಾಡಲಿಲ್ಲ. ಆಗ ಆತ ಈ ಪ್ರದೇಶವನ್ನು ಅಭಿವೃದ್ಧಿ ಮಾಡಿದ್ದರೆ ನಮಗೆ ಇವತ್ತು ಈ ಪರಿಸ್ಥಿತಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬರುತ್ತಿರಲ್ಲ. ಜನ ಈ ಪ್ರದೇಶವನ್ನು ಬಿಟ್ಟು ಬೆಂಗಳೂರಿಗೆ ಅಥವಾ ಪೂನಾಗೆ ಹೋಗುತ್ತಿರಲಿಲ್ಲ. ಒಂದೊಂದು ಊರಿಗೆ ಒಂದೊಂದು ಬರೀ ಬಾವಿ ಹಾಕಿದರೆ ಹೊರತಾಗಿ ನೀರಾವರಿ ಯೋಜನೆಗಳನ್ನು ಮಾಡಲಿಲ್ಲ, ರಸ್ತೆಗಳನ್ನು ನಿರ್ಮಿಸಲಿಲ್ಲ, ಜನಗಳನ್ನು ಅಭಿವೃದ್ಧಿ ಪಡಿಸಲಿಲ್ಲ, ಈ ಎಲ್ಲಾ ನ್ಯೂನತೆಗಳು accumulate ಆಗಿ ಹೈದರಾಬಾದ್-ಕರ್ನಾಟಕವೆಂದು ಆಗಿಬಿಟ್ಟಿದೆ. ಹಾಗಾಗಿ, ತಮ್ಮಲ್ಲಿ ಕಳಕಳಿಯಾಗಿ ವಿನಂತಿಸುವುದೇನೆಂದರೆ ಹಾಗೂ ಮಾನ್ಯ ಸಿದ್ದರಾಮಯ್ಯನವರಿಗೆ ಕೇಳುವುದೇನೆಂದರೆ, kindly, release lot of money for the development of Hyderabad-Karnataka region. ಶ್ರೀ ನಂಜುಡಪ್ಪ ಸಮಿತಿ ವರದಿ ಬಂದಿದೆ. ಎಲ್ಲಾ ವಿಚಾರಗಳಲ್ಲಿಯೂ ಕೂಡ ನಾವು ಕೊನೆಯಲ್ಲಿದ್ದೇವೆ. ಇವತ್ತಿನ ದಿವಸದ ಕಾರ್ಯಕಲಾಪಗಳ ಪಟ್ಟಿಯಲ್ಲಿ ಸಹ ನಮ್ಮ ಭಾಗದ ಚರ್ಚೆ ಕೂಡ ಕೊನೆಯಲ್ಲಿದೆ. ಮಾನ್ಯ ಸಭಾಪತಿಗಳು ದೊಡ್ಡ ಮನಸ್ಸು ಮಾಡಿ, "ಕೆ.ಬಿ. ಶಾಣಪ್ಪನವರೇ ತಮಗೆ ಹೆಚ್ಚು ವಯಸ್ಸಾಗಿದೆ, ಆದುದರಿಂದ ತಾವು ಬೇಗ ಮಾತನಾಡಿ ಹೊರಡಿ" ಎಂದು ಹೇಳಿದರು. I am very grateful to the Chair, as he allowed me to speak on the issues concerned to my ಏರಿಯಾ ಅದನ್ನು ತಾವು ಕೂಡ ಉತ್ತರ ಕರ್ನಾಟಕದ ತಾಲ್ಲೂಕುಗಳನ್ನು ಮಾಡುವುದರಲ್ಲಿ ಬಹಳ ದೊಡ್ಡ ಸಮಸ್ಯೆ ಇದೆ. ಆದುದರಿಂದ, ಆ ತಾಲ್ಲೂಕುಗಳನ್ನು ರಚನೆ ಮಾಡಬೇಡಿ. 4 ವರದಿಗಳು ಕೂಡ ಕಾಳಗಿ ಪ್ರದೇಶದ ಪರವಾಗಿವೆ. ಕಾಳಗಿ ಪ್ರದೇಶವನ್ನು ಬಹಳ ಬಡ ಪ್ರದೇಶವನ್ನಾಗಿ ಮಾಡಬಾರದು. ಈ ಭಾಗದಲ್ಲಿರುವಂತಹ ಪ್ರತಿಯೊಂದು ಪ್ರದೇಶವೂ ಕೂಡ ಶ್ರೀ ಸಿದ್ದರಾಮಯ್ಯನವರದೇ. As far as he is a Chief Minister, each and every part of Karnataka belongs to him. ಅದಕ್ಕಾಗಿ ಕಾಳಗಿ ಪ್ರದೇಶವನ್ನು, ಶಹಬಾಗವನ್ನು ತಾಲ್ಲೂಕುಗಳನ್ನಾಗಿ ಮಾಡಿದ್ದು ಮತ್ತು ಈ ರಾಜ್ಯದಲ್ಲಿ 222 ತಾಲ್ಲೂಕುಗಳನ್ನು ಮಾಡಿದ್ದಾರೆ. ಈ ಎಲ್ಲಾ ತಾಲ್ಲೂಕುಗಳಲಿ function ಮಾಡಿ. ಅದು ಕೇವಲ ಕಾಗದದಲ್ಲಿದೆ. ಹಿಂದೆ ನಾವು ಅಧಿಕಾರದಲ್ಲಿದ್ದಾಗ ನಾವು ಅಭಿವೃದ್ಧಿ ಮಾಡಿದ್ದು ಇದೇ ರೀತಿಯಾಗಿದೆ. ಈ ಸರ್ಕಾರ ಕೂಡ ಅದೇ ರೀತಿ ಅಭಿವೃದ್ಧಿ ಮಾಡಿದೆ. ಶ್ರೀ ಕಾಗೋಡು ತಿಮ್ಮಪ್ಪನವರು ಆದಷ್ಟು ಮಟ್ಟಿಗೆ ನಾನು ಪ್ರಾರಂಭ ಮಾಡಿಸುತ್ತೇನೆಂದು ಹೇಳಿದ್ದಾರೆ. ಇದುವರೆವಿಗೂ ಮಾಡಿರುವುದಿಲ್ಲ. ಇದನ್ನು ಯಾವಾಗ ಮಾಡುತ್ತಾರೆ? ಈಗಾಗಲೇ ನಾಲ್ಕೂವರೆ ವರ್ಷವಾಯಿತು. ಇನ್ನು ಕೇವಲ 5 ತಿಂಗಳು ಸಮಯ ಬಾಕಿ ಉಳಿದಿದೆ. Why are you not concentrating towards development of these areas? ಮಾನ್ಯ ಹೆಚ್.ಕೆ. ಪಾಟೀಲ್‌ರವರನ್ನು ಈ ಪ್ರಶ್ನೆಗೆ ಉತ್ತರ ಕೇಳುತ್ತೇನೆ, Are you feeling happy with this progress?

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಹೆಚ್.ಕೆ. ಪಾಟೀಲ್:– ಮಾನ್ಯ ಸಭಾಪತಿಯವರೇ, ಆ ಕೆಲಸವನ್ನು ನಾವು ಜನವರಿಯಲ್ಲಿ ಪ್ರಾರಂಭ ಮಾಡುತ್ತೇವೆ.

ಶ್ರೀ ಕೆ.ಬಿ. ಶಾಣಪ್ಪ:– ಮಾನ್ಯ ಸಭಾಪತಿಯವರೇ, ನಾಲ್ಕೂವರೆ ವರ್ಷ ಅವಧಿಯಲ್ಲಿ ಅಭಿವೃದ್ಧಿ ಮಾಡವುದಕ್ಕೆ ಈ ವಿಷಯ ಅವರ ತಲೆಯಲ್ಲಿಯೇ ಬರಲಿಲ್ಲ, ಈಗ ಜನವರಿ ತಿಂಗಳಿನಲ್ಲಿ ಮಾಡುತ್ತಾರೆಯೇ? Can I believe it? ನಾನು ಹೆಚ್ಚಿಗೆ ಸಮಯ ತೆಗೆದುಕೊಳ್ಳದೇ ಕೊನೆಯ ಮಾತನ್ನು ಹೇಳಿ ಮುಗಿಸುತ್ತೇನೆ. ನಾನು 2013 ರಲ್ಲಿ ವಿಧಾನ ಪರಿಷತ್ತಿನ ಸದಸ್ಯನಾಗಿ ಬಂದಾಗ, ಶ್ರೀ ಎಂ.ಬಿ. ಪಾಟೀಲರು ಸವಾಲಿನ ರೀತಿಯಲ್ಲಿ ಒಂದು ಮಾತನ್ನು ಹೇಳಿದರು.

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:– ಮಾನ್ಯ ಸಭಾಪತಿಯವರೇ, ನನ್ನ ಒಂದು ಸಲಹೆ ಏನೆಂದರೆ, ಶ್ರೀ ಜೆ.ಹೆಚ್ ಪಟೇಲ್‌ರವರು ಈ ರಾಜ್ಯ ಕಂಡ ಅತ್ಯುನ್ನತ ಅಪರೂಪದ ರಾಜಕಾರಣಿ, ಅನೇಕ ಬಿಲ್ಲೆಗಳನ್ನು ರಚನೆ ಮಾಡಿದಂತಹವರು. ಅವರ ನೆನಪಿಗಾಗಿ ಸರ್ಕಾರ ಒಂದು ಯೋಜನೆಯನ್ನೋ ಮತ್ತೊಂದನ್ನೇ ಮಾಡಬೇಕು. ಎಲ್ಲರನ್ನೂ ಸಮಾನವಾಗಿ ನೋಡುವಂತಹ ವ್ಯಕ್ತಿಯನ್ನು ನಾವು ನೋಡಲೇ ಇಲ್ಲ. ಅದಕ್ಕಾಗಿ ಸರ್ಕಾರ ಬರುವಂತಹ ದಿನಗಳಲ್ಲಿ ಜನರ ಮನಸ್ಸಿನಲ್ಲಿ ಉಳಿಯುವಂತಹ ಯೋಜನೆಗಳನ್ನು ಮಾಡಬೇಕು. ಕೇವಲ ಒಂದು ಪುಸ್ತಕ ಮುದ್ರಣ ಮಾಡಿದರೆ ಪ್ರಯೋಜನವಾಗುವುದಿಲ್ಲ. ಎಲ್ಲಾ ಪಕ್ಷದವರು ಅವರನ್ನು ಇಷ್ಟಪಡುತ್ತಿದ್ದರು. ಅವರು ಪಕ್ಷಾತೀತವಾಗಿದ್ದಂತಹವರು, ಜಾತ್ಯಾತೀತವಾಗಿ ಇದ್ದಂತಹವ ವ್ಯಕ್ತಿಯಾಗಿದ್ದರು.

ಶ್ರೀ ಕೆ.ಬಿ. ಶಾಣಪ್ಪ:– ಮಾನ್ಯ ಸಭಾಪತಿಯವರೇ, ಶ್ರೀ ಜೆ.ಹೆಚ್. ಪಟೇಲ್‌ರವರು, he is one of the man who we loved him. ಅವರು ರಾಜ್ಯದ ಹಿತದೃಷ್ಟಿಯಿಂದ ಬಹಳಷ್ಟು ಕೆಲಸಗಳನ್ನು ಮಾಡಿದ್ದಾರೆ. ಆದರೆ, ಸರ್ಕಾರ ಕೇವಲ ಅವರ ಪ್ರತಿಮೆಯನ್ನು ಇಟ್ಟಿದ್ದಾರೆ. ಜೆ.ಹೆಚ್. ಪಟೇಲ್ ಅವರನ್ನು ನಾವು co-operative movement ಭೀಷ್ಮ ಎಂದು ಕರೆಯುತ್ತೇವೆ. ಆದುದರಿಂದ, ಈ ಸರ್ಕಾರ ಜೆ.ಹೆಚ್. ಪಟೇಲ್, ರಾಮಕೃಷ್ಣ ಹೆಗಡೆ ಮತ್ತು ಶ್ರೀ ಕೆಂಗಲ್ ಹನುಮಂತಯ್ಯ ಈ ರೀತಿ ಅನೇಕರ ಹೆಸರಿನಲ್ಲಿ ಯಾವುದಾದರೂ ಯೋಜನೆಗಳನ್ನು ಮಾಡಬೇಕು. ಇವರೆಲ್ಲರೂ ಕೂಡ ಈ ರಾಜ್ಯಕ್ಕೆ ತಮ್ಮದೇ ಆದಂತಹ ರೀತಿಯಲ್ಲಿ ಕೊಡುಗೆಯನ್ನು ಕೊಟ್ಟು ಹೋಗಿದ್ದಾರೆ. ಅದಕ್ಕಾಗಿ ತಾವು ದಯಮಾಡಿ ಈ ಎಲ್ಲಾ ಅಂಶಗಳನ್ನು ಪರಿಗಣಿಸಿ, ಹೈದರಾಬಾದ್–ಕರ್ನಾಟಕ ಪ್ರದೇಶದ ವಿಚಾರ ಪುನಃ ಪದೇ–ಪದೇ ಚರ್ಚೆಯಾಗದೇ ಸುಧಾರಣೆ ಆಗುವ ರೀತಿಯಲ್ಲಿ ಒಂದು ಕೆಲಸ ತಾವು ಮಾಡಬಹುದೆಂದು ನಾನು

ಹೇಳುತ್ತೇನೆ. ನಾನು ಏನೋ ಹೇಳುವ ಹೊತ್ತಿಗೆ ಮಾನ್ಯ ಬಸವರಾಜ ಶಿವಲಿಂಗಪ್ಪನವರು ಮಧ್ಯೆ ಮಾತನಾಡಿದರು. ಈ ವಯಸ್ಸಿನಲ್ಲಿ ನಾನು ಹೇಳಬೇಕಾಗಿದ್ದಂತಹ ವಿಷಯ ನನ್ನ ತಲೆಯಿಂದ ಹೊರಟು ಹೋಯಿತು. Something I want to express before this House...ಅದಕ್ಕೆ ವಯಸ್ಸು ಎಂದು ಹೇಳುವುದು. ಶ್ರೀ ಎಂ.ಬಿ. ಪಾಟೀಲರು ಬಹಳ ಕಡಕ್ಕಾಗಿ ಸವಾಲು ಮಾಡುತ್ತೇನೆ ಎನ್ನುವ ರೀತಿಯಲ್ಲಿ ಒಂದು ಮಾತನ್ನು ಹೇಳಿದರು. ಅದೇನೆಂದರೆ, "ಬೆಣ್ಣಿತೊರೆ, water will be flown to the fields by the May of next year. ಗಂಡೋರಿನಾಲಾ, ಕಾರಂಜಾ ಈ ರೀತಿ ಹೇಳಿ, ನನಗೆ 6 ತಿಂಗಳು ಸಮಯ ಕೊಡಿ," ಎಂದು ಕೇಳಿದರು. ಅದಕ್ಕೆ ನಾನು ಇನ್ನೂ 5 ವರ್ಷ ವಿಧಾನ ಪರಿಷತ್ತಿನಲ್ಲಿ ಸದಸ್ಯನಾಗಿರುತ್ತೇನೆಂದು ಹೇಳಿದನು. ಈ ಬಗ್ಗೆ ಅವರು ಕಡತ ಪರಿಶೀಲನೆ ಮಾಡಿ ನೋಡಬೇಕು.

(ಮುಂದುವರೆದಿದೆ...)

(1140)21.11.2017/6.50/ವೈಎಲ್-ಜಿಆರ್

ಶ್ರೀ ಕೆ.ಬಿ.ಶಾಣಪ್ಪ(ಮುಂದು):-

ಮಾನ್ಯ ಎಂ.ಬಿ.ಪಾಟೀಲ್‌ರವರ ಬಗ್ಗೆ ನಾನು ಹೆಚ್ಚಾಗಿ ಏನು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ಅವರು ತುಂಬಾ ಚುರುಕಿದ್ದಾರೆ. ಇಲ್ಲಿ ಮಾತ್ರ he has misled us. He could not finish whatever he has committed here. ಅದಕ್ಕಾಗಿ ಇಂತಹ ವಿಷಯಗಳನ್ನು ತಾವು ನೆನಪಿನಲ್ಲಿಟ್ಟುಕೊಂಡು ಯಾವ್ಯಾವ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಬೇಕು ಹಾಗೂ ಯಾವ್ಯಾವ ಭರವಸೆಯನ್ನು ಸದನದಲ್ಲಿ ಕೊಟ್ಟಿದ್ದೀರಿ ಅದನ್ನು ಪುನಃ ತರಿಸಿಕೊಂಡು ನೋಡಿ. ಹೈದ್ರಾಬಾದ್-ಕರ್ನಾಟಕ ಭಾಗವೂ ಹಿಂದುಳಿದಿರುವುದರಿಂದ ಭವ್ಯ ಕರ್ನಾಟಕದ ಭಾಗವಾಗಿ ಬೆಳೆಯಲು ಬಹಳ ದಿವಸ ಇದೆ ಎಂದು ನಾನು ಹೇಳುವುದಿಲ್ಲ. Let me be frank. ಹೈದ್ರಾಬಾದ್-ಕರ್ನಾಟಕ ಭಾಗಕ್ಕೆ ಶಿಕ್ಷಣವನ್ನು ಒದಗಿಸಿದ್ದು ಬಾಂಬೆ ಕರ್ನಾಟಕ. ಎಲ್ಲಾ ಶಿಕ್ಷಕರು, ಉಪನ್ಯಾಸಕರು ಬಾಂಬೆ ಕರ್ನಾಟಕದಿಂದಲೇ ಬಂದಿದ್ದರು. ಅವರು ಅಂತಹ ಒಂದು ಉನ್ನತ ಮಟ್ಟದ ವಿದ್ಯಾಭ್ಯಾಸವನ್ನು ಪಡೆದಂತಹವರು. ಇಲ್ಲಿ irrigated land ಇದೆ. ಅನೇಕ projects ಇವೆ. ಮೊದಲಿನಂತೆ ನೀರಾವರಿ ಮತ್ತು ಸಕ್ಕರೆ ಕಾರ್ಖಾನೆಗಳಿವೆ. ಹಾಗೆಯೇ ಹುಬ್ಬಳ್ಳಿಯಲ್ಲಿಯೂ ದೊಡ್ಡ ದೊಡ್ಡ ಶಹರ್‌ಗಳಿವೆ. ಆದರೆ, ಉತ್ತರ ಕರ್ನಾಟಕ ಭಾಗದಲ್ಲಿ ಈ ರೀತಿಯ ಯಾವುದೇ ವ್ಯವಸ್ಥೆಯು ಇಲ್ಲ. ಹಾಗಾಗಿ ಮಾನ್ಯ ಸಚಿವರು ಸ್ವಲ್ಪ ಹೆಚ್ಚಿನ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಾಳಜಿಯನ್ನು ವಹಿಸಿ ಹೊಸ ರಸ್ತೆಗಳು, ಗಲ್ಲಿಗಳನ್ನು ಮಾಡಬೇಕು. ನಮ್ಮ ಪ್ರಧಾನ ಮಂತ್ರಿಯವರಾದ ಮಾನ್ಯ ನರೇಂದ್ರ ಮೋದಿಯವರು ಹೇಳುವಂತೆ 'ಸ್ವಚ್ಛ ಭಾರತ' ಇದ್ಯಾವುದು ಆ ಭಾಗದಲ್ಲಿ ಆಗುತ್ತಿಲ್ಲ. ಯಾವುದೇ ಗಲ್ಲಿಯಲ್ಲಿ ಹೋಗಿ ನೋಡಿದರೂ ಇದ್ಯಾವುದೂ ಇಲ್ಲ. ಆದರೂ ಒಳಚರಂಡಿ ವ್ಯವಸ್ಥೆಯನ್ನು ಈಗ ಸ್ವಲ್ಪ ಚೆನ್ನಾಗಿ ಮಾಡಿದ್ದಾರೆ. ಅದರ ಬಗ್ಗೆ ಸುಳ್ಳು ಹೇಳಬಾರದು. ಕೆಲವೊಂದು ಕಾರ್ಯಗತವಾಗಿದೆ, ಇನ್ನು ಕೆಲವು ಕಾರ್ಯಗತವಾಗಬೇಕಾಗಿದೆ. ನಿಮ್ಮ ಭಾಗದ ಮಟ್ಟಕ್ಕೆ ನಾವು ಬರಬೇಕೆಂದರೆ ಇನ್ನು ೫೦-೬೦ ವರ್ಷಗಳಷ್ಟು ಸಮಯಬೇಕಾಗುತ್ತದೆ. ಆ ೫೦ ವರ್ಷಗಳಷ್ಟರಲ್ಲಿ ಈ planning ಮಾಡಿ, ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದರೂ ಸಹ ಈ 5-6 ಜಿಲ್ಲೆಗಳನ್ನು ನಿಮ್ಮ ಭಾಗದ ಮಟ್ಟಕ್ಕೆ ತೆಗೆದುಕೊಂಡು ಬರುವಂತಹ ಕೆಲಸವನ್ನು ಮಾಡಬೇಕು. ಏಕೆಂದರೆ, ನಾವು ಅಷ್ಟು ವರ್ಷಗಳು ಬದುಕಿರುವುದಿಲ್ಲವಾದರೂ ನಮ್ಮ ಬದಲಾಗಿ ನಮ್ಮ ಮಕ್ಕಳಾದರೂ ಸುಧಾರಣೆಯಾಗಿರತಕ್ಕಂಥ ವ್ಯವಸ್ಥೆಯನ್ನು ನೋಡಲಿ ಎಂದು ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):- ನೀವು ಇರುವುದಿಲ್ಲವೆಂದು ಏಕೆ ಹೇಳುತ್ತೀರಿ?

ಶ್ರೀ ಕೆ.ಬಿ.ಶಾಣಪ್ಪ(ನಾಮನಿರ್ದೇಶಿತರು):- ಈಗಾಗಲೇ ನನ್ನ ವಯಸ್ಸು 81 ವರ್ಷಗಳಾಗಿದೆ. ಇನ್ನು ಅಷ್ಟು ವರ್ಷಗಳು ನಾವು ಇರುತ್ತೇವೆಯೇ?

ಶ್ರೀ ಕೆ.ಎಸ್.ಈಶ್ವರಪ್ಪ:- ಮಾನ್ಯ ಸಭಾಪತಿಯವರೇ, ಮಾನ್ಯ ಶಾಣಪ್ಪನವರು ಇಂತಹ ಆಸೆಯನ್ನು ಹೊಂದಿರುವುದಕ್ಕಾದರೂ ಖಂಡಿತವಾಗಿಯೂ ನಾವು ಆ ಭಾಗದ ಸಮಸ್ಯೆಯನ್ನು ಬಗೆಹರಿಸಬೇಕಾಗಿದೆ. ಬಗೆಹರಿಸೋಣ.

ಶ್ರೀ ಕೆ.ಬಿ.ಶಾಣಪ್ಪ:- ಆಗಲಾರದ ವಯಸ್ಸಿನಲ್ಲಿ ಕುಸ್ತಿ ಹಿಡಿಯುವುದು ಬೇಡ. ಕಡಗೋಲ್ ಶರಣರು 'ಬಿಟ್ಟೆನೆಂದರೂ, ಬಿಡದು ಮಾಯೆ' ಎಂದು ಹೇಳಿದ್ದಾರೆ. ನಮ್ಮಂಥವರ ಬಗ್ಗೆ ರಹೀಮ್ ಕೆ ದೋಹೆಯಲ್ಲಿ 'ಮಾಲಿ ಆವತ ದೇಖಕೆ, ಕಲಿಯನ್ ಕರೇ ಪುಕಾಂ ಫೂಲೇ ಫೂಲೇ ಚುನಿಲಿಯೆ, ಕಾಲಿ ಹಮಾರೀ ಬಾರಿ' ಎಂದು ಹೇಳಿದ್ದಾರೆ. ಅಂದರೆ ಪ್ರತಿ ದಿನ ತೋಟದಲ್ಲಿ ಅರಳುವ ಹೂವುಗಳು, ಮುಂಜಾನೆ ಸೂರ್ಯೋದಯವಾದಾಗ ಏನು ಮೊಗ್ಗಾಗಿರುತ್ತವೆ ಅವು ನಗುವುದಕ್ಕೆ ಶುರು ಮಾಡುತ್ತವೆ. 'ನೀನು ಸೂರ್ಯನ ಬಿಸಿಲು ಬಿದ್ದಿರುವುದರಿಂದ ಅರಳಿದ್ದೀಯಾ' ಎಂದು ಹೇಳಿ, ಹೂವುಗಳನ್ನು ತೆಗೆದುಕೊಂಡು ಹೋಗುತ್ತಾನೆ. ಹಾಗೆಯೇ ಇವತ್ತು ನಾನು ಅರಳಿದ್ದೇನೆ, ನಾಳೆ ಬಿಸಿಲು ಬೀಳುತ್ತದೆ. ಆದರೆ ಅಲ್ಲಿಯವರೆಗೆ ನಾನು ಎಲ್ಲಿರುತ್ತೇನೆಂದು ಅದು ಹೇಳುತ್ತದೆ. ಈ ಪ್ರಪಂಚದ ವ್ಯವಸ್ಥೆಯೇ ಈ ರೀತಿ ಇದೆ. Naturally

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

the system is like that. Nobody can avoid it. We have to come and we have to go. Otherwise, this world will never tolerate our weight. ಅದಕ್ಕಾಗಿ ಬರುವುದು ಹೋಗುವುದು ನಡೆದೇ ಇರುತ್ತದೆ. ಆದರೆ, ಮುಂಬರುವ ದಿನಗಳು ಒಳ್ಳೆಯ ದಿನಗಳಾಗಿರಲಿ ಎಂದು ಆಶಿಸಿ, ತಾವು ಕೊಟ್ಟಂತಹ ಸಮಯದ ಉಪಯೋಗ ಮಾಡಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಸವರಾಜ ಪಾಟೀಲ ಇಟಗಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟದ್ದಕ್ಕಾಗಿ ಧನ್ಯವಾದಗಳು. ನಾನು ಹೆಚ್ಚು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಕೇವಲ 2–3 ವಿಷಯಗಳಾದ ನೀರಾವರಿ ಹಾಗೂ ಕೃಷಿಗೆ ಸಂಬಂಧಿಸಿದಂತೆ ಹೆಚ್ಚು ಒತ್ತು ಕೊಟ್ಟು ಮಾತನಾಡುವುದಕ್ಕೆ ಬಯಸುತ್ತೇನೆ. ಉತ್ತರ ಕರ್ನಾಟಕ ಭಾಗದಲ್ಲಿರತಕ್ಕಂಥ ಒಂದು ಮುಖ್ಯ ಸಮಸ್ಯೆಯೆಂದರೆ, ಅದು ನೀರಾವರಿ ಸಮಸ್ಯೆಯಾಗಿದೆ. ಈ ಭಾಗದಲ್ಲಿರತಕ್ಕಂಥ ಸಮಸ್ಯೆ ಬಗ್ಗೆ ಮಾನ್ಯ ಸೋಮಣ್ಣನವರು ಮತ್ತು ಮಾನ್ಯ ಹಿರಿಯ ಸದಸ್ಯರು ಬಹಳ ಮುಂದೆ ಉಲ್ಲೇಖ ಮಾಡಿದ್ದಾರೆ. ಜೀವ ನದಿ ಇರತಕ್ಕಂಥದ್ದು ಉತ್ತರ ಕರ್ನಾಟಕ ಭಾಗದಲ್ಲಿ ಎನ್ನುವುದು ಅಕ್ಷರಶಃ ನಿಜ. ಈ ಜೀವ ನದಿಗಳನ್ನು ಸಮರ್ಪಕವಾಗಿ ಈ ಭಾಗಕ್ಕೆ ಯಾವ ರೀತಿ ಬಳಕೆ ಮಾಡಿಕೊಳ್ಳುವುದರಲ್ಲಿ ನಾವು ವಿಫಲವಾಗಿದ್ದೇವೆ ಎನ್ನುವಂತಹ ಪ್ರಶ್ನೆಯೂ ಇದೆ. ತುಂಗಭದ್ರ ಜಲಾನಯನ ಪ್ರದೇಶ, ಗೋದಾವರಿ ಜಲಾನಯನ ಪ್ರದೇಶ ಇವುಗಳೆಲ್ಲವನ್ನೂ ಕೂಡ ಸಾಕಷ್ಟು ಪ್ರಮಾಣದಲ್ಲಿ ನೀರಾವರಿಗೆ ಒಳಪಡಿಸಿ ಕಾಲುವೆಗಳ ಮುಖಾಂತರ ರೈತರಿಗೆ ನೀರು ಒದಗಿಸುವಂತಹ ಕಾರ್ಯಕ್ರಮವನ್ನು ಈಗಾಗಲೇ ಮಾಡಲಾಗಿದೆ. ಇವತ್ತು ಕೃಷ್ಣಾ ನದಿ, ಭೀಮಾ ನದಿ, ತುಂಗಭದ್ರಾ ನದಿ, ಹಿಡಕಲ್ ಜಲಾಶಯ, ನವಿಲುತೀರ್ಥ ಜಲಾಶಯ, ಮಲಪ್ರಭ ನದಿ, ಘಟಪ್ರಭ ನದಿ, ಮುಲ್ಲಾಮಾರಿ ಮೇಲ್ದಂಡೆ ಯೋಜನೆ ಇವುಗಳೆಲ್ಲಾ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಇರತಕ್ಕಂಥ ನದಿಗಳು ಹಾಗೂ ಜಲಾಶಯಗಳಾಗಿವೆ. ಹಾಗೆಯೇ Upper Mullamari, Lower Mullamari, ಕಾರಂಜಾ, ಅಮರ್ಜಾ, ಬೆಣ್ಣೆತೊರಾ, ಗಂಡೋರಿನಾಲ ಇವೆಲ್ಲವೂ ಗೋದಾವರಿ ಜಲಾನಯನ ಪ್ರದೇಶದಡಿ ಇರತಕ್ಕಂಥ ನದಿಗಳಾಗಿದ್ದು, ಯಾವುದೇ ಸರ್ಕಾರವಿದ್ದರೂ ಕಳೆದ ೫೦–೬೦ ವರ್ಷಗಳಲ್ಲಿ ಅವುಗಳ ಯೋಜನೆಗಳನ್ನು ರೂಪಿಸತಕ್ಕಂಥ ಕೆಲಸ ಮಾಡಿದೆ. ನಮ್ಮ ವಿರೋಧ ಪಕ್ಷದ ನಾಯಕರು ಮಾತನಾಡುವಂತಹ ಸಂದರ್ಭದಲ್ಲಿ ಅದರ ಬಗ್ಗೆ ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ನಾನು ಅವರಿಗೂ ಕೂಡ ಹೇಳಿದ್ದೇನೆ. ಒಂದು ಸುದೈವವೆಂದರೆ ಕೃಷ್ಣಾ ಮೇಲ್ದಂಡೆ ಯೋಜನೆಯ ಅತ್ಯಂತ ಹೆಚ್ಚು ಪುನರ್ವಸತಿಗೆ ಇಡೀ ಜಗತ್ತಿನಲ್ಲಿ ಯಾರಾದರು ಹಣವನ್ನು ನೀಡಿದ್ದರೆ, ಅದು ಕರ್ನಾಟಕ ರಾಜ್ಯ. ಆಗಿನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾಲದಲ್ಲಿ ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಯಾವುದೇ ಸರ್ಕಾರ ಇರಬಹುದು. ಇಡೀ ಜಗತ್ತಿನಲ್ಲಿ highest rehabilitation compensation amount paid ಎಂದರೆ, ಅದು ಕರ್ನಾಟಕ ಮಾತ್ರ. ನಮ್ಮ ದೇಶದಲ್ಲಿ ಇಷ್ಟೊಂದು ದುಡ್ಡನ್ನು ಪುನರ್ವಸತಿಗೆ ಎಲ್ಲಿಯೂ ನೀಡಿರುವುದಿಲ್ಲ. ಆದರೂ ಒಂದು ಮಾತು ಏನೆಂದರೆ, ಮಾನ್ಯ ನಿರಾಣಿಯವರು ತಿಳಿಸಿರುವಂತೆ ಎರಡೂವರೆ ಲಕ್ಷ ರೂಪಾಯಿ, ಆರೂವರೆ ಲಕ್ಷ ರೂಪಾಯಿಗಳು ಎಂಬುವ ರೀತಿಯಲ್ಲಿ ಪುನರ್ವಸತಿಗೆ ಕೊಡುತ್ತಿದ್ದೇವೆಂದು ಹೇಳಿದ್ದರು. ಇವತ್ತು ಬಳ್ಳಾರಿ ವಿಮಾನ ನಿಲ್ದಾಣ ಮಾಡಬೇಕೆಂದರೆ ರೈತರು 25 ಲಕ್ಷ ರೂಪಾಯಿ ಕೊಡಿ ಎಂದು ಕೇಳಿದ್ದರು. ಆದರೂ ಆಗ ಇದ್ದಂಥ ಸರ್ಕಾರ 12 ಲಕ್ಷ ರೂಪಾಯಿ ಕೊಡುತ್ತೇವೆನ್ನುವ ಮಾತನ್ನು ಹೇಳಿತ್ತು. ಹಾಗಾಗಿ ಇವತ್ತಿನ ದಿನ ನಮ್ಮ ಸರ್ಕಾರದಲ್ಲಿ ಮನವಿ ಮಾಡುವುದೇನೆಂದರೆ, ರೈತರಿಗೆ ಎಷ್ಟೇ ಹಣವನ್ನು ನೀಡಿದ್ದರೂ ಸಹ ಅದು ಕಡಿಮೆಯೇ. ಏಕೆಂದರೆ ಒಂದು ಸಲ ಆ ರೈತರು ಹೊಲ ಕಳೆದುಕೊಂಡರೆ, ಅವರ ಜೀವನ ಮುಕ್ತಾಯವಾದ ಹಾಗೆ ಆಗುತ್ತದೆ. ಏಕೆಂದರೆ 4 ಎಕರೆ 5 ಎಕರೆ ಮಾರಾಟದ ಭೂಮಿಯಿಂದ 50 ಲಕ್ಷ ಹಣವನ್ನು ತೆಗೆದುಕೊಂಡು ಬೇರೆ ಊರಿಗೆ ಹೋಗಿ ಜೀವನ ಮಾಡಬೇಕಾಗುತ್ತದೆ. ಜೊತೆಗೆ 4-5 ಮಂದಿ ಮಕ್ಕಳು ಇದ್ದರೆ, ಅವರು ನಮಗೂ ಎರಡೆರಡು ಲಕ್ಷ ಕೊಡು ಎಂದು ತಂದೆ-ತಾಯಿಯವರ ಜೊತೆ ಜಗಳವಾಡುತ್ತಾರೆ. ಹಣವೂ ಹೇಗೆ ಬರುತ್ತದೆಯೋ ಹಾಗೆ ಹೋಗುತ್ತದೆ. ಜೀವನ ಮಾಡುವುದಕ್ಕೆ ಮನೆ-ಮಠ ಇರುವುದಿಲ್ಲ. ಬಂದಿರತಕ್ಕಂಥ ರೊಕ್ಕದ ವಿಷಯದಲ್ಲಿ ಜಗಳ ಜಾಸ್ತಿಯಾಗಿ, ಕೆಲಸ ಕಡಿಮೆಯಾಗುತ್ತದೆ. So, over a period of time, ಆ ಕುಟುಂಬವೇ ಖಲಾಸ್ ಆಗುವಂತಹ ಸನ್ನಿವೇಶ ಬರುತ್ತದೆ. ಅದಕ್ಕಾಗಿ ರೈತರಿಗೆ ಎಷ್ಟೇ ಹಣವನ್ನು ನೀಡಿದರೂ ಕಡಿಮೆಯೇ. ಇವತ್ತಿನ ದಿನ ಬೆಂಗಳೂರು ನಗರದಲ್ಲಿಯೇ ಭೂಸ್ವಾಧೀನ ಪಡಿಸಿಕೊಂಡರೆ, ಎಕರೆಗೆ ರೂ.50 ಲಕ್ಷ, ರೂ. 1 ಕೋಟಿ ಎಂದು ಹೇಳುತ್ತಾರೆ. ಅದೇ ರೀತಿ ನಮ್ಮ ಗ್ರಾಮಗಳಿರತಕ್ಕಂಥ ಭೂಮಿಯನ್ನು ಕೇಳಿದರೆ ಎಕರೆಗೆ ಎರಡು ಲಕ್ಷ, ಮೂರು ಲಕ್ಷ ಕೊಡುತ್ತೇವೆಂದು ಜಿಲ್ಲಾಧಿಕಾರಿಗಳೇ ಹೇಳುತ್ತಾರೆ. ಸಮಾಜ ಕಲ್ಯಾಣ ಇಲಾಖೆಯಿಂದ ಎಸ್.ಸಿ., ಮತ್ತು ಎಸ್.ಟಿ., ಜನಾಂಗದವರಿಗೆ ಭೂಮಿಯನ್ನು land grant ಮಾಡತಕ್ಕಂಥ ಕೆಲಸವನ್ನು ಮಾಡುತ್ತಿದ್ದೇವೆ. ನಮ್ಮ ಸರ್ಕಾರ ಇವತ್ತಿನ ಬೆಲೆಯ ಪ್ರಕಾರ ಸುಮಾರು 7 ಲಕ್ಷದಿಂದ 12 ಲಕ್ಷದವರೆಗೆ ಹಣವನ್ನು ಕೊಡುತ್ತಿದೆ. ಆದರೂ ಕೂಡ ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ನಮಗೆ ಬರತಕ್ಕಂಥ ಹಣವು ಕಡಿಮೆಯಿದೆ. ಆದರೆ, ಯಾವ ರೈತರನ್ನು ನಾವು ಬಿಟ್ಟಿಲ್ಲ, ವಕೀಲರ ಮುಖಾಂತರ ನಾವು ನ್ಯಾಯಾಲಯದ ಮೊರೆ ಹೋಗಿದ್ದೇವೆ. Initial payment ತೆಗೆದುಕೊಂಡು, ನ್ಯಾಯಾಲಯದಿಂದ ತೀರ್ಪು ಬರಬೇಕಾಗಿದೆ. ಇದಕ್ಕಾಗಿ ಸರ್ಕಾರ ಗಂಭೀರವಾಗಿ ಚಿಂತನೆ ಮಾಡತಕ್ಕಂಥ ವಿಷಯವಾಗಿದೆ. ಏಕೆಂದರೆ

519.6 meter ರಿಂದ 520 meter ಕ್ಕೆ ನಾವು ಏರಿಸಬೇಕೆಂದರೆ ಸುಮಾರು 55 ರಿಂದ 60 ಸಾವಿರ ಎಕರೆ ಜಾಗ ಬೇಕಾಗುತ್ತದೆ. We have to give compensation to those 60,000 acres. ಅಷ್ಟು ಹಣವನ್ನು ನಾವು ಭರಿಸಬೇಕಾಗಿದೆ. ನನ್ನ ಒಂದು ಕಳಕಳಿಯೇನೆಂದರೆ ಇವತ್ತು ಉತ್ತರ ಕರ್ನಾಟಕ ಭಾಗದಲ್ಲಿರತಕ್ಕಂಥ ಎಲ್ಲಾ ಸಮಸ್ಯೆಯನ್ನು ನಾವು ಚರ್ಚೆ ಮಾಡುತ್ತಿದ್ದೇವೆ. ಪ್ರಮುಖವಾಗಿ ನಾನು ಸರ್ಕಾರಕ್ಕೆ ವಿನಂತಿಸಿಕೊಳ್ಳುವುದೇನೆಂದರೆ ಕನಿಷ್ಠ 25% ಇರತಕ್ಕಂಥ ಬಜೆಟ್ ಏನಿದೆ, ಅದನ್ನು ಕೃಷ್ಣಾ ಮೇಲ್ದಂಡೆ ಯೋಜನೆಗೆ ಇಡತಕ್ಕಂಥದ್ದಾಗಿದೆ. ಆದರೆ ಇಟ್ಟಿರತಕ್ಕಂಥದ್ದು ಬೇರೆ ಕಡೆ ಕಡಿಮೆಯಾಗುತ್ತಾ ಹೋಗುತ್ತದೆ. ಹಾಗಾಗಿ ಕೆಲಸವನ್ನು ತ್ವರಿತಗತಿಯಲ್ಲಿ ಮಾಡಿದಾಗ ಇವತ್ತು ನಾವು 1 ಎಕರೆಯಲ್ಲಿ 5 quintal ಬೆಳೆಯುವ ಬದಲು, 1 ಎಕರೆಯಲ್ಲಿ 40 quintal ಭತ್ತ ಬೆಳೆಯುತ್ತಿದ್ದೇವೆ. 1 ಎಕರೆ ಭೂಮಿಯಲ್ಲಿ 25 quintal ಹತ್ತಿ ಬೆಳೆಯುತ್ತಿದ್ದೇವೆ. ಆಗ ಬರತಕ್ಕಂಥ difference tax ಏನಿದೆ, ಅದು ತಕ್ಷಣವೇ ಸರ್ಕಾರಕ್ಕೆ returns ಬರುತ್ತದೆ. ಇವತ್ತು ರಾಜ್ಯ ಸರ್ಕಾರ ಎಷ್ಟು ಹಣವನ್ನು invest ಮಾಡುತ್ತದೆ, ತಕ್ಷಣವೇ ನೀರನ್ನು ಕೊಟ್ಟಾಗ ಮುಂಬರುವ ವರ್ಷದಿಂದಲೇ ತೆರಿಗೆ ಮುಖಾಂತರ ನಮ್ಮ ಸರ್ಕಾರಕ್ಕೆ ಆದಾಯ ಬರುತ್ತದೆ. ನೀರಾವರಿ ಪ್ರದೇಶದಲ್ಲಿ ಸಾಕಷ್ಟು ಒಳ್ಳೆಯ ಫಸಲನ್ನು ನೋಡುತ್ತಿದ್ದೇವೆ. 1 ಎಕರೆ ಪ್ರದೇಶದಲ್ಲಿ 40 quintal ಭತ್ತ ಬೆಳೆಯುತ್ತೇವೆ. 1 ಎಕರೆಗೆ ಸುಮಾರು 25 quintal ಹತ್ತಿ ಬೆಳೆಯುತ್ತೇವೆ. 1 ಎಕರೆ ನೀರಾವರಿ ಪ್ರದೇಶದಲ್ಲಿ ತೊಗರಿಯನ್ನು ಬೆಳೆದರೆ ಸುಮಾರು 10 ರಿಂದ 12 quintal ಬೆಳೆಯುತ್ತೇವೆ. ಯಾವುದೇ ಬೆಳೆಯನ್ನು ಬೆಳೆದರೂ ಒಳ್ಳೆಯ ಫಸಲನ್ನು ನಾವು ಕಾಣುವುದನ್ನು ನೋಡುತ್ತೇವೆ. ಹಾಗಾಗಿ basically, we should improve irrigation facilities. ಇವತ್ತು ಇರತಕ್ಕಂಥ ಪ್ರತಿಯೊಂದು ಹನಿ ನೀರು ಕೂಡ ಬಹಳ ಮುಖ್ಯವಾಗಿದೆ. ಈ ವಿಚಾರದಲ್ಲಿ ಜಗಳವಾಗುತ್ತಿರುವುದನ್ನು ಸಾಕಷ್ಟು ದಿನಪತ್ರಿಕೆಯಲ್ಲಿ ನೋಡುತ್ತಿದ್ದೇವೆ. ನಮ್ಮ ಭಾಗದಲ್ಲಿಯೂ Narayanapura Right Bank Canal ಎಂದಿದೆ. This was formed by the Government from 0 kms to 95 kms under 'A' Scheme in the I Stage, I Phase. Distributaries 1 to 18 were created between 0 kms to 95 kms, coming under 'A' Scheme in the I Stage, I Phase. Distributaries ಮಾಡಿ ಇವತ್ತು ಸುಮಾರು 15 ವರ್ಷಗಳಾಗಿದೆ. ಇವತ್ತಿನವರೆಗೂ ಸಹ ಸರಿಯಾಗಿ ಪ್ರತಿಯೊಂದು ಕಾಲುವೆಗೂ ನೀರು ಹರಿಯುತ್ತಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1141)/21.11.2017/7.00/ಎಸ್‌ಕೆ–ಜಿಆರ್

ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಮುಂದು:–

ಮೊದಲನೆಯದಾಗಿ ನಾವು ಉತ್ತರ ಕರ್ನಾಟಕ ಭಾಗದ ಬಗ್ಗೆ ಗಮನ ಹರಿಸಬೇಕೆಂದರೆ, ದಿನ ಮುಂಜಾನೆಯಾದರೆ ಹೊಸ ಯೋಜನೆಯನ್ನು ಕೊಡಿ, ಈ water allocation ಕೊಡಿ ಎನ್ನುವುದಕ್ಕಿಂತ ಮೊದಲು ಇವತ್ತಿನವರೆಗೂ ಎಷ್ಟು ಹಣವನ್ನು ಕೊಟ್ಟಿದ್ದೇವೆಂಬುದರ ಬಗ್ಗೆ ಸಂಪೂರ್ಣವಾಗಿ ನೀರು ಕೊಡುವುದಕ್ಕೆ ಮೊದಲು ಆದ್ಯತೆ ಕೊಡಬೇಕು. ತುಂಗಭದ್ರಾ ಯೋಜನೆಯ ಬಗ್ಗೆ ನೋಡಿದರೆ, ಇವತ್ತು 1½ ಲಕ್ಷ ಎಕರೆ suffering ಅಚ್ಚುಕಟ್ಟಾಗಿದೆ. ರಾಯಚೂರು, ಮಾನ್ವಿ ತಾಲ್ಲೂಕಿರಬಹುದು. ಕೆಲವು ಭಾಗವಾದ ಸಿಂದನೂರು ತಾಲ್ಲೂಕಿರಬಹುದು. ಇಲ್ಲಿ suffering ಅಚ್ಚುಕಟ್ಟಾಗಿದೆ. ಇಲ್ಲಿ ಸೇತುವೆಯಾಗಿ ಇವತ್ತಿಗೆ ಸುಮಾರು 50 ವರ್ಷಗಳಾಗಿದೆ. ಹಿಂದಿನ ಕಾಲದಲ್ಲಿ tail end ವರೆಗೆ ನೀರು ಮುಟ್ಟುತ್ತಿತ್ತು. ಇವತ್ತು ಏಕೆ ನೀರು ಮುಟ್ಟುತ್ತಿಲ್ಲವೆಂದರೆ, ನಾವು ಸಿಂಗಟನೂರು, ಭದ್ರ ಡ್ಯಾಂ ಮಾಡಿದ್ದೇವೆ. ಅದರ ಮೇಲೆ allotment ಮಾಡಿಕೊಳ್ಳುತ್ತಾ ಹೋದಾಗೆಲ್ಲಾ ನೀರು ಕಡಿಮೆಯಾಗುತ್ತಾ ಹೋದರೆ, ಇನ್ನೊಂದು ಕಡೆ ಹೂಳು ತುಂಬುವಂತಹ ಕೆಲಸವಾಗಿದೆ. ಇವತ್ತು ತುಂಗಭದ್ರಾ ಡ್ಯಾಂನಲ್ಲಿ ಸುಮಾರು 33 ಟಿ.ಎಂ.ಸಿ., ಯಷ್ಟು ಹೂಳು ತುಂಬಿರುವಂಥದ್ದನ್ನು ನಾವು ನೋಡುತ್ತಿದ್ದೇವೆ. ಮೊದಲು ಅವರಿಗೆ ಎಲ್ಲಿ ನೀರು ಕೊಡುತ್ತಿದ್ದೇವೆ, ಅವರಿಗೆ ಏಕೆ ನೀರು ಇಲ್ಲ. ಅವರಿಗೆ ಯಾವ ರೀತಿಯಿಂದ ನೀರನ್ನು ಒದಗಿಸಬೇಕು ಎಂಬುದನ್ನು ವಿಚಾರ ಮಾಡಿ ಈಗಾಗಲೇ ನಾವು infrastructure ನ್ನು ಅಭಿವೃದ್ಧಿ ಮಾಡಿದ್ದೇವೆ. ರೈತರಿಗೆ ಯಾವ ರೀತಿ ನೀರಾವರಿ ಮಾಡಬೇಕೆಂಬುದರ ಬಗ್ಗೆ ಅನುಭವವಿದೆ. ಉತ್ತರ ಕರ್ನಾಟಕದಲ್ಲಿರುವಂತಹ ಸಮಸ್ಯೆಗಳ ಬಗ್ಗೆ ಮೊದಲ ಆದ್ಯತೆ ಕೊಟ್ಟು ಹೆಚ್ಚಿನ ಗಮನಹರಿಸಿ, ಒತ್ತು ಕೊಟ್ಟು ಕೆಲಸ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಮಾನ್ಯ ಸಭಾಪತಿಯವರೆ, ನಾವು ಯಾವ ಭಾಗದಲ್ಲಿ ನೀರಾವರಿ ಸೌಲಭ್ಯವನ್ನು ಮಾಡುತ್ತೇವೆ. ಪ್ರಮುಖವಾಗಿ ಆ ಭಾಗದಲ್ಲಿ ಇನ್ನು ಒಂದೆರಡು ಮೂರು ವಿಷಯಗಳಲ್ಲಿ ಹೆಚ್ಚು ಒತ್ತು ಕೊಡುವಂಥ ಅವಶ್ಯಕತೆ ಇದೆ. ಇವತ್ತು ನೀರಾವರಿ ಅಭಿವೃದ್ಧಿ ಮಾಡುತ್ತೇವೆ. ಆ ಹೊಲಕ್ಕೆ ಹೋಗುವುದಕ್ಕೆ ದಾರಿ ಇಲ್ಲದಿದ್ದರೆ ಏನು ಮಾಡಬೇಕು ಎನ್ನುವುದು ಕೂಡ ಅಷ್ಟೇ ಮುಖ್ಯವಾಗಿದೆ. ಇವತ್ತು ಅಚ್ಚುಕಟ್ಟು ರಸ್ತೆಗಳನ್ನು ನಿರ್ಮಿಸುವಂಥದ್ದನ್ನು ನಾವು ಮಾಡಬೇಕಾಗುತ್ತದೆ. ಏಕೆಂದರೆ ನಾವು 10–20 ಲಕ್ಷ ಎಕರೆಗಟ್ಟಲೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೀರಾವರಿ ಸೌಲಭ್ಯವನ್ನು ಕೊಟ್ಟ ನಂತರ, ರೈತರು ಬೆಳೆದಂತಹ ಬೆಳೆಯನ್ನು ಮಾರುಕಟ್ಟೆಗೆ ತರಲು ರಸ್ತೆ ಸೌಲಭ್ಯ ಮಾಡದೇ ಇದ್ದರೆ, ಅವರು ತಾವು ಬೆಳೆದಂತಹ ಆಹಾರ ಧಾನ್ಯ, ಹಣ್ಣು ತರಕಾರಿ ಮುಂತಾದವುಗಳನ್ನು ಎಲ್ಲಿಗೆ ಮಾರಾಟ ಮಾಡಲು ಎಲ್ಲಿಗೆ ತೆಗೆದುಕೊಂಡು ಹೋಗುತ್ತಾರೆ? ಇವತ್ತಿನ ದಿವಸ ರೈತರು ತಲೆ ಮೇಲೆ ಹೊತ್ತುಕೊಂಡು ಬರುವಂತಹ ಪರಿಸ್ಥಿತಿ ಕೂಡ ಇಲ್ಲ. ನಾವು ಸಣ್ಣವರಿದ್ದಾಗ, ಒಬ್ಬ ಮನಷ್ಯ ಒಂದು ಕ್ವಿಂಟಾಲ್‌ನ್ನು ತನ್ನ ತಲೆಯ ಮೇಲೆ ಇಟ್ಟುಕೊಂಡು ಮನೆವರೆಗೆ ತಂದು ಹಾಕಿ ಬರುತ್ತಿದ್ದನು. ಇವತ್ತಿನ ದಿವಸ 25 ಕೆ.ಜಿ. ಪ್ಯಾಕಿಂಗ್ ಬ್ಯಾಗ್ ಇದ್ದರೆ ಮಾತ್ರ, ಅವನು ಹಿಡಿದುಕೊಂಡು ಹೋಗುತ್ತಾನೆಯೇ ಹೊರತು, 50 ಕೆ.ಜಿ. ಬ್ಯಾಗ್ ಇದ್ದರೂ ಹೊರುವಂತಹವರು ಯಾರು ಸಿಗುವುದಿಲ್ಲ. ಆ ಪರಿಸ್ಥಿತಿ ನಿರ್ಮಾಣವಾಗಿದೆ. ಅದಕ್ಕೆ transport facilities create ಮಾಡುವಂಥದ್ದು ಬಹಳ ಅವಶ್ಯಕವಾಗಿದೆ. ಈ ಅಚ್ಚುಕಟ್ಟು ರಸ್ತೆ ಮಾಡುವಂಥದ್ದು ಕೂಡ ಬಹಳ ಹೆಚ್ಚಿನದಾಗಿದೆ. ಈ ಹಿಂದೆ Upper Krishna Project ನಲ್ಲಿ ಮೊದಲಿಗೆ S.B.C., (Shahapur Branch Canal), J.B.C., (Jewargi Branch Canal), I.B.C., (Indi Branch Canal), M.B.C., (Mudbal Branch Canal), ಕಾಲುವೆ ಹೊಳೆಯಲ್ಲಿ ಸ್ವಲ್ಪ ಮಟ್ಟಿಗೆ ಅಚ್ಚುಕಟ್ಟು ರಸ್ತೆ ಮಾಡಿ, ಅಲ್ಲಿಗೆ ನಿಲ್ಲಿಸುವಂತಹ ಕೆಲಸವಾಗಿದೆ. ನಾವು ನೀರಾವರಿ ಸಚಿವರಾದಂತಹ ಮಾನ್ಯ ಎಂ.ಬಿ. ಪಾಟೀಲ್‌ರವರ ಗಮನಕ್ಕೆ ತಂದಿದ್ದೇವೆ. Tungabhadra Project ಮತ್ತು Upper Krishna Project ಮಾಡಿರುವಂತಹ ಅಚ್ಚುಕಟ್ಟು ರಸ್ತೆಗಳು ಸಹ ಈಗ ಹಾಳಾಗಿವೆ. ಅವರು ಪುನಃ ರಿಪೇರಿ ಮಾಡಬೇಕು. ರೈತರು ಹೊಲಕ್ಕೆ ಹೇಗೆ ಹೋಗಬೇಕು? ಅದೊಂದು ದೊಡ್ಡ ಸಮಸ್ಯೆಯಾಗಿದೆ. ಮುಂದಿನ ದಿನಗಳಲ್ಲಿ ಏಕೆಂದರೆ ನಮ್ಮ ಏರಿಯಾ deep black cotton soil ಇರುವಂತಹದು. ಇವತ್ತು every five to eight years ಒಳಗೆ, ಅದನ್ನು ರಿಪೇರಿ ಮಾಡಬೇಕು. ಇಲ್ಲವಾದರೆ ಅದನ್ನು renovation ಮಾಡಿದಾಗ ಮಾತ್ರ ಆ road ನ standard ಉಳಿಯುತ್ತದೆ, ಇಲ್ಲವಾದರೆ standard ಉಳಿಯುವಂತಾಗುವುದಿಲ್ಲ. ನಾವು ಮೈಸೂರಿನ ಕಡೆಗೆ ಹೋಗಿದ್ದೇವೆ. ಆ ಪ್ರದೇಶ ಬರೀ ಕೆಂಪು ಮಣ್ಣಿನಿಂದ ಕೂಡಿದೆ. ಒಂದು ಬಾರಿ ರಸ್ತೆ ಮಾಡಿದರೆ ಸುಮಾರು ಹದಿನೈದು-ಇಪ್ಪತ್ತು ವರ್ಷಗಳ ಕಾಲ ಉಳಿಯುತ್ತದೆ. Atleast portable ಇರುತ್ತದೆ. ನಮ್ಮಲ್ಲಿ ಒಂದು ಸಲ ಮಳೆ ಬಂತು ಎಂದರೆ, ರಸ್ತೆಗಳು unportable ಆಗಿ ಬಿಡುತ್ತದೆ. ಇವತ್ತು ಅಂತಹ project area ದಲ್ಲಿ ಇದೆ. ಅದನ್ನು ಕೂಡ ಗಂಭೀರವಾಗಿ ಚಿಂತನೆ ಮಾಡುವಂಥದ್ದರ ಬಗ್ಗೆ ಸರ್ಕಾರ ಇನ್ನು ಹೆಚ್ಚಿನ ಒತ್ತು ಕೊಡಬೇಕೆಂದು ಹೇಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಇವತ್ತು ಸುಮಾರು ೨ ಲಕ್ಷ ಎಕರೆಗೆ ಮೂರನೇ ಹಂತ ನೀರು ಕೊಟ್ಟಿಲ್ಲವೆಂದು ಹೇಳಿದರು. ಆದರೆ ನಾನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಬಯಸುವುದೇನೆಂದರೆ, ಈ ಹಿಂದೆ Upper Krishna Project ಅಡಿಯಲ್ಲಿ 0 to 95 kms ಗಳವರೆಗೆ N.B.C., S.B.C., ಮಾಡುವುದಕ್ಕೆ ನಮ್ಮಲ್ಲಿ ನೀರಿನ ಹಂಚಿಕೆ ಏನಿತ್ತು. ಆಗ ತೆಲಂಗಾಣ ಮತ್ತು ಆಂಧ್ರ ಒಂದಾಗಿತ್ತು. There was no order passed by the Bachawath Commission in respect of the excess water allotment to the three riparian states. ಆಂಧ್ರಪ್ರದೇಶದವರು ಏನು ಮಾಡಿದರು ಎಂದರೆ, ತಮ್ಮ ಪಾಲಿಗೆ ಬರುವಂತಹ ನೀರಿನ ಪ್ರಮಾಣವನ್ನು ಅಂದಾಜು ಮಾಡಿ, ಒಂದು ನೂರು ಟಿ.ಎಂ.ಸಿ ಹೆಚ್ಚು ಕಡಿಮೆ ಮಾಡಿ, ಆಗಲೇ projects ಗಳನ್ನು ಮಾಡಿದರು. ಆದರೆ ಮಾನ್ಯ ಸಿದ್ದರಾಮಯ್ಯನವರ ಕಾಂಗ್ರೆಸ್ ಪಕ್ಷದ ಸರ್ಕಾರ, ಇವತ್ತು ಮೂರನೇ ಹಂತದ ಕೆಲಸವನ್ನು ಕೈಗೆತ್ತಿಕೊಳ್ಳುವಂತಹ ಕೆಲಸವನ್ನು ಮಾಡುತ್ತಿದೆ. ಇವತ್ತು ಆ project ನಲ್ಲಿ ಸುಮಾರು ೨ ಲಕ್ಷ ಕೊಡುತ್ತೇವೆಂದು ಹೇಳಿ 524 meter ಏರಿದ ತಕ್ಷಣ, ಅವೆಲ್ಲಾ ಒಂದೇ ದಿವಸದೊಳಗೆ ನೀರಾವರಿಯಾಗುವಂತಹ ಕೆಲಸವಾಗುತ್ತಿದೆ. ಇದನ್ನು ದೂರದೃಷ್ಟಿಯಿಟ್ಟುಕೊಂಡು, ಈ ಸರ್ಕಾರ ಇವತ್ತು ಉತ್ತರ ಕರ್ನಾಟಕಕ್ಕೆ ಮತ್ತು ಬಳ್ಳಾರಿಯಿಂದ ಬಾಗಲಕೋಟೆಗೆ ಪಾದಯಾತ್ರೆಯನ್ನು ಕೈಗೊಳ್ಳುವುದಾಗಿ ಏನು ಹೇಳಿದರೋ, ಅದರ ಪ್ರಕಾರ ಇವತ್ತು ಸುಮಾರು ೬೦ ಸಾವಿರಕ್ಕೂ ಹೆಚ್ಚು ಕೋಟಿ ರೂಪಾಯಿಗಳನ್ನು ನೀಡುವಂತಹ ಕೆಲಸ ಮಾಡಿದ್ದಾರೆ. ಆದರೂ ಕೂಡ ಸಾಕಷ್ಟು ಹಣ ಕಡಿಮೆಯಿದೆ. ಪ್ರತಿ ವರ್ಷ ಸುಮಾರು ೫೦ ಸಾವಿರ ಕೋಟಿ ರೂಪಾಯಿಗಳನ್ನು North Karnataka ದ irrigation projects ಇಟ್ಟರೂ ಕೂಡ ಕಡಿಮೆಯಾಗುವಂತಹದು ಕೂಡ ಇವತ್ತು ಇದೆ. ಅಷ್ಟು ಕೂಡ ನಮ್ಮ ಜೀವ ನದಿಗಳು. ಮಾನ್ಯ ಕೃಷಿ ಮಂತ್ರಿಗಳು ಹೇಳಿದರು. ರೈತರಿಗೆ irrigation ಗೆ potential ಇರುವಂತಹದು ಈ ಭಾಗ. ಅದನ್ನು ಅಭಿವೃದ್ಧಿಪಡಿಸಿದಾಗ automatically ಈ ಭಾಗದ ಜನರ ಜೀವನ ಮಟ್ಟ increase ಆಗುತ್ತದೆ. ಇವತ್ತು ರಾಜ್ಯಕ್ಕೆ ಹೆಚ್ಚು revenue ಬರುತ್ತದೆಂಬುದನ್ನು ನಾವು ಕಾಣಬಹುದು. ಇದಕ್ಕೆ ಹೆಚ್ಚು ಒತ್ತು ಕೊಡಬೇಕೆಂಬುದು ನಮ್ಮ ಆಶಯವಾಗಿದೆ.

ಮಾನ್ಯ ಸಭಾಪತಿಯವರೆ, land acquisition process ಬಗೆ ಹೇಳಬೇಕೆಂದರೆ, ಇವತ್ತು ಯಾವುದೇ project ಗಳನ್ನು ಕೈಗೆತ್ತಿಕೊಂಡಾಗ, ಇಂತಹ project ಗಳಿಗೆ ಸುಮಾರು ಸಾವಿರ ಎಕರೆ, ಎರಡು ಸಾವಿರ ಎಕರೆ, ಈ ರೀತಿ ಸುಮಾರು ಹತ್ತು ಸಾವಿರ ಎಕರೆಗಳವರೆಗೆ land acquisition

ಮಾಡಬೇಕಾಗುತ್ತದೆ. ಈ land acquisition process ಏನಿರುತ್ತದೆ, ಅದೇ ಅರ್ಧ ಜೀವ ತಿಂದುಬಿಡುತ್ತದೆ. ಇವತ್ತು project cost Rs.150 crores ಇತ್ತು ಎಂದು ತಿಳಿದುಕೊಳ್ಳಿ. ಆ land clearance ಆಗಬೇಕೆಂದರೆ, three years ಬೇಕು. ಏಕೆಂದರೆ, Notifications under Section 4(1), 6(1), 9, 9A, 12(1) and 12B of the Land Acquisition Act ಆಗಬೇಕು. ನಂತರ final award ಆಗಬೇಕು. ಈ ಸ್ಟೇಜ್ ಮಟ್ಟಬೇಕಾದರೆ it takes a minimum period of three years. Award ಆದಮೇಲೆ ರೈತರು ಏನು ಹೇಳುತ್ತಾರೆಂದರೆ ನೀವು ಕೊಡುವಂತಹ compensation ನಮಗೆ ಸರಿಯಿಲ್ಲ ಎಂದು ಅವರು objection ಮಾಡಿ, initial ಹಣವನ್ನು ತೆಗೆದುಕೊಳ್ಳುತ್ತಾನೆ. So, ಈ process ಏನಿದೆ ಎಂದರೆ, ನಮ್ಮ ಭಾಗ ಅಥವಾ ಬೇರೆ ಭಾಗವಿರಬಹುದು, ನಮ್ಮ ರಾಜ್ಯದಲ್ಲಿ ಒಂದು project ಮಾಡಬೇಕಾದರೆ, if it involves land acquisition, ಆ land acquisition process ನ ಕಡಿತ ಮಾಡುವಂತಹ ಕೆಲಸವನ್ನು ಮಾಡಬಹುದು. ಅದರ ಸರಳೀಕರಣವಾಗಬೇಕು. Land Acquisition ಗೆ ಒಂದು ಪ್ರತ್ಯೇಕ ಕಛೇರಿ ಇರಬೇಕು. ಒಂದು ವೇಳೆ ರೈತರು ಕೂಡ ಒಡಂಬಡಿಕೆಯಿಂದ ಕೊಡುತ್ತಿದ್ದರೆ, ಅದು ಆ ತರಹ ಮಾಡಿಕೊಳ್ಳಬೇಕು. ಇಲ್ಲದೇ ಇದ್ದರೆ ಅವರಿಗೆ ಕರೆಯಿಸಿ, ಕೂರಿಸಿ ರೈತರ ಜೊತೆ ಮಾತನಾಡಿ, ಒಂದು amicable settlement ಆದರೂ ಮಾಡಬೇಕು. ಇಲ್ಲವಾದರೆ, Land Acquisition Act ನ Section 4(1), 6(1) ಮುಂತಾದ ಸೆಕ್ಷನ್‌ಗಳ ಅಡಿಯಲ್ಲಿ notifications ಗಳನ್ನು ಹೊರಡಿಸಲಾಗುವ ಆ process ಏನಿದೆ, ಅದನ್ನು ನಾವು ಕಡಿಮೆ ದಿವಸಗಳಲ್ಲಿ ಮಾಡತಕ್ಕದ್ದು ಒಳ್ಳೆಯದು. ಒಂದು ಸಾವಿರ ಕೋಟಿ ರೂಪಾಯಿಗಳ ಪ್ರಾಜೆಕ್ಟ್‌ನ್ನು ಪ್ರಾರಂಭ ಮಾಡಿದರೆ, ಅದು ಒಂದು ವರ್ಷ delay ಅಯಿತು ಎಂದರೆ, it should be escalated by 20%. 12 ನೂರು ಕೋಟಿ ರೂಪಾಯಿಗಳಾಗುತ್ತದೆ. ನಂತರ ಆಫೀಸಿನವರು ಒಂದೇ ವರ್ಷದಲ್ಲಿ ಮಾಡಿದರು ಎಂದರೆ, ಅದನ್ನು ಅಂದಾಜು ಮಾಡಿ, D.P.R., ಮಾಡಿ. ಟೆಂಡರ್ ಮಾಡಿ process ಮಾಡುವುದಕ್ಕೆ again it takes one more year. So, totally it takes two years. ಸಾವಿರ ಕೋಟಿಯ ಅಂದಾಜಿನ ಪ್ರಾಜೆಕ್ಟ್ ಮುಂದೆ ಹದಿನಾಲ್ಕು ನೂರು ಕೋಟಿ ರೂಪಾಯಿಗಳ ಪ್ರಾಜೆಕ್ಟ್ ಆಗುತ್ತದೆ. ಹೀಗಾಗಿ ಎಲ್ಲಾ ಪ್ರಾಜೆಕ್ಟ್‌ಗಳು ಕೂಡ ಇವತ್ತು ಐದುನೂರು ಕೋಟಿಗೆ ಪ್ರಾರಂಭವಾದವುಗಳು. ಐದು ಸಾವಿರ ಕೋಟಿಗೆ ಹೋಗಿದೆ. ಹತ್ತು ಸಾವಿರ ಕೋಟಿಗೆ ಪ್ರಾರಂಭವಾಗಿ ಒಂದು ಲಕ್ಷ ಕೋಟಿಗೆ ಹೋಗುತ್ತಿರುವುದನ್ನು ನಾವು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೋಡುತ್ತಿದ್ದೇವೆ. ಇದರ ಬಗ್ಗೆ ಹೆಚ್ಚಿನ ಗಮನ ಸರ್ಕಾರ ಕೊಡುವಂತಹ ಕೆಲಸವಾಗಬೇಕೆಂದು ನಾನು ಅತ್ಯಂತ ಕಳಕಳಿಯಿಂದ ವಿನಂತಿಸುತ್ತೇನೆ.

ಮಾನ್ಯ ಸಭಾಪತಿಯವರೆ, ರೈತರಿಗೆ ಕೊಡುವಂತಹ compensation ನಲ್ಲಿಯೂ ಕೂಡ ಸರ್ಕಾರ ಏನೊಂದು ಮೃದು ಧೋರಣೆ ತೋರಿ, ಅದಷ್ಟು ಹೆಚ್ಚಿಗೆ ರೈತರಿಗೆ ಕೊಡುವಂತದ್ದನ್ನು ಮಾಡಿದಾಗ ಮಾತ್ರ, ಆ ರೈತರು ಕೃಷಿಯ ಜಮೀನುಗಳನ್ನು ಬಿಟ್ಟುಕೊಡುವಂತಹ ಕೆಲಸವಾಗಬೇಕೆಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನೀರಾವರಿ ಬಗ್ಗೆ ನನಗೆ ತಿಳಿದ ಮಟ್ಟಿಗೆ ಸ್ವಲ್ಪ ಬೆಳಕನ್ನು ಚೆಲ್ಲಿದ್ದೇನೆ.

ನೀರಾವರಿಗೆ ಸಂಬಂಧಪಟ್ಟಂತೆ ಮತ್ತೊಂದು ವಿಚಾರವೇನೆಂದರೆ, ಪ್ರತಿಯೊಂದು ಗ್ರಾಮ, ಹೊಬಳಿ, ಏರಿಯಾ, ಊರಿನಲ್ಲಿಯೂ ಸಹ ಸಾಧ್ಯವಾದಷ್ಟು ನೀರಾವರಿ ಅನುಕೂಲ ಮಾಡಿಕೊಡಬೇಕೆಂಬ ಒಂದು ಕೂಗು ಇದೆ. ಇಂತಹ ಸಮಯದಲ್ಲಿ ನಮ್ಮ ಸರ್ಕಾರಗಳು ಕೂಡ ಹನಿ ನೀರಾವರಿ ಯೋಜನೆಗೆ ಹೋಗುವಂತಹ ಕೆಲಸ ಮಾಡಿದೆ. ಹನಿ ನೀರಾವರಿಗೆ ಪ್ರೋತ್ಸಾಹ ಕೊಡುವಂತಹ ಕೆಲಸವಾಗಬೇಕು. ಇವತ್ತು ರೈತರು Agriculture Department office ಗೆ ಹೋಗುತ್ತಾರೆ. ಅಲ್ಲಿ General category ಗೆ 50% subsidy, SC/ST category ಗೆ 90% subsidy ಇದೆ. ಮಾನ್ಯ ಕೃಷಿ ಸಚಿವರು ಇಲ್ಲಿಯೇ ಇದ್ದಾರೆ. ಯಾರು ಕೇಳುತ್ತಾರೋ ಅವರಿಗೆ ಮೊದಲು free ಕೊಟ್ಟು ಬಿಡಬೇಕು. One drop of water saved amounts to saving one bag of paddy. ಅವರು ಒಂದೇ ಒಂದು ಹನಿ ನೀರು ಉಳಿಸಿದರೆ, ಒಂದು ಚೀಲ ಭತ್ತ ಉಳಿಸಿದಂತೆ. ಇದು ಇರುವಂತಹ ಪರಿಸ್ಥಿತಿ. ಇವತ್ತು ಸುಮಾರು ನಾಲ್ಕು ನೂರು ಮಂದಿಗೆ ಊಟ ಹಾಕುವಂತಹ ಒಂದು ಚೀಲ ಭತ್ತವನ್ನು ಅಕ್ಕಿ ಮಾಡಿದಾಗ, ನಾಲ್ಕು ನೂರು ಮಂದಿ ಊಟ ಮಾಡುತ್ತಾರೆ. ಒಂದೇ ಹನಿ ನೀರಿಗೆ ಬೆಳೆಯುವಂತಹದು, ಅಂತಹ ಒಂದು capacity ಇದೆ. ಮಾನ್ಯ ಕೃಷಿ ಮಂತ್ರಿಗಳನ್ನು ನಾನು ಕೇಳುವುದೇನೆಂದರೆ, ನಮ್ಮ ಭಾಗದಲ್ಲಿ ಕೃಷಿ ಹೊಂಡಗಳನ್ನು ಮಾಡಿದ್ದಾರೆ.

(ಮುಂದು...)

(1142)21.11.2017/7.10,ಬಿಸಿಹೆಚ್/ಎಂಡಿ

ಶ್ರೀ ಬಸವರಾಜ ಪಾಟೀಲ್ ಇಟಗಿ (ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾವು free implements ಕೊಡುತ್ತೇವೆ, ಆಮೇಲೆ ಹನಿ ನೀರಾವರಿ ಪದ್ಧತಿಗೆ implements ಕೊಡುತ್ತೀವಲ್ಲಾ ಅವುಗಳನ್ನೆಲ್ಲಾ free ಆಗಿ ಕೊಡತಕ್ಕಂಥ ಕೆಲಸ ಆಗಬೇಕು. ನೀವು ಇವತ್ತಿನ ದಿವಸ ೨೦೦ ರೂಪಾಯಿಗಳು, ೫೦೦ ರೂಪಾಯಿಗಳನ್ನು minimum price Er. That is worth. ಇವತ್ತಿನ ದಿವಸ ಏನೆಂದರೆ, tractor implements ಗೆ ಒಂದೊಂದು ಏರಿಯಾದಲ್ಲಿ ಬಾಡಿಗೆ ತೆಗೆದುಕೊಳ್ಳುವುದಕ್ಕೆ ಇಡುತ್ತಾರೆ. ಏಕೆಂದರೆ, ಆ ಬಾಡಿಗೆ ತೆಗೆದುಕೊಳ್ಳುವುದಕ್ಕೆ ನಮಗೆ ಬೇಕಾದಾಗ implements ಸಿಗುವುದಿಲ್ಲ. ಅವರ ಬಳಿ ಯಂತ್ರೋಪಕರಣ ಖಾಲಿ ಇದ್ದಾಗ, ನಮಗೆ ಬೇಕಾಗಿರುವುದಿಲ್ಲ.

ಉಪ ಸಭಾಪತಿಯವರು:– ಮಾನ್ಯ ಬಸವರಾಜ ಪಾಟೀಲ್ ಇಟಗಿಯವರೇ, ತಾವು ಬೇಗ ಮಾತನಾಡಿ ಮುಗಿಸಬೇಕು.

ಶ್ರೀ ಬಸವರಾಜ ಪಾಟೀಲ್ ಇಟಗಿ:– ಮಾನ್ಯ ಸಭಾಪತಿಯವರೇ, ಸ್ವಲ್ಪ ಸಮಯಾವಕಾಶ ಕೊಡಿ. ಇನ್ನೊಂದು 10–15 ನಿಮಿಷಗಳ ಮಾತಾಡಲು ಅವಕಾಶ ಕಲ್ಪಿಸಿ.

ಉಪ ಸಭಾಪತಿಯವರು:– ಇಲ್ಲ, ಇಲ್ಲ, ಸಮಯ ಇಲ್ಲ, ಮಾತನಾಡಲು ಅವಕಾಶ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಬಸವರಾಜ ಪಾಟೀಲ್ ಇಟಗಿ:– ಮಾನ್ಯ ಸಭಾಪತಿಯವರೇ, ಕೆಲವು ಸದಸ್ಯರಿಗೆ ಒಂದೊಂದು ತಾಸು ಮಾತನಾಡಲು ಅವಕಾಶ ಕೊಟ್ಟಿರಿ, ಆದರೆ ನಮಗೆ.. .

ಉಪ ಸಭಾಪತಿಯವರು:– ಶ್ರೀ ಬಸವರಾಜ ಪಾಟೀಲ್ ಇಟಗಿಯವರೆ, ಹೌದು. ದಯವಿಟ್ಟು ಆಗುವುದಿಲ್ಲ.

ಶ್ರೀ ಬಸವರಾಜ ಪಾಟೀಲ್ ಇಟಗಿ:– ಮಾನ್ಯ ಸಭಾಪತಿಯವರೇ, ಸದಸ್ಯರು ೨ ಗಂಟೆ ಆಗುವವರೆಗೂ ಮಾತನಾಡಿ ಎಂದರೂ ಸಹ ಮಾತನಾಡುತ್ತಾರೆ.

ಉಪ ಸಭಾಪತಿಯವರು:– ಇನ್ನು ಸಾಕಷ್ಟು ಜನ ಸದಸ್ಯರು ಮಾತನಾಡುವುದಕ್ಕೆ ಬಾಕಿ ಇದೆ, ನೀವು ತುಂಬಾ ಚೆನ್ನಾಗಿ ನೀರಾವರಿ ಬಗ್ಗೆ ಮಾತನಾಡಿದ್ದೀರಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಬಸವರಾಜ ಪಾಟೀಲ್ ಇಟಗಿ:– ಮಾನ್ಯ ಸಭಾಪತಿಯವರೇ, ನಾನು ಇನ್ನೂ ಮಾತನಾಡಲು ಎರಡು ವಿಷಯಗಳು ಇವೆ.

ಉಪ ಸಭಾಪತಿಯವರು:– ಆಯಿತು, ಮಾನ್ಯ ಬಸವರಾಜ ಪಾಟೀಲ್ ಇಟಗಿಯವರೆ, ಇನ್ನು ಎರಡು ನಿಮಿಷದಲ್ಲಿ ಮಾತನಾಡಿ ಮುಗಿಸಿ.

ಶ್ರೀ ಬಸವರಾಜ ಪಾಟೀಲ್ ಇಟಗಿ:– ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಶ್ರೀ ಹೆಚ್.ಕೆ.ಪಾಟೀಲ್ ಸಾಹೇಬರು ಈ ಸದನಕ್ಕೆ ಬಂದಿದ್ದಾರೆ. ಅವರಿಗೂ ಕೂಡ ಹೇಳಬೇಕಾಗುತ್ತದೆ. ಅವರು ಈ ಹಿಂದೆ ನೀರಾವರಿ ಸಚಿವರಾಗಿದ್ದರು. ಅವರು ಆ ಅವಧಿಯಲ್ಲಿ ಅಧಿಕಾರದಲ್ಲಿದ್ದಾಗ ಚೆಕ್ ಡ್ಯಾಂಗಳನ್ನು ಕಟ್ಟಿಸಿದರೆಂದು ಸದಸ್ಯರು ಹೇಳಿದರು. ಆ ಪ್ರಶ್ನೆ ಇರಲಿಲ್ಲ. ಆಗ ಅಲ್ಲಿ ಡಾ॥ ಎಂ.ಆರ್. ತಂಗಾ ನಮ್ಮ ಹಿರಿಯ ಸದಸ್ಯರು ಇದ್ದರು.

ಉಪ ಸಭಾಪತಿಯವರು:– ಮಾನ್ಯ ಬಸವರಾಜ ಪಾಟೀಲ್ ಇಟಗಿಯವರೇ, ಈಗ ಆ ವಿಷಯ ಮಾತನಾಡುವುದು ಬೇಡ.

ಉಪ ಸಭಾಪತಿಯವರು:– ತಾವು ನೇರವಾಗಿ ವಿಷಯಕ್ಕೆ ಬನ್ನಿ.

ಶ್ರೀ ಬಸವರಾಜ ಪಾಟೀಲ್ ಇಟಗಿ:– ಮಾನ್ಯ ಸಭಾಪತಿಯವರೇ, ಆಗ ಅವರು ಕೇಳಿದರು. ನಮ್ಮ ಪಾಲಿನ 13 ಟಿ.ಎಂ.ಸಿ. ನೀರನ್ನು ಉಳಿಸಿ ಇಡುವುದಕ್ಕೆ ತಾವು ಏನು ಮಾಡುತ್ತಿದ್ದೀರಿ ಎನ್ನತಕ್ಕಂಥ ಮಾತನ್ನು ಕೇಳಿದರು. ಅವರು ಆರು ತಿಂಗಳಿನಲ್ಲಿ 9 ಬ್ಯಾರೇಜ್‌ಗಳನ್ನು ಭೀಮಾ ನದಿಗೆ ಕಟ್ಟಿಸಿ, ಆನಂತರ ಕೃಷ್ಣಾ ನದಿಯಲ್ಲಿ ಗೂಗಲ್ ಬ್ಯಾರೇಜ್‌ಗೆ ಕೊಟ್ಟು ಸುಮಾರು ಒಂದು ವರ್ಷದಲ್ಲಿ ಅದನ್ನು ಪೂರ್ಣಗೊಳಿಸಿ, ಆ 13 ಟಿ.ಎಂ.ಸಿ. ನೀರನ್ನು ಉಳಿಸುವಂತಹ ಕೆಲಸ ಇವತ್ತಿನ ದಿವಸ ಆಗಿದೆ. ಆ 13 ಟಿ.ಎಂ.ಸಿ ನೀರಿನಿಂದ ಸುಮಾರು 2 ಲಕ್ಷದಿಂದ 3 ಲಕ್ಷ ರೈತರು ಹಾಗೂ ಸುಮಾರು ಸಾವಿರ ಹಳ್ಳಿಗಳಿಗೆ ಕುಡಿಯಲು ನೀರನ್ನು ಒದಗಿಸುವಂತಹ ಕೆಲಸವಾಗಿದೆ. ಆದರೆ ಕೆಲಸಗಳು ಕೂಡ ಆಗಿವೆ, ನಾನು ಇಲ್ಲವೆಂದು ಹೇಳುವಂಥದ್ದಲ್ಲ. ಇನ್ನೂ ಹೆಚ್ಚಿನ ರೀತಿಯಲ್ಲಿ ಆಗತಕ್ಕಂಥದ್ದು ಇದೆ. ಮಾನ್ಯ ಸಭಾಪತಿಯವರೆ, ಕೃಷಿ ಬಗ್ಗೆ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಏಕೆಂದರೆ, ಮಾನ್ಯ ನೀರಾವರಿ ಸಚಿವರು ಸಹ ಇಲ್ಲೇ ಇದ್ದಾರೆ, ಮಾನ್ಯ ಸಭಾಪತಿಯವರೆ, ಈಗ ತಾವೆಲ್ಲರೂ ನೋಡುತ್ತಿದ್ದೀರಿ. ಸುಮಾರು ನಾಲ್ಕೈದು ವರ್ಷದಿಂದ ನಮಗೆ rainfall ಕಡಿಮೆ ಆಗುತ್ತಾ ಬರುತ್ತಿದೆ. ಇದು ಒಂದು ಅತ್ಯಂತ ಗಂಭೀರವಾದ ಸಮಸ್ಯೆಯಾಗಿದೆ. ಇದಕ್ಕೆ ಯಾವುದೇ ಸರ್ಕಾರಗಳು ಅತಿ ಹೆಚ್ಚಿನದಾಗಿ ಚಿಂತನೆ ಮಾಡತಕ್ಕಂಥದ್ದು ಬಹಳ ಮುಖ್ಯವಾಗಿದೆ. ಇವತ್ತಿನ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ದಿವಸ ಅದು ನಮ್ಮ ಕೈಯಲ್ಲಿ ಇಲ್ಲ. ಇವತ್ತಿನ ದಿವಸ ನೀರಾವರಿ ಎಷ್ಟು ಇದೆ ಎಂದರೆ, ಶೇ.10 ರಿಂದ ಶೇ 15 ರಷ್ಟು ಇದೆ. ಉಳಿದಿದ್ದೆಲ್ಲಾ ಬರಗಾಲ ಪ್ರದೇಶವೇ ಆಗಿದೆ. ಈ ಮಳೆಯಂತೂ ನಮ್ಮ ಕೈಯಲ್ಲಿ ಇಲ್ಲ. It is a natural calamity. ಈಗ ನಾವು ಅದಕ್ಕೆ ಏನಾದರೊಂದು ಪರಿಹಾರವನ್ನು ಹುಡುಕಬೇಕಲ್ಲವೇ? ಸರ್ಕಾರ ಇದರ ಬಗ್ಗೆ ಅತ್ಯಂತ ಒಂದು ಗಂಭೀರ ಚಿಂತನೆ ಮಾಡುವಂಥದ್ದು ಬಹಳ ಮುಖ್ಯವಾಗಿದೆ. ನನ್ನ ಒಂದು ಸಣ್ಣ ಸಲಹೆ ಏನೆಂದರೆ, ಇವತ್ತಿನ ದಿವಸ ನಮ್ಮ ಸರ್ಕಾರಗಳು ಇವೆ. ಅದು ಯಾವುದೇ ಸರ್ಕಾರ ಇರಲಿ, first of all ನಾವು ಹೇಗೆ 10 ಸಾವಿರ ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದೇವೆ. ಪ್ರತಿ ವರ್ಷ ನಾವು 5 ಸಾವಿರ ಕೋಟಿ ರೂಪಾಯಿಗಳ ಆವರ್ತನಿಧಿ ಇಡಬೇಕು. Karnataka State Disaster Committee (Agriculture and Natural Calamity) ಎಂದು ಮಾಡಿ, every year Rs. 5,000 crore should be earmarked for this. ಅದನ್ನು ಯಾರೂ ಖರ್ಚು ಮಾಡಬಾರದು. ಅದನ್ನು ಯಾವಾಗ ಖರ್ಚು ಮಾಡಬೇಕೆಂದರೆ, ಇಂತಹ ಒಂದು ಬರಗಾಲದ ಸಂದರ್ಭ ಬರುತ್ತದೆ. ಅದು accumulate ಆಗುತ್ತಾ ಹೋಗುತ್ತದೆ. ಅದು 5,000 ಕೋಟಿ ರೂಪಾಯಿಗಳು 10,000 ಕೋಟಿ ರೂಪಾಯಿಗಳು ಮತ್ತು 15,000 ಕೋಟಿ ರೂಪಾಯಿಗಳು ಆಗುತ್ತದೆ. ಒಂದುವೇಳೆ, ಅವಶ್ಯಕತೆ ಇದ್ದರೆ ಉಪಯೋಗಿಸುವುದು, ಇಲ್ಲವೆಂದರೆ, ಉಪಯೋಗಿಸಿಕೊಳ್ಳದೇ ಅದನ್ನು ಹಾಗೆಯೇ ಇಟ್ಟುಬಿಡುವುದು. ಏಕೆಂದರೆ, ಇವತ್ತಿನ ದಿವಸ ನಾವು ರೈತರ ಸಾಲ ಮನ್ನಾ ಮಾಡಿದೆವು. ಬಜೆಟ್‌ನಲ್ಲಿ ಅದನ್ನು ಘೋಷಣೆ ಮಾಡಿರಲಿಲ್ಲ. ಆದರೆ ಸರ್ಕಾರಕ್ಕೆ ಹೊರೆ ಆಯಿತು. ಇಂತಹ ಹೊರೆಗಳನ್ನು ತಪ್ಪಿಸತಕ್ಕಂಥದ್ದು ಆಗುತ್ತದೆ. ಏಕೆಂದರೆ, ಅದು ನಮ್ಮ ಕೈಯಲ್ಲಿ ಇರುವುದಿಲ್ಲ. 5 ಸಾವಿರ ಕೋಟಿ ರೂಪಾಯಿಗಳು accumulate ಆದಾಗ, ಇವತ್ತಿನ ದಿವಸ ಏನಾದರೂ natural calamity ಆದಾಗ, it should come to the rescue of the Government. ಇವತ್ತಿನ ದಿವಸ ಮಾನ್ಯ ಮುಖ್ಯಮಂತ್ರಿಗಳು ಬಂದು, ಒಂದೇ ದಿವಸದಲ್ಲಿ ಸುಮಾರು 4 ಸಾವಿರ ಕೋಟಿ ರೂಪಾಯಿಗಳನ್ನು announce ಮಾಡುವಂತಹ ಶಕ್ತಿ ಇರಬೇಕು. ಇವತ್ತಿನ ದಿವಸ ಇದ್ದಕ್ಕಿದ್ದಂತೆ ಉಳ್ಳಾಗಡ್ಡೆ ಮತ್ತು ತೊಗರಿ ಬೆಲೆ ಇಳಿಯುತ್ತದೆ, ಆಗ ನಮ್ಮಲ್ಲಿ ದುಡ್ಡು ಇರುವುದಿಲ್ಲ, ಆಗ ನಾವು ಏನು ಮಾಡುವುದಕ್ಕಾಗುವುದಿಲ್ಲ. ಒಂದುವೇಳೆ, ಈ ಆವರ್ತನಿಧಿಯನ್ನು continuous ಆಗಿ ಪ್ರತಿ ವರ್ಷ 5 ಸಾವಿರ ಕೋಟಿ ರೂಪಾಯಿಗಳು earmark ಮಾಡಿದ್ದೇ ಆದಲ್ಲಿ, ಒಂದು ಸ್ವಲ್ಪ ವರ್ಷಗಳಲ್ಲಿ ಅದು ಸುಮಾರು 40 ಸಾವಿರ ಕೋಟಿ ರೂಪಾಯಿಯಿಂದ 50 ಸಾವಿರ ಕೋಟಿ ರೂಪಾಯಿಗಳು ಆಗುತ್ತದೆ. ಅದನ್ನು deposit ಇಟ್ಟಿದ್ದು, ಅದು ಕೇವಲ ರೈತರಿಗೆ ಸಿಗಬೇಕು. ಏಕೆಂದರೆ, ಶೇ.70 ನಮ್ಮ ರಾಜ್ಯದಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೈತರು ಇದ್ದೇವೆ. ಇವತ್ತಿನ ದಿವಸ ನಾವು ವಿಧಾನ ಪರಿಷತ್ತಿನಲ್ಲಿ ಚರ್ಚೆ ಮಾಡುತ್ತೇವೆ. ಒಬ್ಬ ಶಿಕ್ಷಕರ ವಿಚಾರ ಬಂತೆಂದರೆ, 13 ಜನ ಸದಸ್ಯರು ನಿಂತು ಕೈ ತೋರಿಸಿದರೆ, ಆ 13 ಮಂದಿಗೆ ನೀವು ಮಾತನಾಡಲು ಅವಕಾಶ ಕೊಡುತ್ತೀರಿ. ಆದರೆ, ನಾವು ಶೇ. 70ರಷ್ಟು ಜನ ರೈತರು ಇದ್ದೇವೆ. ಇವತ್ತಿನ ದಿವಸದಲ್ಲಿ ಪ್ರತಿಯೊಂದು ಊರಿನಲ್ಲಿ ರೈತರು ಕಣ್ಣೀರು ಹಾಕತಕ್ಕಂತಹ ಕೆಲಸ ಆಗುತ್ತಿದೆ. ಇದರ ಬಗ್ಗೆ ಸರ್ಕಾರ ಗಂಭೀರವಾದ ಚಿಂತನೆ ಮಾಡಬೇಕು. ಅದಕ್ಕೆ ಬಹಳ ಒಂದು ವಿಚಾರ ಮಾಡತಕ್ಕಂಥ ಕೆಲಸ ಇದೆ. ಏಕೆಂದರೆ ನಾವು ರೈತರಿಗೆ ನಾವು ಆ ರೀತಿ, ಈ ರೀತಿ ಮಾಡುತ್ತೇವೆಂದು ಹೇಳುತ್ತೇವೆ. ಇವತ್ತಿನ ದಿವಸ ನಮ್ಮ ರೈತರಿಗೆ ನಾಲ್ಕು ಪಂಪ್‌ಸೆಟ್‌ಗಳನ್ನು ಕೊಟ್ಟರೆ ಅದು ಸರಿ ಆಗುತ್ತದೆಯೇ? ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ರೈತರ ಸಾಲ ಮನ್ನಾ ಆಯಿತು. ಆದರೆ ಕೇಂದ್ರ ಸರ್ಕಾರ ರೈತರ ಸಾಲ ಮನ್ನಾ ಮಾಡಲಿಲ್ಲ. ಮತ್ತೆ ಅದೂ ಕೂಡ ನಮಗೆ ಹೊರೆಯೇ ಅಲ್ಲವೇ? ಅದಕ್ಕೆ ನಾವು ಇವತ್ತಿನ ದಿವಸ ಯಾರ ಮೇಲೆಯೂ depend ಆಗದೇ ನಮ್ಮ ರಾಜ್ಯದಲ್ಲಿಯೇ ಇರುವಂತಹ ರೈತರಿಗೆ ನಾವು ಇಂತಹದ್ದೊಂದು ಮಾಡುತ್ತೇವೆ ಎನ್ನುವ ಮನೋಭಾವನೆ ಸರ್ಕಾರಗಳಿಗೆ ಬರಬೇಕು ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಕೃಷ್ಣಭೈರೇಗೌಡ (ಕೃಷಿ ಸಚಿವರು):– ಮಾನ್ಯ ಸಭಾಪತಿಯವರೇ, ನಾನು ಹೆಚ್ಚಿಗೆ ಸಮಯ ತೆಗೆದುಕೊಳ್ಳುವುದಿಲ್ಲ. ಆದರೂ ಮಾನ್ಯ ಸದಸ್ಯರು ರೈತರ ವಿಚಾರದ ಬಗ್ಗೆ ಮಾತನಾಡುತ್ತಿದ್ದಾರೆ. ಅವರು ಆವರ್ತನಿಧಿಯ ವಿಚಾರದ ಬಗ್ಗೆ ಹೇಳಿದರು. ದೇಶದಲ್ಲಿ ಬಹುತೇಕ ಒಂದೆರಡು ರಾಜ್ಯಗಳಲ್ಲಷ್ಟೇ ರಾಜ್ಯ ಮಟ್ಟದ ಆವರ್ತನಿಧಿ ಎಂದು ಇರಬಹುದು. ಕೇಂದ್ರ ಸರ್ಕಾರ ಎಲ್ಲಾ ರಾಜ್ಯಗಳಿಗೂ ನಿಮ್ಮದೇ ಆದಂತಹ ಆವರ್ತನಿಧಿಯನ್ನು ದಯವಿಟ್ಟು ಸ್ಥಾಪನೆ ಮಾಡಿ ಎಂದು ಶಿಫಾರಸ್ಸು ಮಾಡಿದೆ. ನನಗೆ ಮಾಹಿತಿ ಇರುವ ಪ್ರಕಾರ ನಿಜವಾಗಿಯೂ ಆವರ್ತನಿಧಿ ಇರುವುದು ಕರ್ನಾಟಕ ರಾಜ್ಯದಲ್ಲಿ ಮಾತ್ರ. ಬೇರೆ ಎಲ್ಲಾದರೂ ಒಂದೆರಡು ರಾಜ್ಯಗಳಲ್ಲಿ ಅದು ಇರಬಹುದು ಅಷ್ಟೇ, ನನಗೆ ಮಾಹಿತಿ ಇಲ್ಲ. ಆದರೆ ನಾವೇ ಆವರ್ತನಿಧಿಯನ್ನು ಇಟ್ಟುಕೊಂಡಿರತಕ್ಕಂಥದ್ದು. ಸದ್ಯದಲ್ಲಿ ನಮ್ಮ ರಾಜ್ಯದಲ್ಲಿ ಒಂದೂವರೆ ಸಾವಿರ ಕೋಟಿ ರೂಪಾಯಿಗಳ ಆವರ್ತನಿಧಿಯ ಗಾತ್ರ ಇದೆ. ಅದರಲ್ಲಿ ಕೇಂದ್ರ ಸರ್ಕಾರದಿಂದ 1050 ಕೋಟಿ ರೂಪಾಯಿಗಳ ಬಾಕಿ ಬರಬೇಕಾಗಿದೆ. ಅದನ್ನು ನಾವು ಅವರ ಜೊತೆ ಸಂಪರ್ಕದಲ್ಲಿದ್ದೇವೆ. ತಮ್ಮ ಮಾಹಿತಿಗೆ ಹೇಳುತ್ತಿದ್ದೇನೆ, ಹಣಕಾಸಿನ ಕೊರತೆಯಿಂದ ನಾವು ಮಾರುಕಟ್ಟೆಯಲ್ಲಿ ರೈತರಿಂದ ನೇರವಾಗಿ ಖರೀದಿ ಮಾಡುವಂತಹ ಪ್ರಕ್ರಿಯೆಯಿಂದ ಯಾವತ್ತೂ ಸಹ ಹಿಂದೆ ಸರಿದಿಲ್ಲ. ಇಲ್ಲಿಯೇ ಮಾನ್ಯ ಹೆಚ್.ಕೆ.ಪಾಟೀಲ್ ರವರು ಇದ್ದಾರೆ, ಹಾಗೇನಾದರೂ ನಾವು ಮಾಡುವುದಕ್ಕೆ ಹೊರಟರೆ, ಅವರು ನಮ್ಮನ್ನು ಬಿಡುವುದಿಲ್ಲ. ಒಂದೇ ಒಂದು ಸಂದರ್ಭದಲ್ಲಿ 2013–14ರಲ್ಲಿ ಆವರ್ತನಿಧಿಯಿಂದ 250 ಕೋಟಿ ರೂಪಾಯಿಗಳ ತೊಗರಿಯನ್ನು ಖರೀದಿ ಮಾಡಿದ್ದೇವೆ, 7 ಲಕ್ಷ ಟನ್ ಮೆಕ್ಕೇ ಜೋಳವನ್ನು ಖರೀದಿ

ಮಾಡಿದ್ದೇವೆ, ಆ ಒಂದು ಸಂದರ್ಭದಲ್ಲಿ ಆವರ್ತನಿಧಿಯಿಂದ ಹಣ ಸಾಲದೇ ಇದ್ದುದರಿಂದ, ಸರ್ಕಾರ ಬ್ಯಾಂಕ್‌ನಿಂದ ಸಾಲ ತೆಗೆದುಕೊಂಡು, ಒಂದೇ ಒಂದು ದಿನವೂ ನಾವು ಖರೀದಿ ಮಾಡುವುದನ್ನು ನಿಲ್ಲಿಸದೇ, ಪ್ರಕ್ರಿಯೆಯನ್ನು ಮಾಡಿದ್ದೇವೆ. ಆ ವರ್ಷ ನಾವು ಒಟ್ಟು 2 ಸಾವಿರ ಕೋಟಿ ರೂಪಾಯಿಗಳಷ್ಟು ಖರೀದಿ ಮಾಡಿದ್ದೇವೆ. ನಮ್ಮ ಹತ್ತಿರ ಆವರ್ತನಿಧಿಯಲ್ಲಿ ಇದ್ದಿದ್ದು 1 ಸಾವಿರ ಕೋಟಿ ರೂಪಾಯಿಗಳು ಇತ್ತು. ಮಾರುಕಟ್ಟೆ ಮಧ್ಯ ಪ್ರವೇಶ ಮಾಡಿ ಸುಮಾರು 2 ಸಾವಿರ ಕೋಟಿ ರೂಪಾಯಿಗಳಷ್ಟು ರೈತರಿಂದ ಖರೀದಿ ಮಾಡಿದ್ದೇವೆ. ಕಳೆದ ವರ್ಷ ಹೈದರಾಬಾದ್-ಕರ್ನಾಟಕ ಭಾಗದಲ್ಲಿ ವಿಜಯಪುರ ಸೇರಿದಂತೆ, 1900 ಕೋಟಿ ರೂಪಾಯಿಗಳಷ್ಟು ತೊಗರಿ ಒಂದನ್ನೇ ಖರೀದಿ ಮಾಡಿದ್ದೇವೆ. ಬೇರೆ ಯಾವುದೇ ರಾಜ್ಯದಲ್ಲೂ ಸಹ ತೊಗರಿಗೆ ಪ್ರೋತ್ಸಾಹಧನ ಕೊಡಲಿಲ್ಲ. ಇಡೀ ದೇಶದಲ್ಲಿ ಬೇರೆ ಬೇರೆ ರಾಜ್ಯಗಳಲ್ಲಿ ತೊಗರಿಯನ್ನು ಖರೀದಿ ಮಾಡಿದರು. ಆದರೆ ಪ್ರೋತ್ಸಾಹಧನ 450 ರೂಪಾಯಿ MSP (Minimum Support Price) ಮೇಲೆ ಕೊಟ್ಟಿದ್ದು ಕರ್ನಾಟಕದಲ್ಲಿ ಮಾತ್ರ. 1900 ಕೋಟಿ ರೂಪಾಯಿಗಳನ್ನು ಹಾಕಿ ತೊಗರಿ ಒಂದನ್ನೇ ಖರೀದಿ ಮಾಡಿದ್ದೇವೆ. ಅದಷ್ಟೇ ಅಲ್ಲದೇ, ನಮ್ಮ ಸರ್ಕಾರದಲ್ಲಿ ಭತ್ತ ಖರೀದಿ ಮಾಡಿದ್ದೇವೆ. ನಮ್ಮ ರಾಯಚೂರಿನವರು ಯಾವ್ಯಾವಾಗ ನೀವು ಏನು ಹೇಳಿದ್ದೀರಿ, ಖರೀದಿ ಮಾಡದೇ ಹೋದರೂ ಸರಿ, ಕೇಂದ್ರವನ್ನು ಸಹ ಪ್ರಾರಂಭ ಮಾಡುವಂತೆ ಹೇಳಿದ್ದೀರಿ, ಅದನ್ನು ಮಾಡಿದ್ದೇವೆ. ಭತ್ತ ಖರೀದಿಗೆ ಪ್ರೋತ್ಸಾಹ ಧನವನ್ನು ಕೊಟ್ಟಿದ್ದೇವೆ. ಈ ವರ್ಷ ಹೆಸರು, ಉದ್ದು ಖರೀದಿ ಮಾಡಬೇಕೆಂದು ಹೇಳಿದರು, ಅದಕ್ಕೆ ನಾವು ಹೆಸರು ಮತ್ತು ಉದ್ದು ಖರೀದಿ ಮಾಡುತ್ತಿದ್ದೇವೆ. ಕೆಲವು ವರ್ಷ ಕಡಲೆ ಖರೀದಿ ಮಾಡಬೇಕೆಂದು ಹೇಳಿದರು, ಕಡಲೆಯನ್ನು ಸಹ ಖರೀದಿ ಮಾಡಿದ್ದೇವೆ. ಅದೇ ರೀತಿ ಕೊಬ್ಬರಿಯನ್ನು ಸಹ ಖರೀದಿ ಮಾಡಿದ್ದೇವೆ. ಉಳ್ಳಾಗಡ್ಡಿ ಹೋದ ವರ್ಷ 75 ಕೋಟಿ ರೂಪಾಯಿಗಳಷ್ಟು ಖರೀದಿ ಮಾಡಿದ್ದೇವೆ, ನಮಗೆ ಅದರಿಂದ ಬಂದ ಆದಾಯ ಎಷ್ಟೆಂದರೆ, 2 ಕೋಟಿ ರೂಪಾಯಿಗಳು. ಈ 75 ಕೋಟಿ ರೂಪಾಯಿಗಳನ್ನು ಹಾಕಿ ಖರೀದಿ ಮಾಡಿರತಕ್ಕಂತಹ . . .

ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಸರ್ಕಾರ Market Intervention Scheme ಗೆ ಆವರ್ತನಿಧಿಯನ್ನು ಮಾಡಿದ್ದೀರಿ, ಅದರ ಬಗ್ಗೆ ಉಲ್ಲೇಖ ಮಾಡಿಲ್ಲ. ಅವರು ಹೇಳುತ್ತಿರುವಂಥದ್ದು, 5 ಸಾವಿರ ಕೋಟಿ ರೂಪಾಯಿಗಳನ್ನು ಪ್ರತಿ ವರ್ಷ ಇಟ್ಟುಕೊಂಡು ಹೋಗಿ, natural calamity ಆದಂಥ ಸಮಯದಲ್ಲಿ ಇನ್ನೊಬ್ಬರ ಹತ್ತಿರ ಕೈ ಚಾಚುವುದಕ್ಕಿಂತ ಬ್ಯಾಂಕಿನಿಂದ ಸಾಲ ತೆಗೆದುಕೊಳ್ಳುವುದಕ್ಕಿಂತ ನಾವೇ ಏಕೆ ರೈತರ ಸಹಾಯಕ್ಕೆ

ಧಾವಿಸಬಾರದು ಎಂದು ಹೇಳುತ್ತಿದ್ದೇನೆ. ಇದು ಒಂದು ಬಹಳ ಒಳ್ಳೆಯ ಸಲಹೆಯಾಗಿದೆ. ಅದನ್ನು ತಾವು ದಯವಿಟ್ಟು ಪರಿಗಣಿಸಬೇಕೆಂದು ಸಹ ಕೇಳುತ್ತೇನೆ.

ಶ್ರೀ ಕೃಷ್ಣಭೈರೇಗೌಡ:– ಮಾನ್ಯ ಸಭಾಪತಿಯವರೇ, ಆಮೇಲೆ ಅವರು ಪ್ರಮುಖವಾಗಿ ಬೆಲೆ ಕುಸಿತ ಸಂದರ್ಭದಲ್ಲಿ ಎಂದು ಹೇಳಿದರು. ತಾವು ಹೇಳಿದ ಅಂಶಗಳನ್ನೂ ಸಹ ಸೇರಿಸಿಕೊಂಡು ಅವರು ಹೇಳಿದರು. ಒಟ್ಟಾರೆ ನಮ್ಮ ರಾಜ್ಯದಲ್ಲಿ ರೈತರ ಒಂದು ಕಲ್ಯಾಣ ನಿಧಿ ಇರಬೇಕು, ಆಮೇಲೆ ಅದು ಎಲ್ಲಾ ಸಂದರ್ಭಕ್ಕೂ ಸಹ ಅನುವಾಗುವಂಥದ್ದು ಎನ್ನುವ ಅರ್ಥದಲ್ಲಿ ಹೇಳಿದರು. ಪ್ರಮುಖವಾಗಿ ಈಗ ಈ ವರ್ಷ ಸಾಲ ಮನ್ನಾ ಮಾಡುವುದಕ್ಕೆ ನಾವೇನು Revolving Fund ಇಲ್ಲವೆಂದು ಅದು ನಿಲ್ಲಲಿಲ್ಲ. ಅದನ್ನು ಮಾಡಲೇಬೇಕು ಎಂದು ಹೇಳಿದಾಗ, ಅದನ್ನು ಮಾಡೇಬಿಟ್ಟಿದ್ದೇವೆ. ಎಲ್ಲಿಂದ ದುಡ್ಡು ಬರುತ್ತದೆ ಅದನ್ನು ತರೋಣ, ಅದು ಬೇರೆ ವಿಚಾರ. ಅದೂ ಅಲ್ಲದೇ Revolving Fund ಗೆ ದುಡ್ಡು ಎಲ್ಲಿಂದ ಬರುತ್ತದೆ ಎಂದರೆ, ಅದು market cess ನಿಂದ ಬರುತ್ತದೆ. ಅದೂ ಅಲ್ಲದೇ ಸರ್ಕಾರದಿಂದಲೂ ನಾವು infusion ಮಾಡುತ್ತಿದ್ದೇವೆ. ಪ್ರತಿ ವರ್ಷ 100 ಕೋಟಿ ರೂ.ಗಳು 150 ಕೋಟಿ ರೂ.ಗಳು ಮತ್ತು 200 ಕೋಟಿ ರೂ.ಗಳು ಸರ್ಕಾರದ್ದು ಸಹ ಅದರಲ್ಲಿ contribution ಹಾಕಿ, Revolving Fund ನ್ನು ವಿಸ್ತರಿಸುತ್ತಿದ್ದೇವೆ. ಅವರು ಹೇಳುತ್ತಿರುವಂತೆ, ನಾವು ಇನ್ನೂ ಹೆಚ್ಚಿಗೆ ಅದಕ್ಕೆ ಸರ್ಕಾರದ contribution ನ್ನು ಕೊಡತಕ್ಕಂಥ ಪ್ರಯತ್ನವನ್ನು ಸಹ ಮಾಡುತ್ತೇವೆ. ಕರ್ನಾಟಕದಲ್ಲಿ ಇಷ್ಟು ಯಶಸ್ವಿಯಾಗಿ ಆವರ್ತನಿಧಿ ಕೆಲಸ ಮಾಡುತ್ತಿದೆ. ಇದನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಇನ್ನು ಎರಡನೆಯದು, ತಾವು ಹನಿ ನೀರಾವರಿ ಬಗ್ಗೆ ಮಾತನಾಡಿದ್ದೀರಿ. ಕ್ಷಮಿಸಬೇಕು ಮಾನ್ಯ ಸಭಾಪತಿಯವರೆ, ಸ್ವಲ್ಪ ಸಮಯ ನಾನು ಮಾತನಾಡಲು ಅನುವು ಮಾಡಿಕೊಡಬೇಕು. ಕರ್ನಾಟಕದಲ್ಲಿ ಯಾವುದೇ ಸಾಮಾಜಿಕ ಆಧಾರವಿಲ್ಲದೇ ನಾವು ಎಲ್ಲರಿಗೂ ಸಹ ಶೇ.90ರಷ್ಟು ಸಹಾಯಧನ ಕೊಡುತ್ತಿದ್ದೇವೆ. 5 ಎಕರೆಯವರೆಗೆ ಎಲ್ಲರಿಗೂ ಸಹ ಶೇ.90ರಷ್ಟು ಸಹಾಯಧನವನ್ನು ಹನಿ ನೀರಾವರಿಗೆ ಕೊಡುತ್ತಿದ್ದೇವೆ.

(ಮುಂದು.)

(1143)/21.11.2017/7.20/ಎಂ.ಎಂ/ಎಂ.ಡಿ

ಶ್ರೀ ಕೃಷ್ಣ ಭೈರೇಗೌಡ (ಮುಂದು . .

ನಮ್ಮ ರಾಜ್ಯದಲ್ಲಿ ಪ್ರತಿ ಹನಿ ನೀರನ್ನೂ ನಾವು ಸದುಪಯೋಗ ಮಾಡಿಕೊಳ್ಳದಿದ್ದರೆ ನಮ್ಮ ಭವಿಷ್ಯವನ್ನು ನಾವೇ ಕೆಡವಿದ ಹಾಗಾಗುತ್ತದೆ. ಹನಿ ನೀರಾವರಿಗೆ ಶೇ. 90ರಷ್ಟು ಅನುದಾನವನ್ನೂ ಕೊಡುತ್ತಿದ್ದೇವೆ. ಎಷ್ಟು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜನ ರೈತರಿಗೆ ಶೇ.೨೦ರಷ್ಟು ಅನುದಾನವನ್ನು ಕೊಟ್ಟಿದ್ದೀರಿ ಎಂದು ತಾವು ಕೇಳಬಹುದು. ನಾನು ಈ ಇಲಾಖೆಯ ಜವಾಬ್ದಾರಿಯನ್ನು ತೆಗೆದುಕೊಳ್ಳುವುದಕ್ಕಿಂತ ಹಿಂದಿನ ವರ್ಷ ಹನಿ ನೀರಾವರಿಗೆ ನಮ್ಮ ರಾಜ್ಯದಲ್ಲಿ ಅನುದಾನವನ್ನು ಕೊಟ್ಟಿರುವುದು 117 ಕೋಟಿ ರೂಪಾಯಿಗಳು, ಕಳೆದ ವರ್ಷ 414 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ರೈತರಿಗೆ ಸಹಾಯಧನ ಹೆಚ್ಚು ಕಡಿಮೆ ನಾಲ್ಕು ವರ್ಷಗಳಲ್ಲಿ ಹತ್ತಿರ ಹತ್ತಿರ ನಾಲ್ಕು ಪಟ್ಟು ಹೆಚ್ಚಳ ಮಾಡಿದ್ದೇವೆ. ಇದು allocation for micro irrigation, expenditure ಅಲ್ಲ. ಸಣ್ಣ ಹನಿ ನೀರಾವರಿಗೆ 107 ಕೋಟಿ ಇದ್ದುದನ್ನು ಕಳೆದ ವರ್ಷ ಸುಮಾರು 414 ಕೋಟಿ ರೂಪಾಯಿ ಮಾಡಿದ್ದೇವೆ. There is 350 percent increase in matter of four years. ನಾಲ್ಕು ವರ್ಷಗಳಿಗೆ ಸಂಬಂಧಿಸಿದಂತೆ ಮಾತ್ರ ಹೇಳುತ್ತಿದ್ದೇನೆ. ನಮಗೆ ಆ ವಿಚಾರದಲ್ಲಿ ಬದ್ಧತೆ ಇದೆ. ಮಾನ್ಯ ಸದಸ್ಯರ ಕಾಳಜಿಯನ್ನು ನಾವು ಒಪ್ಪುತ್ತೇವೆ. ಸರ್ಕಾರವು ಕೂಡ ಅದೇ ದಿಕ್ಕಿನಲ್ಲಿ ಕೆಲಸ ಮಾಡುತ್ತಿದೆ. ಮಾನ್ಯ ಸದಸ್ಯರಾದ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ಅವರು ಹೇಳಿದ್ದಕ್ಕೂ ಉತ್ತರ ಇದೆ. ಮಾನ್ಯ ಸಭಾಪತಿಯವರ ತಾಳ್ಮೆಯನ್ನು ಪರೀಕ್ಷೆ ಮಾಡಲು ಹೋಗದೇ ಮಾನ್ಯ ರಾಮಚಂದ್ರಗೌಡರು ಹೇಳುತ್ತಿದ್ದರು. ಪ್ರಕೃತಿ ವಿಕೋಪವಾದಂತಹ ಸಂದರ್ಭದಲ್ಲಿ ಹಿಂದೆ ಎಷ್ಟು ಪರಿಹಾರ ರೈತರಿಗೆ ಸಿಕ್ಕಿತ್ತು ಇವತ್ತು ಎಷ್ಟು ಸಿಕ್ಕಿದೆ ಎನ್ನುವುದನ್ನೂ ಹೇಳಬಹುದು. ಆದರೆ ನಾನು ಇಷ್ಟಕ್ಕೇ ಸೀಮಿತಗೊಳಿಸಿ symbolic ಆಗಿ ಒಂದೆರಡು ಅಂಶಗಳನ್ನು illustrate ಮಾಡಿದ್ದೇನೆ. ಅದರಲ್ಲಿಯೂ ಕೂಡ ಯಾವುದೇ ಆವರ್ತ ನಿಧಿಗೆ ಕಾಯದೇ ಹೆಚ್ಚು ಪರಿಹಾರವನ್ನು ಕೊಟ್ಟಿದ್ದೇವೆ. ಕಳೆದ ಎರಡು ವರ್ಷ ಬರಗಾಲದ ಸಂದರ್ಭದಲ್ಲಿಯೂ ಕೂಡ insurance ಮುಖಾಂತರವು ಕೊಟ್ಟಿದ್ದೇವೆ, ಕೇಂದ್ರ ಸರ್ಕಾರದ ಸಹಕಾರದಿಂದ input subsidy ರೂಪದಲ್ಲಿಯೂ ಸಹ ಕೊಟ್ಟಿದ್ದೇವೆ. ಇಲ್ಲ ಎಂದು ಹೇಳದೇ ತಮ್ಮ ಸಲಹೆಯನ್ನು ಕೂಡ ನಾನು ಸ್ವಾಗತ ಮಾಡುತ್ತೇನೆ.

ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಒಂದು ಮನವರಿಕೆ ಮಾಡಿಕೊಳ್ಳುವುದೇನೆಂದರೆ, ಬಹುಶಃ ಅವರು ನಾನು ಹೇಳಿದ್ದನ್ನು ಸರಿಯಾಗಿ ತಿಳಿದುಕೊಂಡಿಲ್ಲವೆಂದು ಅನಿಸುತ್ತದೆ. ನಾನು ಮೊದಲೇ ಹೇಳಿರುವಂತೆ ನಮ್ಮ ಕೃಷಿ ಸಚಿವರು ಸಾಕಷ್ಟು ಕೃಷಿ ಹೊಂಡಗಳನ್ನೆಲ್ಲಾ ಮಾಡಿದ್ದಾರೆ. ಆದರೆ ನಮಗೆ ಇನ್ನೂ ಬೇಕಾಗಿರುವಂತಹದ್ದನ್ನು ಮನವರಿಕೆ ಮಾಡುವ ಕೆಲಸ ಮಾಡುತ್ತೇನೆ. ಇವತ್ತು ಆವರ್ತ ನಿಧಿಯ ಬಗ್ಗೆ ಹೇಳುವುದಾದರೆ, ತಮಗೆ ನೆನಪಿರಬಹುದು, ೨೦೦೦ನೇ ಇಸವಿಯಲ್ಲಿ ನಾನು ಮೊದಲ ಬಾರಿಗೆ ಎಂ.ಎಲ್.ಸಿ ಆದಾಗ ಮಾನ್ಯ ಎಸ್.ಎಂ. ಕೃಷ್ಣರವರ ಸರ್ಕಾರದಲ್ಲಿ ಮೊದಲು ಆವರ್ತ ನಿಧಿ ಎಂಬುದು ಇರಲಿಲ್ಲ.

ಅದನ್ನು ಇದೇ ವಿಧಾನ ಪರಿಷತ್ತಿನಲ್ಲಿ ನಾನೇ raise ಮಾಡಿದ್ದೆ. ಅವತ್ತು ರೈತರಿಗೆಲ್ಲಾ revolving fund create ಮಾಡಬೇಕೆಂದು ಕೇಳಿದಾಗ ಮೊದಲ ಬಾರಿಗೆ ಸುಮಾರು ೫೦೦ ಕೋಟಿ ರೂಪಾಯಿಗಳನ್ನು ಘೋಷಣೆ ಮಾಡಿದರು. ನಾನು ಆವರ್ತ ನಿಧಿಯ ಬಗ್ಗೆ ಏಕೆ ಹೇಳುತ್ತಿದ್ದೇನೆಂದರೆ, ಅವರಿಗೆ ಪೂರಕವಾಗಿ ಸಹಾಯವಾಗಲಿ ಎಂದು ಹೇಳುತ್ತಿದ್ದೇನೆ.

ಉಪ ಸಭಾಪತಿಯವರು:– ಮಾನ್ಯ ಇಟಗಿಯವರೇ, ಮಾನ್ಯ ಸಚಿವರು ಒಪ್ಪಿಕೊಂಡರಲ್ಲವೇ?

ಶ್ರೀ ಬಸವರಾಜ ಪಾಟೀಲ್ ಇಟಗಿ:– ಮಾನ್ಯ ಸಭಾಪತಿಯವರೇ, ಈಗ ಅವರು ಸುಮ್ಮನೇ ಎಲ್ಲಿಂದಲೋ ಮಾಡುತ್ತೇವೆ ಎಂದರೆ, ಎಲ್ಲಿಂದಲೋ ಏಕೆ ಮಾಡುತ್ತೀರಿ. ಸರ್ಕಾರವೇ ಐದು ಸಾವಿರ ಕೋಟಿ ರೂಪಾಯಿಗಳನ್ನು ರೈತರ ಸಲುವಾಗಿ ಪ್ರತ್ಯೇಕವಾಗಿ ಇಟ್ಟರೆ ರೈತರಿಗೆ ನಮ್ಮ ಸಲುವಾಗಿ ಸರ್ಕಾರವು ಐದು ಸಾವಿರ ಕೋಟಿ ರೂಪಾಯಿಗಳನ್ನು ಪ್ರತಿ ವರ್ಷ ಕೊಡುತ್ತಿದೆ ಎನ್ನುವಂತಹ ಒಂದು ಮೆಸೇಜ್ ಇರುತ್ತದೆ. Natural calamity ಯಾವಾಗ ಬರುತ್ತದೆಯೋ ಗೊತ್ತಿಲ್ಲ. ಮೊದಲನೆಯದಾಗಿ ಕೃಷಿಗೆ ಕೊಡಿ. ಎರಡನೆಯದಾಗಿ ಯಾವುದಾದರೂ ವಿಪತ್ತುಗಳು ಬಂದಾಗ ಆ ಹಣವನ್ನು ಅಲ್ಲಿಗೂ ಉಪಯೋಗ ಮಾಡಬಹುದು. ಇದು ಸುಮಾರು ೪೦–೫೦ ಸಾವಿರ ಕೋಟಿ ರೂಪಾಯಿಗಳಾದ ಮೇಲೆ ಪ್ರತಿಯೊಂದಕ್ಕೂ ಯಾರ ಮೇಲೆಯೂ ಅವಲಂಬನೆಯಾಗದೆ ನಮ್ಮ ಸರ್ಕಾರಗಳು ಪ್ರಕೃತಿ ವಿಕೋಪಗಳು ಮತ್ತು ರೈತರ ಸಮಸ್ಯೆಗಳು ಬಂದಾಗ, ಬೆಂಬಲ ಬೆಲೆ ವಿಚಾರ ಬಂದಾಗ intervention ಮಾಡಲಾರದೇ ಹೋದರೆ, ರೈತರು ಸಂಕಷ್ಟಕ್ಕೆ ಈಡಾಗುತ್ತಾರೆ. ನಾವು ತೊಗರಿಗೆ ಬೆಂಬಲ ಬೆಲೆಯನ್ನು ಕೊಟ್ಟು ತೆಗೆದುಕೊಳ್ಳಬೇಕಾದರೆ, NAFED (National Agricultural Co-operative Marketing Federation of India) ಕಡೆಗೆ ಕೈ ಚಾಚಬೇಕಾಗಿದೆ. ಇಂತಹ ಸಂದರ್ಭಗಳಲ್ಲಿ ನಮ್ಮದೇ ಆದ ಸ್ವಂತ ನಿರ್ಧಾರವನ್ನು ತೆಗೆದುಕೊಳ್ಳುವ ಶಕ್ತಿ ಬರುತ್ತದೆ ಎನ್ನುವಂತಹ ಮಾತನ್ನು ತಮ್ಮ ಮುಖಾಂತರ ಹೇಳುತ್ತಿದ್ದೇನೆ. ರೈತರಿಗೂ ಕೂಡ ಸರ್ಕಾರ ನಮ್ಮ ಬಗ್ಗೆ ಬಹಳ ಚಿಂತನೆ ಮಾಡುವಂತಹ ಕೆಲಸವನ್ನು ಮಾಡುತ್ತಿದೆ ಎಂಬುದು ಗೊತ್ತಾಗುತ್ತದೆ. ಅದು ಅಲ್ಲದೇ ಉತ್ತರ ಕರ್ನಾಟಕ ಭಾಗವು it is a semi-arid tropic zone ಆಗಿದೆ. ಇಲ್ಲಿ ವಿಶೇಷವಾದಂತಹ ಬೆಳೆಗಳನ್ನು ಬೆಳೆಯುತ್ತಾರೆ. ಇವತ್ತು ಶ್ರೇಷ್ಠವಾದ ಭೂಮಿ, ವಾತಾವರಣ ಮತ್ತು ನೀರಾವರಿ ಸೌಲಭ್ಯ ಇಲ್ಲಿರುವಂತಹ semi-arid tropic zone ಬಗ್ಗೆ ಹೇಳುವುದಾದರೆ, ಜಗತ್ತಿನಲ್ಲಿಯೇ zones ಮಾಡಿದ್ದಾರೆ. ಇದು ನಮ್ಮ zone ಆಗಿದೆ. ಇದು ಒಂದು ಉತ್ತಮವಾದ ವಲಯವಾಗಿದೆ. ಪ್ರಪಂಚದಲ್ಲಿಯೇ most deep black cotton soil ರಾಯಚೂರು

ಜಿಲ್ಲೆಯಲ್ಲಿದೆ. ಆ ಮಣ್ಣನ್ನು ಬೆಂಗಳೂರಿನಲ್ಲಿರುವ ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ತೆಗೆದುಕೊಂಡು ಹೋಗುತ್ತಾರೆ. ಏಕೆಂದರೆ, black cotton soil or clay soil ಇದು ಕ್ರಿಕೆಟ್ ಆಟವಾಡಲು (ಪಿಚ್) ಮಾಡಲು ಯೋಗ್ಯವಾದ ಮಣ್ಣಾಗಿದೆ. ಇದು ಅಂತಹ ಅದ್ಭುತವಾದ ಮಣ್ಣಾಗಿದೆ. ಅಲ್ಲದೇ ಬಾಗಲಕೋಟ ಜಿಲ್ಲೆಯಲ್ಲಿ ತೋಟಗಾರಿಕೆ ಬೆಳೆಗಳನ್ನು ಜಗತ್ತಿನಲ್ಲಿಯೇ ಎಷ್ಟು highest yield ಬರಬೇಕೋ ಅಂತಹ ವಾತಾವರಣ ಈ ಜಿಲ್ಲೆಯಲ್ಲಿದೆ. ಅಲ್ಲಿನ ವಾತಾವರಣ, ನೀರು ಮತ್ತು ಸಾಕಷ್ಟು ನದಿಗಳಿವೆ. ಅಷ್ಟೇ ಬೆಳೆಗಳನ್ನು ಕೂಡ ಬೆಳೆಯುತ್ತಾರೆ. ಎಷ್ಟು ಉಷ್ಣಾಂಶ ಬೇಕೋ ಅಷ್ಟಿದೆ. ಇವೆಲ್ಲವನ್ನೂ ಮನಗಂಡು ನಮ್ಮ ಸರ್ಕಾರಗಳು ಹೆಚ್ಚಿನ ರೀತಿಯಿಂದ 'Lab-to-Land Programme' ಆಗುವಂತಹ ಕೆಲಸ ಆಗಬೇಕಾಗಿದೆ. ವಿಶ್ವವಿದ್ಯಾನಿಲಯಗಳಲ್ಲಿ ಸಂಶೋಧನೆಗಳನ್ನು ನಡೆಸುತ್ತಾರೆ. ಅದನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ 'Lab-to-Land Programme' ಆಗಬೇಕಾಗಿದೆ. ಒಂದು variety release ಆದ ಮೇಲೆ ಅದು 5-7 ವರ್ಷಗಳಾದ ನಂತರ ರೈತರು ಬೆಳೆಗಳನ್ನು ಬೆಳೆಯಲು ಪ್ರಾರಂಭಿಸುತ್ತಾರೆ. ನಾವು ಬಹಳ innovative ಆಗಿ ಕೆಲಸವನ್ನು ಮಾಡಬೇಕು. Innovative farmers ಆಗಬೇಕು. ಒಂದು ವೇಳೆ ತಕ್ಷಣವೇ ಈ ವರ್ಷ ಹೊಸ ತಳಿ ರಿಲೀಸ್ ಆದರೆ ಅದರ quality and quantity ಚೆನ್ನಾಗಿದೆ, ಎಕರೆಗೆ ಇಳುವರಿ ಚೆನ್ನಾಗಿದೆ ಎಂದರೆ ತಕ್ಷಣವೇ ಆಗಬೇಕು. ತಾವು ನೋಡಿದಂತೆ ಎಲ್ಲಾ ಬೆಳೆಗಳ life span ಬಹಳ ಕಡಿಮೆ ಇದೆ. ನಾವು BT cotton ತೆಗೆದುಕೊಂಡು ಐದಾರು ವರ್ಷವಾಯಿತು. ಆದರೆ ಈಗ ಅದಕ್ಕೆ ಹೊಸದೊಂದು ರೋಗ ಬರುವುದಕ್ಕೆ ಪ್ರಾರಂಭವಾಗಿದೆ. ಅದೇ ರೀತಿ ಯಾವುದೇ ಬೆಳೆ ಇರಬಹುದು ಏಳೆಂಟು ವರ್ಷಗಳಾದ ನಂತರ ಅಚಾನಕ್ಕಾಗಿ ಯಾವುದೋ ಒಂದು ರೋಗ ಬಂದು ಬಿಡುತ್ತದೆ. ಆ ರೋಗ ಯಾವುದು ಎಂದು ಕಂಡು ಹಿಡಿಯುವುದಕ್ಕೇ ಮೂರು ವರ್ಷಗಳು ಬೇಕಾಗುತ್ತದೆ. ಆ ಮೂರು ವರ್ಷ ರೈತರಿಗೆ ಕೆಲಸ ಹೋಗುವ ಸ್ಥಿತಿ ನಿರ್ಮಾಣವಾಗುತ್ತದೆ. 'Lab-to-Land Programme' ಏನು ಮಾಡಿರುತ್ತೇವೆ, ಪರ್ಯಾಯವಾಗಿ ನಾವು ಮಾಡುವುದು ಹೆಚ್ಚಿನ ರೀತಿಯಲ್ಲಿ ಮುಟ್ಟುವ ಕೆಲಸ ಮಾಡಬೇಕಾಗುತ್ತದೆ.

ಉಪಸಭಾಪತಿಯವರು:- ಮಾನ್ಯ ಇಟಗಿಯವರೇ, ಸಾಕು ದಯವಿಟ್ಟು ಮುಗಿಸಿ.

ಶ್ರೀ ಬಸವರಾಜ ಪಾಟೀಲ್ ಇಟಗಿ:- ಮಾನ್ಯ ಸಭಾಪತಿಯವರೇ, ಕೊನೆಯದಾಗಿ ಒಂದೇ ಮಾತನ್ನು ಹೇಳಿ ಮುಗಿಸಿಬಿಡುತ್ತೇನೆ. ಮಾನ್ಯ ಶಾಣಪ್ಪರವರು Labour Union ಗೆ ಛೇರ್ಮನ್ ಆಗಿದ್ದರು. ಅವರು ಸಾಕಷ್ಟು ಕಾರ್ಖಾನೆಗಳ ಬಗ್ಗೆ ಹೇಳಿದರು. ಇವತ್ತು ಈ ಭಾಗವು ಅಭಿವೃದ್ಧಿಯಾಗಬೇಕಾದರೆ, ಶೇ.70ರಷ್ಟು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೃಷಿಕರಾಗಿರುವುದರಿಂದ agriculture based industries ಬಹಳ ಮುಖ್ಯವಾಗಿದೆ. ನಿಮ್ಮ ಕಡೆಗಳಲ್ಲಿ ಹಾಲಿನ ಉತ್ಪಾದನೆಯನ್ನು ಜಾಸ್ತಿ ಮಾಡುತ್ತಾರೆ. ಆದರೆ ನಿಮ್ಮಲ್ಲಿ ಹಾಲಿನಿಂದ ಹಾಲಿನ ಪುಡಿ, ಬೆಣ್ಣೆ ಈ ರೀತಿಯ by-product ಆಗುತ್ತದೆ. ಆ ರೀತಿ ಕೆಲಸ ಆಗಬೇಕಾಗಿದೆ. ನಮ್ಮಲ್ಲಿ ಒಂದೊಂದು ವರ್ಷ ಒಂದೊಂದು variety ಯಲ್ಲಿ yield ಜಾಸ್ತಿ ಬರುತ್ತದೆ. Yield ಜಾಸ್ತಿ ಬಂದಾಗ agricultural by-product ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಬೆಲೆ ಕುಸಿತವಾಗುತ್ತದೆ. ಒಂದು ವೇಳೆ by-product ಆಗದಿದ್ದರೆ, ಇರುವಂತಹ ದರವು ಕುಸಿಯುತ್ತದೆ. ಬಾಗಲಕೋಟೆ ಜಿಲ್ಲೆಯಲ್ಲಿ ಮಾನ್ಯ ಸದಸ್ಯರಾದ ಯತ್ನಾಳ್‌ರವರು ಅತ್ಯುತ್ತಮವಾದ ದಾಳಿಂಬೆ ಬೆಳೆಯನ್ನು ಬೆಳೆಯುತ್ತಾರೆ. ಒಂದು ವೇಳೆ by-product ಮಾಡದಿದ್ದರೆ 20 ರೂಪಾಯಿಗೆ ಮಾರಾಟವಾಗುವ ಹಣ್ಣು ಐದು ರೂಪಾಯಿಗೂ ಮಾರಾಟವಾಗುವುದಿಲ್ಲ. ಬೆಲೆ ಕುಸಿತವಾದರೆ ಕೊನೆಗೆ ರೈತರೇ ನಷ್ಟವನ್ನು ಅನುಭವಿಸುತ್ತಾರೆ. ಆ ಬೆಳೆಗೆ ಎಂತಹ injection ಹೊಡೆಯುತ್ತಾರೆಂದರೆ, ಮಕ್ಕಳಿಗೂ ಅಂತಹ injection ಕೊಡುವುದಿಲ್ಲ. ಆ ಗಿಡಕ್ಕೆ *streptocycline* injection ಹೊಡೆಯುತ್ತಾರೆ. ಅಲ್ಲಿ ಅಷ್ಟು ತೊಂದರೆ ಇದೆ. ಇವೆಲ್ಲವನ್ನೂ ಮನಗಂಡು ನಾವು ಅತಿ ಹೆಚ್ಚಿನ ರೀತಿಯಲ್ಲಿ by-product ಮಾಡಬೇಕಾಗಿದೆ.

ಕೀಟನಾಶಕಗಳ ಬಗ್ಗೆ ಹೇಳುವುದಾದರೆ, ಅದೊಂದು ಪ್ರಮುಖವಾದ ವಿಷಯವಾಗಿದೆ. ಇವತ್ತು ಸಾಕಷ್ಟು poisonous pesticides ನಮ್ಮ ಮಾರುಕಟ್ಟೆಯಲ್ಲಿ ಬರುತ್ತಿದೆ. ಅದರ ಬಗ್ಗೆ ಕೃಷಿ ಇಲಾಖೆಯು ಹೆಚ್ಚಿನ ಗಮನವನ್ನು ವಹಿಸಿಕೊಳ್ಳಬೇಕಾಗಿದೆ. ಆ ಕೀಟನಾಶಕದಿಂದ ಹುಳ ಸಾಯುವುದಿಲ್ಲ, ಮನುಷ್ಯರಾದ ನಾವು ಕೀಟನಾಶಕದ ವಾಸನೆಯಿಂದಲೇ ಸಾಯುತ್ತೇವೆ. ನಮ್ಮ ಕಡೆ ಭತ್ತದ ಬೆಳೆಗೆ ಹೊಡೆಯುವ ಕೀಟನಾಶಕವನ್ನು 'ಗುಳಿಗೆ' ಎನ್ನುತ್ತಾರೆ. ಅದರ botanical name ಬಗ್ಗೆ ನನಗೆ ಸರಿಯಾದ ಮಾಹಿತಿ ಇಲ್ಲ. ಮುಂಜಾನೆಯೇ ಗುಳಿಗೆ ಹೊಡೆಯುವುದಕ್ಕೆ ಹೋಗಬೇಕು, ಆ ಗುಳಿಗೆಗಳನ್ನು ಬೆಳೆಯ ಬುಡಕ್ಕೆ ಹಾಕಬೇಕು. ಆ ಗುಳಿಗೆಯನ್ನು ಬೆಳಗ್ಗೆ 10–11 ಗಂಟೆಯೊಳಗೆ ಹಾಕಬೇಕು. 12 ಗಂಟೆಯ ನಂತರ ಹಾಕಿದರೆ ಅವನಿಗೆ ಉಸಿರುಗಟ್ಟುವ ಹಾಗೆ ಆಗುತ್ತದೆ. ಕೆಲವು ಸಂದರ್ಭಗಳಲ್ಲಿ ಸಾವು ಸಹ ಸಂಭವಿಸಿದೆ. ಆದರೂ ಆ ಹುಳ ಮಾತ್ರ ಸಾಯುವುದಿಲ್ಲ. ಅದಕ್ಕೆ ಆ ರೈತರು ಅದು ಎಷ್ಟಾದರೂ ದುಬಾರಿಯಾಗಿರಲಿ, ವಿಷಕಾರಿಯಾಗಿರಲಿ ಮೊದಲು ಹುಳ ಸಾಯಬೇಕು, ಉತ್ಪಾದನೆ ದೊರಕಬೇಕೆಂಬುದು ಅವನ ತಲೆಯಲ್ಲಿರುತ್ತದೆ. ಏಕೆಂದರೆ, ಅವನ ಆದಾಯವೇ 'ಕಲಾಸ್' ಆಗುತ್ತದೆ. ಭತ್ತದ ಬೆಳೆಯನ್ನು ಒಂದು ಎಕರೆ ಬೆಳೆಯಬೇಕಾದರೆ ಸುಮಾರು 20 ರಿಂದ 25 ಸಾವಿರ ರೂಪಾಯಿಗಳನ್ನು invest

ಮಾಡಬೇಕಾಗುತ್ತದೆ. ಒಂದು ವೇಳೆ ಬೆಳೆ ಹಾನಿಯಾದರೆ, ಒಂದು ಎಕರೆಗೆ 25,000 ರೂಪಾಯಿಗಳು ಲಾಸ್ ಆಗಿ ಮೈ ಮೇಲೆ ಸಾಲದ ಹೊರೆ ಬಿದ್ದರೆ ಆ ರೈತ ಉಳಿಯುವುದೇ ಇಲ್ಲ. ಅಂತಹ ಸಂದರ್ಭಗಳು ಇರುತ್ತವೆ. ಕೀಟನಾಶಕಗಳ ಬಗ್ಗೆ ಕೂಡ ಅತ್ಯಂತ ಗಮನಹರಿಸಬೇಕಾಗುತ್ತದೆ.

ಉಪ ಸಭಾಪತಿಯವರು:– ಮಾನ್ಯ ಇಟಗಿಯವರೇ, conclude ಮಾಡಿ.

ಶ್ರೀ ಬಸವರಾಜ ಪಾಟೀಲ್ ಇಟಗಿ:– ಮಾನ್ಯ ಸಭಾಪತಿಯವರೇ, ತಮಗೆ ಪೂರ್ತಿ ಬೇಸರವಾದರೆ ಮುಗಿಸಿಬಿಡುತ್ತೇನೆ. ಒಂದೇ ಮಾತನ್ನು ಹೇಳಬೇಕೆಂದರೆ, ಹೇಳಿಬಿಡುತ್ತೇನೆ.

ಉಪ ಸಭಾಪತಿಯವರು:– ಹೇಳಿ.

ಶ್ರೀ ಬಸವರಾಜ ಪಾಟೀಲ್ ಇಟಗಿ:– ಮಾನ್ಯ ಸಭಾಪತಿಯವರೇ, ಕೃಷಿಯ ಬಗ್ಗೆ ಸಾಕಷ್ಟು ವಿಶ್ವವಿದ್ಯಾನಿಲಯಗಳಲ್ಲಿ ನಾವು ನಮ್ಮ ಮಕ್ಕಳಿಗೆ ಕಲಿಸುವುದು ಬಹಳ ಮುಖ್ಯವಾಗಿದೆ. ಇವತ್ತು ತೋಟಗಾರಿಕೆ ಮಾಡುತ್ತೇವೆ. ಕೃಷಿ, ಭತ್ತ, ಹತ್ತಿ ಬೆಳೆಗಳನ್ನು ಬೆಳೆಯುತ್ತೇವೆ. ಕಡೇಪಕ್ಷ ನಮಗೆ basic knowledge ಬೇಕಾಗುತ್ತದೆ. ಆ basic knowledge ಕೊಡಬೇಕಾದರೆ, ತರಬೇತಿ ಶಿಬಿರಗಳಾಗಬೇಕು, ಕೃಷಿ ಕಾಲೇಜುಗಳಲ್ಲಿ ಡಿಪ್ಲೊಮಾ ಕೋರ್ಸ್‌ಗಳನ್ನು ಮಾಡಬೇಕು.

(ಮುಂದು . .

(1144)21–11–2017/7–30/ಕೆಹೆಚ್/ಎಕೆ

ಶ್ರೀ ಬಸವರಾಜ ಪಾಟೀಲ್ ಇಟಗಿ (ಮುಂದು):– ಇವತ್ತಿನ ದಿವಸ ಸಾಕಷ್ಟು ಜನರು corporate farming ಅನ್ನು ಮಾಡುತ್ತಿದ್ದಾರೆ. Corporate farming ಗೆ ಯಾರ್‍ಯಾರು ಹೋಗಿದ್ದಾರೆ. ಅವರೆಲ್ಲ ವ್ಯವಸಾಯದಲ್ಲಿ ಯಶಸ್ಸನ್ನು ಕಂಡಿದ್ದಾರೆ. ಯಾರು small farming ಗೆ ಹೋಗಿದ್ದಾರೋ ಅಲ್ಲಿ ಕಡಿಮೆಯಾಗಿದೆ. Small farming ಇದ್ದಲ್ಲಿ ಕೂಡ 5 ಎಕರೆ ಒಳಗೆ composite farming ಅನ್ನು ಮಾಡಿದ್ದಾರೋ, ಅವರು ಮಾತ್ರ ಯಶಸ್ಸನ್ನು ಕಂಡಿದ್ದಾರೆ. Composite farming ಎಂದರೆ, ಆ ರೈತನ ಹತ್ತಿರ 5 ಎಕರೆ ಹೊಲ ಇದ್ದಲ್ಲಿ ಒಂದು ಎಕರೆಯಲ್ಲಿ ಸಿರಿಧಾನ್ಯಗಳನ್ನು, ಒಂದು ಎಕರೆಯಲ್ಲಿ ವಾಣಿಜ್ಯ ಬೆಳೆ; ಅಂದರೆ, ಹತ್ತಿ, ಮೆಣಸಿನ ಗಿಡವನ್ನು ಹಾಕುತ್ತಾನೆ. ಒಂದು ಎಕರೆಯಲ್ಲಿ ಬರೀ ಮೇವನ್ನು ಬೆಳೆಯುತ್ತಾನೆ. ಅವನ ಹತ್ತಿರ ಮೂರರಿಂದ ನಾಲ್ಕು ಹಸುಗಳನ್ನು ಇಟ್ಟುಕೊಂಡಿರುತ್ತಾನೆ. ಎರಡು ಮೇಕೆ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾಲ್ಕು ಕೋಳಿಗಳು ಈ ರೀತಿ ಇನ್ನು ಅನೇಕ ಬಗೆಯ composite farming ನಲ್ಲಿ ಇರುತ್ತದೆ. ರೈತನು ಏನಾದರೂ ಒಂದು ಬೆಳೆಯಲ್ಲಿ ವಿಫಲತೆಯನ್ನು ಕಂಡರೆ, ಇನ್ನೊಂದು ಬೆಳೆಯಲ್ಲಿ ಯಶಸ್ಸನ್ನು ಕಾಣುತ್ತಾನೆ. ರೈತನು ತನ್ನ ಜೀವನ ಅಂದರೆ, ಎರಡು ಹೊತ್ತಿನ ಊಟಕ್ಕೆ ಆಗುವಷ್ಟು sustain ಆಗುವಂತಹ ಒಂದು ಕೆಲಸವನ್ನು ಮಾಡುತ್ತಾನೆ. ಇವತ್ತಿನ ದಿವಸ ಸಣ್ಣ ರೈತರು ಏನಾದರೂ ಒಂದೇ ಬೆಳೆಯನ್ನು ಮಾಡುವುದಕ್ಕೆ ಹೋದರೆ, ಇದರಿಂದ ಸ್ವಲ್ಪ ನಷ್ಟವೂ ಆಗಬಹುದು ಮತ್ತು ಸ್ವಲ್ಪ ಯಶಸ್ಸನ್ನು ಸಹ ಕಾಣಬಹುದು Corporate farming ನವರು ಸಂಪೂರ್ಣವಾಗಿ ಶೇಕಡ 100 ರಷ್ಟು ಯಶಸ್ಸನ್ನು ಕಾಣುತ್ತಾರೆ. Corporate farm ಗೆ ಬಹಳ ಅವಕಾಶಗಳಿಲ್ಲ. ಏಕೆಂದರೆ, ನಾವು land reforms ಪ್ರಕಾರ ಅತ್ಯಂತ ಕಡಿಮೆ ಭೂಮಿ ಬರುವುದಂತಹದ್ದನ್ನು ಸರ್ಕಾರ ಮಾಡಿದೆ. ಇದು ಬಹಳ ಕಡಿಮೆ ಜನರ ಹತ್ತಿರ ಇದೆ. ಇವತ್ತಿನ ದಿವಸ corporate farming ಅನ್ನು ಮಾಡುವಂತಹ ಜನರಿದ್ದಾರೆ. ಅವರು ಹೆಚ್ಚಿನ ರೀತಿಯಲ್ಲಿ ಒಳ್ಳೆಯ ಕೆಲಸವನ್ನು ಮಾಡಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಂತರ drought resistant varieties ಕೂಡ evolve ಮಾಡುವಂತಹ ಕೆಲಸ ಇವತ್ತಿನ ದಿವಸ ನಮ್ಮ ವಿಶ್ವವಿದ್ಯಾಲಯಗಳಲ್ಲಿ ಆಗಬೇಕೆಂದು ಇಚ್ಛೆಯನ್ನು ವ್ಯಕ್ತಪಡಿಸುತ್ತಾ, ಇನ್ನು ಬಹಳಷ್ಟು ಮಾತನಾಡಬೇಕೆಂಬ ಅಪೇಕ್ಷೆ ಇದೆ. ಆದರೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿರುವುದಕ್ಕೆ ಧನ್ಯವಾದಗಳನ್ನು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಉತ್ತರ ಕರ್ನಾಟಕದ ಬೆಳವಣಿಗೆಗಾಗಿ ನಮ್ಮ ಸದನದಲ್ಲಿ ಚರ್ಚೆಯಾಗಿದ್ದು, ಉತ್ತರ ಕರ್ನಾಟಕ ಎಂದರೆ, ಆಹಾರದ ಕಣಜ. ಹತ್ತಿಯ ಗಣಿ, ಸಕ್ಕರೆಯ ಗಣಿ, ಶೇಂಗಾ, ಸೂರ್ಯಕಾಂತಿ ಎಣ್ಣೆಯ ಗಣಿ, ತೊಗರಿಯ ಗಣಿ, ಅದಿರು ಕೇಂದ್ರ, ಇಷ್ಟೆಲ್ಲಾ ಸಂಪತ್ತು ಉತ್ತರ ಕರ್ನಾಟಕ ಜಿಲ್ಲೆಯಲ್ಲಿ ಇದೆ. ಅದನ್ನು ಹೇಗೆ ಅಭಿವೃದ್ಧಿಪಡಿಸಬೇಕೆನ್ನುವಂತಹ ದಾರಿಯೊಳಗೆ ನಾವೆಲ್ಲೋ ಎಡವಿದ್ದೇವೆ ಎನ್ನುವಂತಹ ಭಾವನೆ ನನಗಿದೆ. ಡಾ॥ ನಂಜುಂಡಪ್ಪ ರವರು ಒಂದು ವರದಿಯನ್ನು ಕೊಟ್ಟರು. ಡಾ॥ ಸರೋಜಿನಿ ಮಹಿಷಿ ರವರು ಒಂದು ವರದಿಯನ್ನು ಕೊಟ್ಟರು. ಈ ಎರಡು ವರದಿಗಳನ್ನು ಎಲ್ಲೋ ಒಂದು ಕಸದ ಬುಟ್ಟಿಯಲ್ಲಿ ಹಾಕಿಬಿಟ್ಟಿದ್ದೇವೆ ಎನ್ನುವಂತಹ ಭಾವನೆ ನನಗಿದೆ. ಇಲ್ಲದಿದ್ದರೆ ಇದರ ಬಗ್ಗೆ ಅವರು ಏನು ಮಾಡಿದ್ದಾರೆ ಎಂದು ಹೇಳಬಹುದು. ಮಾನ್ಯ ಸದಸ್ಯರಾದ ವಿ.ಸೋಮಣ್ಣ ನವರು ಮಾತನಾಡುತ್ತಾ ಹೇಳಿದರು. ಉತ್ತರ ಕರ್ನಾಟಕ ಜಿಲ್ಲೆಯು ಜೀವನದಿಗಳ ನಾಡು. ಒಂದು ಕಡೆ ಕವಿಯು "ವಿಶಾಲ ಕರ್ನಾಟಕ ಆಗಿದಂದು ಆಧರಿಸಿ ಅಭಿಮಾನ ದೇವತೆಗಳು ನೀಡಿದರು ವರವಾ, ಉತ್ತರ ಕರ್ನಾಟಕ ಜನರಿಗೆ ಆಳೋ ಕರ್ನಾಟಕ ಎಂದೆಂದಿಗೂ" ಎಂದು

ಕವಿ ಹೇಳುತ್ತಾನೆ. ಉತ್ತರ ಕರ್ನಾಟಕದವರಲ್ಲಿ ಬಹಳಷ್ಟು ಜನರು ಮುಖ್ಯಮಂತ್ರಿಗಳಾಗಿದ್ದಾರೆ. ಆಳಿ ನೀವು, ಬೆಳವಣಿಗೆ ಆಗಿ ಎಂದು ಹೇಳಿದರು. ಆದರೆ ಅದೇನು ಆಗಬೇಕಾಗಿತ್ತೋ, ಅದು ಆಗಲಿಲ್ಲ. ಇವತ್ತಿನ ದಿವಸ ಮೈಸೂರಿನಿಂದ ಒಬ್ಬರು ಮುಖ್ಯಮಂತ್ರಿಯಾಗಿದ್ದಾರೆ. ಬಹುಶಃ ಇವರ ಕಾಲದಲ್ಲಿ ಏನಾದರೂ ಬೆಳವಣಿಗೆ ಆಗಬಹುದೇನೋ ಎಂಬ ನಂಬಿಕೆ ನನಗಿದೆ. ಮೈಸೂರು ಎಂದು ಏಕೆ ಹೇಳುತ್ತೇನೆಂದರೆ, ಕರ್ನಾಟಕ ಏಕೀಕರಣ ಚಳುವಳಿಗೆ ಮೈಸೂರಿನ ಕೊಡುಗೆಗಳು ಕಡಿಮೆಯೇನಲ್ಲ. ಮೈಸೂರು ಮಹಾರಾಜ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದಂತಹ ರಾಷ್ಟ್ರಕವಿ ಕುವೆಂಪು ರವರು ಕರ್ನಾಟಕ ಏಕೀಕರಣದ ಪರವಾಗಿದ್ದರು. ಅಖಂಡ ಕರ್ನಾಟಕವನ್ನು ಪ್ರತಿಪಾದಿಸುತ್ತಿದ್ದರು. ಕನ್ನಡಿಗರ ಒಗ್ಗೂಡಿಕೆಗೆ ಭಾಷಣ ಮಾಡುತ್ತಿದ್ದರು. ಇದು ಆಗಿನ ಅಧಿಕಾರಸ್ಥರಿಗೆ ಹಿಡಿಸಲಿಲ್ಲ. ಅದಕ್ಕೆ ರಾಜ್ಯ ಸರ್ಕಾರವು ಕುವೆಂಪು ರವರಿಗೆ ಪ್ರಾಧ್ಯಾಪಕರಾದ ನೀವು ರಾಜಕೀಯ ವಿಷಯಗಳನ್ನು ಕುರಿತು ಮಾತನಾಡುತ್ತಿದ್ದೀರಿ ಎಂದು ನೋಟೀಸ್ ಅನ್ನು ನೀಡಿತ್ತು. ಆ ಸಂದರ್ಭದಲ್ಲಿ ಕುವೆಂಪು ರವರು ಒಂದು ಪತ್ರವನ್ನು ಬರೆಯುವಾಗ, ಅದರಲ್ಲಿ ಒಂದು ಪದ್ಯವನ್ನು ಸಹ ಬರೆಯುತ್ತಾರೆ. "ಅಖಂಡ ಕರ್ನಾಟಕ ಆಳ್ತೋ, ನಮ್ಮ ಬೂಟಾಟದ ರಾಜಕೀಯ ನಾಟಕ, ಇಂದು ಬಂದು ನಾಳೆ ಸಂದು, ಓಹೋ ಸಚಿವ ಮಂಡಲ, ರುಚಿಸುವುದು ಅಂದು ಕೃತಕವಂದೂ ಸಿರಿಗನ್ನಡ ಸರಸ್ವತಿಯ ವಜ್ರ, ಕರ್ಣ, ಕುಂಡಲ, ಅಖಂಡ ಕರ್ನಾಟಕ ಆಳ್ತೋ, ನಮ್ಮ ನಾಲ್ಕು ದಿನದ ರಾಜಕೀಯ ನಾಟಕ, ನೃಪತುಂಗನೇ ಚಕ್ರವರ್ತಿ, ಪಂಪನಲ್ಲಿ ಮುಖ್ಯಮಂತ್ರಿ, ರನ್ನ, ಜನ್ನ, ನಾಗವರ್ಮ, ರಾಘವಾಂಕ, ಹರಿಹರ, ಬಸವೇಶ್ವರ, ನಾರಾಯಣಪ್ಪ, ಸರ್ವಜ್ಞ, ಷಡಕ್ಷರ, ಸರಸ್ವತಿಯೇ ರಚಿಸಿದೊಂದು ನಿತ್ಯ ಸಂಜೀವ ಮಂಡಲ, ನನಗೆ ರುಚಿಕರ ಕುಂಡಲ, ಕರ್ನಾಟಕ ಎಂಬುದೇನು ಹೆಸರೇ ಬರಿಯ ಮಣ್ಣಿಗೆ, ಮಂತ್ರ ಕಣ, ಶಕ್ತಿ ಕಣ, ತಾಯಿ ಕಣ, ದೇವಿ ಕಣ, ಬೆಂಕಿ ಕಣ, ಸಿಡಿಲು ಕಣ, ಕಾವ ಕೊಲ್ಲುವ ಒಲವ ಬಲದ ಪಡೆದ ಛಲದ ಚಂಡೀ ಕಣ, ಋಷಿಯ ಕಾಣ್ದ ಕಣ್ಣಿಗೆ" ಎಂದು ಕುವೆಂಪು ರವರು ಉತ್ತರಿಸಿದರು.

ಕರ್ನಾಟಕ ಏಕೀಕರಣವಾಗಬೇಕಾದರೆ ಎಷ್ಟು ಜನರ ಶ್ರಮ ಇದೆ, ಇದರಲ್ಲಿ ಎಷ್ಟು ಜನರು ಕೆಲಸ ಮಾಡಿದ್ದಾರೆ. ಇಷ್ಟು ವರ್ಷಗಳು ಕಳೆದರೂ ಕೂಡ ಇನ್ನು ಉತ್ತರ ಕರ್ನಾಟಕ ಬೆಳವಣಿಗೆ ಆಗಲಿಲ್ಲವೆಂದರೆ ಎಲ್ಲರಿಗೂ ಸಹ ನಾಚಿಕೆಯಾಗಬೇಕು. ನಾನು 29 ವರ್ಷದಿಂದ ಈ ಸದನದಲ್ಲಿದ್ದೇನೆ. ಪ್ರತಿ ವರ್ಷವೂ ಕೂಡ ಉತ್ತರ ಕರ್ನಾಟಕದ ಬಗ್ಗೆ ಚರ್ಚೆ ಮಾಡುತ್ತೇವೆ. ಉತ್ತರ ಕರ್ನಾಟಕದ ಬಗ್ಗೆ ಚರ್ಚೆ ಮಾಡುವಾಗ ಯಾವುದೇ ಒಂದು ಬೆಳವಣಿಗೆಯಾಗಬೇಕಾದರೆ, ರೈತನು ಬೆಳವಣಿಗೆಯಾಗಬೇಕು. ಮಾನ್ಯ ಬಸವರಾಜ ಪಾಟೀಲ್ ಇಟಗಿ ರವರು ಬಹಳ ಚೆನ್ನಾಗಿ ಮಾತನಾಡಿದರು. ಮೊದಲು ರೈತನು ಬೆಳವಣಿಗೆಯಾಗಬೇಕು. ರೈತನಿಗೆ ವ್ಯವಸಾಯ ಮಾಡಲು ನೀರನ್ನು ಕೊಟ್ಟರೆ, ಅವನು ನಿಮ್ಮನ್ನೇನೂ ಕೇಳುವುದಿಲ್ಲ. ರೈತರ ಜಮೀನಿಗೆ ನೀರು ಕೊಡಬೇಕೆಂದರೆ, ಬೋರ್‌ವೆಲ್‌ಗೆ ಕರೆಂಟ್ ಕೊಡಬೇಕು. ರೈತ ಈ ಎರಡನ್ನಷ್ಟೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೇಳುವುದು. ಅವನನ್ನು ಸರ್ಕಾರದ ಕಛೇರಿಗಳಿಗೆ ಅಲೆಯುವಂತೆ ಮಾಡಬಾರದು. ಖಾತೆ-ಕಿದ್ರಿ, ಕಂದಾಯ, ಮಣ್ಣು-ಮಸಿ ಎಂದು ಆತನನ್ನು ಅಲೆಸುತ್ತಾರೆ. ಬೆಳಗ್ಗೆ ಎದ್ದರೆ ರೈತನು ತಾಲ್ಲೂಕು ಕಛೇರಿಗೆ ಬರುತ್ತಾನೆ. ಮೊದಲು ಅವನನ್ನು ಕಛೇರಿಯೊಳಗೆ ಸುತ್ತಿಸುವಂತಹ ಕೆಲಸವೇನು ನಡೆಯುತ್ತಿದೆ, ಅದನ್ನು ನಿಲ್ಲಿಸುವಂತಹ ಸರ್ಕಾರ ನಮ್ಮದಾಗಬೇಕು. ರೈತನು ದಿನ ಬೆಳಗ್ಗೆ ಎದ್ದು ಕಛೇರಿಗೆ ಹೋಗುತ್ತಿದ್ದರೆ ವ್ಯವಸಾಯದ ಕೆಲಸ ಯಾವಾಗ ಮಾಡುವುದು? ಇದು ಬಹಳ ಮಹತ್ವವಾದಂತಹ ವಿಚಾರವಾಗಿದೆ. ಮೊದಲನೆ ಬಾರಿಗೆ ಸನ್ಮಾನ್ಯ ಜೆ.ಹೆಚ್.ಪಟೇಲ್ ರವರು ಲೋಕಸಭಾ ಸದಸ್ಯರಾದಾಗ ಪಾರ್ಲಿಮೆಂಟ್ ನಲ್ಲಿ ಕನ್ನಡ ಭಾಷೆಯಲ್ಲಿ ಮಾತನಾಡಿದರು. ನಮ್ಮ ಎಷ್ಟು ಜನರಿಗೆ ನಾವು ಕನ್ನಡದಲ್ಲಿ ಮಾತನಾಡಬೇಕೆನ್ನುವ ಅಭಿಲಾಷೆ ಇದೆ. ಕನ್ನಡದಲ್ಲಿ ನಾವು ರುಜು ಮಾಡುವುದಿಲ್ಲ. ಆಂಗ್ಲ ಭಾಷೆಯಲ್ಲಿಯೇ ನಾವು ರುಜು ಮಾಡುತ್ತೇವೆ. ದಿನವು "ಹಚ್ಚೇವು ಕನ್ನಡದ ದೀಪ" ಎಂದು ಹಾಡುತ್ತೇವೆ. ಆದರೆ "ಬರೆದೆವು ಕನ್ನಡದ ಅಕ್ಷರ" ಎನ್ನುವುದು ಇಲ್ಲ. ನಮಗೆ ಕನ್ನಡ ಭಾಷೆಯಲ್ಲಿ ಬರೆಯುವುದಕ್ಕೆ ಆಗಬೇಕಲ್ಲವೇ, ಅದು ನಮ್ಮಲ್ಲಿ ಇಲ್ಲ. ರೈತರ ಸುದ್ದಿಯನ್ನು ಏಕೆ ತೆಗೆದುಕೊಂಡಿದ್ದೇನೆಂದರೆ, ಉತ್ತರ ಕರ್ನಾಟಕದಲ್ಲಿ ಬಹಳಷ್ಟು ಜನರು ಬಗರ್‌ಹುಕುಂ ಸಾಗುವಳಿಯನ್ನು ಮಾಡುತ್ತಿದ್ದಾರೆ. ನಮ್ಮ ಕಂದಾಯ ಸಚಿವರು ಇದರ ಬಗ್ಗೆ ಪ್ರತಿದಿನ ಹೇಳುತ್ತಿದ್ದಾರೆ. ಮಾನ್ಯ ಸಚಿವರನ್ನು ನಾನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. 75 ವರ್ಷಗಳಿಂದ ಭೂಮಿಯನ್ನು ಸಾಗುವಳಿ ಮಾಡುತ್ತಿದ್ದೇನೆ ಎಂಬ ಮಾಹಿತಿ ಇರುವಂತಹ ದಾಖಲೆಗಳನ್ನು ಲಗತ್ತಿಸಿದ್ದರೆ, ಅದನ್ನು ಅಧಿಕಾರಿಗಳು ತಿರಸ್ಕರಿಸಿದ್ದು ಸಹ ನಿಜ. 75 ವರ್ಷದಿಂದ ಭೂಮಿಯನ್ನು ಸಾಗುವಳಿ ಮಾಡುತ್ತಿದ್ದೇನೆಂದು ರೈತನು ಯಾವ ದಾಖಲೆಗಳನ್ನು ಕೊಡಬೇಕು? ಸರ್ಕಾರದ ಹತ್ತಿರವೇ 10 ವರ್ಷ ಕಳೆದು 11ನೇ ವರ್ಷಕ್ಕೆ ಹೋದರೆ ಸಂಬಂಧಪಟ್ಟ ದಾಖಲೆಗಳೇ ಸಿಗುವುದಿಲ್ಲ. 75 ವರ್ಷದ ದಾಖಲೆಗಳನ್ನು ಕೊಟ್ಟರೆ, ನಿನಗೆ ಬಗರ್‌ಹುಕುಂ ಮಾಡುತ್ತೇವೆಂದು ಕಾನೂನುನ್ನು ಮಾಡಿದರೆ, ಅದು ಒಂದು ಕಾನೂನು ಆಗುತ್ತದೆಯೇ, ಇದು ಸರಿಯಿಲ್ಲ. ಈಗ ಕಾನೂನಿಗೆ ತಿದ್ದುಪಡಿಯಾಗಿ 75 ವರ್ಷಗಳಿಂದ ಆ ಪ್ರದೇಶದ ನಿವಾಸಿ ಎಂಬ ದಾಖಲೆಯನ್ನು ನೀಡಬೇಕು ಎಂದರೆ, ಅದನ್ನು ಲಗತ್ತಿಸಿದರೂ ಕೂಡ ಅರ್ಜಿಗಳು ತಿರಸ್ಕೃತವಾಗುತ್ತಿವೆ. ಇದನ್ನು ತಡೆದರೂ ಕೂಡ ಅವರಿಗೆ ಹಕ್ಕುಪತ್ರ ಸಿಗುವುದಿಲ್ಲ. 75 ವರ್ಷಗಳಿಂದ ಅವರ ತಾತ-ಮುತ್ತಾತ, ನನಗೆ 75 ವರ್ಷಗಳಾದ ಮೇಲೆ ನಿನಗೆ ಜಮೀನು ಅನ್ನು ಮಾಡಿಸುತ್ತೇನೆ. 40 ವರ್ಷ ವಯಸ್ಸಾದವನು ನಾನು 75 ವರ್ಷಗಳಿಂದ ವಾಸ ಮಾಡುತ್ತಿದ್ದೇನೆಂದು ಹೇಗೆ ಹೇಳುತ್ತಾರೆ. 'ನನ್ನ ತಾತ-ಮುತ್ತಾತಂದಿರು 75 ವರ್ಷಗಳಿಂದ ಇದ್ದಾರೆ' ಎಂದು ಹೇಳುತ್ತಾನೆ. ಇದನ್ನೇ ಕಾನೂನಿನಲ್ಲಿ ತೆಗೆದುಕೊಳ್ಳುತ್ತಾರೆ.

(ಮುಂದು)

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(1145)21-11-2017/7:40/ಎಸ್‌ಪಿಆರ್/ಎಕೆ

ಶ್ರೀ ರಾಮಚಂದ್ರಗೌಡ(ಮುಂದು):-

ಎಲ್ಲಯ್ಯಾ ನಿನಗೆ 35 ವರ್ಷ ವಯಸ್ಸಾಗಿದೆ ಎಂಬಂತಹ ತಪ್ಪುಗಳನ್ನು ಹುಡುಕುತ್ತಾರೆ. ಮಾನ್ಯ ರಾಮಕೃಷ್ಣ ಹೆಗಡೆ ರವರು ಮುಖ್ಯಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ ಯಾರೋ ಒಬ್ಬರು ಸಿಕ್ಕಾಪಟ್ಟೆಯಾಗಿ ಲಂಚವನ್ನು ತೆಗೆದುಕೊಳ್ಳುತ್ತಿದ್ದನಂತೆ. ಅವನನ್ನು ಎಲ್ಲಿಯೂ ಸಹ ಲಂಚ ದೊರೆಯದೇ ಇರುವಂತಹ ಸ್ಥಳಕ್ಕೆ ವರ್ಗಾವಣೆ ಮಾಡಿ ಎಂಬುದಾಗಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಮೇರೆಗೆ, ಅವನನ್ನು ಸಮುದ್ರದ ದಂಡೆಗೆ ವರ್ಗಾವಣೆ ಮಾಡಿ, ಬೆಳಗ್ಗೆಯಿಂದ ಸಂಜೆಯವರೆಗೆ ಸಮುದ್ರದ ದಡದಲ್ಲಿ ಕುಳಿತುಕೊಂಡು ಎಷ್ಟು ಅಲೆಗಳು ಎಂಬುದನ್ನು ಎಣಿಸುವ ಕೆಲಸವನ್ನು ವಹಿಸಿದರಂತೆ. ಒಂದೆರೆಡು ಮೂರು ದಿನಗಳು ಅವನು ಅಲೆಗಳನ್ನು ಎಣಿಸುತ್ತಾ ಕುಳಿತುಕೊಂಡ. ಏನು ಕತೆಯಿದು, ಪ್ರತಿದಿನವೂ ಅಲೆಗಳನ್ನು ಎಣಿಸುವುದೇ ಆಯಿತು ಎಂಬುದಾಗಿ ಹೇಳಿದ. ಆ ನಂತರದಲ್ಲಿ ಅವನಿಗೆ ಒಂದು ಉಪಾಯ ಹೊಳೆಯಿತು. ಸಮುದ್ರದಲ್ಲಿ ದೋಣಿಗಳು, ಹಡಗುಗಳು ಹೋಗುತ್ತಿವೆ, ಅವರುಗಳ ಮೇಲೆ ಷರತ್ತುಗಳನ್ನು ವಿಧಿಸಲು ಪ್ರಾರಂಭ ಮಾಡಿದನು. ನಾನು ಅಲೆಗಳನ್ನು ಎಣಿಸುತ್ತಿದ್ದೇನೆ ಹೀಗಾಗಿ ನೀವುಗಳು ಯಾರೂ ಸಮುದ್ರದಲ್ಲಿ ಹೋಗುವ ಹಾಗೆ ಇಲ್ಲ ಎಂಬುದಾಗಿ ಹೇಳುತ್ತಾನೆ. ಇದಾದ ನಂತರ ಅವರುಗಳು ಅವನಿಗೆ ಕಾಣಿಕೆಯನ್ನು ಕೊಡಲು ಪ್ರಾರಂಭಿಸಿದರು. ಈ ರೀತಿ ಎಲ್ಲಿಯಾದರೂ ಹುಡುಕಿ ಲಂಚವನ್ನು ತೆಗೆದುಕೊಳ್ಳುವವರು ತೆಗೆದುಕೊಳ್ಳುತ್ತಲೇ ಇರುತ್ತಾರೆ. ಇದಕ್ಕೆ ಕಡಿವಾಣವನ್ನು ಹಾಕುವುದು ಬಹಳ ಕಷ್ಟ ಎನ್ನುವಂತಹ ವಿಚಾರವನ್ನು ನಮ್ಮ ಶಿವಪ್ಪನವರು ಒಂದು ಬಾರಿ ನಮಗೆ ಹೇಳಿದರು. ಸ್ವಾಭಾವಿಕವಾಗಿ ಮನುಷ್ಯನಿಗೆ ತಾನು ಒಳ್ಳೆಯವನಾಗಬೇಕು, ತಪ್ಪಿತಸ್ಥನಾಗಬಾರದು, ದೇಶದ ಒಬ್ಬ ಸತ್ಪ್ರಜೆಯಾಗಬೇಕು ಎಂಬಿತ್ಯಾದಿ ಗುಣ, ಭಾವನೆಗಳು ಬರಬೇಕು. ಆ ರೀತಿಯಾದರೆ ಮಾತ್ರ, ದೇಶ ಅಭಿವೃದ್ಧಿ ಹೊಂದಲು ಸಾಧ್ಯ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳಬಾರದು ಏಕೆಂದರೆ ಮಾನ್ಯ ಸಭಾನಾಯಕರು ಸದನದಲ್ಲಿದ್ದಾರೆ. ಆದರೂ ನಾನು ಒಂದು ಮಾತನ್ನು ಹೇಳುತ್ತೇನೆ. ಅದೇನೆಂದರೆ, ಮಾನ್ಯ ಸಭಾನಾಯಕರ ತಂದೆ ದಿವಂಗತ ಎಂ.ಎಸ್.ರಾಮಯ್ಯನವರು 1961 ನೇ ಸಾಲಿನಲ್ಲಿ ಇಂಜನಿಯರಿಂಗ್ ಕಾಲೇಜ್‌ನ್ನು ಪ್ರಾರಂಭ ಮಾಡಿದರು. ಒಂದು ಸಾವಿರ ರೂಪಾಯಿಗಳ on demand ನ್ನು donation ರೂಪದಲ್ಲಿ ಕೊಟ್ಟು ನಾವು ಆ ಕಾಲೇಜಿಗೆ ಪ್ರವೇಶವನ್ನು ಪಡೆದುಕೊಂಡೆವು. ಸಭಾನಾಯಕರ ತಂದೆಯವರು ಹಾಗೂ ಅವರ ದೊಡ್ಡಣ್ಣರವರುಗಳು ನನಗೆ ತುಂಬಾ ಆತ್ಮೀಯರಾಗಿದ್ದರು. ಆ ರೀತಿಯಾಗಿ ಈ ಉತ್ತರ ಕರ್ನಾಟಕ ಭಾಗದಲ್ಲಿರುವಂತಹ ಜನರೂ ಕೂಡ ಕಾಲೇಜುಗಳನ್ನು, ಕೈಗಾರಿಕೆಗಳನ್ನು ಮಾಡಬೇಕು. ಜನರಿಗೆ ಕೈಗಾರಿಕೆಗಳನ್ನು, ಕಾಲೇಜುಗಳನ್ನು, ವಿದ್ಯಾಕೇಂದ್ರಗಳನ್ನು ಮಾಡಬೇಕೆಂದು ಅವರ ಮನಸ್ಸಿನಲ್ಲಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭಾವನೆಗಳು ಮೂಡಬೇಕು. ಇವತ್ತಿನ ದಿವಸ ಬೆಳಗಾವಿ ಜಿಲ್ಲೆಯಲ್ಲಿ Karnataka Lingayat Education Society ಅದ್ಭುತವಾದ ಕೆಲಸವನ್ನು ಮಾಡಿದೆ. ಇದು ಬೆಂಗಳೂರು ನಗರ ಪ್ರದೇಶದವರೆಗೂ ವ್ಯಾಪಿಸಿದೆ. ಇದರ ಸಂಸ್ಥಾಪಕರು ಜಾತಿಯ ಹೆಸರನ್ನು ಇಟ್ಟಿರಬಹುದು. ಆದರೆ ಅವರು ಕೊಡುತ್ತಿರುವಂತಹ ವಿದ್ಯಾದಾನ ಅಭೂತಪೂರ್ವವಾದುದು. ಆ ರೀತಿಯಲ್ಲಿ ನಮ್ಮ ಸರ್ಕಾರ ಹಣ ಇರುವ ಜನರಿಗೆ ಪ್ರೇರಣೆಯನ್ನು ಕೊಡಬೇಕು. ಪ್ರಸ್ತುತ ಮಾನ್ಯ ಸದಸ್ಯರಾದ ಎಸ್.ಆರ್.ಪಾಟೀಲ್‌ರವರು ಶಿಕ್ಷಣ ಸಂಸ್ಥೆಯನ್ನು ನಡೆಸುತ್ತಿದ್ದಾರೆ. ಇಂತಹ ಕೆಲಸಗಳನ್ನು ಸರ್ಕಾರವೊಂದೇ ಮಾಡುವುದಕ್ಕಾಗುವುದಿಲ್ಲ. ಸಾರ್ವಜನಿಕರೂ ಸಹ ಇದರಲ್ಲಿ ಕೈಜೋಡಿಸಬೇಕು ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇಷ್ಟೊಂದು ನಿಧಿಗಳನ್ನು ಹೊಂದಿರುವಂತಹ ರಾಜ್ಯದ ಭಾಗದಲ್ಲಿ ರಸ್ತೆಗಳನ್ನು ನಿರ್ಮಾಣ ಮಾಡುವುದು ಬಹಳ ಕಷ್ಟವಾಗಿದೆ. ಏಕೆಂದರೆ, ಈ ಭಾಗದಲ್ಲೆಲ್ಲಾ ಕರಿ ಮಣ್ಣಿದೆ. ಕರಿ ಮಣ್ಣಿಗೆ ಮಿಶ್ರಣ ಮಾಡಲು ಜಲ್ಲಿಯಂತಹ ಒಂದು ವಸ್ತು ಬೇಕಾಗುತ್ತದೆ. ಆಂಗ್ಲ ಭಾಷೆಯಲ್ಲಿ ಅದನ್ನು 'moram' ಎಂದು ಕರೆಯುತ್ತಾರೆ. ಅದು ಇಲ್ಲಿ ದೊರೆಯುವುದಿಲ್ಲ. ಹೀಗಾಗಿ ಅದನ್ನು ಬೇರೆ ಕಡೆಯಿಂದ ತಂದು ಹಾಕಬೇಕು. ನಮ್ಮ ಸ್ನೇಹಿತರಾದ ಮಾನ್ಯ ಸದಸ್ಯರಾದ ಅಲ್ಲಂ ವೀರಭದ್ರಪ್ಪ ರವರು ಮಾತನಾಡುವಾಗ ಜಿಲ್ಲೆಗೆ ಇಂತಿಷ್ಟು ಅನುದಾನ ನೀಡಬೇಡಿ ಎಂಬುದಾಗಿ ಬಹಳ ಚೆನ್ನಾಗಿ ಹೇಳಿದರು. ರಸ್ತೆಯನ್ನು ನಿರ್ಮಾಣ ಮಾಡಬೇಕಾದರೆ, ಒಂದು ಕಿಲೋಮೀಟರ್‌ಗೆ ಇಂತಿಷ್ಟು ಹಣ ಎಂದು ಬಿಡುಗಡೆ ಮಾಡಿ. ಆಯಾಯ ಜಿಲ್ಲೆಗಳಲ್ಲಿ ಎಷ್ಟು ಕಿಲೋಮೀಟರ್‌ಗಳ ರಸ್ತೆಗಳಿದೆ, ಆ ರಸ್ತೆಗಳನ್ನು ನಿರ್ಮಿಸಲು ಎಷ್ಟು ಹಣ ಬೇಕು it should be proportionate to the length of the road ಎಂಬುದಾಗಿ ಹಣವನ್ನು ಬಿಡುಗಡೆ ಮಾಡಬೇಕು.

ಎರಡನೆಯ ವಿಚಾರವೇನೆಂದರೆ, ವಿದ್ಯಾಭ್ಯಾಸಕ್ಕೆ ಬಹಳ ಮಹತ್ವವನ್ನು ಕೊಡಬೇಕು. ಎಲ್ಲಿ ವಿದ್ಯಾಭ್ಯಾಸವಿರುವುದಿಲ್ಲ, ಅಲ್ಲಿ ಏನೂ ಆಗುವುದಿಲ್ಲ. ವಿದ್ಯಾಭ್ಯಾಸ, ರೈತರು ಹಾಗೂ ಕಾರ್ಖಾನೆಗಳು ಇವುಗಳನ್ನು ಮಾಡಿದರೆ, ನಮ್ಮ ಉತ್ತರ ಕರ್ನಾಟಕ ಪ್ರದೇಶದ ಅಭಿವೃದ್ಧಿಯಾಗುತ್ತದೆ. ಮಾತನಾಡಲು ಹಲವಾರು ವಿಚಾರಗಳಿವೆ. ನಮ್ಮ ಸದನದಲ್ಲಿ ಅನೇಕ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ನಾನು ಅವರುಗಳು ಪ್ರಸ್ತಾಪಿಸಿರುವ ಅಂಶಗಳನ್ನೇ ಪುನರಾವರ್ತಿಸಿದರೆ ಅದು ಸರಿಯಾಗುವುದಿಲ್ಲ. ಏಕೆಂದರೆ, ಮೊನ್ನೆಯ ದಿವಸ ನಾನು ತಿರುಪತಿ ಕ್ಷೇತ್ರಕ್ಕೆ ಹೋಗಿದ್ದೇನೆ. 40 ವರ್ಷಗಳ ನಂತರ ಅಪರೂಪವಾಗಿ ತಿರುಪತಿಗೆ ಹೋಗಿದ್ದರಿಂದ ಬೆಟ್ಟವನ್ನು ಹತ್ತಕೊಂಡು ಹೋಗುತ್ತಿದ್ದೆನು. ಅಲ್ಲಿನ ಯಾತ್ರಾರ್ಥಿಗಳು

ಗೋವಿಂದನ ನಾಮಸ್ಮರಣೆಯನ್ನು ಮಾಡುತ್ತಾ ಬೆಟ್ಟವನ್ನು ಹತ್ತುತ್ತಿದ್ದರು. ಆ ಪೈಕಿ ಒಬ್ಬ ಹೆಂಗಸು 'ಅವರಂದ ಹಂಗೆ ಅಂದೆ' ಎಂಬುದಾಗಿ ಹೇಳುತ್ತಿದ್ದಳು. ಆಗ ನಾನು ಸದರಿ ಹೆಂಗಸಿನ ಯಜಮಾನನನ್ನು ಕುರಿತು ಆ ಹೆಂಗಸು ಏಕೆ ಹಾಗೆ ಹೇಳುತ್ತಿದ್ದಾಳೆ ಎಂಬುದಾಗಿ ಕೇಳಿದೆನು. ಇದಕ್ಕೆ ಪ್ರತ್ಯುತ್ತರವಾಗಿ ಅವರು ಕಳೆದ ವಾರವಷ್ಟೆ ಆ ಹೆಂಗಸಿಗೆ ಮದುವೆಯಾಗಿದೆ, ಅವರ ಯಜಮಾನರು ಹೆಸರು ಗೋವಿಂದ. ಹೀಗಾಗಿ ಅವಳು ಗಂಡನ ಹೆಸರು ಹೇಳದೇ ಬೇಜಾರಾಗಿ, 'ಅವರಂದ ಹಂಗೆ ಅಂದೆ' ಎಂಬುದಾಗಿ ಹೇಳುತ್ತಿದ್ದಾಳೆ. ನಾನು ಇತರೆ ಸದಸ್ಯರುಗಳು ಹೇಳಿರುವ ಅಂಶಗಳನ್ನು ಹೇಳಿದರೆ, ಮೇಲಿನ ರೀತಿಯಾಗಿ ಆಗುತ್ತದೆ. ಇತರೆ ಸದಸ್ಯರುಗಳು ಎಲ್ಲಾ ಮಾತನಾಡಿದ್ದಾರೆ. ಆ ಮಾತುಗಳಿಗೆ ಸ್ವಲ್ಪ ಮಾತನ್ನು ಸೇರಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್):– ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಉತ್ತರ ಕರ್ನಾಟಕದ ಅಭಿವೃದ್ಧಿಯ ಬಗ್ಗೆ ಚರ್ಚೆಯನ್ನು ಮಾಡಬೇಕೆಂಬ ಉದ್ದೇಶದಿಂದ ನನಗೆ ಮಾತನಾಡಲು ಅವಕಾಶವನ್ನು ನೀಡಿದ್ದಕ್ಕಾಗಿ ತಮಗೆ ಮೊದಲು ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಇವತ್ತಿನ ದಿವಸ ಉತ್ತರ ಕರ್ನಾಟಕದ ಪ್ರದೇಶಗಳ ಅಭಿವೃದ್ಧಿಯಾಗದೇ ಇರುವಂತಹ ಪರಿಸ್ಥಿತಿಗೆ ಕಾರಣರು ಯಾರು ಎಂಬುದರ ಬಗ್ಗೆ ಆತ್ಮಾವಲೋಕನವನ್ನು ಮಾಡಿಕೊಳ್ಳಬೇಕಾಗಿದೆ. ಅಖಂಡ ಕರ್ನಾಟಕ ಸಮಗ್ರವಾಗಿ ಅಭಿವೃದ್ಧಿಯಾಗಬೇಕಾದಂತಹ ಉದ್ದೇಶದಿಂದ ಕರ್ನಾಟಕ ರಾಜ್ಯದ ಏಕೀಕರಣವಾಯಿತು. ಕರ್ನಾಟಕ ರಾಜ್ಯದ ಏಕೀಕರಣದ ನಂತರ, ಭಾಷಾವಾರು ಪ್ರಾಂತ್ಯಗಳ ರಚನೆಯೂ ಸಹ ಆಯಿತು. ಒಂದು ಮುಂಬೈ–ಕರ್ನಾಟಕ ಹಾಗೂ ಮತ್ತೊಂದು ಹೈದ್ರಾಬಾದ್–ಕರ್ನಾಟಕಗಳೆಂಬ ಎರಡು ಪ್ರದೇಶಗಳು ಉತ್ತರ ಕರ್ನಾಟಕ ಭಾಗದಲ್ಲಿ ಬರುತ್ತವೆ. ಮುಂಬೈ ಪ್ರದೇಶ ವ್ಯಾಪ್ತಿಯಿಂದ ಈ ಹಿಂದೆ ಆರಿಸಿ ಬಂದಂತಹ ದಿವಂಗತ ಮೊರಾರ್ಜಿ ದೇಸಾಯಿ ಎಂಬುವವರು ದೇಶದ ಪ್ರಧಾನಮಂತ್ರಿಗಳಾಗಿದ್ದರು. ಈ ಭಾಗದ ಪ್ರದೇಶಗಳಲ್ಲಿ ಈ ಹಿಂದೆ ಪೇಶ್ವೆಗಳ ಮತ್ತು ಆದಿಲ್ ಶಾಹಿಯ ಆಡಳಿತವಿತ್ತು. ಈ ರೀತಿಯ ಅನೇಕ ಆಡಳಿತಗಳ ಮಧ್ಯದಲ್ಲಿಯೂ ಸಹ ಮುಂಬೈ–ಕರ್ನಾಟಕ ಪ್ರದೇಶ ವ್ಯಾಪ್ತಿಯಲ್ಲಿ ಶಿಕ್ಷಣಕ್ಕೆ ಹೆಚ್ಚು ಮಹತ್ವವನ್ನು ನೀಡುತ್ತಾ ಬಂದಿದೆ. ಈ ಭಾಗದ ಮಠಾಧೀಶರು ವಿಶೇಷವಾಗಿ ಲಿಂಗಾಯತ–ವೀರಶೈವ ಸಮುದಾಯದ ಶಿಕ್ಷಣ ಸಂಸ್ಥೆಗಳು ಶಿಕ್ಷಣ ಕ್ಷೇತ್ರಕ್ಕೆ ಕೊಡುಗೆಗಳನ್ನು ನೀಡಿದ್ದಾರೆ. ಲಿಂಗಾಯತ–ವೀರಶೈವ ಎಂಬ ಪದಗಳನ್ನು ಉಪಯೋಗಿಸಿದ ತಕ್ಷಣವೇ ಮಾನ್ಯ ಸದಸ್ಯರಾದ ಬಸವರಾಜ ಶಿವಲಿಂಗಪ್ಪ ಹೊರಟ್ಟಿರವರು ನಮ್ಮನ್ನು ನೋಡುತ್ತಿದ್ದಾರೆ. ಇವತ್ತಿನ ದಿವಸ ಉತ್ತರ ಕರ್ನಾಟಕ ಪ್ರದೇಶ ಭಾಗದಲ್ಲಿ ಅಷ್ಟೇ ಅಲ್ಲ ಇಡೀ ಕರ್ನಾಟಕ ರಾಜ್ಯದಲ್ಲಿಯೇ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚು ಮಹತ್ವವನ್ನು ಕೊಟ್ಟಂತಹ ಸಮುದಾಯ ನಮ್ಮ ಮಠ–ಮಾನ್ಯಗಳಾಗಿವೆ. ಹೈದ್ರಾಬಾದ್–ಕರ್ನಾಟಕ ಪ್ರದೇಶ ಭಾಗಗಳಲ್ಲಿ ಈ ಹಿಂದೆ ನಿಜಾಮರ

ಆಡಳಿತವಿತ್ತು. ಅವರ ಅವಧಿಯಲ್ಲಿ ಈ ಪ್ರದೇಶಗಳು ಸಾಕಷ್ಟು ದೌರ್ಜನ್ಯಕ್ಕೆ ಒಳಪಟ್ಟು ಅನಕ್ಷರಸ್ಥ ಜನರು ಹೆಚ್ಚಾಗಿದ್ದರು. ನಿಜಾಮರ ಆಡಳಿತ ವ್ಯವಸ್ಥೆಯಲ್ಲಿ ಜನರಿಗೆ ತಮ್ಮ ಜೀವನವನ್ನು ನಿರ್ವಹಣೆ ಮಾಡುವುದು ಸಾಧ್ಯವಿಲ್ಲ ಎನ್ನುವಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಮುಂಬೈ-ಕರ್ನಾಟಕ ಹಾಗೂ ಹೈದ್ರಾಬಾದ್-ಕರ್ನಾಟಕ ಎರಡೂ ಪ್ರದೇಶಗಳು ಒಟ್ಟುಗೂಡಿ ಇಂದು ಉತ್ತರ ಕರ್ನಾಟಕ ಪ್ರದೇಶವಾಗಿದೆ. ಈ ಪ್ರದೇಶದ ಅಭಿವೃದ್ಧಿಯ ಬಗ್ಗೆ ಚಿಂತನೆಯನ್ನು ಮಾಡುವುದಕ್ಕೆ ಈ ಸದನದಲ್ಲಿ ನಾವು ಸಭೆ ಸೇರಿದ್ದೇವೆ.

ಸ್ವತಂತ್ರ ಭಾರತ ನಿರ್ಮಾಣವಾದ ನಂತರ ಚುನಾಯಿತ ಲೋಕಸಭಾ ಅಥವಾ ವಿಧಾನಸಭಾ ಜನಪ್ರತಿನಿಧಿಗಳು ಯಾರೇ ಇರಬಹುದು ಈ ಭಾಗದ ಅಭಿವೃದ್ಧಿಗಾಗಿ ಯಾವ ರೀತಿಯಲ್ಲಿ ಪರಿಣಾಮಕಾರಿಯಾಗಿ ಕೆಲಸಗಳನ್ನು ಮಾಡಿದ್ದೇವೆ ಎಂಬ ಬಗ್ಗೆ ಆತ್ಮಾವಲೋಕನವನ್ನು ನಾವು ಮೊದಲು ಮಾಡಿಕೊಳ್ಳಬೇಕಾಗಿದೆ. ಈ ಸದನ ಪ್ರಾರಂಭವಾದಾಗಿನಿಂದ ಹಿಡಿದು ಸತತವಾಗಿ ಮಾಧ್ಯಮಗಳಲ್ಲಿ ಶಾಸಕರುಗಳ ಗೈರು ಹಾಜರಿಯ ಬಗ್ಗೆ ಮಾಧ್ಯಮದವರು ಖಾಲಿಯಿರುವ ಕುರ್ಚಿಗಳನ್ನು ತೋರಿಸುತ್ತಿದ್ದಾರೆ. ನಮ್ಮ ಜನಪ್ರತಿನಿಧಿಗಳಿಗೆ ಇದರ ಬಗ್ಗೆ ಎಷ್ಟು ಕಾಳಜಿ ಇದೆ ಎನ್ನುವ ಬಗ್ಗೆ ನಾವು ಆತ್ಮಾವಲೋಕನವನ್ನು ಮಾಡಿಕೊಳ್ಳಬೇಕಾಗಿದೆ. ಇವತ್ತಿನ ದಿವಸ ಮಾಧ್ಯಮಗಳು ಸದನಕ್ಕೆ ಶಾಸಕರುಗಳ ಗೈರು ಹಾಜರಿಯ ಅಂಶವನ್ನು ಜನರ ಮುಂದಿಡುತ್ತಿವೆ. ಇದರ ಜೊತೆಗೆ ರಾಜಕೀಯ ಪಕ್ಷಗಳೂ ಸಹ ಈ ವಿಚಾರದಲ್ಲಿ ಆತ್ಮಾವಲೋಕನವನ್ನು ಮಾಡಿಕೊಳ್ಳಬೇಕಾಗಿದೆ. ಯಾವ ಶಾಸಕರು ಕ್ರಿಯಾಶೀಲರಾಗಿ ಕೆಲಸವನ್ನು ಮಾಡುತ್ತಿದ್ದಾರೆ, ಸದನದಲ್ಲಿ ಅವರ ಉಪಸ್ಥಿತಿ ಯಾವ ಪ್ರಮಾಣದಲ್ಲಿದೆ, ಯಾವ ರೀತಿಯ ಪ್ರಶ್ನೆಗಳನ್ನು ಕೇಳುವುದರ ಮೂಲಕ ಆಯಾ ಭಾಗದ ಜನರ ಸಮಸ್ಯೆಗಳನ್ನು ಪರಿಹರಿಸಬಹುದು ಎನ್ನುವಂತಹ ಪ್ರಮುಖ ಅಂಶಗಳ ಬಗ್ಗೆಯೂ ಸಹ ಯೋಚಿಸಬೇಕಾಗುತ್ತದೆ. ಚುನಾವಣೆಯಲ್ಲಿ ಸ್ಪರ್ಧಿಸಲು ಜನಪ್ರತಿನಿಧಿಗಳಿಗೆ ಟಿಕೇಟ್‌ನ್ನು ಹಂಚಿಕೆ ಮಾಡುವ ಮುನ್ನ ರಾಜಕೀಯ ಪಕ್ಷಗಳು ಈ ವಿಚಾರದಲ್ಲಿ ಯೋಚನೆಯನ್ನು ಮಾಡಬೇಕು. ಇವತ್ತಿನ ದಿವಸ ಏನಾಗಿದೆ ಎಂದರೆ, ಜಾತಿ ರಾಜಕಾರಣ, ಹಣದ ರಾಜಕಾರಣ ಬಂದು, ಒಳ್ಳೆಯ ಜನಪ್ರತಿನಿಧಿಗಳು ಚುನಾವಣೆಗೆ ಸ್ಪರ್ಧಿಸಲು ಆಗುತ್ತಿಲ್ಲ. ಇವತ್ತಿನ ದಿವಸ High Command ಎಂಬ ಸಂಸ್ಕೃತಿ ಬಂದ ಮೇಲೆ, ನಿಜವಾದ, ಪ್ರಾಮಾಣಿಕ ರಾಜಕಾರಣಿಗಳು ರಾಜಕಾರಣದಿಂದ ಕಣ್ಮರೆಯಾಗುತ್ತಿದ್ದಾರೆ. ಅದರಲ್ಲೂ ಪ್ರಮುಖವಾಗಿ ಬಳ್ಳಾರಿ ಜಿಲ್ಲೆಯಲ್ಲಿ ಗಣಿ ಉದ್ಯಮ ಪ್ರಾರಂಭವಾಯಿತು. ಇದರಿಂದಾಗಿ ಬಹುಶಃ ಉತ್ತರ ಕರ್ನಾಟಕದ ರಾಜಕೀಯ ವ್ಯವಸ್ಥೆಯು ಇವತ್ತಿನ ದಿವಸ ಹಾಳಾಗಿ ಹೋಗಿದ್ದರೆ, ಅದಕ್ಕೆ ಪ್ರಮುಖ ಕಾರಣ ಬಳ್ಳಾರಿಯ ಗಣಿ ಉದ್ಯಮವಾಗಿದೆ. ಈ ಹಿಂದೆ ನಾವುಗಳೆಲ್ಲರೂ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಹಳ ಕಡಿಮೆ ಖರ್ಚು ಮಾಡಿ ವಿಧಾನಸಭಾ ಸದಸ್ಯರಾಗಿ ಆರಿಸಿ ಬಂದಿದ್ದೇವು. ಅವತ್ತಿನ ದಿವಸದ ಚುನಾವಣಾ ವೆಚ್ಚದ ಮೊತ್ತ ಎಷ್ಟು ಎಂದು ಹೇಳಿದರೆ, ಅದನ್ನು ಯಾರೂ ಸಹ ನಂಬುವುದಿಲ್ಲ.

(ಮುಂದು)

(1146)7.50/21.11.2017/ಸಿಎಸ್/ಆರ್ಎನ್

ಶ್ರೀ ಬಸನಗೌಡ ಆರ್ ಪಾಟೀಲ್(ಯತ್ನಾಳ್)(ಮುಂದು):_ ಈಗ ಎಂಎಲ್ಎ ಮತ್ತು ಲೋಕಸಭೆ ಸದಸ್ಯರಾಗಬೇಕಾದರೆ ಕೋಟಿ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಇಂತಹವರು ಹಣವನ್ನು ಖರ್ಚು ಮಾಡಿ, ಜನಪ್ರತಿನಿಧಿಗಳಾಗುವುದರಿಂದ ಒಳ್ಳೆಯ ಹಾಗೂ ಪ್ರಾಮಾಣಿಕ ರಾಜಕಾರಣಿಗಳು, ಒಳ್ಳೆಯ ಮಾತುಗಾರರು, ಜನಪರ ಚಿಂತನೆಯನ್ನು ಮಾಡುವಂತಹವರು ವಿಧಾನಸಭೆ ಮತ್ತು ವಿಧಾನಪರಿಷತ್ತಿಗೆ ಬರದೇ ಹೋದರೆ ಅಭಿವೃದ್ಧಿ ಎಲ್ಲಿ ಆಗುತ್ತದೆ? ನಮ್ಮ ರಾಜ್ಯದಲ್ಲಿ ರಿಯಲ್ ಎಸ್ಟೇಟ್ ಬಂತು, ಅಬಕಾರಿ ಬಂತು, ಕಬ್ಬಿಣದ ಅದಿರನ ವ್ಯವಹಾರ ಬಂತು. ಇದರಿಂದ ನಮ್ಮ ಮುಂದೆಯೇ ಸ್ಕೂಟರಿನಲ್ಲಿ ಓಡಾಡುತ್ತಿದ್ದ ಜನರು ಎರಡೇ ವರ್ಷದಲ್ಲಿ ಹೆಲಿಕಾಪ್ಟರ್‌ನಲ್ಲಿ ಓಡಾಡಲಿಕ್ಕೆ ಶುರು ಮಾಡಿದರು. ನಾನು ಕೇಂದ್ರ ಸಚಿವನಾಗಿದ್ದ ಕಾಲದಲ್ಲಿ ಒಂದು ಸಲ ಬಳ್ಳಾರಿಗೆ ಹೋದ ಸಂದರ್ಭದಲ್ಲಿ ನನ್ನ ಸ್ವಾಗತಕ್ಕೆ 5 ರೂಪಾಯಿಯ ಹಾರ ತೆಗೆದುಕೊಂಡು ಮೂವರು ಮಂದಿ ಸ್ಕೂಟರ್‌ನಲ್ಲಿ ಬಂದಿದ್ದರು. ನಾನು ಜವಳಿ ಸಚಿವಸ್ಥಾನದಿಂದ ರೈಲ್ವೇ ಸಚಿವನಾಗಿ ಮತ್ತೊಮ್ಮೆ ಬಳ್ಳಾರಿಗೆ ಹೋದಾಗ ನನ್ನ ಸ್ವಾಗತಕ್ಕೆ ಅದೇ ಜನರು 50 ಗಾಡಿಗಳಲ್ಲಿ ಬಂದಿದ್ದರು. ಹಣದಿಂದ ವ್ಯವಸ್ಥೆ ನಡೆಯುವ ಪರಿಸ್ಥಿತಿಯಲ್ಲಿ ಇಂದು ನಾವಿದ್ದೇವೆ. 500 ಕೋಟಿ ರೂಪಾಯಿಯಗಳನ್ನು ವೆಚ್ಚ ಮಾಡಿ ಕಟ್ಟಿರುವ ಈ ಸುವರ್ಣ ಸೌಧದಲ್ಲಿ ಸರ್ಕಾರ 60 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ 10 ದಿವಸಗಳ ಕಾಲ ಅಧಿವೇಶನವನ್ನು ನಡೆಸಿದರೂ ಸಹ ಏನೂ ಅಭಿವೃದ್ಧಿಯಾಗುವುದಿಲ್ಲ. ನಮಗೆ ಬೆಂಗಳೂರು ದೂರ ಆಗುತ್ತದೆ, ಬೆಂಗಳೂರು ಇಲ್ಲಿಂದ 600 ಕಿ.ಮೀ ಮತ್ತು ಬೀದರ್‌ನಿಂದ 800 ಕಿ.ಮೀ ದೂರದಲ್ಲಿದೆ, ಅಲ್ಲಿಗೆ ಹೇಗೆ ಹೋಗುವುದು ಅದರಿಂದ ನಮ್ಮ ಭಾಗದಲ್ಲಿ ಅಭಿವೃದ್ಧಿ ಆಗುತ್ತಿಲ್ಲವೆಂದು ಆರೋಪ ಮಾಡಲಾಗುತ್ತಿತ್ತು, ಸಂಸತ್ ಸದಸ್ಯರು ಬಿಜಾಪುರದಿಂದ ದೆಹಲಿಗೆ ಹೋಗಬೇಕಾದರೆ ರೈಲಿನಲ್ಲಿ ಎರಡು ದಿವಸಗಳ ಕಾಲ ಹೋಗಬೇಕಾಗಿತ್ತು, ಅಲ್ಲಿಗೆ ಹೋದ ಕೂಡಲೇ, ವಾತಾವರಣ ಬದಲಾಗಿ ಆನಾರೋಗ್ಯಕ್ಕೆ ಸದಸ್ಯರು ಒಳಗಾಗುತ್ತಿದ್ದರು. ಹಾಗಾಗಿ ಯಾವುದೇ ಅಭಿವೃದ್ಧಿ ಕಾರ್ಯಗಳು ಈ ಭಾಗದಲ್ಲಿ ಹೆಚ್ಚಾಗಿ ನಡೆಯಲಿಲ್ಲ. ದಕ್ಷಿಣ ಕರ್ನಾಟಕದವರು ನಮಗೆ ಅನ್ಯಾಯ ಮಾಡಿದರು ಎಂದು ನಮ್ಮ ಉತ್ತರ ಕರ್ನಾಟಕ ಭಾಗದ ರಾಜಕಾರಣಿಗಳು ಹೇಳಿಕೊಳ್ಳುತ್ತಾರೆ. ಚುನಾವಣೆಗಳು ಬಂದಾಗ ರಾಜಕಾರಣಿಗಳು ಈ ಉತ್ತರ ಕರ್ನಾಟಕ ಭಾಗಕ್ಕೆ ಅನ್ಯಾಯ ಆಗಿದೆ, ಈ

ಭಾಗದಲ್ಲಿ ಇಷ್ಟು ಕಾಲೇಜುಗಳು ಬರಬೇಕಾಗಿತ್ತು, ಆದರೆ ಬಂದಿಲ್ಲ, ಪಶು ವೈದ್ಯಕೀಯ ಆಸ್ಪತ್ರೆಗಳು ಬರಲಿಲ್ಲ, ಡಾ॥ ನಂಜುಂಡಪ್ಪನವರ ವರದಿ ಜಾರಿಯಾಗಲಿಲ್ಲ ಎಂದು ಹೇಳುತ್ತಾರೆ. ಆದರೆ ಸರ್ಕಾರ ಉತ್ತರ ಕರ್ನಾಟಕ ಭಾಗಕ್ಕೆ ಬಿಡುಗಡೆ ಮಾಡುವ ಹಣ ಈ ಭಾಗಕ್ಕೆ ತಲುಪಿತೋ ಇಲ್ಲವೋ ಎನ್ನುವುದನ್ನು ನೋಡಿಕೊಳ್ಳುವ ಜವಾಬ್ದಾರಿ ಈ ಭಾಗದ ಸದಸ್ಯರಿದ್ದಾಗಿರುತ್ತದೆ. ಏಕೆ ಮಂಡ್ಯ ಜಿಲ್ಲೆಗೆ ಜಾಸ್ತಿ ಅನುದಾನ ನೀಡಿದ್ದೀರಿ, ಬಿಜಾಪುರ ಜಿಲ್ಲೆಗೆ ಕಡಿಮೆ ಅನುದಾನ ನೀಡಲಾಗಿದೆ ಎನ್ನುವುದನ್ನು ನಾವು ಈ ಸದನದಲ್ಲಿ ಪ್ರಶ್ನೆ ಮಾಡದೇ, ಉತ್ತರ ಕರ್ನಾಟಕ ಜನಪ್ರತಿನಿಧಿಗಳು ಮಾಡಿದ ತಪ್ಪಿನಿಂದ ಸುಮ್ಮನೆ ಮಂಡ್ಯ, ಮೈಸೂರು ಮತ್ತು ಹಾಸನದವರ ಬಗ್ಗೆ ಮಾತನಾಡುವ ವ್ಯವಸ್ಥೆಯನ್ನು ನಾವು ಮಾಡಿಕೊಂಡು ಬಂದಿದ್ದೇವೆ. ಉತ್ತರ ಕರ್ನಾಟಕದ ಅಭಿವೃದ್ಧಿ ಆಗದೇ ಇರುವುದಕ್ಕೆ ಇಲ್ಲಿನ ಜನಪ್ರತಿನಿಧಿಗಳ ಬೇಜವಾಬ್ದಾರಿತನವೇ ಕಾರಣ. ಜನಪ್ರತಿನಿಧಿಗಳು ಸರಿಯಾಗಿದ್ದಲ್ಲಿ, ಅಧಿಕಾರಿಗಳು ಸರಿಯಾಗಿ ಕೆಲಸವನ್ನು ಮಾಡುತ್ತಾರೆ. ಇವತ್ತು ನಾನು ಯಾವುದೇ ಪಕ್ಷದವನಾದರೂ ಸಹ ಬಿಜಾಪುರದಲ್ಲಿ ನಾನು ಏನೇ ಕೆಲಸ ಹೇಳಿದರೂ ಸಹ ಅಧಿಕಾರಿಗಳು ಮಾಡಿಕೊಡುತ್ತಾರೆ. ಏಕೆಂದರೆ 'ಬಸವರಾಜ ಪಾಟೀಲ್ ಯತ್ನಾಳ್‌ರು ಒಬ್ಬ ಒಳ್ಳೆಯ ರಾಜಕಾರಣಿ' ಎನ್ನುವ ಒಂದು ಭಾವನೆ ಅವರಲ್ಲಿದೆ. ಇವತ್ತು ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಅನುದಾನ ನೀಡಿರುವುದನ್ನು ನೋಡಿದರೆ ಆ ಭಾಗದಲ್ಲೆಲ್ಲಾ ಸಿಸಿ ರಸ್ತೆಯೇ ಮಾಡಬೇಕಿತ್ತು. ಕಲುಬುರ್ಗಿ, ಬಳ್ಳಾರಿ, ಕೊಪ್ಪಳ, ರಾಯಚೂರು, ಬೀದರ್ ಜಿಲ್ಲೆಗಳು ಸಾಕಷ್ಟು ಮುಂದುವರೆಯಬೇಕಾಗಿತ್ತು. ಕಳೆದ 5-10 ವರ್ಷಗಳಿಂದ ಈ ಭಾಗದ ಅಭಿವೃದ್ಧಿ ಪರವಾಗಿಲ್ಲ. ಮೊದಲಿಗೆ ಎಲ್ಲಾ ಕಾಮಗಾರಿಗೂ ಎಂಎಲ್‌ಎ ಗಳೇ ಗುತ್ತಿಗೆದಾರರು, ಇನ್ನೂ ಕೆಲವೊಂದು ಕಡೆ ಹೇಗಿದೆ ಎಂದರೆ ಹಾಲಿ ಎಂಎಲ್‌ಎ ಮತ್ತು ಮಾಜಿ ಎಂಎಲ್‌ಎ ಗಳ ನಡುವೆ 60:40 ಎನ್ನುವ ಒಂದು ಒಪ್ಪಂದ ಆಗಿರುತ್ತದೆ. ಹಾಲಿ ಎಂಎಲ್‌ಎ ಆದರೆ 60% ಕಮೀಷನ್, ಮಾಜಿ ಎಂಎಲ್‌ಎ ಆದರೆ 40% ಕಮೀಷನ್‌ನ ಒಪ್ಪಂದ ಮಾಡಿಕೊಂಡಿರುತ್ತಾರೆ.

ಶ್ರೀ ಕೆ.ಟಿ. ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರ ಅಧ್ಯಕ್ಷತೆಯ ಭರವಸೆಗಳ ಸಮಿತಿಯು ಉತ್ತರ ಕರ್ನಾಟಕದ ಗಡಿ ಭಾಗಗಳ ಅಧ್ಯಯನ ಪ್ರವಾಸ ಕೈಗೊಂಡಿತ್ತು. ಆ ಸಮಿತಿಯಲ್ಲಿ ಶ್ರೀಯುತರುಗಳಾದ ಬಸವರಾಜ ಪಾಟೀಲ್ ಇಟಗಿಯವರು, ಮತ್ತು ಸಂಕ್ಷನೂರು ರವರು ಸಹ ಸದಸ್ಯರಾಗಿದ್ದಾರೆ. ಉತ್ತರ ಕರ್ನಾಟದ ಗಡಿ ಭಾಗಗಳಲ್ಲಿರುವ ಶಾಲೆಗಳಿಗೆ ಮತ್ತು ಕನ್ನಡ ಭವನಗಳಿಗೆ ಸರ್ಕಾರದಿಂದ ಲಕ್ಷಾಂತರ ರೂಪಾಯಿಗಳ ಅನುದಾನವನ್ನು ನೀಡಲಾಗಿದೆ. ಆದರೆ ಸಾಕಷ್ಟು ಹಣ ಬೇನಾಮಿ ಹೆಸರಿನಲ್ಲಿ ಚೆಕ್ ನೀಡಲಾಗಿದ್ದು, ಯಾವುದೇ ಶಾಲೆಗಳ ದುರಸ್ಥಿ ಆಗಿಲ್ಲ, ಯಾವುದೇ ಭವನಗಳನ್ನು ಕೂಡ ನಿರ್ಮಿಸಿಲ್ಲ. ಲಕ್ಷಾಂತರ

ರೂಪಾಯಿಗಳ ಹಣ ಗುಳುಂ ಆಗಿದೆ. ಆದರೆ ಯಾವುದೇ ಒಂದು ಸಣ್ಣ ಕ್ಲೂ ಇಲ್ಲ. ಮಾನ್ಯ ಬಸವರಾಜ ಪಾಟೀಲ್ ಯತ್ನಾಳ್‌ರವರು ಹೇಳಿದ ಹಾಗೆ ಉತ್ತರ ಕರ್ನಾಟಕದ ಭಾಗಕ್ಕೆ ಸರ್ಕಾರದಿಂದ ಸಾಕಷ್ಟು ಅನುದಾನ ಬಂದಿದೆ. ಆದರೆ ಆ ಹಣವನ್ನು ಕಾರ್ಯಕ್ರಮದ ರೂಪದಲ್ಲಿ ಅನುಷ್ಠಾನಗೊಳಿಸುವಲ್ಲಿ ಲೋಪಗಳಾಗಿದೆ. ಮಾನ್ಯ ಸದಸ್ಯರು ಮಾತನಾಡುತ್ತಾ ಮಂಡ್ಯ ಜಿಲ್ಲೆಯ ಹೆಸರನ್ನು ಹೇಳಿದರು. ನಮ್ಮ ಮಂಡ್ಯ ಜಿಲ್ಲೆಗೆ ಮಾನ್ಯ ನಾಲ್ವಡಿ ಕೃಷ್ಣರಾಜ ಒಡೆಯರ್ ಮಾಡಿದಷ್ಟು ಅಭಿವೃದ್ಧಿ ಕೆಲಸಗಳನ್ನು ಯಾವುದೇ ನಾಗರೀಕ ಸರ್ಕಾರ ಮಾಡಿಲ್ಲ. ಸುಮ್ಮನೆ ಮಂಡ್ಯದ ಹೆಸರನ್ನು ಹೇಳುತ್ತೀರಿ, ಆದರೆ ಮಂಡ್ಯಕ್ಕೆ ಹೆಚ್ಚಾಗಿ ಏನನ್ನು ಸರ್ಕಾರ ನೀಡಿದೆ? ಹೆಚ್ಚಾಗಿ ಮಂಡ್ಯಕ್ಕೆ ಏನನ್ನು ಕೊಟ್ಟಿಲ್ಲ, ಆದರೆ ಮಂಡ್ಯ ಎಲ್ಲರಿಗೂ ಭತ್ತವನ್ನು ಬೆಳೆದು ಅನ್ನ ನೀಡಿದೆ. ಆದರೆ ಮಾನ್ಯ ಯತ್ನಾಳ್‌ರವರು ಹೇಳಿದ ಹಾಗೆ ಮಂಡ್ಯ ಜಿಲ್ಲೆಗೆ ಯಾವುದೇ ವಿಶೇಷ ಅನುದಾನ ನೀಡಿಲ್ಲ. ಆದ್ದರಿಂದ ಉತ್ತರ ಕರ್ನಾಟಕ ಭಾಗಕ್ಕೆ ಬರುವ ಅನುದಾನವನ್ನು ಸಮರ್ಪಕವಾಗಿ ಬಳಕೆ ಮಾಡಿಕೊಳ್ಳುವ ವಿಚಾರದಲ್ಲಿ ಗಂಭೀರವಾದ ಚಿಂತನೆಯನ್ನು ಮಾಡಬೇಕಾಗಿದೆ.

ಶ್ರೀ ಬಸನಗೌಡ ಆರ್ ಪಾಟೀಲ್(ಯತ್ನಾಳ್)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಜನಪ್ರತಿನಿಧಿಗಳಾದ ನಾವು ಮೊದಲು ನಮ್ಮ ದೇಶ, ನಂತರ ನಮ್ಮ ರಾಜ್ಯ, ನಮ್ಮ ಜಿಲ್ಲೆ, ನಮ್ಮ ತಾಲ್ಲೂಕು ಎಂದು ಹೇಳುತ್ತೇವೆ. ನಮ್ಮ ಭಾಗದ ಜನಪ್ರತಿನಿಧಿಗಳು ಪ್ರಾಮಾಣಿಕವಾಗಿ ಕೆಲಸವನ್ನು ಮಾಡಿದ್ದರೆ 1964 ರಲ್ಲಿ ಈ ದೇಶ ಕಂಡ ಅಪ್ಪಟ ಪ್ರಾಮಾಣಿಕ ರಾಜಕಾರಣಿ ದಿವಂಗತ ಶ್ರೀ ಲಾಲ್ ಬಹೂದ್ದೂರ್ ಶಾಸ್ತ್ರಿಯವರು ಶಿಲಾನ್ಯಾಸ ಮಾಡಿದ ಆಲಮಟ್ಟಿ ಯೋಜನೆ ಎಂದಿಗೋ ಮುಗಿಯಬೇಕಿತ್ತು. 1964ರಲ್ಲಿ ಈ ಆಲಮಟ್ಟಿ ಯೋಜನೆಯ ಅಂದಾಜು ಸುಮಾರು 1000 ಕೋಟಿ ರೂಪಾಯಿಗಳಿದ್ದವು. ಆಲಮಟ್ಟಿ ಯೋಜನೆಗಾಗಿ ವರ್ಷಕ್ಕೆ ರೂ. 10,000 ಕೋಟಿ ಅನುದಾನವನ್ನು ಬಿಡುಗಡೆ ಮಾಡುವುದಾಗಿ ಕೂಡಲ ಸಂಗಮದಲ್ಲಿ ಕಾಂಗ್ರೆಸ್ ಪಕ್ಷದ ಸರ್ಕಾರ ಕೃಷ್ಣೆಯ ಮೇಲೆ ಆಣೆ ಮಾಡಿ ಹೇಳಿದರೂ ಸಹ 10,000 ಕೋಟಿ ರೂಪಾಯಿಗಳನ್ನು ಅವರು ನೀಡಲಿಲ್ಲ. ಆ ಮಾತು ಬೇರೆ.

ಶ್ರೀ ರಾಮಚಂದ್ರ ಗೌಡ(ಪದವೀಧರರ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ದಿವಂಗತ ಶ್ರೀ ರಾಜೀವ್ ಗಾಂಧಿಯವರು "ಕೇಂದ್ರದಿಂದ 1 ರೂಪಾಯಿಯನ್ನು ರಾಜ್ಯಗಳಿಗೆ ಕಳುಹಿಸಿದರೆ, ಅದರಲ್ಲಿ ರಾಜ್ಯಗಳಿಗೆ ತಲುಪುವುದು 16 ಪೈಸೆ ಮಾತ್ರ" ಎನ್ನುವ ಒಂದು ಮಾತನ್ನು ಹೇಳಿದ್ದರು. ಆ ಪ್ರಮಾಣದಲ್ಲಿ ತಲುಪಿದರೆ ಅದೇ ಪ್ರಮಾಣದಲ್ಲಿ ಜಾಸ್ತಿಯಾಗುತ್ತಿರುತತದೆ. ಹಾಗೆಯೇ ಇದು ಕೂಡ ಆಗಿರುವುದು.

ಶ್ರೀ ಬಸನಗೌಡ ಆರ್ ಪಾಟೀಲ್(ಯತ್ನಾಳ್):– ಮಾನ್ಯ ಸಭಾಪತಿಯವರೇ, ನಮ್ಮ ಭಾಗಕ್ಕೆ ಅನ್ಯಾಯ ಯಾವ ರೀತಿ ಆಯಿತು ಎಂದರೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಉಪಸಭಾಪತಿಯವರು:– ಯತ್ನಾಳ್‌ರವರೇ, ಸಮಯದ ಕೊರತೆ ಇದೆ.

ಶ್ರೀ ಬಸನಗೌಡ ಆರ್ ಪಾಟೀಲ್(ಯತ್ನಾಳ್):– ಮಾನ್ಯ ಸಭಾಪತಿಯವರೇ, ದುರಂತ ಎಂದರೆ ಇದೇ ನೋಡಿ, ಉತ್ತರ ಕರ್ನಾಟಕದ ಅಭಿವೃದ್ಧಿ ಬಗ್ಗೆ ಚರ್ಚೆ ನಡೆಯುತ್ತಿರುವ ಸಂದರ್ಭದಲ್ಲಿ ಒಬ್ಬ ಉತ್ತರ ಕರ್ನಾಟಕದ ಪ್ರತಿನಿಧಿಯಾಗಿ ನಾನು ಮಾತನಾಡಬೇಕಾದರೆ ಹೆಚ್ಚಿಗೆ ಮಾತನಾಡಲು ಅವಕಾಶ ಕೊಡದೇ ಇರುವುದೇ ದುರಂತ. ಈ ಸದನದಲ್ಲಿಯೇ ಅನ್ಯಾಯ, ಮಲತಾಯಿ ಧೋರಣೆ ತೋರುತ್ತಿರುವುದು ಕಾಣುತ್ತಿದೆ. ಆದ್ದರಿಂದಲೇ ಈ ಉತ್ತರ ಕರ್ನಾಟಕದ ಅಭಿವೃದ್ಧಿಯ ಬಗೆಗಿನ ಚರ್ಚೆಯನ್ನು ಒಂದು ದಿನದಲ್ಲಿ 2 ಗಂಟೆಗಳ ಕಾಲಾವಕಾಶ ಕೊಟ್ಟು 15 ನಿಮಿಷಗಳಲ್ಲಿ ಮಾತನಾಡಿ ಮುಗಿಸಬೇಕೆನ್ನುವುದು ಸರಿಯಲ್ಲ. ಈ ಭಾಗದಲ್ಲಿ ಅಧಿವೇಶನ ಕರೆದ ಮೇಲೆ ದಿವಸಕ್ಕೆ 2 ಗಂಟೆಕಾಲ ಈ ವಿಚಾರದ ಬಗ್ಗೆ ಚರ್ಚೆ ಮಾಡುವುದಕ್ಕೆ ನಿಗಧಿ ಮಾಡಬೇಕಾಗಿತ್ತು. ಉತ್ತರ ಕರ್ನಾಟಕದ ಅಭಿವೃದ್ಧಿಯ ಬಗ್ಗೆ ಅನೇಕರು ಮಾತನಾಡುವವರಿದ್ದಾರೆ. ಉತ್ತರದ ಕರ್ನಾಟಕದ ಸದಸ್ಯರು ಮಾತ್ರವಲ್ಲದೇ ಮೈಸೂರು ಭಾಗದವರಿಗೂ ಸಹ ನಮ್ಮ ಬಗ್ಗೆ ಕಳಕಳಿ ಇದೆ. ಅವರು ಸಹ ಮಾತನಾಡುತ್ತಾರೆ. ಈಗ ಸದನದಲ್ಲಿರುವ ಸದಸ್ಯರ ಸಂಖ್ಯೆಯನ್ನು ಲೆಕ್ಕ ಹಾಕಿದರೆ ಹೆಚ್ಚು ದಕ್ಷಿಣ ಕರ್ನಾಟಕ ಭಾಗದವರೇ ಇದ್ದು, ನಮ್ಮವರು ಹೋಗಿ ನಿದ್ದೆ ಮಾಡಿದ್ದಾರೆ.

ಉಪಸಭಾಪತಿಯವರು:– ಇಲ್ಲ, ಉತ್ತರ ಕರ್ನಾಟಕದವರು ಇದ್ದಾರೆ.

ಶ್ರೀ ಬಸನಗೌಡ ಆರ್ ಪಾಟೀಲ್(ಯತ್ನಾಳ್):– ಮಾನ್ಯ ಸಭಾಪತಿಯವರೇ, ಇವತ್ತು ಉತ್ತರ ಕರ್ನಾಟಕದಲ್ಲಿರುವ ಪ್ರಮುಖ ನದಿ ಕೃಷ್ಣ ನದಿ. ಕರ್ನಾಟಕದ ಶೇಕಡ 60 ಭಾಗಕ್ಕೆ ನೀರು ಕೊಡುವ ನದಿ ಕೃಷ್ಣ ನದಿ. ಕಾವೇರಿ ನದಿ ಶೇಕಡ 23 ಭಾಗಕ್ಕೆ ನೀರನ್ನು ಕೊಡುತ್ತದೆ. ಇಂತಹ ದೊಡ್ಡ ನದಿಗೆ 1964 ರಿಂದಲೂ ಕೈಗೊಂಡಿರುವ ನೀರಾವರಿ ಯೋಜನೆ ಇನ್ನೂ ಮುಗಿದಿಲ್ಲ. ಈಗ 3ನೇ ಹಂತದ ಕೆಲಸ ನಡೆಯುತ್ತಿದ್ದು, 75,563 ಎಕರೆ ಪ್ರದೇಶವನ್ನು ಭೂಸ್ವಾಧೀನ ಮಾಡಿಕೊಳ್ಳಬೇಕಾಗಿದೆ. ಈಗಾಗಲೇ 2500 ಎಕರೆಗಿಂತಲೂ ಹೆಚ್ಚಿನ ಪ್ರದೇಶವನ್ನು ಭೂಸ್ವಾಧೀನ ಮಾಡಿಕೊಳ್ಳಲಾಗಿದೆ. ಆದರೆ ಆ ರೈತರಿಗೆ ಇನ್ನೂ ಸರ್ಕಾರ ಸರಿಯಾಗಿ ಪುನರ್ವಸತಿ ಹಾಗೂ ಪುನರ್ ನಿರ್ಮಾಣವನ್ನು ಮಾಡಿರುವುದಿಲ್ಲ. ಮತ್ತೆ 75 ಸಾವಿರ ಎಕರೆ ಪ್ರದೇಶ ಮುಳುಗಡೆಯಾಗುತ್ತದೆ. ಇದರಲ್ಲಿ 20 ಹಳ್ಳಿಗಳು ಮತ್ತೆ ಮುಳುಗಡೆಯಾಗುತ್ತವೆ, ಅದರ ಜೊತೆಗೆ ಸುಮಾರು 6467 ಎಕರೆ ಪ್ರದೇಶವನ್ನು ಪುನರ್ವಸತಿ, ಪುನರ್ ನಿರ್ಮಾಣ ಮತ್ತು ಕಾಲುವೆಗಳಿಗಾಗಿ ಸರ್ಕಾರ ಭೂಸ್ವಾಧೀನ ಮಾಡಿಕೊಳ್ಳುತ್ತಿದೆ. ಕೃಷ್ಣಾ ಮೇಲ್ದಂಡೆ ಯೋಜನೆಗಾಗಿ ನಾರಾಯಣಪುರ ಡ್ಯಾಂ ನಿರ್ಮಾಣಕ್ಕಾಗಿ ಭೂ ಸ್ವಾಧೀನ ಮಾಡಿಕೊಂಡಾಗ ರೈತರಿಗೆ ಅಂದಿನ ಸರ್ಕಾರ ಒಂದು ಎಕರೆಗೆ 500 ರೂಪಾಯಿಗಳ ಪರಿಹಾರವನ್ನು ನೀಡಿತ್ತು. ಅಷ್ಟರಲ್ಲಾಗಲೇ ಅಲ್ಲಿ ಎಲ್ಲ ರೈತರ

ಜೀವನ ಸಂಪೂರ್ಣವಾಗಿ ನಾಶ ಆಗಿತ್ತು. ಆದರೆ ಭೂಮಿ ಕಳೆದುಕೊಂಡಿದ್ದ ರೈತರು ಅದೇ ಹಣವನ್ನು ಬಹಳ ದೊಡ್ಡ ಮೊತ್ತ ಎಂದು ತೆಗೆದುಕೊಂಡು ಸುಮ್ಮನಾದರು, ಬದಲಿ ಜಮೀನನ್ನು ಕೂಡ ಪಡೆದುಕೊಳ್ಳಲಿಲ್ಲ, ಇದ್ದ ಜಮೀನನ್ನು ಕೂಡ ಹಾಳು ಮಾಡಿಕೊಂಡರು. ಮಾನ್ಯ ದೇವೇಗೌಡರು ಮತ್ತು ಮಾನ್ಯ ಜೆ.ಹೆಚ್.ಪಟೇಲ್‌ರವರು ಅಧಿಕಾರಕ್ಕೆ ಬಂದ ಮೇಲೆ ನೀರಾವರಿ ವಿಚಾರದಲ್ಲಿ ಒಂದು ಹೊಸ ಅಧ್ಯಾಯ ಪ್ರಾರಂಭ ಆಯಿತು. ಅದಾದ ಮೇಲೆ ಕಳೆದ ಹತ್ತು ವರ್ಷಗಳಿಂದ ಅಧಿಕಾರಕ್ಕೆ ಬಂದ ಎಲ್ಲಾ ಸರ್ಕಾರಗಳು, ನಾನು ಯಾವುದೇ ಪಕ್ಷದ ಸರ್ಕಾರವನ್ನು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ.

(ಮುಂದು)

(1147)/21-11-2017/8-00/ಎಲ್‌ಎಂ/ಆರ್‌ಎನ್

ಶ್ರೀ ಬಸನಗೌಡ ಪಾಟೀಲ್, ಯತ್ನಾಳ(ಮುಂದು):- ಮಾನ್ಯ ದೇವೇಗೌಡರು ಪ್ರಾರಂಭ ಮಾಡಿದರು. ಮುಂದೆ ಮಾನ್ಯ ಜೆ.ಎಚ್.ಪಟೇಲ್‌ರವರು ಭೂ ಸ್ವಾಧೀನಕ್ಕೆ ಹೆಚ್ಚಿನ ಹಣವನ್ನು ಕೊಟ್ಟರು. ಮುಂದೆ ಬಂದಿರುವ ಮಾನ್ಯ ಯಡಿಯೂರಪ್ಪನವರ ಸರ್ಕಾರ, ಮಾನ್ಯ ಈಶ್ವರಪ್ಪನವರು ನೀರಾವರಿ ಮಂತ್ರಿಗಳಾಗಿದ್ದಾಗ ಕೆಲಸವನ್ನು ಮಾಡಿದ್ದಾರೆ. ಈಗಿನ ಸರ್ಕಾರದಲ್ಲಿ ನೀರಾವರಿ ಸಚಿವರು ನಮ್ಮ ಊರಿನವರೆ, ನಮ್ಮವರೆ. ಮಾನ್ಯ ಈಶ್ವರಪ್ಪನವರು 36% ನೀರಾವರಿಯಾಗಿದೆ ಎಂದು ಅವರು ಮಾತನಾಡುವಾಗ ಹೇಳಿದರು. ಅಷ್ಟಾದರೂ ಆಗದೆ ಎಂದು ನಾವು ಇವತ್ತು ಸಂತೋಷಪಡಬೇಕಾಗಿದೆ. ಹಿಂದೆ ಇಷ್ಟು ಕೂಡಾ ಆಗಿರಲಿಲ್ಲ. ನಮ್ಮವರೆ ಮುಖ್ಯಮಂತ್ರಿಗಳಾಗಿದ್ದರು, ಮಾನ್ಯ ವೀರೇಂದ್ರ ಪಾಟೀಲ್‌ರವರು, ಮಾನ್ಯ ಧರ್ಮಸಿಂಗ್‌ರವರು ನಮ್ಮವರೆ. ಇನ್ನೊಂದು ನಮ್ಮ ಭಾಗದ ದುರಂತ ಎಂದರೆ, ಅಖಂಡ ವಿಜಾಪೂರ ಜಿಲ್ಲೆಯವರೆ ಮುಖ್ಯಮಂತ್ರಿಗಳಾಗಿದ್ದರು. ಮಹಾರಾಷ್ಟ್ರದವರು ಬರಿ 5ಕೋಟಿ ರೂ.ಗಳನ್ನು ಕೊಡಿ ನಿಮಗೆ ಒಂದು ಕಾಲುವೆಯನ್ನು ಕೊಡುತ್ತೇವೆ ಎಂದು ಹೇಳಿದರೆ, ಆ ಪುಣ್ಯಾತ್ಮ ಅವತ್ತು ಕೊಡಲಿಲ್ಲ. 5 ಕೋಟಿ ರೂ.ಗಳನ್ನು ಏಕೆ ಕೊಡುವುದು ಎಂದು ಕೊಡಲಿಲ್ಲ. ಕೊಟ್ಟರೆ ನೀರಾವರಿಯಾಗಿ ಜನರು ಎಲ್ಲಿ ಅಭಿವೃದ್ಧಿಯಾಗಿಬಿಡುತ್ತಾರೊ ಎನ್ನುವ ಭಾವನೆ ಇರುವಂತಹ ಮಹಾಪುರುಷರು ಹಿಂದೆ ಮುಖ್ಯಮಂತ್ರಿಗಳಾಗಿ ಹೋಗಿದ್ದಾರೆ. ಮುಂದೆ ಅವರ ರಾಜಕೀಯ ಜೀವನ ಏನಾಯಿತು ಎಂದರೆ, ಅವರ ಮಗ ಜಮಖಂಡಿ ಕ್ಷೇತ್ರದಿಂದ ಚುನಾವಣೆ ನಿಂತಾಗ, ಒಂದು ಹಳ್ಳಿಯವರು ಅವರನ್ನು ಬರಲು ಬಿಡಲಿಲ್ಲ. ಅವರು ಕಾಂಗ್ರೆಸ್‌ನವರಾದರೂ ಅವರು ಠೇವಣಿ ಕಳೆದುಕೊಂಡರು. ಮುಖ್ಯಮಂತ್ರಿ ಮತ್ತು ದೇಶದ ಉಪರಾಷ್ಟ್ರಪತಿಗಳಾದವರ ರಾಜಕೀಯ ಜೀವನ ಹೀಗಾಯಿತು. ಇನ್ನುವರೆಗೆ ನಮ್ಮ ಜಿಲ್ಲೆಯ ಜನರು ಅವರಿಗೆ ಶಾಪ ಹಾಕುತ್ತಿದ್ದಾರೆ. ಉತ್ತರ ಕರ್ನಾಟಕದ ಜನಪ್ರತಿನಿಧಿಗಳ ಬೇಜವಾಬ್ದಾರಿಯಿಂದಲೂ ಈ ರೀತಿ ಅನ್ಯಾಯ ಉತ್ತರ ಕರ್ನಾಟಕಕ್ಕೆ ಆಗಿದೆ. ಇವತ್ತು ಅದೇ ಸ್ಥಿತಿ, ಸದನಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬರುವುದಿಲ್ಲ, ಚರ್ಚೆಯಲ್ಲಿ ಭಾಗವಹಿಸುವುದಿಲ್ಲ, ಸರ್ಕಾರಕ್ಕೆ ನಮ್ಮ ಭಾವನೆಗಳನ್ನು ತಿಳಿಸುವುದಿಲ್ಲ ಎಂದರೆ, ಯಾರಿಗೆ ನಾವು ಟೀಕೆ ಮಾಡುವುದು, ಉತ್ತರ ಕರ್ನಾಟಕದ ಜನಪ್ರತಿನಿಧಿಗಳ ಬೇಜವಾಬ್ದಾರಿ... ಬಿಜಾಪೂರಕ್ಕೆ ಅಧಿಕಾರಿಗಳನ್ನು ವರ್ಗಾವಣೆ ಮಾಡಿದರೆ ನಾವು ಬರುವುದಿಲ್ಲ ಸರ್ ಅಲ್ಲಿ 45 ಡಿಗ್ರಿ ಬಿಸಿಲಿನ ತಾಪ ಎಂದು ಹೇಳುತ್ತಾರೆ. ಒಂದು ವೇಳೆ ವರ್ಗಾವಣೆಯಾಗಿ ಬಂದರೆ ಬಿಜಾಪೂರವನ್ನು ಬಿಟ್ಟು ಹೋಗುವುದೇ ಇಲ್ಲ. ಏಕೆಂದರೆ ನಮ್ಮ ಜನ ತುಂಬಾ ಮುಗ್ಧ ಜನ. ನಮ್ಮ ಜನರಿಗೆ ಏನು ತಿಳಿಯುವುದಿಲ್ಲ. ನಮ್ಮ ಜನರಿಗೆ ಈಗೀಗ ಹೊರಗಿನ ಜಗತ್ತು ಗೊತ್ತು. ಇಂತಹ ವ್ಯವಸ್ಥೆಯಲ್ಲಿ ಇವತ್ತು ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದು ಏನೆಂದರೆ, ನಮ್ಮ ಭಾಗ ನೀರಾವರಿಯಾಗಬೇಕಾಗಿದೆ. ಮಹದಾಯಿ, ಕಳಸಾ ಬಂಡೂರಿ ಇರಬಹುದು, ಮಾನ್ಯ ಕುಮಾರ ಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದಾಗ ಮಾನ್ಯ ಈಶ್ವರಪ್ಪನವರು ನೀರಾವರಿ ಸಚಿವರಾಗಿದ್ದರು ಆಗ ಅವರು ಏನೋ ಧೈರ್ಯ ಮಾಡಿ ಬೆಳಗಾವಿಗೆ ಬಂದು ಮಹಾದಾಯಿ ಕಳಸಾ ಬಂಡೂರಿ ಯೋಜನೆಗೆ ಚಾಲನೆಯನ್ನು ಕೊಟ್ಟವರು ಯಾರು ಎಂದು ಹೇಳದರೆ ಮಾನ್ಯ ಈಶ್ವರಪ್ಪನವರು ಎಂದು ನಾನು ಮುಕ್ತ ಕಂಠದಿಂದ ಹೇಳುತ್ತೇನೆ. ಯಾವುದೇ ಪಕ್ಷ ಇರಲಿ ಒಳ್ಳೆಯ ಕೆಲಸವನ್ನು ಮಾಡಿದಾಗ ಹೊಗಳಬೇಕಾಗುತ್ತದೆ. ಇನ್ನು ನಮ್ಮ ಮಾನ್ಯ ಹೊರಟ್ಟಿಯವರ ಬಗ್ಗೆ ಹೇಳಬೇಕು ಎಂದರೆ, ಅವರು ಉತ್ತರ ಕರ್ನಾಟಕದ ಆಧುನಿಕ ಬಸವಣ್ಣ, ಇನ್ನೊಂದು ಲಿಂಗಾಯತ ಧರ್ಮ ಸ್ಥಾಪಕರಾಗಿ ಹೋಗುತ್ತಿದ್ದಾರೆ ಪುಣ್ಯಾತ್ಮರು. ರಾಜಕೀಯ ಕೆಲಸ ಬಿಟ್ಟು ಲಿಂಗಾಯತ ಧರ್ಮ ಸ್ಥಾಪನೆಗೆ ಹೊರಟ್ಟಿದ್ದಾರೆ. ಇವರನ್ನು ಆರಿಸಿ ಕಳುಹಿಸಿದ್ದು ಶಿಕ್ಷಕರ ಸಮಸ್ಯೆಗಳ ಸಲುವಾಗಿ ಇವರು ಇಲ್ಲಿ ಬಂದು ಲಿಂಗಾಯತರು ಬೇರೆ, ವೀರಶೈವರು ಬೇರೆ ಎಂದು ಒಂದೊಂದು ಲಕ್ಷ ಜನರನ್ನು ಕೂಡಿಸಿ ಗಂಟೆ ಹೊಡೆದುಕೊಂಡು ಇವರು ಹೊರಟ್ಟಿದ್ದಾರೆ. ಪ್ರಧಾನ ಮಂತ್ರಿಗಳೆ ನೇರ ಜವಾಬ್ದಾರರು ಎಂದು ಹೇಳುತ್ತಾರೆ. ಪ್ರಧಾನ ಮಂತ್ರಿಗಳು ಹೇಗೆ ನೇರ ಜವಾಬ್ದಾರರಾಗುತ್ತಾರೆ? ಎಲ್ಲಾ ಸರ್ವ ಪಕ್ಷದವರು ಬಂದರೆ ಪ್ರಧಾನ ಮಂತ್ರಿಗಳು ನ್ಯಾಯ ಮಾಡುತ್ತಾರೆ. ಎಲ್ಲಾ ರಾಜ್ಯಗಳನ್ನು ಸಮಾನ ದೃಷ್ಟಿಯಿಂದ ನೋಡುವಂತಹ ಸ್ಥಾನ ಪ್ರಧಾನ ಮಂತ್ರಿಗಳದ್ದು. ಗೋವಾ ರಾಜ್ಯದಲ್ಲಿ ಕಾಂಗ್ರೆಸ್ ಇದೆ ಅವರು ಬರಬೇಕು.

ಶ್ರೀ ಬಸವರಾಜ ಹೊರಟ್ಟಿ:– ಜಿಎಸ್‌ಟಿ ಮಾಡುವಾಗ ಕಾಂಗ್ರೆಸ್ ಕೇಳಿ ಮಾಡಿದ್ದಾರೆಯೇ? ಪ್ರಧಾನ ಮಂತ್ರಿಗಳು ಎಂದರೆ ಪ್ರಧಾನ ಮಂತ್ರಿಗಳು, ಹಿಂದಿನ ಪ್ರಧಾನ ಮಂತ್ರಿಗಳು ಮಹದಾಯಿ ವಿಚಾರದಲ್ಲಿ ಕೆಲಸ ಮಾಡಿದ್ದಾರೆ. ಇವರು ಏಕೆ ಮಾಡಬಾರದು?

ಶ್ರೀ ಬಸವನಗೌಡ ಪಾಟೀಲ್,ಯತ್ನಾಳ:– ಮಾನ್ಯ ಸಭಾಪತಿಗಳೆ, ರಾಜ್ಯಸಭೆಯಲ್ಲಿ ಕಾಂಗ್ರೆಸ್‌ನವರು ಬೆಂಬಲ ಕೊಟ್ಟರು ಎಂದೇ ಜಿಎಸ್‌ಟಿ ಪಾಸ್ ಆಗಿರುವುದು. ಅದೇ ರೀತಿ ಮಹದಾಯಿ ವಿಚಾರದಲ್ಲಿ

ಗೋವಾದಲ್ಲಿ ಇವತ್ತು ಕಾಂಗ್ರೆಸ್ ಪಕ್ಷ ಇದೆ ಅವರು ಒಪ್ಪಿಕೊಳ್ಳಬೇಕಾಗುತ್ತದೆ. ಈಗ ಆ ವಿಚಾರ ಹೋಗಲಿ ಬಿಡಿ. ಈಗಾಗಲೇ ಮಾನ್ಯ ಯಡಿಯೂರಪ್ಪನವರು ಒಂದು ತಿಂಗಳಲ್ಲಿ ಮಹದಾಯಿ ಸಮಸ್ಯೆಯನ್ನು ಬಗ್ಗೆಹರಿಸಿ ಉತ್ತರ ಕರ್ನಾಟಕದಲ್ಲಿ ಉತ್ತರ ಕೊಡುತ್ತೇನೆ ಎಂದು ಜವಾಬ್ದಾರಿಯನ್ನು ತೆಗೆದುಕೊಂಡಿದ್ದಾರೆ.

ಶ್ರೀ ಬಸವರಾಜ ಹೊರಟ್ಟಿ:– ಆಗ ಬಗೆಹರಿಸದೆ ಈಗ ಹೇಗೆ ಬಗೆಹರಿಸುತ್ತಾರೆ? ಈಗ ಚುನಾವಣೆ ಹತ್ತಿರ ಇದೆ ಎಂದು ಈ ಎಲ್ಲಾ ಗಿಮಿಕ್‌ಗಳು.

ಶ್ರೀ ಬಸವನಗೌಡ ಪಾಟೀಲ್,ಯತ್ನಾಳ:– ಮಾನ್ಯ ಸಭಾಪತಿಗಳೆ, ಅದಕ್ಕೆ ನಾನು ಉತ್ತರ ಹೇಳುತ್ತೇನೆ ಕೇಳಿ, ಮಾನ್ಯ ಈಶ್ವರಪ್ಪನವರು ನೀರಾವರಿ ಮಂತ್ರಿಗಳಾಗಿದ್ದಾಗ ವಿಧಾನಸಭೆಯಲ್ಲಿ ಮತ್ತು ವಿಧಾನ ಪರಿಷತ್ತಿನಲ್ಲಿ ಗೋವಾ ಚುನಾವಣೆಯಾಗುವವರೆಗೆ ಸುಮ್ಮನೆ ಇರಿ, ನಂತರ ಆ ಸಮಸ್ಯೆಯನ್ನು ಬಗೆಹರಿಸುತ್ತೇವೆ ಎಂದು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಈಗ ಜವಾಬ್ದಾರಿಯನ್ನು ಮಾನ್ಯ ಯಡಿಯೂರಪ್ಪನವರು ತೆಗೆದುಕೊಂಡಿದ್ದಾರೆ ಬಿಡಿ ನಿಮ್ಮಗೇಕೆ ಸಂಕಟವಾಗುತ್ತಿದೆ. ಆ ಕೆಲಸವಾದರೆ ನೀವು ಜೀರೋ ಆಗುತ್ತಿರಿ ಎಂದು ನಿಮಗೆ ಭಯ ಅಷ್ಟೆ ಇರುವ ವಿಚಾರ.

ಶ್ರೀ ಶ್ರೀನಿವಾಸ ಮಾನೆ:– ಜೀರೋ ಆದರೂ ಪರವಾಗಿಲ್ಲ ನೀರು ಬರಲಿ.

ಶ್ರೀ ಬಸವನಗೌಡ ಪಾಟೀಲ್, ಯತ್ನಾಳ:– ಧನ್ಯವಾದಗಳು, ಇಂತಹ ಉದ್ದಾತ ವಿಚಾರಗಳು ಬಂದರೆ ಉತ್ತರ ಕರ್ನಾಟಕ ಉದ್ಧಾರವಾಗುತ್ತದೆ.

ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):– ಮಾನ್ಯ ಸಭಾಪತಿಗಳೆ, ಸರ್ವ ಪಕ್ಷಗಳ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ತುಂಬಾ ಸ್ಪಷ್ಟವಾಗಿ ಬಿಜೆಪಿ ಯವರು ಗೋವಾ ಮತ್ತು ಮಹಾರಾಷ್ಟ್ರ ಸರ್ಕಾರಗಳ ಜೊತೆಯಲ್ಲಿ ಮಾತನಾಡಿ ಅವರನ್ನು ನೀವು ಒಪ್ಪಿಸಿ, ಆ ಎರಡು ರಾಜ್ಯಗಳ ವಿರೋಧ ಪಕ್ಷದವರ ಜೊತೆಯಲ್ಲಿ ಮಾತನಾಡಿ ನಾವು ಒಪ್ಪಿಸುತ್ತೇವೆ ಎಂದು ಹೇಳಿದ್ದಾರೆ. ಇದರಲ್ಲಿ ಹಿಂದೆ–ಮುಂದೆ ಏನು ಇಲ್ಲ. ಆದರೆ ಅವರು ಕಾಂಗ್ರೆಸ್‌ನವರನ್ನು ಮಾತನಾಡಿಸಲು ಹೋಗೇ ಇಲ್ಲ.

ಶ್ರೀ ಬಸವರಾಜ ಹೊರಟ್ಟಿ:– ಅದು ಹಾಗೆ ಅಲ್ಲ...

ಶ್ರೀ ಶ್ರೀನಿವಾಸ ಮಾನೆ:– ಇದರಲ್ಲಿ ರಾಜಕಾರಣ ಮಾಡುವುದು ಬೇಡ, ಹೇಳುತ್ತ ಹೋದರೆ ಬಹಳ ಉದ್ದವಾಗುತ್ತದೆ. ಸರ್ವ ಪಕ್ಷಗಳ ಸಭೆಯಲ್ಲಿ ನೀವು ಏನು ಹೇಳಿದ್ದಿರಿ ಎನ್ನುವುದನ್ನು ನೆನೆಪಿಸಿಕೊಳ್ಳಿ.

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಬಸವರಾಜ ಹೊರಟ್ಟಿ:– ಕಾಂಗ್ರೆಸ್‌ನವರನ್ನು ಒಪ್ಪಿಸುತ್ತೇವೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿರುವುದಿಲ್ಲ. ನಾವೇ ಅಲ್ಲಿ ಇದ್ದೇವು, ನೀವು ಬಿಜೆಪಿ ಯವರು ಬೆಂಗಳೂರಿನಲ್ಲಿ ಏನು ಹೇಳಿದ್ದೀರಿ, ಅದನ್ನೆ ಮಾನ್ಯ ಪ್ರಧಾನ ಮಂತ್ರಿಗಳ ಬಾಯಿಯಿಂದ ನೀವು ಕಾಂಗ್ರೆಸ್‌ನವರನ್ನು ಒಪ್ಪಿಸಿ ನಾವು ಬಿಜೆಪಿಯವರನ್ನು ಒಪ್ಪಿಸುತ್ತೇವೆ ಎಂದು ಹೇಳಿಸಿದ್ದೀರಿ.

ಶ್ರೀ ಕೆ.ಎಸ್.ಈಶ್ವರಪ್ಪ:– ಮಾನ್ಯ ಮುಖ್ಯಮಂತ್ರಿಗಳು ಕಾಂಗ್ರೆಸ್‌ನವರ ಹತ್ತಿರ ನಾವು ಮಾತನಾಡುತ್ತೇವೆ ಎಂದು ಹೇಳಿದ್ದಾರೆ. ಬೇಕಾದರೆ ದಾಖಲೆ ತೆಗೆಯಿಸಿ ನೋಡಿ. ಮಾನ್ಯ ಹೊರಟ್ಟಿಯವರು ಏಕೆ ಕಾಂಗ್ರೆಸ್ ಪರವಾಗಿ ಮಾತನಾಡುತ್ತಿದ್ದಾರೆ ಎನ್ನುವುದು ನನಗೆ ಗೊತ್ತಾಗುತ್ತಿಲ್ಲ.

(ಗೊಂದಲ)

ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ(ಮುಜರಾಯಿ ಸಚಿವರು):– ಮಾನ್ಯ ಸಭಾಪತಿಗಳೆ, ಮಾನ್ಯ ಈಶ್ವರಪ್ಪನವರೆ ಗೋವಾ ಚುನಾವಣೆಯ ನಂತರ ಮಾತನಾಡೋಣ ಎಂದು ಹೇಳಿದ್ದಾರೆ.

ಶ್ರೀ ಬಸವರಾಜ ಹೊರಟ್ಟಿ:– ಪ್ರಧಾನ ಮಂತ್ರಿಗಳು ದೊಡ್ಡವರೊ ಅಥವಾ ಮುಖ್ಯಮಂತ್ರಿಗಳು ದೊಡ್ಡವರೊ ನೀವೆ ಹೇಳಿ.

ಶ್ರೀ ಕೆ.ಎಸ್.ಈಶ್ವರಪ್ಪ:– ಮಾನ್ಯ ಯಡಿಯೂರಪ್ಪನವರು ಹುಬ್ಬಳ್ಳಿಯಲ್ಲಿ ನಾನು ಜವಾಬ್ದಾರಿ ತೆಗೆದುಕೊಳ್ಳುತ್ತೇನೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಈಗ ನಿಮಗೇಕೆ ಉರಿಯುತ್ತದೆ. ಈ ಭಾಗದ ಅಭಿವೃದ್ಧಿ ಆಗಬೇಕು ಎನ್ನುವುದು ಇವರ ಉದ್ದೇಶವಲ್ಲ, ಇವರಿಗೆ ಈಗ ಸಮಾಧಾನವಿಲ್ಲ.

ಶ್ರೀ ಶ್ರೀನಿವಾಸ ಮಾನೆ:– ಖಂಡಿತವಾಗಿ ಆ ಕೆಲಸವನ್ನು ಮಾಡಿದರೆ ನಾವು ಸ್ವಾಗತ ಮಾಡುತ್ತೇವೆ.

ಶ್ರೀ ಬಸವರಾಜ ಹೊರಟ್ಟಿ:– ಆಗ ಮಾಡದೆ ಈಗ ಏಕೆ ಮಾಡುತ್ತೀರಿ?

ಶ್ರೀ ಕೆ.ಎಸ್.ಈಶ್ವರಪ್ಪ:– ಈಗ ಮಾಡುತ್ತೇವೆ ಎಂದರೆ ಏನು ಸಮಸ್ಯೆ ನಿಮಗೆ? ಆ ಕೆಲಸವಾಗಬಾರದೆ?

ಶ್ರೀ ಬಸವರಾಜ ಹೊರಟ್ಟಿ:– ಮಾಡಿ ನಾವು ಬೇಡ ಎನ್ನುವುದಿಲ್ಲ. ಕೆಲಸವಾದರೆ ಒಳ್ಳೆಯದೆ. ಆದರೆ ಚುನಾವಣೆ ಹತ್ತಿರದಲ್ಲಿರುವಾಗ ಏಕೆ ಮಾಡುತ್ತೀರಿ?

ಶ್ರೀ ಕೆ.ಎಸ್.ಈಶ್ವರಪ್ಪ:– ಹೌದು ಚುನಾವಣೆ ಇದೆ ಎಂತಲೇ ಮಾಡುತ್ತೀರಿವುದು ಏನು ಈಗ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಬಸವರಾಜ ಹೊರಟ್ಟಿ:– ಹಿಂದಿನ ಪ್ರಧಾನ ಮಂತ್ರಿಗಳು ಜವಾಬ್ದಾರಿ ತೆಗೆದುಕೊಂಡಿದ್ದರು. ಈಗಿನ ಪ್ರಧಾನ ಮಂತ್ರಿಗಳು ಏಕೆ ಈ ವಿಚಾರದಲ್ಲಿ ಜವಾಬ್ದಾರಿ ತೆಗೆದುಕೊಳ್ಳುತ್ತಿಲ್ಲ.

(ಗೊಂದಲ)

ಉಪಸಭಾಪತಿಯವರು:– ಮಾನ್ಯ ವಿರೋಧ ಪಕ್ಷದ ನಾಯಕರೆ ಕುಳಿತುಕೊಳ್ಳಿ. ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಕೆ.ಎಸ್.ಈಶ್ವರಪ್ಪ:– ಇಂತಹ ಭಾಷಣಗಳ್ನು ಕೇಳಿ–ಕೇಳಿ ಸಾಕಾಗಿದೆ ನಮಗೆ. ಹಿಂದೆ ಕಾಂಗ್ರೆಸ್ ಸರ್ಕಾರೇ ಕೇಂದ್ರದಲ್ಲಿತ್ತು ಆಗ ಏಕೆ ಮಾಡಲಿಲ್ಲ? ಆಗಿನ ಪ್ರಧಾನ ಮಂತ್ರಿಗಳನ್ನು ಏಕೆ ಕೇಳಲಿಲ್ಲ? ಈಗ ಏಕೆ ಕೇಳುತ್ತಿದ್ದೀರಿ.

ಶ್ರೀ ಶ್ರೀನಿವಾಸ ಮಾನೆ:– ಸಮಸ್ಯೆ ಪರಿಹಾರದ ಬಗ್ಗೆ ಚರ್ಚೆ ಮಾಡದೆ, ವೈಯಕ್ತಿಕ ರಾಜಕಾರಣ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಬಸವರಾಜ ಹೊರಟ್ಟಿ:– ಇದೆಲ್ಲಾ ಚುನಾವಣಾ ಗಿಮಿಕ್ ನಮಗೆ ಅರ್ಥವಾಗುವುದಿಲ್ಲವೆ.

ಉಪಸಭಾಪತಿಯವರು:– ಎಲ್ಲರೂ ದಯಮಾಡಿ ಕುಳಿತುಕೊಳ್ಳಿ. ಈ ರೀತಿ ಎಲ್ಲರೂ ಎದ್ದು ನಿಂತು ಮಾತನಾಡಿದರೆ ಹೇಗೆ? ಮಾನ್ಯ ಯತ್ನಾಳರವರೆ ಇನ್ನು ಎರಡು ನಿಮಿಷದಲ್ಲಿ ಮಾತನಾಡಿ ಮುಕ್ತಾಯಗೊಳಿಸಿ.

ಶ್ರೀ ಬಸವನಗೌಡ ಪಾಟೀಲ್, ಯತ್ನಾಳ:– ಮಾನ್ಯ ಸಭಾಪತಿಗಳೆ, ಮಹದಾಯಿ ಮತ್ತು ಕಳಸಾ ಬಂಡೂರಿ ಬೆಳಗಾವಿ, ಧಾರವಾಡ ಜಿಲ್ಲೆಗಳ ಜನರ ಜೀವನ್ಮರಣದ ಪ್ರಶ್ನೆ. ಕುಡಿಯುವ ನೀರಿಗಾಗಿ ಇವತ್ತು ಏನೊ ಒಂದು ಪ್ರಯತ್ನವಾಗುತ್ತಿದೆ. ನಾವು ಮೇಲಿಂದ ಮೇಲೆ ಪ್ರಧಾನ ಮಂತ್ರಿಗಳನ್ನು ಈ ವಿಷಯದಲ್ಲಿ ಮಧ್ಯೆ ತರುವುದು ಬೇಡ. ಹಿಂದೆ ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು ಪ್ರಧಾನ ಮಂತ್ರಿಗಳಾಗಿದ್ದಾಗ ಆಲಮಟ್ಟಿಯ ಆಣ್ಣೆಕಟ್ಟನ್ನು 519.6ರಷ್ಟು ಎತ್ತರ ಹೆಚ್ಚಿಸುವ ವಿಚಾರ ಬಂದಾಗಲೂ ಇದೇ ಸ್ಥಿತಿ ಬಂದಿತು. ಆಂಧ್ರಪ್ರದೇಶದ ಚಂದ್ರಬಾಬು ನಾಯ್ಡುರವರು 515ಕ್ಕಿಂತ ಹೆಚ್ಚಿಗೆ ಎತ್ತರಕ್ಕೆ ಆಲಮಟ್ಟಿ ಆಣ್ಣೆಕಟ್ಟನು ಕಟ್ಟಲು ನೀವು ಅನುಮತಿಯನ್ನು ಕೊಟ್ಟರೆ ನಿಮ್ಮ ಎನ್‌ಡಿಎ ಪಕ್ಷಕ್ಕೆ ಕೊಟ್ಟಿರುವ ಬೆಂಬಲವನ್ನು ವಾಪಸ್ ತೆಗೆದುಕೊಳ್ಳುತ್ತೇವೆ ಎನ್ನುವ ಬೆದರಿಕೆಯನ್ನು ಹಾಕಿದಾಗಲೂ ಸಹಿತ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದು)

(1148)21-11-2017(08-10)ಬಿಎಸ್‌ಡಿ/ವಿಕೆ

ಶ್ರೀ ಬಸವರಾಜ ಪಾಟೀಲ್ (ಯತ್ನಾಳ್) (ಮುಂದು)

ಮಾನ್ಯ ವಾಜಪೇಯಿಯವರು ಪ್ರಧಾನ ಮಂತ್ರಿಯಾಗಿದ್ದಾಗ ನಾನು ಲೋಕಸಭಾ ಸದಸ್ಯನಾಗಿದ್ದೆನು. ಆಲಮಟ್ಟಿ ಅಣೆಕಟ್ಟು ನನ್ನ ಲೋಕಸಭಾ ಕ್ಷೇತ್ರದಲ್ಲಿತ್ತು. ಪತ್ರಕರ್ತರು ನನ್ನ ಬಳಿ ಬಂದು ತಾವು ಆ ಭಾಗದ ಲೋಕಸಭಾ ಸದಸ್ಯರಿದ್ದೀರಿ, ಚಂದ್ರಬಾಬು ನಾಯ್ಡು ಬೆಂಬಲ ವಾಪಸ್ಸು ತೆಗೆದುಕೊಳ್ಳುವ ಬಗ್ಗೆ ತಮ್ಮ ಅಭಿಪ್ರಾಯವೇನು ಎಂದು ಕೇಳಿದರು, ಒಂದು ವೇಳೆ ಕೇಂದ್ರ ಸರ್ಕಾರವು 519.6 ಅಡಿಗಳಿಗೆ ಅನುಮತಿ ಕೊಡದಿದ್ದರೆ ನಾನು ನನ್ನ ಲೋಕಸಭಾ ಸದಸ್ಯತ್ವಕ್ಕೆ ರಾಜೀನಾಮೆ ಕೊಡುತ್ತೇನೆ ಎಂದು ಪತ್ರಿಕಾ ಹೇಳಿಕೆ ಕೊಟ್ಟೆ. ನಾನು ಪಕ್ಷಕ್ಕಿಂತ ನನ್ನ ಜಿಲ್ಲೆಯ ಜನರ ಭಾವನೆಗಳನ್ನು ಎತ್ತಿ ಹಿಡಿಯುವ ಕೆಲಸವನ್ನು ಮಾಡಿದೆ. ಜನಪ್ರತಿನಿಧಿಗಳು ಸರ್ಕಾರದಲ್ಲಿರಲಿ ಅಥವಾ ವಿರೋಧ ಪಕ್ಷದಲ್ಲಿರಲಿ, ಜನರ ಭಾಗದ ಅಭಿವೃದ್ಧಿ ಸಲುವಾಗಿ ಸದನದಲ್ಲಿ ಮಾತನಾಡುವುದಕ್ಕೆ ಪ್ರಾರಂಭಿಸಿದರೆ ಅಭಿವೃದ್ಧಿ ತಾನಾಗಿಯೇ ಆಗುತ್ತದೆ. ಪುಣ್ಯಾತ್ಮರಾದ ಅಟಲ್ ಬಿಹಾರಿ ವಾಜಪೇಯಿ ರವರನ್ನು ಇವತ್ತು ನಾನು ನೆನಸಿಕೊಳ್ಳುತ್ತೇನೆ. ಮಾನ್ಯ ಅನಂತ್ ಕುಮಾರ್ ರವರ ಮೂಲಕ ನನ್ನನ್ನು ದೆಹಲಿಗೆ ವಾಜಪೇಯಿ ರವರು ಕರೆಸಿದರು. ಮೊದಲನೆಯದಾಗಿ ಬಿಜೆಪಿ ಲೋಕಸಭಾ ಸದಸ್ಯನಾಗಿ ಈ ರೀತಿ ಏಕೆ ಹೇಳಿಕೆ ಕೊಟ್ಟೆ ಎಂದು ಮಾನ್ಯ ಅನಂತಕುಮಾರ್ ಅವರು ಕೇಳಿದರು. ಆಗ ನಾನು ಇಡೀ ಉತ್ತರ ಕರ್ನಾಟಕದ ನೀರಾವರಿ ಭವಿಷ್ಯ ಇರುವುದರಿಂದ ಆ ರೀತಿ ಹೇಳಿದ್ದೇನೆ ಎಂದು ಹೇಳಿದೆ. ನಂತರ ಮಾನ್ಯ ವಾಜಪೇಯಿ ರವರ ಹತ್ತಿರ ಕರೆದುಕೊಂಡು ಹೋದಾಗ ಮಾನ್ಯ ವಾಜಪೇಯಿ ರವರು ಹೇಳಿದ ಮಾತು ನನ್ನ ಜೀವನದಲ್ಲಿ ಎಂದಿಗೂ ನೆನಪಿನಿಂದ ಹೋಗುವುದಿಲ್ಲ. ಅವರು ' ಆ ಮನುಷ್ಯ ಏನೂ ತಪ್ಪು ಮಾತನಾಡಿಲ್ಲ, ಒಬ್ಬ ಜನ ಪ್ರತಿನಿಧಿಯಾಗಿ ಆ ಭಾಗದ ಸಮಸ್ಯೆ ಸಲುವಾಗಿ ಭಾವನೆಯನ್ನು ವ್ಯಕ್ತ ಮಾಡಿದ್ದುದು ಪಕ್ಷ ವಿರೋಧಿ ಭಾವನೆಯಲ್ಲ' ಎಂದು ಹೇಳಿದರು. ಅಂದು ಶ್ರೀ ಹರೀಶ್ ಸಾಳ್ವೆ ಎಂಬುವವರು ಭಾರತ ಸರ್ಕಾರದ Attorney General ಆಗಿದ್ದರು. ನನ್ನ ಮುಂದೆಯೇ ದೂರವಾಣಿ ಮುಖೇನ ಕೇಂದ್ರ ಸರ್ಕಾರವು ಆಲಮಟ್ಟಿ ಅಣೆಕಟ್ಟನ್ನು 519.6 ಅಡಿ ಎತ್ತರಕ್ಕೆ ಕಟ್ಟಲು ಕೇಂದ್ರ ಸರ್ಕಾರದ ಯಾವುದೇ ರೀತಿಯ ತಕರಾರು ಇಲ್ಲ ಎಂದು affidavit ಹಾಕಬೇಕಾಗಿತ್ತು. ಸರ್ಕಾರ ಹೋದರೂ ಪರವಾಗಿಲ್ಲ, ದೇಶದ ಪ್ರಧಾನ ಮಂತ್ರಿಯಾಗಿ ಯಾವ ರಾಜ್ಯಕ್ಕೂ ಅನ್ಯಾಯ ಆಗಬಾರದೆಂಬ ಒಂದೇ ಉದ್ದೇಶದಿಂದ ನಾಳೆಯೇ affidavit ಹಾಕಬೇಕೆಂಬ ಸೂಚನೆ ಕೊಟ್ಟರು. ನಂತರ ಮಾನ್ಯ ಹರೀಶ್ ಸಾಳ್ವೆರವರು ಅವರ ಮನೆಗೆ ಮಾನ್ಯ ಅನಂತಕುಮಾರ್, ಶ್ರೀ ಬಸವರಾಜ ಪಾಟೀಲ್ ಸೇಡಂ ಮತ್ತು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನನ್ನನ್ನು ಕರೆಸಿ ನಿನ್ನೆಯೇ ಮಾನ್ಯ ಪ್ರಧಾನ ಮಂತ್ರಿಯವರು ನನಗೆ ಸೂಚನೆ ಕೊಟ್ಟಿರುವುದರಿಂದ affidavit ಹಾಕುತ್ತಿದ್ದೇನೆ ಎಂದು ಹೇಳಿದರು. ಅಂದು ಮಾನ್ಯ ಪ್ರಧಾನ ಮಂತ್ರಿಯವರು ಮಾನ್ಯ ಚಂದ್ರಬಾಬು ನಾಯ್ಡುರವರನ್ನು care ಮಾಡಲಿಲ್ಲ. ನಾನು ಜನಪ್ರತಿನಿಧಿಯಾಗಿ ಹೇಳಲು ಬಯಸುವುದೇನೆಂದರೆ, ಉತ್ತರ ಕರ್ನಾಟಕಕ್ಕೆ ಅನ್ಯಾಯವಾದಾಗ ನಮಗೆ ಸಿಗಬೇಕಾದ ನ್ಯಾಯೋಚಿತವಾಗಿ ಸಿಗಬೇಕಾದ ಬಿಡುಗಡೆಯಾಗದೇ ಇದ್ದಾಗ ಆಯಾ ಜನ ಪ್ರತಿನಿಧಿಗಳು ಅಭಿವೃದ್ಧಿ ಹಣ ಬರದಿದ್ದಾಗ ಆಡಳಿತ ಪಕ್ಷದಲ್ಲಿರಲಿ ಅಥವಾ ಎಲ್ಲೇ ಇದ್ದರೂ ನಾಯಕರ ಮೇಲೆ ಒತ್ತಡ ಹಾಕುವುದು ಅಥವಾ ಸದನಗಳಲ್ಲಿ ಮಾತನಾಡುವುದನ್ನೂ ಮಾಡದಿದ್ದರೆ ನಮ್ಮ ತಪ್ಪಾಗುತ್ತದೆ. ಉತ್ತರ ಕರ್ನಾಟಕದ ಅಭಿವೃದ್ಧಿ ಬಗ್ಗೆ ಬಹಳ ಕಡಿಮೆ ಸಮಯ ಕೊಡದೇ ಮುಂದಿನ ದಿನಗಳಲ್ಲಿ ಹೆಚ್ಚಿನ ಸಮಯ ಕೊಡಬೇಕು. ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯವಾಗಬೇಕು ಎಂಬ ಕೂಗನ್ನು ಕೆಲವೊಂದು ಜನ ಮಾಡುತ್ತಿದ್ದಾರೆ. ಅದರ ಅವಶ್ಯಕತೆ ಇಲ್ಲ. ಜನಪ್ರತಿನಿಧಿಗಳು ಸರಿಯಾಗಿ ಕೆಲಸ ಮಾಡಿ, ಆ ಭಾಗಕ್ಕೆ ಸಿಗಬೇಕಾದ ಪಾಲನ್ನು ಸರಿಯಾದ ರೀತಿಯಲ್ಲಿ ಹೋರಾಟ ಮಾಡಿ ತೆಗೆದುಕೊಳ್ಳಬೇಕೆ ಹೊರತು ಹೆಚ್ಚು ರಾಜ್ಯಗಳನ್ನು ಮಾಡಿಕೊಳ್ಳುವುದರಿಂದ ಅಭಿವೃದ್ಧಿಯಾಗುವುದಿಲ್ಲ. ಸಣ್ಣ ರಾಜ್ಯಗಳಾದಷ್ಟು ಪಕ್ಷಾಂತರಕ್ಕೆ ಅವಕಾಶವಾಗುತ್ತದೆ. ಇಂದು ಜಾರ್ಖಂಡ್ ಏನಾಗಿದೆ? ಅಲ್ಲಿ ಸ್ಥಿರ ಸರ್ಕಾರಗಳು ಬರುವುದಿಲ್ಲ. ಎಂಎಲ್‌ಎ ಗಳು ಒಂದು ದಿನ ಒಂದು ಪಕ್ಷದಲ್ಲಿ ಇವತ್ತು ಇದ್ದರೆ ಮರುದಿನ ಮತ್ತೊಂದು ಪಕ್ಷಕ್ಕೆ ಹೋಗುತ್ತಾರೆ. ಮಧ್ಯಮ ಗಾತ್ರದ ರಾಜ್ಯಗಳು ಇರಬೇಕು. ಉತ್ತರ ಕರ್ನಾಟಕ ರಾಜ್ಯವಾಗಿ ಪ್ರತ್ಯೇಕ 96 ಕ್ಷೇತ್ರಗಳಾದರೆ ರಾಜಕಾರಣಿಗಳಿಗೆ ಉದ್ಯೋಗ ಸೃಷ್ಟಿಯಾಗುತ್ತದೆಯೇ ಹೊರತು ಅಭಿವೃದ್ಧಿ ವಿಚಾರದಲ್ಲಿ ಏನೂ ಆಗುವುದಿಲ್ಲ. ನಮ್ಮ ಜೆಡಿ(ಎಸ್)ನ ಉಪನಾಯಕರು ಹೇಳಿದಂತೆ ಮೈಸೂರು ಮಹಾರಾಜರ ದೊಡ್ಡ ಕೊಡುಗೆ ಇದೆ. ಬೆಂಗಳೂರಿನಲ್ಲಿ ಕೇಂದ್ರೀಕೃತವಾಗಿರುವ ಅಭಿವೃದ್ಧಿಯನ್ನು ಹೊರತುಪಡಿಸಿ ಕೈಗಾರಿಕೆಗಳನ್ನು ಉತ್ತರ ಕರ್ನಾಟಕದಲ್ಲಿ ಸ್ಥಾಪನೆ ಮಾಡುವಲ್ಲಿ ಹೆಚ್ಚಿನ ಒತ್ತು ಕೊಟ್ಟು, ಕೃಷಿಗೆ ಆದ್ಯತೆ ಕೊಟ್ಟು ಕೊಡಬೇಕು. ಮಾನ್ಯ ಕೃಷಿ ಸಚಿವರು ಬಹಳ ಕ್ರಿಯಾಶೀಲರಾಗಿ ಕೆಲಸ ಮಾಡುತ್ತಿದ್ದಾರೆ. ಕೆಲವು ಸಚಿವರು ಬಿಜಾಪುರ ಮತ್ತು ಗುಲ್ಬರ್ಗ ಜಿಲ್ಲೆಗಳನ್ನು ನೋಡಿಯೇ ಇಲ್ಲ. ಬೆಂಗಳೂರಿನಲ್ಲಿಯೇ ಇದ್ದುಕೊಂಡು ಬೆಂಗಳೂರು ಸಚಿವರಾಗಿದ್ದಾರೆ. ಅವರಿಗೆ ಬೀದರ್ ಎಂದರೆ ಗೊತ್ತಿಲ್ಲ. ಇಡೀ ರಾಜ್ಯದಲ್ಲಿ ಸಚಿವರು ಪ್ರವಾಸ ಮಾಡಿದರೆ ಒಬ್ಬ ಮಂತ್ರಿ ಬರುತ್ತಾರೆಂದರೆ ಆ ಜಿಲ್ಲೆಯ ಇಡೀ ಅಧಿಕಾರಿಗಳು alert ಆಗುತ್ತಾರೆ. ಯಾವುದಾದರೂ ಬೋಗಸ್ ಬಿಲ್ ಮಾಡಿದ್ದರೆ, ಸರ್ಕಾರ ನೀಡಿರುವ ಗುರಿ ಮುಟ್ಟಿರದಿದ್ದಾಗ ಒಂದಿಬ್ಬರು ಅಧಿಕಾರಿಗಳನ್ನು suspend ಮಾಡಿದಾಗ ಇಡೀ ಇಲಾಖೆ ಜಾಗೃತವಾಗುತ್ತದೆ. ಆ ದಿಕ್ಕಿನಲ್ಲಿ ಸಚಿವ ಸಂಪುಟ ಮತ್ತು ಜನ ಪ್ರತಿನಿಧಿಗಳು ಕ್ರಿಯಾಶೀಲರಾಗಿ ಕೆಲಸ ಮಾಡುವುದರ ಮೂಲಕ ಉತ್ತರ ಕರ್ನಾಟಕಕ್ಕೆ ನೀರಾವರಿ, ಕೈಗಾರಿಕೆ , ರಸ್ತೆ ನಿರ್ಮಾಣ, ಕೃಷಿ, ಶಿಕ್ಷಣ, ಕೃಷಿ

ಆಧಾರಿತ ಕೈಗಾರಿಕೆ, cold storage ಇತ್ಯಾದಿ ಎಲ್ಲಾ ವಿಚಾರಗಳಲ್ಲಿ ಸಮಗ್ರ ಅಭಿವೃದ್ಧಿಯಾಗಬೇಕಾದರೆ ಸರ್ಕಾರ, ವಿರೋಧ ಪಕ್ಷ, ಜನಪ್ರತಿನಿಧಿಗಳು ಪರಿಣಾಮಕಾರಿಯಾಗಿ ಕೆಲಸ ಮಾಡಿದಾಗ ಮಾತ್ರ ನಿಶ್ಚಿತವಾಗಿ ಸಮಗ್ರ ಕರ್ನಾಟಕವನ್ನು ನಿರ್ಮಾಣ ಮಾಡಬಹುದು. ಈ ರೀತಿಯಾದ ಸಮಗ್ರ ಕರ್ನಾಟಕವನ್ನು ನಿರ್ಮಾಣ ಮಾಡುವುದರಲ್ಲಿ ಎಷ್ಟೋ ಜನರ ತ್ಯಾಗ-ಬಲಿದಾನ ಮಾಡಿರುವ ಕನ್ನಡ ನಾಡು ನಮ್ಮ ಉತ್ತರ ಕರ್ನಾಟಕ ಎಂಬ ಹೆಗ್ಗಳಿಕೆಗೆ ಪಾತ್ರವಾಗುತ್ತದೆ. ಆ ಮೂಲಕ ನಮ್ಮ ಈ ಭಾಗವನ್ನು ಇಡೀ ದೇಶದಲ್ಲಿ ಮಾದರಿ ರಾಜ್ಯವನ್ನಾಗಿ ಮಾಡಬಹುದಾಗಿದೆ. ನಾನು ಕೇಂದ್ರ ಮಂತ್ರಿಯಾಗಿದ್ದಾಗ ಉತ್ತರ ಪ್ರದೇಶ, ಮಧ್ಯಪ್ರದೇಶ, ಗುಜರಾತ್ ಭಾಗಗಳಿಗೆ ಹೋದಾಗ ಕರ್ನಾಟಕ ಎಂದರೆ ಇಡೀ ದೇಶದಲ್ಲಿಯೇ ಸುಸಂಸ್ಕೃತರ ರಾಜ್ಯ ಎಂದು ಹೇಳುತ್ತಿದ್ದರು. ಈ ಹೆಸರನ್ನು ಉಳಿಸಿಕೊಂಡು ಹೋಗಬೇಕಾದರೆ ನಮ್ಮ ಜವಾಬ್ದಾರಿಗಳನ್ನು ಅರಿತು ಕೆಲಸ ಮಾಡಬೇಕು. ಇನ್ನೇನು 6 ತಿಂಗಳಾದ ನಂತರ ಚುನಾವಣೆ ಬರುತ್ತದೆ. ಚುನಾವಣೆ ಪೂರ್ವದಲ್ಲಿ ಹೊಸ ಹೊಸ ಘೋಷಣೆಗಳು ಬರುತ್ತವೆ, ಇನ್ನು ಬಜೆಟ್ ಏನಾಗುತ್ತದೋ, ಯಾರಿಗೂ ಗೊತ್ತಿಲ್ಲ. ಆಕಾಶವನ್ನೇ ತಂದು ಕೆಳಗಿಳಿಸಿಬಿಡುತ್ತಾರೆ. ಮುಂದೆ ಬರುವವನು ಮಾಡುತ್ತಾನೆ. 22 ತಾಲ್ಲೂಕುಗಳನ್ನು ಹಿಂದಿನ ಸರ್ಕಾರದವರು ಘೋಷಣೆ ಮಾಡಿ ಹೋದರು. ಅದೂ ವೈಜ್ಞಾನಿಕವಲ್ಲ. ಒಂದು ತಾಲ್ಲೂಕಿನಲ್ಲಿ ಮೂರು ತಾಲ್ಲೂಕುಗಳನ್ನು ಮಾಡಿದರು. ಒಂದು ತಾಲ್ಲೂಕು ರಚನೆಯಾಗಬೇಕಾದರೆ ಎಷ್ಟು ಹಣ ವೆಚ್ಚವಾಗುತ್ತದೆ? ಎಷ್ಟು ಕಟ್ಟಡಗಳು ನಿರ್ಮಾಣವಾಗಬೇಕಾಗುತ್ತದೆ ಎಂಬುದನ್ನು ಚಿಂತಿಸಿ ಮಾಡದೇ, ಕೇವಲ ರಾಜಕೀಯ ಲಾಭಕ್ಕಾಗಿ ಮಾಡುವುದಾಗಿದೆ. ಸಮಗ್ರ ಕರ್ನಾಟಕದ ಅಭಿವೃದ್ಧಿಗೆ ನಾವೆಲ್ಲರೂ ಕೆಲಸ ಮಾಡಬೇಕಾಗಿದೆ. ನಾನು ಯಾವುದೇ ಅಂಕಿ ಸಂಖ್ಯೆಗಳಿಗೆ ಹೋಗುವುದಿಲ್ಲ. ಭವಿಷ್ಯದಲ್ಲಿ ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯವಾಗಬೇಕೆಂಬ ಕೂಗನ್ನು ಅಳಿಸಬೇಕಾದರೆ, ಅದನ್ನು ಜನರ ಮನಸ್ಸಿನಿಂದ ತೆಗೆದುಹಾಕಬೇಕೆಂದರೆ ಈ ಭಾಗಕ್ಕೆ ಹೆಚ್ಚಿನ ಅನುದಾನ ನೀಡಿ ಈ ಭಾಗದ ಅಭಿವೃದ್ಧಿ ಮಾಡಬೇಕು. ಈ ಸುವರ್ಣ ಸೌಧವನ್ನು ಸರಿಯಾಗಿ ಬಳಕೆ ಮಾಡಿಕೊಳ್ಳಬೇಕು. ಕರ್ನಾಟಕ ಸರ್ಕಾರ ಕೆಲವೊಂದು ಇಲಾಖೆಗಳು ಒಂದು ತಿಂಗಳಲ್ಲಿ ಕನಿಷ್ಟ ಒಂದು ವಾರವಾದರೂ ಇಲ್ಲಿ ಕೆಲಸ ಮಾಡಲು ಪ್ರಾರಂಭಿಸಿದರೆ ಮತ್ತು ನಿಶ್ಚಿತವಾಗಿ ಮಂತ್ರಿಗಳು ಇಲ್ಲಿ ಬಂದು ಕುಳಿತುಕೊಂಡಾಗ ಮಾತ್ರ ಈ ಭಾಗ ಅಭಿವೃದ್ಧಿಯಾಗಲು ಸಾಧ್ಯ ಎಂದು ಹೇಳಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತಿದ್ದೇನೆ.

ಶ್ರೀ ಎನ್.ಎಸ್. ಬೋಸರಾಜು (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಕೃತಜ್ಞತೆಗಳನ್ನು ಸಲ್ಲಿಸಿ, ಈಗಾಗಲೇ ಅನೇಕ ಹಿರಿಯ ಸದಸ್ಯರು ಉತ್ತರ ಕರ್ನಾಟಕದ ಅಭಿವೃದ್ಧಿ ಬಗ್ಗೆ ಮಾತನಾಡಿದ್ದಾರೆ. ನಾವು ಅನೇಕ ವರ್ಷಗಳಿಂದ ಈ ಬಗ್ಗೆ ಮಾತನಾಡುತ್ತಿದ್ದೇವೆ. ಹಿಂದಿನಿಂದ ಬಂದಿರುವ ಸರ್ಕಾರಗಳು ಹಾಗೂ ಜನ ಪ್ರತಿನಿಧಿಗಳು ಒಟ್ಟಾರೆಯಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೆಲಸ ಮಾಡುವ ಮೂಲಕ ಹೆಚ್ಚಿನ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವಾಗುತ್ತದೆ. ಇವತ್ತು ಕರ್ನಾಟಕದಲ್ಲಿ ಯಥೇಚ್ಛವಾಗಿ agriculture based ಪರಿಸ್ಥಿತಿ ಇರುವುದರಿಂದ ನಮ್ಮ ಉತ್ತರ ಕರ್ನಾಟಕದ ಭಾಗದಲ್ಲಿ ಸ್ನೇಹಿತರು ಹೇಳಿದಂತೆ ಕೃಷ್ಣ, ತುಂಗಭದ್ರ, ಭೀಮಾ ಸೇರಿದಂತೆ ಅನೇಕ ನದಿಗಳ ಮೂಲಕ ರೈತರಿಗೆ ನೀರು ಸಿಗುವ ಅವಕಾಶ ಇದೆ. ಈ ದಿಸೆಯಲ್ಲಿ ತೀವ್ರ ಗತಿಯಲ್ಲಿ ಮಾಡುವ ಕಾಮಗಾರಿಗಳನ್ನು ಪೂರೈಸಿ, ನೀರು ಕೊಡುವ ಮೂಲಕ ಈ ಭಾಗದ ಜನರಿಗೆ ಅನುಕೂಲವನ್ನು ಒದಗಿಸುವಂತಹ ಪ್ರಯತ್ನ ಮಾಡಬೇಕು.

(ಮುಂದು)

(1149)21.11.2017/8.20/ಹೆಚ್‌ವಿಃವಿಕೆ

ಶ್ರೀ ಎನ್.ಎಸ್.ಬೋಸ್‌ರಾಜು (ಮುಂದುವರೆದದ್ದು)ಃ–

ಸನ್ಮಾನ್ಯ ಸಭಾಪತಿಯವರೇ, ಈ ದಿಸೆಯಲ್ಲಿ ಆಗಿರುವಂತಹ ಅನೇಕ ಯೋಜನೆಗಳಲ್ಲಿ ಕೆಲವು ಹಳೆಯ ಯೋಜನೆಗಳಿವೆ, ನೂತನವಾಗಿ ನಿರ್ಮಾಣವಾಗಿರುವ ಯೋಜನೆಗಳಿವೆ ಮತ್ತು ನಿರ್ಮಾಣದ ಹಂತದಲ್ಲಿರುವ ಯೋಜನೆಗಳಿವೆ. ಇತ್ತೀಚಿನ ದಿನಗಳಲ್ಲಿ ಈ ಭಾಗದ ರೈತರು ಹೆಚ್ಚು ಶ್ರಮವಹಿಸಿ ಹೊರ ಭಾಗದ ರೈತರಿಗೆ ಮಾದರಿಯಾಗುವ ರೀತಿಯಲ್ಲಿ ಬೆಳೆ ಬೆಳೆಸುವ ಪದ್ಧತಿ ನಮ್ಮಲ್ಲಿ ಪ್ರಾರಂಭವಾಗಿದೆ. ನೀರಾವರಿ ಪ್ರದೇಶದಲ್ಲಿ ಅನೇಕ ರೀತಿಯಾಗಿರುವ ಬೆಳೆಗಳನ್ನು ಬೆಳೆಯುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಉದಾಹರಣೆಗೆ ಹೇಳಬೇಕಾದರೆ, ತುಂಗಭದ್ರ ಯೋಜನೆ ಸುಮಾರು 60 ವರ್ಷಗಳಷ್ಟು ಹಳೆಯ ಯೋಜನೆಯಾಗಿದೆ. ಇದು ಕರ್ನಾಟಕ, ಆಂಧ್ರಪ್ರದೇಶ ಮತ್ತು ತೆಲಂಗಾಣ ಮೂರು ರಾಜ್ಯಗಳು ಸೇರಿ ಮಾಡಿರುವಂತಹ ಯೋಜನೆಯಾಗಿದೆ. ಈ ನೀರಾವರಿ ಯೋಜನೆಯಿಂದ ಸುಮಾರು 14 ಲಕ್ಷ ಎಕರೆಗೆ ನೀರಾವರಿಯನ್ನು ಒದಗಿಸಿ ಕೊಡುತ್ತಿದೆ. ಒಂದು ಕಾಲದಲ್ಲಿ ಆ ನೀರನ್ನು ಉಪಯೋಗಿಸುವ ಬಗ್ಗೆ ತಿಳುವಳಿಕೆಯನ್ನು ನೀಡುತ್ತಿದ್ದರು. ಮಾನ್ಯ ವೀರೇಂದ್ರ ಪಾಟೀಲ್‌ರವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ನಮ್ಮ ಭಾಗಕ್ಕೆ ಬಂದಾಗ, 'ನೀವು ಏಕೆ ಕೃಷ್ಣಾ ನದಿ ನೀರನ್ನು ಕೇಳುತ್ತಿದ್ದೀರಿ, ಮುಂದಿನ ಹಂತದಲ್ಲಿ ನಿಮಗೆ ಕೃಷ್ಣಾ ನದಿ ನೀರನ್ನು ಕೊಡುತ್ತೇವೆ ತುಂಗಭದ್ರದಿಂದ ಕೊಟ್ಟಿರುವ ನೀರರನ್ನು ರಾಯಚೂರು ಜಿಲ್ಲೆಯಲ್ಲಿನ 6 ಲಕ್ಷ ಎಕರೆಗೆ ನೀರಾವರಿ ಸೌಲಭ್ಯ ಒದಗಿಸಲು ಉಪಯೋಗಿಸಬಹುದು' ಎನ್ನುವ ಮಾತನ್ನು ಕೇಳಿದ್ದರು. ಅಂದಿನ ದಿನಗಳಲ್ಲಿ ನಮ್ಮ ರಾಯಚೂರು ಜಿಲ್ಲಾಧಿಕಾರಿಗಳಾಗಿ ಮಾನ್ಯ ಹನುಮಗೌಡ್ ಎನ್ನುವವರು ಇದ್ದರು. ಅವರು ಸ್ವತಃ ರೈತರ ಬಳಿಗೆ ಹೋಗಿ ಭತ್ತವನ್ನು ಬೆಳೆಯುವಂತೆ ಪ್ರೋತ್ಸಾಹಿಸಿ, ಬೇರೆ ಬೇರೆ ಕಡೆಗಳಿಂದ ಭತ್ತದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಚಿತ್ತನೆ ಬೀಜವನ್ನು ತರಿಸಿಕೊಡುತ್ತಿದ್ದರು. ಅದೇ ರೀತಿಯಲ್ಲಿ ಅಭಿವೃದ್ಧಿ ಆಯುಕ್ತರಾಗಿ ಶ್ರೀ ಕೆ.ಎಲ್.ರಾವ್ ಎನ್ನುವವರು ಇದ್ದರು. ಅವರು ಪ್ರತಿ ತಿಂಗಳು ತುಂಗಭದ್ರ ಅಚ್ಚುಕಟ್ಟು ಪ್ರದೇಶಕ್ಕೆ ಬರುತ್ತಿದ್ದರು. ಅವರು ಸಹ ಭತ್ತ ಬೆಳೆಯುವಂತೆ ರೈತರನ್ನು ಪ್ರೋತ್ಸಾಹಿಸುವ ಕೆಲಸವನ್ನು ಮಾಡುತ್ತಿದ್ದರು. ಆದರೆ, ಇವತ್ತು ಆ ಭಾಗದಲ್ಲಿರುವ ರೈತರು ಪ್ರತಿಯೊಂದು ಕ್ಯೂಸೆಕ್ಸ್ ನೀರನ್ನು ಉತ್ತಮ ರೀತಿಯಲ್ಲಿ, ಎಲ್ಲಿಯೂ ನೀರು ಪೋಲಾಗದಂತೆ ನೀರಾವರಿಗೆ ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಭತ್ತ ಅಥವಾ ಬೇರೆ ಬೆಳೆಗಳಿಗೆ ಬಳಕೆ ಮಾಡಿಕೊಳ್ಳುವಂತಹ ನೀರು ನಾಲೆಗಳ ಮೂಲಕ ಹರಿದು ಬಂದರೆ, ಅದನ್ನು recycling ಮಾಡಿ ಅಲ್ಲಿ ವ್ಯವಸಾಯವನ್ನು ಮಾಡುತ್ತಾರೆ. ಹೀಗಾಗಿ ತುಂಗಭದ್ರ ನದಿಯಿಂದ ಬರುವಂತಹ ನೀರನ್ನು recycling ಮಾಡಿ ರೈತರು ಉತ್ತಮ ರೀತಿಯಲ್ಲಿ ನೀರನ್ನು ಬಳಕೆ ಮಾಡಿಕೊಳ್ಳುವಂತಹ ಪರಿಸ್ಥಿತಿ ಇದೆ. ನನ್ನ ಶಾಸಕ ಮಿತ್ರರೊಬ್ಬರು ತುಂಗಭದ್ರ ಯೋಜನೆಯ ಬಗ್ಗೆ ಉಲ್ಲೇಖ ಮಾಡಿದ್ದರು. ಈ ಯೋಜನೆ ಸುಮಾರು 60 ವರ್ಷಗಳಷ್ಟು ಹಳೆಯ ಯೋಜನೆಯಾಗಿದೆ. ಇದರ ಬಗ್ಗೆ ಚಿಂತನೆ ಮಾಡುವ ಪ್ರಯತ್ನವನ್ನು ಸರ್ಕಾರ ಮಾಡಬೇಕಾಗುತ್ತದೆ. ಅದರಲ್ಲಿ ಸುಮಾರು 32 ಟಿ.ಎಂ.ಸಿ.ಯಷ್ಟು ಹೂಳು ತುಂಬಿದೆ. ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳ ರೈತರು ಸಾಕಷ್ಟು ಭೂಮಿಯನ್ನು ಅಭಿವೃದ್ಧಿಪಡಿಸಿದ್ದಾರೆ. ಮುಂದೆ ಏನಾಗುತ್ತದೆ ಎನ್ನುವ ಭಯ ಅಲ್ಲಿನ ರೈತರನ್ನು ಕಾಡುತ್ತಿದೆ. ಕಳೆದ 15 ದಿನಗಳ ಹಿಂದೆ ICC (Irrigation Consultative Committee) meeting ಮಾಡಿದ್ದೆವು. ನಿನ್ನೆ ತಾನೇ ಮಾನ್ಯ ನೀರಾವರಿ ಸಚಿವರ ಅಧ್ಯಕ್ಷತೆಯಲ್ಲಿ ಒಂದು ಸಭೆಯನ್ನು ಕರೆಯಲಾಗಿತ್ತು. ಆ ಸಭೆಗೆ ತುಂಗಭದ್ರ ಬೋರ್ಡ್‌ನ ಅಧಿಕಾರಿಗಳನ್ನು ಸಹ ಕರೆಯಲಾಗಿತ್ತು. ಆ ಮೂರು ಜಿಲ್ಲೆಯ ರೈತರು ಬಹಳ ಆತಂಕದಲ್ಲಿದ್ದಾರೆ. ಮಲೆನಾಡಿನಲ್ಲಿ ಸರಿಯಾಗಿ ಮಳೆ ಬೀಳದೇ ಇದ್ದ ಕಾರಣ ತುಂಗಭದ್ರ ಅಣೆಕಟ್ಟೆಗೆ ಬರಬೇಕಾಗಿದ್ದ ಸುಮಾರು 133 ಟಿ.ಎಂ.ಸಿ. ನೀರು ತುಂಬುವುದಕ್ಕೆ ಸಾಧ್ಯವಾಗಲಿಲ್ಲ. ಭದ್ರಾ ಮತ್ತು ತುಂಗಭದ್ರ ನಡುವೆ ಸುಮಾರು 21-22 ಟಿ.ಎಂ.ಸಿ.ಯಷ್ಟು ನೀರನ್ನು ಪಡೆದುಕೊಳ್ಳುವ ಯೋಜನೆಗಳಾಗಿವೆ. ಈ 20-22 ಟಿ.ಎಂ.ಸಿ. ಮತ್ತು ಹೂಳಿನಿಂದ ತುಂಬಿರುವ 32 ಟಿ.ಎಂ.ಸಿ.ಯನ್ನು ಕೂಡಿಸಿದರೆ ಒಟ್ಟು ಸುಮಾರು 50-55 ಟಿ.ಎಂ.ಸಿ.ಯಷ್ಟು ಅಂದರೆ ಅರ್ಧದಷ್ಟು ನೀರು ಬರಲಾಗದ ಪರಿಸ್ಥಿತಿ ತುಂಗಭದ್ರ ಅಚ್ಚುಕಟ್ಟು ಪ್ರದೇಶದಲ್ಲಿ ಉಂಟಾಗಿದೆ. ಇದನ್ನು ಸರಿಪಡಿಸುವುದಕ್ಕೆ ಈಗಾಗಲೇ ರೈತರು ಹಾಗೂ ಜನಪ್ರತಿನಿಧಿಗಳು ಸರ್ಕಾರವನ್ನು ಒತ್ತಾಯಿಸುತ್ತಿದ್ದಾರೆ. ಆ ನಿಟ್ಟಿನಲ್ಲಿ ಒಂದು ದೊಡ್ಡ balancing reservoir ಮಾಡುವುದಕ್ಕೆ DPR (Detailed Project Report) ಮಾಡಿದ್ದಾರೆ. ಇದನ್ನು ಕಾರ್ಯರೂಪಕ್ಕೆ ತಂದರೆ ರೈತರು ಮತ್ತು ಜನರಲ್ಲಿ ಉಂಟಾಗಿರುವ ಆತಂಕವನ್ನು ದೂರ

ಮಾಡಬಹುದಾಗಿದೆ. ಇಲ್ಲದಿದ್ದರೆ ಆ ಮೂರು ಜಿಲ್ಲೆಗಳಲ್ಲಿರುವ ರೈತರಿಗೆ ಸಾಕಷ್ಟು ಸಂಕಷ್ಟವುಂಟಾಗಬಹುದು. ಆದ್ದರಿಂದ ತಡ ಮಾಡದೇ ಇದಕ್ಕೆ ಪರಿಹಾರವನ್ನು ಹುಡುಕುವಂತಹ ಪ್ರಯತ್ನವನ್ನು ಸರ್ಕಾರ ಮಾಡಬೇಕಾಗುತ್ತದೆ. ಅದೇ ರೀತಿಯಲ್ಲಿ ನಾರಾಯಣಪುರ ಎಡದಂಡೆ ಕಾಲುವೆ ಮತ್ತು ಬಲದಂಡೆ ಕಾಲುವೆಗಳ ಬಗ್ಗೆ ಹೇಳಬೇಕಾದರೆ, ...

ಶ್ರೀ ಹೆಚ್.ಕೆ.ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)ಃ– ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಬೋಸ್‌ರಾಜ್‌ರವರು ತುಂಗಭದ್ರ ಅಚ್ಚುಕಟ್ಟು ಪ್ರದೇಶದ ಬಗ್ಗೆ ಹೇಳಿ, ಕೃಷ್ಣಾ ಅಚ್ಚುಕಟ್ಟು ಪ್ರದೇಶದ ಬಗ್ಗೆ ಪ್ರಸ್ತಾಪ ಮಾಡಲು ಹೊರಟಿದ್ದಾರೆ. ಮಾನ್ಯ ಬಸನಗೌಡ ಪಾಟೀಲ್‌ರವರು ಮಾತನಾಡುತ್ತಿದ್ದ ಸಂದರ್ಭದಲ್ಲಿ ನಾನ್ನೊಂದು ಸಲಹೆಯನ್ನು ನೀಡಬೇಕೆಂದು ಹೊರಟಿದ್ದೆ ಅಷ್ಟರಲ್ಲಿ ಅವರು ಮುಕ್ತಾಯದ ಶಬ್ದಗಳನ್ನು ಪ್ರಾರಂಭಿಸಿದ್ದರು. ಮಾನ್ಯ ಈಶ್ವರಪ್ಪನವರಿಗೆ ಗೊತ್ತಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ, ನಾನು ಈ ಸದನದ ವಿರೋಧ ಪಕ್ಷದ ನಾಯಕನಾಗಿದ್ದ ಸಂದರ್ಭದಲ್ಲಿ, ಪ್ರಥಮ ಬಾರಿಗೆ TMC (Thousand Million Cubic) ಎಂದರೇನು, Megawatt ಎಂದರೇನು, Cusecs ಎಂದರೇನು ನೀರಾವರಿ ಎಂದರೇನು, Seepage water ಎಂದರೇನು, Distributory ಎಂದರೇನು ಎನ್ನುವುದರ ಬಗ್ಗೆ ಮಾನ್ಯ ಬೋಸ್‌ರಾಜ್‌ರವರು ನನಗೆ ತಿಳಿ ಹೇಳಿದ್ದರು. He was instrumental in enlightening me on all those aspects. ತುಂಗಭದ್ರ ಅಚ್ಚುಕಟ್ಟು ಪ್ರದೇಶದಲ್ಲಿನ ನೀರಾವರಿ ತಜ್ಞರೆಂದು ಅವರನ್ನು ನಾವು ಕರೆಯಬಹುದಾಗಿದೆ. ಈ ಸಂದರ್ಭದಲ್ಲಿ ನಾನು, ಸದನ ಮತ್ತು ಸರ್ಕಾರ ಅವರಿಂದ ಏನು ನಿರೀಕ್ಷೆ ಮಾಡುತ್ತಿದೆಯೆಂದರೆ, ನೀರು ಕಡಿಮೆಯಾಗಿರುವುದು, ಹೂಳು ತುಂಬಿರುವುದು ಎಲ್ಲವೂ ನಿಜ ಆದರೆ, ಸರ್ಕಾರ ಏನು ಕ್ರಮ ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಅವರು ಸಲಹೆಗಳನ್ನು ನೀಡಬೇಕಾಗಿದೆ. ತುಂಗಭದ್ರ ಅಣೆಕಟ್ಟೆಯ ಗೇಟಿನ ಎತ್ತರವನ್ನು ಹೆಚ್ಚು ಮಾಡುವುದಕ್ಕೆ ಅವಕಾಶವಿದೆ. If political resolve takes place between the Karnataka and Andhra Pradesh, 3 ಫೂಟ್‌ಗಿಂತ ಹೆಚ್ಚಿಗೆ ಗೇಟ್‌ನ ಎತ್ತರವನ್ನು ಹೆಚ್ಚಿಸುವುದಕ್ಕೆ ಸಾಧ್ಯವಿದೆ. ಈ ರೀತಿ ಗೇಟ್‌ನ ಎತ್ತರವನ್ನು ಹೆಚ್ಚು ಮಾಡಿದರೆ ಸುಮಾರು 12 ಟಿ.ಎಂ.ಸಿ.ಯಷ್ಟು ಹೆಚ್ಚಿನ ನೀರನ್ನು ಶೇಖರಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇದಕ್ಕಾಗಿ ನಮ್ಮ ರಾಜ್ಯ ಸರ್ಕಾರವೂ ಒಂದು ಪೈಸೆ ಖರ್ಚು ಮಾಡಬೇಕಾಗಿಲ್ಲ. ಆಂಧ್ರಪ್ರದೇಶವೂ ಒಂದು ಪೈಸೆಯನ್ನು ಖರ್ಚು ಮಾಡಬೇಕಾಗಿಲ್ಲ. ನಮ್ಮ ಮತ್ತು ಅವರ ನಡುವೆ ಒಂದು ಒಪ್ಪಂದವಾಗಿದೆ. 2/3 ಮತ್ತು 1/3 ನೀರಿನ ಪಾಲನ್ನು ನಾವು ಹಂಚಿಕೊಳ್ಳುತ್ತಿದ್ದೇವೆ. ಆದರೆ, ಇದಕ್ಕೆ ರಾಜಕೀಯ ಇಚ್ಛಾಸಕ್ತಿ ಬೇಕಾಗುತ್ತದೆ. ನಮ್ಮ ರಾಜ್ಯ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸರ್ಕಾರ ಆ ಇಚ್ಛಾಶಕ್ತಿಯನ್ನು ಹೊಂದಿದೆ. ಕೃಷ್ಣಾ ನದಿ ನೀರಿನ ಹಂಚಿಕೆ ಬಗ್ಗೆ ನಮಗೂ ಮತ್ತು ಆಂಧ್ರಪ್ರದೇಶದವರ ನಡುವೆ ವಿವಾದ ಇದ್ದಂತಹ ಸಂದರ್ಭದಲ್ಲಿ, ಆಂಧ್ರಪ್ರದೇಶದವರು ಇದನ್ನು ಮಾಡುವುದು ಬೇಡವೆಂದು ನೇರವಾಗಿ ಹೇಳುತ್ತಿರಲಿಲ್ಲ. ಆದರೆ, ಬೇರೆ ಬೇರೆ ಕಡೆಗಳಿಂದ unreasonable problems ಗಳನ್ನು ಹೇಳುತ್ತಿದ್ದರು. ಈಗ ಆ ವಿವಾದ ಮುಕ್ತಾಯಗೊಂಡಿದೆ. ಆಂಧ್ರಪ್ರದೇಶ ಈಗ ಎರಡು ರಾಜ್ಯಗಳಾಗಿ ವಿಭಜನೆಗೊಂಡಿದೆ. ಆದ್ದರಿಂದ ಈ ಸಂದರ್ಭದಲ್ಲಿ ಅಂತಹ ಪ್ರಮುಖವಾಗಿರುವ ತೀರ್ಮಾನವನ್ನು ತೆಗೆದುಕೊಂಡರೆ ಉತ್ತರ ಕರ್ನಾಟಕದ ತುಂಗ ಭದ್ರ ಅಚ್ಚುಕಟ್ಟು ಪ್ರದೇಶದವರಿಗೆ ಅನುಕೂಲವಾಗಬಹುದು ಎನ್ನುವ ನಿಟ್ಟಿನಲ್ಲಿ ಮಾನ್ಯ ಸದಸ್ಯರು ಬೆಳಕು ಚೆಲ್ಲಿದರೆ, ಸದನವು ಈ ಬಗ್ಗೆ ಒಟ್ಟು ಅಭಿಪ್ರಾಯವನ್ನು ವ್ಯಕ್ತಪಡಿಸಿದರೆ ಸರ್ಕಾರವೂ ಇದರ ಬಗ್ಗೆ ಗಂಭೀರವಾಗಿ ಆಲೋಚನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅಲ್ಲದೇ, ಈ ಸದನದ ಮೂಲಕ ಆಂಧ್ರಪ್ರದೇಶಕ್ಕೆ ಒಂದು ಸಂದೇಶವನ್ನು ಕಳುಹಿಸಿಕೊಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಎನ್.ಎಸ್.ಬೋಸ್‌ರಾಜುಃ– ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಹೆಚ್.ಕೆ.ಪಾಟೀಲ್‌ರವರಿಗೆ ತುಂಗಭದ್ರ ಯೋಜನೆಯ ಬಗ್ಗೆ ಸಾಕಷ್ಟು ಅರಿವಿದೆ. ಅವರು ನೀರಾವರಿ ಸಚಿವರಾಗಿದ್ದ ಸಂದರ್ಭದಲ್ಲಿ ನಾವು ಕರೆದಾಗಲೆಲ್ಲ ಬಂದು ನಮ್ಮ ಮೂರು ಜಿಲ್ಲೆಗಳ ರೈತರ ಜೊತೆಗೆ ಸಂಪರ್ಕವನ್ನು ಇಟ್ಟುಕೊಂಡು, ಅಲ್ಲಿರುವಂತಹ ಅಣೆಕಟ್ಟೆಯ ವ್ಯವಸ್ಥೆಯನ್ನು ಮತ್ತು ನೀರಾವರಿ ಪದ್ಧತಿಯನ್ನು ತಿಳಿದುಕೊಂಡಿದ್ದರು. ಅದರ ಜೊತೆಗೆ ರೈತರಿಗೆ ಅನುಕೂಲವಾಗುವಂತಹ ಅನೇಕ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿದ್ದರು. ಮಾನ್ಯ ಹೆಚ್.ಕೆ.ಪಾಟೀಲ್‌ರವರು ಹೇಳಿದಂತೆ, ತುಂಗಭದ್ರ ಅಣೆಕಟ್ಟೆಯಲ್ಲಿ ಸುಮಾರು 32 ಟಿ.ಎಂ.ಸಿ.ಯಷ್ಟು ಹೂಳು ತುಂಬಿದೆ. ಅದರಿಂದ ಯಾವ ರೀತಿಯಲ್ಲಿ ಅಣೆಕಟ್ಟೆಯ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಬಹುದು ಎನ್ನುವುದರ ಬಗ್ಗೆ ಆಲೋಚನೆ ಮಾಡಬೇಕಾಗಿದೆ. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಹೇಳಿದಂತೆ ಆ ಅಣೆಕಟ್ಟೆಯ ಒಂದು ಗೇಟಿನ ಎತ್ತರವನ್ನು 10–12 ಫೂಟ್‌ನಷ್ಟು ಹೆಚ್ಚು ಮಾಡಬಹುದು. ಅದಕ್ಕಿಂತ ಹೆಚ್ಚು ಮಾಡಿದರೆ submerge ಆಗುತ್ತದೆ. ಅದರಿಂದ ದೊಡ್ಡ ತೊಂದರೆಯಾಗುತ್ತದೆ. ಅದಕ್ಕಾಗಿಯೇ ಗಂಗಾವತಿಯ ನವಿಲೆ ಹತ್ತಿರ ಒಂದು balancing reservoir ಮಾಡಬೇಕೆನ್ನುವ ಹಿನ್ನೆಲೆಯಲ್ಲಿ 5 ಸಾವಿರ ಕೋಟಿ ರೂಪಾಯಿಗಳ ವೆಚ್ಚದಲ್ಲಿ DPR ಮಾಡಲಾಗಿದೆ. ಈ ನಿಟ್ಟಿನಲ್ಲಿ ಸಿದ್ಧತೆಗಳು ನಡೆದಿವೆ. ನಿನ್ನೆ ನಡೆದಂತಹ ಸಭೆಯಲ್ಲಿ ಮಾನ್ಯ ನೀರಾವರಿ ಸಚಿವರ ಬಳಿ ಮತ್ತು ತುಂಗಭದ್ರ ಬೋರ್ಡ್ ಸೆಕ್ರೆಟರಿಗಳಲ್ಲಿ ಈ ಬಗ್ಗೆ ಮೂರು ಜಿಲ್ಲೆಯ ಜನ ಪ್ರತಿನಿಧಿಗಳು ಮನವಿ ಮಾಡಿದ್ದೇವೆ. ಆದಷ್ಟು ಬೇಗ ತೆಲಂಗಾಣ ಮತ್ತು ಆಂಧ್ರಪ್ರದೇಶದವರ ಜೊತೆಗೆ ಮಾತನಾಡಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಮಸ್ಯೆಯನ್ನು ಬಗೆಹರಿಸುವಂತಹ ಪ್ರಯತ್ನವನ್ನು ಮಾಡಬೇಕೆನ್ನುವ ಒತ್ತಾಯವನ್ನು ನಾವು ಸರ್ಕಾರದ ಮುಂದಿಟ್ಟಿದ್ದೇವೆ. ಈ ದಿಸೆಯಲ್ಲಿ ಸರ್ಕಾರ ಮುಂದಾಗಬೇಕಾಗಿದೆ. ತುಂಗಭದ್ರ ಅಣೆಕಟ್ಟು ರೈತರ ಜೀವನಾಡಿಯಾಗಿದೆ. ಆದ್ದರಿಂದ ರೈತರಿಗೆ ತೊಂದರೆಯಾಗದಂತೆ ಆದಷ್ಟು ಬೇಗನೇ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡುತ್ತಿದ್ದೇನೆ. ನಾರಾಯಣಪುರ ಬಲದಂಡೆ ಕಾಲುವೆಯಿಂದ 9(A) Distributory Canal ಬೇಕಾಗಿದೆ. ನಾರಾಯಣಪುರ ಬಲದಂಡೆ ಕಾಲುವೆ ಮಾಡಿದಂತಹ ಸಂದರ್ಭದಲ್ಲಿ ಯಾವಯಾವ ಪ್ರದೇಶಗಳು ಬಿಟ್ಟು ಹೋಗಿವೆ ಅವುಗಳಿಗೆ ನೀರಾವರಿ ಒದಗಿಸಿಕೊಡುವ ಸಲುವಾಗಿ ಒಂದು 9(A) Distributory Canal ಮಾಡಬೇಕೆಂದು ನಾನು ಮತ್ತು ದಿವಂಗತ ವೆಂಕಟೇಶ್‌ನಾಯಕರು ಕೇಳಿದಂತಹ ಸಂದರ್ಭದಲ್ಲಿ ಅದಕ್ಕೆ ಸರ್ಕಾರ ಅನುಮತಿಯನ್ನು ನೀಡಿತ್ತು. ಅದು ಈಗ ಮುಕ್ತಾಯದ ಹಂತದಲ್ಲಿದೆ.

ಮಾನ್ಯ ವಿರೋಧ ಪಕ್ಷದ ನಾಯಕರು ನೀರಾವರಿ ಸಚಿವರಾಗಿದ್ದ ಸಂದರ್ಭದಲ್ಲಿ, ಅವರು ಸಹ ಆ ಭಾಗದಲ್ಲಿನ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸುವ ವಿಚಾರವನ್ನು ಅವರ ಗಮನಕ್ಕೆ ತಂದಂತಹ ಸಂದರ್ಭದಲ್ಲಿ ಅದಕ್ಕೆ ಅವಶ್ಯಕವಿರುವ ಹಣವನ್ನು ಆಯವ್ಯಯದಲ್ಲಿ ಒದಗಿಸಿಕೊಟ್ಟು ಆ ಯೋಜನೆಗಳನ್ನು ಪೂರ್ಣಗೊಳಿಸುವಂತಹ ಪ್ರಯತ್ನವನ್ನು ಅವರು ಸಹ ಮಾಡಿದ್ದರು.

(ಮುಂದುವರಿದಿದೆ)

(1150)21.11.2017-8.30-ಪಿಕೆ-ಬಿಎನ್‌ಎಸ್

ಶ್ರೀ ಎನ್.ಎಸ್.ಬೋಸ್‌ರಾಜು(ಮುಂದುವರೆದಿದೆ)

9-A Canal ಅನ್ನು ಮಾನ್ಯ ಹೆಚ್.ಕೆ.ಪಾಟೀಲ್‌ರವರು ನೀರಾವರಿ ಮಂತ್ರಿಯಾಗಿದ್ದಾಗ ಪ್ರಾರಂಭ ಮಾಡಿದರು. ಇದು ಕೇವಲ 33 ಕಿಲೋ ಮೀಟರ್‌ನಷ್ಟು ಹೋಗುತ್ತದೆ. ಇದಕ್ಕೆ ಬಹಳಷ್ಟು ಸಮಯ ತೆಗೆದುಕೊಂಡರು. ಟೆಂಡರ್ ಕರೆಯುವುದರಲ್ಲಾಗಲಿ, ಗುತ್ತಿಗೆದಾರರು ಸಮಯಕ್ಕೆ ಸರಿಯಾಗಿ ಕೆಲಸ ಮಾಡದೇ ಇರತಕ್ಕಂಥದ್ದು, ಭೂಸ್ವಾಧೀನ ಪ್ರಕ್ರಿಯೆಯಲ್ಲಿ ವಿಳಂಬವಾಗುವುದು ಹೀಗೆ ಯಾವುದೇ ಕಾಮಗಾರಿ ಕೈಗೆತ್ತಿಕೊಂಡಾಗ ಅದು ನಿಗದಿತ ಸಮಯದಲ್ಲಿ ಆಗುತ್ತಿಲ್ಲ. ಇದರಿಂದ ಖರ್ಚು-ವೆಚ್ಚ ಅಧಿಕವಾಗುತ್ತಾ ಹೋಗುತ್ತದೆ ಮತ್ತು ಜನರಿಗೆ ತಕ್ಷಣ ಇದರಿಂದ ಉಪಯೋಗ ಸಿಗದೇ ಇರುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ನಾರಾಯಣಪುರ ಬಲದಂಡೆ ಕಾಲುವೆ ಕೆಲವು ವರ್ಷಗಳ ಹಿಂದೆ ನಿರ್ಮಾಣವಾಯಿತು. ಇವತ್ತು , ಕೇವಲ 95 ಕಿಲೋ ಮೀಟರ್‌ಗೆ ಸಂಬಂಧಪಟ್ಟಂತೆ ಅಭಿವೃದ್ಧಿ ಮಾಡಲು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೂ.1800 ಕೋಟಿ ಅಗುತ್ತದೆ ಎಂದು ಹೊಸದಾಗಿ ಅಂದಾಜು ಮಾಡಿದ್ದಾರೆ. ಅದೇ ಎಡದಂಡೆ ಕಾಲುವೆಗೆ ಸಂಬಂಧಪಟ್ಟಂತೆ, ಕೇಂದ್ರದಲ್ಲಿ ಯುಪಿಎ ಸರ್ಕಾರ ಇದ್ದಾಗ ಮಾನ್ಯ ಮಲ್ಲಿಕಾರ್ಜುನ ಖರ್ಗೆ ಸಾಹೇಬರು ತಮ್ಮ ಪ್ರಯತ್ನದಿಂದ ರೂ. 3660 ಕೋಟಿಯಷ್ಟು ಹಣವನ್ನು ಅಭಿವೃದ್ಧಿಗೆಂದು ಕೊಡಿಸಿದರು. ಕೇವಲ 25-30 ವರ್ಷಗಳಲ್ಲಿ ಅಭಿವೃದ್ಧಿ ಮಾಡುವುದಕ್ಕೆ ಇಷ್ಟಿಷ್ಟು ಹಣ ಖರ್ಚು ಆಗುತ್ತಿದೆ. ತುಂಗಭದ್ರಾ Main Canal ಮತ್ತು 3 ಜಿಲ್ಲೆಗಳಲ್ಲಿರುವ Distributaries and Sub-distributaries ಗೆ 14 ಲಕ್ಷ ಎಕರೆಗೆ ನೀರು ಕೊಡಬೇಕಾದರೆ ಆಗಿನ ಖರ್ಚು ಕೇವಲ ರೂ.100 ಕೋಟಿಗಿಂತ ಕಡಿಮೆ ಆಗಿತ್ತು. ಇವತ್ತು ದುರಸ್ತಿಗೆಂದು ಅಥವಾ ಅಭಿವೃದ್ಧಿ ಮಾಡುವುದಕ್ಕಾಗಿಯೇ ಹೆಚ್ಚು-ಕಡಿಮೆ, ನನಗೆ ಮಾಹಿತಿ ಇರುವ ಪ್ರಕಾರ ಮೂರೂವರೆ ಸಾವಿರ ಕೋಟಿ ರೂಪಾಯಿಗಳಾಗಿವೆ. ನಾವು ಮಾಡುವ ಪ್ರಾಜೆಕ್ಟ್‌ಗಳೇನಿವೆ ಅವು ನಿಗದಿತ ಅವಧಿಯಲ್ಲಿ ಮುಗಿದು ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಇರಬೇಕು. ನಾರಾಯಣಪುರ ಬಲದಂಡೆ ಕಾಲುವೆಗೆ ರೂ. 1800 ಕೋಟಿ ಏನು ಖರ್ಚು ಮಾಡುತ್ತಿದ್ದಾರೋ ಅದರಿಂದ 95 ಕಿಲೋ ಮೀಟರ್‌ವರೆಗೆ ನೀರು ಸರಿಯಾಗಿ ತಲುಪುವಂಥ ವ್ಯವಸ್ಥೆ ಮಾಡಬೇಕು.

ಈ ಸರ್ಕಾರ ಬಂದನಂತರ 95 ರಿಂದ 181 ಕಿಲೋ ಮೀಟರ್ ತನಕ Main Canal ಏನಿದೆ, ಇದಕ್ಕೆ ಸಂಬಂಧಪಟ್ಟಂತೆ ರೂ. 200 ಕೋಟಿ ಖರ್ಚು ಮಾಡಿ 5 ಪ್ಯಾಕೇಜ್‌ಗಳ ಮುಖಾಂತರ ಕಾಲುವೆಗಳನ್ನು ನಿರ್ಮಾಣ ಮಾಡಿದ್ದಾರೆ. ಇದಕ್ಕೆ Distributaries and Sub-distributaries ಗಳನ್ನು ಶೀಘ್ರಗತಿಯಲ್ಲಿ ಮಾಡಿ, ಆ ಭಾಗದ ರೈತರಿಗೆ ನೀರು ಒದಗಿಸಲಿ ಎನ್ನುವುದು ಜನರ ಒತ್ತಾಯವಾಗಿದೆ. ಆ ದಿಸೆಯಲ್ಲಿ ಸರ್ಕಾರ ಹೆಚ್ಚಿನ ಗಮನಹರಿಸಿ ನಾರಾಯಣಪುರ ಬಲದಂಡೆ ಕಾಲುವೆಯ 95 ಕಿಲೋ ಮೀಟರ್‌ನಿಂದ 181 ಕಿಲೋ ಮೀಟರ್ ತನಕ, ನೂತನವಾಗಿ ನಿರ್ಮಾಣಗೊಂಡಿರುವ ಮುಖ್ಯ ಕಾಲುವೆಗೆ field channels ಮತ್ತು ಉಳಿದ ಕೆಲಸಗಳನ್ನು ಮುಗಿಸಬೇಕಾಗಿ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ನೀರು ಮತ್ತು ವಿದ್ಯುತ್ ರೈತರಿಗೆ ಬಹಳ ಮುಖ್ಯವಾದುದು. ನೀರಿಗೆ ಸಂಬಂಧಪಟ್ಟಂತೆ ಜಲಾಶಯಗಳನ್ನು ಕಟ್ಟುತ್ತೇವೆ. ವಿದ್ಯುತ್ತಿಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಅನೇಕ ಕಡೆ ಇವತ್ತು Thermal Power Projects ಇವೆ. ರಾಯಚೂರಿನಲ್ಲಿರುವ Raichur Thermal Power Station (RTPS) 1980ರಲ್ಲಿ ಪ್ರಾರಂಭವಾಯಿತು. ಇಲ್ಲಿ 1700 ಮೆ.ವ್ಯಾ. ವಿದ್ಯುತ್ ಉತ್ಪತ್ತಿ ಆಗುತ್ತದೆ. ನಂತರ, ಬಿಜೆಪಿ ಸರ್ಕಾರ ಇದ್ದಾಗ, Yermarus Thermal Power Station (YTPS) ನಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

1600 ಮೆ.ವ್ಯಾ. ವಿದ್ಯುತ್ ಉತ್ಪಾದನೆಯ ಕಾರ್ಯಕ್ಕೆ ಶಂಕು ಸ್ಥಾಪನೆ ಮಾಡಿದರು. ಇವತ್ತು ಆ ಎರಡೂ ಘಟಕಗಳು ತಯಾರಾಗಿ trial run ಕೂಡ ಆಗಿವೆ. ಇವತ್ತು ರಾಯಚೂರಿನಲ್ಲಿ 1700 ಮೆ.ವ್ಯಾ. ವಿದ್ಯುತ್ ಉತ್ಪಾದನೆ ಆಗುತ್ತಿದೆ. ನಮಗೆ ಕೃಷ್ಣಾ ನದಿಯ ನೀರಿದೆ. ಬೇಕಾಗಿರುವ ಜಾಗವನ್ನು ಸ್ಥಳೀಯ ಜನರಿಂದ ಪಡೆದುಕೊಂಡಿದ್ದಾರೆ. ಆದರೆ ಕಲ್ಲಿದ್ದಲು ಸರಿಯಾದ ಪ್ರಮಾಣದಲ್ಲಿ ಸಿಗದೇ ಇರುವುದರಿಂದ ಈ ಘಟಕಗಳು ಬಂದ್ ಆಗುವ ಸ್ಥಿತಿ ಬಂದಿದೆ. ಕಲ್ಲಿದ್ದಲಿನ ಸರಬರಾಜು ಇಲ್ಲ. ಕಲ್ಲಿದ್ದಲು ಇಲ್ಲದೇ ಇದ್ದರೆ ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ ಆಗುವುದಿಲ್ಲ. ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಇಂತಹ ಘಟಕಗಳನ್ನು ಪ್ರಾರಂಭ ಮಾಡಿದ ಮೇಲೆ ಸರಿಯಾದ ಪ್ರಮಾಣದಲ್ಲಿ ಕಲ್ಲಿದ್ದಲು ಸಿಗದೇ ಇದ್ದರೆ ಯಾವರೀತಿ ಘಟಕಗಳನ್ನು ನಡೆಸುವುದಕ್ಕೆ ಆಗುತ್ತದೆ? ಜನರಿಗೆ ಹೇಗೆ ವಿದ್ಯುತ್ ಪೂರೈಕೆ ಮಾಡುವುದಕ್ಕೆ ಆಗುತ್ತದೆ? ನನಗೆ ಸಿಕ್ಕಿರುವ ಮಾಹಿತಿ ಪ್ರಕಾರ, Karnataka Power Corporation Ltd. (KPCL) ನವರು 80 ಲಕ್ಷ ಮೆಟ್ರಿಕ್ ಟನ್ ಕಲ್ಲಿದ್ದಲಿಗೆ ಕೆಲವು ಕಂಪನಿಗಳ ಜೊತೆ ಅಗ್ರಿಮೆಂಟ್ ಮಾಡಿಕೊಂಡಿದ್ದಾರೆ. ಇನ್ನೊಂದು ಅಗ್ರಿಮೆಂಟ್ ಅನ್ನು 92 ಲಕ್ಷ ಮೆಟ್ರಿಕ್ ಟನ್‌ಗೆ ಮಾಡಿಕೊಂಡಿದ್ದಾರೆ. ಕಳೆದ ಒಂದೂವರೆ ತಿಂಗಳಿನಿಂದ, ಕೇವಲ ಶೇಕಡ 21 ರಷ್ಟು ಮಾತ್ರ ಕಲ್ಲಿದ್ದಲು ಸರಬರಾಜು ಆಗಿದೆ. ಇಂತಹ ಪರಿಸ್ಥಿತಿಯಿಂದ ಎರಡು-ಮೂರು ಘಟಕಗಳು ಬಂದ್ ಆಗಿವೆ. ಕೇಂದ್ರ ಸರ್ಕಾರ ಇರಬಹುದು, ರಾಜ್ಯ ಸರ್ಕಾರ ಇರಬಹುದು, ಜನರಿಗೆ ತೊಂದರೆ ಆಗದೇ ಇರುವ ಹಾಗೆ ಅಥವಾ ರೈತರಿಗೆ ತೊಂದರೆ ಆಗದೇ ಇರುವ ಹಾಗೆ ವ್ಯವಸ್ಥೆ ಮಾಡಬೇಕಾಗುತ್ತದೆ. ತಮ್ಮ ತಮ್ಮ ಜವಾಬ್ದಾರಿಗಳನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸಬೇಕಾಗುತ್ತದೆ. ವಿದ್ಯುತ್ ಇದ್ದಾಗ ಮಾತ್ರ ರೈತರಿಗೆ ಅನುಕೂಲವಾಗುತ್ತದೆ. ಇವತ್ತು ರಾಯಚೂರು ಭಾಗದಲ್ಲಿ ಘಟಕಗಳನ್ನು ನಿರ್ಮಾಣ ಮಾಡುವುದಕ್ಕೆ ಸಾವಿರಾರು ಎಕರೆಗಳನ್ನು ತೆಗೆದುಕೊಂಡಿದ್ದಾರೆ. 1980 ರಿಂದ ಇಲ್ಲಿಯವರೆಗೂ ಪರಿಹಾರ ಕೊಡುವಂಥದ್ದು, ಅವರಿಗೆ ನೌಕರಿ ಕೊಡುವಂಥದ್ದು ಅಥವಾ ಆ ಏರಿಯಾದಲ್ಲಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿ ಕೊಡುವಂಥದ್ದು ಆಗಿಲ್ಲ. ಪ್ರತಿನಿತ್ಯ ಅಲ್ಲಿ ಧರಣಿಗಳು ನಡೆಯುತ್ತಿರುತ್ತದೆ. ಅದೇರೀತಿ YTPS ಗೆ ಸಂಬಂಧಪಟ್ಟಂತೆಯೂ ಆ ಭಾಗದ ರೈತರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಆ ಭಾಗದ ರೈತರಿಗೆ 24 ಗಂಟೆಗಳು ವಿದ್ಯುತ್ ಕೊಡಬೇಕು ಎಂದು ನಾವು ಸರ್ಕಾರದ ಬಳಿ ಒತ್ತಾಯ ಮಾಡುತ್ತಿದ್ದೇವೆ. ಕಲ್ಲಿದ್ದಲಿನ ಸರಬರಾಜು ಇಲ್ಲ, ಕಲ್ಲಿದ್ದಲಿನ ಸರಬರಾಜು ಸಾಕಷ್ಟಾದರೆ ಈ ನಿಟ್ಟಿನಲ್ಲಿ ಪರಿಶೀಲನೆ ಮಾಡುತ್ತೇವೆ ಎಂದು ಸರ್ಕಾರ ಹೇಳುತ್ತದೆ. ಆ ಭಾಗದ ರೈತರು ಸರ್ಕಾರಕ್ಕೆ ಸಹಕಾರ ಕೊಟ್ಟು, ತಮ್ಮ ಭೂಮಿಯನ್ನು ಕಳೆದುಕೊಂಡರು. ಅವರಿಗೆ ಅನುಕೂಲ ಮಾಡಲು 24 ತಾಸು ವಿದ್ಯುತ್ ಕೊಡುವ ಪ್ರಯತ್ನವನ್ನು ಸರ್ಕಾರ ಮಾಡಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ಇವತ್ತು ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ಸಂಬಂಧಪಟ್ಟಂತೆ ಯುಪಿಎ ಸರ್ಕಾರ ಇದ್ದ ಅವಧಿಯಲ್ಲಿ ಆರ್ಟಿಕಲ್ 371(ಜೆ) ಸ್ಥಾನ ಸಿಕ್ಕಿತು. ಅದೇರೀತಿ, ಮಾನ್ಯ ಸಿದ್ಧರಾಮಯ್ಯನವರ ಸರ್ಕಾರ ಬಂದ ನಂತರ, ಮಾನ್ಯ ಹೆಚ್.ಕೆ.ಪಾಟೀಲ್‌ರವರ ನೇತೃತ್ವದಲ್ಲಿ ಒಂದು ಸಮಿತಿ ಮಾಡಿ, Rules and Guidelines ಮಾಡಿ, ಕಳೆದ ನಾಲ್ಕೂವರೆ ವರ್ಷದ ಅವಧಿಯಲ್ಲಿ ರೂ.4750 ಕೋಟಿ ಅನುದಾನ ಕೊಟ್ಟಿದ್ದಾರೆ. Micro ಮತ್ತು Macro ಸ್ತರದಲ್ಲಿ ಆ ಜಿಲ್ಲೆಗಳಿಗೆ ಹಣವನ್ನು ಮಂಜೂರು ಮಾಡುತ್ತಿದ್ದಾರೆ. ಸರ್ಕಾರ ಮಾಡಿರತಕ್ಕ ಅನೇಕ ಯೋಜನೆಗಳು ಮತ್ತು Schemes ನಿಗದಿತ ಸಮಯದಲ್ಲಿ ಮುಕ್ತಾಯವಾದಾಗ ಮಾತ್ರ transparency, ಅಭಿವೃದ್ಧಿ, ಜನರ ಕಣ್ಣಿಗೆ ಕಾಣುತ್ತದೆ. ಅದಕ್ಕೆ ನಾವು ಏನು ಮಾಡಬೇಕು? ಆ ಭಾಗದ ಜನರಲ್ಲಿ ಇನ್ನೂ ಜಾಗೃತಿ ತರಬೇಕಾಗಿದೆ. ಶೈಕ್ಷಣಿಕವಾಗಿ ಅಭಿವೃದ್ಧಿ ಆಗಬೇಕಾಗಿದೆ. Disparity ಯನ್ನು ಕಡಿಮೆ ಮಾಡಬೇಕು. ಗುಲ್ಬರ್ಗಾ, ಬೆಳಗಾವಿ, ಹಳೇ ಮೈಸೂರು ಮತ್ತು ಬೆಂಗಳೂರು ಡಿವಿಜನ್‌ಗಳಿಗೆ ಸಂಬಂಧಪಟ್ಟಂತೆ disparity ಯನ್ನು ಕಡಿಮೆ ಮಾಡಬೇಕಾದರೆ ಸರ್ಕಾರ ಕೊಡತಕ್ಕಂಥ ಯೋಜನೆಗಳು ಹೆಚ್ಚಿನ ರೀತಿಯಲ್ಲಿ ಈ ಭಾಗಕ್ಕೆ ಕೊಡಬೇಕಾಗುತ್ತದೆ. ಮುಖ್ಯವಾಗಿ ಶಿಕ್ಷಣದ ಕಡೆ ಗಮನಕೊಡಬೇಕಾಗುತ್ತದೆ. Indian Institute of Technology (IIT) ಯನ್ನು ಕೊಡಬೇಕಾದರೆ ಅದು ಯಾವ ಭಾಗದಲ್ಲಿ ಆಗಬೇಕಿತ್ತು ಎನ್ನುವುದರ ಬಗ್ಗೆ ನಮ್ಮ ಮಿತ್ರರು ಮಾತನಾಡುತ್ತಾ ಹೇಳಿದ್ದಾರೆ. ಹಾಗಾಗಿ ನಾನು ಈ ಕುರಿತು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಐ.ಐ.ಟಿ.ಯನ್ನು ಉದ್ಘಾಟನೆ ಮಾಡುವಂತಹ ಸಂದರ್ಭದಲ್ಲಿ ಆವತ್ತಿನ ದಿವಸ ಮುಖ್ಯಮಂತ್ರಿಗಳು ಮತ್ತು ಉನ್ನತ ಶಿಕ್ಷಣ ಸಚಿವರು ಕೇಂದ್ರ ಸಚಿವರಾದ ಶ್ರೀಮಾನ್ ಜಾವಡೇಕರ್ ಅವರ ಜೊತೆ ಮಾತನಾಡಿದರು. ಮಾನ್ಯ ಮುಖ್ಯಮಂತ್ರಿಗಳು ಕೇಂದ್ರ ಸಚಿವರಿಗೆ, Indian Institute of Information Technology (IIIT) ಯನ್ನು ರಾಯಚೂರಿಗೆ ಕೊಡಬೇಕು, ಐ.ಐ.ಟಿ. ಸಲುವಾಗಿ ಅಲ್ಲಿ ಸಾಕಷ್ಟು ಹೋರಾಟವಾಗಿದೆ, ನಂಜುಂಡಪ್ಪ ವರದಿಯಲ್ಲೂ ಕೂಡ ಹೀಗೆಯೇ ಇದೆ. ಆದರೂ ರಾಜಕೀಯ ಪ್ರಯತ್ನದಿಂದಾಗಿ ಐ.ಐ.ಟಿ.ಧಾರವಾಡದಲ್ಲಿ ಪ್ರಾರಂಭವಾಯಿತು. ಆದ್ದರಿಂದ IIIT ಯನ್ನು ಇಲ್ಲೇ ಪ್ರಾರಂಭ ಮಾಡಬೇಕೆಂದು ಮನವಿ ಮಾಡಿಕೊಂಡಾಗ, ಮಾನ್ಯ ಕೇಂದ್ರ ಸಚಿವರು ಈ ನಿಟ್ಟಿನಲ್ಲಿ ಭರವಸೆ ಕೊಟ್ಟರು. ಆದರೆ ಇವತ್ತಿನವರೆಗೂ IIIT ಬಗ್ಗೆ ಸರಿಯಾದ ರೀತಿಯಲ್ಲಿ ಸ್ಪಂದನೆ ಸಿಕ್ಕಿಲ್ಲ. ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಈ ಕುರಿತು ಪತ್ರ ಬರೆದಿದ್ದರೂ ಕೇಂದ್ರದಿಂದ ಉತ್ತರ ಬಂದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬಜೆಟ್‌ನಲ್ಲಿ, ರಾಯಚೂರು ಮತ್ತು ಯಾದಗಿರಿ ಪ್ರದೇಶಗಳಿಗೆ ಸಂಬಂಧಪಟ್ಟಂತೆ ಒಂದು ವಿಶ್ವವಿದ್ಯಾಲಯ ಪ್ರಾರಂಭ ಮಾಡುತ್ತೇವೆ ಎಂದು ಹೇಳಿದ್ದರು. ಈ ವಿಶ್ವವಿದ್ಯಾಲಯಕ್ಕೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಬಂಧಪಟ್ಟಂತೆ ಉನ್ನತ ಶಿಕ್ಷಣ ಸಚಿವರು ಕೊನೆಯ ದಿವಸ ವಿಧೇಯಕವನ್ನು ನಮ್ಮ ಸದನದಲ್ಲಿ ಮಂಡಿಸಿದಾಗ, ಸದರಿ ವಿಧೇಯಕ ತಡವಾಗಿ ತಂದಿದ್ದೀರಿ ಎಂದು ಆಕ್ಷೇಪಣೆ ವ್ಯಕ್ತಪಡಿಸಿದರು. ಅದು ಹಾಗೆ ನಿಂತು ಹೋಯಿತು. ಈ ಕುರಿತು ನಾವು ಮಾತನಾಡಿದಾಗ, ಈ ಸಂಬಂಧ ಇನ್ನೂ ಕೆಲವು ತಿದ್ದುಪಡಿ ಅಂಶಗಳನ್ನು ಸೇರಿಸಿಬೇಕಿದೆ, ಅದನ್ನು ಮಂಡಿಸುವುದಕ್ಕೆ ಆಗುವುದಿಲ್ಲ ಎನ್ನುವ ಮಾತನ್ನು ಹೇಳಿದರು. ಈ ರೀತಿ, ಈ ಭಾಗದಲ್ಲಿ ಶೈಕ್ಷಣಿಕ ಸಂಸ್ಥೆಗಳ ಸ್ಥಾಪನೆ ಆಗುವುದು ವಿಳಂಬವಾಗುವುದರಿಂದ ಸಹಜವಾಗಿ ಜನರಿಗೆ ತೊಂದರೆ ಆಗುತ್ತದೆ. ದಕ್ಷಿಣ ಕರ್ನಾಟಕದ ಭಾಗದಲ್ಲಿ ಶೈಕ್ಷಣಿಕ ಸಂಸ್ಥೆಗಳು ಯಾವರೀತಿ ಆಗುತ್ತದೆಯೋ ಅದೇರೀತಿ ಹೈದರಾಬಾದ್-ಕರ್ನಾಟಕ ಭಾಗದಲ್ಲಿ, ಬೆಳಗಾವಿ ಡಿವಿಜನ್ ನಲ್ಲಿ ಮಾಡಬೇಕಾಗುತ್ತದೆ. ಆ ದಿಸೆಯಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ನ್ಯಾಯಯುತವಾಗಿ ಈ ಭಾಗಕ್ಕೆ ಕೊಡಬೇಕಾದ ಮೂಲಭೂತ ಸೌಕರ್ಯಗಳನ್ನು ನೀಡುವ ಪ್ರಯತ್ನ ಮಾಡಬೇಕು. ಯಾವುದೇ ಒಂದು ಕಡತ ಇಲಾಖೆಗೆ ಹೋದರೆ ಕಾರ್ಯದರ್ಶಿಗಳ ಅಥವಾ ಪ್ರಧಾನ ಕಾರ್ಯದರ್ಶಿಗಳ ಮಟ್ಟದಲ್ಲಿ ತಕ್ಷಣ ಸ್ಪಂದನೆ ಸಿಗುತ್ತದೆ. ಇದೇ ಕಡತ Deputy Secretary ಅಥವಾ ಅಧೀನ ಕಾರ್ಯದರ್ಶಿಗಳ ಮಟ್ಟದಲ್ಲಿ ಹೋದರೆ put up ಆಗುವ ಕೆಲಸ ಆಗುವುದಿಲ್ಲ.

(ಮುಂದು . . .)

(1151)21-11-2017 8.40 ಡಿಎಸ್-ಬಿಎನ್.ಎಸ್

ಉಪ ಸಭಾಪತಿಯವರು:- ಮಾನ್ಯ ಬೋಸ್‌ರಾಜುರವರೇ, ಈಗ ಸಮಯವಿಲ್ಲ ದಯವಿಟ್ಟು conclude ಮಾಡಿ.

ಶ್ರೀ ಎನ್.ಎಸ್.ಬೋಸ್‌ರಾಜು:- ಮಾನ್ಯ ಸಭಾಪತಿಯವರೇ, ಈ ಭಾಗ ಅಭಿವೃದ್ಧಿಯಾಗಬೇಕೆಂದರೆ ಬಂದಿರತಕ್ಕಂಥ ಯೋಜನೆಗಳು ನಿಗದಿತ ಸಮಯದಲ್ಲಿ ಆಗಬೇಕು. ಅದೇ ರೀತಿಯಲ್ಲಿ ಅಧಿಕಾರಿಗಳು ಕೂಡ accountability ಯಿಂದ ಕೆಲಸ ಮಾಡಬೇಕು. ಜಿಲ್ಲಾಧಿಕಾರಿಗಳು, Chief Executive Officer (CEO) ಗಳಿಗೆ ಆ ಜಿಲ್ಲೆಯ ಅಭಿವೃದ್ಧಿ ಬಗ್ಗೆ ಹೆಚ್ಚಿನ ಜವಾಬ್ದಾರಿಯನ್ನು ಕೊಡಬೇಕು. ಈ ರೀತಿಯಾಗಿ ಸಮಯಕ್ಕೆ ತಕ್ಕಂತೆ ಕಾರ್ಯ ರೂಪಕ್ಕೆ ತರತಕ್ಕಂಥ ಯೋಜನೆಗಳನ್ನು ಮತ್ತು within the time limit ನಲ್ಲಿ ಕಾಮಗಾರಿಗಳನ್ನು ಪೂರೈಸುವುದಕ್ಕೆ ಪ್ರಯತ್ನ ಮಾಡಿದರೆ ಈ ಭಾಗವನ್ನು ಸ್ವಲ್ಪ ಮಟ್ಟಿಗೆ ಅಭಿವೃದ್ಧಿ ಮಾಡುವುದಕ್ಕೆ ಅವಕಾಶವಾಗುತ್ತದೆ ಎನ್ನುವ ಮಾತನ್ನು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಭಾನುಪ್ರಕಾಶ:– ಮಾನ್ಯ ಸಭಾಪತಿಯವರೇ, ಮಾನ್ಯ ಎಚ್.ಕೆ.ಪಾಟೀಲ್‌ರವರು.....

ಉಪ ಸಭಾಪತಿಯವರು:– ಮಾನ್ಯ ಭಾನುಪ್ರಕಾಶರವರೇ, ತಮಗೂ ಹತ್ತು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ, ಆಮೇಲೆ ಮಾತನಾಡಿ.

ಶ್ರೀ ಭಾನುಪ್ರಕಾಶ(ವಿಧಾನಸಭಾ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಸರ್ಕಾರದ ಗಮನಕ್ಕೆ ತರಬೇಕಾಗಿದೆ. ನಾವು ತುಂಗಾಭದ್ರಾ ಬೇಸಿನ್‌ನಿಂದ ಬಂದಿರುವವರು. ತುಂಗಾ ಮತ್ತು ಭದ್ರಾ ಎರಡು ನದಿಗಳು ಹುಟ್ಟುವಂತಹ ಜಿಲ್ಲೆಗಳಿಂದ ಬಂದಿದ್ದೇವೆ. ಇತ್ತೀಚೆಗೆ ಆಗಿರುವಂತಹ ಬೆಳವಣಿಗೆಗಳು, ಮಳೆ ಕಡಿಮೆಯಾಗಿರುವಂಥದ್ದು, ತುಂಗಾ ನದಿ ಹಿಂಬದಿಯಲ್ಲಿ Left Bank Canal ನಿಂದ ರಾಣಿಬೆನ್ನೂರುವರೆಗೆ ನೀರು ಬಂದಿರುವುದು. ಭದ್ರಾ ನದಿಯಿಂದ ಕುಡಿಯುವ ನೀರಿನ ವ್ಯವಸ್ಥೆಗಳನ್ನು ಸಾಕಷ್ಟು ಮಾಡಿರುವುದು. ಇವೆಲ್ಲಾ ಗಮನಕ್ಕೆ ತೆಗೆದುಕೊಂಡು ಮಳೆ ಬೀಳುವಂತಹ catchment area ದಲ್ಲಿ ಕಡಿಮೆಯಾಗಿರುವುದನ್ನು ಗಮನಕ್ಕೆ ತೆಗೆದುಕೊಂಡು Detailed Project Report (DPR) ಮಾಡಬೇಕು. ಆಗ ಮಾತ್ರ ಪ್ರಾಜೆಕ್ಟ್‌ಗಳು ಯಶ್ವಸಿಯಾಗುವುದಕ್ಕೆ ಸಾಧ್ಯ ಎಂದು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಂ.ಕೆ.ಪ್ರಾಣೇಶ್:– ಮಾನ್ಯ ಸಭಾಪತಿಯವರೇ, ಅವರು ಹೊಸ ಸದಸ್ಯರು, ಅವರಿಗೆ ಹೆಚ್ಚು ಅವಕಾಶ ಕೊಡಿ.

ಉಪ ಸಭಾಪತಿಯವರು:– ಹೊಸ ಸದಸ್ಯರಿಗೆ ಅವಕಾಶ ಕೊಡಬೇಕೆಂದು ಕೊಟ್ಟಿದ್ದೇನೆ.

ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:– ಮಾನ್ಯ ಸಭಾಪತಿಯವರೇ, ನಾವೆಲ್ಲಾ ಹೊಸ ಸದಸ್ಯರಾಗಿದ್ದೇವೆ, ಹೆಚ್ಚು ಸಮಯ ಕೊಡಿ.

ಮಾನ್ಯ ಸಭಾಪತಿಯವರೇ, ಉತ್ತರ ಕರ್ನಾಟಕದ ಅಭಿವೃದ್ಧಿ ಬಗ್ಗೆ ಸುದೀರ್ಘ ಚರ್ಚೆಯನ್ನು ಅನೇಕ ಹಿರಿಯ ಸದಸ್ಯರು ಮಾತನಾಡಿದ್ದಾರೆ. ಯಾವುದೇ ಪ್ರದೇಶದ ಅಭಿವೃದ್ಧಿ ಎಂದು ನಾವು ಗಣನೆಗೆ ತೆಗೆದುಕೊಳ್ಳಬೇಕಾದರೆ ಆ ಭಾಗದಲ್ಲಿರತಕ್ಕಂಥ.....

ಉಪ ಸಭಾಪತಿಯವರು:– ನೇರವಾಗಿ ಏನು ಹೇಳಬೇಕೋ ಅದನ್ನು ಹೇಳಿ. ಉತ್ತರ ಕರ್ನಾಟಕದ ಅಭಿವೃದ್ಧಿ ಎಂದು ಕಥೆ ಹೇಳಬೇಡಿ. ನೇರವಾಗಿ ಹೇಳಿ. ಏನಾಗಿದೆ, ಏನು ಮಾಡಬೇಕು ಎಂಬುದನ್ನು ಕೇಳಿ. ಮಾನ್ಯ ಎಚ್.ಕೆ.ಪಾಟೀಲ್‌ರವರು ಸದನದಲ್ಲಿದ್ದಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಶ್ರೀ ನಿರಾಣಿ ಹಣಮಂತ್ ರುದ್ರಪ್ಪ(ಪದವೀಧರರ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಉತ್ತರ ಕರ್ನಾಟಕದ ಅಭಿವೃದ್ಧಿಯಾಗಬೇಕಾದರೆ ಈ ಭಾಗದ ಜನತೆಯ ಆರ್ಥಿಕ ವರಮಾನ ಹೆಚ್ಚಾಗಬೇಕಾಗುತ್ತದೆ. ಆರ್ಥಿಕ ವರಮಾನದ ಮೇಲೆ ಆ ಭಾಗದ ಜನತೆಯ ಅಭಿವೃದ್ಧಿಯನ್ನು ನಾವು ಅಳೆಯುತ್ತಿದ್ದೇವೆ. ಆ ಭಾಗದ ಮೂಲಭೂತ ಸೌಕರ್ಯಗಳಾಗಿರಬಹುದು, ಆ ಭಾಗದಲ್ಲಿರುವಂತಹ ಪ್ರತಿಯೊಬ್ಬ ವ್ಯಕ್ತಿಯ Per Capita Income ಎನ್ನುವಂಥದ್ದನ್ನು ನಾವು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಆ ಹಿನ್ನೆಲೆಯಲ್ಲಿ ಉತ್ತರ ಕರ್ನಾಟಕದ ಅಭಿವೃದ್ಧಿಯನ್ನು ತೆಗೆದುಕೊಳ್ಳಬೇಕಾದರೆ ಈ ಭಾಗದಲ್ಲಿರುವಂತಹ ಜನರ ಆದಾಯ Per Capita Income ಎನ್ನುವಂಥದ್ದನ್ನು ಹೆಚ್ಚಿಸುವುದಕ್ಕೆ ಸರ್ಕಾರ ಈ ಭಾಗಕ್ಕೆ ಏನು ಮಾಡಬಹುದೆಂದು ಚಿಂತನೆ ಮಾಡಬೇಕು. ಆ ಚಿಂತನೆ ಮಾಡಿ ಇವತ್ತು ನಾವೇನು ನಿರ್ಧಾರ ತೆಗೆದುಕೊಳ್ಳುತ್ತೇವೆ ಅದಕ್ಕೊಂದು ಕಾಲಮಿತಿಯನ್ನು ನಿಗದಿ ಮಾಡಿ, by 2020 or 2025 ಎಂದು ಕಾಲಮಿತಿಯನ್ನು ಹಾಕಿಕೊಂಡು ಇಷ್ಟೊಂದು ಅವಧಿಯಲ್ಲಿ ಉತ್ತರ ಕರ್ನಾಟಕದಲ್ಲಿ ಇಂಥಿಂಥ ಅಭಿವೃದ್ಧಿ ಕೆಲಸಗಳಾಗಬೇಕೆನ್ನುವ ನಿರ್ಧಾರ ತೆಗೆದುಕೊಂಡು ಅದನ್ನು ಕ್ರಿಯಾತ್ಮಕವಾಗಿ, ಪಕ್ಷಾತೀತವಾಗಿ ಕೆಲಸವನ್ನು ಮಾಡಿ ಈ ಭಾಗದ ಜನತೆಯ ಅಭಿವೃದ್ಧಿಗೆ ಇವತ್ತು ಪೂರಕವಾಗಿ ಕೆಲಸ ಮಾಡಬೇಕಾಗಿರುವಂಥದ್ದು ಮುಖ್ಯವಾಗಿದೆ ಎನ್ನುವ ವಿಷಯವನ್ನು ನಾನು ಇಲ್ಲಿ ಹೇಳುವುದಕ್ಕೆ ಬಯಸುತ್ತಿದ್ದೇನೆ. ಇವತ್ತು ಈ ಭಾಗದಲ್ಲಿ ಅಭಿವೃದ್ಧಿಯನ್ನು ಕಾಣಬೇಕಾದರೆ ಮುಖ್ಯವಾಗಿ ಕೃಷಿಯನ್ನು ಅವಲಂಬಿಸಿರುವಂತಹ ಜನಾಂಗ ಹೆಚ್ಚಿಗೆ ಇರುವುದರಿಂದ, ರೈತ ಕುಟುಂಬಗಳು ಇಲ್ಲಿ ಜಾಸ್ತಿ ಇರುವುದರಿಂದ ನಾವು ಕೃಷಿಗೆ ಆದ್ಯತೆಯನ್ನು ಕೊಡಬೇಕು. ಕೃಷಿಗೆ ಆದ್ಯತೆಯನ್ನು ಕೊಡುವುದಾದರೆ ಕೃಷಿಯನ್ನೇ ಅವಲಂಬಿಸಿರುವಂತಹ ರೈತರಿಗೆ ಮುಖ್ಯವಾಗಿ ರೈತರಿಗೆ ಬೇಕಾಗಿರುವುದೇನೆಂದರೆ, ಈಗಾಗಲೇ ಹಿರಿಯ ಸದಸ್ಯರು ಹೇಳಿದ ಹಾಗೆ ಆತನ ಜಮೀನಿಗೆ ನೀರಾವರಿ ಸೌಲಭ್ಯವನ್ನು ಒದಗಿಸಿಕೊಡಬೇಕಾಗಿದೆ. ಇಲ್ಲಿರುವಂತಹ ಭೂಮಿಯನ್ನು ಸಂಪೂರ್ಣವಾಗಿ ನೀರಾವರಿಗೆ ಒಳಪಡಿಸುವಂತಹ ಕೆಲಸ ಆಗಬೇಕು. ಆ ನೀರಾವರಿ ಭೂಮಿಯ ಪಂಪ್‌ಸೆಟ್‌ಗೆ ಸಂಪೂರ್ಣ ವಿದ್ಯುತ್‌ನ್ನು ಪೂರೈಸಬೇಕು. ಇವತ್ತು ರೈತನಿಗೆ ನೀರು ಮತ್ತು ವಿದ್ಯುತ್‌ನ್ನು ಒದಗಿಸಿದರೆ, ರೈತ ಮತ್ತೊಂದು ಸೌಲಭ್ಯವನ್ನು ಕೇಳುವುದಕ್ಕೆ ಬಯಸುವುದಿಲ್ಲ. ಏಕೆಂದರೆ, ಈ ಎರಡು ಸೌಲಭ್ಯಗಳನ್ನು ಬಳಸಿಕೊಂಡು ತನ್ನ ಭೂಮಿಯಲ್ಲಿ ಹೇರಳವಾದ ಉತ್ಪನ್ನವನ್ನು ತೆಗೆಯುವುದಕ್ಕೆ ಸಾಧ್ಯವಿದೆ. ಅದರ ಜೊತೆಯಲ್ಲಿ ಒಳ್ಳೆಯ ಬಿತ್ತನೆ ಬೀಜ, ಗೊಬ್ಬರ, pesticides ಅನ್ನು ಕೊಡುವಂತಹ ಕೆಲಸ ಇವತ್ತು ಆಗಬೇಕು. ಇವೆಲ್ಲವನ್ನು ತೆಗೆದುಕೊಂಡು ರೈತ ತನ್ನ ಭೂಮಿಯಲ್ಲಿ ಬೆಳೆದಿರುವಂತಹ ಬೆಳೆಗೆ ಒಳ್ಳೆಯ ಮಾರುಕಟ್ಟೆಯನ್ನು ನ್ಯಾಯೋಚಿತವಾಗಿರುವಂತಹ ಬೆಲೆಯನ್ನು ರೈತರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೆಳೆದಿರುವಂತಹ ಬೆಳೆಗೆ ಸಿಗುವಂತಾಗಬೇಕೆಂದು ನಾವು ಚಿಂತನೆಯನ್ನು ಮಾಡಬೇಕು. ಇವತ್ತು ರೈತ ಬೆಳೆದಿರುವಂತಹ ಬೆಳೆಗೆ ಯೋಗ್ಯ ಬೆಲೆ ಸಿಗದೆ ರೈತ ಕಂಗಲಾಗಿರುವುದನ್ನು ನಾವೆಲ್ಲರೂ ಕೂಡ ಗಮನಿಸುತ್ತಿದ್ದೇವೆ. ಮಾರುಕಟ್ಟೆಯಲ್ಲಿ ರೈತರಿಗೆ ಯೋಗ್ಯ ಬೆಲೆ ಸಿಗುವಂತಾಗಬೇಕೆಂದು ನಾನು ತಮ್ಮ ಮುಖಾಂತರ ಹೇಳುವುದಕ್ಕೆ ಬಯಸುತ್ತಿದ್ದೇನೆ. ರೈತರು ಬೆಳೆದಿರುವಂತಹ ಬೆಳೆಯ ಜೊತೆಗೆ by-product ಅನ್ನು ಮಾಡತಕ್ಕಂಥದ್ದನ್ನು ಕೂಡ ಇವತ್ತು ರೈತರಿಗೆ ಕಲ್ಪಿಸಿಕೊಡಬೇಕಾಗಿದೆ. By-product ಎಂದರೆ ನೇರವಾಗಿ ರೈತ ಬೆಳೆದಿರುವಂತಹ ಹಣ್ಣು, ತರಕಾರಿ ಇರಬಹುದು, ಅದರಿಂದ by-product ಮಾಡುವುದಕ್ಕೆ ಅವರಿಗೇನಾದರೂ ಅವಕಾಶ ಕಲ್ಪಿಸಿಕೊಟ್ಟರೆ ಅದರಿಂದಲ್ಲೂ ಹೆಚ್ಚಿನ ಆದಾಯ ಬರುತ್ತದೆ. ಉದಾಹರಣೆಗೆ ಹೇಳುವುದಾದರೆ, ಇವತ್ತು ಕಾರ್ಖಾನೆಯಲ್ಲಿ ಸಕ್ಕರೆಯನ್ನು ಉತ್ಪಾದನೆ ಮಾಡಬೇಕಾದರೆ ಒಬ್ಬ ರೈತ 12 ತಿಂಗಳು ಬೆಳೆದು ಆ ಕಬ್ಬನ್ನು ಕಾರ್ಖಾನೆಗೆ ಕಳುಹಿಸಿ ಸಕ್ಕರೆಯಿಂದ ಒಂದು ಕೆ.ಜಿ.ಗೆ ಒಂದು ರೂಪಾಯಿಯೋ, ಎರಡು ರೂಪಾಯಿಯೋ ಸಿಗುತ್ತದೆ. ಅದೇ ಸಕ್ಕರೆಯನ್ನು ತೆಗೆದುಕೊಂಡು by-product ಮಾಡಿ ಇವತ್ತು Sweet Mart ಗೆ ಹೋದಾಗ ಆ ಸಕ್ಕರೆ ಜೊತೆಗೆ ಖೋವಾ ಎನ್ನುವುದನ್ನು ಮಿಕ್ಸ್ ಮಾಡುತ್ತಿದ್ದಾರೆ. ಇವತ್ತು ಸಕ್ಕರೆ ಬೆಲೆ ಒಂದು ಕೆ.ಜಿ.ಗೆ 40 ರೂಪಾಯಿ. ಒಂದು ಕೆ.ಜಿ. ಖೋವಾವನ್ನು 100 ರೂಪಾಯಿ ಕೊಟ್ಟು ತರುತ್ತಾನೆ. ಒಂದು ಕೆ.ಜಿ. ಖೋವಾ, ಒಂದು ಕೆ.ಜಿ. ಸಕ್ಕರೆ ಸೇರಿಸಿದರೆ 140 ರೂಪಾಯಿ ಆಗುತ್ತದೆ. ಆಗ ಎರಡು ಕೆ.ಜಿ. ಸ್ವೀಟ್ ತಯಾರಾಗುತ್ತದೆ. ಅದನ್ನು ಇವತ್ತು ಎಷ್ಟು ಬೆಲೆಗೆ ಮಾರುತ್ತಾನೆಂದರೆ, ಒಂದು ಕೆ.ಜಿ.ಗೆ ಕನಿಷ್ಠ 250 ರೂಪಾಯಿಕ್ಕಿಂತ ಕಡಿಮೆ ದರದಲ್ಲಿ ಯಾವುದೇ ಸ್ವೀಟ್ ಮಾರುಕಟ್ಟೆಯಲ್ಲಿ ಸಿಗುವುದಿಲ್ಲ. ಎರಡು ಕೆ.ಜಿ.ಗೆ 500 ರೂಪಾಯಿ ತೆಗೆದುಕೊಳ್ಳುತ್ತಿದ್ದಾನೆ. ರೈತರು ಒಂದು ವರ್ಷ ಕಬ್ಬನ್ನು ಬೆಳೆದು ನೇರವಾಗಿ ಕಬ್ಬನ್ನು ಸಾಗಾಣೆ ಮಾಡುವುದರಿಂದ ಒಂದು ಕೆ.ಜಿ.ಗೆ ಎರಡು ರೂಪಾಯಿ ಉಳಿಯಬೇಕಾದರೆ ಕಷ್ಟವಾಗುತ್ತದೆ. ಇವತ್ತು ಒಬ್ಬ ವ್ಯಾಪಾರಸ್ಥ ಒಂದು ಕೆ.ಜಿ.ಗೆ 200 ರೂಪಾಯಿಗಳಷ್ಟು ಲಾಭ ತೆಗೆದುಕೊಳ್ಳುತ್ತಿದ್ದಾನೆ. ಈ ತರಹ ರೈತರೇ ಸಾಕಷ್ಟು products ನ್ನು ತಯಾರು ಮಾಡುಬಹುದು. ಇವತ್ತು ದಾಳಿಂಬೆ, ದ್ರಾಕ್ಷಿ ಇರಬಹುದು, by-product ಮುಖಾಂತರ ಜ್ಯೂಸ್ ಮಾಡಬಹುದು. ಇವತ್ತು ಕೃಷಿ ಇಲಾಖೆ ಮುಖಾಂತರ ಅನೇಕ ಉತ್ಪನ್ನಗಳನ್ನು ತಯಾರು ಮಾಡುವುದಕ್ಕೆ ಸಾಧ್ಯವಿದೆ. ನಮ್ಮ ಭಾಗದಲ್ಲಿ ವಿಶೇಷವಾಗಿ ಬಿಜಾಪುರ, ಬಾಗಲಕೋಟೆಯಲ್ಲಿ ತೋಟಗಾರಿಕೆ ವಿಶ್ವವಿದ್ಯಾಲಯ ಪ್ರಾರಂಭವಾಗಿ ಕಳೆದ 7-8 ವರ್ಷಗಳಿಂದ ಕೆಲಸಕಾರ್ಯಗಳನ್ನು ಮಾಡುತ್ತಿದೆ. ಅಲ್ಲಿ ಕೃಷಿ ಸಂಶೋಧನೆ ಮಾಡುವುದಕ್ಕೆ ಜಮೀನು ಇಲ್ಲ, ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗಾಗಿ 360 ಎಕರೆ ಜಮೀನು ಈಗಾಗಲೇ ಇದೆ. ಅವರು ಹಣ್ಣು ಸಂಶೋಧನೆ ಮಾಡಿ

ಬೆಳೆಯಬೇಕೆಂದರೆ ಕಳೆದ ಐದಾರು ವರ್ಷಗಳಿಂದ ಜಮೀನು ಬೇಕೆಂದು ಕೇಳುತ್ತಿದ್ದಾರೆ. ಸುಮಾರು 400 ರಿಂದ 500 ಎಕರೆ ಜಮೀನು ಆ ವಿಶ್ವವಿದ್ಯಾಲಯಕ್ಕೆ ಬೇಕಾಗಿದೆ. ಅದನ್ನು ಒದಗಿಸಿಕೊಡುವಂತಹ ಕೆಲಸವನ್ನು ಇವತ್ತು ಸರ್ಕಾರ ಮಾಡಿದರೆ ಆ ಭಾಗದಲ್ಲಿ ಹಣ್ಣು ಬೆಳೆಗಳ ಸಂಶೋಧನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈ ಕೃಷಿಯನ್ನು ಅವಲಂಬಿಸಿರುವಂತಹ ಕುಟುಂಬಗಳ ಜೊತೆಗೆ ಆ ಭಾಗದಲ್ಲೂ ಕೂಡ ಕೈಗಾರಿಕೆಗಳು ಬರಬೇಕು. ಉದ್ದಿಮೆಗಳು ಬೆಳವಣಿಗೆಯಾಗಬೇಕು. ಇವತ್ತು ಎಲ್ಲವೂ ಕೂಡ ಬೆಂಗಳೂರಿನಲ್ಲಿ ಕೇಂದ್ರೀಕೃತವಾಗುವುದರಿಂದ ಉತ್ತರ ಕರ್ನಾಟಕ ಇವತ್ತು ಸಾಕಷ್ಟು ಹಿನ್ನೆಡೆಯಾಗಿರುವುದನ್ನು ಕಾಣುತ್ತಿದ್ದೇವೆ. ಈ ಭಾಗದಲ್ಲಿ ಕೈಗಾರಿಕೆಗಳು ಬರಬೇಕು. ಅದರಲ್ಲೂ ಕೂಡ ವಿಶೇಷವಾಗಿ ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ, Labour oriented Industries ಪ್ರಾರಂಭವಾಗಬೇಕು. ನಾವು ಏಕೆ Labour oriented Industries ಬೇಕು ಎಂದು ಕೇಳುತ್ತಿದ್ದೇವೆಂದರೆ ಆ ಭಾಗದಲ್ಲಿ ಇವತ್ತು ಸಂತ್ರಸ್ತರ ಕುಟುಂಬಗಳಿವೆ. 157 ಗ್ರಾಮಗಳು ಇವತ್ತು ಮುಳುಗಡೆಯಾಗಿವೆ. 157 ಗ್ರಾಮಗಳಲ್ಲಿ ಸಂತ್ರಸ್ತರ ಕುಟುಂಬಗಳು ಎಷ್ಟು ಎಂದು ಗಣನೆಗೆ ತೆಗೆದುಕೊಂಡರೆ ಒಂದು ಮತ್ತು ಎರಡನೇ ಹಂತದಲ್ಲಿ 58,000 ಕುಟುಂಬಗಳು ಸ್ಥಳಾಂತರಗೊಂಡಿವೆ. ಮೂರನೇ ಹಂತದಲ್ಲಿ 20 ಗ್ರಾಮಗಳು ಮುಳುಗಡೆಯಾಗುವುದರ ಮುಖಾಂತರ 32,000 ಕುಟುಂಬಗಳು ಇವತ್ತು ಪುನರ್ವಸತಿ ಕೇಂದ್ರಕ್ಕೆ ತೆರಳಬೇಕಾಗಿದೆ. 58,000 ಮತ್ತು 32,000 ಕೂಡಿದರೆ 90,000 ಕುಟುಂಬಗಳು ನಿರ್ಗತಿಕರಾಗುತ್ತಿದ್ದಾರೆ. ಒಂದು ಕುಟುಂಬಕ್ಕೆ ನಾಲ್ಕು ಜನರನ್ನು ತೆಗೆದುಕೊಂಡರೆ, ಮೂರು ಲಕ್ಷದ ಅರವತ್ತು ಸಾವಿರದಿಂದ ನಾಲ್ಕು ಲಕ್ಷ ಜನರು ಆ ಭಾಗದಲ್ಲಿ ಸಂತ್ರಸ್ತರಾಗುತ್ತಿದ್ದಾರೆ. ಇವತ್ತು ಅವರು ಜಮೀನನ್ನು ಕಳೆದುಕೊಂಡು ಉದ್ಯೋಗ ಇಲ್ಲದೆ ಬೇರೆ ಬೇರೆ ಉದ್ಯೋಗಗಳಿಗೆ ತೊಡಗಿ ಸಾಕಷ್ಟು ನಷ್ಟ ಅನುಭವಿಸುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಆ ಹಿನ್ನೆಲೆಯಲ್ಲಿ Labour oriented Industries ಅನ್ನು ವಿಶೇಷವಾಗಿ ಬಿಜಾಪುರ, ಬಾಗಲಕೋಟೆ ಜಿಲ್ಲೆಗಳಲ್ಲಿ ಸ್ಥಾಪನೆಯಾಗುವುದರ ಮುಖಾಂತರ ಸಂತ್ರಸ್ಥರಿಗೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಆ ಹಿನ್ನೆಲೆಯಲ್ಲಿ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಇದು ಪೂರಕವಾಗಿರುತ್ತದೆ ಎನ್ನುವಂತಹ ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತಿದ್ದೇನೆ.

(ಮುಂದು)

(1153)21.11.2017/09.00/ಎಸ್‌ವಿ-ಕೆಎಸ್

ಶ್ರೀ ನಿರಾಣಿ ಹಣಮಂತ್ ರುದ್ರಪ್ಪ(ಮುಂದು):-

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸನ್ಮಾನ್ಯ ಸಭಾಪತಿಯವರೆ, ಅವರು ತಮ್ಮ ಕುಟುಂಬವನ್ನು ಬಿಟ್ಟು, ತಮ್ಮ ಸರ್ವಸ್ವವನ್ನು ಬಿಟ್ಟು, ತಮ್ಮ ಭಾವನಾತ್ಮಕ ಸಂಬಂಧವನ್ನು ಬಿಟ್ಟು, ತಮ್ಮ ಪೂರ್ವಜರ ಆಸ್ತಿ ಅಂತಸ್ತು ಮನೆ ಮಠಗಳನ್ನು ಕಳೆದುಕೊಂಡು ನಿರ್ಗತಿಕರಾಗಿ ಪುನರ್ವಸತಿ ಕೇಂದ್ರಕ್ಕೆ ಬಹಳ ನೋವಿನಿಂದ ಹೋಗುತ್ತಿದ್ದಾರೆ. ಅವರು ಎಷ್ಟು ತೊಂದರೆಯನ್ನು ಅನುಭವಿಸಿ ಹೋಗುತ್ತಿದ್ದಾರೆ ಎಂಬುದನ್ನು ನಾವು ಗಮನಿಸಬೇಕಾಗಿದೆ. ಮುಂದೆ ೨೦-೩೦ ಲಕ್ಷ ಎಕರೆ ಜಮೀನಿಗೆ ನೀರಾವರಿ ಆಗಬೇಕು ಎನ್ನುವ ಒಂದು ಉದ್ದೇಶದಿಂದ ತಮ್ಮ ಜಮೀನನ್ನು ಕಳೆದುಕೊಂಡು ನಾಲ್ಕು ಲಕ್ಷ ಜನ ಸಂತ್ರಸ್ತರು ಪುನರ್ವಸತಿ ಕೇಂದ್ರದಲ್ಲಿ ಬದುಕುತ್ತಿದ್ದಾರೆ. ಅವರಿಗೆ ಇಂದು ಸರ್ಕಾರ ಆಸರೆಯನ್ನು ಕೊಡಬೇಕಾಗಿದೆ. ಅವರ ಬದುಕನ್ನು ಸುಧಾರಿಸುವುದರ ಮುಖಾಂತರ ಉತ್ತರ ಕರ್ನಾಟಕದ ಅಭಿವೃದ್ಧಿಗೂ ಕೂಡ ಇದು ಪೂರಕವಾಗುತ್ತದೆ ಎನ್ನುವಂತಹ ವಿಚಾರವನ್ನು ಈ ಸಂದರ್ಭದಲ್ಲಿ ಸದನದ ಗಮನಕ್ಕೆ ತರಬಯಸುತ್ತೇನೆ.

ಉಪ ಸಭಾಪತಿಯವರು:- ಮಾನ್ಯ ನಿರಾಣಿಯವರೆ, ೦೨.೦೦ ಗಂಟೆಗೆ ಸದನವನ್ನು ಮುಂದೂಡಬೇಕಾಗಿರುವುದರಿಂದ ದಯಮಾಡಿ ನಿಮ್ಮ ಮಾತನ್ನು ಬೇಗ ಮುಗಿಸಿ.

ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:- ಮಾನ್ಯ ಸಭಾಪತಿಯವರೇ, ಆಗಲಿ. ಕೃಷ್ಣಾ ಮೇಲ್ದಂಡೆ ಯೋಜನೆಗೆ ಆದಷ್ಟು ಬೇಗ ಬೆಲೆಯನ್ನು ನಿರ್ಧಾರ ಮಾಡಿ ಆ ಭಾಗದ ಜನತೆಗೆ ಅನುಕೂಲ ಮಾಡಿಕೊಡಬೇಕೆಂದು ಸದನದ ಮುಖಾಂತರ ಪ್ರಾರ್ಥಿಸುತ್ತೇನೆ. ಉತ್ತರ ಕರ್ನಾಟಕ ಭಾಗದ ಅಭಿವೃದ್ಧಿಗೆ ಶಿಕ್ಷಣವೂ ಸಹ ಅತ್ಯಂತ ಮಹತ್ತರವಾದ ಪಾತ್ರ ವಹಿಸುವುದರಿಂದ ಇಲ್ಲಿ ಶಿಕ್ಷಣ ಕ್ಷೇತ್ರವೂ ಸಹ ಸುಧಾರಿಸಬೇಕು.

ನಮ್ಮ ರಾಜ್ಯದ ಬೆಳಗಾವಿ ವಿಭಾಗದಲ್ಲಿ ಅತ್ಯಂತ ಹೇರಳವಾಗಿ ಕಬ್ಬನ್ನು ಬೆಳೆಯಲಾಗುತ್ತದೆ. ಇದರ ಬಗ್ಗೆ ಈಗಾಗಲೇ ಹಲವಾರು ಹಿರಿಯ ಶಾಸಕರು ಮಾತನಾಡಿದ್ದಾರೆ. ಕಬ್ಬು ಸಂಶೋಧನೆ ಕೇಂದ್ರದ ಜೊತೆಯಲ್ಲಿ ಕಬ್ಬಿನ ಬಗ್ಗೆ ಒಂದು ವಿಶ್ವವಿದ್ಯಾಲಯವನ್ನು ತೆರೆದರೂ ಸಹ ಕಡಿಮೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಕಬ್ಬಿನ by-product ಗಳು ಹತ್ತಾರು ಬರುತ್ತಿವೆ. ಕಬ್ಬಿನಿಂದ ನೇರವಾಗಿ ಸಕ್ಕರೆಯನ್ನು ತಯಾರು ಮಾಡುವುದಲ್ಲದೆ molasses ಮುಖಾಂತರ distillery ಮಾಡಬಹುದು. Ethanol ತಯಾರು ಮಾಡಬಹುದು. ಪೆಟ್ರೋಲ್ ತಯಾರು ಮಾಡಬಹುದು. ಗ್ಯಾಸ್ ತಯಾರು ಮಾಡಬಹುದು. ಕೃಷಿಯನ್ನೇ ಮುಖ್ಯವಾಗಿ ಅವಲಂಬಿಸಿರತಕ್ಕಂತಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೈತರಿಗೆ ಮೂಲಬೆಳೆ ಎಂದರೆ ಕಬ್ಬು ಆಗಿದ್ದು, ಇದನ್ನು ಬೆಳೆಯುವುದರಲ್ಲಿ ಸುಧಾರಣೆಯಾಗಬೇಕು ಎಂದು ಹೇಳುತ್ತಾ, ಅವಕಾಶ ಕೊಟ್ಟದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪ ಸಭಾಪತಿಯವರು:– ಈಗ ೦೨.೦೦ ಗಂಟೆಗೆ ಸದನವನ್ನು ಮುಂದೂಡುತ್ತೇವೆ ಎಂದು ಹೇಳಿದ್ದೇವೆ. ಇನ್ನೂ ಐದು ಮಂದಿ ಮಾತನಾಡುವವರಿದ್ದಾರೆ.

ಶ್ರೀ ಶ್ರೀನಿವಾಸ ಮಾನೆ:– ಮಾನ್ಯ ಸಭಾಪತಿಯವರೇ, ನಾಳೆ ಒಂದು ಗಂಟೆ ಅವಕಾಶ ಕೊಡಿ.

ಉಪ ಸಭಾಪತಿಯವರು:– ನಾಳೆ ಅವಕಾಶವನ್ನು ಕೊಡಲಿಕ್ಕೆ ಆಗುವುದಿಲ್ಲ. ಈಗ ಬೇಕಾದರೆ ಇನ್ನೂ ಒಂದು ಗಂಟೆ ಮಾತನಾಡಿ.

ಶ್ರೀ ಶ್ರೀನಿವಾಸ ಮಾನೆ:– ಮಾನ್ಯ ಸಭಾಪತಿಯವರೇ, ಬೇರೆ ವಿಷಯಗಳಲ್ಲಿ ಎಲ್ಲಾ ನಿಯಮಗಳನ್ನು ಮಾರ್ಪಾಡು ಮಾಡುತ್ತೀರಿ. ಉತ್ತರ ಕರ್ನಾಟಕದ ವಿಷಯದಲ್ಲಿ ಏಕೆ ಹೀಗೆ ಮಾಡುತ್ತೀರಿ? ತಾವು ಸ್ವಲ್ಪವಾದರೂ compromise ಆಗಬೇಕು.

ಶ್ರೀ ಬಸವರಾಜ ಹೊರಟ್ಟಿ:– ಮಾನ್ಯ ಸಭಾಪತಿಯವರೇ, ನಾಳೆ ಬೆಳಗ್ಗೆ 10.00 ಗಂಟೆಗೆ ಸದನವನ್ನು ಪ್ರಾರಂಭ ಮಾಡಿ.

ಉಪ ಸಭಾಪತಿಯವರು:– ಮಾನ್ಯ ಹೊರಟ್ಟಿಯವರೇ, ಆ ರೀತಿ ಮಾಡಲು ಆಗುವುದಿಲ್ಲ.

ಶ್ರೀ ಕೆ.ಎಸ್.ಈಶ್ವರಪ್ಪ:– ಮಾನ್ಯ ಸಭಾಪತಿಯವರೇ, ನೀವು ಅನುಮತಿಯನ್ನು ಕೊಟ್ಟರೆ ಏಕೆ ಮಾಡಲಿಕ್ಕೆ ಆಗುವುದಿಲ್ಲ?

ಶ್ರೀ ಕೆ.ಟಿ.ಶ್ರೀಕಂಠೇಗೌಡ:– ಮಾನ್ಯ ಸಭಾಪತಿಯವರೇ, ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ ಮಾತನಾಡುವುದಕ್ಕಿಂತ ಇನ್ನೂ ಹೆಚ್ಚಿನ ಆದ್ಯತೆಯ ವಿಚಾರ ಇನ್ನೇನು ಇದೆ?

ಉಪ ಸಭಾಪತಿಯವರು:– ಮಾನ್ಯ ಹೊರಟ್ಟಿಯವರೇ, ತಮಗೆಲ್ಲಾ ತಿಳಿದಿದೆ. ನೀವು 10 ಗಂಟೆಗೆ ಪ್ರಾರಂಭ ಮಾಡಿ ಎಂದು ಹೇಳುತ್ತೀರಿ. ನಾವು ೦೨.೦೦ ಗಂಟೆಗೆ ಪ್ರಾರಂಭ ಮಾಡಲಿಕ್ಕೆ ಸಿದ್ಧರಿದ್ದೇವೆ. ಆದರೆ ಸದಸ್ಯರು ಬರಬೇಕಲ್ಲವೆ?

ಶ್ರೀ ಕೆ.ಎಸ್. ಈಶ್ವರಪ್ಪ:– ಮಾನ್ಯ ಸಭಾಪತಿಯವರೇ, ನಾವು ಕರೆಸುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಐವನ್ ಡಿ'ಸೋಜಾ:– ಮಾನ್ಯ ಸಭಾಪತಿಯವರೇ, ಹುಬ್ಬಳ್ಳಿ ಹಾಗೂ ಇತರ ಊರುಗಳಿಂದ ಮಾನ್ಯ ಸದಸ್ಯರು ಬರಬೇಕಾಗುತ್ತದೆ. ಹಾಗಾಗಿ ಸದನವನ್ನು ಬೇಗ ಪ್ರಾರಂಭಿಸಲಾಗುವುದಿಲ್ಲ.

ಉಪ ಸಭಾಪತಿಯವರು:– ಮಾನ್ಯ ಶ್ರೀನಿವಾಸ ಮಾನೆಯವರು ಒಂದು ತಾಸು ಎಂದು ಹೇಳುತ್ತಾರೆ. ನಂತರ ಐದು ತಾಸುಗಳಾದರೂ ಚರ್ಚೆ ಮುಗಿಯುವುದಿಲ್ಲ. ಬೇಕಾದರೆ ಈಗಲೇ ಇನ್ನೂ ಒಂದು ತಾಸು ಮಾತನಾಡಿ. ನಾನು ಸದನವನ್ನು ನಡೆಸಲು ಸಿದ್ಧನಿದ್ದೇನೆ.

ಶ್ರೀ ಶ್ರೀನಿವಾಸ ಮಾನೆ:– ಮಾನ್ಯ ಸಭಾಪತಿಯವರೇ, ಪಟ್ಟಿಯನ್ನು ಈಗಾಗಲೇ ಕೊಡಲಾಗಿದೆ. ಅಷ್ಟು ಜನರು ಮಾತ್ರ ಮಾತನಾಡಬೇಕಿದೆ.

ಉಪ ಸಭಾಪತಿಯವರು:– ಮುಂದಿನ ಸರದಿ ಶ್ರೀ ಶ್ರೀನಿವಾಸ ಮಾನೆಯವರು. ಈಗ ಅವರು ಮಾತನಾಡುತ್ತಾರೆ.

ಶ್ರೀ ಶ್ರೀನಿವಾಸ ಮಾನೆ:– ಮಾನ್ಯ ಸಭಾಪತಿಯವರೇ, ನಾಳೆ ಒಂದು ತಾಸು ಯಾವಾಗಲಾದರೂ ಕೊಡಿ. ಈಗ ಆಗುವುದಿಲ್ಲ. ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ ಒಂದೆರಡು ದಿವಸಗಳಾದರೂ ಚರ್ಚೆಗೆ ಅವಕಾಶ ಬೇಡವೇ?

ಶ್ರೀ ರಘುನಾಥರಾವ್ ಮಲ್ಕಾಪೂರೆ:– ಮಾನ್ಯ ಸಭಾಪತಿಯವರೇ, ನೀವು ಈ ರೀತಿ ದ್ವಂದ್ವ ನೀತಿಯನ್ನು ಮಾಡಿದರೆ ನಾನು ಸಭಾತ್ಯಾಗಕ್ಕೂ ಸಿದ್ಧ. ಉತ್ತರ ಕರ್ನಾಟಕದ ವಿಷಯ ಬಂದಾಗಲೆಲ್ಲಾ ಇದೇ ರೀತಿಯಾಗುತ್ತದೆ.

ಉಪ ಸಭಾಪತಿಯವರು:– ಮಾನ್ಯ ಮಲ್ಕಾಪೂರೆಯವರೆ, ನಾನು ರಾತ್ರಿ 11–00 ಗಂಟೆಯವರೆಗೆ ಕೂರುತ್ತೇನೆ. ಅವಕಾಶ ಕೊಡುತ್ತೇನೆ. ಮಾತನಾಡಿ. ಇನ್ನು ಎರಡೇ ದಿನಗಳು ಬಾಕಿ ಇದ್ದು, ಬಿಲ್ಲುಗಳು ಪಾಸಾಗಬೇಕಿದೆ. ಇಂದು 11.00 ಗಂಟೆ ರಾತ್ರಿಯಾದರೂ ಸಹಿತ ಸದನವನ್ನು ನಡೆಸುತ್ತೇನೆ. ಅವಕಾಶ ಕೊಡುತ್ತೇನೆ. ಮಾತನಾಡಿ. ನಾಳೆ ಕೊಡಲಿಕ್ಕೆ ಆಗುವುದಿಲ್ಲ.

ಶ್ರೀ ಭಾನುಪ್ರಕಾಶ್:– ಮಾನ್ಯ ಸಭಾಪತಿಯವರೇ, ಸರ್ಕಾರ ತಯಾರಿದ್ದರೆ ಸದನವನ್ನು ನಡೆಸುವುದಕ್ಕೆ ತಾವು ಅಧ್ಯಕ್ಷತೆಯನ್ನು ವಹಿಸುತ್ತೀರಿ. ಈಗ 11.00 ಗಂಟೆ ಅಲ್ಲ 12.00 ಗಂಟೆಯವರೆವಿಗಾದರೂ ನಡೆಸುತ್ತೇವೆ ಎನ್ನುವುದಾದರೆ ಸರ್ಕಾರ ಮುಂಚೆ ಏಕೆ 09.00 ಗಂಟೆ ಎಂದು ಹೇಳಿತು? ಇನ್ನೂ ಸದಸ್ಯರು ಮಾತನಾಡುವವರಿದ್ದಾರೆ. ಮಾನ್ಯ ಶ್ರೀನಿವಾಸ ಮಾನೆಯವರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾರನ್ನುದ್ದೇಶಿಸಿ ಮಾತನಾಡುತ್ತಾರೆ? ಖಾಲಿ ಕುರ್ಚಿಗಳಿಗೆ ಮಾತನಾಡಬೇಕೆ? ಬೆಳಗ್ಗೆ ಒಂದು ಗಂಟೆ ಅವಕಾಶವನ್ನು ಕೊಡಿ. ಅವರು ಮಾತನಾಡಿದರೆ ನಾವು ಕೇಳುತ್ತೇವೆ.

ಶ್ರೀ ಕೆ.ಬಿ.ಶ್ರೀಕಂಠೇಗೌಡ:– ಮಾನ್ಯ ಸಭಾಪತಿಯವರೇ, ತಾವೇ ಮುನಿಸಿಕೊಂಡರೆ ನಾವು ಯಾರ ಮೊರೆ ಹೋಗೋಣ?

ಶ್ರೀ ಕೆ.ಎಸ್.ಈಶ್ವರಪ್ಪ:– ಮಾನ್ಯ ಸಭಾಪತಿಯವರೇ, ಸರ್ಕಾರ ಏನು ಹೇಳುತ್ತದೆ ಕೇಳೋಣ.

ಶ್ರೀ ಎಂ.ಆರ್.ಸೀತಾರಾಂ:– ಮಾನ್ಯ ಸಭಾಪತಿಯವರೇ, ನಾನು ಆಗಲೇ ತಮ್ಮಲ್ಲಿ ಮನವಿ ಮಾಡಿದೆ. ಈಗಾಗಲೇ ಹೇಳಿರುವಂತೆ ೦೨.೦೦ ಗಂಟೆಗೆ ಮುಗಿಸಿಬಿಟ್ಟು ನಾಳೆ ಪ್ರಾರಂಭ ಮಾಡೋಣ ಎಂದರೆ ಆಗುವುದಿಲ್ಲ, ಇಂದೇ ಮುಗಿಸಬೇಕು ಎಂದು ತಾವು ಹೇಳಿದಿರಿ. ಇನ್ನೊಂದು ನಾಲ್ಕೈದು ಜನ ಇದ್ದಾರೆ. ಇನ್ನೊಂದರ್ಧ ಗಂಟೆ ಕಾಲಾವಕಾಶವನ್ನು ಕೊಡಲು ಸಾಧ್ಯವೇ?

ಶ್ರೀ ಅರುಣ ಶಹಾಪುರ:– ಮಾನ್ಯ ಸಭಾಪತಿಯವರೇ, ಈ ರೀತಿಯ ಕಾಟಾಚಾರಕ್ಕೆ ಅವಕಾಶವನ್ನು ಕೊಟ್ಟರೆ ಇದರ ಅರ್ಥವೇನು?

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ:– ಮಾನ್ಯ ಸಭಾಪತಿಯವರು ಸಮಾಧಾನವಾಗಿ ಮಾತನಾಡಿ ಎಂದು ಹೇಳಿದ್ದಾರೆ. ಎಷ್ಟು ಹೊತ್ತಾದರೂ ಸದನವನ್ನು ನಡೆಸೋಣ ಎಂದು ಹೇಳಿದ್ದಾರೆ. ಸರ್ಕಾರ ಕೇಳುವುದಕ್ಕೆ ಸಿದ್ಧವಿದೆ. ಸದನವನ್ನು ನಡೆಸೋಣ. ನಾವು ತಯಾರಿದ್ದೇವೆ.

ಶ್ರೀ ಎಂ.ಆರ್.ಸೀತಾರಾಂ:– ಮಾನ್ಯ ಸಭಾಪತಿಯವರೇ, ಎಲ್ಲರೂ ಈ ರೀತಿ ಪಟ್ಟು ಹಿಡಿದಿರುವುದರಿಂದ ದಯಮಾಡಿ ಇಂದು ಸದನವನ್ನು ಮುಂದೂಡಿ ನಾಳೆ ಒಂದು ಗಂಟೆ ಕಾಲಾವಕಾಶವನ್ನು ಮಾಡಿಕೊಡಬೇಕೆಂದು ಕೋರುತ್ತೇನೆ.

ಶ್ರೀ ಐವನ್ ಡಿ'ಸೋಜಾ:– ಮಾನ್ಯ ಸಭಾಪತಿಯವರೇ, ಇಂದು ಮಧ್ಯಾಹ್ನದ ನಂತರ ಸಂಪೂರ್ಣವಾಗಿ ಇದರ ಬಗ್ಗೆ ಚರ್ಚೆ ಮಾಡಲು ಅವಕಾಶ ಕೊಡುವುದೆಂದು ನಿರ್ಧರಿಸಲಾಗಿತ್ತು. ಸದನದ ಕಲಾಪ ಸಲಹಾ ಸಮಿತಿಯಲ್ಲಿಯೂ ಸಹ ಇದೇ ರೀತಿ ನಿರ್ಧಾರವಾಗಿತ್ತು. ಆಗ ಯಾರೂ ಆಕ್ಷೇಪವನ್ನು ಎತ್ತದೆ ಅರ್ಧದಿನ ಸಾಕು ಎಂದು ಹೇಳಿದ್ದರು. ಇನ್ನುಳಿದ ಎರಡು ದಿನಗಳಲ್ಲಿ ಸಾಕಷ್ಟು ಬಿಲ್ಲುಗಳಿದ್ದು, ಈಗಾಗಲೇ ಆರು ಬಿಲ್ಲುಗಳು ನಮ್ಮ ಮುಂದಿವೆ. ಅದರ ಬಗ್ಗೆಯೂ ಸಹ ಚರ್ಚೆಯಾಗಬೇಕು. ಈಗ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೇಕಾದರೆ ಇನ್ನೂ ನಾವು ಕುಳಿತುಕೊಳ್ಳಲಿಕ್ಕೆ ಸಿದ್ಧರಿದ್ದೇವೆ. ಯಾರು ಮಾತನಾಡಲಿಕ್ಕೆ ಹೆಸರು ಕೊಟ್ಟಿದ್ದಾರೆಯೋ ಅವರು ೦೨.೩೦ ಗಂಟೆಯವರೆಗೆ ಮಾತನಾಡಲಿ.

ಉಪ ಸಭಾಪತಿಯವರು:– ಮಾನ್ಯ ಅರುಣ ಶಹಾಪುರರವರೇ, ನೀವು ಇಷ್ಟೆಲ್ಲಾ ಪ್ರತಿಪಾದಿಸುತ್ತೀರಿ. ಯಾವ ರೀತಿ ಸದನವನ್ನು ನಡೆಸಬೇಕೆಂಬುದನ್ನು ತಾವು ಮಾತನಾಡತಕ್ಕಂಥವರು ಅರ್ಥ ಮಾಡಿಕೊಳ್ಳಬೇಕು. ಅರ್ಥ ತಾಸು ಮಾತನಾಡಿ ಎಂದರೆ ಆಗುವುದಿಲ್ಲ, ಗಂಟೆಗಟ್ಟಲೆ ಕೊಡಬೇಕು ಎನ್ನುತ್ತೀರಿ. ಹಾಗಾದರೆ ಹೈದ್ರಾಬಾದ್ ಕರ್ನಾಟಕದ್ದು, ಉತ್ತರ ಕರ್ನಾಟಕದ್ದು ಎಲ್ಲಾ ಇಂದೇ ಸದನದಲ್ಲಿ ಇತ್ಯರ್ಥವಾಗುತ್ತದೆಯೇ? ಎಲ್ಲರೂ ಹಿರಿಯರಿದ್ದೀರಿ, ಸಾಕಷ್ಟು ಮಾತನಾಡಿದ್ದೀರಿ. ಹಿರಿಯ ಸದಸ್ಯರು ಮೂರು ಮಂದಿ ಪ್ರಾರಂಭದಲ್ಲಿ ಏನು ಮಾತನಾಡಿದರೋ ಅದನ್ನೇ ಉಳಿದವರೆಲ್ಲರೂ ಕೂಡ ಮಾತನಾಡಿದ್ದೀರಿ. ಯಾರೂ ಹೊಸ ಹೊಸ ವಿಚಾರಗಳನ್ನು ಮಾತನಾಡಲೇ ಇಲ್ಲ. ಇದು ಚರ್ಚೆಯ ರೂಪ. ಇತರ ಸದಸ್ಯರು ಮಾತನಾಡಿದ್ದನ್ನೇ ಬೇರೆಯವರೂ ಮಾತನಾಡುತ್ತಿರುವುದು. ಹೇಳಬೇಕೆಂದುಕೊಂಡಿರುವುದನ್ನು 5 ರಿಂದ 10 ನಿಮಿಷಗಳಲ್ಲಿ, ಎಂತಹ ವಿಚಾರವಿದ್ದರೂ ಸಹ 10 ನಿಮಿಷಗಳಲ್ಲಿ ಹೇಳಿ ಮುಗಿಸಬೇಕು. 10 ನಿಮಿಷದಲ್ಲಿ ನಿಮ್ಮ ಭಾವನೆ, ಅಭಿಪ್ರಾಯಗಳನ್ನು ಹೇಳುವುದಕ್ಕೆ ಸಾಕಷ್ಟು ಅವಕಾಶವಿದೆ. 10 ನಿಮಿಷದಲ್ಲಿ ಹೇಳುವಂತಹ ವಿಚಾರವನ್ನು ಗಂಟೆಗಟ್ಟಲೆ ಮಾತನಾಡುತ್ತೀರಿ. ಯಾವ ರೀತಿ ಸದನವನ್ನು ನಡೆಸಬೇಕು, ನೀವೇ ಹೇಳಿ.

ಶ್ರೀ ಕೆ.ಎಸ್.ಈಶ್ವರಪ್ಪ:– ಮಾನ್ಯ ಸಭಾಪತಿಯವರೇ, ಇಲ್ಲಿ ಸದನದಲ್ಲಿ ಏನು ಚರ್ಚೆಯಾಗುತ್ತಿದೆ, ಅದು ಉತ್ತರ ಕರ್ನಾಟಕದ ಜನತೆಗೆ ತಿಳಿಯಬೇಕು. ಈಗ ಹೊರಗಡೆ ಪತ್ರಕರ್ತರ ಬಳಿ ನಾನು ಮಾತನಾಡುತ್ತಿದ್ದಾಗ "ಈಗಲೇ ೦೯.೦೦ ಗಂಟೆಯಾಗಿದೆ ಸರ್, ಇನ್ನೂ ಹೇಗೆ ಕೂರುವುದು" ಎಂದು ಕೇಳಿದರು.

(...ಮುಂದು)

(1154)21.11.2017/9.10.ಕೆ.ಜಿ–ಜಿಆರ್

ಶ್ರೀ ಕೆ.ಎಸ್.ಈಶ್ವರಪ್ಪ:– ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ಏನು ಚರ್ಚೆ ಆಗುತ್ತದೆ ಆ ವಿಷಯ ಉತ್ತರ ಕರ್ನಾಟಕ ಭಾಗದ ಜನರಿಗೆ ಹೋಗಬೇಕು. ಈಗ ನಾನು ಪತ್ರಕರ್ತರ ಹತ್ತಿರ ಹೊರಗಡೆ ಮಾತನಾಡಿದ್ದೇನೆ. ಅದಕ್ಕೆ ಅವರು ಈಗಾಗಲೇ ೯.೦೦ ಗಂಟೆಯಾಗಿದೆ. ಇನ್ನು ಹೇಗೆ ಕುಳಿತುಕೊಳ್ಳೋಣವೆಂದು ಅವರು ಹೇಳುತ್ತಿದ್ದಾರೆ. ಈಗ ಪತ್ರಕರ್ತರು ಹೋದರೆ ನಾವು ಯಾರ ಮುಂದೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾತನಾಡೋಣ. ಸುದ್ದಿ ಯಾರಿಗೆ ಹೋಗಬೇಕು? ಸರ್ಕಾರವು ಇದಕ್ಕೆ ತಯಾರಿದೆ. ಅದರಿಂದ ತಾವು ದಯವಿಟ್ಟು ಹಠ ಮಾಡಬೇಡಿ. ಇದಕ್ಕೆ ನಮ್ಮ ಅಪೇಕ್ಷೇಯು ಇದೆ. ನಾಳೆ ಒಂದು ಗಂಟೆ ಕಾಲ ಚರ್ಚೆಗೆ ಅವಕಾಶ ಕೊಡಿ. ಇವತ್ತು ೨.೦೦ ಗಂಟೆಗೆ ಸದನವನ್ನು ಮುಗಿಸಲಾಗುವುದೆಂದು ಎಂದು ತಾವು ಹೇಳಿದ್ದೀರಿ, ಅದರಂತೆ, ಇಂದು ೨.೦೦ ಗಂಟೆಗೆ ಮುಗಿಸಿದ್ದೇವೆ. ನಾಳೆ ಬೆಳಗ್ಗೆ 10 ಗಂಟೆಗೆ ಸದನವನ್ನು ಪ್ರಾರಂಭ ಮಾಡಿ ಈ ವಿಷಯನ್ನು 11 ಗಂಟೆಯೊಳಗೆ ಮುಗಿಸೋಣ. ಆನಂತರ ಪ್ರಶ್ನೋತ್ತರ ಅವಧಿ ತೆಗೆದುಕೊಳ್ಳಿ.

ಉಪ ಸಭಾಪತಿಯವರು:– ಮಾನ್ಯ ಸದಸ್ಯರೇ, ನಾಳೆ ಬೆಳಗ್ಗೆ 10.00 ಗಂಟೆಗೆ ಸದನವನ್ನು ಪ್ರಾರಂಭ ಮಾಡುವುದಕ್ಕಾಗುವುದಿಲ್ಲ.

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ತಾವು ಒಂದು ನಿಮಿಷ ಸಮಾಧಾನದಿಂದ ಕೇಳಿ. ತಮಗೆ ಸದನವನ್ನು 10.00 ಗಂಟೆಗೆ ಪ್ರಾರಂಭ ಮಾಡುವುದಕ್ಕೆ ಏನು ತೊಂದರೆ ಇದೆ?

ಉಪ ಸಭಾಪತಿಯವರು:– ಮಾನ್ಯ ಹೊರಟ್ಟಿಯವರೇ, ತಾವು ೨.೦೦ ಗಂಟೆಗೆ ಬರುತ್ತೀರಿ. ಆದರೆ, ಬೇರೆ ಸದಸ್ಯರೆಲ್ಲರೂ ಬರಬೇಕು ಅಲ್ಲವೇ? ಏಕೆಂದರೆ, ಕೆಲವು ಸದಸ್ಯರು ಹುಬ್ಬಳ್ಳಿಯಲ್ಲಿ ಮತ್ತು ಬೇರೆ ಬೇರೆ ಕಡೆ ಉಳಿದುಕೊಂಡಿರುತ್ತಾರೆ. ಹಾಗಾಗಿ, ಅವರಿಗೆ 10.00 ಗಂಟೆಗೆ ಬರುವುದಕ್ಕೆ ಸಾಧ್ಯವಾಗುವುದಿಲ್ಲ. ತಾವು ಇದನ್ನು ದಯವಿಟ್ಟು ಅರ್ಥ ಮಾಡಿಕೊಳ್ಳಿ.

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):– ಮಾನ್ಯ ಸಭಾಪತಿಯವರೇ, 10 ಮಂದಿ ಸದಸ್ಯರು ಇದ್ದರೆ, quorum ಆಗುತ್ತದೆ. 10 ಮಂದಿ ಸದಸ್ಯರು ಬಂದ ತಕ್ಷಣವೇ, ತಾವು ಸದನ ಪ್ರಾರಂಭ ಮಾಡಬಹುದು.

ಉಪ ಸಭಾಪತಿಯವರು:– ಮಾನ್ಯ ಹೊರಟ್ಟಿಯವರೇ, ತಾವು ಬೆಳಗ್ಗೆ 10.00 ಗಂಟೆಗೆ ಪ್ರಾರಂಭ ಮಾಡುವುದನ್ನೇ ಹೇಳುತ್ತೀರಿ. ಈಗ ರಾತ್ರಿ 12.00 ಗಂಟೆಯವರೆಗೆ ಸದನ ನಡೆಸೋಣ.

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಈಗ ಮಾತನಾಡಿದಂತಹ ಸದಸ್ಯರ ಭಾವನೆಗಳು ಜನರಿಗೆ ಮುಟ್ಟುವುದಿಲ್ಲ.

ಶ್ರೀ ಕೆ.ಎಸ್.ಈಶ್ವರಪ್ಪ:– ಮಾನ್ಯ ಸಭಾಪತಿಯವರೇ, ತಾವು ಇದನ್ನು ಅರ್ಥ ಮಾಡಿಕೊಳ್ಳಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉಪ ಸಭಾಪತಿಯವರು:– ಮಾನ್ಯ ಸದಸ್ಯರೇ, ಏಕೆ ಜನರಿಗೆ ಮುಟ್ಟುವುದಿಲ್ಲ. ಎಲ್ಲವೂ ಜನರಿಗೆ ಮುಟ್ಟುತ್ತದೆ. ಎಲ್ಲವೂ ದಾಖಲೆಗಳಿಗೆ ಹೋಗುತ್ತದೆ. ಆನಂತರ ಅದನ್ನು ನೋಡುತ್ತಾರೆ.

ಶ್ರೀ ಕೆ.ಎಸ್.ಈಶ್ವರಪ್ಪ:– ಮಾನ್ಯ ಸಭಾಪತಿಯವರೇ, ಉತ್ತರ ಕರ್ನಾಟಕ ಭಾಗದ ಜನರು ದಾಖಲೆಗಳನ್ನು ನೋಡುವುದಿಲ್ಲ. ಅದು ಪತ್ರಿಕೆ ಮೂಖಾಂತರವೇ ಹೋಗಬೇಕು.

(ಗೊಂದಲ)

ಉಪ ಸಭಾಪತಿಯವರು:– ಮಾನ್ಯ ಸದಸ್ಯರೇ, ಮಾಧ್ಯಮದವರು ಎಲ್ಲವನ್ನು ಜನರಿಗೆ ತಿಳಿಸುತ್ತಾರೆ. ಏನೂ ತೊಂದರೆ ಇಲ್ಲ.

ಶ್ರೀ ಕೃಷ್ಣ ಬೈರೇಗೌಡ(ಕೃಷಿ ಸಚಿವರು):– ಮಾನ್ಯ ಸಭಾಪತಿಯವರೇ, ತಡ ರಾತ್ರಿಯವರಿಗೆ ಸದನ ನಡೆದಿದೆ ಎಂಬ ಒಂದು ಒಳ್ಳೆಯ ಸಂದೇಶವು ಸಹ ಜನತೆಗೆ ಹೊಗಲಿ.

(ಗೊಂದಲ)

ಶ್ರೀ ಅರಣ ಶಹಾಪುರ(ಶಿಕ್ಷಕರ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಒಂದು ಒಳ್ಳೆಯ ಧಾರವಾಹಿ 'ಕಬಿ ಸಾಸ್ ಬಿ ಬಹು ಥಿ ' ಇದೆ ಮತ್ತು ಗಾದೆ ಮಾತು ಸಹ ಇದೆ. ತಾವು ಉಪ ಸಭಾಪತಿಯವರು ಆಗಿದ್ದೀರಿ. ತಾವು ಸದಸ್ಯರ ಭಾವನೆಗಳನ್ನು ಅರ್ಥ ಮಾಡಿಕೊಳ್ಳಬೇಕು. ನಮ್ಮ ಭಾಗದಲ್ಲಿ ಸದನ ನಡೆಯುತ್ತಿದೆ. ನಮ್ಮ ಅಳಲನ್ನು ತೋಡಿಕೊಳ್ಳುವುದಕ್ಕೆ ಇದು ಒಂದು ವೇದಿಕೆ ಎಂದು ನಾವು ಭಾವಿಸಿದ್ದೇವೆ. ಇದನ್ನೇ ಮಧ್ಯರಾತ್ರಿಯೇ ಮಾತನಾಡಬೇಕೆಂದು ತಾವು ತೀರ್ಮಾನ ಮಾಡಿದ್ದರೆ, ಈ ಸದನಕ್ಕೆ ದೊಡ್ಡ ನಮಸ್ಕಾರ. ತಾವು ಯಾವ ವಿಷಯವನ್ನು ತರುತ್ತೀರಿ ಅದನ್ನೇ ನಾವು ಮಾತನಾಡುತ್ತೇವೆ. ಇಲ್ಲಿಗೆ ತಾವು ಸದನವನ್ನು ಮುಕ್ತಾಯ ಮಾಡಬಹುದು. ನಮ್ಮ ಭಾವನೆಗಳನ್ನು ಹಂಚಿಕೊಳ್ಳುವುದಕ್ಕೆ ಇಲ್ಲಿ ಅವಕಾಶ ಇಲ್ಲವೆಂದರೆ, ನಾವು ಯಾವ ಸಾರರ್ಥಕತೆಗೆ ಈ ಸದನಕ್ಕೆ ಬರಬೇಕು? ನಮ್ಮ ಭಾಗದಲ್ಲಿ ನಡೆಯುವಂತಹ ಸದನದಲ್ಲಿ ನಮಗೆ ಅವಕಾಶ ಇಲ್ಲವೆಂದರೆ ಹೇಗೆ?

ಉಪ ಸಭಾಪತಿಯವರು:– ಮಾನ್ಯ ಸದಸ್ಯರೇ, ಈ ರೀತಿ ಮಾತನಾಡಬಾರದು. ಇದು ಸರಿ ಇರುವುದಿಲ್ಲ.

ಶ್ರೀ ಕೆ.ಎಸ್.ಈಶ್ವರಪ್ಪ:– ಮಾನ್ಯ ಸಭಾಪತಿಯವರೇ, ಇದಕ್ಕೆ ಏನು ಮಾಡಬೇಕು ಹೇಳಿ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉಪ ಸಭಾಪತಿಯವರು:– ಮಾನ್ಯ ಸದಸ್ಯರೇ, ಈ ರೀತಿ ಮಾತನಾಡಿದರೆ ಸದನವನ್ನು ನಡೆಸುವುದು ಹೇಗೆ ಹೇಳಿ?

ಶ್ರೀ ಕೆ.ಎಸ್.ಈಶ್ವರಪ್ಪ:– ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಹೇಳಿದ್ದಾರೆ.

ಉಪ ಸಭಾಪತಿಯವರು:– ನಾಳೆಯ ದಿವಸ ನಾವು 6 ವಿಧೇಯಕಗಳನ್ನು ಚರ್ಚೆಗೆ ತೆಗೆದುಕೊಳ್ಳ ಬೇಕಾಗಿದೆ.

ಶ್ರೀ ಕೆ.ಎಸ್.ಈಶ್ವರಪ್ಪ:– ಮಾನ್ಯ ಸಭಾಪತಿಯವರೇ, ಅದಕ್ಕೆ ನಾಳೆ ಸದನವನ್ನು ಬೆಳಗ್ಗೆ 10.00 ಗಂಟೆಗೆ ಪ್ರಾರಂಭ ಮಾಡಿ. ಹುಬ್ಬಳ್ಳಿಯಲ್ಲಿ ಇರುವವರನ್ನು ನಾವೇ ಕರೆಸುತ್ತೇವೆ.

ಶ್ರೀ ಐವನ್ ಡಿ'ಸೋಜಾ (ಸರ್ಕಾರದ ಮುಖ್ಯಸಚೇತಕರು):– ಮಾನ್ಯ ವಿರೋಧ ಪಕ್ಷದ ನಾಯಕರೇ, ಹಾಗಾದರೆ, ಶುಕ್ರವಾರ ಇಡೀ ದಿವಸ ಸದನ ನಡೆಸು ಎಂದು ಹೇಳುತ್ತೀರಾ?

ಶ್ರೀ ಕೆ.ಎಸ್.ಈಶ್ವರಪ್ಪ:– ಮಾನ್ಯ ಸಭಾಪತಿಯವರೇ, ಹಾಗಾದರೆ, ಸಭಾನಾಯಕರದ್ದು ಒಂದು ಮಾತು. ಸರ್ಕಾರದ ಮುಖ್ಯಸಚೇತಕರದ್ದು ಮತ್ತೊಂದು ಮಾತು.

ಶ್ರೀ ಐವನ್ ಡಿ'ಸೋಜಾ (ಸರ್ಕಾರದ ಮುಖ್ಯಸಚೇತಕರು):– ಮಾನ್ಯ ವಿರೋಧ ಪಕ್ಷದ ನಾಯಕರೇ, ನನಗೆ ಮಾತನಾಡುವ ಹಕ್ಕು ಇದೆ. I am also a Member. I have got a right to say. Who are you to ask me? ಅದನ್ನು ನೀವು ಹೇಳಬೇಕಾಗಿಲ್ಲ. ಸರ್ಕಾರ ಈಗ ಸದನವನ್ನು 10 ಗಂಟೆಯವರೆಗೆ ನಡೆಸುವುದಕ್ಕೆ ತಯಾರು ಇದೆ.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ:– ಮಾನ್ಯ ಸಭಾಪತಿಯವರೇ, ಹಾಗಾದರೆ, ಸಭಾನಾಯಕರದ್ದು ಒಂದು ಮಾತು. ಇವರದ್ದು ಬೇರೆ ಮಾತು. ಇದು ನಮಗೆ ಬೇಕಾಗಿದಲ್ಲ. ಹಾಗಾದರೆ, ಮಾತನಾಡಲಿ. ಇದಕ್ಕೆ ನಮ್ಮ ಅಭ್ಯಂತರ ಇಲ್ಲ.

(ಗೊಂದಲ)

ಉಪ ಸಭಾಪತಿಯವರು:– ಈಗ ದಯವಿಟ್ಟು ಎಲ್ಲ ಸದಸ್ಯರೂ ಕುಳಿತುಕೊಳ್ಳಿ. ನಾಳೆ ಸಂಜೆ 5.00 ಗಂಟೆಯಿಂದ ಒಂದು ಗಂಟೆ ಮಾತ್ರ ಸದಸ್ಯರುಗಳಿಗೆ ಈ ವಿಷಯದ ಮೇಲೆ ಚರ್ಚೆಗೆ ಅವಕಾಶ ಇದೆ. ಆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಂತರ ಇದಕ್ಕೆ ಸರ್ಕಾರದಿಂದ ಉತ್ತರ ಕೊಡುತ್ತಾರೆ. ಈಗ ಸದನವನ್ನು ನಾಳೆ ಬೆಳಗ್ಗೆ 11.00 ಗಂಟೆಯವರೆಗೆ ಮುಂದೂಡಲಾಗಿದೆ.

(ಸದನವು ರಾತ್ರಿ 9 ಗಂಟೆ 14 ನಿಮಿಷಕ್ಕೆ ಮುಕ್ತಾಯಗೊಂಡು, ನಾಳೆ ಅಂದರೆ, ದಿನಾಂಕ: 22.11.2017 ರಂದು ಬೆಳಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು.)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"